
ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ

ಸಂಪುಟ ೭

ಜಾಗತಿಕ ಚಿಂತಕರು ಮತ್ತು ಬಸವಣ್ಣ

ಸಂಪಾದಕರು
ಡಾ. ಎಚ್.ಟಿ. ಪೋತೆ



ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ - ೫೮೫ ೧೦೬

ಕನ್ನಡ ಭಾಷಾಭಿವೃದ್ಧಿಯೋಜನೆ

ಸಂಪುಟ
೭

ಕರ್ನಾಟಕ ಸರಕಾರ

ಜಾಗತಿಕ ಚಿಂತಕರು ಮತ್ತು ಬಸವಣ್ಣ

ಪ್ರಧಾನ ಸಂಶೋಧಕರು ಹಾಗೂ ಸಂಪಾದಕರು

ಡಾ. ಎಚ್.ಟಿ. ಪೋತೆ

ಕನ್ನಡ ಅಧ್ಯಯನ ಸಂಸ್ಥೆ

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

JAAGATIKA CHINTAKARU MATHU BASAVANNA : A Collection of selected articles of Jaagatika Chintakaru Mathu Basavanna Principal Investigator and Edited by: Dr. H.T. Pote Professor of Kannada Gulbarga University, Gulbarga. Published by Kannada Adhyana Samsthe, Gulbarga University, Gulbarga. Funding Agency : Govt. of Karnataka.

ಜಾಗತಿಕ ಚಿಂತಕರು ಮತ್ತು ಬಸವಣ್ಣ

ಡಾ. ಎಚ್.ಟಿ. ಪೋತೆ

ಯೋಜನೆಯ ಪ್ರದಾನ ಸಂಶೋಧಕರು ಹಾಗೂ ಸಂಪುಟದ ಸಂಪಾದಕರು

ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ISBN	:	978-81-921036-6-2
First Edition	:	2011
Pages	:	xxii + 274 = 296
©	:	Institute of Kannada Studies, Gulbarga University, Gulbarga
Paper used	:	70 gsm N.S. Maplitho
Price	:	**Rs. 200/-**

ಪ್ರಥಮ ಮುದ್ರಣ	:	೨೦೧೧
ಪುಟಗಳು	:	xxii +೨೭೪ = ೨೯೬
©	:	ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
ಬಳಸಿದ ಕಾಗದ	:	೭೦gsm. ಎನ್.ಎಸ್. ಮ್ಯಾಪ್‌ಲಿಥೋ
ಬೆಲೆ	:	**ರೂ. ೨೦೦/–**

ಮುದ್ರಣ

ಇಳಾ ಮುದ್ರಣ

ನಂ. ೩೬, ೪೦ ಅಡಿ ರಸ್ತೆ

ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್

ಬೆಂಗಳೂರು -೫೬೦ ೦೨೬

ದೂರವಾಣಿ : ೨೬೭೫೭೧೫೯

ಸಲಹಾ ಸಮಿತಿ

ಅಧ್ಯಕ್ಷರು

ಪ್ರೊ. ಈ.ಟಿ. ಪುಟ್ಟಯ್ಯ

ಕುಲಪತಿಗಳು

ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಉಪಾಧ್ಯಕ್ಷರು

ಪ್ರೊ. ಎಸ್.ಎಲ್. ಹಿರೇಮಠ

ಕುಲಸಚಿವರು

ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಸಂಚಾಲಕರು

ಪ್ರೊ. ಬಸವರಾಜ ಸಬರದ

ಪ್ರೊ. ವೀರಣ್ಣ ದಂಡೆ

ಸದಸ್ಯರು

ಡಾ. ಮ.ಗು. ಬಿರಾದಾರ

ಡಾ. ವೀರಣ್ಣ ರಾಜೂರ

ಡಾ. ವಸಂತ ಕುಷ್ಟಗಿ

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಕರ್ನಾಟಕ ಸರಕಾರ

ಕರ್ನಾಟಕ ಸರಕಾರ
ಬೆಂಗಳೂರು–೫೬೦ ೦೦೧
ದಿನಾಂಕ: ೧೫–೨–೨೦೧೧

ಶುಭಹಾರೈಕೆ

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಯೋಜನೆಯಡಿಯಲ್ಲಿ ಸಿದ್ಧಪಡಿಸಿರುವ ಹನ್ನೆರಡು ಹೊಸ ಸಂಪುಟಗಳ ಬಿಡುಗಡೆ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಔಚಿತ್ಯಪೂರ್ಣ.

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನ ದೊರೆತಿದ್ದು, ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು, ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ, ತತ್ವಪದ ಸಾಹಿತ್ಯ, ದಲಿತ ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನ, ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ,

ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠಮಟ್ಟದ ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡುಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ **ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆ**ಯಡಿಯಲ್ಲಿ ಸಿದ್ಧಪಡಿಸಿರುವ ಹನ್ನೆರಡು ಬೃಹತ್ ಸಂಪುಟಗಳಲ್ಲಿ ಈಗ ಏಳು ಸಂಪುಟಗಳನ್ನು ಪ್ರಕಟಪಡಿಸಲು ಶ್ರಮಿಸಿದ ಎಲ್ಲರನ್ನೂ ಅಭಿನಂದಿಸಿ ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಗೋವಿಂದ ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರಕಾರ

ನಂ. ೩೩೦, ೩ನೇ ಮಹಡಿ,
ವಿಧಾನಸೌಧ,
ಬೆಂಗಳೂರು ೫೬೦ ೦೦೧
ದಿನಾಂಕ : ೧೬-೨-೨೦೧೧

ಶುಭಹಾರೈಕೆ

ಕನ್ನಡ ನಾಡು-ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು-ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡುಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ ೪೫೦ರ ಹಲ್ಮಿಡಿ ಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತ ರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತುಗೆಗಳು ಸಿದ್ಧವಾಗುತ್ತಿವೆ. **ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆಯ** ಅಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಶರಣಸಾಹಿತ್ಯಕ್ಕೆ ಸಂಬಂಧಿಸಿದ ನಾಡಿನ ವಿವಿಧ ಲೇಖಕರು ಬರೆದ ವಿಮರ್ಶಾ ಲೇಖನಗಳ ಒಟ್ಟು ಹನ್ನೆರಡು ಸಂಪುಟಗಳಲ್ಲಿ ಈಗ

ಏಳು ಬೃಹತ್ ಸಂಪುಟಗಳು ಪ್ರಕಟವಾಗುತ್ತಿವೆ ಎಂಬ ವಿಚಾರ ತಿಳಿದು ನನಗೆ ತುಂಬಾ ಸಂತೋಷವಾಗಿದೆ.

ಕನ್ನಡದ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ರಮೇಶ್ ಬಿ. ಝುಳಕಿ ಅವರನ್ನು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು–ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವುದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈಜೋಡಿಸಿದ್ದಾರೆ. ನಾಡು–ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವುದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಸಹಿ/–
ಗೋವಿಂದ ಎಂ. ಕಾರಜೋಳ
ಸಚಿವರು

ರಮೇಶ್ ಬಿ. ಝಳಕಿ
ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರಕಾರ

ಕೊಠಡಿ ಸಂಖ್ಯೆ ೨,
ನೆಲಮಹಡಿ, ವಿಕಾಸಸೌಧ,
ಬೆಂಗಳೂರು-೫೬೦ ೦೦೧
ದಿನಾಂಕ: ೧೬-೨-೨೦೧೧

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದು ಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿರುತ್ತದೆ. ಕ್ರಿ.ಶ. ೪೫೦ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡ ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿಯ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರೆವಣಿಗೆಯಲ್ಲಿಯೇ ಕನ್ನಡನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪವಿರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ಧಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿದ ಶಾಸನದಿಂದಲೇ ಅಶೋಕನಿಗೆ 'ದೇವಾನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿಯೇ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ ಐದನೆಯ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪಾರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರ್ಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ನೀಡಿರುವುದು, ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುದಕ್ಕಾಗಿ. ೨೦೦೮ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ

ಸಂದರ್ಭದಲ್ಲಿ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿರುತ್ತಾರೆ. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆಯನ್ನು ಕುರಿತಾಗಿ ಅನೇಕ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು **ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆ**ಯನ್ನು ಕೈಗೆತ್ತಿಕೊಂಡು ಶರಣಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳ ಒಟ್ಟು ಹನ್ನೊಂದು ಸಂಪುಟಗಳಲ್ಲಿ ಈಗ ಏಳು ಸಂಪುಟಗಳನ್ನು ಮೊದಲ ಕಂತಾಗಿ ಪ್ರಕಟಿಸಿದೆ. ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತಿಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ವೀರಣ್ಣ ದಂಡೆಯವರನ್ನು ಪ್ರಾಧ್ಯಾಪಕರು ಮತ್ತು ಯೋಜನೆಯ ಸಂಚಾಲಕರು, ಸಂಪುಟದ ಪ್ರಧಾನ ಸಂಪಾದಕರೂ ಆದ ಡಾ. ಎಚ್.ಟಿ. ಪೋತೆ ಅವರನ್ನೂ ಕುಲಪತಿ ಪ್ರೊ. ಈ.ಟಿ. ಪುಟ್ಟಯ್ಯ ಅವರನ್ನೂ ಮತ್ತು ಕುಲಸಚಿವ ಪ್ರೊ. ಎಸ್.ಎಲ್. ಹಿರೇಮಠ ಅವರನ್ನೂ ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಕನ್ನಡ ಸಾಹಿತ್ಯದ ಎರಡು ಕಣ್ಣುಗಳೆಂದರೆ ವಚನ, ದಾಸ ಪ್ರಕಾರಗಳು. ಅದರಲ್ಲೂ ವಚನಕಾರರ ಸಮಾಜಮುಖಿ ಚಿಂತನೆ ಜಗತ್ತಿನ ಇತಿಹಾಸದಲ್ಲಿ ಅವಿಸ್ಮರಣೀಯವಾದುದು. ಬುದ್ಧನ ತರುವಾಯ ಸಾಮಾನ್ಯರ ಕೊರಳಾಗಿ ಹೊರಹೊಮ್ಮಿದ ಸಾಹಿತ್ಯ ಪ್ರಕಾರವಿದು. ಈ ಚಿಂತನೆಯನ್ನು ವಿಮರ್ಶಿಸಿ ಬರೆದ ನಾಡಿನ ವಿದ್ವಾಂಸರ ಲೇಖನಗಳನ್ನು ಒಂದೆಡೆ ಸಂಕಲಿಸಿ ಬೃಹತ್ ಗ್ರಂಥರೂಪದಲ್ಲಿ ಪ್ರಕಟಿಸುತ್ತಿರುವುದು ಶ್ಲಾಘನೀಯವಾಗಿದೆ.

ಸಹಿ/–

ರಮೇಶ್ ಬಿ. ಝಳಕಿ

ಕಾರ್ಯದರ್ಶಿ

ಮನು ಬಳಿಗಾರ್
ಕ.ಆ.ಸೇ
ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರಕಾರ

ಕನ್ನಡ ಭವನ,
ಜೆ.ಸಿ. ರಸ್ತೆ,
ಬೆಂಗಳೂರು–೫೬೦ ೦೦೨
ದಿನಾಂಕ:೧೬–೨–೨೦೧೧

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು ವೀರಯುಗ ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು 'ವಿಕ್ರಮಾರ್ಜುನವಿಜಯ' ವಾದರೆ ರನ್ನ ಬರೆದದ್ದು 'ಸಾಹಸಭೀಮವಿಜಯ'. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜಮಾರ್ಗಕಾರನು ಕನ್ನಡ ಜನರು ಕವಿಗಳೂ ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡನಾಡಿನ ಹತ್ತನೆ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ರಚನಕಾರರ ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ, ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಅಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ

ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ ಕುವರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ ೨೦೦೮ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು **ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆಯನ್ನು** ಕೈಗೆತ್ತಿಕೊಂಡು ಅದರ ಮೊದಲ ಹಂತದ ಏಳು ಬೃಹತ್ ಸಂಪುಟಗಳನ್ನು ಬಿಡುಗಡೆ ಮಾಡುತ್ತಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ.ಟಿ. ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೆ ಪ್ರಾಧ್ಯಾಪಕರೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ವೀರಣ್ಣ ದಂಡೆ ಅವರಿಗೆ, ಈ ಯೋಜನೆಯ ಸಂಚಾಲಕರು ಸಂಪುಟದ ಸಂಪಾದಕರಾದ ಡಾ. ಎಚ್.ಟಿ. ಪೋತೆ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪರವಾಗಿ ನಾನು ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಹಿ/-
ಮನು ಬಳಿಗಾರ್
ನಿರ್ದೇಶಕರು

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ
ಜ್ಞಾನಗಂಗಾ
ಗುಲಬರ್ಗಾ

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾ ಸಂಸ್ಥೆಯಾಗಿದೆ. ೧೯೭೦-೭೧ ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಾಗಿ ಮುಂದೆ ೧೯೮೦ ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ, ಬೋಧನೆ ಮತ್ತು ಸಂಶೋಧನೆ ಇವು ಆಕರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿ ಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು, ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು ಕೀರ್ತನಕಾರರ ಸ್ಮಾರಕಗಳು, ಸಾಂಸ್ಕೃತಿಕ ಪದಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ

ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಈ ಯೋಜನೆಗಳಲ್ಲಿ ಶರಣ ಸಾಹಿತ್ಯ ವಿಮರ್ಶಾಸಂಪುಟಗಳ ಪ್ರಕಟನಾ ಯೋಜನೆಯೂ ಒಂದು. ಈ ಯೋಜನೆಗೆ ಸಂಬಂಧಿಸಿದಂತೆ ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಶೂನ್ಯಸಂಪಾದನೆ, ವಚನಕಾವ್ಯಚಿಂತನೆ, ಜಾಗತಿಕ ಚಿಂತಕರು ಮತ್ತು ಬಸವಣ್ಣ, ಸಿದ್ಧರಾಮ, ವಚನಕಾರ್ತಿಯರು, ದಲಿತ ವಚನಕಾರರು, ಇತರ ವಚನಕಾರರು ಹಾಗೂ ವಚನ : ಜಾನಪದ ಹೀಗೆ ಒಟ್ಟು ಹನ್ನೆರಡು ಸಂಪುಟಗಳಲ್ಲಿ ಏಳು ಸಂಪುಟಗಳನ್ನು ಹೊರತರುತ್ತಿರುವುದು ಹರ್ಷದ ಸಂಗತಿಯಾಗಿದೆ.

ಪ್ರಸ್ತುತ 'ಜಾಗತಿಕ ಚಿಂತಕರು: ಬಸವಣ್ಣ' ಸಂಪುಟವನ್ನು ಡಾ. ಎಚ್.ಟಿ. ಪೋತೆ ಅವರು ವಿಶೇಷ ಶ್ರಮವಹಿಸಿ ಸಿದ್ಧಪಡಿಸಿರವರು. ಇಲ್ಲಿನ ಲೇಖನಗಳು ತುಂಬ ಮೌಲಿಕವಾಗಿವೆ. ಬಸವಣ್ಣನವರ ಜೀವನ ಸಾಧನೆಗಳ ಜೊತೆಗೆ ಜಾಗತಿಕ ನೆಲೆಯ ಮಹಾನ್ ಚಿಂತನೆಗಳೊಂದಿಗೆ ತುಲನಾತ್ಮಕವಾಗಿ ಚರ್ಚಿಸಿದವುಗಳಾಗಿವೆ. ಬಸವಣ್ಣನವರ ಹಾಗೂ ಜಾಗತಿಕ ಚಿಂತಕರ ಜೀವನ ಹಾಗೂ ಸಾಧನೆ, ಸಿದ್ಧಿಗಳನ್ನು ಜನಸಾಮಾನ್ಯರಿಗೆ ತಿಳಿಸುವಲ್ಲಿ ಇಲ್ಲಿಯ ಲೇಖನಗಳು ಯಶಸ್ವಿಯಾಗಿವೆ. ಒಟ್ಟಿನಲ್ಲಿ ಇಲ್ಲಿನ ಬರಹಗಳೆಲ್ಲವೂ ಶತಮಾನದ ವಿಮರ್ಶಾಚಿಂತನೆಯನ್ನು ಸಾದರಪಡಿಸುತ್ತಲೇ ಹೊಸ ಆವಿಷ್ಕಾರ ಮತ್ತು ಚಿಂತನೆಗಳಿಗೆ ಉತ್ತಮ ದಾರಿಯನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿವೆ. ಈ ಸಂಪುಟವನ್ನು ತುಂಬ ಶ್ರಮವಹಿಸಿ ಸಿದ್ಧಪಡಿಸಿದ ಸಂಪಾದಕರೂ ಹಾಗೂ ಯೋಜನೆಯ ಸಂಶೋಧಕರಾದ ಡಾ. ಎಚ್.ಟಿ. ಪೋತೆ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ರಮೇಶ್ ಬಿ. ಝುಳಕಿ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರಿಗೂ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಸಂಪಾದಕರ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಭಾಷಾಭಿವೃದ್ಧಿ ಯೋಜನೆಯ ಅಡಿಯಲ್ಲಿ ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆಯಲ್ಲಿ ಈ ಸಂಪುಟ ಪ್ರಕಟವಾಗುತ್ತಲಿದೆ. ಇತ್ತೀಚಿನ ನಾಲ್ಕೈದು ದಶಕಗಳಲ್ಲಿ ಬಸವ ಚಿಂತನೆ ತುಂಬಾ ಚರ್ಚೆಗೊಳಪಟ್ಟಿದೆ. ಹಾಗೆ ಚರ್ಚೆಗೊಳಪಡಿಸಿದ ಅನೇಕ ವಿದ್ವಾಂಸರು ಬಸವ ಚಿಂತನೆಯನ್ನು ಜಾಗತಿಕ ಚಿಂತಕರ ಸಮಾಜೋ–ಸಾಂಸ್ಕೃತಿಕ ಹಾಗೂ ಧಾರ್ಮಿಕ ನೆಲೆಯಲ್ಲಿ, ವಿವೇಚನೆಗೊಳಪಡಿಸಿದ್ದಾರೆ. ಬಸವಣ್ಣ ಕೇವಲ ಹನ್ನೆರಡನೇ ಶತಮಾನದ ಶರಣನ ಹೆಸರಲ್ಲ. ಅದು ಸಮಕಾಲೀನ ಸಂದರ್ಭದ ಜೀವ ದ್ರವ್ಯ. ಮಾನವೀಯ ನೆಲೆಯ ಸಿಂಚನವೂ ಹೌದು. ಹೀಗೆ ಮಾನವೀಯ ನೆಲೆಯನ್ನು ಭದ್ರಗೊಳಿಸುವ ಜಾಗತಿಕ ಚಿಂತಕರ ಚಿಂತನೆಗಳನ್ನು ಬಸವ ಚಿಂತನೆಗಳೊಂದಿಗೆ ಹೋಲಿಕೆ ಮಾಡಿ ಸಮಾನವಾದ ನೆಲೆಗಳನ್ನು ಗುರುತಿಸುವಲ್ಲಿ ಇಲ್ಲಿಯ ಲೇಖನಗಳು ಯಶಸ್ವಿಯಾಗಿವೆ.

ನನ್ನ ಮೇಲೆ ವಿಶ್ವಾಸವಿಟ್ಟು ಇಂತಹದೊಂದು ಸಂಪುಟದ ಸಂಪಾದನೆಯ ಜವಾಬ್ದಾರಿಯನ್ನು ನನಗೆ ಹೊರಿಸಿದ ಈ ಯೋಜನೆಯ ಸಲಹಾ ಸಮಿತಿಯ ಸದಸ್ಯರೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ಕೃತಜ್ಞತೆಗಳು. ಸಂಪುಟ ರೂಪು ಪಡೆಯುವಲ್ಲಿ ಸಹಕರಿಸಿದ ಪ್ರೊ. ಬಸವರಾಜ ಸಬರದ, ಪ್ರೊ. ವ್ಹಿ.ಜಿ. ಪೂಜಾರ ಅವರಿಗೂ ಕೃತಜ್ಞತೆಗಳು. ಲೇಖನಗಳನ್ನು ಕಳುಹಿಸಿಕೊಟ್ಟು ಸಹಕರಿಸಿದ ಎಲ್ಲ ಲೇಖಕರಿಗೂ ವಂದನೆಗಳು. ಓದುಗರ ಹಾಗೂ ವಿಮರ್ಶಕರ ರಚನಾತ್ಮಕ ಸಲಹೆಗಳಿಗೆ ಸ್ವಾಗತವಿದೆ.

ಡಾ. ಎಚ್.ಟಿ. ಪೋತೆ
ಸಂಪಾದಕರು

ಪ್ರಸ್ತಾವನೆ

ಮನುಷ್ಯ ಇತರ ಪ್ರಾಣಿಗಳಿಗಿಂತಲೂ ಭಿನ್ನ, ಆತ ಬೆಳೆದಂತೆ, ಆತನ ಬುದ್ಧಿ ಬಲಿತಂತೆ ಮತ್ತಷ್ಟು ಭಿನ್ನವಾಗಿ ಬೆಳೆಯುತ್ತಾ ಬಂದ ಎನ್ನುವದಕ್ಕಿರುವ ಹಲವು ಕಾರಣಗಳೊಂದಿಗೆ ಆತನ ಸಹಜೀವಿ, ಮಾತುಬಲ್ಲ ಕನಿಷ್ಟ ಇನ್ನೊಬ್ಬನೂ ಕಾರಣ ಎನ್ನುವುದನ್ನು ಯಾರೂ ಅಲ್ಲಗಳೆಯಲಾರರೆಂದು ಭಾವಿಸಿದ್ದೇನೆ. ಇಬ್ಬರ ಅನುಭವಗಳ ವಿನಿಮಯ, ವೈಚಾರಿಕ ಸಂಘರ್ಷ, ಆ ಮಂಥನದ ಮೂಲಕ ಉದ್ಭವಿಸುವ ಹೊಸ ಆಲೋಚನೆಗಳು ಮತ್ತೊಂದು ಹೊಸ ಹುಟ್ಟಿಗೆ ಕಾರಣವಾದವು. ಇದು ಹಿಂದೆ, ಇಂದು ಮುಂದೆಯೂ ನಡೆಯುವ ಪ್ರಕ್ರಿಯೆ. ಇದು ಅವರವರ ಸಮಕಾಲೀನ ಸಂಯೋಜನೆ. ಇದುವೇ ಒಂದು ರೀತಿಯಲ್ಲಿ ಮನುಷ್ಯ ಬದುಕಿನ ಇತಿಹಾಸದ ಅರಿವಿನ ಅಧ್ಯಯನ ಸಾಮಗ್ರಿ. ಮುಂದುವರೆದು ಇಬ್ಬರು ಭಿನ್ನ ನೆಲೆಯ, ಭಿನ್ನ ಕಾಲಪರಿಸರದ ವ್ಯಕ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರವರ ಆಲೋಚನೆಗಳನ್ನು ಸಾಧನೆಗಳನ್ನು ಸಾಪೇಕ್ಷ ದೃಷ್ಟಿಕೋನದಿಂದ ಅರಿತುಕೊಳ್ಳಲನುವಾಗುವುದು ಕುತೂಹಲಿಯಾದ ಮನುಷ್ಯನ ಗುಣಧರ್ಮ.

ಹಿಂದೆ ಯಾವುದೇ ಸಂಪರ್ಕ ಮಾಧ್ಯಮಗಳಿಲ್ಲದ ಕಾಲವೊಂದಿತ್ತು. ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಧಾರ್ಮಿಕ–ಸಾಮಾಜಿಕವಾಗಿ ಈಗಿರುವಷ್ಟು ಬದಲಾವಣೆಗಳು, ಗೊಂದಲಗಳು ಇರಲಿಲ್ಲ. ಭಾಷೆಗಳೂ ಅಲ್ಲಲ್ಲೇ ಇದ್ದು ಪ್ರತ್ಯೇಕತೆಗೆ ಅನಿವಾರ್ಯವಾಗಿ ಬದ್ಧವಾಗಿರಬೇಕಾಗಿತ್ತು. ಒಂದು ಇನ್ನೊಂದರೊಂದಿಗೆ ಸಂಬಂಧ ಸಹಚರ್ಯಗಳು ಏರ್ಪಡದೆ ಪುಟ್ಟಪುಟ್ಟ ದ್ವೀಪಗಳಂತಾಗಿದ್ದವು. ಒಂದು ರಾಷ್ಟ್ರದ ಭಾಷೆ, ಸಾಹಿತ್ಯ, ಸಂಸ್ಕೃತಿ, ನಾಗರೀಕತೆ ಮೊದಲಾದವು ಇನ್ನೊಂದರ ಮೇಲೆ ಪ್ರಭಾವ ಬೀರುವದ್ದಾಗಲೀ, ಪ್ರಭಾವಕ್ಕೆ ಒಳಗಾಗುವುದಾಗಲೀ ಅಸಾಧ್ಯವೇ ಆಗಿದ್ದಿತು. ಅಲ್ಲಲ್ಲಿ ಹುಟ್ಟಿದ ಮನುಷ್ಯ ಅವನಿಂದ ಅವಿರ್ಭವಿಸಿದ ಭಾಷೆ, ಸಾಹಿತ್ಯ ಮುಂತಾದವುಗಳು ಸ್ವತಂತ್ರವಾಗಿ ಪ್ರತ್ಯೇಕವಾಗಿ ಬೆಳೆದು ಬರುತ್ತಿದ್ದವು. ಹೀಗಾಗಿ ಅವುಗಳ ಸಾರ–ಸತ್ವ ಇತ್ಯಾದಿಗಳನ್ನು ಒರೆಗೆ ಹಚ್ಚಲಾಗುತ್ತಿರಲಿಲ್ಲ.

ಆದರೆ, ಇತ್ತೀಚೆಗೆ ಆಧುನಿಕ ವೈಜ್ಞಾನಿಕ ಹಾಗೂ ತಾಂತ್ರಿಕ ಬೆಳವಣಿಗೆಯಿಂದಾಗಿ ಇಡಿಯಾದ ಜಗತ್ತು ಹಿಡಿಯಲ್ಲಿ ಎಂಬಷ್ಟು ಕಿರಿದಾಗುತ್ತಾ ಸಾಗಿದೆ. ಇಂತಹ ವೈಜ್ಞಾನಿಕ–ತಾಂತ್ರಿಕ ಬೆಳವಣಿಗೆಯಿಂದ ನಾಗರೀಕತೆ, ಸಂಸ್ಕೃತಿ, ಭಾಷೆ, ಸಾಹಿತ್ಯ ಇತ್ಯಾದಿಗಳು ತಮ್ಮ ಪಾರಂಪರಿಕ ಚೌಕಟ್ಟಿನಿಂದ ತೀವ್ರವಾಗಿ ಹೊರಬರುತ್ತಿವೆ. ಇತರವುಗಳೊಂದಿಗಿನ ಸಂಬಂಧ ಸಂಪರ್ಕಗಳಿಂದಾಗಿ ಅಷ್ಟೇ ತೀವ್ರವಾಗಿ ಬದಲಾವಣೆಗೊಳ್ಳುತ್ತಿವೆ.

ಒಂದು ದೇಶದ ಸಾಧನೆ ಇನ್ನೊಂದರೊಡನೆ, ಒಂದು ರಾಷ್ಟ್ರದ ಭಾಷೆಯ ಸಾಹಿತ್ಯ ಸಾಧನೆಯನ್ನು ಇನ್ನೊಂದು ರಾಷ್ಟ್ರದ ಭಾಷೆ ಸಾಹಿತ್ಯ ಸಾಧನೆಗಳೊಂದಿಗೆ ಪರಸ್ಪರ ಹೋಲಿಸಿ ನೋಡುವುದರೊಂದಿಗೆ ಹೊಸ ಅಧ್ಯಯನದ ಕ್ರಮ ಹಿಂದೆಗಿಂತಲೂ ಇಂದು ಹೆಚ್ಚು ಕುತೂಹಲದ ವಿಷಯವಾಯಿತು. ಹಿಂದಿನಿಂದ ನಡೆದುಬಂದ 'ಏಕಮುಖವಾದ ಮತ್ತು ಏಕಭಾಷೆಯ ಸೀಮಿತ ದೃಷ್ಟಿಕೋನ ಬಹುಮುಖೀಯ ಮತ್ತು ಬಹುಭಾಷೀಯ ದೃಷ್ಟಿಕೋನವಾಗಿ ವಿಸ್ತಾರಗೊಂಡಿತು"[೧] ಎಂಬ ಮಾತು ಮನನಯೋಗ್ಯವಾಗಿದೆ.

ಅನುವಾದ ಕಲೆಯನ್ನು ಕರಗತ ಮಾಡಿಕೊಳ್ಳುವ ಮೂಲಕ ಪ್ರಪಂಚದ ಇತರ ಕಡೆಗಳಲ್ಲಿಯ ಜ್ಞಾನ–ವಿಜ್ಞಾನ, ತಾಂತ್ರಿಕತೆ–ಭಾಷೆ ಸಾಹಿತ್ಯ ಮೊದಲಾದ ಕ್ಷೇತ್ರಗಳಲ್ಲಿ ಉಂಟಾಗುತ್ತಿರುವ ಹೊಸ ಕೃಷಿಯನ್ನು ಅರಿತುಕೊಳ್ಳಬೇಕಾಗಿದೆ. ಆಧುನಿಕ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಈ ಹೋಲಿಸುವ, ತೌಲನಿಕ ಅಧ್ಯಯನದ ವಿಸ್ತಾರವಾದ ನೆಲೆಯನ್ನು ಕಂಡುಕೊಳ್ಳುತ್ತ ಅದನ್ನು ಗಟ್ಟಿಗೊಳಿಸುವ ಕೆಲಸ ಆಗಬೇಕಿದೆ.

ಭಾರತದ ಎರಡು ಮಹಾಕಾವ್ಯಗಳಾದ ರಾಮಾಯಣ ಹಾಗೂ ಮಹಾಭಾರತಗಳು ಇತರ ಭಾಷಿಗರಿಗೆ ಪರಿಚಯವಾದದ್ದು, ಒಂದಕ್ಕಿಂತ ಹೆಚ್ಚಿನ ಭಾಷೆಗಳಲ್ಲಿ ಅನುವಾದಗೊಂಡದ್ದು ಇಂತಹ ತೌಲನಿಕ ಹಾಗೂ ಅನುವಾದ ಜಿಜ್ಞಾಸೆಯಿಂದಲೇ ಎನ್ನಬೇಕು. ಈ ರೀತಿಯ ವಿಸ್ತಾರದ ನೆಲೆಯಲ್ಲಿಯೇ ಜಾಗತಿಕ ಚಿಂತಕರನ್ನು ಅವರ ಸಾಧನೆಗಳನ್ನು ಹೋಲಿಸುವುದು, ತೌಲನಿಕವಾಗಿ ವಿವೇಚಿಸುವುದು ವೇಗವಾಗಿ ಬೆಳೆಯುತ್ತಿರುವ ಜಗತ್ತಿಗೆ ಇಂದು ಅನಿವಾರ್ಯವಾಗಿವೆ.

ಇಂತಹ ಅನಿವಾರ್ಯತೆಯನ್ನು ನೀಗಿಸಿಕೊಳ್ಳಲೆಂದೇ ಒಂದು ಕಾಲದಲ್ಲಿ ಕರ್ನಾಟಕದ ಒಟ್ಟು ಚಿತ್ರಣವನ್ನೇ ಬದಲಿಸಿದ, ಸಾಹಿತ್ಯದ ದಿಕ್ಕನ್ನೇ ಜನಪರಗೊಳಿಸಿದ ಶರಣ, ಬಸವಣ್ಣನು ಜಾಗತಿಕ ಚಿಂತಕನೇ ಸರಿ. ಇಂತಹ ಸಾಧಕನನ್ನು ಜಾಗಿಕ ನೆಲೆಯ ಚಿಂತಕರೊಂದಿಗೆ ಹೋಲಿಸಿ ಅಧ್ಯಯನ ಮಾಡುವುದು ಉಚಿತವಾದದ್ದಾಗಿದೆ. ಹೀಗೆ ತೌಲನಿಕ ಅಧ್ಯಯನಕ್ಕೆ ತೊಡಗುವಾಗ ಒಬ್ಬ ಶ್ರೇಷ್ಠ ಇನ್ನೊಬ್ಬ ಕನಿಷ್ಠ ಎಂದಾಗಲೀ ಒಬ್ಬ ಹೇಳಿದ್ದು ಸತ್ಯ, ಸಾರ್ವಕಾಲಿಕ ಇನ್ನೊಬ್ಬ ಹೇಳಿದ್ದು ಸುಳ್ಳು, ಯಾವುದೇ ಒಂದು ಕಾಲಕ್ಕೆ ಸೀಮಿತ ಎಂದು ಗೆರೆಕೊರೆಯುವುದು ವಿಚಾರಗಳನ್ನು ಮುರಿದೊಟ್ಟುವ ಕೆಲಸವೇ ಹೊರತು ಕಟ್ಟುವ ಕೆಲಸವಾಗಲಾರದು.

ಇಲ್ಲಿ ನಾವು ಜಾಗತಿಕ ಚಿಂತಕರ ಸಾಧನೆ ಸಿದ್ಧಿಗಳು ಒಟ್ಟು ಮನುಷ್ಯ ಬದುಕಿಗೆ ಎಷ್ಟು ಪೂರಕ ಸ್ಫೂರ್ತಿ ಹಾಗೂ ಅನಿವಾರ್ಯ ಪಾಠಗಳು ಎಂಬುದನ್ನು ಕಾಣುವ ಇತರರಿಗೂ ಕಾಣಿಸುವ ಕೆಲಸಕ್ಕೆ ಮುಂದಾಗಿದ್ದೇವೆ. ಸನಾತನ ಕಾಲದಿಂದಲೂ ಭಾರತದಲ್ಲಿ ನಡೆದುಬರುತ್ತಿದ್ದ ಸಾಂಪ್ರದಾಯಿಕ ನಂಬಿಕೆ, ಕಂದಾಚಾರ, ಮೂಢನಂಬಿಕೆ, ಅಸ್ಪೃಶ್ಯತೆ ಮುಂತಾದ ಜೀವವಿರೋಧಿ ನಿಲುವಿಗೆ ಶೆಡ್ಡು ಹೊಡೆದು ನಿಂತವನು ಬಸವಣ್ಣ. ಜನಮಾನಸದಲ್ಲಿ ಬಿತ್ತುತ್ತಾ ಬರಲಾಗಿದ್ದ ಮಾನಸಿಕ ದೌರ್ಬಲ್ಯ, ಪುಕ್ಕಲುತನ, ಸ್ವಾಭಿಮಾನ ಶೂನ್ಯತೆಯಂತಹ ಕಳಂಕಭರಿತ ದುರ್ಬೀಜಗಳನ್ನು ತನ್ನ ಹರಿತವಾದ ಮಾತುಗಳಲ್ಲಿ ನಿರ್ಭಿಢೆ ನಿರ್ಭೀತಿಯಿಂದ ಜನರ ಮುಂದೆ ತೆರೆದಿಟ್ಟ ದಿಟ್ಟ ಪುರುಷ. ಮನುಷ್ಯ ಸಮಾಜವನ್ನು ಎಲ್ಲ ಮಗ್ಗಲುಗಳಿಂದ

---

೧. ಎಚ್.ಜಿ. ಲಕ್ಕಪ್ಪಗೌಡ ವೈಚಾರಿಕವಾದಗಳು ಮುನ್ನುಡಿ: ಕನ್ನಡ ಪುಸ್ತಕ ಪ್ರಾಧಿಕಾರ: ಬೆಂಗಳೂರು.

ಶುದ್ಧಿಗೊಳಿಸುವ ಹಂಬಲದೊಂದಿಗೆ ಶ್ರಮಿಸಿದ ಬಸವಣ್ಣ ನಿಜವಾಗಿಯೂ ಜಾಗತಿಕ ನೆಲೆಯ ಚಿಂತಕ ಎನ್ನುವಲ್ಲಿ ಯಾವುದೇ ಲವಲೇಶವೂ ಅತಿಶಯೋಕ್ತಿಯೂ ಕಾಣಿಸದು.

ಇಂತಹ ಮಹಾನ್ ಚಿಂತಕನನ್ನು ಹಲವಾರು ಜಾಗತಿಕ ಚಿಂತಕರೊಂದಿಗೆ ಹಲವಾರು ನೆಲೆಯಲ್ಲಿ ತೌಲನಿಕವಾಗಿ ಅಧ್ಯಯನಕ್ಕೆ ಒಳಗು ಮಾಡುವ ಕೆಲಸವನ್ನು ಇಲ್ಲಿ ಅನೇಕ ಜನ ವಿದ್ವಾಂಸರು ಮಾಡಿದ್ದಾರೆ. ಅಂತಹವರ ಲೇಖನಗಳನೊಳಗೊಂಡ ಈ ಕೃತಿ ಈಗ ನಿಮ್ಮ ಕೈಯಲ್ಲಿದೆ. ಇದನ್ನು ಓದಿ, ವೈಚಾರಿಕತೆಗೆ, ಮನುಷ್ಯ ಪ್ರೀತಿಗೆ, ಸಮಾನತೆಗೆ ಇದೊಂದು ಕೈದೀವಿಗೆ ಎಂದೆಸಿದರೆ ನಮ್ಮೆಲ್ಲರ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ. ಸಲಹೆ–ಸೂಚನೆಗಳಿಗೆ ತೆರೆದ ಮನಸ್ಸಿನಿಂದ ಕಾಯುತ್ತೇವೆ.

ಡಾ. ಎಚ್.ಟಿ. ಪೋತೆ
ಪ್ರಾಧ್ಯಾಪಕರು

ಪರಿವಿಡಿ

ಬುದ್ಧ ಮತ್ತು ಬಸವ

●

ಟಿ.ಆರ್. ಮಹದೇವಯ್ಯ

ಪ್ರಾಚೀನ ಭಾರತದ ಬುದ್ಧ ಮತ್ತು ಮಧ್ಯಕಾಲಿನ ಬಸವ– ಇವರು ಮಾನವ ಕಲ್ಯಾಣವನ್ನು ಸಾಧಿಸಿ, ವಿಶ್ವವನ್ನು ಬೆಳಗಿದ ಎರಡು ಜಗಜ್ಜ್ಯೋತಿಗಳು. ಅವರಿಬ್ಬರ ಜೀವನ ಸಾಧನೆ, ಸಿದ್ಧಿಗಳನ್ನು ಒಂದರ ಪಕ್ಕದಲ್ಲಿ ಇನ್ನೊಂದನಿಟ್ಟು ಅಧ್ಯಯನ ಮಾಡುವುದು ನಮಗಿಂದು ಅನೇಕ ದೃಷ್ಟಿಗಳಿಂದ ಉಪಯುಕ್ತವೆನ್ನಿಸುತ್ತದೆ.

ಲೋಕೋತ್ತರ ಸಾಧನೆಗೈದ ಮಹಾತ್ಮರ ಜೀವನವನ್ನು ಕುರಿತು ಬರೆಯುವವರಿಗೆ ಎದುರಾಗುವ ಮೊದಲ ಸಮಸ್ಯೆಯೆಂದರೆ ಅವರ ಜನನದ ಹಿನ್ನೆಲೆ. ಮಹಾನುಭಾವರನ್ನು ಪೂಜ್ಯಭಾವದಿಂದ ನೋಡುವ ಜನ ಅಸಾಮಾನ್ಯವಾದುದನ್ನೂ ಸಾಧಿಸಿದ ಅವರನ್ನು ದೈವಾಂಶ ಸಂಭೂತರೆಂದು ಆದರಿಸುತ್ತಾರೆ; ಪೂಜಿಸುತ್ತಾರೆ. ಆಗ ಅವರ ಬಗೆಗಿನ ಐತಿಹಾಸಿಕ ಅಂಶಗಳು ಹಿಂದೆ ಸರಿದು ಅಥವಾ ಪ್ರಾಮುಖ್ಯತೆ ಕಳೆದುಕೊಂಡು ಪೌರಾಣಿಕ ಕಲ್ಪನೆಗಳು ಗರಿಗೆದರಿ ನಾಟ್ಯವಾಡತೊಡಗುತ್ತವೆ. ತಮ್ಮ ಆರಾಧ್ಯದೈವದ ವೈಭವೀಕರಣ ಸಾಗುತ್ತದೆ.

ಜನರ ಇಂಥ ಪೌರಾಣಿಕ ಮನೋಭಾವದಿಂದ ಬುದ್ಧ–ಬಸವರೂ ಹೊರತಾಗಿಲ್ಲ. ಬುದ್ಧನನ್ನು ವಿಷ್ಣುವಿನ ಅವತಾರವೆಂದೂ, ಬೌದ್ಧವತಾರವೆಂದರೆ ಆತನ ದಶಾವತಾರಗಳಲ್ಲಿನ ಒಂಬತ್ತನೆಯದೆಂದೂ ನಂಬಲಾಗಿದೆ. ಬಸವನೂ ಸಹ ನಂದೀಶನ ಅವತಾರವೆಂದೂ, ಧರ್ಮೋದ್ಧಾರಕ್ಕಾಗಿ ಧರೆಯಲ್ಲಿ ಅವತರಿಸಿದ ಕಾರಣಿಕನೆಂದೂ ಪುರಾಣಗಳು ಹೇಳುತ್ತವೆ. 'ಅವತಾರದ ಕಲ್ಪನೆ' ಹಬ್ಬಿಸಿದ ಜನರ ವಾಣಿಗೆ, ಅದನ್ನೇ ಕಾವ್ಯಗಳಲ್ಲಿ ಬಿಂಬಿಸಿದ ಕವಿಯವಾಣಿಗೆ ಒಂದು ಸದುದ್ದೇಶವಿತ್ತು. ಅದನ್ನು ಕೇಳಿದ, ಓದಿದ ಜನ ಆ ಧರ್ಮೋದ್ಧಾರಕರ ಬಗ್ಗೆ ಪೂಜ್ಯಭಾವ ತಳೆಯಲಿ, ಆದರಿಸಲಿ, ಆ ಮೂಲಕ ಉದ್ಧಾರದ ಮಾರ್ಗ ಕಾಣಲಿ ಎಂಬುದು ಅವರ ಬಯಕೆ. ಆದರೆ ಆದುದೇನು? ಜನ ಆ ಮಹಾತ್ಮರನ್ನು ದೇವರ ಅವತಾರವೆಂದು ಕೈಮುಗಿದು ಪೂಜೆಮಾಡಿದರು, ನಿಜ. ಶ್ರದ್ಧೆ ತಳೆಯುವುದರ ಬದಲು ದೂರ ಸರಿದು ನಿಂತರು. ಬಹುಶಃ ಜನರ ವಿಚಾರಸರಣಿ ಹೀಗಿರಬಹುದು: "ದೈವೀಶಕ್ತಿ ಸಂಪನ್ನರಾದ ಆ ಮಹಾತ್ಮರು ಅಂಥ ಅದ್ಭುತಗಳನ್ನು ಸಾಧಿಸಿದರು. ಅದು ಅವರಿಗೆ ಸಾಧ್ಯವಿತ್ತು. ನಾವು ಸಾಮಾನ್ಯರು. ಅಸಹಾಯಕರಾದ ನಮಗೆ ನಮ್ಮವೇ ಆದ

ದೌರ್ಬಲ್ಯಗಳಿವೆ; ಅಡ್ಡಿ ಆತಂಕಗಳಿವೆ. ನಾವು ಏನನ್ನೂ ತಾನೇ ಸಾಧಿಸಲಾದೀಚಿತು?" ಎಂದು ಸೌಜನ್ಯದಿಂದಲೇ ತಮ್ಮ ಮನಗಳ್ಳತನವನ್ನೂ ಮುಚ್ಚಿಕೊಳ್ಳತೊಡಗಿದರು. ಮೂಲೋದ್ದೇಶಕ್ಕೇ ಕೊಡಲಿಪೆಟ್ಟು ಬಿದ್ದಂತಾಯಿತಲ್ಲಾ!

ಇದರ ಜೊತೆಗೆ ಮನುಷ್ಯನಿಗೆ ವಸ್ತುಸ್ಥಿತಿಯ ಅರಿವು ಮೂಡಲು ಪೂರ್ವಗ್ರಹಿಕೆ ಮತ್ತು ಪಕ್ಷಪಾತ ಬುದ್ಧಿಗಳೆಂಬುವು ಶಾಪಗಳಂತೆ ಕಾಡುತ್ತವೆ. ಇವು ದೊಡ್ಡವರ ಬದುಕಿನ ನಿಜವಾದ ಸತ್ತ್ವ–ಸಂದೇಶಗಳನ್ನು ತಿಳಿಯಲು ಅಡ್ಡಿಯಾಗುತ್ತವೆ. ಬುದ್ಧ, ಬಸವ ಮೊದಲಾದ ಮಾನವಹಿತ ಸಾಧಕರ ಬಗ್ಗೆ ಎರಡು ಅನಾರೋಗ್ಯಕರ ಪ್ರವೃತ್ತಿಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಕೆಲವರು ಅವರನ್ನು ಯಾವುದೋ ಒಂದು ಗುಂಪಿಗೆ, ಬಣಕ್ಕೆ ಸೇರಿದವರೆಂದು ಭಾವಿಸುತ್ತಾರೆ. ಅವರು ತಮಗೆ ಸಂಬಂಧಪಟ್ಟವರಲ್ಲವೆಂದು, ಅವರ ಸಂದೇಶದ ಬಗ್ಗೆ ಕಿವುಡಾಗುತ್ತಾರೆ. ಮತ್ತೆ ಕೆಲವರು ಅವರನ್ನು ಅತಿಅಭಿಮಾನದಿಂದ ನೋಡುತ್ತಾರೆ. ಭಕ್ತಿಯ ಅತಿಶಯದಿಂದ ಅಂಥ ಮಹಾನುಭಾವಿಗಳನ್ನು ದೇವರನ್ನಾಗಿ ಮಾಡಿ ದೇಗುಲದೊಳಗೆ ಕೂಡಿಸಿಬಿಡುತ್ತಾರೆ. 'ಸಂಕಟ ಬಂದಾಗ ವೆಂಕಟರಮಣ' ಎನ್ನುವಂತೆ ತಮಗೆ ಕಷ್ಟ ಬಂದಾಗ ಅದರ ನಿವಾರಣೆಗೆ ಆತನ ಮೊರೆಹೋಗುತ್ತಾರೆ. ದೇವಸ್ಥಾನಕ್ಕೆ ಹೋಗಿ ದೇವರ ಸನ್ನಿಧಿಯಲ್ಲಿ ಒಂದು ಬಗೆ, ಹೊರಗೆ ಬಂದಾಗ ಇನ್ನೊಂದು ಬಗೆ! ಈ ಇಬ್ಬಂದಿತನದಿಂದ ಯಾವ ಪುರುಷಾರ್ಥವನ್ನು ಸಾಧಿಸಲಾದೀತು, ಲೋಕಹಿತ ಸಾಧಿಸಿದ ಮಹಾನುಭಾವರ ಬದುಕನ್ನು, ಅವರ ಜೀವನ ಸಂದೇಶವನ್ನು ಅರ್ಥಮಾಡಿಕೊಳ್ಳುವುದರಲ್ಲಿ ನಾವು ಹೇಗೆ ತಪ್ಪುತ್ತಿದ್ದೇವೆ ಎಂಬುದಕ್ಕೆ ಇದು ನಿದರ್ಶನ. ಆದ್ದರಿಂದ ನಾವು ಇಂಥ ದೃಷ್ಟಿದೋಷದಿಂದ ಮುಕ್ತರಾಗಿ, ನಿರಾಳಮನದಿಂದ ಅವರ ಬದುಕನ್ನು ಅರ್ಥಮಾಡಿಕೊಂಡು ಅನುಸರಣೆ ಮಾಡಬೇಕಾಗಿದೆ.

ಬುದ್ಧ, ಬಸವರಂಥ ವಿಶ್ವಕುಟುಂಬಿಗಳನ್ನು ಯಾವುದೋ ಒಂದು ಗುಂಪಿಗೆ, ಒಂದು ದೇಶಕ್ಕೆ, ಒಂದು ಕಾಲಕ್ಕೆ ಸೀಮಿತಗೊಳಿಸುವುದು ಅವಿವೇಕದ ಪರಮಾವಧಿ. ಅವರು ಬಣ, ದೇಶ, ಕಾಲಗಳ ಸಂಕುಚಿತ ಎಲ್ಲೆಗಳನ್ನೂ ಮೀರಿ ಇಡೀ ಮಾನವಕುಲವನ್ನು ತಮ್ಮ ಅಸೀಮ ಮಾನವಾಂತಃಕರಣದಿಂದ ಆಲಿಂಗಿಸಿ ನಿಂತ ಪುಣ್ಯಾತ್ಮರು. ಅವರು ಸ್ವರ್ಗದಿಂದ ಅವತರಿಸಿದವರಲ್ಲ. ಇದೇ ಮಣ್ಣಿನಲ್ಲಿ ಅರಳಿದ ಮಾನವರೇ. ಸಹಜವಾದ ದೌರ್ಬಲ್ಯಗಳು ಅವರಿಗೂ ಇದ್ದವು. ಅವರು ಅವನ್ನು ಗುರುತಿಸಿ, ಪೂರ್ಣವಾಗಿ ನಿವಾರಿಸಿಕೊಂಡು ಬೆಳೆದರು. ತಮ್ಮಲ್ಲಿದ್ದ ದೇವಗುಣಗಳನ್ನು ಉತ್ಕರ್ಷಗೊಳಿಸಿಕೊಂಡು ದೇವಮಾನವರಾದರು. ಅವರಂತೆ ನಾವೂ ಮನಸ್ಸುಮಾಡಿ ಪ್ರಯತ್ನಶೀಲರಾದರೆ ಅವರು ಏರಿದ ಎತ್ತರಕ್ಕೆ ಹೋಗುವುದು ಸಾಧ್ಯ. ಆದ್ದರಿಂದ ಅಂಥ ದೊಡ್ಡವರನ್ನು ದೇವರೆಂದು ದೂರವಿಟ್ಟು ಕೈಮುಗಿದು ನಿಲ್ಲುವುದಕ್ಕಿಂತ, ಅವರನ್ನು ಆದರ್ಶಮಾನವರೆಂದು ನಮ್ಮೊಡನೆಯೇ ಇಟ್ಟುಕೊಳ್ಳುವುದು; ಅವರು ನಡೆದು ತೋರಿದ ದಾರಿಯಲ್ಲಿ ಕ್ರಮಿಸಲೆತ್ನಿಸುವುದು ಯುಕ್ತ. ಆಗ ಅವರ ನುಡಿ ನಮಗೆ ತಾರಕಮಂತ್ರ; ಅವರ ನಡೆ ನಮಗೆ ದಾರಿದೀಪವಾಗುತ್ತವೆ. ಹೀಗೆ ಈ ಇಬ್ಬರು ಮಹಾ ಪುರುಷರು ಮಾನವತೆಯ ಮೇಲೆ ಅರಳಿದ ಮಂದಾರಗಳು; ಮಾನವರಾಗಿ ಹುಟ್ಟಿ ಮಹಾ ಮಾನವರಾಗಿ ಬೆಳೆದ ಸಾಧಕರು ಎಂಬ ಭಾವನೆಯಿಂದ ಅವರ ಜೀವನವನ್ನು ಅಧ್ಯಯನ ಮಾಡಿದರೆ ಮಾತ್ರ ನಾವು ಅವರನ್ನು ಯಥಾರ್ಥವಾಗಿ ಅರ್ಥಮಾಡಿಕೊಳ್ಳಲು ಸಾಧ್ಯ.

ಜಗತ್ತಿನಲ್ಲಿ ಅಧರ್ಮ, ಅಂಧಶ್ರದ್ಧೆ, ಅಜ್ಞಾನ, ಅಮಾನುಷತೆಗಳ ಕಸ ತುಂಬಿ ಉಸಿರು ಕಟ್ಟಿಸುವ ವಾತಾವರಣ ಉಂಟಾಗಿ ಬದುಕು ಅಸಹನೀಯವೆನಿಸಿ ಜನಮನದಲ್ಲಿ ಆರೋಗ್ಯಕರ ಸನ್ನಿವೇಶದ ಆಸೆ ತೀವ್ರಗೊಂಡಾಗ ಅಲ್ಲಿನ ಯಾವನೋ ಒಬ್ಬ ಮಹಾನುಭಾವಿಯ ಮೂಲಕ ಈ ಮಹಾಮಣಿಹ ನೆರವೇರುತ್ತಾ ಬಂದಿರುವುದನ್ನು ಮಾನವ ಇತಿಹಾಸ ಸಾದರ ಪಡಿಸುತ್ತಾ ಬಂದಿದೆ. ನಮ್ಮ ದೇಶದಲ್ಲಿ ಇಂಥ ಅನೇಕ ಸತ್ಪುರುಷರು ಆಗಿ ಹೋಗಿದ್ದಾರೆ; ವಿಶ್ವಮಾನವರೆನಿಸಿ ಇಡೀ ಮಾನವ ಸಮುದಾಯಕ್ಕೆ ಅಮರ ಸಂದೇಶವನ್ನು ಬಿತ್ತರಿಸಿದ್ದಾರೆ. ಬುದ್ಧ ಮತ್ತು ಬಸವ ಅಂಥ ಲೋಕೋದ್ಧಾರ ಕಾರ್ಯವೆಸಗಿದ ಮಾನವ ಹಿತೈಷಿ ಪ್ರವಾದಿಗಳು. ಅವರು ಧರ್ಮದ ಪ್ರಗತಿಪರ ಧೋರಣೆಗಳನ್ನು ಎತ್ತಿ ಹಿಡಿದ ಭಾರತದ ಮಹಾನ್ ಧಾರ್ಮಿಕ ಜ್ಯೋತಿಗಳು.

ಕಾಲದ ದೃಷ್ಟಿಯಿಂದ ಬುದ್ಧ ಮತ್ತು ಬಸವರ ನಡುವೆ ಶತ ಶತಮಾನಗಳ ಅಂತರವಿದ್ದರೂ, ಆಯಾ ಕಾಲದಲ್ಲಿದ್ದ ಸಾಮಾಜಿಕ ಸ್ಥಿತಿಗತಿಗಳಲ್ಲಿ ಸಾಮ್ಯವಿದೆ. ಅಲ್ಲದೆ ಅವರಿಬ್ಬರ ಮನೋ ಧರ್ಮಗಳಲ್ಲಿ, ತಮ್ಮ ಕಾಲದ ಜನ ಜೀವನದ ಬಗ್ಗೆ ಅವರು ಸ್ಪಂದಿಸಿದ ರೀತಿಯಲ್ಲಿ, ತಳೆದ ಕ್ರಾಂತಿಕಾರಕ ದೃಷ್ಟಿಗಳಲ್ಲಿ ಸಮಾನ ಲಕ್ಷಣಗಳಿವೆ. ಆ ಕಾಲಗಳಲ್ಲಿ ಹಿಂದೂಧರ್ಮ ತನ್ನ ನಿಜವಾದ ಮಾನವೀಯ ಮೌಲ್ಯಗಳನ್ನು ನೀಗಿಕೊಂಡು ಶುಷ್ಕ ಆಚರಣೆಗಳ, ಕಂದಾಚಾರಗಳ, ಮೂಢನಂಬಿಕೆಗಳ ಆಗರವಾಗಿತ್ತು. ಅಂತರಂಗ ಶುದ್ಧವಿಲ್ಲದ ಬಾಹ್ಯ ಆಚರಣೆ, ನಡೆ-ನುಡಿಗಳಲ್ಲಿ ಹೊಂದಾಣಿಕೆಯಿಲ್ಲದ ಘೋರ ಸ್ಥಿತಿ, ನೈತಿಕ ಪತನ, ಯಜ್ಞ ಯಾಗಾದಿಗಳ ಹೆಸರಿನಲ್ಲಿ ನಡೆಯುತ್ತಿದ್ದ ಹಿಂಸೆ, ಅತ್ಯಾಚಾರಗಳು ಸಮಾಜದ ಪ್ರತಿಷ್ಠಿತರಿಂದ ದೀನ ದಲಿತರ ಶೋಷಣೆ ಇವು ಅವರ ಹೃದಯದ ತಂತಿಯನ್ನು ಮೀಟಿದವು. ಅವರು ಆಗ ರೂಢಿಯಲ್ಲಿದ್ದ ಅರ್ಥಹೀನವಾದ ಆಚರಣೆಗಳನ್ನು ಕಂಡು ಕೊರಗಿದರು; ಮಾನವ-ಮಾನವರ ನಡುವೆ ಇದ್ದ ತಾರತಮ್ಯಗಳನ್ನು ಕಂಡು ಮರುಗಿದರು. 'ಬಹು ಜನರಿಗೆ ಬಹು ಒಳಿತನ್ನುಂಟುಮಾಡುವ, ಸತ್ಸಂಕಲ್ಪದಿಂದ ಅವರು ತರ-ತಮ ಭೇದವಿಲ್ಲದ ಸಮಾನತೆಯ ಸುಂದರ ಸಮಾಜವನ್ನು ನಿರ್ಮಿಸಲು ನಿರ್ಧರಿಸಿದರು.

ಇದಕ್ಕಾಗಿ ಅವರು ಕಂದಾಚಾರ, ಅಂಧಾನುಕರಣೆ, ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆಗಳ ವಿರುದ್ಧ ಸಮರವನ್ನೇ ಸಾರಿದರು. ದಯೆ, ಕರುಣೆಗಳೇ ಧರ್ಮದ ಹೃದಯವೆಂದು ಒತ್ತಿ ಹೇಳಿದರು. ಧರ್ಮದ ತಳಹದಿಯಾಗಿರಬೇಕಾದುದು ಕುರುಡು ನಂಬಿಕೆಯಲ್ಲ, ಸುಜ್ಞಾನದ ವಿವೇಚನೆ ಎಂಬುದನ್ನು ಅವರು ಮನವರಿಕೆ ಮಾಡಿದ ರೀತಿ ಅನನ್ಯ. ಬಹುಪಾಲು ಜನರಿಂದ ದೂರ ಉಳಿದಿದ್ದ ಆಧ್ಯಾತ್ಮ ವಿದ್ಯೆಯನ್ನು ಸಾರ್ವತ್ರಿಕವಾಗಿಸಲು ಶ್ರಮಿಸಿದ ಅವರು ಮೋಕ್ಷದ ಬಾಗಿಲನ್ನು ಎಲ್ಲರಿಗೂ ತೆರೆದಿಟ್ಟರು. ಏಕೆಂದರೆ ಧರ್ಮಕ್ಕೆ ಬೆಲೆ ಬರುವುದು ಅದು ಜನರನ್ನು ಬದುಕಿಸುವ ಮಹಾ ಗುಣದಿಂದ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು.

ಈ ಇಬ್ಬರು ಧರ್ಮವೀರರೂ ವಿಗ್ರಹಾರಾಧನೆ, ಯಜ್ಞ ವಿಧಿಗಳು, ಅಸ್ಪೃಶ್ಯತೆ ಮತ್ತು ಹೆಣ್ಣಿನ ಬಗೆಗಿನ ಹೀನ ನಡವಳಿಕೆಗಳನ್ನು ನೇರವಾಗಿ ಎದುರಿಸಿದರು. ಅವರ ಕಾಲಕ್ಕೆ ಅವರ ನಿಲುವು ಅತ್ಯಂತ ದಿಟ್ಟತನದ್ದಾಗಿತ್ತು. ಅವರಿಬ್ಬರು ಜನತೆಗೆ ನೀಡಿದ ಬಹುದೊಡ್ಡ ಅನುಗ್ರಹವೆಂದರೆ ಸ್ವತಂತ್ರವಾಗಿ ಆಲೋಚಿಸಲು ಕಲಿಸಿದ್ದು; ಮನಶ್ಶುದ್ಧಿ ಮತ್ತು ನೈತಿಕ ಜೀವನದ ಮೇಲ್ಮೆಯನ್ನು ಎತ್ತಿ ಹಿಡಿದು ಜ್ಞಾನೋದಯವೇ ಜೀವನದ ಪರಮಗುರಿ

ಯಾಗಬೇಕೆಂದು ಅವರು ತಿಳಿಹೇಳಿದ್ದು. ಮೂಲೆ ಗುಂಪಾಗಿ ಹೋಗಿದ್ದ ಶೋಷಿತರಿಗೆ, ಬಿನ್ನಹಕೆ ಬಾಯಿಲ್ಲವಾಗಿದ್ದ ದೀನ ದಲಿತರಿಗೆ ಸ್ಥಾನಮಾನ ದೊರಕಿಸಿದರು; ಮಾತು ಕಲಿಸಿದರು. ಅಷ್ಟೇ ಅಲ್ಲ, ಬದುಕುವ ಕಲೆಯನ್ನೆ ಕಲಿಸಿದರು.

ಬುದ್ಧ ಮತ್ತು ಬಸವರು ತಮ್ಮ ಪರಿಶ್ರಮದಿಂದ ಸಾಕ್ಷಾತ್ಕರಿಸಿಕೊಂಡ ದಿವ್ಯಾನುಭವಗಳನ್ನು, ಬದುಕುವ ರೀತಿನೀತಿಗಳನ್ನು ಜನಸಾಮಾನ್ಯರ ಆಡುಮಾತಿನಲ್ಲಿ–ಒಬ್ಬ ಪಾಳಿ ಭಾಷೆಯಲ್ಲಿ, ಇನ್ನೊಬ್ಬ ಕನ್ನಡ ಭಾಷೆಯಲ್ಲಿ ಬೋಧಿಸಿದರು. ಅವರ ರಚನೆಗಳು ಸಾಹಿತ್ಯ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನೇ ತೆರೆದಿವೆ. ಅವರು ಬದುಕನ್ನು ಮಥಿಸಿ ತೆಗೆದ ಮಾನವೀಯ ಆಣಿ ಮುತ್ತುಗಳು, ತೆರೆದು ತೋರಿದ ಜ್ಞಾನದ ಗಣಿಗಳು, ನೀಡಿದ ಮಾನವ ಹಿತಾಕಾಂಕ್ಷಿಯಾದ ಸಂದೇಶಗಳು ಇಡೀ ಮಾನವ ಕೋಟಿಯ ದಿವ್ಯ ಸಂಪದ. ಬುದ್ಧನು ಸ್ಥಾಪಿಸಿದ ಧರ್ಮವು ಸಾಮ್ರಾಟ ಅಶೋಕನೇ ಮೊದಲಾದ ಧರ್ಮ ಪ್ರಚಾರಕರ ಶ್ರದ್ಧೆ ಹಾಗೂ ಉತ್ಸಾಹಗಳಿಂದಾಗಿ ಬೆಳೆಯಿತು; ಭಾರತವನ್ನೂ ದಾಟಿ ದೂರ ಪ್ರಾಚ್ಯ ಮತ್ತು ಆಗ್ನೇಯ ದೇಶಗಳಿಗೂ ಸಾಗಿತು. ಅದೇ ಬಸವನು ಎತ್ತಿ ಹಿಡಿದ ವೀರಶೈವ ಧರ್ಮವು, ಅದರಲ್ಲಿ ಸ್ವಾತಂತ್ರ್ಯ ಹಾಗೂ ಮಾನವೀಯ ದೃಷ್ಟಿಯಿದ್ದರೂ, ಉತ್ಸಾಹ ಪೂರ್ಣ ಪ್ರಚಾರದ ಅಭಾವದಿಂದಾಗಿ ಭಾರತದಲ್ಲಿಯೇ ಸರಿಯಾಗಿ ಹಬ್ಬದೆ, ಕರ್ನಾಟಕಕ್ಕೇ ಸೀಮಿತವಾಯಿತು.

ಬುದ್ಧ

ಬುದ್ಧನು ಕ್ರಿಸ್ತಪೂರ್ವ ೫೬೭ರಲ್ಲಿ ಕಪಿಲ ವಸ್ತುವಿನ ಶುದ್ಧೋದನ ಮಹಾರಾಜನ ಸುಪುತ್ರನಾಗಿ ಜನಿಸಿದನು. ಆತ ಭೋಗ–ಭಾಗ್ಯಗಳ ನಡುವೆ ಕೊರತೆಯನ್ನೇ ಕಾಣದೆ ಬೆಳೆದನು. ಅವನಿಗೆ ಅರಸೊತ್ತಿಗೆಯ ಅರೆಯಾಗದ ಸುಖ, ಮೋಹದ ಮಡದಿ, ಮುದ್ದಿನಮಗ, ಯಾವುದಕ್ಕೂ ಕಡಿಮೆಯಿಲ್ಲ. ಒಮ್ಮೆ ಆತ ಆಕಸ್ಮಿಕವಾಗಿ ಕಂಡ ಒಬ್ಬ ರೋಗಿ, ಒಬ್ಬ ಮುದುಕ, ಒಂದು ಹೆಣ ಬದುಕಿನ ನಶ್ವರತೆಯನ್ನು, ಜೀವದ ಕ್ಷಣಿಕತೆಯನ್ನು ಸಾರಿ, ಮನಸ್ಸನ್ನು ಕಲಕಿದವು. ಜೀವಿಗಳ ದುಃಖಕ್ಕೆ ಕಾರಣವನ್ನು ಅವನ ಕರುಣಾರ್ದ್ರ ಹೃದಯ ಚಿಂತಿಸತೊಡಗಿತು. ಅವನ ಬದುಕಿನ ಮಾರ್ಗದಲ್ಲಿ ಕವಲೊಡೆದದ್ದು ಹೀಗೆ. ಸಂನ್ಯಾಸಿಯಾಗಿ ಕೇವಲ ಧ್ಯಾನ ಯೋಗದಿಂದ ಸಾಧನೆ ಮಾಡಲು ನಿರ್ಧರಿಸಿದ ಆತನಿಗೆ ಸರ್ವಸಂಗ ಪರಿತ್ಯಾಗವೊಂದೇ ಮಾರ್ಗವಾಗಿ ಕಂಡಿತು. ಅಂತೆಯೇ ಆ ದಿನ ಅರ್ಧರಾತ್ರಿಯಲ್ಲಿ ಎಲ್ಲವನ್ನೂ ತೊರೆದು ಹೊರಟನು. ವರಕವಿ ಬೇಂದ್ರೆಯವರು ಹಾಡಿರುವಂತೆ,

ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ
ಮಡದಿ, ಮಗು, ಮನೆ ಮಾರು, ರಾಜ್ಯಗೀಜ್ಯ
ಹೊತ್ತಿರುವ ಉರಿಯಲ್ಲಿ ಆಯಿತಾಜ್ಯ...
ಕಾಮ–ಕ್ರೋಧವ ದಾಟಿ, ಮದ–ಮತ್ಸರವ ತುಳಿದು
ಮೋಹ–ಲೋಭವ ಮೆಟ್ಟಿ ಅಡಿ ಕಿತ್ತಿ ಇಟ್ಟ....ನೆಲ ಕೆಳಗೆ ಬಿಟ್ಟ

ಸತ್ಯಾನ್ವೇಷಣೆಯ ಹಾದಿಯಲ್ಲಿ ಸಾಗಿದ ಗೌತಮನು ನಿರಂತರ ಧ್ಯಾನ–ತಪಗಳಿಂದ ಕೊನೆಗೊಮ್ಮೆ ಬೆಳಕನ್ನು ಕಂಡುಕೊಂಡನು. ಜ್ಞಾನೋದಯವಾದ ಗೌತಮ ಬುದ್ಧನಾದ;

ಮಹಾಜ್ಞಾನಿಯಾದ. ಬಹು ಎತ್ತರಕ್ಕೆ ಏರಿ ನಿಂತ ಬುದ್ಧ ಕೆಳಕ್ಕೆ ಒಮ್ಮೆ ನೋಡಿದ. ಆಗ ಅವನು ಕಂಡಿದ್ದೇನು?

ಅಲ್ಲಿಂದ ಇಲ್ಲಿವರೆ ಹೊರಳಿ ನೋಡಿ
ಇದ್ದುದಿದ್ದಂತಿತ್ತು ಜನನ–ಮರಣದ ಜೋಡಿ
ಗೆದ್ದುದೇನೆನುತ ಮರಳಿ ಜಿಗಿದ.

ಆತ ಕೇವಲ ಸಹಾನುಭೂತಿಯಿಂದ ಕೆಳಗೆ ಇಳಿದು ಬಂದು ತನ್ನಂತೆಯೇ ತನ್ನ ಸಹ ಜೀವಿಗಳೂ ಸಹ ಜ್ಞಾನವಂತರಾಗಲೆಂದು ಶ್ರಮಿಸತೊಡಗಿದನು. ತನ್ನ ಇಳಿವಯಸ್ಸಿನವರೆಗೆ ಜನರೊಡನೆ ಬೆರೆತು ಅವರಿಗೆ ಮಾರ್ಗದರ್ಶನ ನೀಡಿದನು. ತನ್ನ ಆದರ್ಶ ನಡೆಯಿಂದ, ಹೃದಯ ಸ್ಪರ್ಶಿಯಾದ ಸರಳ ಆಡುನುಡಿಯ ಮೂಲಕ ಜನರ ಬಾಳನ್ನು ತಿದ್ದಲು ಯತ್ನಿಸಿದನು. ತನ್ನ ಅನುಭವಗಳನ್ನು ತರ್ಕ ಸಮ್ಮತವಾಗಿ ಹೇಳಿದ್ದು ಆತನ ವೈಶಿಷ್ಟ್ಯ. ಹಿಂದಿನವರು ಆಗಮಾಡಲು ತಪ್ಪಿದ, ಒಂದು ರೀತಿಯಲ್ಲಿ ಧರ್ಮವನ್ನು ಜೀವನದೊಂದಿಗೆ ಹೊಂದಿಸುವ ನಿಜವಾದ ಪ್ರಯತ್ನವನ್ನು ಆತ ಮಾಡಿದ್ದರಿಂದ ಭಾರತೀಯರು ಆತನಲ್ಲಿ ಒಬ್ಬ ಧರ್ಮವೀರನನ್ನು ಗುರುತಿಸಿದರು. ಸಂನ್ಯಾಸಿಗಳಿಗೆ ವಿಮೋಚನೆಗಾಗಿ ಲೋಕ ಜೀವನದಿಂದ ವಿಮುಖರಾಗಿರೆಂದೂ, ಜನಸಾಮಾನ್ಯರಿಗೆ ಪ್ರಪಂಚದಲ್ಲೆ ಉಳಿದು ವಿಷಯ ಲಂಪಟತನ ಮತ್ತು ಮೂಢನಂಬಿಕೆಯ ಜಾಲದಿಂದ ದೂರವಿರಬೇಕೆಂದೂ ಉಪದೇಶಿಸಿದನು. ಬುದ್ಧನು ತನ್ನ ಉಜ್ವಲವಾದ ವಿವೇಕ, ಭವ್ಯವಾದ ದಯೆ ಮತ್ತು ನಿಷ್ಠೆಗಳಿಂದ 'ಏಷ್ಯಾದ ಸಾಕ್ರಟೀಸ್' ಎನ್ನಿಸಿಕೊಂಡನು.

ಅಶೋಕನ ಕಾಲಕ್ಕೆ ಬೌದ್ಧಮತದಲ್ಲಿ ಅನೇಕ ಮಾರ್ಪಾಟುಗಳಾದವು. ಅದನ್ನು ಜನಪ್ರಿಯಗೊಳಿಸುವ ಉತ್ಸಾಹದಲ್ಲಿ ಅದು ಆತನಿಗೆ ಅನಿವಾರ್ಯವಾಗಿರಬೇಕು. ಅವನ ನಂತರವಂತೂ ಅದರಲ್ಲಿ ಅಗಾಧ ಬದಲಾವಣೆಗಳಾದವು. ಬುದ್ಧ ಕೆಲವನ್ನು ಖಚಿತವಾಗಿ ಹೇಳಿದ್ದ, ಮತ್ತೆ ಕೆಲವನ್ನು ಜನರ ಸ್ವಾನುಭವಕ್ಕೆ ಬಿಟ್ಟಿದ್ದನು. ಗುರು ಹೇಳದೆ ಇದ್ದುದನ್ನು ಶಿಷ್ಯರು ಊಹಿಸಿದರು – ತಮ್ಮ ಯೋಗ್ಯಾನುಸಾರ. ಪರಿಣಾಮವಾಗಿ 'ಬುದ್ಧನ ಧರ್ಮ ಒಂದು; ಬೌದ್ಧರ ಧರ್ಮ ಹಲವು' ಎಂದಾಯಿತು. ಬೌದ್ಧ ಧರ್ಮದ ಬೆಳವಣಿಗೆಯಲ್ಲಿ ನಾಲ್ಕು ಹಂತಗಳನ್ನು ಗುರುತಿಸಿದ್ದಾರೆ.

ನಾಲ್ಕು ಧರ್ಮ ಸಭೆಗಳು :

೧. ಬುದ್ಧನು ನಿರ್ವಾಣ ಹೊಂದಿದ ನಂತರ : ರಾಜಗೃಹದಲ್ಲಿ
೨. ಆತನ ನಿರ್ವಾಣದ ಒಂದು ಶತಕದ ನಂತರ : ವೈಶಾಲಿಯಲ್ಲಿ
೩. ದೇವನಾಂಪ್ರಿಯ ಪ್ರಿಯದರ್ಶಿ ಅಶೋಕನ ಕಾಲದಲ್ಲಿ : ಪಾಟಲೀ ಪುತ್ರದಲ್ಲಿ
೪. ಕ್ರಿ.ಶ. ೧೦೦ರ ಸುಮಾರಿಗೆ ಕಾನಿಷ್ಕನ ಕಾಲದಲ್ಲಿ : ಕಾಶ್ಮೀರ ಅಥವಾ ಜಲಂಧರ್‌ನಲ್ಲಿ

ಹೀಗೆ ಹಂತ ಹಂತವಾಗಿ ಬೌದ್ಧಮತ ಅನುಕೂಲಕ್ಕೆ ತಕ್ಕಂತೆ ಮಾರ್ಪಡುತ್ತ ಹೋಯಿತು.

ಕ್ರಮೇಣ ಮಾನವ ಬುದ್ಧ, ಅತಿ ಮಾನವನಾಗಿ ಪರಿಗಣಿಸಲ್ಪಟ್ಟನು. ಆತನ ಆಧ್ಯಾತ್ಮ ತತ್ತ್ವವು ತಾನು ಮೂಡಿದ ಹಿಂದೂ ಧರ್ಮದಂತೆಯೇ ದೇಗುಲವನ್ನು ಸೇರಿತು. ವ್ಯಕ್ತಿಯು ತನ್ನ ಸತತ ಶ್ರದ್ಧೆಯ ಸಾಧನೆಯಿಂದ ಮೋಕ್ಷ ದೊರಕಿಸಿಕೊಳ್ಳುತ್ತಾನೆಂಬುದು ಹೋಗಿ ಮಾನವ ಕುಲೋದ್ಧಾರಕನಾದ ಬೋಧಿಸತ್ವನ ಕರುಣೆಯಿಂದ, ಅನುಗ್ರಹದಿಂದ ಅದು

ಸಾಧ್ಯವಾಗುತ್ತದೆ ಎಂಬ ಭಾವನೆ ಬಲಿಯಿತು. ಧರ್ಮ ಒಡೆಯಿತು–ಹೀನಯಾನ, ಮಹಾಯಾನ ಎಂದು. ಪರಿಣಾಮವಾಗಿ ಬೌದ್ಧಧರ್ಮ ಸಂಸ್ಥೆಯಲ್ಲಿನ ವ್ಯವಸ್ಥೆ ಸಡಿಲವಾಯಿತು. ಭಾರತದಲ್ಲಿ ಅದರ ಅವನತಿಗೆ ಅದೇ ಕಾರಣವಾಯಿತು.

ಬುದ್ಧನ ವಿಚಾರ ಪ್ರಣಾಳಿಕೆಯೆಲ್ಲವನ್ನು ಒಳಗೊಂಡಿರುವ ಗ್ರಂಥ ಸಮುದಾಯವನ್ನು 'ಬುದ್ಧವೇದ'ವೆನ್ನುತ್ತಾರೆ. ಅವೇ ತ್ರಿಪಿಟಕಗಳು : ೧. ವಿನಯ ಪಿಟಕ. ೨. ಸುತ್ತಪಿಟಕ ೩. ಅಭಿಧರ್ಮ ಪಿಟಕ. ಇವಲ್ಲದೆ ಬುದ್ಧನ ಜಾತಕ ಕಥೆಗಳು ಪ್ರಸಿದ್ಧವಾಗಿವೆ. ಬುದ್ಧನ ಉದಾತ್ತ ವಿಚಾರಗಳಲ್ಲಿ ಆರ್ಯ ಸತ್ಯಗಳು ಮುಖ್ಯ. ಆ ಆರ್ಯ ಸತ್ಯಗಳು ನಾಲ್ಕು:

ಅ) ಜಗತ್ತಿನಲ್ಲಿ ದುಃಖವಿದೆ: ಮುಪ್ಪು, ರೋಗ, ಸಾವು, ನಿರಾಶೆ ಮೊದಲಾದವುಗಳಿಂದ ಉಂಟಾಗುವ ಅಸಂತೋಷ.

ಆ) ದುಃಖಕ್ಕೆ ಕಾರಣವಿದೆ: ಜೀವಿಗಳ ದುಃಖಕ್ಕೆ ಕಾರಣ ತೃಷ್ಣೆ, ಆಸೆ.

ಇ) ದುಃಖನಿರೋಧ ಸಾಧ್ಯವಿದೆ: ತೃಷ್ಣೆ ಅಥವಾ ಬಯಕೆ ಇಂಗಿದರೆ ದುಃಖ ಅಳಿಯುತ್ತದೆ.

ಈ) ದುಃಖ ನಿರೋಧ ಮಾರ್ಗ : ಇದು ನಿರ್ವಾಣದ ಕಡೆಗೆ ಒಯ್ಯುವ ದಾರಿ.

ನಿರ್ವಾಣವೆಂದರೆ ಆರಿಹೋಗುವುದು, ಇಲ್ಲವಾಗುವುದು ಎಂದರ್ಥ. ತೃಷ್ಣೆ ಅಥವಾ ವಾಸನೆಗಳು ಶಾಂತವಾಗುವುದು. ಸರ್ವದಾ ದುಃಖದಿಂದ ಬಿಡುಗಡೆ ಹೊಂದವುದೇ ನಿರ್ವಾಣ.

ಇದಕ್ಕೆ ಬುದ್ಧನು **ಅಷ್ಟಾಂಗಮಾರ್ಗ**ಗಳನ್ನು ಸೂಚಿಸಿದ್ದಾನೆ:

i) ಸಮ್ಯಕ್ ದೃಷ್ಟಿ (Right belief) : ಆರ್ಯಸತ್ಯಗಳ ನಿರ್ದಿಷ್ಟ ಜ್ಞಾನ.

ii) ಸಮ್ಯಕ್ ಸಂಕಲ್ಪ (Right aspiration) : ದೃಢನಿಶ್ಚಯ.

iii) ಸಮ್ಯಕ್ ವಚನ (Right speech) : ಸತ್ಯನುಡಿ.

iv) ಸಮ್ಯಕ್ ಕರ್ಮ (Right action) : ಹಿಂಸೆ, ದ್ರೋಹ, ದುರಾಚಾರಣೆಗಳನ್ನು ಮಾಡದಿರುವುದು.

v) ಸಮ್ಯಕ್ ಆಜೀವ (Right living) : ನ್ಯಾಯಪೂರ್ಣವಾದ ಜೀವನವನ್ನು ನಡೆಸುವುದು.

vi) ಸಮ್ಯಕ್ ವ್ಯಾಯಾಮ (Right effort) : ಸತ್ಕರ್ಮಕ್ಕಾಗಿ ಸತತ ಉದ್ಯೋಗ.

vii) ಸಮ್ಯಕ್ ಸ್ಮೃತಿ (Right thought) : ಲೋಭವೇ ಮೊದಲಾದವುಗಳಿಂದ ಉಂಟಾದ ಚಿತ್ತಸಂತಾಪದಿಂದ ಬಿಡುಗಡೆಯಾಗುವುದು.

viii) ಸಮ್ಯಕ್ ಸಮಾಧಿ (Right tranquility) : ರಾಗದ್ವೇಷಗಳಿಲ್ಲದ ಚಿತ್ತದ ಏಕಾಗ್ರತೆ.

ಈ ಅಷ್ಟಾಂಗ ಮಾರ್ಗವನ್ನು ಅನುಸರಿಸಿದರೆ ಮನುಷ್ಯನಲ್ಲಿ ಪ್ರಜ್ಞೆ ಉದಯಿಸುತ್ತದೆ. ಪ್ರಜ್ಞೆ ಹುಟ್ಟಿದ ಮೇಲೆ ನಿರ್ವಾಣ ಲಭಿಸುತ್ತದೆ ಎಂದು ಬುದ್ಧನು ಸಾರಿದನು. ಭಗವಾನ್ ಬುದ್ಧನ ಬೋಧನೆಗಳಲ್ಲಿ ಮುಖ್ಯವಾದದ್ದು ಜನರಿಗೆ ಸ್ವತಂತ್ರವಾಗಿ ಆಲೋಚನೆ ಮಾಡುವ ಶಕ್ತಿ ಬೇಕು ಎಂಬುದು. ಧರ್ಮದ ಬುನಾದಿಯಾಗಿರಬೇಕಾದುದು ತಿಳಿದುಕೊಳ್ಳದೆ ಅನುಸರಿಸುವುದಲ್ಲ; ಅರಿತು ಆಚರಿಸುವುದು. ಅದಕ್ಕೇ ಆತ ಹೀಗೆ ಹೇಳಿರುವುದು;

"ನೀವು ಕೇಳಿದುದನ್ನೆಲ್ಲಾ ನಂಬಬೇಡಿ. ಸಂಪ್ರದಾಯಗಳನ್ನು ನಚ್ಚಬೇಡಿ. ಬಹುಜನರ ಅಭಿಪ್ರಾಯವಿದೆಂದು, ಬಹುಜನರ ವಾಡಿಕೆ ಇದು ಎಂದು ಅನುಸರಿಸಹೋಗಬೇಡಿ ಮಹರ್ಷಿಯೊಬ್ಬನು ಮಂಡಿಸಿದ ಸಿದ್ಧಾಂತವೆಂಬ ಕಾರಣದಿಂದಲೇ ಶ್ರದ್ಧೆ ಬೆಳೆಸಿಕೊಳ್ಳಬೇಕಾಗಿಲ್ಲ. ಉಪಾಧ್ಯಾಯರು ಹೇಳಿದ್ದು ಎಂದು ಹಿರಿಯರ ಹೇಳಿಕೆ ಎಂಬ ಕಾರಣಕ್ಕೆ ವಿಶ್ವಾಸವಿಡಬೇಡ. ಸ್ವತಃ ಪರಿಶೀಲಿಸಿ, ವಿಶ್ಲೇಷಿಸಿ ಅದು ವಿವೇಕಯುತವಾಗಿದ್ದು, ಸರ್ವರಿಗೂ ಹಿತ ಹಾಗೂ ಲಾಭದಾಯಕವಾಗಿದ್ದರೆ ಮಾತ್ರ ಒಪ್ಪಿ; ಅದಕ್ಕಾಗಿ ಜೀವಿಸಿರಿ."

ಬುದ್ಧನ ಬೋಧನೆಯ ಆಣಿಮುತ್ತುಗಳು :

'ನಿನ್ನನ್ನು ನೀನು ಗೆಲ್ಲು', 'ನಿನ್ನ ಉದ್ಧಾರ ನಿನ್ನ ಕೈಯಲ್ಲೇ', 'ಹಗೆಯಿಂದ ಹಗೆನಂದದು, ಪ್ರೀತಿಯಿಂದ ವೈರ ಅಳಿಯುತ್ತದೆ', 'ಪ್ರೇಮದಿಂದ ಸಿಟ್ಟನ್ನು ಗೆಲ್ಲು', 'ಸತ್ಯವ ನುಡಿ, ನುಡಿವಂತೆ ಮಾಡು', 'ಯಾರ ದೋಷವನ್ನೂ ನೋಡಬೇಡ'.

ಇದು ಬುದ್ಧನು ಭಿಕ್ಷುಗಳಿಗೆ ನೀಡಿದ ಸಂದೇಶ :

"ಬಹು ಜನರ ಹಿತಕ್ಕಾಗಿ, ಬಹುಜನರ ಸುಖಕ್ಕಾಗಿ, ಸಕಲ ಲೋಕದ ಮೇಲಿನ ಅನುಕಂಪದಿಂದ ದೇವತೆಗಳಿಗೂ ಮನುಷ್ಯರಿಗೂ ಅರ್ಥವೃದ್ಧಿಯಾಗಲೆಂದೂ, ಹಿತವಾಗಲೆಂದೂ, ಸುಖವಾಗಲೆಂದೂ ಧರ್ಮವನ್ನು ಸಾರುತ್ತಾ ಸಂಚಾರಮಾಡಿರಿ."

ನಿಜ. ೨೫೦೦ ವರ್ಷಗಳುರುಳಿದರೂ ಆ ಧರ್ಮ ಇನ್ನೂ ಮೈತ್ರಿಯನ್ನು ಸಾಧಿಸುತ್ತಿದೆ; ಜನರನ್ನು ಉದ್ಧರಿಸುತ್ತಲೇ ಇದೆ.

ಬಸವ

ಕರ್ನಾಟಕದ ವಿಜಾಪುರ ಜಿಲ್ಲೆಯ ಬಾಗೇವಾಡಿ ಅಗ್ರಹಾರದ ಮಾದರಸ–ಮಾದಲಾಂಬೆಯರ ಸುಪುತ್ರನಾಗಿ ಬಸವನು ಕ್ರಿಸ್ತಶಕ ೧೧೩೧ರಲ್ಲಿ ಜನಿಸಿದನು. ಆತ ಜನ್ಮ ತಳೆದದ್ದು ಮಧ್ಯಮ ವರ್ಗದ ಸಂಪ್ರದಾಯನಿಷ್ಠ ಶೈವಬ್ರಾಹ್ಮಣ ಮನೆತನ. ಬಾಲಕನಿರುವಾಗಲೇ ಬಸವನಿಗೆ ಸುತ್ತಣ ಸಾಮಾಜಿಕ ವಾತಾವರಣ ಉಸಿರು ಕಟ್ಟುವಂತೆ ಕಾಣಿಸಿತು. ಆಗಲೇ ಆತ ಬೇಸರಪಟ್ಟುಕೊಳ್ಳುತ್ತಿದ್ದ. ಅವನ ಅತೃಪ್ತಿ–ಅಸಮಾಧಾನಗಳು ಸ್ಫೋಟಗೊಂಡದ್ದು ಆತನ ಉಪನಯನದ ಸಂದರ್ಭದಲ್ಲಿ. ಆತ ಕರ್ಮಲತೆಯಂತಿದ್ದ ಜನಿವಾರವನ್ನು ಕಿತ್ತು ಬಿಸುಟು ಹೊರಡುವ ಸನ್ನಿವೇಶ ನಿಂತ ನೀರಿನಂತೆ ಮಲೆತು ಹೋಗಿದ್ದ ಧಾರ್ಮಿಕ ಸಂಪ್ರದಾಯದಿಂದ ಸಿಡಿದು ನಿಂತ ಆತನ ದಿಟ್ಟ ನಿಲವನ್ನು ಸೂಚಿಸುತ್ತದೆ.

ಮನೆಯಿಂದ ಹೊರಬಿದ್ದ ಆತನನ್ನು ವಿಧಿ ಕೂಡಲ ಸಂಗಮಕ್ಕೆ ಕರೆತಂದಿತು. ಅಲ್ಲಿ ಬಸವನು ಸಂಗಮನಾಥನ ಪೂಜೆಯಲ್ಲಿ ನಿರತನಾಗಿರುತ್ತಾನೆ. ಮುಂದೇನು ಎಂಬುದು ತಿಳಿಯದೆ ಅಲ್ಲಿದ್ದ ಅವನಿಗೆ ಅವನ ಅಂತರಾಳದಲ್ಲಿ ಬೋಧೆಯಾಗುತ್ತದೆ. ಅವನು ಆ ಒಳದನಿಗೆ ಓಗೊಟ್ಟು ಬಿಜ್ಜಳ ಮಹಾರಾಜ ಆಳುತ್ತಿದ್ದ ಕಲ್ಯಾಣ ಪಟ್ಟಣಕ್ಕೆ ಹೋದನು. ಇದು ಅವನ ಜೀವನದ ಬಹುಮುಖ್ಯವಾದ ಘಟನೆ. ಸಾಮಾನ್ಯ ಲೆಕ್ಕಿಗನಾಗಿ ಉದ್ಯೋಗಕ್ಕೆ ಸೇರಿದ ಬಸವ ಸ್ವಸಾಮರ್ಥ್ಯದಿಂದ ರಾಜ್ಯದ ಮಂತ್ರಿಪದವಿಗೇರುತ್ತಾನೆ. ಹಂತಹಂತವಾಗಿ ಆತನ ವ್ಯಕ್ತಿತ್ವ ವಿಕಾಸವಾಗುತ್ತಾ ಹೋಗುತ್ತದೆ. ಲೌಕಿಕ ಪ್ರಜ್ಞೆ, ರಾಜಕಾರಣ ನೈಪುಣ್ಯ, ಪ್ರಚಂಡ ಬುದ್ಧಿಶಕ್ತಿಗಳಿಂದ ಬಸವನು ಚತುರ ಹಾಗೂ ದಕ್ಷ ಆಡಳಿತಗಾರನೆನಿಸುತ್ತಾನೆ. ಈ ಲೌಕಿಕ

ಉದ್ಯೋಗದ ಜೊತೆಗೆ ಪಾರಮಾರ್ಥಿಕ ಸಾಧನೆಯನ್ನೂ ಸಮರ್ಥವಾಗಿ ನೆರವೇರಿಸಿದುದರಲ್ಲಿ ಬಸವನ ಹೆಚ್ಚುಗಾರಿಕೆ ಇದೆ. ಇದಕ್ಕಾಗಿ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವನ್ನು ಯಶಸ್ವಿಗೊಳಿಸಿದ ಕೀರ್ತಿ ಆತನದು.

ಬಸವನಂತೆಯೇ ಇನ್ನೂ ಅನೇಕ ಶರಣರು ತಮ್ಮ ಬಾಳನ್ನೇ ಪ್ರಯೋಗಶಾಲೆಯನ್ನಾಗಿ ಮಾಡಿ ಜೀವನದ ಮೌಲ್ಯಗಳನ್ನು ಕಂಡುಕೊಂಡರು. ಸಮಷ್ಟಿ ಚೇತನವನ್ನು ಮೇಲೆತ್ತುವ ಘನಕಾರ್ಯ ಉತ್ಸಾಹದಿಂದ ನಡೆಯಿತು. ಭರತಖಂಡದ ವಿವಿಧ ಭಾಗಗಳಿಂದ ಜನರನ್ನು ಆಕರ್ಷಿಸಿತು. ಕರ್ನಾಟಕದ ಕಲ್ಯಾಣ ಆಧ್ಯಾತ್ಮಿಕ ಅಕಾದಮಿ ಎನ್ನಿಸಿದ ಅನುಭವಮಂಟಪದ ಸ್ಥಾಪನೆ ಅಂದಿನ ಮಹಾಸಾಧನೆ. ಅದು ಬಸವನ ಚಿಂತನ ಶೀಲತೆಯ, ಸಾಹಸ ಪ್ರವೃತ್ತಿಯ ದ್ಯೋತಕ. ಇದರ ಕೃಪಾಛತ್ರದಡಿ ಯಾವ ತಾರತಮ್ಯವಿಲ್ಲದೆ ಜನರು ಒಟ್ಟುಗೂಡಿ ಇಹ ಪರಸಾಧನೆಯ ಬಗ್ಗೆ ಮುಕ್ತಮನಸ್ಸಿನಿಂದ ಚರ್ಚಿಸುತ್ತಿದ್ದರು. ಈ ಜನತಾ ವಿಶ್ವವಿದ್ಯಾಲಯ ಒದಗಿಸಿದ ಅಪೂರ್ವ ಅವಕಾಶದಿಂದಾಗಿ ಸಹಸ್ರಗಟ್ಟಲೆ ಗಂಡಸರು, ಹೆಣ್ಣುಮಕ್ಕಳು ತಮ್ಮ ಜ್ಞಾನಾನುಭವಗಳನ್ನು 'ವಚನ'ಗಳಲ್ಲಿ ಉಸುರಿದರು. ಒಂದೇ ಕಾಲ ಮತ್ತು ಸ್ಥಳದಲ್ಲಿ, ಬೇರೆ ಬೇರೆ ವೃತ್ತಿಯ ಜನ. ಸಾವಿರ ಮಿಕ್ಕಿದ ಸಂಖ್ಯೆಯಲ್ಲಿ ತಮ್ಮ ತಮ್ಮ ಅನುಭವಗಳನ್ನು ವ್ಯಕ್ತಪಡಿಸಲು ಸಾಹಿತ್ಯ ಸೃಷ್ಟಿಗೈದ ನಿದರ್ಶನ ಜಾಗತಿಕ ಇತಿಹಾಸದಲ್ಲಿ ನಾವಿನ್ನೂ ಹುಡುಕಿ ನೋಡಬೇಕಾಗಿದೆ! ಸಕಲರೂ ತಮ್ಮ ವೃತ್ತಿಯನ್ನು, ಅದರಲ್ಲಿ ಮೇಲು-ಕೀಳೆಂಬುದು ಇಲ್ಲ, ಮಾಡುತ್ತಲೇ ಇಹ-ಪರಗಳನ್ನು ಸಾಧಿಸಬಹುದೆಂಬುದನ್ನು ಬದುಕಿ ತೋರಿ ಬದುಕಿನ ಬಗ್ಗೆ ಪ್ರೀತಿ ಹಾಗೂ ನಿಷ್ಠೆಯನ್ನುಂಟುಮಾಡಿದ್ದು ಬಸವನ ಗಮನಾರ್ಹ ಸಾಧನೆ. ಆತನ 'ಕಾಯಕ'ದ ಕಲ್ಪನೆ ಲೋಕದ ಅರ್ಥಶಾಸ್ತ್ರಕ್ಕೆ ಅಪೂರ್ವವಾದ ಕೊಡಿಗೆ ಎಂದರೆ ಅತಿಶಯೋಕ್ತಿಯಾಗಲಾರದು.

ಬಸವ ಒಬ್ಬ ಧರ್ಮೋಪದೇಶಕನಿದ್ದಂತೆ, ಶ್ರೇಷ್ಠ ದರ್ಜೆಯ ಕಾರ್ಯಕರ್ತ. ಆತನದು ಬಹುಮುಖದ ವ್ಯಕ್ತಿತ್ವ, ಆತನ ಕಾರ್ಯಕ್ಷೇತ್ರವೂ ವಿಶಾಲವಾದದ್ದು, ವೈವಿಧ್ಯ ಪೂರ್ಣವಾದದ್ದು. ಬಸವನು ಒಬ್ಬ ಅನುಭಾವಿ, ದಾರ್ಶನಿಕ, ರಾಜನೀತಿಜ್ಞ, ಸಮಾಜ ಹಿತಚಿಂತಕ, ಮಾನವತಾವಾದಿ; ಮೇಲಾಗಿ ಆತ ಮೇಲ್ಮಟ್ಟದ ಕವಿ. ಆತನು ರಚಿಸಿರುವ ವಚನಗಳು ಆತನ ಬದುಕನ್ನು ಬಿಂಬಿಸುತ್ತವೆ; ಆತನ ಸಂದೇಶಗಳನ್ನು ಒಳಗೊಂಡಿವೆ. ತಿಳಿಯಾದ ಸರಳ ನುಡಿಗಳಲ್ಲಿ ಹೊಮ್ಮಿದ ಅವನ ವಚನಗಳು ಅನುಭಾವದಿಂದ, ಗಾಢಚಿಂತನೆಯಿಂದ, ಗೂಢ ಆಧ್ಯಾತ್ಮ ವಿಚಾರಗಳಿಂದ ತುಂಬಿವೆ. ಮನುಷ್ಯನು ತಾನು ಹಸನಾಗಿ ಬಾಳಿ, ಉಳಿದ ತನ್ನ ಸಹಜೀವಿಗಳನ್ನು ಹೇಗೆ ಬಾಳಗೊಡಬಹುದು ಎಂಬ ಜೀವನ ಸೂತ್ರ ಆತ್ಮೀಯವಾಗಿ ನಿರೂಪಿತವಾಗಿದೆ.

ಮನುಷ್ಯನಿಗೆ ಜಾತಿ ಮುಖ್ಯವಲ್ಲ; ಮಾನವಧರ್ಮ ಮುಖ್ಯವೆಂದು ಸಾರಿದನು. ಒಬ್ಬನ ಯೋಗ್ಯತೆಯ ಅಳತೆಗೋಲು ಆತನ ಹುಟ್ಟಲ್ಲ, ಆತನ ಆಚಾರ-ವ್ಯವಹಾರ ಎಂದು ತಿಳಿಸಿದನು. ವರ್ಣ ಸಂಕರ ಮಹಾಪಾಪವೆಂದು ನಂಬಿದ್ದ ಆ ಕಾಲದಲ್ಲೇ ಬ್ರಾಹ್ಮಣ ಕನ್ಯೆ ಹೊಲೆಯರ ವರ ಇವರ ಮದುವೆಯನ್ನು ನಡೆಸಿಬಿಟ್ಟನು. ಇದು ಅವರ ಕ್ರಾಂತಿಕಾರಕ ಪ್ರಾಯೋಗಿಕ ಶಕ್ತಿಗೆ ಜ್ವಲಂತ ನಿದರ್ಶನ. ಬಸವನ ಇಂಥ ವೈಚಾರಿಕ ನಿಲವನ್ನು ಅರಗಿಸಿಕೊಳ್ಳುವಷ್ಟು ಹನ್ನೆರಡನೆ ಶತಮಾನ ಹದವಾಗಿರಲಿಲ್ಲ. ಜನ ಮನ ಇನ್ನೂ ಆ ಮಟ್ಟಕ್ಕೆ

ಏರಿರಲಿಲ್ಲವಾಗಿ ಆ ನಿಟ್ಟಿನಲ್ಲಿ ಸಾಧನೆ ಮುಂದುವರಿಯಲಿಲ್ಲ. ಅರಸನ ಕೋಪಕ್ಕೆ, ಸನಾತನಿಗಳ ಕ್ರೋಧಕ್ಕೆ ಆ ಮಾನವ ಹಿತಸಾಧಕರ ಗುಂಪು ಬಲಿಯಾಗಬೇಕಾದುದು ದುರ್ದೈವ.

ಬಸವನ ದೃಷ್ಟಿಯಲ್ಲಿ ತತ್ತ್ವಶಾಸ್ತ್ರವೆಂದರೆ ದಿಟ್ಟ ಹೋರಾಟವೇ ಹೊರತು, ಸೋಮಾರಿತನದ ಧ್ಯಾನಾಸಕ್ತತೆಯಲ್ಲ. ಅವನೆಂದುದು ಹೀಗೆ: "ಟೊಂಕಕಟ್ಟಿ ಇಳಿ. ಶರಣಾಗತನಾಗದೆ ಹೋರಾಡುವುದೇ ನಿನ್ನ ಸರದಿ. ಜೀವನ ಒಂದು ಹೋರಾಟ; ಕಷ್ಟ ಪಡದೆ ಗೆಲುವು ಸಾಧ್ಯವಿಲ್ಲ." ಶಕ್ತಿವಿಶಿಷ್ಟಾದ್ವೈತ ತತ್ತ್ವಪ್ರತಿಪಾದಕನಾದ ಬಸವನು ಪರಿಪೂರ್ಣತೆಯ ಕಡೆಗೆ ಸಾಗುವ ಮನುಷ್ಯ ನಿಧಾನವಾಗಿ ಹಲವು ಮಜಲುಗಳನ್ನೇರಿ ಸಾಗಬೇಕು ಎಂಬುದನ್ನು ನಂಬಿದ್ದನು. ಅದೇ ಷಟ್ಸ್ಥಲಮಾರ್ಗ. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಆರುಸ್ಥಲಗಳಲ್ಲಿ ಸಾಧಕ ಸಾಗಬೇಕು. ದಿಢೀರ್ ಫಲವನ್ನು ಬಯಸಿದರಾಗದು. ಸಾಧನೆಯಿಂದ ಅದು ಸಹಜವಾಗಿ ದೊರಕುತ್ತದೆ. ಅದಕ್ಕೇ ಆತ ಹೀಗೆ ಪ್ರಾರ್ಥಿಸಿದ್ದು:

ಭಕ್ತನೆನಿಸುವೆನಯ್ಯ ಮೆಲ್ಲಮೆಲ್ಲನೆ
ಯುಕ್ತನೆನಿಸುವೆನಯ್ಯ ಮೆಲ್ಲಮೆಲ್ಲನೆ.
ಸಾರಿ ಶರಣನೆನಿಸುವೆನಯ್ಯ ಮೆಲ್ಲಮೆಲ್ಲನೆ
ಎಡಹುಗುಳಿಗಳ ದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯ
ಕೂಡಲಸಂಗಮದೇವಾ, ನಿಮ್ಮಿಂದಧಿಕನೆನಿಸುವೆನಯ್ಯ.

ಬಸವನು ಶ್ರೇಷ್ಠ ವಚನಕಾರನಾಗಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಿಗಿಲಾದ ಸ್ಥಾನವನ್ನು ದೊರಕಿಸಿಕೊಂಡಿದ್ದಾನೆ. ಆತನ ಅನುಭಾವದ ಆಣಿಮುತ್ತುಗಳು ಅಮೌಲ್ಯವಾದವು. ಇಹ–ಪರಗಳೆರಡನ್ನೂ ಸಾಧಿಸಬೇಕೆನ್ನುವವರಿಗೆ ದಾರಿದೀಪಗಳು.

'ಅಯ್ಯ' ಎಂದಡೆ ಸ್ವರ್ಗ, 'ಎಲವೋ' ಎಂದಡೆ ನರಕ, 'ದಯೆಯಿಲ್ಲದ ಧರ್ಮವದಾವುದಯ್ಯ', 'ಆಚಾರವೇ ಸ್ವರ್ಗ, ಅನಾಚಾರವೇ ನರಕ', 'ಕೊಲುವವನೇ ಮಾದಿಗ, ಹೊಲಸು ತಿಂಬವನೆ ಹೊಲೆಯ', 'ಸದುವಿನಯವೇ ಸದಾಶಿವನೊಲುಮೆ', 'ದೇವನೊಬ್ಬ ನಾಮಹಲವು', 'ಅರಿದರೆ ಶರಣ, ಮರೆತರೆ ಮಾನವ'.

ಇಡೀ ಮನುಕುಲಕ್ಕೆ ನೀಡಿದ ಬಸವ ಸಂದೇಶ ಈ ವಚನದಲ್ಲಿ ಘನೀಭೂತವಾಗಿದೆ ಎನ್ನಬಹುದು:

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ
ಇದೇ ನಮ್ಮಕೂಡಲ ಸಂಗಮದೇವನನೊಲಿಸುವ ಪರಿ.

ಸಾಮ್ಯಗಳು

ಬುದ್ಧ–ಬಸವ ಇಬ್ಬರೂ ಸಂತರು ಪ್ರವಾದಿಗಳು, ಮಹಾಮಾನವತಾ ವಾದಿಗಳು. ಇಬ್ಬರೂ ಜಿಡ್ಡುಗಟ್ಟಿದ ಸಂಪ್ರದಾಯದಿಂದ ಸಿಡಿದೆದ್ದವರು. ತಾವು ಸ್ವತಃ ಸ್ವತಂತ್ರ ಆಲೋಚಕರಾಗಿದ್ದು ಉಳಿದವರನ್ನೂ ವಿಚಾರವಂತರಾಗಲು ಪ್ರೇರಿಸಿದವರು. ಸಕಲ ಉದ್ಧಾರಕ್ಕಾಗಿ ತಮ್ಮ ಬಾಳನ್ನೇ ಸಮರ್ಪಿಸಿಕೊಂಡವರು.

೧. ಜನಸಾಮಾನ್ಯರನ್ನು ಮೇಲೆತ್ತುವ ಮಹಾಕಾರ್ಯ : ಇಬ್ಬರೂ ಅಜ್ಞಾನಾಂಧಕಾರದಲ್ಲಿ ಮುಳುಗಿದ್ದ ಜನರ ಹೃನ್ಮನವನ್ನು ಸುಜ್ಞಾನ ದೀಪ್ತಿಯಿಂದ ಬೆಳಗಿದರು. ರೂಢಮೂಲವಾಗಿದ್ದ ಮೂಢನಂಬಿಕೆ ಮತ್ತು ಅಂಧಶ್ರದ್ಧೆಗಳನ್ನು ಹೋಗಲಾಡಿಸಿ ಜನರನ್ನು ಸನ್ಮಾರ್ಗದಲ್ಲಿ ಕೈಹಿಡಿದು ನಡೆಸಿದರು.

೨. ಸಂಸ್ಕೃತಭಾಷೆ ಗೊತ್ತಿದ್ದವರಿಗೆ ಮಾತ್ರ ದೊರೆಯುತ್ತಿದ್ದ ಗಹನವಾದ ಆಧ್ಯಾತ್ಮ ವಿದ್ಯೆಯನ್ನು, ಧಾರ್ಮಿಕ ಆಚಾರ-ವಿಚಾರಗಳನ್ನು ಸಾಮಾನ್ಯರಿಗೂ ಸರಳವಾಗಿ ತಿಳಿಯುವ ಆಡುಮಾತಿನಲ್ಲಿ ಹೇಳಿದರು. ಜನವಾಣಿಯನ್ನು ದೇವವಾಣಿಯ ಮಟ್ಟಕ್ಕೇರಿಸಿದ ಪುಣ್ಯ ಅವರದು.

೩. ಯಜ್ಞ ಯಾಗಾದಿಗಳಲ್ಲಿ, ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಹಿಂಸೆ, ಶೋಷಣೆಗಳನ್ನು ತಪ್ಪಿಸಲು ಈರ್ವರೂ ಶ್ರದ್ಧೆಯಿಂದ ಶ್ರಮಿಸಿದರು. ಅಪಾರ ಅನುಕಂಪ ಅವರದು. 'ಜಗದ ಜೀವಾವಳಿಗೆ ಹಿಂಸೆ ಮಾಡಬಾರದು' ಎಂದು ಬುದ್ಧ ಹೇಳಿದರೆ, 'ದಯೆಯೇ ಧರ್ಮದ ಮೂಲ' ಎಂದು ಬಸವ ನುಡಿದಿದ್ದಾನೆ.

೪. ಅವರ ಬೋಧೆಗಳ ಮೇಲೆ ವೈಯಕ್ತಿಕ ಪ್ರಭಾವ ಅಚ್ಚೊತ್ತಿರುತ್ತಿತ್ತು. ಅವರಿಬ್ಬರೂ ತಮ್ಮ ಆತ್ಮಶಕ್ತಿಯನ್ನು ಎಷ್ಟು ಉಜ್ವಲಗೊಳಿಸಿಕೊಂಡಿದ್ದರೆಂದರೆ ಅದಕ್ಕೆ ಪರುಷಶಕ್ತಿ ಪ್ರಾಪ್ತವಾಗಿತ್ತೆನ್ನಿಸುತ್ತದೆ. ಅವರ ಸಂಪರ್ಕ ಹೊಂದಿದ ದುಷ್ಟಶಕ್ತಿಗಳು ತಮ್ಮ ರಾಜಸ ಹಾಗೂ ತಾಮಸ ಗುಣಗಳನ್ನು ಕಳೆದುಕೊಂಡು ಆಶ್ಚರ್ಯಕರ ರೀತಿಯಲ್ಲಿ ಪರಿವರ್ತನೆ ಹೊಂದುತ್ತಿದ್ದವು. ಮಾನವರನ್ನು ನಿರ್ದಯವಾಗಿ ಬೇಟೆಯಾಡಿ ಅವರ ರಕ್ತಸಿಕ್ತ ಬೆರಳುಗಳನ್ನು ಮಾಲೆಯಾಗಿ ಪೋಣಿಸಿಕೊಂಡು ಧರಿಸುವ ರಾಕ್ಷಸೇಚ್ಛೆಯ ಅಂಗುಲಿಮಾಲ ಬುದ್ಧನನ್ನು ಕಂಡಾಗ, ನುಡಿಸಿದಾಗ ಅವನ ರೂಕ್ಷ ಹೃದಯದಲ್ಲೂ ಮಾನವತೆಯ ಕಾರಂಜಿ ಪುಟಿಯುತ್ತದೆ. ಹಿಂಸೆಯ ಸಾಕಾರ ಮೂರ್ತಿಯಾಗಿದ್ದ ಆತ ಕರುಣಾಳು ಸಂನ್ಯಾಸಿಯಾಗುತ್ತಾನೆ.

ಬಸವನ ಜೀವನದಲ್ಲೂ ಇಂಥದೇ ಪ್ರಸಂಗ ನಡೆಯುತ್ತದೆ. 'ಲಾಂಛನಕ್ಕೆ ಶರಣೆಂಬೆ' ಎಂಬ ಬಸವನ ಮಾತಿನ ಹಿಂದಿರುವ ಜಂಗಮರನ್ನು ಕುರಿತ ಅವನ ಶ್ರದ್ಧೆಯನ್ನೇ ಬಂಡವಾಳ ಮಾಡಿಕೊಂಡು ಒಬ್ಬ ಕಳ್ಳ ಅವನನ್ನು ಮೋಸಗೊಳಿಸಲು ಬರುತ್ತಾನೆ. ಸಣ್ಣ ಗುಂಡನೆಯ ಬದನೆಕಾಯನ್ನೇ ಲಿಂಗವೆಂದು ವಸ್ತ್ರದಲ್ಲಿ ಸುತ್ತಿ ಕೊರಳಲ್ಲಿ ಧರಿಸಿ, ಜಂಗಮ ವೇಷದಲ್ಲಿ ಬಂದಾಗ ಬಸವನ ಮನೆಯಲ್ಲಿ ಸಾಮೂಹಿಕ ಲಿಂಗಪೂಜೆ ನಡೆದಿತ್ತು. ಬಸವ ಅವನಿಗೆ ವಂದಿಸಿ, ಕೈಹಿಡಿದು ಕರೆದೊಯ್ದು ಕೂರಿಸಿ ಪೂಜೆ ಮಾಡಿಕೊಳ್ಳಲು ವಿಜ್ಞಾಪಿಸಿದನು. ವೇಷಧಾರಿಗೆ ಪೇಚಾಟಕ್ಕಿಟ್ಟುಕೊಂಡಿತು. ಬಸವನ ಸ್ಪರ್ಶ ಮಾತ್ರದಿಂದಲೇ ಅವನಲ್ಲಿ ಹೊಸ ಅನುಭವವಾಗತೊಡಗಿತ್ತು. ಅಳುಕುತ್ತಲೇ ವಸ್ತ್ರ ಬಿಚ್ಚಿದರೆ ಅಲ್ಲಿ ನಿಜವಾದ ಲಿಂಗವೇ ಇತ್ತು. ಆತ ಮೆಲ್ಲನೆ ಭಕ್ತನಾಗಿ ಬಿಟ್ಟಿದ್ದ. ಈ ಪರಿವರ್ತನೆ ಕ್ಷಣ ಮಾತ್ರದಲ್ಲಿ ಘಟಿಸಿತ್ತು. ಇಂಥದ್ದು ಸಾಧ್ಯವಾಗುವುದು ಅಪೂರ್ವ ಸಿದ್ಧಿಯಿಂದ ಮಾತ್ರ. ಬುದ್ಧ-ಬಸವರಿಬ್ಬರೂ ಅಂಥ ಅಪೂರ್ವ ಸಿದ್ಧರಾಗಿದ್ದರು.

ವೈಷಮ್ಯಗಳು : ಬುದ್ಧ ಮತ್ತು ಬಸವರಲ್ಲಿ ಅನೇಕ ಹೋಲಿಕೆಗಳು, ಸಾಮ್ಯಗಳು

ಕಂಡುಬಂದಂತೆ ಕೆಲವು ಗಮನಾರ್ಹವಾದ ವೈಷಮ್ಯಗಳೂ ಇವೆ. ಅವರಿಬ್ಬರ ಗುರಿ ಒಂದೇ ಆದರೂ, ಮಾರ್ಗ ಸ್ವಲ್ಪ ಬೇರೆ ಬೇರೆ ತಿರುವನ್ನು ಪಡೆದಿವೆ.

೧. ಬುದ್ಧನು ದೇವರ ಬಗ್ಗೆ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ಆತ್ಮದ ಬಗೆಗೂ, ನಾವು ಈ ದಿನ ಬಳಸುವ ಅರ್ಥದಲ್ಲಿ ಹೇಳಿಲ್ಲ. ಆತನದು ನಿರೀಶ್ವರವಾದ. ಅವನ ದೃಷ್ಟಿಯಲ್ಲಿ ಜೀವನದ ಗುರಿ ಸ್ವರ್ಗವಲ್ಲ; ದೇವರಲ್ಲಿ ಐಕ್ಯವಾಗುವುದಲ್ಲ; ಬೌದ್ಧಿಕ ಮತ್ತು ನೈತಿಕ ಸಾಮರಸ್ಯ ಜೀವನದಿಂದ ಲೋಕದ ಸಂಕಷ್ಟಗಳಿಂದ ರಕ್ಷಣೆ ಪಡೆಯುವುದು. ಹೀಗಾಗಿ ಬೌದ್ಧ ಧರ್ಮ ವ್ಯಕ್ತಿಯ ಆತ್ಮ ಮತ್ತು ವಿಕಾಸಗತಿಗೆ ಅತೀತವಾದ ದೇವರನ್ನು ಕಡೆಗಣಿಸುತ್ತದೆ.

ಬಸವನಾದರೋ ಆತ್ಮ, ಪರಮಾತ್ಮಗಳೆರಡನ್ನೂ ನಂಬಿದ್ದನು. ಆತನು ಶುದ್ಧ ಏಕೇಶ್ವರವಾದಿ. ಅವನು 'ಅಂಗ'ವು ತನ್ನ ದೌರ್ಬಲ್ಯಗಳನ್ನು ನೀಗಿಕೊಂಡು 'ಲಿಂಗ'ವಾಗುತ್ತದೆ ಎಂಬ ಸಿದ್ಧಾಂತದ ಪ್ರತಿಪಾದಕ. ಅಂದರೆ ಆತ್ಮವು ನೈತಿಕ ಆಚರಣೆಯಿಂದ ಪರಮಾತ್ಮನಲ್ಲಿ ಮಿಲನಗೊಳ್ಳುತ್ತದೆ ಎಂದು ಸಾರಿದನು.

೨. 'ಶೂನ್ಯ'ವೆಂದರೆ ಬುದ್ಧನಿಗೆ ಏನೂ ಇಲ್ಲದ್ದು; ನಿರರ್ಥಕ. ಬಸವ ಅದರಲ್ಲಿ ವಿಶೇಷವಾದ ಅರ್ಥವನ್ನು ಕಂಡುಕೊಂಡನು. ಅದೇ 'ಪರಮಾತ್ಮ ಗುರಿ' ಎಂಬ ಅರ್ಥ. 'ಶೂನ್ಯ ಸಂಪಾದನೆ' ಎಂದರೆ ಪರಮಾತ್ಮನೊಡನೆ ಬೆರೆಯುವುದು. ಶೂನ್ಯವೆಂದರೆ ಅಹಂಅನ್ನು ಕಡಿಮೆ ಮಾಡಿ, ಆಸೆಯನ್ನು ಸೊನ್ನೆ ಅಂಶಕ್ಕೆ ತರುವುದು. ಅಹಂನ ತಗ್ಗುವಿಕೆಯಿಂದ ಉನ್ನತಮಟ್ಟದ ಆತ್ಮವಿಕಾಸವು ಸಾಧಿಸಿ ಜೀವಾತ್ಮವು (ಅಂಗ) ಪರಮಾತ್ಮನಲ್ಲಿ (ಲಿಂಗ) ಏಕೀಭವಿಸುತ್ತದೆ. ವ್ಯಕ್ತಿತ್ವವನ್ನು ಕಳೆದುಕೊಳ್ಳದೆ ವಿಶ್ವವ್ಯಾಪಕತೆಯನ್ನು ಪಡೆದು ಸಮರಸವಾಗುತ್ತದೆ ಎಂದು ಆತ ದೃಢವಾಗಿ ನಂಬಿದ್ದನು.

೩. ಬುದ್ಧನಿಗೆ ಬಾಳು ಭ್ರಮೆ; ಮಾಯೆ. ಆತ ಪ್ರಾಪಂಚಿಕ ಬಾಳನ್ನು 'ಕಣ್ಣೀರಿನ ಕಣಿವೆ' ಎಂದಿದ್ದಾನೆ.

"ಜೀವನವು ಒಂದು ಸೇತುವೆ; ಅದರ ಮೇಲೆ ಮನೆ ಕಟ್ಟಬೇಡ.
ಜೀವನವು ಒಂದು ನದಿ; ಅದರ ದಡಕ್ಕೆ ಅಂಟಿಕೊಳ್ಳಬೇಡ.
ಜೀವನವು ಒಂದು ಗರಡಿಮನೆ;
ಅಲ್ಲಿನ ಸಾಧನ ಸಂಪತ್ತಿನಿಂದ ವ್ಯಕ್ತಿತ್ವ ವಿಕಾಸ ಮಾಡಿಕೋ
ಜೀವನವು ಒಂದು ಪ್ರವಾಸ; ಕೈಗೊಳ್ಳು, ಸಾಗು"

ಎಂದಿದ್ದಾನೆ ಆತ.

ಬಸವನಿಗೆ ಬಾಳು ವಾಸ್ತವವಾದದ್ದು; ಪ್ರಚಂಡ ಸತ್ಯ. ಇಹದ ಬಾಳು ಸೃಷ್ಟಿಕರ್ತನ ಕರ್ಮಶಾಲೆ. ಇಲ್ಲಿ ನಾವು ಸಚ್ಚಾರಿತ್ರ್ಯದಿಂದ ಬಾಳಿದರೆ ನಮ್ಮ ವ್ಯಕ್ತಿತ್ವದ ಮೇಲೆ ಚೊಕ್ಕ ಮುದ್ರೆ ಬೀಳುತ್ತದೆ. ಆಗ ಸಲುವಣಿಯ ನಾಣ್ಯವಾಗುತ್ತೇವೆ. ಎಲ್ಲಿ ಬೇಕಾದರೂ ನಡೆಯುವ ನಾಣ್ಯವೆನಿಸುತ್ತೇವೆ. ಹೀಗೆ ಬಸವ ಬದುಕಿನ ಬಗ್ಗೆ, ಇಹಲೋಕದ ಬಗ್ಗೆ ಪ್ರೀತಿಯನ್ನು ಶ್ರದ್ಧೆಯನ್ನು ಬೆಳೆಸಿಕೊಂಡನು; ಅಂತೆಯೇ ಎಲ್ಲರ ಹೃದಯದಲ್ಲೂ ಅದನ್ನೇ ಬಿತ್ತಿದನು.

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ
ಕೂಡಲಸಂಗಮದೇವಾ.

೪. ಬುದ್ಧನದು ನಿವೃತ್ತಿಮಾರ್ಗ, ಬಸವನದು ಪ್ರವೃತ್ತಿ ಮಾರ್ಗ. ಬುದ್ಧನು ಒಬ್ಬ ಸಂನ್ಯಾಸಿ, ಲೌಕಿಕ ಜೀವನಕ್ಕೆ ಹೇಸಿ ವಿರಾಗಿಯಾದವನು. ಆತ ಭೂಮಿಕಾಣಿ, ಸಂಪತ್ತಿನ ಬಗ್ಗೆ ಒತ್ತಾಸೆ ನೀಡಲಿಲ್ಲ. ಅಲ್ಲದೆ ಅವನು ಉದ್ಯೋಗ ಅಥವಾ ದೇಹಶ್ರಮವನ್ನು ಅನುಮೋದಿಸಲಿಲ್ಲ. ಅವನಿಗೆ ಕ್ರಿಯೆಗಿಂತ ಧ್ಯಾನದ ಕಡೆ ಒಲವು.

> **"ಗೃಹಸ್ಥಾಶ್ರಮವೆಂದರೆ ತೊಂದರೆಯ ಮತ್ತು ಹೊಲಸಿನ ಸ್ಥಾನ**
> **ಪ್ರವ್ರಜ್ಯೆ ಎಂದರೆ ಬಯಲುಹವೆ"**
> **"ಕಾಮೋಪಭೋಗದಲ್ಲಿ ನನಗೆ ದೋಷ ಕಾಣುತ್ತಿದೆ ಮತ್ತು**
> **ಏಕಾಂತವಾಸದಲ್ಲಿ ನನಗೆ ಸುಖ ಎನಿಸುತ್ತದೆ"**

ಇದು ಬುದ್ಧನ ಹೇಳಿಕೆ.

ಬಸವನು ಲೌಕಿಕ ವ್ಯಕ್ತಿ. ರಾಜನ ಆಸ್ಥಾನದಲ್ಲಿ ಜವಾಬ್ದಾರಿ ಸ್ಥಾನದಲ್ಲಿದ್ದು ಆಡಳಿತ ನಡೆಸುತ್ತಿದ್ದವನು. ಆತನದು ಬಹುಮುಖದ ವ್ಯಕ್ತಿತ್ವ; ವೈವಿಧ್ಯಮಯವಾದ ಬದುಕು. ಆತ ಭಕ್ತ, ಗೃಹಸ್ಥ, ಮಂತ್ರಿ, ಸಮಾಜ ಸುಧಾರಕ, ಧರ್ಮವೀರ, ಶ್ರೇಷ್ಠ ವಚನಕಾರ, ಅನುಭಾವಿ, ದಾರ್ಶನಿಕ, ಮಾನವ ಹಿತಸಾಧಕ, ಅಪೂರ್ವ ಸಂಘಟಕ ಇತ್ಯಾದಿ. ಬಸವನಿಗೆ ಬಾಳು ಭ್ರಮೆಯಲ್ಲ, ಮಾಯೆಯೂ ಅಲ್ಲ. ಆತ ಆಶಾವಾದಿ, ಬದುಕು ಒಡ್ಡುವ ಸವಾಲನ್ನು ಎದುರಿಸಲು ಸದಾ ಸಿದ್ಧರಿರಬೇಕೆಂಬ ಛಲಗಾರ. ಅವನಿಗೆ ದೇಹ ತ್ಯಾಜ್ಯವಲ್ಲ, ಜೀವನ ದೂಷ್ಯವಲ್ಲ. "ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವವು ದೋಷಂಗಳು" ಎಂದು ಸಾರಿದವನಾತ.

೫. ಸಂನ್ಯಾಸತ್ವವನ್ನು ಎತ್ತಿ ಹಿಡಿದ ಬುದ್ಧನು ಭಿಕ್ಷಾವೃತ್ತಿಯನ್ನು ಪ್ರೋತ್ಸಾಹಿಸಿದನು. ಅದು ಅಹಂಕಾರ ನಿರ್ಮೂಲನಕ್ಕೆ ಕಾರಣವಾಗುವುದೆಂಬುದು ಆತನ ಉದ್ದೇಶ. ಆದರೆ ಪರಿಣಾಮ ಸಾಮಾಜಿಕವಾಗಿ ಪ್ರತಿಕೂಲವಾಯಿತು. ಆಲಸ್ಯ ಭಾವವು ಬೆಳೆಯಿತು. ಕೆಲಸಗಳ್ಳತನ ಹೆಚ್ಚಾದಂತೆ ಉತ್ಪಾದಕ ಶಕ್ತಿ ಕುಂಠಿತವಾಯಿತು.

ಬಸವನದು ದುಡಿದು ತಿನ್ನುವ ಸಂಕಲ್ಪ. 'ದುಡಿಯದೆ ತಿನ್ನುವ ಅನ್ನ ವಿಷ' ಎಂದು ಆತ ಎಚ್ಚರಿಸಿದನು. [illegible] ಅಲ್ಲ, ಸತ್ಯ ಶುದ್ಧವಾದ ಕಾಯಕಷ್ಟದ ದುಡಿಮೆಯನ್ನು ಕಾಯಕವೆಂದನು. 'ಕಾಯಕ[illegible]ವೆಂದು ಸಾರಿ ದುಡಿಮೆಗೆ ಪೂಜೆಯಸ್ಥಾನ ದೊರಕಿಸಿದನು. ವೃತ್ತಿಯಲ್ಲಿ ತರತಮ[illegible] ಸಮಾನತೆಯನ್ನು ಸಾರಿದ್ದರ ಪರಿಣಾಮವಾಗಿ ಎಲ್ಲಾ ಕಸುಬಿನವರು ತಮ್ಮ [illegible]ನ್ನು ಮಾಡಿ ಗೌರವಯುತ ಜೀವನ ನಡೆಸಿದರು. ಇದರಿಂದ ಎಲ್ಲಾ ವೃತ್ತಿಗಳ, ಕ[illegible]ಳ ಕಸುಬುಗಳ ಸರ್ವಾಂಗೀಣ ಪ್ರಗತಿ ಸಾಧ್ಯವಾಯಿತು. ಆರ್ಥಿಕ ಪ್ರಪಂಚದಲ್ಲಿ ಬಸವನ 'ಕಾಯಕತತ್ತ್ವ' ವಿಶಿಷ್ಟಸ್ಥಾನ ಹೊಂದಿದೆ.

೬. ಹೆಣ್ಣುಮಕ್ಕಳ ಬಗ್ಗೆ ಬುದ್ಧನ ನಿಲವು ಒಂದು ರೀತಿಯಲ್ಲಿ ನಿಷೇಧಾತ್ಮಕವೇ ಎನ್ನಬಹುದು. ಲೋಕ ಜೀವನದಿಂದ ವಿಮುಖನಾದ ಆತನಿಗೆ, ಗೃಹಸ್ಥಾಶ್ರಮವನ್ನು ತೊರೆದು ಬಂದ ಆತನಿಗೆ, ಅದು ಬಂಧವೆನ್ನಿಸಿತ್ತು. ಆತನ ಪ್ರಿಯ ಶಿಷ್ಯ ಆನಂದನು ಒಮ್ಮೆ "ಭಗವಂತ, ಹೆಂಗಸರೊಡನೆ ಎಂತು ವರ್ತಿಸಲಕ್ಕು?" ಎಂದು ಪ್ರಶ್ನಿಸಿದಾಗ ಬುದ್ಧನು ಕೊಟ್ಟ ಉತ್ತರ ಆತನ ನಿಲುವನ್ನು ಸ್ಪಷ್ಟಪಡಿಸಿದೆ:

'ನೋಡದಿರಿ, ನೋಡಬೇಕಾಗೆ ಮಾತಾಡದಿರಿ'.
ಅವರೆ ನಮ್ಮೊಡನೆ ಮಾತಾಡೆ?
'ಹಿರಿಯರಂ ತಾಯಿಯೆಂದು, ಸರಿಯರನಕ್ಕ, ತಂಗಿಯರೆಂದು
ಕಿರಿಯರಂ ಕೂಸೆಂದು ಭಾವಿಸುತ ಕಟ್ಟೆಚ್ಚರಿರಿ'.

ಗೋತಮಿ ಒಮ್ಮೆ ಬುದ್ಧನನ್ನು 'ಭದಂತರೆ, ತಮ್ಮ ಸಂಪ್ರದಾಯದಲ್ಲಿ ಪ್ರವ್ರಜ್ಜೆಯನ್ನು ಸ್ವೀಕರಿಸಲು ಸ್ತ್ರೀಯರಿಗೂ ಅಪ್ಪಣೆ ಕೊಡಬೇಕು' ಎಂದು ಪ್ರಾರ್ಥಿಸಿದಾಗ ಬುದ್ಧನು ಆಕೆಯ ಬೇಡಿಕೆಯನ್ನು ಮೂರುಸಲ ನಿರಾಕರಿಸಿದನು. 'ಸ್ತ್ರೀಯರಿಗೆ ದೀಕ್ಷೆ ಕೊಡುವಡೆ ನಾನು ಮೊಳೆಯಿಟ್ಟ ಧರ್ಮದಾಯುಷ್ಯದಲಿ ಅರ್ಧ ಅಳಿವುದು'. ಇದು ಆತನ ನಿಲುವಾದರೂ ಅವನು ಕೊನೆಗೆ ಅದನ್ನು ಸಡಿಲಿಸಿ ಹೆಣ್ಣುಮಕ್ಕಳಿಗೂ ದೀಕ್ಷೆ ಕೊಟ್ಟಿದ್ದು ತಿಳಿದು ಬರುತ್ತದೆ.

ಬಸವ ಸ್ವತಃ ಸಂಸಾರಿ. ಒಬ್ಬರಲ್ಲ, ಇಬ್ಬರು ಹೆಂಡಂದಿರನ್ನು ಕಟ್ಟಿಕೊಂಡಿದ್ದನು. ಆತನಿಗೆ ಒಬ್ಬ ಮಗನಿದ್ದನು. ಒಳ್ಳೆಯ ಕೌಟುಂಬಿಕ ಜೀವನವನ್ನು ನಡೆಸಿದ್ದನು. ಆತನಿಗೆ ಹೆಣ್ಣು ಮಾಯೆಯೆನಿಸಲಿಲ್ಲ. ಸಾಧನೆಗೆ ಆಕೆ ಅಡ್ಡಿಯೆನಿಸಲಿಲ್ಲ. ಹೆಣ್ಣನ್ನು ಕೇವಲ ಭೋಗದ ವಸ್ತುವೆಂದು ಭಾವಿಸಿದ್ದಂತಹ ಸನ್ನಿವೇಶದಲ್ಲಿ, ಆಕೆಯನ್ನು ಶೂದ್ರರ ಸ್ಥಾನಕ್ಕಿಳಿಸಿದ್ದ ಅಂದಿನ ಪರಿಸ್ಥಿತಿಯಲ್ಲಿ ಆಕೆಯನ್ನು ಮೇಲೆತ್ತಿ, ಆಕೆಗೆ ದೇವತೆಯ ಸ್ಥಾನವನ್ನು ನೀಡಿದನು. ಅವನ ಈ ಔದಾರ್ಯದಿಂದಾಗಿ ಅಕ್ಕಮಹಾದೇವಿಯಂಥ ಶರಣೆಯರು, ಬಸವನೇ ಅಚ್ಚರಿಗೊಳ್ಳುವಂತೆ, ಬೆಳೆದು ನಿಂತರು. ಜಾಗತಿಕ ಜ್ಞಾನ ಹಾಗೂ ಅನುಭಾವ ಭಂಡಾರಕ್ಕೆ ಅವರಿಂದ ಉತ್ತಮ ಕಾಣಿಕೆ ಸಂದಾಯವಾಯಿತು.

ಬುದ್ಧ ಮತ್ತು ಬಸವ–ಈ ಇಬ್ಬರು ಮಹಾನುಭಾವರ ಜೀವನಕ್ಕೆ ಸಂಬಂಧಿಸಿದಂತೆ ಎರಡು ಘಟನೆಗಳು ಮಾನವ ಇತಿಹಾಸದಲ್ಲಿಯೇ ಅತ್ಯಂತ ದುರ್ದೈವದ ಘಟನೆಗಳು ಎಂದು ವಿಚಾರವಂತರು ಗುರುತಿಸಿದ್ದಾರೆ.

ಒಂದನೆಯದು ಬುದ್ಧನು ಸ್ಥಾಪಿಸಿದ ಬೌದ್ಧಮತಕ್ಕೆ ಭಾರತದಲ್ಲೇ ಸರಿಯಾದ ನೆಲೆಯಿಲ್ಲವಾದದ್ದು. ಇದಕ್ಕೆ ಕಾರಣವೇನಿರಬಹುದು? ಭಾರತೀಯರ ಮನೋಧರ್ಮವೇ ಎನ್ನಬೇಕು. ಹಿಂದೂಧರ್ಮವು ಭಾರತೀಯರ ಜೀವದ ಜೀವವಾಗಿ ಬಿಟ್ಟಿದೆ. ಅದನ್ನುಳಿದು ಯಾವುದೇ ಹೊಸ ಧರ್ಮವನ್ನು ಅವರು ಒಪ್ಪಲಾರರು. ಹೀಗಾಗಿ ಬೌದ್ಧಧರ್ಮವು ಹಿಂದೂ ಧರ್ಮದಿಂದ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳಲಾಗದೆ ಹೋಯಿತೆನ್ನಬಹುದು. ಸಾಮಾನ್ಯವಾಗಿ ಮನುಷ್ಯ ಯಾವ ಕೆಲಸ ಮಾಡಿದರೂ ಶೀಘ್ರ ಫಲವನ್ನು ನಿರೀಕ್ಷಿಸುತ್ತಾನೆ. ಕೆಲಸದಲ್ಲಿ ಆಸಕ್ತನಾಗಲು ಆ ಫಲಾಪೇಕ್ಷೆ ಕಾರಣವಾಗುತ್ತದೆ. ಬೌದ್ಧಧರ್ಮ ಉಳಿದ ಧರ್ಮಗಳಂತೆ ಸ್ವರ್ಗದ ಆಕರ್ಷಣೆಯನ್ನು, ಮೋಕ್ಷದ ಆಸೆಯನ್ನು ತೋರಲಿಲ್ಲ; ದೇವರ ಕಲ್ಪನೆಯನ್ನು ನೀಡಲಿಲ್ಲ. ಬುದ್ಧಿ ಮತ್ತು ನೀತಿ ಇವುಗಳಿಂದ ಕೂಡಿದ ಸಮರಸ ಜೀವನದಿಂದ ಲೋಕದ ಸಂಕಟದಿಂದ ಪಾರಾಗಬಹುದೆಂದು ಆತ ಹೇಳಿದನು. ಇದರಿಂದಾಗಿ ಅದು ಜನಮನವನ್ನು ಗೆಲ್ಲಲಿಲ್ಲ. ಅಲ್ಲದೆ ಬೌದ್ಧ ಧರ್ಮವು ವ್ಯಕ್ತಿನಿಷ್ಠವಾದದ್ದು. ಬುದ್ಧನ ನಂತರ ಕಾರ್ಯಕ್ಷಮತೆಯ ಅಭಾವದಿಂದಾಗಿ ಅದು ನೆಲೆನಿಲ್ಲುವ ಆಸ್ಪದವನ್ನು ಕಳೆದುಕೊಂಡಿತು. ಇದು ದುರದೃಷ್ಟದ ವಿಚಾರವೇ ಸರಿ.

ಇನ್ನು ಎರಡನೆಯದು ಬಸವ ಆರಂಭಿಸಿದ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ

ಆಂದೋಲನವು ದೀರ್ಘಕಾಲ ನಡೆಯದೆ ಹೋದದ್ದು. ಬಸವ ಮಿಂಚಿನಂತೆ ಸಂಚಲಿಸಿದನು; ಮತ್ತೆ ಕುರುಡು ದಟ್ಟೈಸಿತು. ಆತ ಮಾಡಿದ ಪ್ರಯತ್ನ, ತೆತ್ತ ಬೆಲೆ ಅಸಾಧಾರಣ; ಆದರೆ ಸಮಷ್ಟಿ ಚೇತನವು ನಿರೀಕ್ಷಿಸಿದ ಮಟ್ಟದಲ್ಲಿ ವಿಕಾಸವಾಗಲಿಲ್ಲ; ಜನ ಜಾಗೃತಿಯುಂಟಾಗಲಿಲ್ಲ. ಪ್ರಬುದ್ಧ ವಿಚಾರವಾದಿ, ಅಪ್ರತಿಮ ಸಂಘಟಕ ಬಸವ ಸ್ವಲ್ಪ ಮುಂಚೆ ಹುಟ್ಟಿಬಂದನೇನೋ ಎಂದು ಯಾರಿಗಾದರೂ ಅನ್ನಿಸುತ್ತದೆ. ಜನತೆ ಬಸವನ ದೂರದೃಷ್ಟಿಯನ್ನು, ವಿಶ್ವ ವಿಶಾಲ ಮನೋಭಾವವನ್ನು ಸರಿಯಾಗಿ ಅರ್ಥಮಾಡಿಕೊಂಡು, ಆತನನ್ನು ಮನಃಪೂರ್ವಕವಾಗಿ ಅನುಸರಿಸಿ ಸಹಕರಿಸಿದ್ದರೆ ದೇಶದ, ರಾಷ್ಟ್ರದ ಇತಿಹಾಸವೇ ಬದಲಾಗುತ್ತಿತ್ತು. ಆ ಭಾಗ್ಯ ನಮಗಿಲ್ಲವಾಯಿತು.

ಬುದ್ಧ ಮತ್ತು ಬಸವ ಇವರು ಹೀಗೆ ಭಾರತೀಯ ಸಂಸ್ಕೃತಿಯನ್ನು ತಮ್ಮ ಆಚಾರ ವಿಚಾರಗಳ ಪರಿಶುದ್ಧತೆಯಿಂದ, ತಮ್ಮ ದಿವ್ಯ ಬೋಧೆಗಳಿಂದ ಕಳೆಗೊಳಿಸಿ, ಜನಮನವನ್ನು ಸೂರೆಗೊಂಡವರು. ಅವರಿಬ್ಬರೂ ಭಾರತದ ಮುಂದೆ, ಅಷ್ಟೇ ಏಕೆ, ಇಡೀ ವಿಶ್ವದ ಮುಂದೆ ಸಾಮೂಹಿಕ ವಿಮೋಚನೆಯ ಆದರ್ಶವನ್ನು ಇಟ್ಟಿದ್ದಾರೆ. ವ್ಯಕ್ತಿ ತಾನೂ ಒಳ್ಳಿತಾಗಿ ಬದುಕಿ, ತನ್ನ ಸಹಜೀವಿಗಳನ್ನು ಹೇಗೆ ಬದುಕಗೊಡಬಹುದೆಂಬುದನ್ನು ದೃಷ್ಟಾಂತಪೂರ್ವಕವಾಗಿ ಇರಿಸಿದ್ದಾರೆ.

ಶಾಂತಿಯುತವಾದ ಕ್ರಿಯಾತ್ಮಕ ಜೀವನವನ್ನು, ಪ್ರೀತಿಭಾವ ಹಾಗೂ ಪ್ರಸನ್ನತೆಗಳಿಂದ ಮಾನವ–ಮಾನವರ ಮಧ್ಯೆ ಅಷ್ಟೇ ಅಲ್ಲ, ಮಾನವ–ಇತರ ಜೀವಿಗಳೊಂದಿಗೆ ಹೇಗೆ ಸಾಧಿಸಬಹುದೆಂಬುದನ್ನು ಅವರು ತೋರಿದ ರೀತಿ ಅನನ್ಯ. ಕಳವಳ, ಗಲಿಬಿಲಿಯ ಆಧುನಿಕ ಜೀವನದ ನಡುವೆ ಬಾಳುವ ನಮಗೆ ಆತ್ಮೋನ್ನತಿಗೆ ಸಾಧಕವಾದ, ಮನೋವಿಕಾರರಹಿತವಾದ ಶಾಂತಿ ಹಾಗೂ ಪ್ರೀತಿಯ ಬಾಳುವೆಯ ಹೊಸ ಯುಗವನ್ನು ಕಾಣಲು ಬುದ್ಧ ಮತ್ತು ಬಸವರ ನಡೆ–ನುಡಿಗಳು ನಮಗೆ ಆದರ್ಶವಾಗಬೇಕು. ಏಕೆಂದರೆ ಆ ಮಹಾನುಭಾವರಿಬ್ಬರೂ ಧರ್ಮವನ್ನು ಪ್ರಜ್ಞಾಯುಕ್ತವಾಗಿಸಿದ್ದಾರೆ ಮತ್ತು ತತ್ತ್ವಶಾಸ್ತ್ರವನ್ನು ಮಾನವೀಕರಿಸಿದ್ದಾರೆ. ಸಕಲ ಜೀವಾವಳಿಗೆ ಲೇಸ ಬಯಸಿದ ಅವರ ದಿವ್ಯಬೋಧೆ ನಮಗಿಂದು ತೀರ ಪ್ರಸ್ತುತವಾಗಿದೆ. ಅವನ್ನು ಅರಿತು, ಆಚರಿಸಿ ನಾವು ಧನ್ಯರಾಗಬೇಕು. ಅಂಥ ಆ ಎರಡು ಜಗಜ್ಜ್ಯೋತಿಗಳಿಗೆ ಸಹಸ್ರ ಸಹಸ್ರ ಪ್ರಣಾಮಗಳು.

❒

ಮಹಾವೀರರು : ಬಸವೇಶ್ವರರು

●

ಡಾ. ಹಂ.ಪ. ನಾಗರಾಜಯ್ಯ

ಮಹಾವೀರರು ತುಂಬ ಪ್ರಾಚೀನರು, ಕ್ರಿಪೂ. ೬ನೆಯ ಶತಮಾನದವರು. ಅವರು ಬಿಹಾರಿನಲ್ಲಿ ಹುಟ್ಟಿ ಬೆಳೆದವರು. ಬಸವೇಶ್ವರರು ಆರ್ವಾಚೀನರು. ಕ್ರಿಶ. ೧೨ನೆಯ ಶತಮಾನದವರು. ಕನ್ನಡ ನಾಡಿನಲ್ಲಿ ಆಗಿಹೋದವರು. ಇವರಿಬ್ಬರ ನಡುವೆ ೧೬೫೦ ವರ್ಷಗಳಿಗಿಂತ ಹೆಚ್ಚು ಅಂತರವಿದೆ. ಹೀಗಿದ್ದೂ ಮಹಾವೀರರು ಮತ್ತು ಬಸವೇಶ್ವರರಲ್ಲಿ ವೈಷಮ್ಯಗಳಿಗಿಂತ ಸಾಮ್ಯಗಳೇ ಹೆಚ್ಚು ಕಂಡುಬರುತ್ತವೆ. ಇಬ್ಬರೂ ಅಹಿಂಸಾಧರ್ಮದ ಪ್ರಚಾರಕರು. ದಯಾಧರ್ಮದ ಪ್ರತಿಪಾದಕರು. ಸರ್ವೋದಯಧರ್ಮದ ವ್ಯವಸ್ಥಾಪಕರು.

ಇವರಿಬ್ಬರೂ ಚಾರಿತ್ರಿಕವಾಗಿ ಆಗಿಹೋದ ಮಹಾನ್‌ವ್ಯಕ್ತಿಗಳು. ಇವರಿಗೆ ದೇಶ ಕಾಲ ಧರ್ಮಗಳ, ಮಿತಿಗಳ ಕಟ್ಟುಗಳಿಲ್ಲ. ಇವರ ಉಪದೇಶ ಎಲ್ಲಾ ಕಾಲಕ್ಕೂ ಸಲ್ಲುವಂತಹುದು. ಎಲ್ಲ ಜನರಿಗೂ ಅನ್ವಯಿಸುವಂತಹದು. ನಮ್ಮ ನಾಡಿನ ಸಂಸ್ಕೃತಿಯನ್ನು ಸಂಕೀರ್ಣಸಾಗರಕ್ಕೆ ಹೋಲಿಸಬಹುದು. ಅದರಲ್ಲಿ ಎರಡು ಹೆದ್ದೊರೆಗಳು ಸಂಗಮಿಸಿವೆ. ಅವೆಂದರೆ 'ಶ್ರಮಣ ಮತ್ತು ಶರಣ ಸಂಸ್ಕೃತಿ'ಗಳು. ಮಹಾವೀರರು ಶ್ರಮಣ ಸಂಸ್ಕೃತಿಯನ್ನು ಪ್ರಾರಂಭಿಸದವರಲ್ಲ ವಾದರೂ, ಅವರು ತಮಗಿಂತ ಹಿಂದೆ ಇದ್ದ ಧರ್ಮವನ್ನು ಪುನರುಜ್ಜೀವಿಸಿದರು, ಬೆಳಗಿದರು. ಬಸವೇಶ್ವರರೂ ತಮಗಿಂತ ಮೊದಲು ಅಣಿಯಾಗಿದ್ದ ವ್ಯವಸ್ಥೆಗೆ ಕಾಯಕಲ್ಪವೆಸಗಿ ಹೊಸ ಸ್ವರೂಪ ಕೊಟ್ಟರು. ಇಂದಿನ ಅದರ ವ್ಯವಸ್ಥಿತರೂಪ ಬಹುಪಾಲು ಬಸವೇಶ್ವರರ ಪ್ರಯತ್ನದ ಫಲ. (ವೀರಶೈವ ಧರ್ಮದ ಸಂಸ್ಥಾಪಕರು ಬಸವೇಶ್ವರರೆಂಬ ನಂಬಿಕೆಯಿರುವಂತೆ ಅದನ್ನು ಒಪ್ಪದೆ ಅವರಿಗಿಂತ ಹಿಂದೆಯೂ ಅದು ಇತ್ತೆಂಬ ಅಭಿಪ್ರಾಯವೂ ಇದೆ.)

ಮಹಾವೀರರು ಜೈನಧರ್ಮದ ಶ್ರೇಷ್ಠ ಪ್ರತಿನಿಧಿಯಾಗಿರುವಂತೆ, ಬಸವೇಶ್ವರರೂ ವೀರಶೈವದ ಉತ್ಕೃಷ್ಟ ಪ್ರತಿನಿಧಿಯಾಗಿದ್ದಾರೆ, ಅಹಿಂಸೆ, ಕಾಯಕ, ಸದಾಚಾರ, ಮಾದಕವಸ್ತು ನಿಷೇಧ–ಮೊದಲಾದವುಗಳಿಗೆ ಇವರಿಬ್ಬರೂ ವಿಶೇಷ ಮಹತ್ವ ಕೊಟ್ಟಿದ್ದಾರೆ.

ಅಚ್ಚರಿಯ ಸಂಗತಿಯೆಂದರೆ, ಎರಡೂವರೆ ಸಾವಿರ ವರ್ಷಗಳ ಹಿಂದಿನ ಮಹಾವೀರರ ಮತ್ತು ಎಂಟನೂರು ವರ್ಷಗಳ ಹಿಂದಿನ ಬಸವೇಶ್ವರರ ಸಮಗ್ರ, ಸಮರ್ಪಕ ಜೀವನಚಿತ್ರ ರೂಪಿಸುವಲ್ಲಿ ಇರುವ ಕೆಲವು ಕೊರತೆಗಳು. ಇವರಿಬ್ಬರ ಜನನ, ಜೀವನ ಕುರಿತು

ಜಿಜ್ಞಾಸೆಗಳಿವೆ. ಇಷ್ಟಾಗಿಯೂ ವಿವಾದಗಳಿಲ್ಲದ, ಅಸ್ಖಲಿತ ಚಾರಿತ್ರಿಕ ದಾಖಲೆಗಳು ಸಾಲವು. ಕೇವಲ ತೌಲನಿಕ ಅಧ್ಯಯನಗಳಿಂದಲೇ ಸಂಗತಿಗಳನ್ನು ಸಂಗ್ರಹಿಸಿಕೊಂಡು ಎಚ್ಚರದಿಂದ ಪುನಃರಚಿಸಬೇಕಾಗಿದೆ.

ಮಹಾವೀರರ ಜನನದ ಬಗ್ಗೆ ಜನ್ಮಸ್ಥಳದ ಬಗ್ಗೆ ವಿವಾದಗಳಿವೆ : ಅವರು ಬಿಹಾರದ ಪಾಟ್ನಾಜಿಲ್ಲೆಯ ನಲಂದದ ಬಳಿ ಇರುವ ಕುಂಡಪುರದಲ್ಲಿ ಹುಟ್ಟಿದರೆ? ಮಾಂಘ್ಯಾರಜಿಲ್ಲೆಯ ಲಚ್ಚುವಡದ ಬಳಿಯ ಕ್ಷತ್ರಿಯ ಕುಂಡಪುರದಲ್ಲಿ ಜನಿಸಿದರೆ? ಬಸಾಢದ ಸಮೀಪದಲ್ಲಿರುವ ವಾಸುಕುಂಡದಲ್ಲಿ ಜನ್ಮವೆತ್ತಿದರೆ? ಎಂಬ ಅನುಮಾನಗಳಿಗೆಡೆಯಿದೆ. ಇದೇ ರೀತಿ ಮಹಾವೀರರು ನಿರ್ವಾಣ ಪಡೆದದ್ದು ಈಗಿನ ಪಾಟ್ನಾಜಿಲ್ಲೆಯ ಪಾವಾದಲ್ಲೊ ಅಥವಾ ಉತ್ತರಪ್ರದೇಶದ ದೇವಾರಿಯ ಜಿಲ್ಲೆಯ ಕಾಶೀನಗರಕ್ಕೆ ಹತ್ತಿರದ ಪಾವಾದಲ್ಲೊ ಎಂಬ ಸಂದೇಹವಿದೆ. ಅಂತೂ ಕ್ರಿಪೂ. ೫೯೯ ರಿಂದ ೫೨೭, ಅಂದರೆ ಕ್ರಿಸ್ತಪೂರ್ವ ಆರನೆಯ ಶತಮಾನ ಮಹಾವೀರರ ಜೀವಿತಕಾಲವೆಂದು ತಿಳಿಯಲಾಗಿದೆ. ಹೀಗೆಯೇ ಮಹಾವೀರರ ಜೀವನ ಚಿತ್ರವನ್ನು ಒಟ್ಟಾರೆ ರೂಪಿಸಿಕೊಳ್ಳಲು ಅವರ ಪರಮ, ನೇರಶಿಷ್ಯೋತ್ತಮ ಇಂದ್ರಭೂತಿ ಗೌತಮನು ಒಂದೆಡೆ ಕೂಡಿಸಿದ್ದ ಸಾಹಿತ್ಯ ಸಾಮಗ್ರಿ ಸಿಗುತ್ತಿಲ್ಲ. ಅದರ ಪರೋಕ್ಷದಿಂದ ಅರ್ಧಮಾಗಧಿ ಆಗಮನಗಳನ್ನು, ಅದರಲ್ಲಿಯೂ ನಾಲ್ಕನೆಯ ಅಂಗವಾದ ಸಮವಾಯಾಂಗದ ಆಧಾರದಿಂದ ಮಹಾವೀರರ ಜನನ ಜೀವನ ಬೋಧನ ಸಂಗತಿಗಳನ್ನು ತೌಲನ ವಿಧಾನದಿಂದ ಸಂಕಲಿಸಬೇಕಾಗಿದೆ: ಮತ್ತು ವ್ಯಾಖ್ಯಾಪ್ರಜ್ಞಪ್ತಿ ಉಪಾಸಕಾಧ್ಯಯನ ಅನುತ್ತರೌಪಾತಿಕ, ಉತ್ತರಾಧ್ಯಯನ, ದಶವೈಶಾಲಿಕ, ತಿಲೋಯ ಪಣ್ಣತ್ತಿ, ನಾಮಾವಳೀ ನಿಬದ್ಧ ಮೊದಲಾದ ಪ್ರಾಚೀನ ಮತ್ತು ಸಂಸ್ಕೃತ ಪ್ರಾಕೃತ ಕನ್ನಡದಲ್ಲಿನ ಅರ್ವಾಚೀನ ಗ್ರಂಥಗಳಿಂದಲೂ ಪುನರ್ ರಚಿಸಬೇಕಾಗಿದೆ.

ಬಸವೇಶ್ವರರ ಜನನ, ಜನ್ಮಸ್ಥಳ, ಜೀವನದ ಮುಡಿ–ನಡು–ಅಡಿಗಳನ್ನು ಬಿಡಿಸುವ ಬಗೆಗೂ ಸಾಕಷ್ಟು ಜಿಜ್ಞಾಸೆಗಳಿವೆ. ಅವರು ೧೬–೧–೧೧೧೬, ೧೭–೧–೧೧೪೩, ೨೭–೧೦–೧೧೪೦, ೨೧–೧–೧೧೪೦ ಅಥವಾ ೧೧೩೨ರಲ್ಲಿ ಯಾವಾಗ ಹುಟ್ಟಿದರೆಂಬ ಭಿನ್ನಾಭಿಪ್ರಾಯಗಳಿಗೆ ಅವಕಾಶವಿದೆ. ಸಿದ್ಧಾರ್ಥಿನಾಮ ಸಂವತ್ಸರ ಪುಷ್ಯ ಅಮಾವಾಸ್ಯೆ ಆದಿತ್ಯವಾರ ವ್ಯತೀಪಾತಯೋಗ ಶ್ರವಣ ನಕ್ಷತ್ರ ಹಗಲಲ್ಲೊ ಅಥವಾ ಸಿದ್ಧಾರ್ಥಿ ಸಂವತ್ಸರದ ಕಾರ್ತಿಕ ಶುದ್ಧ ಪೌರ್ಣಮಿಯ ಸೋಮವಾರದ ಮಧ್ಯರಾತ್ರಿಯಲ್ಲೋ ಅವರ ಜನಿಸಿರಬಹುದೆಂಬ ನಂಬಿಕೆಯಿದೆ. ಅವರು ೧೧೬೭ಕ್ಕಿಂತ ಮುಂಚಿತವಾಗಿ ಸತ್ತರೆ, ೧೧೮೦ರ ವರೆಗೂ ಬದುಕಿದ್ದರೆ ಎಂಬ ಸಂಶಯಗಳೂ ಇವೆ. ಕಲ್ಯಾಣದಲ್ಲಿ ಹುಟ್ಟಿದರೆ ಅಥವಾ ಬಾಗೇವಾಡಿಯಲ್ಲಾದರೆ ಯಾವ ಬಾಗೇವಾಡಿಯಲ್ಲಿ ಹುಟ್ಟಿದವರು, ಕೂಡಲಸಂಗಮಕ್ಕೆ ಯಾವಾಗ ಬಂದರು, ಬಿಜ್ಜಳನು ಜೈನನೆ–ಅಜೈನನೆ, ಕಲ್ಯಾಣ–ಮಂಗಳವಾಡಗಳಲ್ಲಿ ಇದ್ದುದು ಯಾವಾಗ ಮತ್ತು ಎಷ್ಟು ಕಾಲ–ಎಂಬೆಲ್ಲ ಸಂದೇಹದ ಸುಳಿಗಳಿವೆ. ಇದರ ಸಿಕ್ಕುಗಳನ್ನು ಬಿಡಿಸಲು ಹರಿಹರನ ಅರ್ಧ ದೊರೆತ ಬಸವರಾಜದೇವರ ರಗಳೆ, ರಾಘವಾಂಕನ ಸಿದ್ಧರಾಮಚರಿತೆ, ಚಾಮರಸನ ಪ್ರಭುಲಿಂಗಲೀಲೆ, ಸಿಂಗಿರಾಜಪುರಾಣ, ಪಾಲ್ಕುರಿಕೆ ಸೋಮನಾಥನ ತೆಲುಗು ಬಸವಪುರಾಣ, ಲಕ್ಕಣದಂಡೇಶನ ಶಿವತತ್ವಚಿಂತಾಮಣಿ, ಕಂಚಿಶಂಕರಾರಾಧ್ಯನ ಸಂಸ್ಕೃತ ಬಸವಪುರಾಣ, ಧರಣಿ ಪಂಡಿತನ ಬಿಜ್ಜಳರಾಯಚರಿತೆ,

ಚಂದ್ರಸಾಗರವರ್ಣಿಯ ಬಿಜ್ಜಣರಾಯಪುರಾಣ, ಹಂಪನಾ. ಚಂದ್ರಸಾಗರವರ್ಣಿ ಕಸಾಪಸ ೫೮-೨, ಪುಟ ೭೨). ಹಲವಾರು ಶಿಲಾಶಾಸನಗಳು – ಮೊದಲಾದುವನ್ನು ಆಶ್ರಯಿಸಬೇಕಾಗುತ್ತದೆ. ಈ ಬಗೆಯ ಅಸಮಗ್ರತೆ ಅಂಶರೂಪದಲ್ಲಿ ಇವರಿಬ್ಬರ ಸುತ್ತ ಪರಿವೇಶವಾಗಿ ಕಟ್ಟಿದ್ದರೂ, ಇವರ ವಿಚಾರವಾಗಿ ತಿಳಿದು ಬಂದಿರುವ ವಿಶ್ವಾಸಾರ್ಹ ಸಂಗತಿಗಳೂ ಸಾಕಷ್ಟಿವೆ. ಲಭ್ಯ ಆಧಾರಗಳಿಂದ ಇವರ ವಿಚಾರಧಾರೆಯ ಸ್ವರೂಪ ಬಹುಮಟ್ಟಿಗೆ ಗೊತ್ತಾಗುತ್ತದೆ. ಇಬ್ಬರ ಬದುಕಿನಲ್ಲೂ ಪವಾಡ ನಡೆಸಿದ ಪ್ರಸಂಗಗಳ ಪ್ರಸ್ತಾಪಗಳೂ ಇವೆ. ಅವನ್ನು ಬಿಟ್ಟು ಪ್ರಮಾಣಾರ್ಹ ಸಂಗತಿಗಳನ್ನು ಇಲ್ಲಿ ಗಮನಿಸಲಾಗಿದೆ. ಮಹಾವೀರರು ರಾಜಪುತ್ರರಾಗಿ ಹುಟ್ಟಿದರು. ಜನತಾ ಕಲ್ಯಾಣಕ್ಕಾಗಿ ಸಿಂಹಾಸನ, ಸಂಸಾರಗಳನ್ನು ತ್ಯಾಗಮಾಡಿ ಸಾಮಾನ್ಯ ಜೀವನವನ್ನು ಒಪ್ಪಿಕೊಂಡರು. ತಮ್ಮ ಕಠೋರ ಸಂಯಮದಿಂದ ತಪಸ್ಸಿಗೆ ಬಂದೊದಗಿದ ಅನೇಕ ಕಷ್ಟನಷ್ಟ ನೋವು ಹಿಂಸೆಗಳನ್ನು ತಾಳ್ಮೆಯಿಂದ ಸಹಿಸಿದರು. ತಮ್ಮಲ್ಲೇ ಬಂದ ಚಿತ್ತದ ತಾಕಲಾಟ, ದ್ವಂದ್ವಗಳನ್ನು ನಿಗ್ರಹಿಸಿದರು, ಇಂದ್ರಿಯಗಳ ಮೇಲೆ ಪ್ರಭುತ್ವ ಗಳಿಸಿದರು. ಬಸವೇಶ್ವರರೂ ಜೈನಬಿಜ್ಜಳನಲ್ಲಿ ಮಹಾಮಂತ್ರಿ ಇಲ್ಲವೇ ಕರಣಿಕರಾಗಿದ್ದು, ಅದನ್ನು ತ್ಯಜಿಸಿ ಕಪ್ಪಡಿಯಲ್ಲಿ ಸಂಯಮದ ತಪೋನಿರತ, ಸರಳ, ಭಕ್ತ ಜೀವನವನ್ನು ಅಪ್ಪಿದರು. ಅವರು ಕೂಡ ಅಂತರಂಗದಲ್ಲಿ ಬಂದ ಕ್ಷುಲ್ಲಕಭಾವನೆಗಳನ್ನೂ ತಳಮಳವನ್ನೂ ತಹಬಂದಿಗೆ ತಂದುಕೊಂಡರೆಂಬುದಕ್ಕೆ ಅವರ ವಚನಗಳೇ ನಿದರ್ಶನ ಕೊಡುತ್ತವೆ. ಇಬ್ಬರ ಈ ಸಮಜೀವನದಿಂದ ಹೊರಪಡುವ ಸತ್ಯವೆಂದರೆ : ಬೆಳವಣಿಗೆಯೆಂಬುದು ಒಮ್ಮೆಲೆ ಜಾದೂ ಆಗಿ ಬರುವಂತಹದಲ್ಲ. ಅದು ಕ್ರಮೇಣ ಮೆಟ್ಟಿಲಾಗಿ ರೂಪಗೊಳ್ಳುತ್ತದೆ, ಸಾಧನೆ ಮಾತ್ರದಿಂದ ಸಿದ್ಧಿ ಸಾಧ್ಯ–ಎಂಬುದು.

ಇವರಿಬ್ಬರೂ ಮಹಾಮಾನವತಾವಾದಿಗಳಾಗಿದ್ದರು. ಮಾನವರೆಲ್ಲರಿಗೂ ಅವಕಾಶಗಳು ಅನುಕೂಲಗಳು ಮುಕ್ತವಾಗಿರುವಂತೆ ತಿಳಿಸಿದರು. ಸರ್ವಸಮಾನತೆಯ ತತ್ವವನ್ನು ಅವರು ಮೊದಲು ಆಚರಿಸಿ, ಅನಂತರ ಲೋಕಕ್ಕೆ ಬೋಧಿಸಿದರು. ಮಹಾವೀರರ ಉಪದೇಶ ಸಭೆ ಸಮವಸರಣ. ಈ ಸಮವಸರಣವೆಂಬುದು ಸರ್ವಜನ–ಧರ್ಮಗಳ ಸಮನ್ವಯದ, ಸಮಾನತೆಯ, ಸಹಿಷ್ಣುತೆಯ ಸ್ನೇಹ ಸೌಹಾರ್ದಗಳ ಸಭೆ. ಅದರಲ್ಲಿ ಜಾತಿ ಮತ ಕೋಮು ಭಾವನೆಗಳ ತಾರತಮ್ಯಕ್ಕೆ ತೆರಪು ಇರಲಿಲ್ಲ. ವ್ಯಕ್ತಿ–ವ್ಯಕ್ತಿಗಳ ನಡುವೆ ಅಂತರವಿರಲಿಲ್ಲ. ಮೇಲುಕೀಳೆಂಬ ವ್ಯತ್ಯಾಸ, ಗಂಡು ಹೆಣ್ಣು ಎಂಬ ಭೇದ ಇರಲಿಲ್ಲ. ಧರ್ಮಸ್ವಾತಂತ್ರ್ಯ, ವಿಚಾರಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯಗಳಿಂದ ಕೂಡಿದ ಆ ಸಭೆಯ ಒಂದು ಕಟ್ಟು ನಿಟ್ಟಾದ ಕಟ್ಟಳೆಯೆಂದರೆ, ಯಾರು ಯಾರ ಪಕ್ಕದಲ್ಲಿ ಬೇಕಾದರೂ ಕೂಡಬಹುದೆಂಬುದು: ಯಾರೊಬ್ಬರೂ ಇನ್ನೊಬ್ಬರನ್ನು ನೀನೇಕೆ ಇಲ್ಲಿ ಕುಳಿತೆ ಎಂದು ಹೇಳಕೂಡದು. ಸಮವಸರಣದಲ್ಲಿ ಶ್ರೇಣಿಕ (ಬಿಂಬಸಾರ) ದೊರೆಯ ಪಕ್ಕದಲ್ಲಿ ಚಂಡಾಲನೊಬ್ಬ ಕುಳಿತಿದ್ದನೆಂದು ತಿಳಿದು ಬರುತ್ತದೆ. ಸಮವಸರಣದಲ್ಲಿ ಪಶುಪಕ್ಷಿಗಳಿಗೂ ಪ್ರವೇಶವಿತ್ತು.

ಸಮವಸರಣದ ಪ್ರತಿಬಿಂಬವೇ ಅನುಭವಮಂಟಪ. ಸಮವಸರಣ ಜಾತಿಯ ಕ್ಷುದ್ರಭಾವನೆಗಳನ್ನು ಹೇಳ ಹೆಸರಿಲ್ಲದಂತೆ ಕರಗಿಸುವ ದ್ರವ. ಇದರ ಕಲ್ಪನೆಯ ಪ್ರಭಾವ ಹೊತ್ತಿರುವ ಅನುಭವಮಂಟಪವೂ ಜಾತಿ ಲಿಂಗಾದಿಗಳ ಭೇದಭಾವದಿಂದ ಹೊರತಾದದ್ದು. ಇದೂ ಕೂಡ ಎಲ್ಲರೂ ಸಮಾನರೆಂಬ ಸಿದ್ಧಾಂತದ ನೆಲಗಟ್ಟಿನ ಮೇಲೆ ನಿಂತಿರುವುದು. ಇಲ್ಲಿ

ಮಡಿವಾಳ ಮಾಚಯ್ಯ. ಆಯ್ದಕ್ಕಿ ಮಾರಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ, ಮಾದಾರ ಚೆನ್ನಯ್ಯ ಮೊದಲಾದ ಎಲ್ಲರಿಗೂ ನೇರ ಪ್ರವೇಶವುಂಟು.

ಸಮಾಜಸುಧಾರಕರಿಗೆ ಉನ್ನತವೂ ಉದಾತ್ತವೂ ವ್ಯವಸ್ಥಿತವೂ ಆದ ದೃಷ್ಟಿಗಳಿರಬೇಕು. ಮಹಾವೀರರೂ ಬಸವೇಶ್ವರರೂ ಉಚ್ಚಮಟ್ಟದ ನಿಷ್ಕಾಮ ಕರ್ಮಯೋಗಿಗಳು ಹಾಗೂ ಸಮಾಜಸುಧಾರಕರು. ಮಹಾವೀರರು ಸಮಾಜವನ್ನು ಶ್ರಾವಕ (ಗೃಹಸ್ಥ), ಶ್ರಾವಕಿ (ಗೃಹಿಣಿ), ಸಂನ್ಯಾಸಿ (ಮುನಿ,ಯತಿ), ಸಂನ್ಯಾಸಿನಿ (ಆರ್ಯಿಕೆ, ಅಜ್ಜಿಕೆ, ಕಂತಿ) ಎಂದು ನಾಲ್ಕು ವಿಧವಾಗಿ ವಿಂಗಡಿಸಿದ್ದರು. ಇದು ಜಾತಿಯ ಆಧಾರದ ವಿಭಜನೆಯಲ್ಲವೆಂಬುದು ಸ್ವಯಂಸ್ಪಷ್ಟ. ಮಹಾವೀರರ ಪೂರ್ವಭವದ ತಂದೆಯಾದ ಭರತಚಕ್ರವರ್ತಿ, (ಈತನಿಂದಲೇ ಈ ದೇಶಕ್ಕೆ ಭಾರತ ಎಂದು ಹೆಸರಾಯಿತೆಂದು ಪುರಾಣಗಳು ತಿಳಿಸುತ್ತವೆ) ಬ್ರಾಹ್ಮಣ ವರ್ಗವೊಂದನ್ನು ತನ್ನ ಕಾಲದಲ್ಲಿ ಪ್ರವರ್ತಿಸಿದಾಗ ಆತನ ತಂದೆ ಆದಿ ದೇವನು ಇದರಿಂದ ಇಡೀ ಸಮಾಜ ಚೂರುಪಾರಾಗಿ ಹರಿದು ಹೋಗುವುದು ಎಂದು ಎಚ್ಚರಿಸಿದ. ಆ ಎಚ್ಚರ ಎಂದಿನಂತೆ ಇಂದೂ ಅಗತ್ಯ.

ಸ್ವಾರಸ್ಯವೆಂದರೆ ತಮ್ಮ ಪೂರ್ವಭವದ ತಂದೆಯಾದ ಭರತನು ಜಾತಿವರ್ಗವನ್ನು ಪ್ರವರ್ತಿಸಿದರೂ ಮಹಾವೀರರು ಅದನ್ನು ತಿರಸ್ಕರಿಸಿ ಸಮತಾವಾದವನ್ನು ಸಾರಿದರೆಂಬುದು. ಅವರು ಸಂಸಾರಕ್ಕೂ ಮಾನ್ಯತೆ ಕೊಟ್ಟಿದ್ದರು. ಸಂಸಾರದಲ್ಲಿದ್ದೂ ಸಂಯಮ ಪಾಲಿಸುವುದರ ಮೂಲಕ ಯೋಗಸದೃಶ ಜೀವನ ಸಾಧ್ಯವೆಂದರು. ಸಂಸಾರಯೋಗದಲ್ಲಿ ಮಹಿಳೆಯರಿಗೆ ಸ್ಥಾನ ಮೀಸಲಾಗಿತ್ತು. ತ್ರಿಶಲಾ (ಪ್ರಿಯಾಕರಿಣೀ), ಚೇಲನಾದೇವಿ, ಪ್ರಭಾವತೀ (ಶೀಲವತೀ). ಮೃಗಾವತೀ. ಸುಪ್ರಭಾ–ಮೊದಲಾದ ಸೋದರಿಯರಿಗೆ ಅಂದಿನ ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನವಿತ್ತು. ಅಂತೆಯೇ ಸಂನ್ಯಾಸದಲ್ಲೂ ಸ್ತ್ರೀಯರಿಗೆ ಸಮಸ್ಥಾನವನ್ನಿತ್ತರು. ಇದರಿಂದ ಆರ್ಯಿಕ ಚಂದನಬಾಲೆಯ ನೇತೃತ್ವದಲ್ಲಿ ಮೂವತ್ತಾರು ಸಾವಿರ ಜನ ಪ್ರಜ್ಞಾವಂತರಾದ ಸಂನ್ಯಾಸಿನಿಯರಿದ್ದರು.

ಬಸವೇಶ್ವರರು ಶರಣ (ಗೃಹಸ್ಥ) ಶರಣೆ (ಗೃಹಿಣಿ)ಯರಿಗೆ ಹಿರಿಯ ಮನ್ನಣೆಯಿತ್ತರು. ಅನುಭವಮಂಟಪದಲ್ಲೂ ಮಹಿಳೆಯರಿಗೆ ಸಮಪ್ರವೇಶ, ಸಮಸ್ಥಾನ, ಸಮಮರ್ಯಾದೆ ಇದ್ದುವು. ಇದರಿಂದ ಅಕ್ಕಮಹಾದೇವಿ, ನೀಲಲೋಚನೆ, ಮುಕ್ತಾಯಕ್ಕ, ರೆಮ್ಮವ್ವೆ ಮುಂತಾದ ವಚನಕಾರ್ತಿಯರು ಬರಲು, ಪ್ರತಿಭೆ ತೋರಲು ಸಾಧ್ಯವಾಯಿತು. ಮಹಾವೀರರಂತೆ ಇವರೂ ಸಂಸಾರವನ್ನು ನಿರ್ಲಕ್ಷಿಸಲಿಲ್ಲ. ಇವರು ದಾಂಪತ್ಯ ಜೀವನ ನಡೆಸುತ್ತಾ ವಿಭೂತಿಪುರುಷರಾದರು. ಈಸಬೇಕು, ಇದ್ದು ಜಯಿಸಬೇಕೆಂಬುದಕ್ಕೆ ಇವರು ಉದಾಹರಣೆಯಾದರು.

ಮಹಾವೀರರು ಸದ್ಗೃಹಸ್ಥನು ಪಾಲಿಸಬೇಕೆಂದು ತಿಳಿಸಿದ ಷಟ್‌ಕರ್ಮಗಳಲ್ಲಿ ದಾನವೂ ಒಂದು. ದಾನಗಳಲ್ಲಿ ನಾಲ್ಕು ಬಗೆ–ಆಹಾರ, ಅಭಯ, ಶಾಸ್ತ್ರ, ಭೈಷಜ್ಯ, ಆಹಾರದಾನಕ್ಕೆ ಬಹುವಾದ ಮಹತ್ವವಿದೆ. ಅದರಲ್ಲಿಯೂ ಗುರುಗಳಿಗೆ ಮುನಿಗಳಿಗೆ ಕೊಡುವ ಆಹಾರಭಿಕ್ಷೆ ಶ್ರೇಷ್ಠವೆಂದು ಪರಿಗಣಿತವಾಗಿದೆ. ಶ್ರಾವಕನಾದವನು ಚರ್ಯಾಮಾರ್ಗದಿಂದ ಬಂದ ಜಿನಮುನಿಗಳಿಗೆ ಆಹಾರವಿತ್ತು ಅನಂತರ ತಾನು ಉಣಬೇಕು. ಇದೇ ಆಹಾರದಾನದ ಪ್ರಭಾವ ಇಲ್ಲಿಯೂ ಕಂಡುಬರುತ್ತದೆ. ಶರಣನಾದವನು ಉಣಬಂದ ಜಂಗಮರಿಗೆ ದಾಸೋಹವಿತ್ತು ಅನಂತರ ಶೇಷಾಹಾರವನ್ನು ತಾನು ಸ್ವೀಕರಿಸಬೇಕು. ಅಂತೆಯೇ ಬಸವೇಶ್ವರರು ತಿಳಿಸಿದ

ದಾಸೋಹಕ್ಕೆ ಮಹಾವೀರರು ಒತ್ತಿ ಹೇಳಿದ, ಸಾರಿದ ಆಹಾರ ದಾನವಿಧಿಯನ್ನು ಮೂಲಸೆಲೆಯೆಂದು ಗುರುತಿಸಬಹುದು. ಸೋಹಂ ಎನಿಸದೆ ದಾಸೋಹಂ ಎನಿಸಯ್ಯ ಎಂದು ಸೇವಕ–ಸೇವ್ಯ ರೂಪದಲ್ಲಿ ಆರಂಭವಾದ ಈ ನಮ್ರತೆಯ ನಿವೇದನೆಯಲ್ಲಿ ಬರುವ ಗುರುಲಿಂಗ ಜಂಗಮ ಅರ್ಥಾತ್ ತ್ರಿವಿಧ ದಾಸೋಹದಿಂದ ಸಾಧಕ ಮುನ್ನಡೆಯಲು ಸಾಧನವಾಗುತ್ತದೆಂಬುದರಲ್ಲಿ ಜಿನಭಾಷಿತ ರತ್ನತ್ರಯದ ಕಲ್ಪನೆಯೂ ಮೇಳೈಸಿದೆ.

ಮಹಾವೀರ ಪ್ರಣೀತ ಧರ್ಮವನ್ನು ಆಚಾರ್ಯ ಸಮಂತಭದ್ರರು ಸರ್ವೋದಯ ತೀರ್ಥವೆಂದು ಕರೆದಿರುವುದು ಔಚಿತ್ಯಪೂರ್ಣವಾಗಿದೆ. ಮನನೀಯವಾಗಿದೆ. ಅಹಿಂಸೆ, ಅಸ್ತೇಯ, ಅಪರಿಗ್ರಹ, ಸತ್ಯ, ಬ್ರಹ್ಮಚರ್ಯ ಎಂಬ ಐದು ವ್ರತಗಳ ಅನುಷ್ಠಾನವೇ ಇದಕ್ಕೆ ಅಡಿಪಾಯ. ಮಹಾವೀರರು ಜನಸಾಮಾನ್ಯರೆಲ್ಲರ ಮೇಲ್ಮೆಗಾಗಿ ಚಿಂತಿಸಿ ಪ್ರಯತ್ನಿಸಿದವರು. ತಾವು ಹೇಳುವುದು ಜನತೆಗೆ ತಿಳಿಯಬೇಕೆಂದು ಅವರ ಹಂಬಲವಾಗಿತ್ತು. ಅದರಿಂದ ಅವರು ಪಂಡಿತ ಮಂಡಲಿಯ ಭಾಷೆಯಲ್ಲಿ ಬೋಧಿಸದೆ ಆ ಕಾಲದ ತಮ್ಮ ಸಂಚಾರ ಪ್ರದೇಶದ ಜನಭಾಷೆಯಾದ ಅರ್ಧಮಾಗಧಿಯಲ್ಲಿ ಉಪದೇಶಿಸಿದರು. ಸರ್ವಭಾಷಾಮಾಯಿ ಸರಸ್ವತೀ ಎಂದು ಉದಾತ್ತವಾಗಿ ಕಲ್ಪಿಸಿಕೊಂಡುದರಿಂದ, ಮಹಾವೀರರು ಭಾಷಾಭೇದಗಳನ್ನು ಅಲಕ್ಷಿಸಿ, ಎಲ್ಲ ಭಾಷೆಗಳೂ ವಿಚಾರಾಭಿವ್ಯಕ್ತಿಗೆ ಸಮಾನ ಮಾಧ್ಯಮಗಳೆಂಬುದನ್ನು ಪುರಸ್ಕರಿಸದರು. ಬಸವೇಶ್ವರರು ಕೂಡ ದೇವಭಾಷೆಯನ್ನು ಬಿಟ್ಟು ಜನಭಾಷೆಯಾದ ಕನ್ನಡದಲ್ಲೆ ತಮ್ಮ ವಿಚಾರಗಳನ್ನು ತೋಡಿಕೊಂಡರು. ಅವರ ಸಂಸ್ಕೃತ ಪಾಂಡಿತ್ಯ ಸಮೃದ್ಧವಾಗಿದ್ದೂ ಅವರು ಕನ್ನಡವನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿ ಆರಿಸಿಕೊಂಡರೇಕೆಂಬುದು ಚಿಂತನೀಯ, ಗಮನಾರ್ಹ, ಮಹಾವೀರರೂ, ಬಸವೇಶ್ವರರೂ ಜಾತಿಪದ್ಧತಿಯನ್ನು ವಿರೋಧಿಸಿದರು. ದಲಿತ, ಶೋಷಿತ ವರ್ಗಗಳವರ ಉದ್ಧಾರಕ್ಕಾಗಿ ಶ್ರಮಿಸಿದ ಈ ಮಹಾತ್ಮರು ಆ ತತ್ವಗಳನ್ನು ಮೊದಲು ತಾವೇ ಪಾಲಿಸಿ ತೋರಿಸಿದರು. ಕ್ಷತ್ರಿಯರು, ಬ್ರಾಹ್ಮಣರು, ವೈಶ್ಯರು, ಶೂದ್ರರು– ಎಲ್ಲರೂ ಅವರ ಶಿಷ್ಯತ್ವಕ್ಕೆ ಅರ್ಹರಾದರು. ಮಹಾವೀರರ ಸಂಘ ಸೇರಿದರು. ಭಾರತದ ಬೇರೆ ಬೇರೆ ಭಾಗಗಳಿಂದ ಬಂದು ಅವರ ಶಿಷ್ಯರಾದರು. ರಾಜರಿಂದ ಹಿಡಿದು ತೀರ ಸಾಮಾನ್ಯ ಪ್ರಜೆಯವರೆಗೆ ಅವರ ಅನುಯಾಯಿಗಳಿದ್ದರು. ಸಕಡಾಲ (ಸದ್ದಾಲ)ನೆಂಬ ಕುಂಬಾರನೂ, ಹರಿಜನನಾದ ಹರಿಕೇಶಿಯೂ ಮಹಾವೀರನ ಶಿಷ್ಯೋತ್ತಮರಾಗಿ ಉಳಿದ ಶ್ರಾವಕರಿಗೆ ಮಾರ್ಗದರ್ಶಕರಾಗಿದ್ದರು. ನೆನಪಿಡಬೇಕಾದ ಸಂಗತಿಯೆಂದರೆ ಮಹಾವೀರರು ಇವರಲ್ಲಿ ಆಹಾರ ತಾವೂ ಸ್ವೀಕರಿಸಿ ಉಳಿದವರೂ ಸ್ವೀಕರಿಸುವಂತೆ ಮಾಡಿದ್ದು, ಮತ್ತು ಚಂಡಾಲ ಕುಲದ ಹರಿಕೇಶಿಗೆ ಮುನಿದೀಕ್ಷೆಯನ್ನೂ ಕೊಟ್ಟಿದ್ದಲ್ಲದೆ ದೊಡ್ಡ ದೊಡ್ಡ ಶ್ರೀಮಂತರಿಂದ, ಚಕ್ರವರ್ತಿಗಳಿಂದ ಆತನಿಗೆ ನಮಸ್ಕಾರ ಮಾಡಿಸಿದರು. ಬಸವೇಶ್ವರರೂ ಈ ಅಂಶದಲ್ಲಿಯೂ, ಮಹಾವೀರರ ತದ್ರೂಪವಾಗಿದ್ದಾರೆ. ಇವರು ಹರಳಯ್ಯ ಮಧುವಯ್ಯ ಪ್ರಕರಣದಲ್ಲಿ ತೋರಿದ ಅಸೀಮ ಉನ್ನತ ನಡವಳಿಕೆ ಇಂದಿಗೂ ಅನುಸರಣೀಯ ಮೇಲ್ಪಂಕ್ತಿಯಾಗಿದೆ. ಇವರು ನಡೆಸಿದ ಸಾಮಾಜಿಕ ಕ್ರಾಂತಿ, ಜಾತಿಪದ್ಧತಿಗೆ ಕೊಟ್ಟ ವಜ್ರಾಘಾತ ಅಸಾಮಾನ್ಯವಾದುದು. ಶರಣ ದೀಕ್ಷೆಯನ್ನೂ ಲಿಂಗಧಾರಣೆಯನ್ನೂ ಎಲ್ಲರಿಗೂ ನೀಡಿದರು – ಜಾತಿ ಲಿಂಗ ವ್ಯತ್ಯಾಸ ತೋರಲಿಲ್ಲ. ಅಹಿಂಸಾ ಪರಮೋಧರ್ಮಃ ಎಂಬುದು ಜಿನವಾಣಿ. ಜೀವದಯೆಯೇ ಜೈನಧರ್ಮವಾಗಿರುವಂತೆ ವೀರಶೈವ ಧರ್ಮವೂ ಆಗಿದೆ. ಇವರ ಧರ್ಮವನ್ನು

ಶ್ರೀಸಾಮಾನ್ಯನಿಂದ ಶ್ರೀಮಂತನವರೆಗೆ ಸ್ವೀಕರಿಸಿದರು. ದೂರದ ಕಾಶ್ಮೀರದಿಂದ ಪ್ರಜೆಗಳೂ ಪ್ರಭುಗಳೂ ಬಂದರು.

ಮಹಾವೀರರ ಮತ್ತು ಬಸವೇಶ್ವರರ ಸಮಾನ ವಿಚಾರ ಧಾರೆಯನ್ನು ತೋರುವ ಅನೇಕ ಸೂಕ್ತಿಗಳಿವೆ. ಅವುಗಳಲ್ಲಿ ಕೇವಲ ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಿದೆ:

೧.	ಮಹಾವೀರರು :	ನೀನೂ ಜೀವಿಸು, ಇತರರಿಗೂ ಜೀವಿಸಲು ಅವಕಾಶ ಕೊಡು. ಅಹಿಂಸೆ ತಾಯಿಯಂತೆ, ಎಲ್ಲ ಜೀವಿಗಳ ಹಿತವನ್ನು ಬಯಸುತ್ತದೆ. ಜೀವಿಗಳ ವಧೆ ತನ್ನ ವಧೆಯೇ ಆಗಿದೆ. ಪ್ರಾಣಿಗಳಿಗೆ ದಯೆ ತೋರುವುದು ತನ್ನ ಮೇಲೆಯೇ ದಯೆ ತೋರಿದಂತಾಗುವುದು. ಪ್ರಾಣಿಗಳಿಗೆ ಅಭಯ ದಾನ ನೀಡು, ಮೈತ್ರೀಭಾವ ತೋರು.
	ಬಸವೇಶ್ವರರು :	ದಯವಿಲ್ಲದ ಧರ್ಮವಾವುದಯ್ಯ ದಯವೇ ಬೇಕು ಸಕಲಪ್ರಾಣಿಗಳೆಲ್ಲರಲ್ಲಿ ದಯವೇ ಧರ್ಮದ ಮೂಲವಯ್ಯ.
೨.	ಮಹಾವೀರರು :	ಸದಾಚಾರವೇ ಮೋಕ್ಷದ ಮೆಟ್ಟಿಲು ಆಚಾರಹೀನಮನುಷ್ಯನ ಜನ್ಮ ನಿರರ್ಥಕ.
	ಬಸವೇಶ್ವರರು :	ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ ಆಚಾರವೇ ಸ್ವರ್ಗ, ಅನಾಚಾರವೇ ನರಕ.
೩.	ಮಹಾವೀರರು :	ಯಾರ ಅಂತರಂಗದಲ್ಲಿ ಕಾಮಕ್ರೋಧಾದಿ ಶತ್ರುಗಳು ಕುಳಿತಿದ್ದಾವೋ ಅವರಿಗೆ ಶಾಂತಿ ಹೇಗೆ ಸಿಕ್ಕೀತು? ನಿನ್ನ ಮನಸ್ಸು ವಿಷಯಸುಖದಿಂದ ದೂರ ಸರಿದರೆ, ಆಗ ಉತ್ತಮ ಸುಖ ಪ್ರಾಪ್ತವಾಗುತ್ತದೆ. ಬಾಹ್ಯ ಶತ್ರುಗಳಿಗಿಂತ ಅಂತರಂಗ ಶತ್ರುಗಳನ್ನು ಜಯಿಸು.
	ಬಸವೇಶ್ವರರು :	ಹುತ್ತವ ಬಡಿದರೆ ಹಾವು ಸಾವುದೆ ಘೋರ ತಪವ ಮಾಡಿದರೇನು ಅಂತರಂಗ ಆತ್ಮ ಶುದ್ಧಿಯಿಲ್ಲದವರನೆಂತು ನಂಬುವನಯ್ಯ.
೪.	ಮಹಾವೀರರು :	ಹಿಂಸೆ ಮಾಡಬೇಡ, ಕಳ್ಳತನ ಮಾಡಬೇಡ, ಸುಳ್ಳು ಹೇಳಬೇಡ ಪರಿಗ್ರಹ ಬಿಡು, ಬ್ರಹ್ಮಚರ್ಯ ಪಾಲಿಸು. ಈ ವ್ರತಪಾಲನೆಯೇ ಶುದ್ಧ ತಪಸ್ಸಿಗೆ ಹೆದ್ದಾರಿ. ಅಂತರಂಗ ಬಹಿರಂಗಗಳಿಂದ ಎಲ್ಲ ಗ್ರಂಥಿಗಳನ್ನು ತ್ಯಜಿಸು.
	ಬಸವೇಶ್ವರರು :	ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ ಇದೇ ಅಂತರಂಗ ಶುದ್ಧಿ ಇದೇ ಬಹಿರಂಗಶುದ್ಧಿ.
೫.	ಮಹಾವೀರರು :	ವಿನಯದಿಂದ ಸಂಯಮ, ತಪ, ಜ್ಞಾನಪ್ರಾಪ್ತಿ. ಸತ್ಪುರುಷರು

ಸದಾಮೃದುಭಾಷಿಗಳು. ಹಿರಿಯರಲ್ಲಿ, ಗುರುಗಳಲ್ಲಿ ವಿನಯದಿಂದ ವರ್ತಿಸು. ಯಾವ ಭಾಷೆ ಕಠೋರವೋ, ಪರರಿಗೆ ದುಃಖ ತರುವಂತಹುದೋ ಅದು ಸತ್ಯವಾದರೂ ಹೇಳಬೇಡ.

ಬಸವೇಶ್ವರರು : ಮೃದುವಚನವೇ ಸಕಲ ಜಪಂಗಳಯ್ಯ ಮೃದು ವಚನವೇ ಸಕಲ ತಪಂಗಳಯ್ಯ ಸದುವಿನಯವೇ ಸದಾಶಿವನೊಲುಮೆಯಯ್ಯಾ.

೬. ಮಹಾವೀರರು : ಚಿರಕಾಲದಿಂದ ಕೂಡಿಟ್ಟ ಕ್ರೋಧವೆಂಬ ಅಗ್ನಿಯನ್ನು ಕ್ಷಮೆಯೆಂಬ ನೀರಿನಿಂದ ಆರಿಸು. ಈ ರಾಗದ ಬೆಂಕಿ ನಿನ್ನನ್ನು ನಿರಂತರ ಸುಡುತ್ತಿರುತ್ತದೆ. ಕ್ರೋಧ ಮದ ಮಾಯೆ ಲೋಭಗಳು ಪಾಪಕ್ಕೆ ಮೂಲ ಕಾರಣವಾಗಿವೆ, ಬುದ್ಧಿವಂತರು ದೂರವಿರಬೇಕು.

ಬಸವೇಶ್ವರರು : ತನಗೆ ಮುನಿವರಿಗೆ ತಾಮುನಿಯಲೇಕಯ್ಯ ತನಗಾದಆಗೇನು ಅವರಿಗಾದಚೇಗೇನು, ತನುವಿನ ಕೋಪ ತನ್ನ ಹಿರಿಯತನದ ಕೇಡು, ಮನದ ಕೋಪ ತನ್ನ ಅರಿವಿನ ಕೇಡು, ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು.

೭. ಮಹಾವೀರರು : ತಲೆಯನ್ನು ಬೋಳಿಸಿದ ಮಾತ್ರಕ್ಕೆ ಜೈನ ಮುನಿಯಾಗಲಾರ, ಓಂಕಾರ ಕಲಿತ ಮಾತ್ರಕ್ಕೆ ಬ್ರಾಹ್ಮಣನಾಗಲಾರ, ಕಾಡಿನಲ್ಲಿ ವಾಸಮಾಡಿದ ಮಾತ್ರಕ್ಕೆ ಯತಿಯಾಗಲಾರ, ಮನಃಶುದ್ಧಿಯಿಲ್ಲದೆ ಆಡಂಬರವೇಷದಿಂದ ಸಾಧುಧರ್ಮ ಬರದು.

ಬಸವೇಶ್ವರರು : ಗೀತವ ಹಾಡಿದರೇನು ಶಾಸ್ತ್ರಪುರಾಣ ಕೇಳಿದರೇನು ವೇದ ವೇದಾಂತವನೋದಿದರೇನು ಮನವೊಲಿದು ಲಿಂಗಜಂಗಮವ ಪೂಜಿಸಲರಿಯದವರು.

೮. ಮಹಾವೀರರು : ತೀರ್ಥಗಳಲ್ಲಾಗಲಿ ದೇವಾಲಯಗಳಲ್ಲಾಗಲಿ ದೇವರಿಲ್ಲ ಭಗವಂತನಾದರೋ ಈ ದೇಹವೆಂಬ ದೇವಾಲಯದಲ್ಲಿದ್ದಾನೆ.

ಬಸವೇಶ್ವರರು : ಉಳ್ಳವರು ಶಿವಾಲಯವ ಮಾಡಿಹರು ನಾನೇನ ಮಾಡುವೆ ಬಡವನಯ್ಯ ಎನ್ನ ಕಾಲೇ ಕಂಬ ದೇಹವೇ ದೇಗುಲ ಶಿರವೇ ಹೊನ್ನ ಕಳಶವಯ್ಯ.

೯. ಮಹಾವೀರರು : ಜಾತಿ ಇರುವುದು ಒಂದೇ ಒಂದು, ಅದು ಮನುಷ್ಯ ಜಾತಿ. ಆತ್ಮನ ದೃಷ್ಟಿಯಲ್ಲಿ ಎಲ್ಲರೂ ಸಮಾನ, ಮನುಷ್ಯ, ಜನ್ಮದಿಂದ ಅಲ್ಲ, ಕರ್ಮದಿಂದ ಮಹಾನ್ ವ್ಯಕ್ತಿಯಾಗುತ್ತಾನೆ.

ಬಸವೇಶ್ವರರು : ಕೊಲುವವನೇ ಮಾದಿಗ ಹೊಲಸ ತಿಂಬವನೇ ಹೊಲೆಯ ಕುಲವೇನೋ ಅವದಿರ ಕುಲವೇನೋ ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗನ ಶರಣರೇ ಕುಲಜರು.

೧೦. ಮಹಾವೀರರು : ಪವಿತ್ರವೆಂದು ತಿಳಿದು ನದಿ ಸಮುದ್ರಗಳಲ್ಲಿ ಸ್ನಾನ ಮಾಡುವುದು ಮರಳು ಕಲ್ಲುಗಳನ್ನು ರಾಶಿ ಮಾಡಿ ದೇವರೆಂದು ಪೂಜಿಸುವುದು ದೊಡ್ಡ ದೊಡ್ಡ ಗುಡ್ಡಗಳಿಂದ ಬಿದ್ದು ಬೆಂಕಿಯಲ್ಲಿ ಹಾರಿ ಪ್ರಾಣ ಬಿಡುವುದು ಧರ್ಮಕಾರ್ಯವೆನ್ನುತ್ತಾರೆ. ಇವು ಮಿಥ್ಯೆಯೇ ಹೊರತು ಸತ್ಯವಲ್ಲ. ಈ ರೀತಿ ವರ್ತಿಸಬೇಡಿ.

ಬಸವೇಶ್ವರರು : ನೀರ ಕಂಡಲ್ಲಿ ಮುಳುಗುವರಯ್ಯ ಮರನ ಕಂಡಲ್ಲಿ ಸುತ್ತುವರಯ್ಯ ಬತ್ತುವ ಜಲವ ಒಣಗುವ ಮರನ ಮೆಚ್ಚಿದವರು ನಿಮ್ಮನೆತ್ತಬಲ್ಲರು (ಇದಲ್ಲದೆ ತೊರೆಯ ಮೀವಣ್ಣಗಳಿರಾ – ಮುಂತಾದ ವಚನಗಳಲ್ಲೂ ಇದನ್ನು ಸ್ಪಷ್ಟ ಪಡಿಸಿದ್ದಾರೆ).

ಹೀಗೆ ಮಹಾವೀರ ಬಸವೇಶ್ವರರು ಒಂದೇ ನಾಣ್ಯದ ಎರಡು ಮುಖಗಳಂತೆ ಕಾಣುತ್ತಾರೆಂಬುದನ್ನು ಗುರುತಿಸಿದ ಮೇಲೆ, ಅಲ್ಲಿಗೇ ಕರ್ತವ್ಯ ಮುಗಿಯಲಿಲ್ಲ. ಅಲ್ಲಿಂದ ಪ್ರಾರಂಭವಾಗುತ್ತದೆ. ಸಮಾಜವಾದದ ಸೂತ್ರಗಳನ್ನು ಸೇರಿಸಿ, ಸರ್ವೋದಯ ಸಿದ್ಧಾಂತವನ್ನು ಸಾರಿದ ಮಹಾವೀರ–ಬಸವರಿಂದ ಇಂದೂ ನಾನಾ ಸಮಸ್ಯೆಗಳಿಗೆ ನಾವು ಪರಿಹಾರ ಪಡೆಯಬೇಕಾಗಿದೆ. ಮೂಲಭೂತ ಸಮಸ್ಯೆಗಳಲ್ಲಿ ಅರೆ ಪಾಲು ಇನ್ನೂ ಅಂದಿನಂತೆಯೇ ಇವೆ. ನಮ್ಮ ದೇಶದ ಸ್ವಸ್ಥಜೀವನವನ್ನು ಸೀಳಿಕೊಂಡು ಬೃಹದಾಕಾರವಾಗಿ ಬೆಳೆದು ನಿಂತಿರುವ ಜಾತಿಯ ರಾಕ್ಷಸನನ್ನು ಎದುರಿಸುವುದು ಇಂದು ಅತ್ಯಗತ್ಯ. ವಿಷಮಜಾತಿವಿಚ್ಛಿದ್ರವಾದ ಜನಜೀವನದಲ್ಲಿ ಮತ್ತೆ ಸೌಮನಸ್ಯ ತರಬೇಕಾಗಿದೆ. ಶಾಂತಿ ನೆಲೆಯೂರಬೇಕಾದರೆ ಪ್ರತಿಯೊಂದು ಜೀವದ ಹಿರಿಮೆಯನ್ನು ಮಾನ್ಯ ಮಾಡಿದ ವೀರ–ಬಸವೇಶ್ವರರ ವಿವೇಕವಾಣಿ ಮೇಲ್ಪಂಕ್ತಿಯಾಗಬೇಕು. ಜನತೆ ಎಲ್ಲಿಯವರೆಗೆ ತಮ್ಮ ಸಹಮಾನವರನ್ನು ಸಹಿಸಿಕೊಳ್ಳದೆ, ಮುಟ್ಟಿಸಿಕೊಳ್ಳದೆ ದೂರದಲ್ಲೇ ನಿಲ್ಲಿಸುವ ದುಷ್ಟ ಬುದ್ಧಿಯನ್ನು ಸುಟ್ಟು ಬೂದಿ ಮಾಡುವುದಿಲ್ಲವೋ, ಅಲ್ಲಿಯವರೆಗೆ ವರ್ಧಮಾನ–ಬಸವಾದಿಗಳ ಸಲಹೆ ಸೂಚನೆಗಳು ಭಾಷಣಗಳಿಗಷ್ಟೇ ಸೀಮಿತವಾದ ಚುನಾವಣಾಪ್ರಣಾಲಿ ಮಾದರಿಯ ಬುರುಗುಗನಸಾಗೇ, ಜಯಂತಿ ಆಚರಣೆಗಳ ಸ್ವಪ್ನ ರಮ್ಯವಾಗೇ, ವಾಸ್ತವ್ಯದ ಗಟ್ಟಿ ನೆಲಗಟ್ಟಿನ ಮೇಲೆ ಕಾಲೂರದೆಯೇ ನಮ್ಮಿಂದ ದೂರ ಇರುತ್ತವೆ. ಯಾರು ಇವರ ಹೇಳಿಕೆಗಳನ್ನು ಅನುಸರಿಸುವುದಿಲ್ಲವೋ ಅಂತಹವರಿಗೆ ಇವರ ಜಯಂತಿ, ನಿರ್ವಾಣೋತ್ಸವ ಆಚರಿಸುವ ನೈತಿಕ ಹಕ್ಕೂ ಇಲ್ಲ. ಆಚರಿಸಿದರೆ ಅದಕ್ಕೆ ಅರ್ಥಮಹತ್ವವೂ ಇಲ್ಲ.

ಇದಕ್ಕೆ ಮೊದಲು ಮಹಾವೀರರ–ಬಸವಣ್ಣನವರ ಸಿದ್ಧಾಂತಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದ, ಪಾಲಿಸದ ಸ್ವಾಮಿಗಳ, ಮಠಾಧಿಪತಿಗಳ ಸುಧಾರಣೆಯಾಗಬೇಕು: ಅವರ ಕಪಿಮುಷ್ಟಿಯಿಂದ ಜನತೆಗೆ ಬಿಡುಗಡೆ ದೊರೆಯಬೇಕು: ಜನಿವಾರ ಶಿವದಾರಗಳಲ್ಲೇ ಧರ್ಮ ಅಡಗಿದೆಯೆಂಬ ಮೂಢ ನಂಬಿಕೆಗೆ ವಿದಾಯ ಹೇಳಬೇಕು. ಆಮೇಲೆ ಮುಕ್ತ ಮನಸ್ಸಿನ ಸಮೀಕ್ಷೆಗೆ ಅವಕಾಶವಾದೀತು. ಗುಡಿಗುಂಡಾರ ಬಸದಿ ಮಸೀದಿ ಶಿವಾಲಯಗಳನ್ನು ಪೂಜಿಸುವುದರಷ್ಟೇ ಮಹತ್ವದ್ದು, ಮುಖ್ಯವಾದದ್ದು ಸಹಮಾನವರನ್ನು ಸಮಾನವಾಗಿ

ಕಾಣುವುದು ಎಂಬ ತಿಳಿವಳಿಕೆ ನಡವಳಿಕೆಯಲ್ಲಿ ಮೂಡಬೇಕು. ಇಂದು ಶಿಕ್ಷಣ ಸಾರ್ವತ್ರಿಕವಾಗುತ್ತಿದೆ. ಮತದಾನದ ಹಕ್ಕು ಎಲ್ಲರಿಗೂ ಇದೆ. ರಾಜಕೀಯ ಸ್ವಾತಂತ್ರ್ಯಪ್ರಜ್ಞೆ ಜಾಗೃತವಾಗುತ್ತಿದೆ. ಔದ್ಯಮೀಕರಣ ಭರದಿಂದ ಸಾಗಿದೆ. ಇಂಥ ಯಂತ್ರ ನಾಗರೀಕತೆಯಲ್ಲೂ ವರ್ಣಾಶ್ರಮ ವ್ಯವಸ್ಥೆಯ, ಅದೃಶ್ಯ ಸಿದ್ಧಾಂತಗಳ ಅಲೋಕದಲ್ಲಿಯೇ ಉಡ್ಡಯನ ಮಾಡಬೇಕೆ? ಓಟು ಕೇಳುವಾಗ ಜಾತಿಯನ್ನೇ ಅಸ್ತ್ರವಾಗಿ ಆಶ್ರಯಿಸುವುದು ಸರಿಯೆ? ಮಹಾವೀರರ ಬಸವಾದಿ ಮಹಾತ್ಮರು ಸಾರಿದ ಗುಣಕ್ಕೆ ಮನ್ನಣೆ ಕೊಡುವುದು ಎಲ್ಲಿ? ಯಾವಾಗ? ಜಾತಿ ರೋಗವನ್ನು ಮಾನಸಿಕ ಶಸ್ತ್ರಕ್ರಿಯೆ ಮಾಡಿ ಮೂಲೋತ್ಪಾಟನ ಮಾಡಲು ಮಹಾವೀರ ಬುದ್ಧ ಬಸವ ಗಾಂಧಿಗಳು ಆಗಿಹೋದರೂ ಏಕೆ ಸಾಧ್ಯವಾಗಿಲ್ಲ? ಜಾತಿಮಾರಿಗೆ, ಜಾತಿಭೂತಗಳಿಗೆ ನಾನಾ ರೂಪದ ಧೂಪಾರತಿ ಮಾಡುವವರು ಇನ್ನೂ ಇರುವುದರಿಂದ, ಇವರಲ್ಲಿ ಮಹಾವೀರರ ಬಸವೇಶ್ವರರ ಶಿಷ್ಯರೆಂದು ಹೇಳಿಕೊಳ್ಳುವವರೂ ಇದ್ದಾರೆಂಬುದು ವಿಪರ್ಯಾಸದ ಶಿಖರ. ಲೋಕಕಾರುಣ್ಯದ ಚತುರ್ಮುಖಗಳಾದ ಮಹಾವೀರ–ಬುದ್ಧ–ಬಸವ–ಗಾಂಧಿಗಳು ಇನ್ನೂ ಎಷ್ಟು ಸಲ ಹುಟ್ಟಿಬರಬೇಕೊ.

ಕಡೆಗೀಲಿಲ್ಲದ ಬಂಡಿ ಹೊಡೆಗೆಡುವುದ ಮಾಂಬುದೇ?
ಕಡೆಗೀಲು ಬಂಡಿಗಾಧಾರ
ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಡಶರಣರ ನುಡಿಗಡಣವೇ
ಕಡೆಗೀಲು ಕಾಣಾ ರಾಮನಾಥಾ.

–ದೇವರ ದಾಸಿಮಯ್ಯ

❐

ಮಹಾವೀರ : ಬಸವಣ್ಣ

●

ಡಾ. ಶಾಂತಿನಾಥ ದಿಬ್ಬದ

ಮಹಾವೀರ – ಬಸವಣ್ಣ ಇಬ್ಬರೂ ಭಾರತದ ರಾಷ್ಟ್ರೀಯ ಮಹಾಪುರುಷರು. ಇಬ್ಬರೂ ಮಹಾನ್ ಮಾನವತಾವಾದಿಗಳು. ಕ್ರಮವಾಗಿ ಭಾರತದ ಮಟ್ಟದಲ್ಲಿ ಮತ್ತು ಕರ್ನಾಟಕದ ಮಟ್ಟದಲ್ಲಿ ಎರಡು ಜೀವಪರ ದರ್ಶನಗಳ ಬೆಳಕು ಬೀರಿದವರು. ಇವರಿಬ್ಬರನ್ನು ಕುರಿತಾದ ತೌಲನಿಕ ಅಧ್ಯಯನ ತುಂಬ ಕುತೂಹಲಕಾರಿಯಾದ ಮತ್ತು ತುಂಬ ಪ್ರಯೋಜನಕಾರಿಯಾದ ಪರಿಣಾಮಗಳನ್ನು ಒದಗಿಸಬಲ್ಲುದು. ಇವರಿಬ್ಬರೂ ಒಂದೇ ತೆರನಾಗಿದ್ದಾರೆ ಎಂದು ಸಾಧಿಸುವುದಾಗಲಿ, ಒಂದೇ ತೆರನಾಗಿ ಏಕಿಲ್ಲ? ಎಂದು ಪ್ರಶ್ನಿಸುವುದಾಗಲಿ ಈ ಅಧ್ಯಯನದ ಉದ್ದೇಶವಲ್ಲ. ಇಬ್ಬರಲ್ಲಿ ಯಾರು ಪ್ರಾಚೀನರು? ಯಾರು ಶ್ರೇಷ್ಠರು? ಎಂಬುದನ್ನು ನಿರ್ಣಯಿಸುವುದೂ ಈ ಲೇಖನದ ಉದ್ದೇಶವಲ್ಲ. ಎರಡು ಬೇರೆ ಬೇರೆ ಕಾಲಘಟ್ಟಗಳಿಗೆ ಸೇರಿದ ಎರಡು ಬೇರೆ ಬೇರೆ ಪ್ರದೇಶಗಳಿಗೆ ಸೇರಿದ, ಎರಡು ವಿಭಿನ್ನ ದಾರ್ಶನಿಕ ಪಂಥಗಳಿಗೆ ಸೇರಿದ ಈ ಇಬ್ಬರ ವಿಚಾರಗಳು ಇಂದಿಗೆ ಎಷ್ಟರ ಮಟ್ಟಿಗೆ ಪ್ರಚಲಿತವಾಗಿವೆ ಮತ್ತು ಪ್ರಸ್ತುತವಾಗಿವೆಯೆಂಬುದನ್ನು ವಿಶ್ಲೇಷಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಇಂದು ನಮಗೆ ಬೇಕಾಗಿರುವುದು ವಿಚಾರಗಳ ಸಂಘಟನೆಯೇ ಹೊರತು ವಿಘಟನೆಯಲ್ಲ. ಕಾರಣ ಇಂಥ ಚರ್ಚೆಗಳು ಹೊಸ ವಿಚಾರಕ್ಕೆ ವಿವೇಕಕ್ಕೆ ದಾರಿ ಮಾಡಿಕೊಡಬೇಕೇ ಹೊರತು ವಿರಸಕ್ಕಲ್ಲ. ಇಂಥ ವ್ಯಾಪಕ ಹಿನ್ನೆಲೆಯನ್ನಿರಿಸಿಕೊಂಡು ಮಾಡಲಾದ ಸ್ಥೂಲ ಅಧ್ಯಯನದ ಸಾರ ಈ ಪ್ರಬಂಧವಾಗಿದೆ. ಸೂಕ್ಷ್ಮ ಅಧ್ಯಯನದ ಫಲಿತಗಳನ್ನು ಒಂದೆಡೆ ಸಂಗ್ರಹಿಸಿದರೆ ಅದೊಂದು ಮೌಲಿಕ ಕೃತಿಯಾಗಬಲ್ಲುದು, ಪ್ರಸ್ತುತ್ತ ಕೆಲವು ಮುಖ್ಯಾಂಶಗಳ ಸುತ್ತ ಮಾತ್ರ ನಮ್ಮ ಚರ್ಚೆ ಹರಡಿಕೊಂಡಿದೆ. ಒಂದು ಬಗೆಯ ತಟಸ್ಥತಲ್ಲೀನತೆಯ ಭಾವದೊಂದಿಗೆ ಈ ಚರ್ಚೆಯನ್ನು ಮಾಡಲಾಗಿದೆ. ಇಬ್ಬರನ್ನೂ ಒಮ್ಮೆ 'ಇವನಾರವ?' ಎಂದು ಕೇಳುವ, ಇನ್ನೊಮ್ಮೆ 'ಇವ ನಮ್ಮವ' ಎಂದು ಒಪ್ಪಿಕೊಳ್ಳುವ, ಮುಂದುವರೆದು 'ಇವ ಏಕೆ ನಮ್ಮವ?' ಎಂದು ಪ್ರಶ್ನಿಸುವ ಕೆಲಸವನ್ನಿಲ್ಲಿ ಮಾಡಲಾಗಿದೆ. ಈ ಬಗೆಯ ಸಕಾರಣವಾದ ವಿಶ್ಲೇಷಣೆಗಾಗಿ ನಾನು ನನ್ನದೇ ಆದ ಒಂದು ಕ್ರಮವನ್ನು ರೂಪಿಸಿಕೊಂಡಿದ್ದೇನೆ.

೧. ಮಹಾವೀರ ಬಸವಣ್ಣ ಇವರ ವೈಯಕ್ತಿಕ ಬದುಕು–ಜನ್ಮವಿಚಾರ
೨. ಇಬ್ಬರ ತಾತ್ತ್ವಿಕ ವಿಚಾರಗಳು
೩. ಇಬ್ಬರ ಸಮಾಜ ಸಂಬಂಧಿ ಚಟುವಟಿಕೆಗಳು
೪. ಇಬ್ಬರ ಆರ್ಥಿಕ ವಿಚಾರಗಳು
೫. ಇಬ್ಬರ ಸ್ತ್ರೀಪರ ನಿಲುವುಗಳು.
೬. ಇಬ್ಬರೂ ಎದುರಿಸಿದ ಸಮಸ್ಯೆ–ಸವಾಲುಗಳು
೭. ಎರಡೂ ವಿಚಾರಧಾರೆಗಳ ನಡುವಿನ ಸಂಘರ್ಷ
೮. ಇಬ್ಬರನ್ನು ಕುರಿತಾಗಿ ರಚನೆಯಾಗಿರುವ ಸಾಹಿತ್ಯ

ಈ ಎಲ್ಲ ಅಂಶಗಳ ಬೆಳಕಿನಲ್ಲಿ ಮಹಾವೀರ–ಬಸವಣ್ಣನವರ ವಿಚಾರಧಾರೆಗಳ ಪ್ರಸ್ತುತತೆಯನ್ನು ಹೆಚ್ಚು ಸ್ಫುಟವಾಗಿ ಗ್ರಹಿಸಬಹುದಾಗಿದೆ. ಪ್ರತಿಯೊಂದು ವಿಭಾಗದ ಮುಖ್ಯ ವಿಚಾರಗಳು ಹೀಗಿವೆ:

೧. ಮಹಾವೀರ–ಬಸವಣ್ಣ ಇವರ ವೈಯಕ್ತಿಕ ಬದುಕು–ಜನ್ಮವಿಚಾರ : ಇಬ್ಬರಲ್ಲಿ ಸುಮಾರು ೧೮೦೦ ವರ್ಷಗಳಷ್ಟು ಅಂತರವಿದೆ. ಮಹಾವೀರ ಹುಟ್ಟಿದ್ದು ಕ್ರಿ.ಪೂ. ೬ನೆಯ ಶತಮಾನದಲ್ಲಿ, ಬಿಹಾರದ ಕುಂಡಲಪುರದಲ್ಲಿ, ಜೈನ ಕುಟುಂಬದಲ್ಲಿ. ಮಹಾವೀರ ಬಾಲ್ಯದಿಂದಲ್ಲೇ ಧಾರ್ಮಿಕ ಪ್ರವೃತ್ತಿಯವನಾಗಿದ್ದ. ವಿರಕ್ತಭಾವ ಬಾಲ್ಯದಿಂದಲ್ಲೇ ಅವನನ್ನು ಆವರಿಸಿತ್ತು. ಲಗ್ನವನ್ನು ತಿರಸ್ಕರಿಸಿದ ಮಹಾವೀರ ಬ್ರಹ್ಮಚಾರಿಯಾಗಿದ್ದ. ಸಮಸ್ತ ರಾಜಸುಖವು ತನಗೆ ಲಭ್ಯವಿತ್ತು. ಆದರೆ ಮಹಾವೀರ ಅದನ್ನು ತಿರಸ್ಕರಿಸಿದ. ತನ್ನ ತಾರುಣ್ಯದಲ್ಲಿ ಅಂದರೆ ೩೦ನೆಯ ವರ್ಷದಲ್ಲಿ ದೀಕ್ಷಾಧಾರಿಯಾಗಿ ೧೨ ವರ್ಷಗಳ ಕಾಲ ಉಗ್ರ ತಪಸ್ಸು ನಡೆಸಿದ. ನಂತರ ೩೦ ವರ್ಷಗಳ ಕಾಲ ಲೋಕಸಂಚಾರ ಮಾಡಿದ. ಜೈನ ಧರ್ಮದ ಪ್ರಚಾರ ಪ್ರಸಾರ ಮಾಡಿದ. ಮಹಾವೀರನಾಗಿ ಹುಟ್ಟುವುದಕ್ಕಿಂತ ಮೊದಲು ೩೦ ಭವಗಳನ್ನು ದಾಟಿ ಬಂದಿದ್ದನೆಂದು ಜೈನ ಧರ್ಮ ನಂಬುತ್ತದೆ. ಪಾಪ–ಪುಣ್ಯ, ಪುನರ್ಜನ್ಮ ಮೊದಲಾದುವುಗಳನ್ನು ಜೈನ ಧರ್ಮವು ಒಪ್ಪುತ್ತದೆ. ಕಾರಣ ಜೀವಿಗಳಿಗೆ ಅದರದರ ಪಾಪ–ಪುಣ್ಯಕ್ಕನುಸಾರವಾಗಿ ಪುನರ್ಜನ್ಮಗಳಾಗುತ್ತವೆ ಎಂದು ಅದು ತಿಳಿಯುತ್ತದೆ. ಈ ಸಂದರ್ಭದಲ್ಲಿ ಒಂದು ಸ್ಪಷ್ಟೀಕರಣ ಕೊಡುವುದು ಉಚಿತವೆಂದು ತೋರುತ್ತದೆ. ಅದೇನೆಂದರೆ ಮಹಾವೀರನೇ ಜೈನಧರ್ಮದ ಸಂಸ್ಥಾಪಕನೆಂದು ಕೆಲವರು ಭಾವಿಸಿದ್ದಾರೆ. ಆದರೆ ಅದು ಸರಿಯಾದ ತಿಳುವಳಿಕೆಯಲ್ಲ. ತನಗಿಂತ ತುಂಬ ಪ್ರಾಚೀನವಾದ ಜೈನ ಧರ್ಮವನ್ನು ಮಹಾವೀರ ಪುನರುಜ್ಜೀವನಗೊಳಿಸಿದ.

ಬಸವಣ್ಣ ಹುಟ್ಟಿದ್ದು ಕ್ರಿ.ಶ. ೧೨ನೆಯ ಶತಮಾನದಲ್ಲಿ ಕರ್ನಾಟಕದ ಬಾಗೇವಾಡಿಯ ಒಂದು ಬ್ರಾಹ್ಮಣ ಕುಟುಂಬದಲ್ಲಿ. ಬಸವಣ್ಣನೂ ಬಾಲ್ಯದಿಂದಲೇ ವೈಚಾರಿಕ ಪ್ರವೃತ್ತಿಯವನಾಗಿದ್ದ. ಬಸವಣ್ಣ ಸಂಸಾರಿಯಾಗಿದ್ದು ಸಂಸಾರದಲ್ಲಿದ್ದುಕೊಂಡೇ ಸಮಾಜ ಸುಧಾರಣೆ ಮಾಡಲು ಪ್ರಯತ್ನಿಸಿದ. ಬಿಜ್ಜಳನ ಆಸ್ಥಾನದಲ್ಲಿ ಭಂಡಾರಿಯಾಗಿದ್ದ. ಜಂಗಮ ಪ್ರೇಮಿಯಾಗಿದ್ದ. ಅವನು ಭಕ್ತರ ಭಕ್ತನಾಗಿದ್ದ. ಹಳೆಯ ಶೈವಮತವನ್ನು ಪರಿಷ್ಕರಿಸಿ ವೀರಶೈವವೆಂಬ ಹೊಸ ಮತವನ್ನು ಕರ್ನಾಟಕದಲ್ಲಿ ಸ್ಥಾಪಿಸಿದ.

ಮಹಾವೀರ–ಬಸವಣ್ಣ ಇವರಿಬ್ಬರ ಜನನಕ್ಕೆ ಸಂಬಂಧಿಸಿದಂತೆ ಎರಡೂ ಪರಿಸರಗಳಲ್ಲಿರುವ ಸಮಾನಾಂಶವು ತುಂಬ ಕುತೂಹಲಕಾರಿಯಾಗಿವೆ. ವಿವಿಧ

ಪಾಪಕರ್ಮಗಳನ್ನು ಮಾಡಿದ ಕಾರಣವಾಗಿ ಮಹಾವೀರರು ಕೀಳು ಮಟ್ಟದ ಜೀವಿಯಾಗಿ ೩೦ ಭವಗಳನ್ನು ಕಳೆಯಬೇಕಾಯಿತೆಂದು ಜೈನ ಪುರಾಣಗಳು ತಿಳಿಸುತ್ತವೆ. ಬಸವಣ್ಣನಾದರೋ ಕೈಲಾಸಪರ್ವತದ ಶಿವನ ಒಡ್ಡೋಲಗದಲ್ಲಿ ವೃಷಭಮುಖನೆಂಬ ವ್ಯಕ್ತಿಯಾಗಿದ್ದ ಗಣಂಗಳಿಗೆ ಹೂವು ಹಂಚುವ ಸಂದರ್ಭದಲ್ಲಿ ಸ್ಕಂದನಿಗೆ ಹೂವು ಕೊಡಲಾರದ ತಪ್ಪಿಗಾಗಿ ಶಿವನ ಆದೇಶದಂತೆ ಭೂಲೋಕದಲ್ಲಿ ಬಸವಣ್ಣನಾಗಿ ಜನಿಸಿ ಬಂದ! ಇಬ್ಬರೂ ದೋಷಗಳಿಂದ ಪುನರ್ಜನ್ಮಗಳಿಗೆ ಗುರಿಯಾದರು. ದೋಷರಹಿತವಾಗಿ ಬದುಕನ್ನು ಸಾಗಿಸಿದ ಕಾರಣವಾಗಿ ಇಬ್ಬರಿಗೂ ಮೋಕ್ಷ ಸಾಧ್ಯವಾಯಿತು ಎಂಬ ವಿಚಾರ ಇಬ್ಬರ ಸಂದರ್ಭದಲ್ಲೂ ಸಾಮಾನ್ಯವಾಗಿರುವಂತೆ ಕಂಡು ಬರುತ್ತದೆ. ಏನಿದ್ದರೂ ಇಬ್ಬರ ಜನನದ ಉದ್ದೇಶ ಮಾತ್ರ ಒಂದೇ. ಆತ್ಮವಿಕಸನ, ಪರಮಾತ್ಮ ಪ್ರಕಾಶನ ಮತ್ತು ಲೋಕಕಲ್ಯಾಣ! ಎರಡೂ ದರ್ಶನಗಳಲ್ಲಿ ಪುನರ್ಜನ್ಮದ ಕಲ್ಪನೆಯಿದೆ. ಅವು ಪಾಪ ಪ್ರಾಯಶ್ಚಿತ್ತದ ಶಿಕ್ಷೆಗಳು ಎಂಬ ಭಾವನೆಯಿದೆ.

೨. ಇಬ್ಬರ ತಾತ್ತ್ವಿಕ ವಿಚಾರಗಳು : ಮಹಾವೀರ-ಬಸವಣ್ಣ ಇಬ್ಬರೂ ಪ್ರಖರ ವಿಚಾರವಾದಿಗಳು, ಶ್ರೇಷ್ಠ ಚಿಂತಕರು. ಇಬ್ಬರೂ ಜಡತ್ವವನ್ನು ವಿರೋಧಿಸಿದವರು. ಮಾನವೀಯತೆ ಮತ್ತು ಸಾಮಾಜಿಕತೆಗಳು ಈ ಇಬ್ಬರ ವಿಚಾರಧಾರೆಗಳ ಜೀವದ್ರವ್ಯಗಳಾಗಿವೆ.

ಜೈನಧರ್ಮವು ವೃಷಭನಾಥನಷ್ಟು ಪ್ರಾಚೀನವಾದರೂ ಆ ಕಾಲಘಟ್ಟವನ್ನು ಖಚಿತವಾಗಿ ಗುರುತಿಸುವುದು ಕಷ್ಟ. ಅದರ ಸ್ಪಷ್ಟವಾದ ಮತ್ತು ಐತಿಹಾಸಿಕ ಕುರುಹುಗಳು ನಮಗೆ ದೊರೆಯುವುದು ಮಹಾವೀರರ ಕಾಲದಲ್ಲಿಯೇ. ಅದೇ ರೀತಿ ವೀರಶೈವಧರ್ಮವು ಆಗಮಗಳಷ್ಟು ಪ್ರಾಚೀನ ಎಂದು ನಂಬಲಾಗುತ್ತದೆಯಾದರೂ ಅದರ ಸ್ಪಷ್ಟ ಕುರುಹುಗಳು ಕಾಣುವುದು ಬಸವಣ್ಣನವರ ಕಾಲದಲ್ಲಿಯೇ.

ಮಹಾವೀರ-ಬಸವಣ್ಣ ಇಬ್ಬರೂ ಸ್ವಭಾವತಃ ಪ್ರತಿಭಟನಕಾರರು, ಬಂಡಾಯ ಮನೋಧರ್ಮದವರು. ಇಬ್ಬರೂ ವೇದವಿರೋಧಿಗಳು, ಪ್ರಗತಿಪರರು. ಜೈನ ಧರ್ಮವು ವೈದಿಕ ಧರ್ಮದ ಜಡವಾದ ವಿಚಾರ ಮತ್ತು ಆಚರಣೆಗಳನ್ನು ಖಂಡಿಸಿತು. ಯಜ್ಞ-ಯಾಗಾದಿಗಳನ್ನು ತಿರಸ್ಕರಿಸಿತು. ಜನಹಿತಕ್ಕೆ ವಿರುದ್ಧವೆನ್ನಿಸಿದ ವೇದಗಳ ವಿಚಾರಗಳನ್ನು ಖಂಡಿಸಿತು. ವೃಷಭನಿಂದ ಸಾಗಿ ಬಂದ ಈ ಪ್ರಕ್ರಿಯೆಯನ್ನು ಮಹಾವೀರರು ಕೂಡ ತುಂಬ ಪ್ರಭಾವಶಾಲಿಯಾದ ರೀತಿಯಲ್ಲಿ ಮುಂದುವರೆಸಿದರು. ವೇದಗಳನ್ನು ವಿರೋಧಿಸಿದ ಕಾರಣವಾಗಿ ಜೈನರು 'ನಾಸ್ತಿಕ'ರೆಂದು ಕರೆಯಿಸಿಕೊಳ್ಳಬೇಕಾಯಿತು "ನಾಸ್ತಿಕೋ ವೇದನಿಂದಕಾಃ" ಅಂದರೆ ವೇದಗಳನ್ನು ನಿಂದಿಸುವವರೆಲ್ಲ ನಾಸ್ತಿಕರೇ ಎಂಬ ವಿಮರ್ಶಾಸೂತ್ರವನ್ನು ಜೈನರಿಗೂ ಅನ್ವಯಿಸಲಾಯಿತು.

ಇತ್ತ ಬಸವಣ್ಣನಂತೂ ತೀರ ಬಹಿರಂಗವಾದ ರೀತಿಯಲ್ಲಿ ವೇದಗಳ ಸ್ಥಾನಮಾನವನ್ನು ಪ್ರಸ್ನಿಸಿದ. "ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯಿವೆ" ಎಂದು ಜಡಸಂಸ್ಕೃತಿಯ ಮುಖವಾಣಿಗಳನ್ನು ನೇರವಾಗಿ ಖಂಡಿಸಿದ. ಅದರ ಸ್ಥಾನದಲ್ಲಿ ಚಲನಶೀಲವಾದ ಜನತಾ ಸಂಸ್ಕೃತಿಯನ್ನು ಪ್ರತಿಪಾದಿಸಿದ. ಇದೇ ರೀತಿ ಇನ್ನೂ ಅನೇಕ ವಿಚಾರಗಳಲ್ಲಿ ಸಂಧಿಸಿರುವ ಮಹಾವೀರ-ಬಸವಣ್ಣನವರ ತಾತ್ತ್ವಿಕ ವಿಚಾರಗಳನ್ನು ಈ ಕೆಳಗಿನಂತೆ ಸಂಗ್ರಹಿಸಿ ಗುರುತಿಸಬಹುದು.

ಅ) ಜೀವ : 'ಜೀವ'ನನ್ನು ಜೈನರು 'ಜೀವಾತ್ಮ' ಎನ್ನುತ್ತಾರೆ. ಆತ್ಮವು ಅನಾದಿ-ಅನಂತ

ಚೈತನ್ಯಸ್ವರೂಪಿ. ಅದು ಸೃಷ್ಟಿಯ ಸಹಜರೂಪ. ಅಜೀವದೊಂದಿಗೆ ಸೇರಿಕೊಂಡಾಗ ಅದು ದೇಹರೂಪ ಪಡೆದುಕೊಳ್ಳುತ್ತದೆ. ಕೆಲವೊಮ್ಮೆ ಅದು ಕರ್ಮದಿಂದ ಬಂಧಿತವಾಗುತ್ತದೆ. ಆ ಬಂಧನಕ್ಕೆ ಅನುಸಾರವಾಗಿ ಅದು ದೇವ, ಮಾನವ, ನಾರಕಿ, ತಿರ್ಯಕ್ ಎಂಬ ನಾಲ್ಕು ಗತಿಗಳಲ್ಲಿ ಪರಿಭ್ರಮಿಸುತ್ತದೆಯೆಂದು ಜೈನರು ನಂಬುತ್ತಾರೆ.

ವೀರಶೈವರು 'ಜೀವ'ನನ್ನು 'ಲೋಕ ನಿಯಂತ್ರಕ ಶಕ್ತಿಯಾದ ಲಿಂಗದಿಂದ ಹುಟ್ಟಿದೆ' ಎಂದು ಭಾವಿಸುತ್ತಾರೆ. ಸೃಷ್ಟಿಯನ್ನು ಹುಟ್ಟಿಸಿದ ಶಕ್ತಿಯ ಸ್ಫುರಣದಿಂದ ಹೊರಹೊಮ್ಮಿದ ಆತ್ಮವು ಅನುರೂಪದ ದೇಹರೂಪ ಪಡೆಯುತ್ತ ಹೋಗುತ್ತದೆ. ಕೆಲವೊಮ್ಮೆ ಅದು ಮಲತ್ರಯದಿಂದ ಬಂಧಿತವಾಗುತ್ತದೆ. ಇಲ್ಲಿಯ ಜೈನರ ಕರ್ಮವು ವೀರಶೈವರ 'ಮಲ'ದ ಹಾಗೆ ಕಾಣುತ್ತದೆ. ಕರ್ಮಬಂಧದಿಂದ ಆತ್ಮನ ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಅನಂತ–ಸುಖಗಳು ಮಸಳಿಸುತ್ತವೆಯೆಂದು ಜೈನರು ಭಾವಿಸಿದರೆ, ಮಲಾವರಣದಿಂದ ಆತ್ಮನ ಸರ್ವವ್ಯಾಪಕತ್ವ, ಸರ್ವಜ್ಞತ್ವ, ಸರ್ವಕರ್ತೃತ್ವಗಳು ಕುಂಠಿತವಾಗುತ್ತವೆಯೆಂದು ವೀರಶೈವರು ಭಾವಿಸುತ್ತಾರೆ. ಜೀವಾತ್ಮನ ವಿಕಾಸನಕ್ಕೆ ಎರಡೂ ಧರ್ಮಗಳು ಮುಕ್ತ ಅವಕಾಶ ನೀಡುತ್ತವೆ. ಆತ್ಮನೇ ಪರಮಾತ್ಮನಾಗಬಲ್ಲನೆಂಬುದನ್ನು ಎರಡೂ ದರ್ಶನಗಳು ಒಪ್ಪುತ್ತವೆ. 'ಜೀವ'ನ ಸರ್ವಸ್ವಾಮ್ಯ ಮತ್ತು ಸ್ವಾವಲಂಬಿತ್ವವನ್ನು ಎರಡೂ ಧರ್ಮಗಳು ಎತ್ತಿ ಹಿಡಿಯುತ್ತವೆ. ಬಸವಣ್ಣನಂತೂ 'ನಾ ದೇವನಲ್ಲದೆ ನೀ ದೇವನೇ'? ಎಂದು ಪ್ರಶ್ನಿಸಿ ಬಿಡುತ್ತಾನೆ. ದೈವತ್ವಕ್ಕೆ ತಲೆಬಾಗುವ ನೆಪದಲ್ಲಿ ಆತ್ಮನು ಕೀಳರಿಮೆಯನ್ನು ಅನುಭವಿಸುವಂತಾಗಬಾರದು ಎಂದು ಸ್ವಾಭಿಮಾನಿ ಪ್ರಜ್ಞೆಯನ್ನು ಜೈನ–ವೀರಶೈವಗಳೆರಡೂ ಬೆಳೆಸಿವೆ.

ಆ) ಜಗತ್ತು : ಈ ಜಗತ್ತು ತಾನಾಗಿ ಅಸ್ತಿತ್ವಕ್ಕೆ ಬಂದಿದೆ. ಇದು ಅನಾದಿ–ಅನಂತ. ತಿಲೋಯಪಣ್ಣತ್ತಿ ಮೊದಲಾದ ಜೈನ ಕೃತಿಗಳಲ್ಲಿ ಸೃಷ್ಟಿಯ ಕುರಿತ ಖಚಿತ ವಿಚಾರಗಳಿವೆ. ಅಷ್ಟೇ ಅಲ್ಲ, ಜೈನರು ತಮ್ಮದೇ ಆದ ಭೂಗೋಲವನ್ನೇ ಹೊಂದಿದ್ದಾರೆ.

ವೀರಶೈವವು ಸೃಷ್ಟಿಯ ಆವಿರ್ಭಾವಕ್ಕೆ ಕಾರಣವಾದ ಒಂದು ಶಕ್ತಿಯನ್ನು ದೈವತವೆಂದು ನಂಬುತ್ತದೆ. ಇಲ್ಲಿಯೂ ಸೃಷ್ಟಿವಚನಗಳಿವೆ. ಆದರೆ ಜೈನರಷ್ಟು ಖಚಿತತೆಯಿಲ್ಲ. ಏನಿದ್ದರೂ ಸೃಷ್ಟಿಯ ಕುರಿತಾದ ಎರಡೂ ಧರ್ಮಗಳ ವಿಚಾರಗಳನ್ನು ವಿಜ್ಞಾನದ ಒರೆಗಲ್ಲಿಗೆ ಹಚ್ಚಿದ ಮೇಲೆ ಮಾತ್ರ ನಂಬಬಹುದು.

ಇ) ಈಶ್ವರ : ಮಹಾವೀರ–ಬಸವಣ್ಣ ಇಬ್ಬರೂ ಮಂದಿರ ನಿರ್ಮಾಣ, ವಿಗ್ರಹಾರಾಧನೆಗಳನ್ನು ಒಪ್ಪಿರಲಿಲ್ಲ. ಜೈನರಲ್ಲಿ ದೇವರಿಗೆ ಸ್ಥಾನವಿಲ್ಲ. ಅಲ್ಲಿ ದೈವತ್ವದ ಕಲ್ಪನೆಯು ಕೇವಲ ಒಂದು ಆದರ್ಶ, ಒಂದು ಸ್ಫೂರ್ತಿ ಅಷ್ಟೆ. ಅದೇ ಸರ್ವಸ್ವವಲ್ಲ. ಸದ್ಗುಣಿಯಾದವನೇ ಪರಮಾತ್ಮ ಎಂದು ಹೇಳುವ ಜೈನ ಧರ್ಮವು ಗುಣವನ್ನು ಪೂಜಿಸುತ್ತದೆ. ದೇವರು ಏನನ್ನೂ ಕೊಡಲಾರ. ಏನನ್ನೂ ಸ್ವೀಕರಿಸಲಾರನೆಂದು ಜೈನರು ಭಾವಿಸುತ್ತಾರೆ. ದೇವ, ಮಾನವ, ನಾರಕಿ, ತಿರ್ಯಕ್ ಎಂದು ಜೈನರು ಜೀವಿಯ ನಾಲ್ಕು ಗತಿಗಳನ್ನು ಗುರುತಿಸುತ್ತಾರೆ. ದೈವತ್ವವೇ ಅಲ್ಲಿ ಅಂತಿಮ ಗುರಿ ಹೌದು. ಆದರೆ ಅದನ್ನು ಸಾಧಿಸಲು ಮನುಷ್ಯತ್ವವೇ ಆಗಬೇಕೆಂದು ವಾದಿಸುವಲ್ಲಿ ಜೈನರು ದೇವಾತ್ಮನಿಗಿಂತ ಹೆಚ್ಚಿನ ಸ್ಥಾನವನ್ನು ಜೀವಾತ್ಮನಿಗೆ ಕೊಡುತ್ತಾರೆ.

ಬಸವಣ್ಣ "ದೇವಲೋಕ ಮರ್ತ್ಯಲೋಕ–ಬೇರಿಲ್ಲ ಕಾಣಿರೋ ಸತ್ಯವ ನುಡಿವುದೆ ದೇವಲೋಕ, ಮಿಥ್ಯವ ನುಡಿವುದೆ ಮರ್ತ್ಯಲೋಕ" ಎಂದಿದ್ದಾನಲ್ಲದೆ "ಇಲ್ಲಿ ಸಲ್ಲುವವರು

ಅಲ್ಲಿಯೂ ಸಲ್ಲುವರು" ಎಂದಿದ್ದಾನೆ. ಈ ಮಾತಿನಲ್ಲಿ 'ವ್ಯಕ್ತಿ ಮೊದಲು ಇಲ್ಲಿ ಸಲ್ಲಬೇಕು' ಎಂಬ ಅರ್ಥವಿದ್ದು ಮನುಷ್ಯಜನ್ಮ, ಮರ್ತ್ಯಲೋಕವೇ ಶ್ರೇಷ್ಠವೆಂಬ ಭಾವನೆಯಿದೆ. ಶಿವಲಿಂಗವನ್ನು ಬಸವಣ್ಣ ಪರಮದೈವವೆಂದು ನಂಬುತ್ತಾನೆ. ಉಳ್ಳವರು ಶಿವಾಲಯ ಮಾಡುವರು, ನಾನೇನು ಮಾಡಲಿ ಬಡವನಯ್ಯ, ಎನ್ನ ಕಾಲೇ ಕಂಬ, ದೇಹವೇ ದೇಗುಲ" ಎನ್ನುವ ಬಸವಣ್ಣ ತನ್ನ ಶರೀರವನ್ನೇ ದೇವಾಲಯವೆಂದೂ ಒಳಗಿರುವ ಆತ್ಮವನ್ನೇ ಪರಮಾತ್ಮನೆಂದು ಭಾವಿಸುತ್ತಾನೆ. ಎರಡೂ ಧರ್ಮಗಳು ಆತ್ಮನ ಮನೋಬಲವನ್ನು ಹೆಚ್ಚಿಸುವ ಪ್ರಯತ್ನ ಮಾಡಿರುವುದನ್ನು ನಾವು ತಪ್ಪದೆ ಗುರುತಿಸಬೇಕು. ಅರಿವು–ಆಚಾರಗಳಿಗೆ ಮಹಾವೀರ–ಬಸವಣ್ಣ ಇಬ್ಬರೂ ಹೆಚ್ಚಿನ ಸ್ಥಾನ ನೀಡಿದ್ದಾರೆ. 'ಅರಿವೇ ಗುರು' 'ಆಚಾರವೇ ಸ್ವಗ, ಅನಾಚಾರವೇ ನರಕ' ಎಂಬುದು ಬಸವಣ್ಣನ ಸ್ಪಷ್ಟ ವಿಚಾರವಾಗಿದ್ದಿತು. ಜೈನರು ತಮ್ಮ 'ರತ್ನತ್ರಯ' ಎಂಬ ಸಿದ್ಧಾಂತದಲ್ಲಿ ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ ಮತ್ತ ಸಮ್ಯಕ್ ಚಾರಿತ್ರ್ಯ ಎಂಬ ಅಂಶಗಳಿಗೆ ಅತಿ ಹೆಚ್ಚಿನ ಮಹತ್ವ ನೀಡಿದ್ದಾರೆ. ಜೈನ 'ಆಚಾರಾಂಗ', 'ಶ್ರಾವಕಾಚಾರ' ಮೊದಲಾದ ಕೃತಿಗಳು ಸದ್ವಿಚಾರ–ಸದ್ವರ್ತನೆಗಳ ಮಹತ್ವವನ್ನು ಪ್ರತಿಪಾದಿಸಲೆಂದೇ ಹುಟ್ಟಿದ ಕೃತಿಗಳಾಗಿವೆ.

ಈ) ಜೀವದಯೆ – ಅಹಿಂಸೆ : ಮಹಾವೀರ ಮತ್ತು ಬಸವಣ್ಣನವರ ತಾತ್ತ್ವಿಕ ವಿಚಾರಗಳಲ್ಲಿ ಅತ್ಯಂತ ಮಹತ್ವದ್ದೆಂದರೆ ಜೀವದಯೆ ಮತ್ತು ಅಹಿಂಸಾ ತತ್ವವಾಗಿದೆ. ಇವರಿಬ್ಬರೂ ಮಹನೀಯರು ಈ ವಿಚಾರವನ್ನು ಕೇವಲ ಮನುಷ್ಯಜೀವಿಗಳಿಗಷ್ಟೇ ಸೀಮಿತಗೊಳಿಸಿಲ್ಲ. ಅದನ್ನು ಇಡೀ ಜಗತ್ತಿನ ಜೀವಕೋಟಿಗೆಲ್ಲ ಅನ್ವಯಿಸಿದ್ದಾರೆ. ನಿಜವಾಗಿ ಇವರ ಘನತೆ ಹೆಚ್ಚಾಗಿರುವುದು ಈ ಬಗೆಯ ವಿಶಾಲ ಮನೋಭಾವದಿಂದಲೇ ಎನ್ನಬಹುದು.

ಜೈನರಿಗೆ 'ಅಹಿಂಸಾ ಪರಮೋಧರ್ಮಃ' ಎಂಬುದು ದಿವ್ಯಮಂತ್ರವಾಗಿದ್ದಿತು. ಜೀವದಯೆಯೇ ಜೈನಧರ್ಮ ಎಂಬುದು ಅದರ ನಿಲುವು. 'ಜೈನರ ಪ್ರಕಾರ ಅಹಿಂಸೆ ಎಂಬುದು ಒಂದು ವ್ರತ. ಒಂದು ಪ್ರತಿಜ್ಞೆ'. ಯಾವುದೇ ಪ್ರಾಣಿ, ಕ್ರಿಮಿಕೀಟ, ಪಶುಪಕ್ಷಿ, ಗಿಡಮರಗಳನ್ನು ನೋಯಿಸಕೊಡದೆಂದು ಜೈನಧರ್ಮವು ಕಟ್ಟಾಜ್ಞೆ ವಿಧಿಸುತ್ತದೆ. ಪ್ರಪಂಚದಲ್ಲಿ ಪಶುಪಕ್ಷಿಗಳಿಗೂ, ಗಿಡಮರಗಳಿಗೂ ಪ್ರಾಣವಿದೆ. ಅವುಗಳಿಗೂ ಬದುಕುವ ಸಮಾನ ಹಕ್ಕಿದೆ. ಏಕೇಂದ್ರಿಯದಿಂದ ತೊಡಗಿ ಪಂಚೇಂದ್ರಿಯದ ವರೆಗಿನ ಯಾವುದೇ ಜೀವಿಯನ್ನು ಯಾವುದೇ ರೀತಿಯಲ್ಲಿ ನೋಯಿಸಬಾರದೆಂಬುದು ಜೈನ ಸಿದ್ಧಾಂತದ ವಾದವಾಗಿದೆ. ಕೊಲ್ಲುವುದಷ್ಟೇ ಹಿಂಸೆಯಲ್ಲ. ಇನ್ನೊಬ್ಬರೊಂದಿಗೆ ಒರಟಾಗಿ ಮಾತನಾಡುವುದೂ ಹಿಂಸೆ ಎನ್ನುವಷ್ಟು ಸೂಕ್ಷ್ಮಸ್ತರದಲ್ಲಿ ಜೈನಧರ್ಮವು ಅಹಿಂಸಾತತ್ತ್ವವನ್ನು ವಿಸ್ತರಿಸಿದೆ. ಸ್ವಾರ್ಥವೇ ಹಿಂಸೆಗೆ ಕಾರಣವೆನ್ನುತ್ತದೆ ಜೈನ ಧರ್ಮ. ಇಚ್ಛಾಪೂರ್ವಕವಾಗಿ ಸ್ವಾರ್ಥಗಳನ್ನು ಕಿತ್ತೆಸೆಯುವುದೇ ಅಹಿಂಸೆ. ಜೀವಗಳಿಗೆ ಕೇಡುಮಾಡದಿರುವುದಷ್ಟೇ ಅಹಿಂಸೆಯಲ್ಲ. ಅವುಗಳಿಗೆ ಹಿತವನ್ನು ಬಯಸುವುದೂ ಅಹಿಂಸೆಯೇ. ಹಿಂಸೆ–ಅಹಿಂಸೆಯ ವಿಶ್ಲೇಷಣೆಯನ್ನು ಜೈನರಷ್ಟು ಆಳವಾಗಿ ಮಾಡಿದ ಧರ್ಮ ಬಹುಶಃ ಬೇರೊಂದಿಲ್ಲ ಎನ್ನಬಹುದು. ಒಂದೆರಡು ಮಾತುಗಳಲ್ಲಿ ಅದನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಅಹಿಂಸಾ ವ್ರತದ ಪಾಲನೆಗಾಗಿ ಜೈನದರ್ಶನವು ಈ ಕೆಳಗಿನ ವಿಧಿಗಳನ್ನು ಜಾರಿಗೆ ತಂದಿದೆ.

ಸಮಾರಂಭ : ಹಿಂಸೆಯ ಅಭ್ಯಾಸ ಮಾಡುವುದು.
ಸಂರಂಭ : ಹಿಂಸೆ ಮಾಡಲು ಮನಸ್ಸಿನಲ್ಲಿ ವಿಚಾರಿಸುವುದು.

ಆರಂಭ : ಹಿಂಸೆಗೆ ತೊಡಗುವುದು.

ಕೃತಕಾರಿತ : ಮಾಡಿದ ಹಿಂಸೆಯನ್ನು ಸಮರ್ಥಿಸಿಕೊಳ್ಳುವುದು.

ಅನುಮೋದಿತ : ಒಬ್ಬರು ಮಾಡಿದ ಹಿಂಸೆಯನ್ನು ಅನುಮೋದಿಸುವುದು ಇವೆಲ್ಲವೂ ಅಪರಾಧಗಳೆಂದು ಜೈನಧರ್ಮವು ಬೋಧಿಸುತ್ತವೆ. ಹಿಂಸೆಯ ದುಷ್ಪರಿಣಾಮವನ್ನು ತಿಳಿಸಲೆಂದೇ ರಚಿತವಾದ ಜನ್ನಕವಿಯ ಯಶೋಧರ ಚರಿತೆಯನ್ನಿಲ್ಲಿ ಸ್ಮರಿಸಿಕೊಳ್ಳಬಹುದು.

ಜೀವದಯೆಯ ಬಗ್ಗೆ ಬಸವಣ್ಣ ಹೊಂದಿದ್ದ ಧೋರಣೆಯೂ ತುಂಬ ವಿಶಾಲವಾದುದು. "ದಯವೇ ಧರ್ಮದ ಮೂಲವಯ್ಯ" ಎಂಬುದು ವೀರಶೈವ ಮತದ ದಿವ್ಯಮಂತ್ರ. "ದಯೆ ಬೇಕು ಸಕಲ ಜೀವರಾಶಿಗಳಲ್ಲಿ" ಎಂದು ನುಡಿದ ಬಸವಣ್ಣ ಆ ಪ್ರಕಾರ ನಡೆದೂ ತೋರಿಸಿದ. ಬಸವಣ್ಣನ ಒಂದು ವಚನವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು;

'ಮರಗಿಡ ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತಣಿತಣಿದು
ಪ್ರಾಣವ ಕೊಂಡುಂಡು ಶರೀರವ ಹೊರೆವ ದೋಷಕ್ಕೆ
ಇನ್ನಾವುದು ವಿಧಿಯಯ್ಯ
ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ
ಜೀವಜಾಲದಲ್ಲಿದೆ ಚರಾಚರವೆಲ್ಲ, ಅದು ಕಾರಣ
ಕೂಲಡಸಂಗನ ಶರಣರು ಲಿಂಗಕ್ಕರ್ಪಿಸಿ ಪ್ರಸಾದವ ಕೊಂಡು
ನಿರ್ದೋಷಿಗಳಾಗಿ ಬದುಕಿದರು."

ಬಸವಣ್ಣ ಪರಿಸರ ಪ್ರಜ್ಞೆಯಿಂದ ಹೇಳಿರುವ ಮಾತು ಇದಲ್ಲ. ಜೀವಪರ ಕಾಳಜಿ ಈ ಮಾತಿನ ಹಿಂದೆ ಅಡಗಿದೆ. ಮನುಷ್ಯ ಸ್ವಾರ್ಥಿ. ಅವನು ತನ್ನ ಆಹಾರಕ್ಕಾಗಿ ಮರಗಿಡಬಳ್ಳಿಗಳ ಪ್ರಾಣ ಹಿಂಡುತ್ತಾನೆ. ಅದು ದೋಷ. ಒಂದು ಇಂದ್ರಿಯದಿಂದ ತೊಡಗಿ ಐದು ಇಂದ್ರಿಯಗಳ ಜೀವಿಗಳಿಗೆಲ್ಲ ಬದುಕುವ ಸಮಾನ ಹಕ್ಕಿದೆ. ಧಾನ್ಯಕ್ಕಾಗಿ ಬೆಳೆಗಳನ್ನು ಕತ್ತರಿಸುವುದು ದೋಷ. ಅದಕ್ಕೆ ಶಿಕ್ಷೆ ಆಗಲೇಬೇಕು. ಆದ್ದರಿಂದಲೇ ಕೂಡಲಸಂಗನ ಶರಣರು ಬೋನವನು ಲಿಂಗಕ್ಕರ್ಪಿಸಿ, ಅದನ್ನು ಪ್ರಸಾದವೆಂದು ಭಾವಿಸಿ ಸ್ವೀಕರಿಸಿ ನಿರ್ದೋಷಿಗಳಾಗುತ್ತಾರೆ– ಎಂಬುದು ಈ ವಚನದ ಅರ್ಥ. ಈ ವಚನದ ಬೆಳಕಿನಲ್ಲಿ 'ಪ್ರಸಾದ'ದ ಬಗ್ಗೆ ವೀರಶೈವರು ಇರಿಸಿಕೊಂಡಿರುವ ಅರ್ಥದ ಬಗ್ಗೆ ಇನ್ನಷ್ಟು ಚರ್ಚೆ ಅಗತ್ಯವೆಂದು ನನ್ನ ಭಾವನೆ. ಏನಿದ್ದರೂ ಮಹಾವೀರ–ಬಸವಣ್ಣ ಇವರ ಜೀವಪರ ಧೋರಣೆಯು ಇವೆರಡೂ ಧರ್ಮಗಳನ್ನು ವಿಶ್ವಧರ್ಮದ ಎತ್ತರಕ್ಕೆ ಏರಿಸಿವೆ.

"ಪ್ರಮತ್ತಯೋಗಾತ್ಪ್ರಾಣವ್ಯರೋಪಣಂ ಹಿಂಸಾ" ಪ್ರಮತ್ತ ವಚನಕಾಯಗಳಿಂದ ಪ್ರಾಣಿಗಳನ್ನು ದುಃಖಕ್ಕೀಡು ಮಾಡುವುದೇ ಹಿಂಸೆ. ಹಾಗೆಂದೇ ಈ ಕೆಳಗಿನ ದುರ್ವರ್ತನೆಗಳನ್ನು ಜೈನ ಧರ್ಮವು ಖಂಡಿಸುತ್ತದೆ.

ಬಂಧಃ ಕಟ್ಟಿ ಹಾಕುವುದು, ವಧಃ ಬೆತ್ತದಿಂದ ಹೊಡೆಯುವುದು, ಛೇದಃ ಕತ್ತರಿಸುವುದು ಇವೆಲ್ಲ ಪಾಪದ ಕೆಲಸಗಳು. ಅಷ್ಟೇ ಅಲ್ಲ ಭಾರ ಹೊರಿಸುವುದು, ಉಪವಾಸ ಇರಿಸುವುದು ಕೂಡ ಅಕ್ಷಮ್ಯ ಅಪರಾಧಗಳು ಎಂದು ಜೈನ ಧರ್ಮ ಭಾವಿಸುತ್ತದೆ.

ಇಂದು ಜಗತ್ತಿನಲ್ಲಿ ನಡೆಯುತ್ತಿರುವ ಕೊಲೆ–ಸುಲಿಗೆ–ರಕ್ತಪಾತಗಳನ್ನು ನೋಡಿದಾಗ ಅಹಿಂಸಾ ಸಿದ್ಧಾಂತವೊಂದೇ ಇದಕ್ಕೆ ಪರಿಹಾರವೆಂಬುದು ಸ್ಪಷ್ಟವಾಗುತ್ತದೆ. ಜಗತ್ತು ಅಹಿಂಸಾ ಸಿದ್ಧಾಂತಕ್ಕಾಗಿ ಇಂದು ಭಾರತದತ್ತ ಆಶಾಭಾವನೆಯಿಂದ ನೋಡುತ್ತಿದೆ. ಮಹಾವೀರ–

ಬಸವಣ್ಣನವರ ಹಾಗೆಯೇ ಜಗತ್ತಿನ ಅನೇಕ ಜನ ವಿಜ್ಞಾನಿಗಳು, ಜೀವವಿಜ್ಞಾನಿಗಳು ಹಾಗೂ ದಾರ್ಶನಿಕರು ಅಹಿಂಸಾ ಸಿದ್ಧಾಂತದ ಮಹತ್ವವನ್ನು ಪ್ರತಿಪಾದಿಸುತ್ತ ಬಂದಿದ್ದಾರೆ. ಒಂದೆರಡು ನಿದರ್ಶನಗಳನ್ನು ಇಲ್ಲಿ ನೋಡಬಹುದು.

"ಪ್ರಾಣಿಗಳಿಗೂ ಬದುಕುವ ಹಕ್ಕಿದೆ ಎಂದು ಯೋಚಿಸದೆ ನಾವು ಬದುಕುತಿದ್ದೇವೆ. ಶಾಂತಿಗಾಗಿ ಹಂಬಲಿಸುತ್ತೇವೆ. ಭಗವಂತನನ್ನು ಇದಕ್ಕಾಗಿ ಪ್ರಾರ್ಥಿಸುತ್ತೇನೆ. ಆದರೂ ಎಲ್ಲಿಯವರೆಗೆ ನಾವು ಕ್ರೀಡೆ, ಲಾಭ, ಆಹಾರಕ್ಕಾಗಿ ಈ ಮುಗ್ಧ ಜೀವಿಗಳನ್ನು ವಧಿಸುತ್ತೇವೆಯೋ ಅಲ್ಲಿಯವರೆಗೆ ಸಮಾಜದಲ್ಲಿ ಶಾಂತಿ ನೆಲಸಲಾರದು. ಕ್ರೌರ್ಯವೇ ಅನೈತಿಕ ವ್ಯವಹಾರ, ಅದರ ಫಲ ಯುದ್ಧ, ವಿನಾಶ!" – ಜಾರ್ಜ್ ಬರ್ನಾರ್ಡ್ ಶಾ.

"ಜೀವಶಾಸ್ತ್ರದ ರೀತ್ಯ ಒಂದು ಮೇಕೆಗೂ ಒಬ್ಬ ಮಾನವನಿಗೂ ಹೆಚ್ಚಿನ ವ್ಯತ್ಯಾಸವಿಲ್ಲ. ಆದ್ದರಿಂದ ಅದನ್ನು ಕೊಲ್ಲುವುದೂ ಒಂದು ನರಹತ್ಯೆಗೆ ಸಮಾನವಾದದ್ದು" ಪ್ರೊ. ಜೆ.ಬಿ.ಎಸ್. ಹಾಲ್ಡೇನ್, ಸುಪ್ರಸಿದ್ಧ ಜೀವವಿಜ್ಞಾನಿ.

ಇಂದಿನ ನೆಮ್ಮದಿರಹಿತ ಜೀವನಕ್ಕೆ ಜೈನರ ಅಹಿಂಸೆ, ಸತ್ಯ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ ಎಂಬ ಐದು ವ್ರತಗಳು ಮತ್ತು ಬಸವಣ್ಣನವರ 'ಕಳಬೇಡ, ಕೊಲಬೇಡ, ಹುಸಿಯನುಡಿಯಲುಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ" ಎಂಬ ದಿವ್ಯ ಮಂತ್ರಗಳು ಮಾತ್ರ ಸೂಕ್ತ ಪರಿಹಾರವನ್ನು ಒದಗಿಸಬಲ್ಲವು. ಶಾಂತಿ ಸ್ಥಾಪನೆಗಾಗಿ ಯುದ್ಧ ಮಾಡುವ ವಿಚಿತ್ರ ಜಾಗತಿಕ ವಿಪರ್ಯಾಸದ ಸ್ಥಿತಿಯಲ್ಲಿರುವ ನಮಗೆ ಇಂದು ಮಹಾವೀರ–ಬಸವಣ್ಣನಂಥ ಜೀವಪರ ನಿಲುವಿನ ಚಿಂತಕರು ಮತ್ತಷ್ಟು ಪ್ರಸ್ತುತರಾಗುತ್ತಾರೆ.

೩. ಇಬ್ಬರ ಸಮಾಜ ಸಂಬಂಧಿ ಚಟುವಟಿಕೆಗಳು : ನನ್ನ ದೃಷ್ಟಿಯಲ್ಲಿ ಮಹಾವೀರ–ಬಸವಣ್ಣ ಕೇವಲ ಧಾರ್ಮಿಕ ದೃಷ್ಟಾರರಷ್ಟೇ ಅಲ್ಲ ಸಮಾಜ ಸುಧಾರಕರೂ ಹೌದು. ತಮ್ಮ ತಮ್ಮ ಕಾಲದ ಸಮಾಜ ಸುಧಾರಣೆಗಾಗಿ ಅವರು ಸಾಕಷ್ಟು ದುಡಿದಿದ್ದಾರೆ. ಧರ್ಮವೆಂದರೆ ಸಮಾಜ, ಸಮಾಜವೆಂದರೆ ಜನ, ಸಮಾಜದ ಹಿತವೆಂದರೆ ಜನತೆಯ ಹಿತವೇ. ಧರ್ಮ ಅದಕ್ಕೆ ಸಾಧನವಾಗಿರುತ್ತವೆ. ಈ ದೃಷ್ಟಿಯಿಂದ ಇವರಿಬ್ಬರೂ ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳ ಆಧಾರದಿಂದ ಧರ್ಮವನ್ನು ರೂಪಿಸಿದವರಾಗಿದ್ದಾರೆ. ಧರ್ಮವೆಂದರೆ ಕೇವಲ ಅರ್ಥಹೀನ ಆಚರಣೆಗಳ ಮೊತ್ತವಲ್ಲ. ಸಾಮಾಜಿಕ ನೆಮ್ಮದಿ, ಆರ್ಥಿಕ ಸುಭದ್ರತೆ ಎಲ್ಲವೂ ಧರ್ಮವೇ. ಮಹಾವೀರ–ಬಸವಣ್ಣನವರು 'ಧರ್ಮ'ವನ್ನು ಪರಿಭಾವಿಸಿದ್ದು ಈ ನೆಲೆಯಲ್ಲಿ. ನಿಜವಾದ ಧರ್ಮವು ವ್ಯಕ್ತಿಕಲ್ಯಾಣದೊಂದಿಗೆ ಸಮಾಜ ಕಲ್ಯಾಣವನ್ನು ಸಾಧಿಸಬೇಕು. ಈ ವಿಷಯದಲ್ಲಿ ಬಸವಣ್ಣ ಮಹಾವೀರರಿಗಿಂತ ಹೆಚ್ಚು ಸಮಾಜಮುಖಿಯಾಗಿದ್ದುದು ಸುಸ್ಪಷ್ಟವಾಗಿದೆ.

ಕ್ರಿ.ಪೂ. ೬ನೆಯ ಶತಮಾನದ ಭಾರತದ ಸಾಮಾಜಿಕ ಸ್ಥಿತಿ ತುಂಬ ಹದಗೆಟ್ಟಿದ್ದಿತು. ಪ್ರಭುತ್ವವು ಜನತೆಯನ್ನು ದಾಸ್ಯದ ಕೂಪಕ್ಕೆ ತಳ್ಳುತ್ತಿದ್ದಿತು. ತೆರಿಗೆ ಬಡ್ಡಿಗಳ ಭಾರದಿಂದ ಬಡಜನತೆ ತತ್ತರಿಸಿ ಹೋಗಿದ್ದಿತು. ಬುಡಕಟ್ಟು ಸಂಸ್ಕೃತಿ ವಿನಾಶದ ಅಂಚಿನಲ್ಲಿದ್ದಿತು. ಜಡವಿಚಾರಗಳು ಜನತೆಯನ್ನು ಆಳುತ್ತಿದ್ದವು. ಇದೆಲ್ಲದರ ಪರಿಣಾಮವಾಗಿ ಅಂದಿನ ಲಿಚ್ಛವಿ, ಶಾಕ್ಯ, ಮಲ್ಲ, ವಜ್ಜ ಮೊದಲಾದ ಬುಡಕಟ್ಟುಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವ ಭಯದಲ್ಲಿದ್ದವು. ಅಂಥ ಸ್ಥಿತಿಯಲ್ಲಿ ಮಹಾವೀರ ಮುಂದಾಗಿ ಮತ್ತೆ ಈ ಬುಡಕಟ್ಟುಗಳನ್ನು

ಗಣತಂತ್ರ ರಾಜ್ಯವ್ಯವಸ್ಥೆಗಳನ್ನಾಗಿ ಸ್ಥಾಪಿಸಿ ಆ ಮೂಲಕ ಜನತೆಯಲ್ಲಿ ಸ್ವತಂತ್ರವಾಗಿ, ಸ್ವಾಭಿಮಾನದಿಂದ ಬದುಕುವ ಧೈರ್ಯ ತುಂಬಿದ. ಸರ್ವಜೀವ ಸಮಾನತೆ ಮಹಾವೀರನು ನಿರ್ಮಿಸಬಯಸಿದ ನವ ಸಮಾಜದ ಗುರಿಯಾಗಿದ್ದಿತು. ವರ್ಗ–ವರ್ಣರಹಿತವಾದ, ಇತರ ಯಾವುದೇ ಬಗೆಯ ತಾರತಮ್ಯವಿಲ್ಲದ ಸಮಾಜ ನಿರ್ಮಾಣಕ್ಕಾಗಿ ಮಹಾವೀರನು ಪ್ರಯತ್ನಿಸಿದರು. "ಪರಸ್ಪರೋಪಗ್ರಹೋ ಜೀವಾನಾಂ" ಎಂಬುದು ಅವನ ಧೋರಣೆಯಾಗಿದ್ದಿತು. 'ಜೀವಿಯಿಂದ ಜೀವಿಗೆ ನೆರವು" ಎಂಬುದು ಈ ಮಾತಿನ ಅರ್ಥ. ಸಮಾಜ ಸಮಾಜಗಳ ನಡುವೆ ಅವನು ಸಖ್ಯ–ಗೌರವ–ಸೌಹಾರ್ದವನ್ನು ಬಯಸಿದ್ದನು. "ನೀನೂ ಬದುಕು, ಇತರರನ್ನು ಬದುಕಲು ಬಿಡು "ಜಿಯೋ ಔರ್ ಜೀನೇ ದೋ" ಎಂಬುದು ಜೈನ ಐಕ್ಯತಾ ಮಂತ್ರವಾಗಿದ್ದಿತು. ಮಹಾವೀರನು ಅಂದಿನ ಗಣರಾಜ್ಯ ವ್ಯವಸ್ಥೆಯಲ್ಲಿ ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆ ಎಂಬ ನಾಲ್ಕು ಗುಂಪುಗಳನ್ನು ಮಾಡಿದ್ದನಲ್ಲದೆ ಇವುಗಳೆಲ್ಲ ಪರಸ್ಪರ ಪೂರಕ–ಪೋಷಕವೆಂದು, ಇವುಗಳಲ್ಲಿ ಯಾವುದೂ ಮೇಲಲ್ಲ, ಯಾವುದೂ ಕೀಳಲ್ಲವೆಂದು ನಿಯಮಗಳನ್ನು ವಿಧಿಸಿದ್ದ. ಇದರಿಂದಾಗಿ ಬೇರೆ ಬೇರೆ ಕಾರಣಗಳಿಂದ ಕದಡಿ ಹೋಗಿದ್ದ ಸಮಾಜದ ಸ್ವಾಸ್ಥ್ಯವು ಮತ್ತೆ ಒಂದಿಷ್ಟು ಸುಧಾರಿಸುವಂತಾಯಿತು. ಉತ್ತರಭಾರತದಲ್ಲಿ ಹೆಚ್ಚು ಕಡಿಮೆ ಇದೇ ಕಾಲದಲ್ಲಿ ಮಖ್ಖಲಿಗೋಸಾಲಿ, ಅಜಿತಕೇಶಿ ಕಂಬಲಿ, ಪೂರಣ ಕಶ್ಯಪ, ಗೌತಮ ಬುದ್ಧ ಮೊದಲಾದ ಸಮಾಜಸುಧಾರಕರೂ ತಮ್ಮ ತಮ್ಮ ಬುಡಕಟ್ಟು ಮತ್ತು ಜನಾಂಗಗಳಿಗೆ ಸಾಮಾಜಿಕ ಸ್ಥಿರತೆಯನ್ನೊದಗಿಸಲು ದುಡಿದಿದ್ದು, ಭಾರತದ ಸ್ವಾತಂತ್ರ್ಯ, ಸ್ವಾಭಿಮಾನದ ಚಳವಳಿ ಅಲ್ಲಿಂದಲ್ಲೇ ಆರಂಭವಾಯಿತೆಂದು ಹೇಳಬಹುದು. ವಿಶೇಷವೆಂದರೆ ಈ ಮಹನೀಯರೆಲ್ಲ ಅಂದು ಜನತೆಯನ್ನು ಕಂಗೆಡಿಸಿದ್ದ ಜಡಸಂಸ್ಕೃತಿಯನ್ನು ವಿರೋಧಿಸಿ ಚಲನಶೀಲವಾದ ಬಹುಸಂಸ್ಕೃತಿಗಳನ್ನು ಜಾರಿಗೆ ತಂದದ್ದು.

ಸಾಮಾಜಿಕವಾಗಿ ಮಹಾವೀರನಿಗಿಂತ ಬಸವಣ್ಣನವರು ಹೆಚ್ಚು ವ್ಯಾಪಕವಾಗಿ ಮತ್ತು ಪರಿಣಾಮಕಾರಿಯಾಗಿ ದುಡಿದರೆಂಬುದನ್ನು ಆಗಲೇ ಹೇಳಿಯಾಗಿದೆ. ಇವರ ಸಾಮಾನಿಕ ಪರಿವರ್ತನೆಗಳನ್ನು ಸರ್ವಜೀವಸಮಾನತೆ, ಸೌಹರ್ದಭಾವನೆ, ಸ್ತ್ರೀಪರ ನಿಲುವು, ಮೌಢ್ಯ ಮತ್ತು ವರ್ಣ ವ್ಯವಸ್ಥೆಯ ವಿರೋಧ ಇವೇ ಮೊದಲಾದ ನೆಲೆಗಳಲ್ಲಿ ಅಭ್ಯಸಿಸಬಹುದು.

"ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂಬ ವಿಶಾಲ ಭಾವನೆ ಬಸವಣ್ಣನನ್ನು ವಿಶ್ವವಂದ್ಯನನ್ನಾಗಿಸಿತು. ಜಾತಿ, ಕುಲ, ಲಿಂಗ ವರ್ಣಭೇದಗಳನ್ನು ಕಿತ್ತೊಗೆದು ಬಸವಣ್ಣ ಪರಿಶುದ್ಧವಾದ ಮನುಷ್ಯ ಜಾತಿಯ ಪ್ರತೀಕವಾಗಿ ಬದುಕಿ ತೋರಿದ. "ಮನುಷ್ಯ ಜಾತಿ ತಾನೊಂದೆ ವಲಂ"ಎಂಬ ಜೀನಸೇನಾಚಾರ್ಯ ಪಂಪ ಮೊದಲಾದ ಜೈನ ದೃಷ್ಟಾರರ ಸಿದ್ಧಾಂತವನ್ನು ಬಸವಣ್ಣ ಸ್ವತಃ ಬದುಕಿ ತೋರಿಸಿದ!

"ಅಪ್ಪನು ನಮ್ಮ ಮಾದಾರ ಚೆನ್ನಯ್ಯ ಬೊಪ್ಪನು ನಮ್ಮ ಡೋಹರ ಕಕ್ಕಯ್ಯ
ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ, ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ"

ಎಂಬ ಬಸವಣ್ಣನ ಹೃದಯಾಂತರಾಳದ ಮಾತು ಸಾರ್ವಕಾಲಿಕ ಮಹತ್ವದ್ದಾಗಿದೆ. ಎಲ್ಲ ಜೀವಿಗಳೊಂದಿಗೆ ಒಂದಾಗಿ ಬದುಕುವ ಬಸವಣ್ಣನವರ ಸಂದೇಶ ಆದರ್ಶಪ್ರಾಯವಾದುದಾಗಿದೆ. ಒಮ್ಮೆ ಶರಣು ಎಂದವನಿಗೆ ಎರಡು ಸಲ ಶರಣು ಎನ್ನುವ ಬಸವಣ್ಣನ ಸದುವಿನಯದ ಪ್ರವೃತ್ತಿ ಇಂದು ತುಂಬ ಅಗತ್ಯವಾಗಿದೆ.

ಅತ್ತ ಗೃಹಸ್ಥನು ಪಾಲಿಸಬೇಕಾದ ಆರು ಅವಶ್ಯಕ ಕ್ರಿಯೆಗಳಲ್ಲಿ ಒಂದಾದ ಸಾಮಾಯಿಕದ ಮೂಲಕ ಜೈನರು ಪ್ರತಿಪಾದಿಸಿದ ಸೌಹಾರ್ದ ಮತ್ತು ಸರ್ವಜೀವಸಮಾನತೆಯ ಪ್ರಯತ್ನವನ್ನು ನಾವು ತಪ್ಪದೆ ಗುರುತಿಸಬೇಕು.

"ಖಮ್ಮಾಮಿ ಸವ್ವಜೀವೇಷು
ಸವ್ವೇ ಜೀವೇ ಖಮಂತು ಮೇ
ಮೆತ್ತೀಮೇ ಸವ್ವ ಭೂದೇಸು
ವೇರಂ ಮಜ್ಝ ಣಕೇಣ ಇ"॥

"ಪ್ರಪಂಚದ ಎಲ್ಲ ಜೀವಗಳನ್ನು ನಾನು ಕ್ಷಮಿಸುತ್ತೇನೆ. ಎಲ್ಲ ಜೀವಗಳೂ ನನ್ನನ್ನು ಕ್ಷಮಿಸಲಿ. ಸರ್ವಭೂತಗಳಲ್ಲಿ ನಾನು ಮೈತ್ರಿಯನ್ನಿರಿಸುತ್ತೇನೆ. ಯಾವುದೇ ಜೀವಿಯೊಂದಿಗೆ ವೈರ-ಮತ್ಸರವನ್ನು ಹೊಂದುವುದಿಲ್ಲ" ಎಂಬ ಪ್ರತಿಜ್ಞಾರೂಪದ ಪಾಠವನ್ನು ಜೈನ ಗೃಹಸ್ಥರು ಪ್ರತಿನಿತ್ಯ ಓದಬೇಕು ಮತ್ತು ಪಾಲಿಸಬೇಕು ಎಂದು ಜೈನ ಧರ್ಮವು ತಿಳಿಸುತ್ತದೆ. 'ಸಾಮಾಯಿಕ' ಎಂದರೆ 'ಸಾಮಾಜಿಕ' ಎಂದಂತೆಯೇ! ವ್ಯಕ್ತಿಯೂ ಒಳ್ಳೆಯವನಾಗಿರಬೇಕು. ಸಮಾಜವನ್ನು ಒಳ್ಳೆಯದನ್ನಾಗಿರಿಸಬೇಕು ಎಂಬುದು ಈ ಸಾಮಾಯಿಕದ ಉದ್ದೇಶವಾಗಿದೆ. ದ್ವೇಷ ಮತ್ತು ತ್ವೇಷದಿಂದ ತುಂಬಿದ ಇಂದು ಮಹಾವೀರ-ಬಸವಣ್ಣ ವಿಚಾರಗಳು ಎಷ್ಟು ಅಗತ್ಯವಾಗಿವೆಯೆಂಬುದು ಸ್ವಯಂಸಿದ್ಧವಾಗಿದೆ.

೪. ಮಹಾವೀರ-ಬಸವಣ್ಣನವರ ಆರ್ಥಿಕ ವಿಚಾರಗಳು : ಜೈನ ಪುರಾಣಗಳು ಮಾನವಸಮಾಜದಲ್ಲಿ ದುಡಿಮೆಯ ಪ್ರಕ್ರಿಯೆ ಎಂದು ಆರಂಭವಾಯಿತೆಂಬುದಕ್ಕೆ ಪ್ರಮಾಣ ಗಳನ್ನು ಒದಗಿಸುತ್ತದೆ. ಮೊದಲಿಗೆ ಕೇವಲ ಪ್ರಕೃತಿಯನ್ನು ಅವಲಂಬಿಸಿದ್ದ ಮನುಷ್ಯನಿಗೆ ದುಡಿಯಲು ಕಲಿಸಿದವನು ವೃಷಭ ಎಂಬುದನ್ನು ಜೈನ ಪುರಾಣಗಳು ತಿಳಿಸುತ್ತವೆ. ದುಡಿಯದೆ ಭೋಗಿಸುತ್ತ ಬಂದಿದ್ದ "ಭೋಗ ಭೂಮಿ"ಯನ್ನು, ದುಡಿದು ತಿನ್ನುವ "ಕರ್ಮಭೂಮಿ"ಯನ್ನಾಗಿ ವೃಷಭ ಪರಿವರ್ತಿಸಿದ. ಅಸಿ, ಮಸಿ, ಕೃಷಿ, ವಾಣಿಜ್ಯ, ವಿದ್ಯೆ, ಶಿಲ್ಪ ಎಂಬ ಆರು ವೃತ್ತಿಗಳನ್ನು ಮಾಡಿಕೊಂಡು ಉಪಜೀವನ ನಡೆಸುವಂತೆ ಜನತೆಗೆ ಬೋಧಿಸಿದ. ವೃಷಭನ ಪರಂಪರೆಯ ಉತ್ತರಾಧಿಕಾರಿಯಾದ ಮಹಾವೀರರೂ ಕೂಡ ಈ ಶ್ರಮ ಸಂಸ್ಕೃತಿಯನ್ನು ಸಮರ್ಥಿಸಿದರು. ದುಡಿಮೆ-ಉತ್ಪಾದನೆ-ಹಂಚಿಕೆಗಳಿಗೆ ಸಂಬಂಧಿಸಿದ ಅಂಶಗಳನ್ನು ತಮ್ಮ ಧಾರ್ಮಿಕ ಸಿದ್ಧಾಂತದಲ್ಲಿ ಅಳವಡಿಸಿಕೊಂಡರು. ಆರ್ಥಿಕ ಅಸಮತೋಲನವನ್ನು, ದ್ರವ್ಯದ ಕಪ್ಪು ಸಂಗ್ರಹವನ್ನು ವಿರೋಧಿಸಿದರು. ಸಮಾಜದ ಹಿತವು ಅದರ ಆರ್ಥಿಕ ಸ್ಥಿತಿಗತಿಯ ಮೇಲೆ ಅವಲಂಬಿತವಾಗಿರುತ್ತದೆಯೆಂಬುದನ್ನು ಜನತೆಗೆ ತಿಳಿಹೇಳಿದರು. ಇಂದಿನ ಅರ್ಥಶಾಸ್ತ್ರಜ್ಞರು ಹೇಳುವ Division of Labour ಮಾದರಿಯಲ್ಲಿ ಶ್ರಮವನ್ನು ವೈಜ್ಞಾನಿಕವಾಗಿ ವಿಭಜಿಸಿದರು. ಹೊಸ ಅರ್ಥಶಾಸ್ತ್ರಜ್ಞರು ಇಂದು ಪ್ರತಿಪಾದಿಸಿದ ಅನ್ನಶ್ರಮ ಸಿದ್ಧಾಂತವನ್ನು (Bread-Labour) ಮಹಾವೀರಾದಿ ಜೈನರು ೨೫೦೦ ವರ್ಷಗಳಿಗಿಂತ ಮೊದಲೇ ಪ್ರಚುರಪಡಿಸಿದ್ದರೆಂಬುದನ್ನು ನಾವಿಲ್ಲಿ ನೆನೆಯಬೇಕು. ಅಸಂಗ್ರಹದಿಂದ ಆರ್ಥಿಕ ಅಸಮತೋಲನವನ್ನು ನಿವಾರಿಸಬಹುದು, ಅಪರಿಗ್ರಹದಿಂದ (ಆಸೆಗಳನ್ನು ನಿಯಂತ್ರಿಸುವುದು) ಸರ್ವರೂ ಸುಖದಿಂದ ಬಾಳಬಹುದು. ಪರಸ್ಪರ ಹಂಚಿಕೊಂಡು ನೆಮ್ಮದಿಯಿಂದ ಬಾಳಬಹುದು ಎಂಬುದನ್ನು ಜೈನಸಿದ್ಧಾಂತವು ಅಂದೇ ಮನಗಂಡಿದ್ದಿತು.

ಇತ್ತ ಬಸವಣ್ಣನವರ ನೇತೃತ್ವದಲ್ಲಿ ವೀರಶೈವ ಧರ್ಮವು ಅನುಸರಿಸಿಕೊಂಡು ಬಂದ ಆರ್ಥಿಕ ನೀತಿಯೂ ತುಂಬ ವೈಜ್ಞಾನಿಕವೂ ಜನೋಪಯೋಗಿಯೂ ಆಗಿದ್ದಿತು. ಶರಣರ ಕಾಯಕಸಿದ್ಧಾಂತ ಮತ್ತು ದಾಸೋಹಸಿದ್ಧಾಂತಗಳು ಆಧುನಿಕ ಅರ್ಥಶಾಸ್ತ್ರದ ತಾಯಿಬೇರುಗಳಂತಿವೆ. ಉತ್ಪಾದನೆ ಮತ್ತು ಹಂಚಿಕೆ ಎಂಬ ಶುದ್ಧ ಭೌತಿಕ ಧೋರಣೆಯನ್ನು ಬಸವಾದಿ ಶರಣರು ಇರಿಸಿಕೊಂಡಿದ್ದರು. ಆತ್ಮಸಾಕ್ಷಿಯಿಂದ ಮಾಡುವ ದುಡಿಮೆಯೇ ಕಾಯಕ. ಆತ್ಮಸಂತೃಪ್ತಿಯಿಂದ ಹಂಚಿಕೊಂಡು ಉಣ್ಣುವುದೇ ದಾಸೋಹ ಎಂಬ ಅದ್ಭುತ ಪರಿಕಲ್ಪನೆ ಅವರದಾಗಿದ್ದಿತು. ಈ ಬಗೆಯ ಅಪ್ಪಟ ಆರ್ಥಿಕ ಮತ್ತು ಸಾಮಾಜಿಕ ಚಿಂತನೆಗಳನ್ನೊಳಗೊಂಡ ಧಾರ್ಮಿಕ ಪಂಥಗಳು ಜಗತ್ತಿನಲ್ಲಿ ಬೇರೆ ಇದ್ದಂತಿಲ್ಲ!

ಶರಣ ಸಮುದಾಯದಲ್ಲಿದ್ದವರೆಲ್ಲರೂ ಕಾಯಕಜೀವಿಗಳು. ದುಡಿಮೆಯೇ ಅವರಿಗೆ ಉಸಿರಾಗಿದ್ದಿತು. ಅದರಲ್ಲಿ ಯಾವುದೇ ಶ್ರೇಷ್ಠತೆ ಕನಿಷ್ಠತೆಯಭಾವನೆ ಇರಲಿಲ್ಲ. ಅವರವರ ವೃತ್ತಿಗೌರವ ಅವರವರಿಗೆ ಇದ್ದೇ ಇದ್ದಿತು. ಆಯ್ದಕ್ಕಿ ಮಾರಯ್ಯ-ಲಕ್ಕಮ್ಮ ದಂಪತಿಗಳು, ಸಿದ್ಧರಾಮ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ನುಲಿಯ ಚಂದಯ್ಯ, ಬಹುರೂಪಿ ಚೌಡಯ್ಯ ಹೀಗೆ ಹಲವು ಹತ್ತು ಕಾಯಕಗಳವರು ಅಲ್ಲಿದ್ದರು. ಆಯ್ದಕ್ಕಿ ದಂಪತಿಗಳಂತೂ ಕಾಯಕ ಸಿದ್ಧಾಂತಕ್ಕೆ ಹೇಳಿ ಮಾಡಿಸಿದ ವ್ಯಕ್ತಿಗಳಾಗಿದ್ದಾರೆ." ಕಾಯಕವೇ ಕೈಲಾಸ" ಎಂಬ ಮಾತಿಗೆ ಮಂತ್ರಶಕ್ತಿ ಬಂದದ್ದು ಅವರಿಂದಲೇ ಎನ್ನಬಹುದು.

ಇನ್ನು ವೈಯಕ್ತಿಕವಾಗಿ ಬಸವಣ್ಣನವರ ಕಾಯಕ ಮತ್ತು ದಾಸೋಹದ ಬಗ್ಗೆ ತುಂಬ ನಿಚ್ಚಳವಾದ ಕಲ್ಪನೆಯನ್ನು ಹೊಂದಿದ್ದರು. ಗುರು-ಲಿಂಗ-ಜಂಗಮದ ತ್ರಿವಿಧ ನೆಲೆಯಲ್ಲಿ ಅವರ ಕಾಯಕ-ದಾಸೋಹಗಳನ್ನು ಜಾರಿಗೊಳಿಸಲು ಪ್ರಯತ್ನಿಸಿದರು.

"ನಾನು ಆರಂಭವ ಮಾಡುವೆನಯ್ಯ ಗುರುಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯ ಜಂಗಮದಾಸೋಹಕ್ಕೆಂದು"

ಎಂಬಲ್ಲಿ ಕ್ರಮವಾಗಿ ದುಡಿಮೆ, ಉತ್ಪಾದನೆ ಮತ್ತು ಹಂಚಿಕೆಯ ವಿಚಾರಗಳಿವೆ. ಶರಣರು ನಿರೀಕ್ಷಿಸುವ ಕಾಯಕ ಎಂಥದ್ದು?

"ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು,
ಲಿಂಗಪೂಜೆಯಾದರೂ ಮರೆಯಬೇಕು",

-ಆಯ್ದಕ್ಕಿ ಮಾರಯ್ಯ.

"ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುರುಹರಿವುದು
ಜಂಗಮವಾದರೂ ಕಾಯಕದಿಂದಲೇ ವೇಶಪಾಶ ಹರಿವುದು"

-ನುಲಿಯ ಚಂದಯ್ಯ

"ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ, ಸತ್ಯಶುದ್ಧಕಾಯಕವಿಲ್ಲದುದು ಕಾಯಕವಲ್ಲ" ಎಂಬುದು ಕಾಳವ್ವೆಯ ಸ್ಪಷ್ಟ ವ್ಯಾಖ್ಯಾನ. ಈ ಗುಂಪಿಗೆ ಧ್ವನಿಯಾದ ಬಸವಣ್ಣ ಕಾಯಕದ ಮಹತ್ವವನ್ನು ಪ್ರತಿಪಾದಿಸಿದ. ದುಡಿಯುವ ವರ್ಗದ ನೇತಾರವಾಗಿ ಬಂಡವಾಳಶಾಹಿ ವ್ಯವಸ್ಥೆಯನ್ನು ವಿರೋಧಿಸಿದ.

"ಕಾಗೆಯೊಂದಗುಳ ಕಂಡರೆ ಕರೆಯದೇ ತನ್ನ ಬಳಗವನು
ಕೋಳಿ ಒಂದು ಕುಟುಕ ಕಂಡರೆ ಕೂಗಿ ಕರೆಯದೆ ತನ್ನ
ಕುಲವನೆಲ್ಲವ"

ಎಂದು ಹೇಳುವ ಮೂಲಕ ದಾಸೋಹ **ಪ್ರವೃತ್ತಿಯನ್ನು ಜನತೆಯಲ್ಲಿ ಬಿತ್ತಲು ಪ್ರಯತ್ನಿಸಿದ. ಈ ಮಾತು ಸಹಕಾರ ಮತ್ತು ಸೌಹಾರ್ದಕ್ಕೆ ದಾರಿ ಮಾಡಿ ಕೊಡುತ್ತದೆ.**

"ಹಾವು ತಿಂದವರ ನುಡಿಸಬಹುದು. ಸಿರಿಗರ ಬಡಿದವರ ನುಡಿಸಲಾಗದು" ಎನ್ನುವ ಮೂಲಕ ಬಸವಣ್ಣನು ಸಿರಿವಂತರ ಸೊಕ್ಕನ್ನು ವಿಮರ್ಶಿಸಿದ್ದಾನೆ. "ಮಾಡಿ ಮಾಡಿ ಕೆಟ್ಟಿರೊ ಮಾನವಿಲ್ಲದೆ, ನೀಡಿ ನೀಡಿ ಕೆಟ್ಟಿರೊ ನಿಜವಿಲ್ಲವೆ". ಮತ್ತು "ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕೆ ಸಲ್ಲದಯ್ಯ" ಎಂಬ ಮಾತುಗಳ ಮೂಲಕ ಹಣದ ಸತ್ಪಾತ್ರ ಮತ್ತು ಸದ್ವಿನಿಯೋಗದ ಬಗ್ಗೆ ತಿಳವಳಿಕೆ ನೀಡಿದ್ದಾನೆ. ಬಸವಣ್ಣನ ಪ್ರಕಾರ ದ್ರವ್ಯದ ಸದ್ವಿನಿಯೋಗವೇ ದಾಸೋಹ ವಾಗಿದ್ದಿತು. "ಮಾಡಿದೆನೆಂಬುದು ಮನದಲಿ ಸುಳಿದಡೆ ಏಡಿಸಿ ಕಾಡಿತ್ತು ಶಿವನ ಡಂಗುರ" ಎಂಬಲ್ಲಿ ನಿರ್ಮಮ ಭಾವದಿಂದ ಇನ್ನೊಬ್ಬರಿಗೆ ಅರ್ಪಿಸುವುದೇ ದಾಸೋಹ ಎನ್ನುವುದು ವ್ಯಕ್ತವಾಗಿದೆ. ಹೀಗೆ ಬದುಕಿನ ಎಲ್ಲ ನೆಲೆಗಳಲ್ಲಿ ಮಹಾವೀರ–ಬಸವಣ್ಣ ಇಬ್ಬರೂ ಜೀವಪರವಾದ ಮತ್ತು ಜನಪರವಾದ ವಿಚಾರಗಳನ್ನು ಹೊಂದಿದ್ದಾರೆ.

೫. ಸ್ತ್ರೀಪರ ನಿಲುವು : ಮಹಾವೀರ–ಬಸವಣ್ಣ ಇವರು ತಳೆದಿದ್ದ ಸ್ತ್ರೀಪರ ನಿಲುವೂ ಗಮನಾರ್ಹವಾಗಿದೆ. ಇಬ್ಬರೂ ಸ್ತ್ರೀ ವಿಮೋಚನೆಗಾಗಿ ದುಡಿದವರು. ಆಧ್ಯಾತ್ಮಿಕದಲ್ಲಿ ಜೈನರು ಮಹಿಳೆಗೆ ಕೆಲವು ಕಟ್ಟುನಿಟ್ಟುಗಳನ್ನು ವಿಧಿಸಿದ್ದರಾದರೂ ಸಾಮಾಜಿಕವಾಗಿ ಅವಳಿಗೆ ಸಮಾನ ಸ್ಥಾನಮಾನಗಳನ್ನು ಕೊಡಿಸಿದ್ದರು. ಮಹಾವೀರನದು ಈ ನಿಟ್ಟಿನಲ್ಲಿ ತುಂಬ ದೊಡ್ಡ ಸಾಧನೆಯಾಗಿದೆ. ತನ್ನ ಕಾಲದಲ್ಲಿ ಹೆಣ್ಣಿನ ಮೇಲೆ ನಡೆಯುತ್ತಿದ್ದ ಹಲವು ಬಗೆಯ ಶೋಷಣೆಗಳನ್ನು ಖಂಡಿಸಿದ ಮಹಾವೀರ ಶೋಷಿತ ಸ್ತ್ರೀಯರ ಮನೆಗಳಿಗೆ ಹೋಗಿ ಆಹಾರ ಸ್ವೀಕರಿಸಿ ಅವರಲ್ಲಿ ಸಾಮಾಜಿಕವಾದ ಮನೋಬಲವನ್ನು ತುಂಬಿದ. ಹಲವಾರು ಜನ ಸ್ತ್ರೀಯರನ್ನು ಪ್ರಭುಗಳ ಮತ್ತು ಶ್ರೀಮಂತರ ದಾಸ್ಯದಿಂದ ಮುಕ್ತರನ್ನಾಗಿಸಿದ. ತನ್ನ ಮುನಿಸಂಘದಲ್ಲಿ ಸ್ತ್ರೀಯರಿಗೂ ಸಮಾನ ಅವಕಾಶಗಳನ್ನು ನೀಡಿದ, ಹೀಗಾಗಿ ಅಂದಿನ ಚಂದನಬಾಲೆಯಂತಹ ಲಕ್ಷಗಟ್ಟಲೆ ಸ್ತ್ರೀಯರು ಮಹಾವೀರರ ಪರಮ ಶಿಷ್ಯೆಯರಾದರು.

ಅದೇ ರೀತಿ ಬಸವಾದಿ ಶರಣರೂ ಸಾಮಾಜಿಕವಾಗಿ ಸ್ತ್ರೀಸಂಕುಲದ ಸ್ಥಾನಮಾನಗಳನ್ನು ಎತ್ತಿ ಹಿಡಿದರು. ಲಿಂಗಭೇದವನ್ನು ಸಂಪೂರ್ಣ ಅಳಿಸಿ ಹಾಕಿದರಲ್ಲದೆ ಆ ಮೊದಲು ಹೆಣ್ಣಿನ ಕುರಿತಾಗಿ ಮೂಡಿದ್ದ ಕೀಳು ಭಾವನೆಯನ್ನು ತೊಡೆದು ಹಾಕಿದರು.

೬. ಇಬ್ಬರೂ ಎದುರಿಸಿದ ಸಮಸ್ಯೆ–ಸವಾಲುಗಳು : ಹೆಚ್ಚಿನ ಭಾರತದ ಚರಿತ್ರೆಯನ್ನು ನೋಡಿದಾಗ ಮತಧರ್ಮಗಳ ಪ್ರವಾದಿತ್ವವು ಎಷ್ಟು ಕಷ್ಟದ ಕೆಲಸವಾಗಿದ್ದಿತೆಂಬುದು ನಮಗೆ ತಿಳಿದುಬರುತ್ತದೆ. ಹಲವು ಧರ್ಮಗಳ ಬೀಡಾಗಿದ್ದ ಭಾರತದಲ್ಲಿ ಧಾರ್ಮಿಕ ದ್ವೇಷ ಅಸೂಯೆಗಳು ತುಂಬ ದಟ್ಟವಾಗಿದ್ದವು. ಸ್ವಧರ್ಮಪ್ರಚಾರಕ್ಕಾಗಿ ಹಂಬಲಿಸುವ ಯಾರೇ ಆಗಲಿ ಅನ್ಯಮತಗಳ ಆಕ್ಷೇಪಕ್ಕೆ ಗುರಿಯಾಗಬೇಕಾಗಿದ್ದಿತು. ಮಹಾವೀರ–ಬಸವಣ್ಣರು ಇದಕ್ಕೆ ಹೊರತಾದವರಾಗಿರಲಿಲ್ಲ. ಬಿಜ್ಜಳನ ಆಸ್ಥಾನದಲ್ಲಿದ್ದುಕೊಂಡು ಜಂಗಮಸೇವೆಗೆ ತೊಡಗಿದ ಬಸವಣ್ಣ ಮೇಲ್ವರ್ಗದವರ ಹಲವು ಕಿರುಕುಳಗಳನ್ನು ಎದುರಿಸಬೇಕಾಯಿತು.

ಅಸೂಯಾಪರರ ಹಲವು ಷಡ್ಯಂತ್ರಗಳನ್ನು ದಾಟಬೇಕಾಯಿತು. ಹಲವು ಅಗ್ನಿಪರೀಕ್ಷೆಗಳಿಗೆ ಗುರಿಯಾಗಬೇಕಾಯಿತು. ಸಾಧನೆಯ ಮಾರ್ಗವೇ ಹಾಗೆ. ನೋವಿಲ್ಲದೆ ಹೆರಿಗೆಯಿಲ್ಲ! ಇದು ಹೊರಗಿನವರಿಂದ ಬಸವಣ್ಣ ಎದುರಿಸಿದ ಸಮಸ್ಯೆಯ ಮಾತಾಯಿತು. ಒಳಗಿನವರಿಂದಲೂ ಆತ ಕೆಲವು ತೊಂದರೆಗಳನ್ನು ಅನುಭವಿಸಿದುದನ್ನು ಗುರುತಿಸುವುದು ಸಾಧ್ಯವಿದೆ. ಅದರ ಹೆಚ್ಚಿನ ಚರ್ಚೆ ಇಲ್ಲಿ ಅನಗತ್ಯ.

ಅತ್ತ ಮಹಾವೀರರು ಅನಭವಿಸಿದ ಸಮಸ್ಯೆಗಳೂ ಸಣ್ಣವಲ್ಲ. ಕಾಡು ಮೇಡುಗಳಲ್ಲಿ ದುಷ್ಟಮೃಗಗಳಿಂದ ತೊಂದರೆ ಅನುಭವಿಸಿದರು, ನಾಡಿನಲ್ಲಿ ಜನರ ಬೈಗುಳ–ಅವಮಾನಗಳಿಗೆ ತುತ್ತಾದರು, ಸೇರಲಾರದ ಜನರು ಅವನಿಗೆ ಕಲ್ಲು ಹೊಡೆದರು, ನಾಯಿಗಳನ್ನೂ ಛೂ ಬಿಟ್ಟರು. ಅನ್ಯಮತೀಯರು ಅವಹೇಳನ ಮಾಡಿದರು. ಆದರೂ ಮಹಾವೀರರು ಧೃತಿಗೆಡಲಿಲ್ಲ. ಅವರ ಗುರಿ ಮತ್ತು ದಾರಿ ಎರಡೂ ಒಳ್ಳೆಯವಾಗಿದ್ದವು. ಅವರು ತಾವು ಬಯಸಿದುದನ್ನು ಸಾಧಿಸಿದರು!

೭. ಎರಡೂ ವಿಚಾರಧಾರೆಗಳ ನಡುವಿನ ಸಂಘರ್ಷ : ಕರ್ನಾಟಕದ ಸಂದರ್ಭದಲ್ಲಿ ಶೈವ–ವೀರಶೈವವು ಕೆಲವು ಸಲ ಜೈನಧರ್ಮದೊಂದಿಗೆ ಸೆಣಸಾಟಕ್ಕೆ ಇಳಿದ ಬಗ್ಗೆ ಉಲ್ಲೇಖಗಳಿವೆ. ೧೧–೧೨ನೆಯ ಶತಮಾನಗಳಲ್ಲಿ ಈ ಬಗೆಯ ಧಾರ್ಮಿಕ ಸಂಘರ್ಷದ ಕಾರ್ಮೋಡ ಕವಿದಿದ್ದಿತು. ಇಂಥ ಪ್ರಸಂಗಗಳಿಗೆ ಮಹಾವೀರ–ಬಸವಣ್ಣರನ್ನು ಹೊಣೆಗಾರರನ್ನಾಗಿ ಮಾಡುವುದು ಶುದ್ಧ ತಪ್ಪು. ಅವರ ಕೆಲವು ಅನುಯಾಯಿಗಳು ಮತೀಯ ಆವೇಶದಿಂದ ಮಾಡಿದ ಅಚಾತುರ್ಯಗಳು ಈ ರೀತಿಯ ಆಂತರಿಕ ಸಂಘರ್ಷಕ್ಕೆ ಕಾರಣಾವಾಗಿರುತ್ತವೆ. ಮೊದಲು ನಡೆದ ಶೈವ ಕ್ರಾಂತಿಯ ಸಂದರ್ಭದಲ್ಲಿ ಏಕಾಂತದ ರಾಮಯ್ಯ, ಆದಯ್ಯ, ವಿರುಪರಸ, ಗೊಗ್ಗರಸ ಮೊದಲಾದವರಿಂದ ಜೈನ ಧರ್ಮವು ಭರಿಸಲಾಗದ ನಷ್ಟವನನ್ನುಭವಿಸಿತು. ತರುವಾಯದ ಬಸವೋತ್ತರ ವೀರಶೈವ ಕ್ರಾಂತಿಯು ಒಂದರ್ಭದಲ್ಲಿ ಜೈನಧರ್ಮದ ಬುಡವನ್ನೇ ಅಲ್ಲಾಡಿಸಿಬಿಟ್ಟಿತು. ಒಂದು ಪ್ರತ್ಯೇಕ ಪ್ರಬಂಧವಾಗುವಷ್ಟು ಮಾಹಿತಿಯನ್ನು ಈ ನಿಟ್ಟಿನಲ್ಲಿ ಕಲೆ ಹಾಕಬಹುದಾದರೂ ಇಲ್ಲಿ ಕೇವಲ ಅದರ ಸೂಚನೆಗಳನ್ನು ಮಾತ್ರ ಕೊಡಲಾಗಿದೆ. ಕೆಲವೊಮ್ಮೆ ಆರೋಗ್ಯಪೂರ್ಣವಾದ ಮತ್ತೆ ಕೆಲವೊಮ್ಮೆ ಅನಾರೋಗ್ಯಕರವಾದ ಸ್ಪರ್ಧೆಗಳು ಧಾರ್ಮಿಕ ಕ್ಷೇತ್ರದಲ್ಲಿರುವುದು ಸರ್ವಸಾಮಾನ್ಯ. ಅದರಾಚೆಯೂ ಈ ಎರಡೂ ಧರ್ಮಗಳು ತಮ್ಮ ಗುಣಾತ್ಮಕ ವರ್ಚಸ್ಸನ್ನು ಉಳಿಸಿಕೊಂಡಿರುವುದು ಶ್ಲಾಘನೀಯವಾಗಿದೆ.

೮. ಇಬ್ಬರನ್ನು ಕುರಿತಾಗಿ ರಚನೆಯಾಗಿರುವ ಸಾಹಿತ್ಯ : ಮಹಾವೀರ ಬಸವಣ್ಣ ಇಬ್ಬರೂ ಯುಗಪುರುಷರು. ತಮ್ಮ ತಮ್ಮ ಕಾಲಘಟ್ಟದಲ್ಲಿ ತಮ್ಮ ತಮ್ಮ ಪರಿಸರದಲ್ಲಿ ಅವರು ಅಪಾರ ಪ್ರಭಾವವನ್ನು ಹೊಂದಿದವರಾಗಿದ್ದಾರೆ. ಜನಮಗಳಲ್ಲಿ ಅಚ್ಚಳಿಯದ ಸ್ಥಾನ ಪಡೆಯಬಲ್ಲ ವ್ಯಕ್ತಿತ್ವ ಅವರದಾಗಿದ್ದಿತು. ಅಂತೆಯೇ, ಅವರು ಕಾವ್ಯಗಳ ನಾಯಕರಾದರು; ವಿವಿಧ ಬಗೆಯ ಸಾಹಿತ್ಯಕ್ಕೆ ವಸ್ತುವಾದರು. ಸಂಸ್ಕೃತ, ಪ್ರಾಕೃತ, ಕನ್ನಡ, ತಮಿಳು ಮೊದಲಾದ ಭಾಷೆಗಳಲ್ಲಿ ಕವಿಗಳು ಮಹಾವೀರರ ಜೀವನವನ್ನು ಕಲಾತ್ಮಕವಾಗಿ ಕಂಡರಿಸಿದ್ದಾರೆ. ಎರಡನೆಯ ನಾಗವರ್ಮನ 'ವರ್ಧಮಾನ ಪುರಾಣ' ಅಚಣ್ಣ ಕವಿಯ 'ವರ್ಧಮಾನ ಪುರಾಣ'ಗಳು ಈ ದೃಷ್ಟಿಯಿಂದ ಕನ್ನಡದ ಮಹತ್ವದ ಕೃತಿಗಳು. ಸಂಸ್ಕೃತದ ಮಹಾಪುರಾಣ, ಕನ್ನಡದ

ತ್ರಿಶಷ್ಟಿಶಲಾಕಪುರುಷ ಪುರಾಣಗಳಲ್ಲಿ ಮಹಾವೀರರ ಜೀವನ ಚರಿತ್ರೆ ನಿರೂಪಿತವಾಗಿದೆ. ಅಲ್ಲದೆ ಅನೇಕ ಕತೆ, ಕವನ ಕಾದಂಬರಿಗಳಿಗೆ ಮಹಾವೀರರ ವ್ಯಕ್ತಿತ್ವವು ಸ್ಫೂರ್ತಿ ನೀಡಿದೆ.

ಬಸವಣ್ಣನ ಯಶೋಗಾಥೆಯೂ ಸಣ್ಣದಲ್ಲ. ತೆಲುಗು, ಕನ್ನಡಭಾಷಾ ಕವಿಗಳು ಬಸವಣ್ಣನ ವ್ಯಕ್ತಿತ್ವವನ್ನು ಹಾಡಿ ಹರಸಿದ್ದಾರೆ. ಪಾಲ್ಕುರಿಕೆ ಸೋಮನಾಥ, ಭೀಮಕವಿ, ಹರಿಹರ ಮೊದಲಾದವರ ಬಸವಕೇಂದ್ರಿತ ಕೃತಿಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಅದಷ್ಟೇ ಅಲ್ಲದೆ ಅನೇಕ ಪ್ರಕಾರಗಳ ಅನೇಕ ಕೃತಿಗಳಿಗೆ ಬಸವಣ್ಣ ವಸ್ತುವಾಗಿದ್ದಾನೆ. ಕನ್ನಡ ಸಾಹಿತ್ಯವನ್ನು ಬಸವಣ್ಣ ವ್ಯಾಪಿಸಿಕೊಂಡಷ್ಟು ಪ್ರಮಾಣದಲ್ಲಿ ಬೇರೆ ಯಾರೂ ವ್ಯಾಪಿಸಿಕೊಂಡಿರಕ್ಕಿಲ್ಲವೆಂದರೂ ಅತಿಶಯೋಕ್ತಿಯಾಗಲಾರದು. "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವ"ರೆಂದು ಬಸವಣ್ಣನೇ ಹೇಳಿಲ್ಲವೆ?

ಒಟ್ಟಾರೆ ಮಹಾವೀರ–ಬಸವಣ್ಣ ಇಬ್ಬರೂ ಈ ಜಗತ್ತು ಕಂಡಿರುವ ಕೆಲವೇ ಜನ ವಿಭೂತಿ ಪುರುಷರಲ್ಲಿ ಸ್ಥಾನ ಪಡೆಯಬಲ್ಲವರಾಗಿದ್ದಾರೆ. ಇಬ್ಬರೂ ಬಹುಮುಖ ವ್ಯಕ್ತಿತ್ವ ಹೊಂದಿದವರು. ಇಬ್ಬರೂ ಅಸಾಧಾರಣ ರಾಷ್ಟ್ರೀಯ ಪುರುಷರು. ಇಬ್ಬರ ವಿಚಾರಧಾರೆಗಳನ್ನು ವಿಶ್ಲೇಷಿಸಿದಾಗ ಮಹಾವೀರನ ಪ್ರಭಾವವು ರಾಷ್ಟ್ರವ್ಯಾಪ್ತಿಯಾಗಿದ್ದುದು, ಬಸವಣ್ಣನ ಪ್ರಭಾವವು ಕರ್ನಾಟಕವ್ಯಾಪಿಯಾಗಿದ್ದುದು ತಿಳಿದುಬರುತ್ತದೆ. ಮಹಾವೀರ ಸಂನ್ಯಾಸಿಯಾಗಿದ್ದ. ಹೆಚ್ಚು ಅಂತರ್ಮುಖಿಯಾಗಿದ್ದ. ನೈತಿಕತೆಗೆ ಹೆಚ್ಚು ಒತ್ತು ಕೊಟ್ಟಿದ್ದ. ಬಸವಣ್ಣ ಸಂಸಾರಿಯಾಗಿದ್ದ, ಹೆಚ್ಚು ಬಹಿರ್ಮುಖಿಯಾಗಿದ್ದ, ಸಾಮಾಜಿಕತೆಗೆ ಹೆಚ್ಚು ಒತ್ತು ಕೊಟ್ಟಿದ್ದ, ಇಬ್ಬರೂ ಅಸಾಧಾರಣ ಪ್ರಗತಿಪರರು, ಮಹಾವೀರ ಉತ್ತರದ ಬೆಳಕಾಗಿದ್ದರೆ ಬಸವಣ್ಣ ದಕ್ಷಿಣದ ಬೆಳಕಾಗಿದ್ದ! ಮಹಾವೀರನ ಕನಸುಗಳು ಬಸವಣ್ಣನ ಮೂಲಕ ನನಸಾಗಿವೆ. ಇಂಥ ದೊಡ್ಡ ವ್ಯಕ್ತಿಗಳನ್ನು ನಾವು ನಿಷ್ಪಕ್ಷಪಾತವಾದ ನಿರ್ಮಲ ಭಾವದಿಂದ ಪರಿಭಾವಿಸಬೇಕು. ಆಗ ಅವರೆಲ್ಲ ನಮಗೆ ಒಂದೇ ಆಗಿ ಕಾಣುತ್ತಾರೆ. ಕಣ್ಣು ಎರಡಾದರೂ ಕಾಣುವ ನೋಟ ಒಂದೇ!

❐

ಬಸವಣ್ಣ ಮತ್ತು ಬುದ್ಧ

●

ಡಾ. ಬುದ್ದಣ್ಣ ಹಿಂಗಮಿರೆ

ಕರ್ನಾಟಕದ ಮತ–ಧರ್ಮಗಳ ಇತಿಹಾಸದಲ್ಲಿ ಬಸವಣ್ಣ ಅವರೊಬ್ಬ ಕ್ರಾಂತಿಕಾರಿಯಾಗಿ ಗಮನ ಸೆಳೆಯುವುದುಂಟು, ಅನೇಕ ವರ್ಷಗಳಿಂದ ಧರ್ಮ ತನ್ನ ನಿಜವಾದ ಅರ್ಥದಲ್ಲಿ ಧರ್ಮಕಾರ್ಯವನ್ನು ಸರಿಯಾಗಿ ಮಾಡುತ್ತಿರಲಿಲ್ಲ. 'ಹತೋ ಹನ್ತಿ. ರಕ್ಷತೋ ರಕ್ಷತಿ ಧರ್ಮ:' ಧರ್ಮವನ್ನು ರಕ್ಷಿಸುವವರನ್ನು ಅದು ಕಾಯುತ್ತದೆ, ಧರ್ಮವನ್ನು ಆಚರಿಸದೆ ನಡೆಯುವವರನ್ನು ಅದು ಶಿಕ್ಷಿಸುತ್ತದೆ–ಎನ್ನುವ ಮಾತು ಅರ್ಥವತ್ತಾಗಿದೆ.

ವೇದಕಾಲದ ಯಜ್ಞ–ಯಾಗಾದಿಗಳಿಂದ ಹಿಡಿದು ಮನುಷ್ಯನಿಂದ ಧರ್ಮ ದೂರವಾಗುತ್ತ ಹೋಗಿ ಜನರ ಸಮಸ್ಯೆಗಳನ್ನು ನಿವಾರಿಸಲು ಹಾಗೂ ಅವರ ಬದುಕಿಗೆ ನೆಮ್ಮದಿಯನ್ನು ನೀಡುವ ದಾರಿಯನ್ನು ತೋರಲು ಸಮರ್ಥವಾಗಲಿಲ್ಲ. ಕರ್ಮಕಾಂಡದಲ್ಲಿ, ಜಾಡ್ಯದಲ್ಲಿ, ಅಜ್ಞಾನದ ಮೌಢ್ಯದಲ್ಲಿ ಸಿಕ್ಕು ನರಳುತ್ತಿದ್ದ ಜನಕ್ಕೆ ಆಗ ಹೊಸ ಧರ್ಮದ ಅವಶ್ಯಕತೆಯಿತ್ತು. ಬುದ್ಧ ತನ್ನ ಕಾಲದಲ್ಲಿ ಸಮಾಜದ ಸ್ಥಿತ್ಯಂತರಗಳನ್ನು ಅರ್ಥಮಾಡಿಕೊಂಡು, ವೈಧಿಕಧರ್ಮದ ಆಚರಣೆಯಲ್ಲಿದ್ದ ತೊಡಕುಗಳನ್ನು ಕ್ರೌರ್ಯವನ್ನು ಎತ್ತಿತೋರಿ, ದಿಕ್ಕೆಟ್ಟ ಜನತೆಗೆ ಒಂದು ದಿಕ್ಕು ತೋರಲು ಶ್ರಮಿಸಿದ್ದುಂಟು. ಮತೀಯ ಹಾಗೂ ಜಾತೀಯ ಭಾವನೆಗಳನ್ನು ತೊಡೆದುಹಾಕಲು ಬುದ್ಧ ಸಂಘವನ್ನು ಸ್ಥಾಪಿಸಿ ಅದರಲ್ಲಿ ಎಲ್ಲಾ ಜಾತಿ, ಮತ, ಪಂಥ, ವಿವಿಧವೃತ್ತಿಗಳಲ್ಲಿ ತೊಡಗಿಕೊಂಡವರನ್ನು ಸೇರಿಸಿಕೊಂಡ. ಹೀಗಾಗಿ ಬುದ್ಧನ ಧರ್ಮ ಜನತೆಯ ಧರ್ಮವಾಗಿ ಜನಪ್ರಿಯತೆ ಪಡೆಯಿತು.

ಅದರಂತೆ ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣ ವೀರಶೈವ ಧರ್ಮಕ್ಕೆ ಹೊಸಚಾಲನೆಯನ್ನು ನೀಡಿ ಎಲ್ಲಾ ಜಾತಿಯ ಜನರು, ವಿವಿಧ ವೃತ್ತಿಗಳಲ್ಲಿ ತೊಡಗಿಕೊಂಡವರು ಬಸವಣ್ಣನ ಕರೆಗೆ ಓಗೊಟ್ಟರು. ಬಸವಣ್ಣ ವೀರಶೈವಧರ್ಮಕ್ಕೆ ಹೊಸ ಶಕ್ತಿ ಬರುವಂತೆ ಮಾಡಿದರು.

ಚಮ್ಮಾರರು, ಕಮ್ಮಾರರು, ಡೋಹರು, ಹರಿಜನರು, ಗಿರಿಜನರು–ಹೀಗೆ ವಿವಿಧ ವೃತ್ತಿಗಳಲ್ಲಿ ತೊಡಗಿಕೊಂಡವರು ಅನುಭವಮಂಟಪದ ಸಂಪರ್ಕದಿಂದ ಹೊಸ ಮನುಷ್ಯರಾಗಿ ಪರಿವರ್ತಿತರಾಗಿ ಬಸವಣ್ಣ ಅವರಿಗೆಲ್ಲ ದಾರಿದೀಪವಾಗಿ ನಿಂತನು.

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ. ಹೀಗೆ ಅವನ ಬಾಯಿಂದ ಉಕ್ಕಿ ಬಂದ ಮಾತು ಹಲವರ ಗಮನ ಸೆಳೆದವು. ನಿಮ್ನವರ್ಗದವರು ವೀರಶೈವಧರ್ಮದ ತತ್ವಗಳಿಗೆ ಮಾರುಹೋಗಿ ಬಸವಣ್ಣ ಕಟ್ಟಬಯಸಿದ್ದ ಹೊಸಸಮಾಜದಲ್ಲಿ ಭಾಗಿಯಾದರು. ಪರಂಪರೆಯ ಹೆಸರಿನಲ್ಲಿ ಜನರನ್ನು ಅಡ್ಡದಾರಿಗೆಳೆಯುತ್ತಿದ್ದ ಮೂಢನಂಬಿಕೆಗಳ ವಿರುದ್ಧ ಸಿಡಿದೆದ್ದು ಬಸವಣ್ಣ ಅಂಥವರನ್ನು ವಿಡಂಬಿಸಲು ಹಿಂದುಮುಂದು ನೋಡಲಿಲ್ಲ;

'ನೀರ ಕಂಡಲ್ಲಿ ಮುಳುಗುವರಯ್ಯ
ಮರನ ಕಂಡಲ್ಲಿ ಸುತ್ತುವರಯ್ಯ'

ಹೀಗೆಂದು ವಿಡಂಬಿಸುತ್ತ, ರೋಗಗ್ರಸ್ತ, ಜಡಸಮಾಜಕ್ಕೆ ಚಿಕಿತ್ಸೆಯೊದಗಿಸಿದನು. ದಿಕ್ಕೆಟ್ಟವರಿಗೆ ದಿಕ್ಕು ತೋರಿಸುವ ಮಾರ್ಗದರ್ಶಿಯಾದನು. ದೇವರು-ದೈವ-ಮೂಢನಂಬಿಕೆಗಳಲ್ಲಿ ಮುಳುಗಿದವರನ್ನು, ಅಜ್ಞಾನ, ಅಂಧಶ್ರದ್ಧೆಗಳಿಂದ ಕಂಗೆಟ್ಟವರನ್ನು ಕಂಡು ಬಸವಣ್ಣ ಮರುಗಿದನು.

ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ

ಹೀಗೆ ಜನಕ್ಕೆ ಸಾಂತ್ವನಪರ ನುಡಿಗಳನ್ನಾಡಿದನು.ಅಂತರಂಗಶುದ್ಧಿಯ ಕಡೆಗೆ ಅವರ ಗಮನ ಸೆಳೆದನು.

ಉಳ್ಳವರು ಶಿವಾಲಯ ಮಾಡುವರು
ನಾನೇನು ಮಾಡಲಿ ಬಡವನಯ್ಯ?
ನನ್ನ ಕಾಲೇ ಕಂಬ ದೇಹವೇ ದೇಗುಲ
ಶಿರವೇ ಹೊನ್ನದ ಕಳಸವಯ್ಯ–

ಎಂದು ಹೇಳಿದ್ದು ಅರ್ಥಪೂರ್ಣವಾಗಿದೆ.

ಸ್ಥಾವರಕ್ಕಳಿವುಟು; ಜಂಗಮಕ್ಕಳಿವಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದುಂಟು. ಈ ವಚನದಲ್ಲಿ ಉಳ್ಳವರು, ಬಡವರು, ಶಿವಾಲಯ-ಮುಂತಾದ ಪದಗಳು ಹೊಸ ಅರ್ಥವನ್ನು ಬಿಚ್ಚುತ್ತವೆ. ಬಸವಣ್ಣನ ಮನಸ್ಸಿನಲ್ಲಿ ರೂಪುಗೊಳ್ಳುತ್ತಿದ್ದ ಸಮಾನತೆಯ ಹಾಗೂ ಸಮಾಜವಾದೀ ಕಲ್ಪನೆಯನ್ನು ಮೂಡಿಸಲು ಸಮರ್ಥವಾಗುತ್ತವೆ. ಕಾರ್ಲ್‌ಮಾರ್ಕ್ಸ್ ಬಳಸಿರುವ Haves ಮತ್ತು Have nots - ಪದಗಳು ಭಂಡವಾಳಶಾಹಿ ಮತ್ತು ಬಡವರು ಎಂಬ ಎರಡು ವರ್ಗಗಳನ್ನು ನಿರ್ದೇಶಿಸುತ್ತದೆ.

ಬುದ್ಧ-ಬಸವಣ್ಣ ಅವರು ಬೋಧಿಸಿದ ತತ್ವಗಳು ಸಮಾಜವನ್ನು ಮೇಲೆತ್ತಿ ಸಮತೆಯ ಸ್ತರವೊಂದನ್ನು ರಚಿಸುವಲ್ಲಿ ಸಹಾಯಕವಾಗುತ್ತವೆ. ಬುದ್ಧನ ನಿಲುವಿಗೂ ಬಸವಣ್ಣನ ನಿಲುವಿಗೂ ಒಂದಿಷ್ಟು ಅಂತರವನ್ನು ಕಾಣಬಹುದಾಗಿದೆ. ಬುದ್ಧ ರಾಜ್ಯ-ವೈಭವಗಳನ್ನು ತ್ಯಜಿಸಿ ಕಾಡಿಗೆ ಹೋದವನು. ಅವನು ತನ್ನ ಕಾಲಕ್ಕೆ ತಕ್ಕಂತೆ ಸ್ಪಂದಿಸಿದನು. ಆಸೆ ಆಮಿಷಗಳಿಂದ ಬಿಡುಗಡೆ ಹೊಂದಿದ ಅವನು ಆಶೆಯೆ ಸರ್ವದುಃಖಕ್ಕೆ ಮೂಲವೆಂದು ಗುರುತಿಸಿದವನು. ಆಶೆಯ ಹಿಂದೆ ಬೆನ್ನುಹತ್ತಿ ಹೊರಟವರನ್ನು ಬುದ್ಧ ಸೂಕ್ಷ್ಮವಾಗಿ ಎಚ್ಚರಿಸುತ್ತ ಜನಮನವನ್ನು ಗೆಲ್ಲಲು ಸಮರ್ಥನಾದನು.

ತನ್ನದೇ ಆದ ತತ್ವಪ್ರಣಾಲಿಯನ್ನು ಬೋಧಿಸಿ ಸಮಾಜವನ್ನು ರಕ್ಷಿಸಲು ಮುಂದಾದ.

ರಾಜಮಹಾರಾಜರಿಂದ ಹಿಡಿದು ದೀನ–ದಲಿತ–ಅನಾಥರು ಬುದ್ಧ ತೋರಿದ ಬೆಳಕಿನ ದಾರಿಯಲ್ಲಿ ನಡೆದರು, ಬುದ್ಧನ ಕಾಲಕ್ಕೆ ಇದ್ದ ಸ್ಥಿತಿಗತಿಗಳು ಬಸವಣ್ಣನ ಕಾಲಕ್ಕೆ ಇರಲಿಲ್ಲ. ಬಸವಣ್ಣನ ಕಾಲದ ಸಮಾಜದಲ್ಲಿ ಹಲವು ಸ್ಥಿತ್ಯಂತರಗಳು ಕಾಣಿಸಿಕೊಂಡಿದ್ದವು. ಅಜ್ಞಾನ, ಮೌಢ್ಯ, ಅಂಧಶ್ರದ್ಧೆಗಳು, ಭೀತಿ, ಶೋಷಣೆ – ಇವು ವ್ಯಾಪಿಸಿದ್ದುವಲ್ಲದೆ ರಾಜಮಹಾರಾಜರ ಅಧಿಕಾರದ ದರ್ಪ, ದಾಳಿಗಳೂ ಹೆಚ್ಚುತ್ತ ಬಂದಿದ್ದವು. ದಿಕ್ಕೆಟ್ಟು ಅಂಡಲೆಯುತ್ತಿದ್ದ ಜನತೆಗೆ ಮಾರ್ಗದರ್ಶಕನೊಬ್ಬನ ಅವಶ್ಯಕತೆಯಿತ್ತು. ಈ ಹಿಂದೆ ಇದ್ದ ಕೆಲವು ಶರಣರು ಆದರ್ಶ ಸಮಾಜದ ಕನಸು ಕಾಣುತ್ತಿದ್ದರು.

ಬಸವಣ್ಣನ ಕಾಲದಲ್ಲಿ ಮನುಷ್ಯ, ಮನುಷ್ಯಜೀವಿತ ಹಾಗೂ ಸಮಾಜ ಇವೇ ಕೇಂದ್ರಬಿಂದುಗಳಾಗಿ ದೇವರು ಹಾಗ ದೈವತ್ವದ ಕಲ್ಪನೆಗಳು ಪೊಳ್ಳಾಗಿ ಪರಿಣಮಿಸುತ್ತಿದ್ದವು.

ಮನುಷ್ಯನ ಮಣ್ಣಿನ ಸಂಬಂಧ ಹಾಗೂ ಅವರು ತಾವು ಕೈಕೊಂಡ ವೃತ್ತಿಗಳು ಹೊಸ ಅರ್ಥವನ್ನು ಪಡೆದುಕೊಂಡು ಅವರವರು ತಂತಮ್ಮ ಅನುಭವಗಳನ್ನು ಮುಕ್ತವಾಗಿ ನಿವೇದಿಸುವ ಸಂದರ್ಭ, ಅವಕಾಶಗಳು ಬಸವಣ್ಣನ ಕಾಲಕ್ಕೆ ಲಭ್ಯವಾದವು. ಜನರು ಅಂಥ ಮಾನಸಿಕ ಸ್ವಾತಂತ್ರ್ಯವನ್ನು ಅನುಭವಿಸಲಾರಂಭಿಸಿದರು.

ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಮೋಳಿಗೆಯ ಮಾರಯ್ಯ ನುಲಿಯ ಚೆಂದಯ್ಯ, ಹಡಪದ ಅಪ್ಪಣ್ಣ ಮುಂತಾದ ವಿಭಿನ್ನ ವೃತ್ತಿಗಳಿಗೆ ಸೇರಿದವರು ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ ಮುಂತಾದವರ ಅನುಭವ ಹಾಗೂ ದರ್ಶನಕ್ಕೆ ಮನ್ನಣೆಯಿತ್ತು ಸಮಾಜದಲ್ಲಿ ತಮ್ಮೆಲ್ಲರಿಗೆ ಸಮನಾದ ಸ್ಥಾನಮಾನವಿರುವುದನ್ನು ಕಂಡುಕೊಂಡರು.

ಸಾಮಾಜಿಕ, ರಾಜಕೀಯ, ಧಾರ್ಮಿಕ ಸ್ಥಿತ್ಯಂತರಗಳನ್ನು ಅರ್ಥವಿಸಿಕೊಂಡು ಬಸವಣ್ಣ ಭಕ್ತಿಯ ನೆಲೆಯಲ್ಲಿಯೆ ಮಾನವನ ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ನಿಲುವುಗಳನ್ನು ಎತ್ತರಿಸಲು ಸಹಾಯಕವಾಗುವಂತೆ ಸರ್ವರಿಗೂ ದುಡಿಮೆಯ ಧರ್ಮವನ್ನು ಬೋಧಿಸಿದನು. ಕಾಯಕವೇ ಕೈಲಾಸವೆಂದು ಬಗೆದವರು ಕಾಯಕವೇ ಕೈಲಾಸವೆಂಬುದನ್ನು ತಮ್ಮ ದುಡಿಮೆಯಿಂದ ಸಿದ್ಧಪಡಿಸಿ ತೋರಿದರು. ಕಾಯಕತತ್ವ ವೀರಶೈವಧರ್ಮದ ಮೂಲ ಬುನಾದಿಯಾಯಿತು. ದೇವರು ದೈವಗಳ ಕಲ್ಪನೆ ಆಗಾಗ ಕಂಡುಬಂದರೂ ದುಡಿಮೆಗೆ ಅಗ್ರಸ್ಥಾನ ದೊರೆಯಿತು. ಇಲ್ಲಿಯವರೆಗೆ ದೇವರು–ದೈವಗಳ ಭೀತಿಯನ್ನು ಸೃಷ್ಟಿಸಿ ಜನತೆಯನ್ನು ಕಂಗೆಡಿಸುತ್ತಿದ್ದ ಧರ್ಮದ ಕಪ್ಪು–ಕೈಗಳೊಳಗಿಂದ ಜನತೆಯನ್ನು ಮುಕ್ತರನ್ನಾಗಿಮಾಡಿ ಅಭಯ ನೀಡಬೇಕಾಗಿತ್ತು. ಬಸವಣ್ಣ ಸ್ವತಃ ತಾನು ಕಾಯಕ ನಿಷ್ಠನಾಗಿ, ಅಂಥ ಸಂದೇಹ ಸಂಶಯಗಳನ್ನು ನಿವಾರಿಸಲು ಮುಂದಾದನು. ಮಾರ್ಕ್ಸ್‌ನ 'ದಾಸ್‌ಕ್ಯಾಪಿಟಲ್' ಹುಟ್ಟುವ ಎಷ್ಟೋ ವರ್ಷಗಳಿಗೆ ಪೂರ್ವದಲ್ಲಿಯೇ ಬಸವಣ್ಣ ದುಡಿಮೆಗೆ ಒತ್ತುಗೊಟ್ಟು, ಉತ್ಪಾದನೆಯನ್ನು ಹೆಚ್ಚಿಸುವ ವಿಚಾರಮಾಡಿ ಅದನ್ನು ವೈಯಕ್ತಿಕ ಹಾಗೂ ಸಾಮಾಜಿಕ ಸ್ತರದಲ್ಲಿ ನಿರಂತರವಾಗಿ ಮುಂದುವರಿಯುವಂತೆ ಪ್ರಯತ್ನಿಸಿದ್ದು ಗಮನಾರ್ಹ. ಬಸವಣ್ಣನ ಕಾಲದಲ್ಲಿ ದುಡಿಮೆಗೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕು, ಅದರ ಅರ್ಥ ಹಿಗ್ಗುವಂತಾಯಿತು. ನಿರಂತರ ಹಾಗೂ ನಿಸ್ವಾರ್ಥ ದುಡಿಮೆ ಆರ್ಥಿಕ ಸಮಾನತೆಗೆ ದಾರಿ ಮಾಡಿಕೊಡುವುದು, ವೃತ್ತಿಗಳ ತಾರತಮ್ಯ, ಮೇಲು–ಕೀಳುಭಾವನೆಗಳು ಮರೆಯಾಗಿ ಒಂದು ಧರ್ಮದ ಅಡಿಯಲ್ಲಿ

ಕೂಡುವ, ಕಲೆಯುವ, ವಿಚಾರ–ವಿನಿಮಯ ಮಾಡುವ ಅವಕಾಶ ಲಭ್ಯವಾಯಿತು. ಜಾತಿ–ಮತಗಳ ಬಗೆಗೆ ಬೇರುಬಿಟ್ಟಿದ್ದ ತುಚ್ಛಭಾವನೆಗಳು ಇಲ್ಲದಂತಾಗಿ ವೃತ್ತಿಗಳ ಹಾಗೂ ವ್ಯಕ್ತಿಗಳ ಗೌರವ ಹೆಚ್ಚುವಂತಾಯಿತು.

ಬುದ್ಧನ ಸಂಘದ ಅನುಯಾಯಿಗಳಾಗಿದ್ದ ಭಿಕ್ಷುಗಳು ಸಮಾಜವನ್ನು ಬೆಸೆಯುವ ಕೊಂಡಿಗಳಾಗಿದ್ದರು. ಸಮಾಜದ ದೈನಂದಿನ ಅನುಭವ, ಜನತೆಯ ಅಶೋತ್ತರಗಳನ್ನು ತಿಳಿದುಕೊಂಡವರಾಗಿದ್ದು, ನಿಸ್ವಾರ್ಥದಿಂದ ಜನತೆಯ ಹಿತಕ್ಕಾಗಿ, ಉನ್ನತಿಗಾಗಿ ದುಡಿಯುವವರಾಗಿದ್ದರು. ಭಿಕ್ಷುಗಳು ಸಂಘ ಜೀವನದ ಶಕ್ತಿಯನ್ನು ಅರಿತುಕೊಂಡವ ರಾಗಿದ್ದರು. ಬಸವಣ್ಣನ ಕಾಲದಲ್ಲಿಯ ಶರಣ ಸಮುದಾಯವೂ ಸಾಮಾಜಿಕ ಶಕ್ತಿಯಾಗಿ ತನ್ನ ಕಾರ್ಯಭಾರವನ್ನು ವಿಸ್ತರಿಸುತ್ತಿತ್ತು. ವೈಚಾರಿಕ ನೆಲೆಯಲ್ಲಿ ಧಾರ್ಮಿಕ, ಸಾಮಾಜಿಕ, ರಾಜಕೀಯ ವಿಷಯಗಳಿಗೆ ಸಂಬಂಧಿಸಿದ ಚರ್ಚೆಗಳು ಮುಖಾಮುಖಿಯಾಗಿ ನಡೆಯುವ ಶರಣಸಮಾಜವೊಂದು ನಿರ್ಮಾಣವಾಗಿತ್ತು. ಬುದ್ಧನ ಕಾಲದಲ್ಲಿ ವೈಚಾರಿಕ ನೆಲೆಯಲ್ಲಿ ಪರಸ್ಪರ ತಿಳುವಳಿಕೆ, ಅಂತರಂಗ ಪರಿವರ್ತನೆ ಇತ್ಯಾದಿ ನಡೆದಂತೆ, ಬಸವಣ್ಣನ ಕಾಲದಲ್ಲಿ ಇನ್ನಷ್ಟೂ ಹೆಚ್ಚು ನಿಖರವಾಗಿ, ಸ್ಪಷ್ಟವಾಗಿ ನಡೆದದ್ದು ಗಮನಾರ್ಹವಾದದ್ದು. ಕ್ರಾಂತಿಗೆ ಭೂಮಿಯನ್ನು ಸಿದ್ಧಗೊಳಿಸುವ ಪೂರ್ವದಲ್ಲಿ ವೈಚಾರಿಕ, ಸಾಂಸ್ಕೃತಿಕ ಬದಲಾವಣೆ ಅತ್ಯಗತ್ಯವಾಗಿದ್ದುದನ್ನು ಬಸವಣ್ಣ ಮನಗಂಡಿದ್ದನೆಂದು ತೋರುತ್ತದೆ. ಧಾರ್ಮಿಕ, ಸಾಮಾಜಿಕ, ರಾಜಕೀಯ ನೆಲೆಯಲ್ಲಿ ಬದಲಾವಣೆ ತರುವುದೇ ಬಸವಣ್ಣನ ವಿಚಾರಗಳ ಮುಖ್ಯ ಆಶಯವಾಗಿತ್ತು. ಬುದ್ಧ, ಬಸವಣ್ಣ, ಮಾರ್ಕ್ಸ್ ಈ ಮೂವರಲ್ಲಿಯೂ ಸಮಾಜವ್ಯವಸ್ಥೆಯನ್ನು ಬದಲಿಸಿ ಹೊಸಸಮಾಜವನ್ನು ನಿರ್ಮಿಸಬೇಕೆನ್ನುವ ಅಭೀಪ್ಸೆ ಸರ್ವಸಾಮಾನ್ಯವಾಗಿರುವುದನ್ನು ಗುರುತಿಸಬಹುದು. ಬಸವಣ್ಣನ ವಿಚಾರಧಾರೆಯಲ್ಲಿ ಮಾರ್ಕ್ಸ್–ಲೆನಿನ್‌ವಾದಿ ಸಮಾಜವಾದದ ಕಲ್ಪನೆ ಇರುವುದರಿಂದ ಬಸವಣ್ಣನ ವಿಚಾರಗಳು ವರ್ತಮಾನ ಸಂದರ್ಭದಲ್ಲಿಯೂ ಮಹತ್ವ ಪಡೆಯುತ್ತವೆ. ಬುದ್ಧ, ಬಸವಣ್ಣ ಅವರು ಧಾರ್ಮಿಕ ನೆಲೆಯಲ್ಲಿ ನಿಂತು ಸಮಾಜವ್ಯವಸ್ಥೆಯನ್ನು ಬದಲಿಸಬೇಕೆಂದು ಹೊರಟಿದ್ದರೆ ಕಾರ್ಲ್‌ಮಾರ್ಕ್ಸ್–ಮಾವೊ–ಲೆನಿನ್ ಹೋಚಿಮಿನ್ಹ್–ಮುಂತಾದವರು ಸಾಮಾಜಿಕ ಸ್ತರದಲ್ಲಿ ನಿಂತು ವೈಜ್ಞಾನಿಕ ನೆಲೆಯಲ್ಲಿ ಆಲೋಚಿಸಿ ಹೊಸ ಸಿದ್ಧಾಂತವನ್ನು ರೂಪಿಸಲು ಹಾಗೂ ತಂತಮ್ಮ ದೇಶಗಳಿಗೆ ಅದನ್ನು ಅನ್ವಯಿಸಲು ಮುಂದಾದರು.

ಬುದ್ಧನು ಆತ್ಮ–ಪರಮಾತ್ಮಗಳ ಕುರಿತು ವಿಚಾರಗಳಿಗೆ, ಜಿಜ್ಞಾಸೆಗೆ ಮಹತ್ವ ಕೊಡದೆ ಭೌತಿಕಪ್ರಪಂಚ, ಮನುಷ್ಯ ಜೀವಿತ, ಹಾಗೂ ಅದರ ಪ್ರಗತಿ–ಉನ್ನತಿ ಕುರಿತು ಗಾಢವಾಗಿ ಚಿಂತಿಸಿದ್ದುಂಟು.

ಆಸೆಯೇ ಸರ್ವದುಃಖಗಳಿಗೆ ಮೂಲವೆಂಬುದನ್ನು ಗುರ್ತಿಸಿ, ಭೌತಿಕದ ಮಟ್ಟದಲ್ಲಿ ನಿಂತು ಆಲೋಚಿಸಿದ್ದುಂಟು. ದೇವರು–ದಿಂಡರ, ದೈವಗಳ ಕಲ್ಪನೆಯನ್ನು ತಳ್ಳಿಹಾಕಿದ್ದರಿಂದ ಮನುಷ್ಯನ ಸುತ್ತು ಹೆಣೆದುಕೊಂಡಿದ್ದ ಮೂಢನಂಬಿಕೆ, ದಂತಕತೆ, ಪುರಾಣಗಳಿಗೆ ಅವಕಾಶವಿಲ್ಲದ ಹಾಗಾಯಿತು. ಬುದ್ಧನಧರ್ಮ ಮನುಷ್ಯನನ್ನು ಪರಂಪರಾಗತ ಮೌಢ್ಯದಿಂದ ಮಾನಸಿಕವಾಗಿ ಬಿಡುಗಡೆ ಮಾಡಿ ಅವನಲ್ಲಿ ಹೊಸ ಶಕ್ತಿಯನ್ನು ಸ್ಫುರಿಸಲು ಕಾರಣವಾಯಿತು.

ಬುದ್ಧನಧರ್ಮ ಸಾಮಾಜಿಕ ಸ್ತರದಲ್ಲಿ ಕೆಲಸಮಾಡುವುದರಿಂದ ಜಾತಿ–ಮತಗಳ ಗೋಜಲು–ಗೊಂದಲಗಳನ್ನು ಕಡಿಮೆ ಮಾಡುವಲ್ಲಿ ಯಶಸ್ವಿಯಾಯಿತು.

'ನಿಜವಾದ ಆನಂದ ಸಿಗುವುದು ಎಲ್ಲಿ?'[1] ಎನ್ನುವ ಪ್ರಶ್ನೆಗೆ ಬುದ್ಧ 'ಧರ್ಮವನ್ನು ಆಚರಿಸುವುದರಲ್ಲಿ' ಎಂದು ಉತ್ತರಿಸಿದ್ದುಂಟು. ಧರ್ಮ ಎನ್ನುವುದು ದೈವತ್ವ ಸುತ್ತಿಕೊಂಡಿರುವ ಕಗ್ಗಂಟು ಅಲ್ಲ. ಸ್ವಾರ್ಥರಹಿತ, ಲೋಭರಹಿತ ಸತ್ಯದ ಬದುಕನ್ನು ಸಾಗಿಸುವುದು ಧರ್ಮ. ದುಃಖ–ದುಮ್ಮಾನ, ಶೋಷಣೆ–ಸಂಕಟಗಳಲ್ಲಿ ಸಿಕ್ಕು ನರಳುವವರನ್ನು, ಅಂಥ ಸ್ಥಿತಿಯಿಂದ ಪಾರುಮಾಡಲು ಬೌದ್ಧಧರ್ಮ, ವೀರಶೈವ ಧರ್ಮಗಳು ಕ್ರಿಯಾಶೀಲವಾದವು. ಬಂಡವಾಳಶಾಹಿ ಅಧಿಕಾರಸ್ಥರ ಕಪಿಮುಷ್ಠಿಯಿಂದ ಮನುಷ್ಯನ ಬಿಡುಗಡೆಯ ಕುರಿತು ಈ ಧರ್ಮಗಳು ಗಂಭೀರವಾಗಿ ಚಿಂತಿಸಿದವು. ದೀನ–ದಲಿತರಿಗೆ, ಬಡವರಿಗೆ ನ್ಯಾಯ ದೊರಕುವ ಉಪಾಯಗಳನ್ನು ಕಂಡಹಿಡಿದು ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಿದವು. ಸಾಮಾಜಿಕರ ಮನಃಪರಿವರ್ತನೆಯನ್ನು ಮಾಡುವಲ್ಲಿ ಈ ಎರಡು ಧರ್ಮಗಳು ಶ್ರಮಿಸಿದವು.

"Marx sees the Communist Revolution as revolution of Self change, and Communism it self as a new state of the generic human self. It is man's "regaining of self", the reintegration or return of man to himself". transcendance of human self alienation".[2]

ಬೋಧಿಜ್ಞಾನ ಎನ್ನುವುದು ಅಂದೊಂದು ತಿಳುವಳಿಕೆಯೇ ವಿನಾ ಬೇರೇನೂ ಅಲ್ಲ. ಬದುಕನ್ನು ವ್ಯವಸ್ಥಿತವಾಗಿ, ನಿಶ್ಚಿತವಾಗಿ ಧೈರ್ಯದಿಂದ ಬಾಳಬೇಕೆನ್ನುವ ತಿಳುವಳಿಕೆಯನ್ನು ಹೆಚ್ಚಿಸುವುದು ಬುದ್ಧನ ಮುಖ್ಯ ಉದ್ದೇಶಗಳಲ್ಲಿ ಒಂದಾಗಿತ್ತು. ಬದುಕು ಒಡ್ಡಬಹುದಾದ ಸವಾಲುಗಳನ್ನು ನಿರಾಕರಿಸಿ 'ತಿಳುವಳಿಕೆ'ಯನ್ನು ಅಥವಾ ಜ್ಞಾನವನ್ನು ಪಡೆಯುವುದಲ್ಲ. ಬುದ್ಧ ಹಾಗೂ ಭಿಕ್ಷುಗಳು ಸಮಾಜದೊಂದಿಗೆ ಬೆರೆತುಕೊಂಡು ಬದುಕಿನ ತಿಳಿವಳಿಕೆಯನ್ನು ಮಾಡಿಕೊಡಲು ಹೆಣಗಿದಂತೆ ಬಸವಣ್ಣ ಮತ್ತು ಆ ಕಾಲದ ಶರಣ ಸಮಾಜ ಅಂಥ ಜವಾಬ್ದಾರಿಯ ಕಾರ್ಯದಲ್ಲಿ ತೊಡಗಿಕೊಂಡು ಸಮಾಜವನ್ನು ಎಚ್ಚರದಲ್ಲಿಡುವಂತೆ ಹೆಣಗಿದರು. ಅಸತ್ಯ, ಅನ್ಯಾಯ, ಶೋಷಣೆಗಳ ವಿರುದ್ಧ ಹೋರಾಡುತ್ತ ದುಷ್ಟಶಕ್ತಿಗಳೊಡನೆ ಪ್ರತಿಭಟಿಸಿದರು.

ಬುದ್ಧ, ಬಸವಣ್ಣ ಇವರ ವಿಚಾರಧಾರೆ ಸಮಾಜವನ್ನು ಪುನರ್ನಿರ್ಮಿಸುವ ವಿಶಿಷ್ಟ ಧಾತುವನ್ನೊಳಗೊಂಡಿದ್ದು, ಚಲನಶೀಲ ಗುಣವುಳ್ಳವುಗಳಾಗಿವೆ.

❐

1. Quoted : Buddha and Buddhism p-41 Arthur Lillle - 1975
2. Quoted from : Buddha, Marx and God Trevor Ling - 1966.

ಅರಿವಿನ ಸ್ವರೂಪ : ಅಲ್ಲಮ ಮತ್ತು ಬಸವಣ್ಣನವರ ಚಿಂತನೆಗಳು

●

ಡಾ. ಓ.ಎಲ್. ನಾಗಭೂಷಣಸ್ವಾಮಿ

ಭಾಗ ಒಂದು : ಸಲುಗೆ ಬಿನ್ನಪ

ನಾನು ವಚನಗಳನ್ನು ಗಂಭೀರವಾಗಿ ಓದತೊಡಗಿದ್ದು ತೀರ ಇತ್ತೀಚೆಗೆ, ವಚನಗಳು ಈಗ ನನ್ನ ಆಸಕ್ತಿಯ ವಿಷಯವಾಗಿರುವುದಕ್ಕೆ ಹಲವು ಕಾರಣಗಳಿವೆ. ಕನ್ನಡದ ನವ್ಯ ವಿಮರ್ಶೆಯು ಕಲಿಸಿಕೊಟ್ಟಿರುವುದಕ್ಕಿಂತ ಭಿನ್ನವಾದ ವ್ಯಾಖ್ಯಾನದ ಸಾಧ್ಯತೆಗಳನ್ನು ಹುಡುಕುವ ಹಂಬಲ ಮತ್ತು ಕನ್ನಡದ ಚಿಂತನ ಕ್ರಮಗಳನ್ನು ಗುರುತಿಸುವ ಅಪೇಕ್ಷೆ ಇವು ಮುಖ್ಯವಾಗಿ ವಚನಗಳಲ್ಲಿ ನನ್ನ ಆಸಕ್ತಿಯನ್ನು ಕುದುರಿಸಿವೆ.

ನವ್ಯ ವಿಮರ್ಶೆಯದು ಓದುಗನ ವ್ಯಕ್ತಿತ್ವವನ್ನು ಮರೆತ ವಿಮರ್ಶೆಯ ವಿಧಾನ. ಕಾವ್ಯದಲ್ಲಿ ಬರುವ 'ನಾನು' ಎಂಬುದು ಕವಿಯ ವ್ಯಕ್ತಿತ್ವವಲ್ಲ, ಅದನ್ನು ಕೇವಲ ಕಾಲ್ಪನಿಕ ಪಾತ್ರವೆಂದು ತಿಳಿಯಬೇಕು ಎಂದು ನಮಗೆ ಹೇಳಿಕೊಡಲಾಯಿತು. ಆದರೆ, ಓದುತ್ತಿರುವವನು 'ನಾನು' ತಾನೇ? ಕವನದಲ್ಲಿ ಬರುವ 'ನಾನು' ಎಂಬುದನ್ನು ಓದುಗನಾದ ನಾನೇ ಎಂದು ತಿಳಿದು ನನಗೇ ಅನ್ವಯಿಸಿಕೊಳ್ಳಬಾರದೇಕೆ? ಕವನದ 'ನಾನು' ಓದುಗನಾದ ನಾನೇ ಎಂದೆಂದಾಗ ಓದುವಿಕೆಗೆ ಹಿಗ್ಗು ದೊರೆಯುತ್ತದೆ. ಈ ಹಿಗ್ಗು ಸಂತೋಷವೂ ಹೌದು. ವ್ಯಕ್ತಿತ್ವದ ಹಿಗ್ಗುವಿಕೆಯೂ ಹೌದು. "ಎನ್ನ ಚಿತ್ತ ಅತ್ತಿಯ ಹಣ್ಣು", "ನಾನೇನ ಮಾಡಲಿ ಬಡವನಯ್ಯಾ, ಎನ್ನ ಕಾಲೇ ಕಂಬ" ಇತ್ಯಾದಿ ಮಾತುಗಳು ಬಸವಣ್ಣನ ಮಾತುಗಳಲ್ಲಿ ಇಂಥ ಎಡೆಗಳಲ್ಲಿ ಬರುವ ನಾನು ಎಂಬ ಸರ್ವನಾಮ ನನ್ನನ್ನೇ ಕುರಿತದ್ದು ಎಂದು ತಿಳಿದಾಗ ಆಗುವ ಅನುಭವವೇ ಬೇರೆ. ಆಗ ಕವನ ಅಥವಾ ವಚನ ವಿವರಿಸಲೆಂದೇ ಇರುವ ವಸ್ತುವಾಗಿರುವುದಿಲ್ಲ, ನನಗೆ ಆದ, ಆಗುವ ಅನುಭವವಾಗಿ ಕಾಣತೊಡಗುತ್ತದೆ. "ಚಾತುರ್ವರ್ಣ್ಯವನ್ನು ನಾನು ಸೃಷ್ಟಿಸಿದೆ", "ಅಧರ್ಮವನ್ನು ನಾಶಮಾಡಿ ಧರ್ಮವನ್ನು ಸ್ಥಾಪಿಸಲು ನಾನು ಹುಟ್ಟಿ ಬರುತ್ತೇನೆ" ಎಂಬಂಥ ಮಾತುಗಳನ್ನು ಕೃಷ್ಣನ, ದೇವರ ಮಾತುಗಳು ಎಂದು ಭಾವಿಸುವುದಕ್ಕಿಂತ ನನ್ನದೇ ಮಾತುಗಳು ಎಂದು ನೋಡಲು ಸಾಧ್ಯವಾಗುವುದಾದರೆ, ಅಂದರೆ "ಭಗವದ್ಗೀತೆ"ಯ 'ಕೃಷ್ಣ ಹೇಳಿದ' ಎಂಬ ಮಾತುಗಳೆಲ್ಲ ನನ್ನದೇ ಮಾತುಗಳು ಎಂದಾದರೆ ಆಗ ದೊರೆಯುವ ಅರ್ಥಾನುಭವ ದಿಗಿಲು

ಹುಟ್ಟಿಸುವಂಥದ್ದು. ಜಾತಿ ಭೇದಗಳನ್ನು ಸೃಷ್ಟಿಸಿದವನು 'ನಾನೇ' ಅಧರ್ಮವನ್ನು ಕೊನೆಗಾಣಿಸುವವನೂ 'ನಾನೇ' ಎಂದಾಗ ನನಗಿರುವ, 'ನಾನು' ಎಂದುಕೊಳ್ಳುವ ಪ್ರತಿಯೊಬ್ಬ ಓದುಗನಿಗೂ ಇರುವ ಸಾಮಾಜಿಕ ಹೊಣೆಗಾರಿಕೆ ಅನುಭವಕ್ಕೆ ಬರತೊಡಗುತ್ತದೆ. ಕಾವ್ಯ ಸಾಹಿತ್ಯದ,

'ನಾನು' ಲೇಖಕನಲ್ಲ.
ಕಲ್ಪಿತ ಪಾತ್ರವೂ ಅಲ್ಲ
ಓದುಗನಾದ 'ನಾನೇ'

ಎಂದು ಪರಿಗಣಿಸುವುದು ಓದಿನ ಹೊಸ ಅನುಭವಗಳಿಗೆ ಕಾರಣವಾಗುತ್ತದೆ. ವಚನಗಳಾದರೂ ಅಷ್ಟೇ. ವಚನಗಳ ಈ ದೃಷ್ಟಿಯ ಓದು ನಮ್ಮೊಳಗನ್ನೇ ನಾವು ಪರಿಶೀಲಿಸಿಕೊಳ್ಳಲು ಒತ್ತಾಯಿಸುತ್ತದೆ. ವಚನಗಳು ನನ್ನ ಖಾಸಗಿ ಬದುಕಿನ, ನನ್ನೊಳಗಿನ ಹಿಗ್ಗು–ತಲ್ಲಣಗಳ, ನನ್ನ ಒಳಗೇ ಇರುವ ಅಪೇಕ್ಷೆ–ಆದರ್ಶಗಳ ಮಾತುಗಳಾಗತೊಡಗುತ್ತವೆ. ಇದು ವಚನಗಳ ಬಗ್ಗೆ ನನಗೆ ಆಸಕ್ತಿ ಹುಟ್ಟಲು ಒಂದು ಕಾರಣ.

ಇನ್ನೊಂದು ಕಾರಣವೇನೆಂದರೆ ಕನ್ನಡದ ಚಿಂತನಕ್ರಮಗಳನ್ನು ಗುರುತಿಸಬೇಕೆಂಬ ಆಕಾಂಕ್ಷೆ. ಹಾಗೆ ನಿಜವಾಗಿ ಶುದ್ಧದೇಸೀ ಚಿಂತನಕ್ರಮಗಳು ಇವೆಯೇ, ಇರಲು ಸಾಧ್ಯವೇ ಎಂಬ ಪ್ರಶ್ನೆಗಳನ್ನು ಬೇರೊಂದು ಲೇಖನದಲ್ಲಿ ಚರ್ಚಿಸಿದ್ದೇನೆ. ಇಲ್ಲಿ ಇಷ್ಟು ಮಾತ್ರ ಹೇಳಬಹುದು. ನಮ್ಮ ಇವತ್ತಿನ ಅಗತ್ಯಗಳಿಗೆ ಅನುಗುಣವಾಗಿ ನಾವು ಭೂತಕಾಲವನ್ನು, ಚರಿತ್ರೆಯನ್ನು ಸೃಷ್ಟಿಸಿಕೊಳ್ಳುತ್ತೇವೆ. ನಾಳಿನ ಕನಸು ನಮ್ಮ ಇಂದಿನ ವರ್ತನೆಗಳನ್ನು ನಿರ್ಧರಿಸುತ್ತಿರುತ್ತದೆ. ಸಮಾನತೆ, ಮಾನವೀಯ ಸಮಾಜ ಸೃಷ್ಟಿ ಇವು ನಮ್ಮ ನಾಳಿನ ದಿನಗಳಲ್ಲಿ ನಿಜವಾಗಬೇಕಾದ ಕನಸುಗಳಾದರೆ ಅದಕ್ಕೆ ತಕ್ಕಂತೆ ಇಂದಿನ ಕ್ರಿಯೆಗಳು ಇರುತ್ತವೆ; ಇರಬೇಕು. ಇದರಿಂದಾಗಿ ಇವತ್ತಿನ ಕ್ರಿಯೆಗಳಿಗೆ ಅನುಗುಣವಾಗಿರುವಂತೆ ನಮ್ಮ ಭೂತಕಾಲವನ್ನೂ ಚರಿತ್ರೆಯನ್ನೂ ಕಲ್ಪಿಸಿಕೊಳ್ಳುತ್ತೇವೆ. ಭವಿಷ್ಯದ ಆಕಾಂಕ್ಷೆ ವರ್ತಮಾನವನ್ನೂ, ವರ್ತಮಾನದ ಅಗತ್ಯ ಭೂತವನ್ನೂ ಸೃಷ್ಟಿಸುತ್ತದೆ, ಇಂಗ್ಲೆಂಡಿನ, ಆ ಮೂಲಕ ಪಶ್ಚಿಮದ, ಆಳ್ವಿಕೆಗೆ ಗುರಿಯಾಗಿ ನಮ್ಮ ಇವತ್ತಿನ ಭೌತಿಕ ಜೀವನಕ್ರಮ ರೂಪುಗೊಂಡಿದೆ. ಅಥವಾ ನಮ್ಮ ಬದುಕು ಇವತ್ತು ಹೀಗಿರುವುದಕ್ಕೆ ಇಂಗ್ಲಿಷರ ಆಳ್ವಿಕೆ ಕಾರಣ ಎಂದು ಚರಿತ್ರೆ ಕಟ್ಟಿಕೊಂಡಿದ್ದೇವೆ. ಪಶ್ಚಿಮವೆಂಬುದು ಆಕರ್ಷಣೆಯಾಗಿ, ಪಿಶಾಚಿಯಾಗಿ, ಮಹಾ–ಮಾಯೆಯಾಗಿ ನಮ್ಮನ್ನು ಆವರಿಸಿಕೊಂಡಿದೆ. ನಮ್ಮತನದ ಪ್ರಶ್ನೆ ಕಾಡತೊಡಗಿದೆ. ಕನ್ನಡತನದ ಅನ್ವೇಷಣೆಗೆ ಈ ತಾಂತ್ರಿಕ ಯುಗದಲ್ಲಿ ವಿಚಿತ್ರ ಜರೂರಿ ಒದಗಿದೆ.

ಬದುಕಿನ ರೀತಿ ಮತ್ತು ಬದುಕನ್ನು ಕುರಿತ ಚಿಂತನೆಗಳ ಪರಸ್ಪರ ಸಂಬಂಧಗಳ ಬಗ್ಗೆ ಹನ್ನೆರಡನೆಯ ಶತಮಾನದಲ್ಲಿ ನಡೆದಷ್ಟು ಪ್ರಮಾಣದ ಚರ್ಚೆ ಬಹುಶಃ ಕನ್ನಡದಲ್ಲಿ ಮತ್ತೆಂದೂ ನಡೆದಂತಿಲ್ಲ. ವಚನಕಾರರೆಲ್ಲರಲ್ಲೂ ಒಂದೇ ಬಗೆಯ ಜೀವನದೃಷ್ಟಿ ಇರಲಿಲ್ಲವೆಂದು ಒಮ್ಮೆ ಅನಿಸಿದರೆ ವಚನಕಾರರು ಭಿನ್ನರೆಂಬಂತೆ ಕಂಡರೂ ಅವರೆಲ್ಲರ ಭಿನ್ನತೆಯ ಹಿಂದೆ ಏಕ ಸೂತ್ರತೆಯೂ ಒಂದು ಕೆಲಸ ಮಾಡುತ್ತಿದೆ ಎಂದೂ ಇನ್ನೊಮ್ಮೆ ಅನಿಸುತ್ತದೆ. ಸಮಾನ ತಾತ್ವಿಕ ಭಿತ್ತಿಯ ಮೇಲೆ ಬರೆದ ವಿವಿಧ ವಿಭಿನ್ನ ವರ್ಣ ಚಿತ್ರಗಳಂತೆ ವಚನಗಳು ಕಾಣುತ್ತವೆ.

ವಚನಗಳ ಅರ್ಥವನ್ನು ನಾವು ಸಾಮಾನ್ಯವಾಗಿ ಸ್ಥಿರ, ಸಿದ್ಧ ಅರ್ಥಗಳು ಎಂದೇ ವ್ಯವಹರಿಸಿ ರೂಢಿಯಾಗಿಬಿಟ್ಟಿದೆ. ಆದರೆ ನಮಗೆ ಇಂದು ಲಭ್ಯವಿರುವ ಇಪ್ಪತ್ತು ಸಾವಿರ ಸಂಖ್ಯೆಯ ವಚನಗಳು ಕನ್ನಡ ಸಮುದಾಯವು ಹಲವು ಶತಮಾನಗಳ ವ್ಯಾಪ್ತಿಯಲ್ಲಿ ನಡೆಸಿದ ವಿಶಾಲ ಸಂವಾದದ ಭಾಗಗಳು. ಸಂವಾದದ ಸಮುದ್ರದಲೆಗಳ ಘೋಷ ಕೇಳುತ್ತದೆ. ನಿಜ, ಅಂತೆಯೇ ಸಂವಾದದ ಜೀವಂತ ಸಂದರ್ಭ ಎಂದೆಂದೂ ಕೈಗೆ ಸಿಗದಂತೆ ಮರೆಯಾಗಿರುವುದೂ ನಿಜ. ವಚನಗಳನ್ನು ಷಟ್‌ಸ್ಥಲಗಳ ಅನುಕ್ರಮದಲ್ಲಿ ಜೋಡಿಸಿರುವುದಾಗಲೀ, ಶೂನ್ಯ ಸಂಪಾದನೆಗಳ ಹಾಗೆ ನಾಟಕೀಯಗೊಳಿಸಿರುವುದೇ ಆಗಲಿ ವಚನ ಸಂವಾದಗಳಿಗೆ ಆನಂತರದ ಮನಸ್ಸುಗಳು ಕೊಟ್ಟುಕೊಂಡಿರುವ ರೂಪಗಳು ಅಷ್ಟೇ. ಒಂದು ಕಾಲದಲ್ಲಿ ಜೀವಂತ ಮಾನವ ಸಂದರ್ಭದಲ್ಲಿ ಉಸಿರುತುಂಬಿಕೊಂಡು ಮಾತಾಗಿದ್ದವುಗಳನ್ನು ಮತ್ತೊಂದು ಕಾಲದಲ್ಲಿ ಬದುಕಿದ ಮನುಷ್ಯರು ಶಾಶ್ವತವಾದ ಸಾವಲ್ಲದೆ ಅಕ್ಷರರೂಪದಲ್ಲಿ ಬಂಧಿಸಿಟ್ಟಿದ್ದರಿಂದ ವಚನಗಳಿಗೆ ಈ ಬಗೆ ಬಗೆಯ ರೂಪಗಳು ಪ್ರಾಪ್ತವಾಗಿವೆ. ವಚನಗಳು ಅಕ್ಷರರೂಪತಾಳಿ ಉಳಿದದ್ದು ನಾಡಿನ ಪುಣ್ಯ, ಹೌದು. ಹಾಗೆಯೇ ಒಮ್ಮೆ ಪ್ರಾಣತುಂಬಿದ ಮಾತು ಆಗಿದ್ದ ವಚನ ಜಡವಾದ ಅಕ್ಷರಮಾತ್ರವಾಗಿ ಕಂಡು ಅವುಗಳ ಜೀವಂತ ಚಲನಶೀಲ ಅರ್ಥ ಅಕ್ಷರದ ಕಾರಣದಿಂದಲೇ ಜಡವಾದದ್ದು ದುರಂತವಲ್ಲದಿದ್ದರೂ ವ್ಯಂಗ್ಯವಂತೂ ಹೌದು.

ವಚನಗಳ ಅರ್ಥಕ್ಕೆ ಮತ್ತೆ ಜೀವ ಬರಬೇಕಾದರೆ ಅವುಗಳನ್ನು ತೀರ ಬೇರೆಯದೇ ಕ್ರಮದಲ್ಲಿ, ನಮ್ಮ ಕಾಲದ ಅಗತ್ಯಗಳು ಮತ್ತು ಪ್ರಶ್ನೆಗಳೊಡನೆ ಅವುಗಳೊಡನೆ ಸಂವಾದಿಸುತ್ತ, ನಮ್ಮದೇ ಕ್ರಮದಲ್ಲಿ ವಚನ ಸಂವಾದವನ್ನು ಏರ್ಪಡಿಸಿಕೊಳ್ಳಬೇಕು. ನಮ್ಮ ಕಾಲ, ನಮ್ಮ ಸಮಾಜ ಎಂಬುದು ತೀರ ದೊಡ್ಡ ಮಾತಾಯಿತು. ನನ್ನ ಅಗತ್ಯ ಅನ್ನುವುದು ಸರಿ ಎಂದು ಕಾಣುತ್ತದೆ. ಹೀಗೆ ನಾನು ಅಥವಾ ನನ್ನಂಥವರು ವಚನಗಳನ್ನು ಅರ್ಥ ಮಾಡಿಕೊಂಡರೆ ಆ ಅರ್ಥಗಳು ವಚನಗಳಲ್ಲಿ ಇದೆ ಎಂದಲ್ಲ. ಇಷ್ಟು ವರ್ಷಗಳ ನಂತರ ವಚನಗಳು ನಮಗೆ ಹೀಗೆ ಅರ್ಥ ಆಗುತ್ತಿವೆ ಎಂದಷ್ಟೇ ಅರ್ಥ. ಅಲ್ಲಮನ ಒಂದು ಮಾತು ನೆನಪಿಗೆ ಬರುತ್ತಿದೆ: ಅಂದಂದಿನ ನುಡಿಯ ಅಂದಂದೆ ಅರಿಯಬಾರದು. ಅಂದಿನ ನುಡಿ ಇಂದು ನನ್ನ ಪ್ರಜ್ಞೆಯಲ್ಲಿ ಅರ್ಥವಾದ ಬಗೆಯನ್ನು ವಿವರಿಸುವ ಯತ್ನ ಇದು.

ನಾನು ಅಲ್ಲಮ ಮತ್ತು ಬಸವಣ್ಣ ಇವರ ವಚನಗಳೊಡನೆ ಸಂವಾದಿಸಿದ ರೀತಿಯ ಬಗ್ಗೆ ಎರಡು ಮಾತು. ಮನುಷ್ಯನ ಮನಸ್ಸು ಕೆಲವು ಪ್ರಶ್ನೆಗಳನ್ನು ಕಾಲಕಾಲಕ್ಕೆ ಕೇಳಿಕೊಳ್ಳುತ್ತಲೇ ಬಂದಿದೆ. ಪ್ರಶ್ನೆಗಳು ಬದಲಾಗಿಲ್ಲ. ಆದರೆ ಕಂಡುಕೊಂಡ ಉತ್ತರಗಳು ಮಾತ್ರ ಕಾಲ ಕಾಲಕ್ಕೆ, ಭಾಷೆ ಭಾಷೆಗೆ ವ್ಯತ್ಯಾಸವಾಗಿರುವಂತೆ ತೋರುತ್ತದೆ. ಅಂಥ ಪ್ರಶ್ನೆಗಳಲ್ಲಿ ಇವು ಕೆಲವು; ಅರಿವು ಅಥವಾ ಜ್ಞಾನ ಅಂದರೇನು? ಅದರ ಸ್ವರೂಪವೇನು? ಅದನ್ನು ಪಡೆಯುವುದು ಹೇಗೆ? ಅರಿವನ್ನು ಪ್ರಭಾವಿಸುವ, ಅದರ ಸ್ವರೂಪವನ್ನು ನಿರ್ಧರಿಸುವ ಸಂಗತಿಗಳು ಯಾವುವು? ಇಂಗ್ಲಿಷಿನ ಪದ ಬಳಸಿ ಹೇಳುವುದಾದರೆ ಇವು ಎಪಿಸ್ಟಮಾಲಜಿಯ ಪ್ರಶ್ನೆಗಳು. ಈ ಪ್ರಶ್ನೆಗಳಿಗೆ ವಚನಕಾರರು ಕೊಟ್ಟ ಉತ್ತರ ಯಾವುದು ಅನ್ನುವುದು ನನ್ನ ಕುತೂಹಲ. ಈ ಪ್ರಶ್ನೆಗಳು ಕೇವಲ ವೇದಾಂತಿಗಳು, ತತ್ವಶಾಸ್ತ್ರಜ್ಞರು ಮಾತ್ರ ತಲೆಕೆಡಿಸಿಕೊಳ್ಳಬೇಕಾದ ಸಂಗತಿಗಳಲ್ಲ. ನಾವು ಒಬ್ಬೊಬ್ಬರೂ ನಮಗೆ ಸ್ಪಷ್ಟವಾಗಿ ಗೊತ್ತಿರಲಿ ಇಲ್ಲದಿರಲಿ ನಮ್ಮದೇ ಆದ ಜೀವನದೃಷ್ಟಿ, ಲೋಕ ದೃಷ್ಟಿಗಳನ್ನು ಬೆಳೆಸಿಕೊಂಡಿರುತ್ತೇವೆ. ನಮ್ಮೆಲ್ಲ ವರ್ತನೆಗಳೂ ನಮ್ಮ ಈ ದೃಷ್ಟಿಗೆ

ಅನುಗುಣವಾಗಿಯೇ ಇರುತ್ತವೆ. ಈ ನಮ್ಮ ದೃಷ್ಟಿಯ ವೈಶಿಷ್ಟ್ಯಕ್ಕೆ ಕಾರಣವಾಗಿರುವುದು ಅರಿವನ್ನು ಕುರಿತ ನಮ್ಮ ತಿಳಿವು, ಎಚ್ಚರ, ಪ್ರಜ್ಞೆ, ಧೋರಣೆ ಇತ್ಯಾದಿಗಳು.

ಇಬ್ಬರು ಪ್ರಮುಖ ವಚನಕಾರರು ಅರಿವಿನ ಸ್ವರೂಪವನ್ನು ಕುರಿತು ಚಿಂತಿಸಿರುವ ಪರಿಯನ್ನು ತಿಳಿಯುವುದರಿಂದ ನಾಲ್ಕು ಬಗೆಯ ಲಾಭಗಳಿವೆ. ಮೊದಲನೆಯದು ಮತ್ತು ಮುಖ್ಯವಾದದ್ದು, ನನ್ನಲ್ಲಿರುವ ಅರಿವು ಕುರಿತ ಎಚ್ಚರಕ್ಕೆ, ಪ್ರಶ್ನೆಗಳಿಗೆ ಮೊನಚು ಲಭಿಸುತ್ತದೆ. ಎರಡನೆಯದು ಮನುಷ್ಯನನ್ನು ಕಾಡಿರುವ ಮುಖ್ಯಪ್ರಶ್ನೆಗಳಲ್ಲಿ ಒಂದಕ್ಕೆ ಕನ್ನಡ ಮನಸ್ಸು ಕಂಡುಕೊಂಡಿರುವ ಉತ್ತರಗಳು ಹೊಳೆಯುತ್ತವೆ. ಮೂರನೆಯದು ಮನಃಶಾಸ್ತ್ರ, ತತ್ವಶಾಸ್ತ್ರ, ಕಾವ್ಯಮೀಮಾಂಸೆ, ಜ್ಞಾನಶಾಸ್ತ್ರ ಮುಂತಾದ ಮಾನವಿಕ ಶಾಸ್ತ್ರಗಳನ್ನು ಕನ್ನಡದ ಮಣ್ಣಿನಿಂದಲೇ ಚಿಗುರಿಸಲು ಅಗತ್ಯವಾದ ಬೀಜಗಳು ವಚನಕಾರರಲ್ಲಿ ಮಾತ್ರ ದೊರೆಯುತ್ತವೆ. ಭಿನ್ನ ಮಾನವಿಕ ಶಿಸ್ತುಗಳ ದೃಷ್ಟಿಯಿಂದ ವಚನಗಳನ್ನು ಅಭ್ಯಾಸಮಾಡುವ ಅಗತ್ಯ ಇಂದು ಹೆಚ್ಚಾಗಿದೆಯೆಂದು ಭಾವಿಸುತ್ತೇನೆ. ನಾಲ್ಕನೆಯದು ನಾವು ನಮ್ಮ ನಾಡಿನ ಚರಿತ್ರೆಯ ಮುಖ್ಯ ಕಾಲಘಟ್ಟವೊಂದರ ಪ್ರಮುಖ ವ್ಯಕ್ತಿತ್ವಗಳ ಬಗ್ಗೆ ಮತ್ತು ಅವರ ಕಾರ್ಯಗಳ ಬಗ್ಗೆ ಈಗಿಗಿಂತ ಬೇರೆ ರೀತಿಯ ತಿಳಿವಳಿಕೆಯನ್ನು ಪಡೆಯಲು ಸಾಧ್ಯವಿದೆ.

ಭಾಗ ಎರಡು : ಆಲಯ ಮತ್ತು ಬಯಲು

"ಬಯಲ ರೂಪ ಮಾಡಬಲ್ಲಾತನೆ ಶರಣ" (೯೨೨) – ಇದು ಬಸವನ ಮಾತು. "ಅರಿದೆನೆಂಬುದು ತಾ ಬಯಲು, ಅರಿಯೆನೆಂಬುದು ತಾ ಬಯಲು, ಅರಿವಿನ ಕುಱುಹಿನ ಮಱಹಿನೊಳಗೆ ಗುಹೇಶ್ವರನೆಂಬುದು ತಾ ಬಯಲು" (೬.೨೩) – ಇದು ಅಲ್ಲಮನ ಮಾತು. ಅಲ್ಲಮನಿಗೆ ವ್ಯಕ್ತಿತ್ವವೆಂಬುದಿಲ್ಲ. ಅವನು ಬರೀ ಬಯಲು. ಬಸವನಿಗೆ ವ್ಯಕ್ತಿತ್ವ ಇದೆ. ಅವನು ಆಶ್ರಯವಾಗಬಹುದಾದ ಆಲಯ. ಅಲ್ಲಮ ನನ್ನ ಕೆಲವು ಮನಃಸ್ಥಿತಿಗಳಲ್ಲಿ ಅನುಭವಕ್ಕೆ ಬಂದು, ಆದರೆ, ಇರದೆ ಹೋಗುತ್ತಾನೆ. ಅಲ್ಲಮನಿಗೆ ಅರ್ಥವಿಲ್ಲ. ಬಸವ, ನನಗೆ ಅಗತ್ಯವಿದ್ದರೆ, ಕಷ್ಟಪಟ್ಟು ಅರ್ಥಮಾಡಿಕೊಳ್ಳಬೇಕಾದ, ನನಗೆ ಬೇಕಾದಂತೆ ವಿವರಿಸಿಕೊಳ್ಳಬಹುದಾದ ಅರ್ಥವಿರುವ, ಅಗತ್ಯವಿರುವ ಬದಲಾವಣೆಗಳಿಗೆ ಒಗ್ಗುವ ವಿನ್ಯಾಸಹೊಂದಿರುವ ಆಲಯವಾಗಿ ಕಾಣುತ್ತಾನೆ.

ಈ ಮಾತುಗಳಿಗೆ ಸ್ವಲ್ಪ ವಿವರಣೆ ಬೇಕು. ವ್ಯಕ್ತಿತ್ವ ಎನ್ನುವುದು ಅಗಾಧ, ಅಪರಿಮಿತ ಅವ್ಯಕ್ತದ ವ್ಯಕ್ತವಾದ ಭಾಗ. ಅಲ್ಪವಾದ ಭಾಗ. ವ್ಯಕ್ತವಾಗುವುದು ಇನ್ನೊಬ್ಬರಿಗೆ. ವ್ಯಕ್ತಿತ್ವ ಅನ್ನುವುದು ನನ್ನನ್ನು ಕುರಿತು ಇತರರ ದೃಷ್ಟಿಕೋನ ಅಥವಾ ನನ್ನ ಬಗ್ಗೆ ಇತರರು ಏನೆಂದುಕೊಂಡಿದ್ದಾರೆಂದು ನಾನು ಭಾವಿಸಿದ್ದೇನೋ ಅದು. ಹಾಗೆ ಇತರರ ಹಂಗು ಇಲ್ಲದಿದ್ದರೆ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಅಗತ್ಯವೂ ಇಲ್ಲ. ನಾನು ನಾನೇ ಆಗಿರಬಹುದು. ನನ್ನಲ್ಲಿ ಮೂಡುವ ಇತರರ ವ್ಯಕ್ತಿತ್ವ ಮತ್ತು ಇತರರಲ್ಲಿ ಮೂಡುವ ನನ್ನ ವ್ಯಕ್ತಿತ್ವ ಎರಡೂ ಕೇವಲ ಕಲ್ಪಿತಗಳೇ. ಕ್ರಿಯೆ ಮತ್ತು ಮಾತುಗಳನ್ನು ಆಧರಿಸಿ ವ್ಯಕ್ತಿತ್ವದ ಕಲ್ಪನೆಗಳು ಮೂಡುತ್ತವೆ. ಅಲ್ಲಮನ ವಚನಗಳಿಂದ ಮೂಡುವ ಕಲ್ಪನೆಗಳೆಂದರೆ ಅವನದು ಗ್ರಹಿಸಬಹುದಾದ ವ್ಯಕ್ತಿತ್ವವಿಲ್ಲದ ಪರಸ್ಪರ ವಿರೋಧತೆಯಂತೆ ತೋರುವ ವಿಚಾರಗಳ ಸಮೂಹ ಎಂಬ ಕಲ್ಪನೆಯಷ್ಟೇ.

ನಾವು ಇಂದು ಯಾವ ಅರ್ಥದಲ್ಲಿ "ಚರಿತ್ರೆ" ಅನ್ನುತ್ತೇವೋ ಆ ಅರ್ಥದ ಚರಿತ್ರೆಯನ್ನು ಅಲ್ಲಮ ನಿರಾಕರಿಸುತ್ತಾನೆ. ನಾವು ಇಂದು ಯಾವ ಅರ್ಥದಲ್ಲಿ "ಸಮಾಜ" ಅನ್ನುತ್ತೇವೋ ಆ ಅರ್ಥದ ಸಮಾಜದ ಹಂಗು ಅಲ್ಲಮನಿಗೆ ಇಲ್ಲ. ಅಲ್ಲಮನ ವಚನಗಳಲ್ಲಿ "ಊರು" ಎಂಬ ಪದ ಕೇವಲ ಸಂಕೇತಮಾತ್ರವಾಗಿ ಬರುತ್ತದೆ. "ಊರ ಮಧ್ಯದ ಕಣ್ಣ ಕಾಡಿನೊಳಗೆ ಬಿದ್ದೈದಾವೆ ಐದು ಹೆಣನು" (೨೬) "ಊರೊಳಗಣ ಕಿಚ್ಚು ಕಾನನದಲ್ಲಿ ಉರಿಯಿತ್ತು" (೫೩೭) ಮುಂತಾಗಿ ಸುಮಾರು ಹನ್ನೊಂದು ವಚನಗಳಲ್ಲಿ ಅಲ್ಲಮ "ಊರು" ಎಂಬ ಪದ ಬಳಸಿದ್ದರೂ ಅದು ಅನ್ಯೋಕ್ತಿ ಅಥವಾ ಸಂಕೇತ ಮಾತ್ರವಾಗಿ ಬಂದಿದೆ. ಆದರೆ ಬಸವಣ್ಣನಿಗೆ "ಊರು" ಎಂಬುದು ವಾಸ್ತವ ಸತ್ಯ. "ದೇವ ಭಕ್ತರಿಲ್ಲದೂರು ಸಿನೆಹಾಳು" (೮೧೧). "ಊರು ಮುನಿದು ನಮ್ಮನೇನ ಮಾಡುವರು" (೭೫೨) ಮುಂತಾದ ಸುಮಾರು ಹತ್ತು ವಚನಗಳಲ್ಲಿ ಬರುವ ಊರು ನಮ್ಮ ನಿಮ್ಮ ಪರಿಚಯದ ಊರುಗಳೇ ಆಗಿ ಕಾಣುತ್ತವೆ. ಬಸವಣ್ಣನಿಗೆ "ಅರಸ"ನೂ ವಾಸ್ತವ ಸತ್ಯ. "ಒಡಲನುರಿಕೊಂಬುದು, ಒಡವೆಯವರಸ ಕೊಂಬ" (೪೦), "ಅರಸರಿಯದ ಬಿಟ್ಟಿ" (೧೧೩) "ಆಳಾಗಿ ಹೊಕ್ಕು ಅರಸನಾಗಿ ನಡೆದೆಡೆ" (೨೫೪), "ಅರಸರ ಸುದ್ದಿ ಎನಗೇಕಯ್ಯಾ" (೪೦೧) ಇತ್ಯಾದಿಯಾಗಿ ಅರಸರ ಉಲ್ಲೇಖ ಬಸವಣ್ಣನ ಸುಮಾರು ಇಪ್ಪತ್ತಕ್ಕೂ ಹೆಚ್ಚು ವಚನಗಳಲ್ಲಿ ಎದುರಾಗುತ್ತದೆ. ಆದರೆ ಅಲ್ಲಮನಲ್ಲಿ "ಅರಸು" ಎಂಬ ಪದ ಕ್ರಿಯಾಪದವಾಗಿ ಬಳಕೆಯಾಗಿರುವುದೇ ಹೆಚ್ಚು. "ಮೂರುಲೋಕದರಸುಗಳು" (೧೯೭) ಎಂಬಲ್ಲಿ ಅಪರೂಪಕ್ಕೆ ಅರಸ ಬಂದರೂ ಅವನು ಸಮಾಜದ ಶಕ್ತಿಕೇಂದ್ರವಾಗಿ ಕಾಣಿಸುವುದಿಲ್ಲ. "ಆದಿಯ ಶರಣನ ಮದುವೆಯ ಮಾಡಲು ಯುಗ ಜುಗದವರೆಲ್ಲಾ ನಿಬ್ಬಣ ಹೋದರು" (೩೯೫) ಎಂಬಂಥ ವಚನಗಳಲ್ಲಿ ಕಾಲಕ್ರಮಾಗತದ ಚಾರಿತ್ರಿಕ ಹುಡುಕಾಟ ವ್ಯರ್ಥವೆಂದೇ ಹೇಳುತ್ತಾನೆ. ಭಾಷೆ, ವ್ರತ, ನೇಮ, ತಪಗಳನ್ನು ಬಗೆಬಗೆಯ ವ್ಯವಸ್ಥೆಗಳೆಂದು ಪರಿಗಣಿಸಿ (೩೨೬) "ತಪವೆಂಬುದು ತಗಹು, ನೇಮವೆಂಬುದು ಬಂಧನ, ಶೀಲವೆಂಬುದು ಸೂತಕ, ಭಾಷೆಯೆಂಬುದು ಪ್ರಾಣಘಾತಕ" (೭೨೩) ಅನ್ನುತ್ತಾನೆ. ಅವನೊಬ್ಬ ಸಂಪೂರ್ಣ ಬಂಡಾಯಗಾರ. ಎಲ್ಲ ಬಗೆಯ 'ವ್ಯವಸ್ಥೆ'ಗಳನ್ನು ಧಿಕ್ಕರಿಸುವ ಬಂಡಾಯಗಾರ. ಅಂಗೀಕೃತ ಧಾರ್ಮಿಕ ವ್ಯವಸ್ಥೆಯನ್ನು, ಅಂಗೀಕೃತ ತಿಳಿವಳಿಕೆಯನ್ನು ಸ್ವರೂಪವನ್ನು, ಅಂಗೀಕೃತ ವ್ಯಕ್ತಿತ್ವದ ಕಲ್ಪನೆಯನ್ನು, ಅಂಗೀಕೃತ ಭಾಷೆಯ ವ್ಯವಸ್ಥೆಯನ್ನು ಧಿಕ್ಕರಿಸುವವನು ಅವನು. ಆದರೆ ಇಂಥ ಅವನಿಗೂ ಭಾಷೆಯಿಂದ ಬಿಡುಗಡೆ ಇಲ್ಲ. 'ಭಾಷೆಯೆಂಬುದು ಪ್ರಾಣಘಾತಕ' ಎಂದು ಅವನು ನುಡಿದರೂ ಭಾಷೆಯಿಂದ ಅವನಿಗೆ ಬಿಡುಗಡೆಯಿಲ್ಲ. ಶಬ್ದದ ಬಗ್ಗೆ ಅವನಿಗೆ ತಿರಸ್ಕಾರವಿದ್ದರೂ ಅವನು ಮೆಚ್ಚಿದ ನಿಶ್ಶಬ್ದದ ಇರುವಿಕೆಗೆ ಶಬ್ದದ ವಿರೋಧ ಅಗತ್ಯವಾಗಿದೆ. ಶಬ್ದದೊಳಗೇ ಇರುವ ನಿಶ್ಶಬ್ದ. ನಿಶ್ಶಬ್ದದಿಂದ ಶಕ್ತಿ ಪಡೆಯುವ ಶಬ್ದ ಅವನದು. ಶಬ್ದವನ್ನು ನಿಶ್ಶಬ್ದವಾಗಿಸುವ ಅವನ ರೀತಿ ಮಾತಿನ ಅರ್ಥಗಳನ್ನು ಕಳೆಯುತ್ತದೆ. ಮಾತನ್ನು 'ಮಂತ್ರ'ವಾಗಿಸುತ್ತದೆ. ಅಲ್ಲಮ ಬಳಸುವ ಶಬ್ದಗಳ ನಡುವಿನ ನಿಶ್ಶಬ್ದವನ್ನು ನಮ್ಮದಾಗಿಸಿಕೊಳ್ಳಲು ಸಾಧ್ಯವಾದರೆ ಅವನು ನಮ್ಮ ಅನುಭವದ ಭಾಗ ಆದಾನು. ಹಾಗೆ ಎಲ್ಲ ವಿರೋಧಗಳನ್ನೂ ನಿರಾಕರಿಸಿ, ವೈರುಧ್ಯಗಳನ್ನು ನಿರಸನಗೊಳಿಸಿ ವ್ಯಕ್ತ ಅವ್ಯಕ್ತಗಳ ಅಖಂಡತೆಯನ್ನು ಬದುಕುವ ಅತಿದೊಡ್ಡ ಸಾಹಸದ ಸಾಧ್ಯತೆಯನ್ನು ಕಾಣಿಸಿಕೊಡುವುದರಿಂದಲೇ ಅಲ್ಲಮನನ್ನು ಓದುವುದೆಂದರೆ ಭಯವಾಗುತ್ತದೆ. ಗುರುತು ಮಾಡಿಕೊಳ್ಳಲು ಪದಗಳಿಲ್ಲದ, ದಿಕ್ಕು ಇಲ್ಲದ, ಯಾವ ಬಗೆಯ

ಅವಲಂಬನೆಯನ್ನೂ ಒದಗಿಸದ, ಸಹಾನುಭೂತಿಯನ್ನಾಗಲೀ ತಿರಸ್ಕಾರವನ್ನಾಗಲೀ ತೋರಿಸದ, ಸುಮ್ಮನೆ ಇರುವ ಬಯಲು ಯಾವ ಥರ ಭಯ ಹುಟ್ಟಿಸಬಹುದೋ ಅಂಥ ಭಯವನ್ನು ಅಲ್ಲಮ ಹುಟ್ಟಿಸುತ್ತಾನೆ. ಅಲ್ಲಮನಿಗೆ ಕಟ್ಟುವ ಆಸೆ ಇಲ್ಲ, ತಾನೇ ತಾನಾಗಿ 'ಇರು'ವ ಬಗೆ ಅವನದು. 'ಇರು' ಮತ್ತು 'ಇಲ್ಲ'ಗಳ ವ್ಯತ್ಯಾಸಗಳೇ ಅವನಿಗೆ ಇಲ್ಲ. ಅಲ್ಲಮನಿಗೆ ಹೋಲಿಕೆಯಿಲ್ಲ, ಪ್ರಮಾಣ ಇಲ್ಲ.

ಬಸವ ಇರುವ ಬಯಲನ್ನು ಆಲಯಗೊಳಿಸುವ, ಕಟ್ಟುವ ಕೆಲಸದಲ್ಲಿ ತೊಡಗಿದವನು. ಹಾಗೆ ತಾನು ಕಟ್ಟುವ ರೀತಿಯ ಬಗ್ಗೆ ಅಪಾರ ವಿಶ್ವಾಸವನ್ನೂ ತೀವ್ರವಾದ ಅನುಮಾನಗಳನ್ನೂ ಹೊಂದಿದವನು. ತನ್ನ ಐತಿಹಾಸಿಕ ಜವಾಬ್ದಾರಿಯ ಅರಿವನ್ನೂ ಅದರ ಬಗ್ಗೆ ಅಳುಕನ್ನೂ ಇಟ್ಟುಕೊಂಡಿರುವವನು. ಸತತವಾಗಿ ತನ್ನನ್ನು 'ಇತರ'ರೊಂದಿಗೆ ಹೋಲಿಸಿಕೊಳ್ಳುವವನು. ವೈರುಧ್ಯಗಳನ್ನು ಒಪ್ಪಿಕೊಂಡವನು. ಹಾಗೆ ಒಪ್ಪಿಕೊಂಡರೂ ಅದನ್ನು ದಾಟಲು ಸಾಧ್ಯವೇ ಎಂದು ದಾರಿಹುಡುಕುವನು. ಆದ್ದರಿಂದಲೇ ಬಸವನ ಮಾತುಗಳಲ್ಲಿ ಒಪ್ಪಬಹುದಾದ, ಒಪ್ಪದೆ ಇರಬಹುದಾದ ಅರ್ಥಗಳು ಇವೆ. ಬಸವ ವ್ಯವಸ್ಥೆಯ ವ್ಯಕ್ತಿ. ಅವನು ರೂಪಿಸಿದ್ದು ತೀರ ಭಿನ್ನವೇ ಆದರೂ ಇನ್ನೊಂದು ವ್ಯವಸ್ಥೆಯೇ. ಬಸವನಿಗೆ ಭಾಷೆಯ ಬಗ್ಗೆ ನಂಬಿಕೆ ಇದೆ. ಮಾತಿನ ಅರ್ಥದಲ್ಲಿ ನಂಬಿಕೆ ಇದೆ. ಅರ್ಥವೆನ್ನುವುದು ಇರುವುದೆಲ್ಲ ವ್ಯವಸ್ಥೆಯ ಭಾಗವಾಗಿ, ವ್ಯವಸ್ಥೆ ಇರುವುದೇ ವೈರುಧ್ಯಗಳ ಚೌಕಟ್ಟಿನೊಳಗೆ. ಬಸವ ಎಷ್ಟೇ ಬೆಳೆದರೂ ಅವನ ಬೆಳವಣಿಗೆಗೆ ಚೌಕಟ್ಟಿದೆ. ಅಲ್ಲಮನಲ್ಲಿ ಮಾತು ಮಂತ್ರ ಅನಿಸಿದರೆ ಬಸವನಲ್ಲಿ ಮಾತು ಅನ್ನುವುದು ನೀತಿಯಾಗಿದೆ. ವರ್ತನೆಯ ವಿಧವಾಗಿದೆ. ಅವನದು 'ಸರಿಯಾದ ಪಥ' ಯಾವುದೆನ್ನುವ ಹುಡುಕಾಟ. ಪಥ ಒಂದಿದೆ. ಅದು ನಾನು ನಡೆಯುತ್ತಿರುವ ಪಥ ಹೌದೇ ಅನ್ನುವ ಅನುಮಾನಗಳು ಬಸವನನ್ನು ಕಾಡುವುದುಂಟು.

'ಪಥ' ಎಂಬುದು ಬಸವನ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ವಚನಗಳಲ್ಲಿ ಮತ್ತೆ ಮತ್ತೆ ಕಾಣುತ್ತದೆ. "ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ" (೧೪೭), "ಮುನ್ನಿನ ಆದ್ಯರ ಪಥಗಳು ಇನ್ನಾರಿಗೂ ಅಳವಡವು" (೬೩೩) ಎಂದು ಗುರುತಿಸಿಕೊಂಡು ತನ್ನ ಕಾಲಕ್ಕೆ ಸಲ್ಲುವ ದಾರಿಯ ಹುಡುಕಾಟದಲ್ಲಿ ಬಸವ ತೊಡಗಿದ್ದ. "ಬೆಂದ ಕರಣಾದಿಗಳು ಒಂದೆ ಪಥವನರಿಯವು ಎಂದು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ"(೩೭) ಎಂದು ತನ್ನ ವೈಯಕ್ತಿಕ ಅಸಾಮರ್ಥ್ಯದ ಭಾವನೆಯಿಂದ ಕುದಿಯುತ್ತಾನೆ. "ನಿಷ್ಠೆಯಿಂದ ಲಿಂಗವ ಪೂಜಿಸಿ ಮತ್ತೊಂದು ಪಥವರಿಯದ ಶರಣರು", ಹಾವಿನ ಹೆಡೆಯ ಮಾಣಿಕ್ಯದಂತೆ ಭೂಷಣಪ್ರಾಯರು ಎಂದು ಮೆಚ್ಚುತ್ತಾನೆ. "ಶಿವಪಥವನೊಲ್ಲದವರೊಡನಾಡದಂತೆ ಪಾಲಿಸು" (೨೬೩) ಎಂದು ಬೇಡುತ್ತಾನೆ. "ಅಹುದೆಂದರಿಯೆ ಆಗದೆಂದರಿಯೆ ಆದಿಪಥವ ತೋರಲರಿಯೆ," (೪೬೨) ಎಂದು ನಾಯಕನಾಗಿಯೂ ಮರುಗುತ್ತಾನೆ. ಬಸವನ ಪ್ರಕಾರ ದಾರಿ ಒಂದು, ಒಂದು ಮಾತ್ರ ಇದೆ. ಆ ದಾರಿಯಲ್ಲಿ ನಡೆದು ಅರಿವನ್ನು ಪಡೆಯುವುದು ಸಾಧ್ಯ. ಬಸವ ಪಥ ನಿರ್ಮಾಪಕ. ಎಲ್ಲ ಹಳೆಯದಾರಿಗಳಂತೆ ಅವನು ಕಂಡುಕೊಂಡ ದಾರಿಯೂ ಇಂದು ಬಳಕೆ ತಪ್ಪಿದ ದಾರಿಯಾಗಿರುವುದು ಬೇರೆ ಮಾತು.

ಇದಕ್ಕೆ ಪ್ರತಿಯಾಗಿ ಅಲ್ಲಮನಿಗೆ ದಾರಿಯಲ್ಲಿ ನಂಬಿಕೆಯಿಲ್ಲ. ಅರಿವು ದಾರಿಯನ್ನು ಕ್ರಮಿಸಿ ತಲುಪಬೇಕಾದ ಗಮ್ಯ ಅಲ್ಲ ಅಲ್ಲಮನಿಗೆ. "ದೂರವಿಲ್ಲದ ಗಮನಕ್ಕೆ ದಾರಿ ಪಯಣ

ಹಲವಾಯಿತ್ತು" (೮೬) ಎಂದು ವ್ಯಂಗ್ಯವಾಡುತ್ತಾನೆ. ಯೋಗ ಸಾಧನೆಯ ರೂಪಕವಾಗಿ 'ದಾರಿ'ಯನ್ನು ಬಳಸಿಕೊಂಡು "ಮೂರು ಬಟ್ಟೆ ಕೂಡಿದ ದಾರಿಯಲ್ಲಿ ಒಬ್ಬ ಹೆಮ್ಮಾರಿಯೈದಾಳೆ" (೪೭೯) ಅನ್ನುತ್ತಾನೆ. "ಸುಖವಿಲ್ಲ ಸೂಳೆಗೆ ಪಥವಿಲ್ಲ ಶೀಲಕ್ಕೆ" (೩೫೮) ಎಂದು ಸಾರುತ್ತಾನೆ. "ಗತಿಯ ಪಥವ ಮೀರಿ" (೫೮೪) ಸಾಗಬೇಕು ಅನ್ನುತ್ತಾನೆ. ಅರಿವೆಂಬುದು ಸಾಮಾನ್ಯವೇ. "ನೆಲವ ಬಿಟ್ಟು, ಆಕಾಶದಲ್ಲಿ ನಿಂದು ಮುಗಿಲೊಳಗೆ ಮಿಂಚಿದಲ್ಲದೆ" ಅರಿವು ಆಗದು (೪೭೫) ಎನ್ನುತ್ತಾನೆ. ದಾರಿಗಾದರೆ ತರ್ಕ ಇದೆ. ತರ್ಕದಿಂದ ಮೂಡುವ ವಿಚಾರ ಇದೆ, ನಡೆಯುವ ಕ್ರಮ ಇದೆ. ತರ್ಕ, ವಿಚಾರಗಳನ್ನು ಮೀರಿದ್ದು ಅರಿವು ಅನ್ನುತ್ತ ಅಲ್ಲಮ ಬಸವನಿಗಿಂತ ಬೇರೆಯದೇ ನಿಲುವಿನವನಾಗಿದ್ದಾನೆ. ಹೇಗೆ ನಡೆದೆ, ಎಲ್ಲಿ ನಡೆದೆ ಎಂಬುದಕ್ಕಿಂತ 'ಆಗು'ವುದು, 'ಇರುವುದು' ಅಲ್ಲಮನಿಗೆ ಮುಖ್ಯ. ಆಗುವುದು ಎಂದರೆ ಬದಲಾಗುವುದು, ಇರುವುದು ಎಂದರೆ ಬಯಲಾಗಿ ಇರುವುದು. ಬಸವನ ದಾರಿ ಆಲಯದ ದಾರಿ, ಅಲ್ಲಮನ ಮಿಂಚು ಬಯಲು ಮಿಂಚು.

ಭಾಗ ಮೂರು : ನಾನೆಂಬುದು ಅಂತರಂಗ, ನೀನೆಂಬುದು ಬಹಿರಂಗ (ಅಲ್ಲಮ ೧೦೩೯)

ಅರಿವಿನ ಸ್ವರೂಪವನ್ನು ಕುರಿತ ಯಾವುದೇ ಚರ್ಚೆಯ ಮುಖ್ಯ ಪ್ರಶ್ನೆ ಇದು. ಇದು ಮನಸ್ಸಿನ ಚರಿತ್ರೆಯ ಪ್ರಶ್ನೆ. ಮನುಷ್ಯನಿಗೆ, ಮನುಷ್ಯ ರೂಪಿಸಿಕೊಂಡ ನಾಗರಿಕತೆಗೆ ಚರಿತ್ರೆ ಇರುವಂತೆ ಮನುಷ್ಯನ ಮನಸ್ಸಿಗೂ ಒಂದು ಚರಿತ್ರೆ ಇದೆ. ಅಥವಾ ಮನುಷ್ಯನ ಮನಸ್ಸಿನ ಚರಿತ್ರೆಯೇ ನಾಗರಿಕತೆಯ ಚರಿತ್ರೆಯೂ ಹೌದು. ಮನಸ್ಸುಳ್ಳ ಜೀವಿ ಸೃಷ್ಟಿಯಾದಂತೆ ಈ ಚರಿತ್ರೆ ತೊಡಗುತ್ತದೆ. ಮನಸ್ಸಿರುವ, ಅದರಿಂದ ಸಂವೇದನೆಗಳನ್ನು ಪಡೆದ ಜೀವಿ ತೀರ ತಡವಾಗಿ ಸೃಷ್ಟಿಯಲ್ಲಿ ಕಾಣಿಸಿಕೊಂಡಿತಷ್ಟೇ, ಅದು ಕಾಣಿಸಿಕೊಳ್ಳುವ ಮೊದಲೂ ಈ ಭೂಮಿ ಇದ್ದೇ ಇತ್ತಲ್ಲವೇ? ಆದರೆ ಇದು ಭೂಮಿ, ಇದು ಬೆಳಕು, ಇದು ಕತ್ತಲು, ಇದು ನೀರು ಎಂದೆಲ್ಲ ಅನುಭವ ಪಡಬಲ್ಲ ಮನಸ್ಸಿರುವ ಜೀವಿ ಆಗುವ ಮುನ್ನ ಅದು ಇತ್ತು ಅನ್ನುವುದಕ್ಕೆ ಅರ್ಥವೇ ಇಲ್ಲ. ಅನುಭವಪಡಬಲ್ಲ ಜೀವಿ ಇಲ್ಲದೆ ಬರೀ ಜಗತ್ತು ಇದೆ ಅಂದರೂ ಅಷ್ಟೇ. ಇಲ್ಲ ಅಂದರೂ ಅಷ್ಟೆ. ಅರಿಯುವ ಜೀವಿ ಅರಿಯುವ ಮನಸ್ಸು ಇಲ್ಲದಿರುವಾಗ ಇರುವ 'ಇರುವಿಕೆ' ಎಂಥದ್ದೋ? ವಚನಕಾರರು ಈ ಮೂಲದ ಮೂಲದಿಂದ ತಮ್ಮ ಅರಿವಿನ ವಿವೇಚನೆಗೆ ತೊಡಗುತ್ತಾರೆ. ಅರಿಯಬಲ್ಲ ಜೀವಿಯ ಪ್ರತ್ಯೇಕ ಅಸ್ತಿತ್ವ ಇಲ್ಲದ ಸ್ಥಿತಿಯನ್ನು ಊಹಿಸಿಕೊಳ್ಳುತ್ತಾರೆ. ಅಲ್ಲಮನ ಈ ವಚನವನ್ನು ನೋಡಿ:

> **ಅಯ್ಯಾ ಜಲ–ಕೂರ್ಮ–ಗಜ–ಫಣಿಯ ಮೇಲೆ ಧರೆ ವಿಸ್ತರಿಸಿ ನಿಲ್ಲದಂದು,**
> **ಗಗನವಿಲ್ಲದಂದು, ಪವನನ ಸುಳುಹಿಲ್ಲದಂದು, ಅಗ್ನಿಗೆ ಕಳೆದೋರದಂದು,**
> **ತರುಗಿರಿ ತೃಣಕಾಷ್ಠಾದಿಗಳಿಲ್ಲದಂದು, ಯುಗಜುಗ ಮಿಗಿಲೆನಿಸಿದ ಹದಿನಾಲ್ಕು**
> **ಭುವನ ನೆಲೆಗೊಳ್ಳದಂದು, ನಿಜವನರಿದಿಹೆನೆಂಬ ತ್ರಿಜಗಾಧಿಪತಿಗಳಿಲ್ಲದಂದು**
> **ತೋರುವ ಬೀರುವ ಭಾವದಲ್ಲಿ ಭರಿತ ಅಗಮ್ಯ ಗುಹೇಶ್ವರ ಲಿಂಗವು.** (೭)

ಅರಿಯುವ ಪ್ರಜ್ಞೆ ಇಲ್ಲದಿದ್ದಾಗ ಇರುವ ಸ್ಥಿತಿ ಅಗಮ್ಯ, ಆದರೆ ಅದು ಭರಿತವೂ ಹೌದು. ಸೃಷ್ಟಿ ಎಂಬುದು 'ಹೊರಗೊಳಗೆ ತಾನಾಗಿದ್ದು ಮತ್ತೆ ತಲೆದೋರದಿಪ್ಪುದು' (೩). ಅದು ಅ–ಖಂಡಿತವಾದ ಇರವು. ಮನಸಿರುವ ಜೀವಿ ಕಾಣಿಸಿಕೊಂಡ ಕೂಡಲೇ ಈ ಅ–ಖಂಡಿತದಲ್ಲಿ

ದೇಹದ ಮಿತಿಗಳೊಳಗೆ ಬದ್ಧವಾದ ಜೀವಿ ಮತ್ತು ಹೊರಗಿನ ಪ್ರಪಂಚವೆಂಬ ಬೇರ್ಪಡುವಿಕೆಯೂ ಉಂಟಾಗುತ್ತದೆ. ದೇಹದ ಸೀಮೆಯಾಚೆ ಇರುವುದು ಏನು? ಅದು ಹೇಗಿದೆ? ಮತ್ತು ಅದರಿಂದ ದೇಹದ ಸೀಮೆಯೊಳಗೆ ನನಗೆ ಆಗುತ್ತಿರುವುದೇನು? ಎಂಬ ಪ್ರಶ್ನೆ, ಹುಡುಕಾಟಗಳು ಆರಂಭವಾಗುತ್ತವೆ. ಈ ಆರಂಭ ನಾನೆಂಬುದು ಪ್ರತ್ಯೇಕ, ವಿಶಿಷ್ಟ ಜೀವಿ ಎಂಬ ಅರಿವಿನಿಂದಲೇ ತೊಡಗುವಂಥದ್ದು.

ಎನ್ನ ನಾನರಿಯದಂದು ಮುನ್ನ ನೀನೇನಾಗಿದ್ದೆ ಹೇಳಾ. ಮುನ್ನ ನೀ ಬಾಯ
ಮುಚ್ಚಿಕೊಂಡಿದ್ದೆಯೆಂಬುದ ನಾನು ನಿನ್ನ ಕಣ್ಣಿಂದ ಕಂಡೆನು. ಎನ್ನ ನಾನರಿದ
ಬಳಿಕ ಇನ್ನು ನೀ ಬಾಯ್ದೆರೆದು ಮಾತನಾಡಿದರೆ ಅದನೆನ್ನ ಕಣ್ಣಿಂದ ಕಂಡು
ನಾಚಿದೆ ನೋಡಾ ಎನ್ನ ಕಾಬ ನಿನಗೆ ನಿನ್ನ ಕಾಬ ಎನಗೆ ಸಂಚದ ನೋಟ
ಒಂದೇ ನೋಡಾ ಗುಹೇಶ್ವರ ನಿನ್ನ ಬೆಡಗಿನ ಬಿನ್ನಾಣವನರಿದೆ ನೋಡಾ. (೧೦)

ಇಲ್ಲಿ ಅರಿವು ಮತ್ತು ಸಂವಾದಗಳ ಸ್ವರೂಪವನ್ನು ಕುರಿತು ಅಲ್ಲಮ ಹೇಳುತ್ತಿದ್ದಾನೆ. ಈ ವಚನದಲ್ಲಿ ಎರಡು ಬಗೆಯ ಸಂವಾದಗಳಿವೆ. ಒಂದು ಭಾಷೆ ಮುಖ್ಯವಾದ ಸಂವಾದ ಇನ್ನೊಂದು ಭಾಷೆಯ ಹಂಗಿಲ್ಲದೆ ನೋಟ ಮಾತ್ರ ಇರುವ ಅರಿವಿನ ಶುದ್ಧಸಂವಾದ. ನಾನು ಬೇರೆ ನೀನು ಬೇರೆ ಎಂಬ ತಿಳಿವು ಮೂಡಿದ ಮೇಲಷ್ಟೇ ಸಂವಾದದ ಅಗತ್ಯ ಕಾಣುತ್ತದೆ. ಮೊದಲು 'ಹುಟ್ಟುವುದು' ನಾನು. ನಾನು ನಾನಾಗುವವರೆಗೆ 'ನೀನು' ಎಂಬುದಕ್ಕೆ ಅರ್ಥವೇ ಇಲ್ಲ. ಈ ಭಿನ್ನತೆ ಮೂಡುವವರೆಗೆ ಮಾತಿನ ಅಗತ್ಯವೂ ಇಲ್ಲ. ನಾನೂ ಮೌನ. ನೀನೂ ಮೌನ. ನಿನ್ನ ಮೌನವನ್ನು ನಿನ್ನ ಕಣ್ಣಿಂದಲೇ ನೋಡಿದೆ ಎಂದು ಬೇಕಾದರೆ ವಿವರಿಸಬಹುದು. ನೀನು ಬಾಯ್ದೆರೆದು ಮಾತನಾಡುವಂತೆ ಮಾಡಿದ್ದು 'ನಾನು ನಾನೇ' ಎಂಬ ಅರಿವು. ಆಗ ಸರ್ವನಾಮಗಳು ಬೇಕಾದವು, ಸಂಬೋಧನೆಗಳು ಬೇಕಾದವು. ಮಾತು ನಾಚಿಕೆಯನ್ನು ಹುಟ್ಟಿಸಿತು. ನೋಟಕ್ಕೆ ನಾಚಿಕೆ ಇಲ್ಲ. ಮಾತಿಗೆ ನಾಚಿಕೆ ಇದೆ. ನಾನು ಮತ್ತು ನೀನು ಬೇರೆ ಬೇರೆ ಎಂಬ ಅರಿವು ಮೂಡಿದ ಮೇಲೂ ನನ್ನನ್ನು ಕಾಣುವ/ಕಾಪಾಡುವ ನಿನಗೆ ಮತ್ತು ನಿನ್ನನ್ನು ಕಾಣುವ/ಕಾಪಾಡುವ ನನಗೆ ನೋಟದ ರಹಸ್ಯ ಮಾತ್ರ ಒಂದೇ ಆಗಿದೆ. ನನಗೆ ಮತ್ತು ನಿನಗೆ ನೋಟ ಒಂದೇ. ಆದರೆ ನನ್ನ ಮಾತು ಬೇರೆ ನಿನ್ನ ಮಾತು ಬೇರೆ. ಇದು ಬೆಡಗು, ಇದು ಬೆರಗು, ಇದನ್ನು ನಾನು ನಾನೇ ಆದಮೇಲೆ ಅರಿತಿದ್ದು ಎನ್ನುತ್ತಾನೆ ಅಲ್ಲಮ.

ಕೇವಲ ನೋಟಮಾತ್ರವಿರುವ, ನಾನು ಮತ್ತು ನೀನು ಎಂಬ ಭೇದವಿರದ ಸ್ಥಿತಿ ನಿಜವಾಗಿ ಅ-ಗಮ್ಯವಾದದ್ದು. ನಾವಿಬ್ಬರು ಬೇರೆ ಮತ್ತು ನಮ್ಮಿಬ್ಬರಲ್ಲಿ ಸಂವಾದ ಸಾಧ್ಯ ಎಂಬ ಬೆರಗು ಗಮ್ಯವಾದದ್ದು. ಸಾಮಾನ್ಯವಾಗಿರುವ ನೋಟ ಮತ್ತು ವ್ಯಕ್ತಿ ವಿಶಿಷ್ಟವಾಗಿರುವ ಭಾಷೆ. ಇವೆರಡಕ್ಕೂ ತಳಹದಿಯಾಗಿರುವ ನಾನು ಮತ್ತು ನೀನು ಎಂಬ ಭೇದ ಅಲ್ಲಮನಲ್ಲಿ ಮತ್ತು ಇತರ ವಚನಕಾರರಲ್ಲಿ ಪ್ರಮುಖವಾಗಿ ಕಾಣುವ ಅಂಶವಾಗಿದೆ.

ನಾನುತನ ಹುಟ್ಟಿದ ಬಳಿಕ ನನ್ನಿಂದ ಬೇರೆಯಾದ 'ಇತರ'ಕ್ಕೂ ನನಗೂ ಇರುವ, ಇರಬೇಕಾದ ಸಂಬಂಧ ಮತ್ತು ಯಾವುದು ನಿಜ ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. 'ಇತರ' ಎಂಬುದು ನೀನು, ಅವರು, ಸಮಾಜ, ಪ್ರಕೃತಿ-ನನ್ನಿಂದ ಭಿನ್ನವಾಗಿರುವ ಎಲ್ಲವನ್ನೂ ಸೂಚಿಸುವ ಪರಿಕಲ್ಪನೆ. ನಾನು ನಿರ್ದಿಷ್ಟ ದೇಹ, ನಿರ್ದಿಷ್ಟ ಮನಸ್ಸುಗಳ ಮಿತಿಗೆ ಒಳಪಟ್ಟವನು. ಇತರ ಎಂಬುದು ಹಾಗಲ್ಲ. ನನ್ನ ಮತ್ತು ಇತರ ಎರಡರ ನಡುವಿನ ಭೇದ

ಅಳಿಸಿಹೋಗುವುದು ನಿಜವಾದ ಅರಿವು ಎಂದು ಅಲ್ಲಮ ಮತ್ತು ಬಸವ ಹೇಳುತ್ತಾರೆ. ಇದು ಸಾಧ್ಯವಾಗುವ ಕ್ರಮವನ್ನು ವಿವರಿಸುತ್ತಾರೆ.

ನಾನು ಎಂಬ ಅಂತರಂಗದಲ್ಲಿ ಒಂದು ಬಗೆಯ ವ್ಯವಸ್ಥೆ ಇರುತ್ತದೆ. ನೀನು ಎಂಬ ಬಹಿರಂಗದಲ್ಲೂ ಒಂದು ವ್ಯವಸ್ಥೆಯಿರುತ್ತದೆ. ಅಂತರಂಗದ ವ್ಯವಸ್ಥೆಯನ್ನು ಆಧರಿಸಿ ಬಹಿರಂಗ ರೂಪುಗೊಳ್ಳುತ್ತದೋ ಬಹಿರಂಗದ ಪ್ರತಿಫಲನಗಳ ಸಮೂಹವೇ ಅಂತರಂಗವೋ ಎಂಬುದು ತೀವ್ರ ಚರ್ಚೆಗೆ ಎಡೆಮಾಡಿಕೊಡುವ ಪ್ರಶ್ನೆ. ಬಸವ ಅಂತರಂಗದ ವೈಶಿಷ್ಟ್ಯವನ್ನೂ ಬಹಿರಂಗದ ವಾಸ್ತವವನ್ನೂ ಒಪ್ಪಿದವನು. ಎರಡರ ನಡುವಿನ ಘರ್ಷಣೆಯನ್ನು ಅನುಭವಿಸುತ್ತಾ ಒಮ್ಮೊಮ್ಮೆ "ಅಂತರಂಗದ ಬಹಿರಂಗ ಆತ್ಮಸಂಗ ಒಂದೇ ಅಯ್ಯಾ" (೯೫೯) ಅನ್ನುವವನು. ಆದರೂ ಅವನ ವಚನಗಳಲ್ಲಿ ಅಂತರಂಗ ಮತ್ತು ಬಹಿರಂಗಗಳ ಕೂಡಲ ಸಂಗಮದ ಅಪೇಕ್ಷೆ ಪ್ರಧಾನವಾಗಿ ಕಾಣುತ್ತದೆ. ಅಲ್ಲಮನಾದರೋ ಇಡೀ ಇತರವೆಲ್ಲ ತನ್ನ ಅಂತರಂಗದಲ್ಲೇ ಇದೆ. ಇರುವುದು ನಾನು ಮಾತ್ರ ಎಂಬ ಅಂತರಂಗದ ಗುಹೇಶ್ವರ. ಅಥವಾ ಅಂತರಂಗ ಬಹಿರಂಗಗಳೆಂಬ ವ್ಯತ್ಯಾಸವಿಲ್ಲದ ಆಕಾಶ ಅವನು. ಅಂತೆಯೇ ಅಲ್ಲಮನನ್ನು ವ್ಯೋಮಮೂರ್ತಿ ಎಂದು ಕರೆದವರಿದ್ದಾರೆ. ಬಸವ ಭಿನ್ನತೆಗಳು ಉಜ್ಜಿ ಆಡುವ ಭೂಮಿ. ಅಲ್ಲಮ ಬಸವನ ಕಾಲಿಗೆರಗಿ ನಮೋ ಅನ್ನುವ, ಬಸವ ಅಲ್ಲಮನನ್ನು ಆರಾಧಿಸುವ ಚಿತ್ರಗಳು ಎರಡು ಭಿನ್ನ ವಿಚಾರಧಾರೆಗಳ ಪರಸ್ಪರ ಪೋಷಕ ಗುಣಧರ್ಮವನ್ನು ಚಿತ್ರಿಸುವ ರೂಪಕಗಳಾಗಿವೆ.

ಭಾಗ ನಾಲ್ಕು : ಆಚಾರವನೆ ಕಂಡರು ವಿಚಾರವನೆ ಕಾಣರು (೪೯೫)

ಕಣ್ಣಿಗೆ ಕಾಣುವುದು ಆಚಾರ ಮಾತ್ರ, ಅದಕ್ಕೆ ಕಾರಣವಾದ ವಿಚಾರ, ವಿಚಾರದ ಉಗಮವಾದ ಅರಿವು ಎಂದಿದ್ದರೂ ಅವ್ಯಕ್ತವೇ. ಅಂತೆಯೆ ಅಲ್ಲಮ "ರೂಪನೆ ಕಂಡರು ನಿರೂಪನೆ ಕಾಣರು, ತನುವನೆ ಕಂಡರು ಅನುವನೆ ಕಾಣರು. ಆಚಾರವನೆ ಕಂಡರು ವಿಚಾರವನೆ ಕಾಣರು" (೪೯೫) ಅನ್ನುತ್ತಾನೆ. ಅಲ್ಲಮನ ಶೋಧ ಇರುವುದು ವಿಚಾರದ ಬಗ್ಗೆ. ಅದರ ಮೂಲವಾದ ಅರಿವಿನ ಬಗ್ಗೆ. ಹಾಗೆಂದು ಅವನು ಆಚರಣೆಯನ್ನು ಪೂರಾ ನಿರ್ಲಕ್ಷಿಸುವುದೂ ಇಲ್ಲ. ಸುಮಾರು ಇಪ್ಪತ್ತು ವಚನಗಳಲ್ಲಿ ಆತ ಆಚಾರದ ಬಗ್ಗೆ ವಿವೇಚನೆ ನಡೆಸಿದ್ದಾನೆ. ಆಚಾರ ಕಣ್ಣಿಗೆ ಕಾಣುವಂಥಾದಾದ್ದರಿಂದಲೇ ಅದರ ಬಗ್ಗೆ ಸಂಶಯ ಬರಲು ಸಾಧ್ಯ. ಆಚಾರದ ನಟನೆ ಸಾಧ್ಯ. ವಿಚಾರದ ಬಲವಿಲ್ಲದ ಆಚಾರ ತನ್ನಷ್ಟಕ್ಕೇ ಒಂದು ಬಂಧನ ಆಗಬಲ್ಲದು. "ಆಚಾರವೆಂಬುದು ಅನಾಚಾರದೊಳಗು, ಧರ್ಮವೆಂಬುದು ಅಧರ್ಮದೊಳಗು" (೫೨೨) ಎಂದು ಅಲ್ಲಮ ಹೇಳುತ್ತಾನೆ. ಆಚಾರ ಎಷ್ಟರಮಟ್ಟಿಗೆ ಕ್ರಿಯೆಯೋ ಅಷ್ಟರ ಮಟ್ಟಿಗೆ ಕಲ್ಪನೆಯೂ ಹೌದು. ಕ್ರಿಯೆ ಮತ್ತು ಕಲ್ಪನೆಗಳು ತಮ್ಮ ಅಸ್ತಿತ್ವಕ್ಕೆ ವಿರುದ್ಧ ಕ್ರಿಯೆಗಳನ್ನೂ ಕಲ್ಪನೆಗಳನ್ನೂ ಆಧರಿಸುತ್ತವೆ. ದ್ವಂದ್ವ ಇಲ್ಲದ ಕ್ರಿಯೆ, ದ್ವಂದ್ವ ಇಲ್ಲದ ಕಲ್ಪನೆ ಇರಲು ಸಾಧ್ಯವಿಲ್ಲ. ಅಂತೆಯೇ ಆಚಾರ ಅನಾಚಾರ, ಧರ್ಮ, ಅಧರ್ಮ, ಸುಖ ದುಃಖ, ಅಹಿಂಸೆ ಹಿಂಸೆ, ಇವು ಒಂದನ್ನು ಆಗಲಿ ಇನ್ನೊಂದು ಇರಲಾರವು. ಹಾಗೆ ತಮ್ಮಷ್ಟಕ್ಕೆ ಇವುಗಳಿಗೆ ಅರ್ಥವೇ ಇಲ್ಲವಾಗುತ್ತದೆ.

ಅಲ್ಲಮನ ಪ್ರಕಾರ ಆಚಾರದಲ್ಲಿ, ವಿಚಾರದಲ್ಲಿ ದ್ವಂದ್ವ ಇರಬಹುದು. ಅರಿವಿನಲ್ಲಿ ದ್ವಂದ್ವ ಇರಲು ಸಾಧ್ಯವಿಲ್ಲ. ದ್ವಂದ್ವವಿಲ್ಲದ ಅರಿವಿನ 'ಅನುಭವ'ಕ್ಕೆ ಸಾಕ್ಷಿಯಾಗಲೀ, ಪ್ರಮಾಣವಾಗಲೀ, ಸಮರ್ಥನೆಯಾಗಲೀ ಇರಲು ಸಾಧ್ಯವಿಲ್ಲ. ತನ್ನ ಅರಿವನ್ನು ಇನ್ನೊಬ್ಬರಿಗೆ ದಾಟಿಸಲೂ ಸಾಧ್ಯವಿಲ್ಲ. ಅದಕ್ಕೆಂದೇ ಅಲ್ಲಮ ಹೇಳುತ್ತಾನೆ. "ಇದು ಕಾರಣ ಲೋಕಕ್ಕೆ ಅರುಹದೆ ನಾನರಿದೆನು ಗುಹೇಶ್ವರ" (೨೭೭). "ಅರಿದ ಶರಣಂಗೆ ಆಚಾರವಿಲ್ಲ" (೧೧೩೬). ಬಸವನ ನಿಲುವು ಇದಕ್ಕಿಂತ ಬೇರೆ ಎಂಬಂತೆ ತೋರುತ್ತದೆ. ಸುಮಾರು ನಲವತ್ತಕ್ಕೂ ಮಿಕ್ಕದ ವಚನಗಳಲ್ಲಿ ಬಸವ ಆಚಾರವನ್ನು ಕುರಿತು ಚಿಂತಿಸುತ್ತಾನೆ. ವಿಚಾರದ ಮೂರ್ತ ರೂಪವಾದ ಆಚಾರವೂ ಅವನಿಗೆ ಮುಖ್ಯ. "ಆಚಾರವೇ ಸ್ವರ್ಗ ಅನಾಚಾರವೇ ನರಕ" (೨೩೦) ಎಂಬ ಅವನ ಮಾತು ಪ್ರಸಿದ್ಧವಾಗಿದೆ. "ಆಚಾರವೆಂಬುದು ಹಾವಸೆಗಲ್ಲು" (೬೨೦) ಎಂದೆನ್ನುತ್ತ ಆಚರಣೆಯ ಕಷ್ಟವನ್ನು ಹೇಳುತ್ತಾನೆ. ವೈಯಕ್ತಿಕ ನೆಲೆಯಲ್ಲಿ ಆಸೆ, ಕೋಪ, ಹರುಷಗಳಲ್ಲಿ ನೀಗಿಕೊಂಡ ಆಚಾರದ ಬಗ್ಗೆ (೭೬೪), ಸಾಮಾಜಿಕವಾಗಿ ಭಕ್ತ ಭಕ್ತರ ನಡುವಿನ ಸದಾಚಾರದ ಬಗ್ಗೆ (೨೬೪), ಆಧ್ಯಾತ್ಮಿಕವಾಗಿ ಗುರು ಮತ್ತು ದೈವದೊಡನೆ ನಡೆಸಬೇಕಾದ ಶಿವಾಚಾರದ ಬಗ್ಗೆ (೯೪೫) ಬಸವ ಚಿಂತಿಸುತ್ತಾನೆ.

ಆದರೆ ಅಲ್ಲಮನಂತೆ ಆಚಾರವನ್ನು ಮೀರುವುದೂ ಬಸವನ ಆಕಾಂಕ್ಷೆಯಾಗಿದೆ. ಹೀಗೆ ಮಾಡುವುದು ಮತ್ತೆ ವೈಯಕ್ತಿಕ ನೆಲೆಯಲ್ಲಷ್ಟೇ ಸಾಧ್ಯ. ಅಲ್ಲಮ ಆಚಾರದ ಹಿಂದಿನ ವಿಚಾರ, ವಿಚಾರದ ಹಿಂದಿನ ಅರಿವು, ಅರಿವಿನ ಆಧಾರದ ಸ್ವತಂತ್ರ ನನ್ನತನಗಳ ಬಗ್ಗೆ ಆಲೋಚಿಸಿದರೆ ಬಸವ ಇಂಥದೇ ಆಲೋಚನೆಯನ್ನು ಹಣ್ಣಿನ ರೂಪಕದ ಮುಖಾಂತರ ಚಿತ್ರಿಸುತ್ತಾನೆ. ಲಿಂಗವೆಂಬುದು ಇಡೀ ಸೃಷ್ಟಿ. ಅರಿವು ಅದು ಒಂದು ಎಲೆ. ಅದರಲ್ಲಿ ವಿಚಾರವೆಂಬುದು ಹೂವು. ಆಚಾರವೆಂಬುದು ಕಾಯಿ. ನಿಷ್ಪತ್ತಿಯೆಂಬದು ಹಣ್ಣು (೫೨೫) ಎಂದು ವಿವರಿಸುತ್ತಾನೆ. ಬಸವ ತಾನು ಹಣ್ಣಾಗುವುದರೊಂದಿಗೆ ಸಮಾಜವನ್ನೂ ಹಣ್ಣುಮಾಡುವ ದೀಕ್ಷೆ ತೊಟ್ಟವನು. ಇಲ್ಲಿ ಒಂದು ಗಮನಿಸಬೇಕಾದ ಮಾತಿದೆ. 'ಆಚಾರ' ಎಂಬುದು ನಿರ್ದಿಷ್ಟ ಧಾರ್ಮಿಕ ವ್ಯವಸ್ಥೆಯನ್ನು ಒಪ್ಪಿಕೊಂಡ ಜನ ಸಮುದಾಯಕ್ಕೆ ಸಂಬಂಧಿಸಿದ್ದು. ಧಾರ್ಮಿಕ ವ್ಯವಸ್ಥೆಯ ಹಂಗಿಲ್ಲದ ವರ್ತನೆಯನ್ನು ವಚನಕಾರರು 'ನಡೆ' ಎಂದು ಗುರುತಿಸುತ್ತಾರೆ. ಅರಿವು ಮತ್ತು ನಡೆಗಳಿಗೆ ಸಂಬಂಧಿಸಿದ ಸಂಗತಿಗಳನ್ನು ಮುಂದೆ ಪರಿಶೀಲಿಸಬಹುದು.

ಧಾರ್ಮಿಕ ವ್ಯವಸ್ಥೆಯೊಳಗಿನ ಆಚಾರಕ್ಕೆ, ಆಚರಣೆಗೆ ಸಮೂಹಿಕ ಒಪ್ಪಿಗೆ, ವೈಯಕ್ತಿಕ ನಂಬಿಕೆಗಳು ಮುಖ್ಯ. "ದೇವಾ ನಿಮ್ಮ ನಂಬುವುದಾಚಾರವಯ್ಯಾ" (೪೬೬) "ಮೌನದಲುಂಬುವುದು ಆಚಾರವಲ್ಲ ತುತ್ತಿಗೊಮ್ಮೆ ಶಿವಶರಣೆನ್ನಬೇಕು. ಪ್ರಸಾದ ಮೆಚ್ಚಿ ತನ್ನಲ್ಲಿ ಸ್ವಾಯತವಾಗಬೇಕು (೭೮೯) ಅನ್ನುತ್ತಾನೆ ಬಸವ. ವ್ಯವಸ್ಥೆಯೊಳಗಿನ ಆಚಾರವನ್ನು ಅನುಸರಿಸುವುದರಿಂದಲೂ ವಿಚಾರದ ಬೆಳವಣಿಗೆ, ಅರಿವು ಸಾಧ್ಯ ಎಂದು ಬಸವನ ನಂಬಿಕೆ. "ಅರಿದರಿದು ನಿಮ್ಮ ಶರಣನು ಆಚರಿಸುವ ಆಚರಣೆಯ ಕಂಡು ಕಣ್ದೆರೆದೆನಯ್ಯಾ"(೫) ಎಂದು ಬಸವ ಹೇಳುತ್ತಾನೆ. ನಂಬಿಕೆ ಇಲ್ಲದವರನ್ನು ಛೇಡಿಸುವುದು, ಭಿನ್ನ ಆಚಾರಗಳನ್ನು ಒಪ್ಪಿದವರನ್ನು ತಿರಸ್ಕರಿಸುವುದು ಎರಡೂ ಬಸವನಲ್ಲಿ ಕಾಣುತ್ತದೆ. ಭಕಸ್ಥಲದಲ್ಲಿ ಸೇರಿರುವ ಅನೇಕ ವಚನಗಳಲ್ಲಿ ಬಸವನ ಧೋರಣೆ "ಅನ್ಯದೈವಂಗಳಿಗೆರಗಿ ಭಕ್ತರೆನಿಸಿಕೊಂಬ ಅಜ್ಞಾನಿಗಳ ನಾನೇನೆಂಬೆನಯ್ಯಾ" (೧೦೩) ಅನ್ನುವುದೇ ಆಗಿದೆ.

ಅಲ್ಲಮನ ಅರಿವು ಬೇರೆ ತೆರನಾದದ್ದು. ಅವನಿಗೆ ಕಟ್ಟುವ ಅಪೇಕ್ಷೆ ಇಲ್ಲವಾದ್ದರಿಂದ ಭಿನ್ನ ನಂಬಿಕೆಗಳ ಬಗ್ಗೆ ಅಸಹನೆ ಕಾಣುವುದಿಲ್ಲ. ಅವನದೇನಿದ್ದರೂ ಅಮೂರ್ತದ ಒಡನಾಟ.

ಭಾಗ ಐದು : "ನಡೆಗೆಟ್ಟ ನಡೆಯೆ ನಡೆಯಬೇಕು" ಮತ್ತು "ನುಡಿದಂತೆ ನಡೆಯಲು ಬಾರದಯ್ಯಾ"

ವಚನಗಳಲ್ಲಿ ನಡೆ-ನುಡಿ ಇವು ಪ್ರಮುಖವಾದ ಜೋಡಿ ಕಲ್ಪನೆಗಳು. ಅಲ್ಲಮ ಬಸವ ಇಬ್ಬರೂ 'ನುಡಿ' ಮತ್ತು 'ಮಾತು'ಗಳ ನಡುವೆ ಖಚಿತ ವ್ಯತ್ಯಾಸವನ್ನು ಗುರುತಿಸುತ್ತಾರೆ. ಈ ವ್ಯತ್ಯಾಸ ನಮ್ಮ ದಿನ ಬಳಕೆಯಲ್ಲೂ ಇರುವುದು ಸೂಕ್ಷ್ಮವಾಗಿ ಗಮನಿಸಿದಾಗ ಕಾಣುವ ಸಂಗತಿ. 'ನುಡಿ' ಅನ್ನುವುದು ಅಂತರಂಗದ ಅಭಿವ್ಯಕ್ತಿ. ಮಾತು ಬಹಿರಂಗದ ಲೋಕ ವ್ಯವಹಾರ. ಆಚಾರ ಎಂಬುದು ನಿರ್ದಿಷ್ಟ ತತ್ವಗಳನ್ನು ಒಪ್ಪಿದ ಸಮುದಾಯದ ವರ್ತನೆ, ನಡೆ ಎಂಬುದು ಒಟ್ಟಾರೆ ಲೋಕ ವ್ಯವಹಾರದ ವರ್ತನೆ. ಅಂತರಂಗದ ನುಡಿಗೂ, ಲೋಕವ್ಯವಹಾರದ ವರ್ತನೆಯ ನಡೆಗೂ ಇರುವ ಸಂಬಂಧದ ಚರ್ಚೆ ಮಹತ್ವದ್ದು. ಯಾಕೆಂದರೆ ಅರಿವಿನಿಂದ ಮೂಡಿದ ವಿಚಾರ, ವಿಚಾರದ ಪ್ರತಿಫಲನವಾದ ಆಚಾರ ಅಷ್ಟೇ ಮನುಷ್ಯನಿಗೆ ಸಾಕಾಗುವುದಿಲ್ಲ. ಯಾವುದೇ ಒಂದು ಕಾಲಘಟ್ಟದಲ್ಲಿ ಹಲವು ಹತ್ತು ಬಗೆಯ ವ್ಯವಸ್ಥೆಗಳು ಜಾರಿಯಲ್ಲಿರುತ್ತವೆ. ಆದ್ದರಿಂದ ಅರಿವು ಕೇವಲ ಆಚಾರಮಾತ್ರವಲ್ಲದೆ ದಿನನಿತ್ಯದ ನಡೆಯಲ್ಲೂ ಹೇಗೆ ಬಿಂಬಿತವಾಗುತ್ತದೆ ಅನ್ನುವುದು ಮುಖ್ಯ.

ಬಸವ ನಡೆ ಮತ್ತು ನುಡಿಗಳ ಸುಸಂಗತ ಹೊಂದಾಣಿಕೆಯನ್ನು ಆದರ್ಶವೆಂದು ತಿಳಿಯುತ್ತಾನೆ. ನುಡಿ ಬಾಹ್ಯ ಅಲಂಕಾರಕ ಮುತ್ತಿನಹಾರವಾಗಿ, ಸ್ವಯಂ ದೀಪ್ತಿಯನ್ನುಳ್ಳ ಮಾಣಿಕ್ಯವಾಗಿ, ಪಾರದರ್ಶಕವೂ ಕಠಿಣವೂ ಆದ ಸ್ಫಟಿಕದ ಶಲಾಕೆ ಆಗಬೇಕು. ನುಡಿಯು ನಡೆಯ ಸೀಮೆಗಳನ್ನು ಗುರುತಿಸುವ ಗಡಿರೇಖೆಯಾಗಿರಬೇಕು ಅನ್ನುತ್ತಾನೆ (೮೦೨). "ನುಡಿದಂತೆ ನಡೆವೆ, ನಡೆಯೊಳಗೆ ನುಡಿಯ ಪೂರೈಸುವೆ" (೪೪೦) ಎಂಬ ಶಪಥವನ್ನೂ ತೊಡುತ್ತಾನೆ. "ನುಡಿದ ನುಡಿ ಜಾರಿದಡೆ ಮನಕ್ಕೆ ಮನನಾಚಬೇಕು" (೬೬೭) ಎಂದು ಎಚ್ಚರಿಸುತ್ತಾನೆ. "ಭುಕ್ತಿ ಕಾರಣ ಲೋಕದಿಚ್ಛೆಗೆ ನುಡಿದು ನಡೆವರಯ್ಯಾ" (೬೨೬) ಎನ್ನುತ್ತ ಅಂತರಂಗದ ನುಡಿ, ಬಾಹ್ಯದ ನಡೆ ಸುಳ್ಳಾಗುವ ಜನಗಳ ಬಗ್ಗೆ ತಪಿಸುತ್ತಾನೆ. ನುಡಿಯಲ್ಲಿ ಎಚ್ಚರವಿದ್ದು ನಡೆಯಲ್ಲಿ ತಪ್ಪಿದರೆ ಹಿಡಿದ ಲಿಂಗ ಘಟಸರ್ಪವಾಗುತ್ತದೆ ಎಂಬು ಭಯ ಹುಟ್ಟಿಸುತ್ತಾನೆ. ಸ್ವತಃ ತನ್ನನ್ನೇ ಪರಿಶೀಲಿಸಿಕೊಳ್ಳುತ್ತ ನುಡಿ-ನಡೆಗಳ ಸಮತೋಲನ ಸಾಧನೆ ಎಷ್ಟು ಕಷ್ಟ ಎಂದು ಹಲುಬುವುದೂ ಇದೆ. "ನುಡಿದಂತೆ ನಡೆಯಲು ಬಾರದಯ್ಯಾ" (೨೧೧) "ಎನ್ನಲ್ಲಿ ನಡೆಯಿಲ್ಲಾಗಿ ನಾನು ಭಕ್ತನೆಂತಹೆನಯ್ಯಾ" (೨೯೧) ಅನ್ನುವಂಥ ಮಾತುಗಳನ್ನು ಗಮನಿಸಿ.

ಅಲ್ಲಮನ ನಿಲುವು ಬೇರೆಯದು. ಸಮತೋಲ ಸಾಧನೆಯ ಮಾತು ವಿರೋಧನಗಳನ್ನು ಒಪ್ಪಿದಾಗಷ್ಟೇ ಬರುತ್ತದೆ. 'ನಡೆ'ಯನ್ನು ಕ್ರಿಯಾಪದವಾಗಿಯೂ ಗುಣವಾಚಕವಾಗಿಯೂ ಅಲ್ಲಮ ತಿರಸ್ಕರಿಸುತ್ತಾನೆ. ಅಥವಾ ಅವುಗಳ ಪರಿಚಿತ ಅರ್ಥವನ್ನು ಪಲ್ಲಟಗೊಳಿಸುತ್ತಾನೆ. ಅರಿವಿನ ಸ್ಥಿತಿಯಲ್ಲಿ ಇರುವಾತನ ನಡೆ ನಡೆಯಲ್ಲ. ನುಡಿ ನುಡಿಯಲ್ಲ. "ನಡೆದಡೆ ನಡೆಗೆಟ್ಟ ನಡೆಯ ನಡೆವುದಯ್ಯಾ, ನುಡಿದಡೆ ನುಡಿಗೆಟ್ಟ ನುಡಿಯ ನುಡಿವುದಯ್ಯಾ" (೧೧೧೧)

ಅನ್ನುವಾಗ ನಡೆಗೆಟ್ಟ ನಡೆ, ನುಡಿಗೆಟ್ಟ ನುಡಿ ಎಂಬ ಮಾತುಗಳು ಗಮನ ಸೆಳೆಯುತ್ತವೆ. ನಡೆ ಮತ್ತು ನುಡಿಗಳೆರಡೂ ಸಮಾಜ ಒಪ್ಪಿದ ವರ್ತನೆಯ ವಿಧಗಳು. ಆದೆ ಅರಿವು ಪೂರ್ಣವಾಗಿ ಅಂತರಂಗಕ್ಕೆ ಸಂಬಂಧಿಸಿದ್ದಾದ್ದರಿಂದ, ಅಥವಾ ಅಲ್ಲಮ ಹೇಳುವಂತೆ ಅರಿವಿನ ಸ್ಥಿತಿಯಲ್ಲಿ ಅಂತರಂಗ ಬಹಿರಂಗ ಎಂದು ವ್ಯತ್ಯಾಸವೇ ಇಲ್ಲದಿರುವುದರಿಂದ ನಡೆ ಒಪ್ಪಿದ ಕ್ರಮವನ್ನು ತಿರಸ್ಕರಿಸಿದ, ಭಂಗಿಸಿದ ನಡೆಯಾಗಿ, ನುಡಿ ಒಪ್ಪಿದ ಕ್ರಮವನ್ನು ಮೀರಿದ ನುಡಿಯಾಗಿ ಮಾತ್ರ ಇರಲು ಸಾಧ್ಯ. ಹಾಗೆ ಕ್ರಮ ಭಂಗವಾದ ನಡೆ ಮತ್ತು ನುಡಿ ಸಾಮಾನ್ಯ ತರ್ಕದ ದೃಷ್ಟಿಯಿಂದ ಹುಚ್ಚಿನಂತೆ ತೋರುವುದೂ ಉಂಟು. ಅಲ್ಲಮ ಕಲ್ಯಾಣಕ್ಕೆ ಹಿಂತಿರುಗಿದಾಗ ಹುಚ್ಚನಂತೆಯೇ ಇತರರ ಕಣ್ಣಿಗೆ ಕಾಣುತ್ತಾನೆ ಎಂಬ ವಿವರಗಳೂ ಇವೆ. ಹುಚ್ಚು ಕೂಡ ಅರ್ಥವಂತಿಕೆಯ ಒಂದು ಮಾದರಿ, ಅರ್ಥ ಸೂಚಕಗಳು ನೆಲೆ ತಪ್ಪಿದ ಸ್ಥಿತಿ ಎಂದು ಮನಶ್ಶಾಸ್ತ್ರ ಹೇಳುತ್ತದೆ. ಅರ್ಥಸೂಚಕಗಳ ಮಾತು ಬಂತಷ್ಟೇ. ಇದು ನಮ್ಮನ್ನು ಇನ್ನೊಂದು ಪ್ರಮುಖ ಪ್ರಶ್ನೆಯತ್ತ ಕರೆದೊಯ್ಯುತ್ತದೆ. ಅದು ಅರಿವು ಮತ್ತು ಅದರ ಭಾಷಿಕ ಅಭಿವ್ಯಕ್ತಿಯ ಸಾಧ್ಯತೆಯ ಪ್ರಶ್ನೆ. ಅದನ್ನು ಈಗ ನೋಡೋಣ.

ಭಾಗ ಆರು : ಉಲುಹಿನ ವೃಕ್ಷದ ಗಲಭೆ ಮತ್ತು ಶಬ್ದದೊಳಗಣ ನಿಶ್ಶಬ್ದ

ಅರಿವು ಭಾಷಿಕವಾಗಿ ವ್ಯಕ್ತವಾಗುವ ಬಗೆಯನ್ನು ಕುರಿತು ಅಲ್ಲಮನ ವಚನಗಳಲ್ಲಿ ತುಂಬ ವ್ಯಾಪಕವಾದ ಚರ್ಚೆಯನ್ನು ಕಾಣಬಹುದು. ಭಾಷಿಕವಾಗಿ ವ್ಯಕ್ತವಾಗುವುದಕ್ಕೂ ಮನಸ್ಸಿನ ರಚನೆಗೂ ಇರುವ ಸಂಬಂಧವನ್ನು ವಿಶ್ವದಾದ್ಯಂತ ಚಿಂತಕರು ಪರಿಶೀಲಿಸಿದ್ದಾರೆ. ಪರಾ, ಪಶ್ಯಂತೀ, ಮಧ್ಯಮಾ, ವಾಕ್, ವೈಖರೀ ಎಂಬುದಾಗಿ ಭಾಷೆಯ ಅವಸ್ಥೆ ಮತ್ತು ಪ್ರಜ್ಞೆಯ ಅವಸ್ಥೆಗಳನ್ನು ಸಮೀಕರಿಸುವುದು ಪ್ರಾಚೀನ ಸಂಸ್ಕೃತ ಚಿಂತಕರಲ್ಲಿ ಕಾಣುತ್ತದೆ. ಭಾಷೆಯ ನಿರ್ದಿಷ್ಟ ನಿಯಮಗಳ ಮುಖಾಂತರ ಅರ್ಥವಂತಿಕೆಯನ್ನು ಸಾಗಿಸುವುದುಕ್ಕೂ ಮನಸ್ಸಿನ ಸ್ವರೂಪಕ್ಕೂ ಇರುವ ಸಂಬಂಧವನ್ನು ಹಳಬ ಪ್ಲೇಟೋ ಮತ್ತು ಇತ್ತೀಚಿನ ಚಾಮ್‌ಸ್ಕಿ ವಿವೇಚಿಸುತ್ತಾರೆ. ಮನಶ್ಶಾಸ್ತ್ರಜ್ಞರು ಮನುಷ್ಯನ ಮನಸ್ಸಿನಲ್ಲಿರುವ ಕಲ್ಪನೆಯ ಸಾಮರ್ಥ್ಯ, ಸಂಕೇತ ನಿರ್ಮಾಣ ಸಾಮರ್ಥ್ಯ ಮತ್ತು 'ಸತ್ಯ' ಇವುಗಳ ಸಂಬಂಧವನ್ನೂ ಚರ್ಚಿಸುತ್ತಾರೆ. ಇಂಥ ಚರ್ಚೆಯು ಕನ್ನಡದಲ್ಲಿ ಹನ್ನೆರಡನೆ ಶತಮಾನದಲ್ಲಿ ನಡೆದದ್ದು ಮುಂದುವರೆಯದೆ ನಿಂತುಹೋಯಿತು.

ತನ್ನ ಅರಿವನ್ನು ವ್ಯಕ್ತಪಡಿಸುವುದಕ್ಕೆ ಭಾಷೆಗೆ ಇರುವ ಸಾಮರ್ಥ್ಯದ ಬಗ್ಗೆ ಅಪನಂಬಿಕೆ ಮತ್ತು ಭಾಷೆಯ ಅನಿವಾರ್ಯತೆ ಇವೆರಡನ್ನೂ ಅಲ್ಲಮ ಸೂಚಿಸುತ್ತಾನೆ. ಹಾಗೆ ನೋಡಿದರೆ ಅಲ್ಲಮ ಮತ್ತು ಮುಕ್ತಾಯಕ್ಕ ಅವರ ನಡುವೆ ನಡೆಯುವ ಸಂವಾದ ಅಭಿವ್ಯಕ್ತಿ ಸಾಧ್ಯತೆಯನ್ನು ಕುರಿತ ಸಂವಾದವೇ ಆಗಿದೆ. ಅಲ್ಲಮ 'ಉಲಿ', 'ನುಡಿ', 'ಶಬ್ದ', 'ಮಾತು', 'ವಚನ', ಮತ್ತು 'ಭಾಷೆ' ಎಂಬ ಪರಿಕಲ್ಪನೆಗಳನ್ನು ಶಾಸ್ತ್ರಜ್ಞನಂತೆಯೇ ಬಳಸುತ್ತಾನೆ.

ಉಲಿಯುವುದೆಂದರೆ ತೀರ ಪ್ರಾಥಮಿಕವಾದ ಅಭಿವ್ಯಕ್ತಿ. ತನ್ನ ಅರಿವಿಕೆಯನ್ನು ಸಾರುವ ವಿಧಾನ. ಏನೇ ಆಗಲಿ 'ಇದೆ'ಯೆಂಬುದು ಗೊತ್ತಾಗುವುದೇ ಉಲಿಯಿಂದ "ಬೀಜದೊಳಗಣ ವೃಕ್ಷ ಉಲಿಯಬಲ್ಲುದೆ" ೨) ಎಂದು ಅಲ್ಲಮ ಕೇಳುವಾಗ 'ಉಲಿ'ಯ ಈ ಅರ್ಥ ಹೊಳೆಯುತ್ತದೆ. "ಜಗದ ಪ್ರಾಣಿಗಳು ಉಲಿದುಲಿದು ಮತ್ತಲ್ಲಿಯೇ ಬೀಳಲು" (೩೭೭)

"ಮರನುಳ್ಳನ್ನಕ್ಕರ ಎಲೆ ಉಲಿವುದ ಮಾಬುದೆ" (೪೮೭) "ಜ್ಞಾನ ಕೊಬ್ಬಿನಲಿ ಉಲಿವೆ" (೧೦೫) ಮುಂತಾದ ವಚನಗಳನ್ನು ಒಟ್ಟಿಗೆ ನೋಡಿದಾಗ ಅರಿವು ಇಲ್ಲದೆ ಉಲಿಯುವದು ಕೇವಲ ಜೈವಿಕ ನೆಲೆಯ ಅಸ್ತಿತ್ವ ಎಂದು ಅಲ್ಲಮ ಹೇಳುತ್ತಿರುವಂತೆ ತೋರುತ್ತದೆ. ಜೈವಿಕ ಪಾತಳಿಯ ಉಲುಹು ಕೇವಲ ಗಲಭೆಯಂತೆ ಕೇಳುತ್ತದೆ. ಉಲುಹಿನಿಂದ ತಪ್ಪಿಸಿಕೊಳ್ಳಬೇಕು. ಅರಿಯಬೇಕಾದರೆ,

ಉಲಿಯ ಹಂತಕ್ಕಿಂತ ಮೇಲಿನದು ಶಬ್ದ. ಶಬ್ದವೆಂಬುದು ಅರ್ಥದ ಪರಿಕಲ್ಪನೆಯನ್ನು ಅಡಗಿಸಿಕೊಂಡಿರುವಂಥದ್ದು. "ಪ್ರಾಣಲಿಂಗವೆಂಬ ಶಬ್ದ ವ್ರತಗೇಡಿಯಾಯಿತ್ತು" (೨೯), "ಹಿರಿಕಿಜಿದೆಂಬ ಶಬ್ದವಡಗಿದರೆ ಆತನೆ ಶರಣ" (೩೩೫) "ಅಂತರಂಗವೆಂಬ ಶಬ್ದಕ್ಕೆ ಬಹಿರಂಗ ಮುಂದುಕೊಂಡಿಪ್ಪುದು" (೭೫೪) ಮುಂತಾದ ವಚನಗಳಲ್ಲಿ 'ಶಬ್ದ' ಎಂಬುದನ್ನು ನಾವು ಇಂದು ಬಳಸುತ್ತಿರುವ 'ಪರಿಕಲ್ಪನೆ' ಎಂದೇ ವಿವರಸಿಕೊಳ್ಳಬಹುದು. ಪರಿಕಲ್ಪನೆ ಎಷ್ಟೆಂದರೂ ಕಲ್ಪನೆ. ಕಲ್ಪನೆ 'ನಿಜ'ವಲ್ಲ. ನಿಜವನ್ನು ಗ್ರಹಿಸಲು ಸಹಾಯ ಮಾಡಬಹುದು ಅಷ್ಟೇ. ಆದುದರಿಂದ ಅಲ್ಲಮ "ಶಬ್ದದ ಲಜ್ಜೆಯ ನೋಡಾ" (೨೬೪), "ಶಬ್ದ ಸೂತಕರ ಕೈಯಲ್ಲಿ ಸ್ಥಾವರ ವಿಧಿವಶವಾಯಿತು" (೫೭೧) ಎಂದು ಶಬ್ದದ ಅಂದರೆ ಪರಿಕಲ್ಪನೆಗಳ ಮಿತಿಯನ್ನು ಹೇಳುತ್ತಾನೆ. ಪರಿಕಲ್ಪನೆಗಳಲ್ಲಿ ವಿಹರಿಸುವ ಪಾಂಡಿತ್ಯವನ್ನು, ಪಂಡಿತರನ್ನು "ಶಬ್ದ ಸಂಭ್ರಮದಲ್ಲಿ ಹಿಂದುಗಾಣರು, ಮುಂದುಗಾಣರು" (೬೧೯) ಎಂದು ವಿವರಿಸುತ್ತಾನೆ. ಅರಿವು ಬೇಕಾದರೆ ಶಬ್ದವನ್ನು ದಾಟಬೇಕು.

ಶಬ್ದವನ್ನು ಬಿಟ್ಟರೆ ಕುರುಹು ಉಳಿಯುತ್ತದೆ. ಕುರುಹು ಕೂಡ ಸತ್ಯದ ಸಂಕೇತವೇ ಹೊರತು ತನ್ನಷ್ಟಕ್ಕೆ ಸತ್ಯವಲ್ಲ. "ಗುಹೇಶ್ವರ ನಿಮ್ಮ ಕುರುಹನೇ ಕಂಡು ಕೂಡಲರಿಯದೆ ಕೆಟ್ಟರು" (೪೯೫), "ಅರಿವಿನ ಕುರುಹು ಮುಂದಿಲ್ಲ ಇಲ್ಲ" (೬೩೯) "ಅರಿವು ನೆಲೆಗೊಂಡಲ್ಲಿ ಕುಱುಹಿಂಗೆ ಹೊಱಗು" (೧೦೭೭) ಮುಂತಾದ ವಚನಗಳಲ್ಲಿ ಅಲ್ಲಮ ಸಂಕೇತಗಳನ್ನು ಮುರಿದರೆ ಮಾತ್ರ ಅರಿವು ಲಭಿಸುತ್ತದೆ ಎಂದು ಹೇಳುವಂತಿದೆ.

ಉಲುಹು ಬಿಟ್ಟು, ಶಬ್ದವನ್ನು ನಿರಾಕರಿಸಿ ಕುರುಹನ್ನು ಮುರಿದು ಭಾಷೆ ಇರಬಲ್ಲುದೇ? "ಭಾಷೆಯೆಂಬುದು ಪ್ರಾಣ ಘಾತುಕ" (೭೨೩) ಎಂದು ಭಾಷೆಯ ವ್ಯವಸ್ಥೆಯನ್ನೇ ಅಲ್ಲಮ ನಿರಾಕರಿಸುತ್ತಾನೆ. ಉಳಿಯುವುದು ನಿಶ್ಶಬ್ದ ಮಾತ್ರ. ಅರಿವು ಅಖಂಡವಾದ ಪೂರ್ಣತೆ ಅದರಲ್ಲಿ ವಿರೋಧಗಳಿಲ್ಲ. ಅಂಗೀಕಾರವೂ ಇಲ್ಲ. ತಿರಸ್ಕಾರವೂ ಇಲ್ಲ. ಅದು ವ್ಯಕ್ತವಾದಾಗ ಮಾತ್ರ ಅಪೂರ್ಣ, ವೈರುಧ್ಯ ಇವೆಲ್ಲ ಕಾಣತೊಡಗುತ್ತವೆ. "ಶಬ್ದದೊಳಗಣ ನಿಶ್ಶಬ್ದ" ಅನ್ನುವಾಗ ಅಲ್ಲಮನ ಪರಿಕಲ್ಪನೆ, ಸಂಕೇತ, ಉಲುಹು, ಕುರುಹು ಏನೂ ಇಲ್ಲದ ಶುದ್ಧ ಸ್ಥಿತಿಯಿಂದ ಹೊಮ್ಮುವ ಸೀಮಿತವಾದ ಶಬ್ದ ಮತ್ತು ಅದರ ಆಚಿನದನ್ನು ಸೂಚಿಸುವಂತೆ ತೋರುತ್ತದೆ.

ಹೀಗೆಂದರೆ ಅಲ್ಲಮ ಹೇಳುವ ಅರಿವು ಮತ್ತು ನಿಶ್ಶಬ್ದ ನಮ್ಮ ನಿಮ್ಮ ಬಾಳಿನಲ್ಲಿ 'ಉಪಯೋಗ'ಕ್ಕೆ ಬರುವಂಥದ್ದು ಅನಿಸುವುದಿಲ್ಲ. ಆದರೆ ಅಲ್ಲಮನಿಗೆ ಗೊತ್ತು. "ಸಾಗರದೊಳಗಿಪ್ಪ ಪ್ರಾಣಿಗಳು ಮತ್ತೊಂದೆಡೆಯಲ್ಲಿ ಇರಬಲ್ಲವೇ?" (೯೫೮) ಎಂದೂ, "ರತ್ನ ದೀಪ್ತಿಯಾದಡೇನು ಬಂಧಿಸಿದ ಕುಂದಣದಲ್ಲಿಯೆ ಸಂದಿರಬೇಕು" (೧೦೮೬) ಎಂದೂ ಹೇಳುತ್ತಾನೆ. ಅವ್ಯಕ್ತವು ಅರಿವಿಗೆ ಬರುವುದೂ ವ್ಯಕ್ತದ ಮುಖಾಂತರವೇ "ಕಂಡುದ ಹಿಡಿಯಲೊಲ್ಲದೆ ಕಾಣದುದನರಿಸಿ ಹಿಡಿದಹೆನೆಂದರೆ ಸಿಕ್ಕದೆಂಬ ಬಳಲಿಕೆಯ ನೋಡಾ"

(೫೧) ಆದ್ದರಿಂದ ಕಂಡದ್ದನ್ನೇ ಕಾಣಲು ಸಾಧ್ಯವಾಗುವುದಾದರೆ ಕಾಣದುದನ್ನೂ ಕಾಣಬಹುದು ಎಂದು ಘೋಷಿಸುತ್ತಾನೆ.

ಅಲ್ಲಮ ಇಂಗ್ಲಿಷಿನಲ್ಲಿ "ಸಿಂಬಾಲಿಕ್ ಆರ್ಡರ್" ಎಂದು ಗುರುತಿಸುವ ವಲಯದಲ್ಲಿ ವ್ಯವಹರಿಸುವವನು. ಅದು ವಿರೋಧದ ಅಭಾಸಗಳನ್ನು ಆಧರಿಸಿದ ಮನೋವ್ಯವಸ್ಥೆ. ಮಾತಿನ ಬಗ್ಗೆ ಭಾಷೆಯ ಬಗ್ಗೆ ಅಪನಂಬಿಕೆ ಇರುವ ಅಲ್ಲಮ ಮಾತನ್ನು ಜ್ಯೋತಿರ್ಲಿಂಗ ಎಂದೂ ವಿವರಿಸುತ್ತಾನೆ. ಜ್ಯೋತಿ ನಿಶ್ಶಬ್ದವಾದ ಇರುವಿಕೆಯಷ್ಟೆ. ಅರಿವು ನಿಜವಾದುದಾಗಿದ್ದರೆ ಅದರ ಅಭಿವ್ಯಕ್ತಿ ನಿಶ್ಶಬ್ದವೇ ಆಗಿರುತ್ತದೆ. ನಿಶ್ಶಬ್ದದಲ್ಲಿ ಬೇರು ಬಿಟ್ಟ ಶಬ್ದ ಮಾತಾಗಿ ಜ್ಯೋತಿಯಾಗುತ್ತದೆ. ಅಲ್ಲಮನು ತನ್ನ ವಚನದ ಶಬ್ದಾರ್ಥವನ್ನು ನಿರಾಕರಿಸಿ ಎಂದು ನಮಗೆ ಆಹ್ವಾನವನ್ನು ಒಡ್ಡುತ್ತಾನೆ. ನಿಶ್ಶಬ್ದವನ್ನು ಶಬ್ದದ ಮುಖಾಂತರ ಹಿಡಿಯುವ ಪ್ರಯತ್ನ ಅವನದಾದ್ದರಿಂದಲೇ ಅವನ ವಚನಗಳ ತುಂಬ ವಿರೋಧಾಭಾಸಗಳ ಸಂತೆ ನೆರೆದಿರುವುದನ್ನು ಕಾಣುತ್ತೇವೆ. ಅರ್ಥದ ಅವಲಂಬನೆಯನ್ನು ಬಿಟ್ಟು ವಿರೋಧಗಳ ಹಿಂದಿರುವ ಅನುಭವ ತಾಗುವುದಕ್ಕೆ ನಮ್ಮಲ್ಲೆ ಅನುವು ಮಾಡಿಕೊಳ್ಳುವುದಾದರೆ ಆಗ ಮಾತು ಜ್ಯೋತಿಯಾಗುತ್ತದೆ. ಅರಿವಿನ ಸ್ವರೂಪ ವಿವರಿಸಲು ಭಾಷೆ ಅಸಮರ್ಥವಾದರೂ ಅನಿವಾರ್ಯ. ಭಾಷೆಯ ನಿರಾಕರಣೆಯೂ ಭಾಷೆಯ ಮೂಲಕವೇ ಆಗಬೇಕು. ಅಲ್ಲಮ ಮಾಡುವುದೂ ಅದನ್ನೇ.

ಭಾಗ ಏಳು : ನಂಬಲರಿಯೆ, ನಂಬಿಸಲರಿಯೆ

ಅರಿವು, ಅರಿ ಎಂಬ ಪದಗಳನ್ನು ಬಳಸಿರುವ ಬಸವಣ್ಣನ ವಚನಗಳ ಸಂಖ್ಯೆ ಸುಮಾರು ಒಂದು ನೂರ ಅರವತ್ತು. ಬಸವ ಭಾಷಿಕವಾಗಿ ಅರಿವು ಎಂಬುದನ್ನು ವ್ಯಾಖ್ಯಾನಿಸಲು ಪ್ರಯತ್ನವನ್ನು ಪಡದಿರುವುದು ಗಮನಾರ್ಹವಾದ ಸಂಗತಿ. 'ಅರಿಯೆ' 'ಅರಿಯದವರ', 'ಅರಿಯದೆ' ಎಂದು ಮುಂತಾದ ನಿಷೇಧ ಸೂಚಕ ಬಳಕೆಯೇ ಬಸವನ ವಚನಗಳಲ್ಲಿ ಹೆಚ್ಚಾಗಿ ಕಾಣುತ್ತದೆ. "ಆರಾರ ಮನದಲ್ಲಿ ಏನೇನಿರಬಹುದೆಂದರಿಯೆ, ಒಳ್ಳಿಹರೆಂದನಲಮ್ಮೆ ಹೊಲ್ಲಹರೆಂದನಲಮ್ಮೆ" (೪೦೨) ಎಂದು ಬಸವ ಹಲುಬುವುದೂ ಇದೆ. ತನ್ನಲ್ಲಿರುವ ಅರಿವು ಇತರರ ನಂಬಿಕೆಗೆ ಪಾತ್ರವಾಗುವಂತಿರಬೇಕು. ಹಾಗೆಯೇ ಇತರರಲ್ಲಿರುವ ಅರಿವು ತನ್ನಲ್ಲಿಯೂ ವಿಶ್ವಾಸ ಮೂಡಿಸಬೇಕು ಎಂಬುದು ಬಸವನ ಹಂಬಲ. ಇದು ತಾತ್ತ್ವಿಕವಾಗಿ ಅಸಾಧ್ಯವಾದ ಸಂಗತಿ. ವರ್ತನೆ ಅದು ನಡೆಯಾಗಿರಲಿ, ಆಚರಣೆಯೇ ಆಗಿರಲಿ ತೋರಿಕೆಯದು ಆಗಿರುವ ಸಾಧ್ಯತೆ ಇದ್ದೇ ಇರುತ್ತದೆ. ಬಹಿರಂಗದ ವರ್ತನೆಯನ್ನು ಆಧಾರವಾಗಿಟ್ಟು ಅದರ ಹಿನ್ನೆಲೆಯ ಅರಿವನ್ನು ನಂಬುವುದು ನಂಬಿಸುವುದು ಎರಡೂ ತಪ್ಪು. ಇದು ಬಸವನಂಬಿದ ದೇವರ ಕಲ್ಪನೆಯ ಬಗೆಗೂ ನಿಜ. "ಎಂತಕ್ಕೆ ನಾ ನಿಮ್ಮ ದೇವರೆಂದರಿತೆನು.... ಕೋಟಿ ಕೋಟಿ ವರುಷ ಕೋಟಲೆಗೊಂಡೆನಯ್ಯಾ" (೨೬೮) ಎಂದು ವ್ಯಾಕುಲಗೊಳ್ಳುತ್ತಾನೆ ಬಸವ. ಬಸವ ನಾವು ಇಂದು ಯಾವುದನ್ನು ಐಡಿಯಾಲಜಿ ಎಂದು ಕರೆಯುತ್ತೇವೋ ಅದಕ್ಕೆ ಬದ್ಧನಾದವನು ಎಂಬಂತೆ ತೋರುತ್ತಾನೆ. ಐಡಿಯಾಲಜಿ ಎನ್ನುವುದು ಕಾಣುವ ಲೋಕವನ್ನು ವಿಚಾರದ ಒಂದು ಚೌಕಟ್ಟಿಗೆ ಹೊಂದಿಸುವ ಯತ್ನ. ಅದು ನಿರ್ದಿಷ್ಟ ತರ್ಕದ ಬಗ್ಗೆ ತಾರ್ಕಿಕವಾಗಿ ರೂಪಗೊಳಿಸಿಕೊಂಡ ಸಿದ್ಧಾಂತದ ಬಗ್ಗೆ

ನಂಬಿಕೆಯನ್ನೂ ಸಮರ್ಥನೆಯನ್ನೂ ಬಯಸುತ್ತದೆ. ಐಡಿಯಾಲಜಿಯ ಇನ್ನೊಂದು ಮುಖ ಅಸಹನೆ. ಅಥವಾ ತೀರ ಪರಿಮಿತ ಸಹನೆ. ಅಂತಲೇ ಅನ್ಯ ದೈವತತ್ವಗಳನ್ನು ನಂಬಿದವರ ಬಗ್ಗೆ, ಭಿನ್ನ ಆಚರಣೆಗಳನ್ನು ಹೊಂದಿರುವವರ ಬಗ್ಗೆ ಬಸವನ ವಚನಗಳಲ್ಲಿ ಅಸಹನೆ ವ್ಯಕ್ತವಾಗುತ್ತದೆ. "ಹಾವಿನ ಡೊಂಕು ಹುತ್ತಕ್ಕೆ ಸಸಿನ, ನದಿಯಡೊಂಕು ಸಮುದ್ರಕ್ಕೆ ಸಸಿನ, ನಮ್ಮ ಕೂಡಲಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ" (೧೪೩) ಎಂಬಂಥ ವಚನಗಳಲ್ಲಿ ಒಂದು 'ಐಡಿಯಾಲಜಿ'ಯನ್ನು ಒಪ್ಪಿದವರ 'ಡೊಂಕು' ವರ್ತನೆಗಳ ಸಮರ್ಥನೆಯೂ ಕಾಣುತ್ತದೆ.

ವೈಯಕ್ತಿಕ ನೆಲೆಯಲ್ಲಿ ಅನುಭಾವದ ಸಾಧನೆ ಮತ್ತು ಅದು ಲೋಕ ವ್ಯವಹಾರದಲ್ಲಿ ಲೌಕಿಕ ತರ್ಕದ ಎದುರಿನಲ್ಲಿ ಸಮರ್ಥನೆಗೊಳ್ಳಬೇಕಾದ ಕಷ್ಟ–ಇದು ಬಸವನ ವಚನಗಳಲ್ಲಿ ಕಾಣುತ್ತದೆ. ಬಸವ ಅನುಭವಿಸುವ ಕಷ್ಟ ಎಲ್ಲ ಪ್ರಾಮಾಣಿಕ ವ್ಯಕ್ತಿಗಳೂ ಅನುಭವಿಸುವ ಕಷ್ಟ.

ಅರಿವಿಗೆ ಸೀಮೆಗಳಿಲ್ಲ ಎಂಬುದು ಆದರ್ಶದ ಮಾತು. ಸೀಮಾಬದ್ಧವಾದ ವ್ಯಕ್ತಿತ್ವ ಸೀಮಾರಹಿತವಾದದ್ದನ್ನು ಅನುಭವಿಸಿ ಹಾಗೆಯೇ ತನ್ನ ಅನುಭವವನ್ನು ಇತರರೂ ನಂಬುವಂತೆ ಮಾಡುವುದು ಹೇಗೆ? ಇದಕ್ಕಾಗಿ ಬಸವಪಟ್ಟ ಪ್ರಯತ್ನ ಇತಿಹಾಸವಾಗಿ ಉಳಿಯಿತು. ಅವನ ಪ್ರಯತ್ನ ಸಮರ್ಥನೆಗಳಿಗೆ, ಟೀಕೆಗಳಿಗೆ, ಮೌಲ್ಯಮಾಪನಕ್ಕೆ ಪಕ್ಕಾಯಿತು. ಬಸವ ಅವಲಂಬನೆಗಳನ್ನು ಬಯಸಿದವನು. ವ್ಯಕ್ತಿ ಮತ್ತು ಸಮಾಜದ ಪರಸ್ಪರ ಅವಲಂಬನೆಯನ್ನು ಒಪ್ಪಿದ್ದವನು. ಆದ್ದರಿಂದಲೇ ಅವನ ಅವಲಂಬನೆಗಳು, ಯಾವುದೆ ಐಡಿಯಾಲಜಿಯಂತೆ ವಿಮರ್ಶೆಗೆ ಒಳಗಾಗಬಲ್ಲವು.

ಅಲ್ಲಮ ನಿರಾಲಂಬವನ್ನು ಸಾಧಿಸುವ ಬಯಕೆಯುಳ್ಳವನು. ಐಡಿಯಾಲಜಿಯನ್ನು ದಾಟಿದ ಅರಿವಿನ ಇರುವಿಕೆಯ ಪ್ರತಿಪಾದಕ. ಹಾಗಾಗಿ ಅವನಿಗೆ ವ್ಯಕ್ತಿತ್ವವಾಗಲಿ, ವ್ಯಕ್ತಿತ್ವದ ತೊಳಲಾಟಗಳಾಗಲಿ ಮುಖ್ಯ ಆಗುವುದಿಲ್ಲ.

ಭಾಗ ಎಂಟು : ಅರಿವು ಸಾಮಾನ್ಯವೇ?

ಪರಿಭಾಷೆಯನ್ನು ಬಳಸಿ ಹೇಳುವುದಾದರೆ ಅರಿವನ್ನು ಪಡೆಯಲು ಇರುವ ಪರಿಕರಗಳು ಮೂರು–ದೇಹ, ಮನಸ್ಸು ಮತ್ತು ಭಾಷೆ. ಅನುಭವವನ್ನು ಸ್ವೀಕರಿಸಲು ಇರುವ ಇಂದ್ರಿಯಗಳು, ಅನುಭವವನ್ನು ಪಡೆಯಲು ಇರುವ ಉಪಕರಣಗಳು ತೊಡಕುಗಳೂ ಆಗಿರುವುದು ವಿಚಿತ್ರ, ಮುಖ್ಯ ತೊಂದರೆ ಭಾಷೆಯದು. ಯಾವುದೇ ಅನುಭವವನ್ನು ತೀರ ಸ್ಥೂಲ ರೂಪದಲ್ಲಿ ಮಾತ್ರ ಭಾಷೆ ಹಿಡಿದಿಡಬಲ್ಲದು. ಅರಿವು ಅನುಭವದ ಸ್ವರೂಪ ಇವುಗಳನ್ನು ವ್ಯಕ್ತಪಡಿಸಲು ಭಾಷೆಯ ಪದಸಂಪತ್ತು ಸಾಲದು ಎನಿಸುತ್ತದೆ. ನಮ್ಮಿಂದ ಹೊರಗೆ ಇರುವ 'ವಸ್ತು'ವಿನ ಸ್ವರೂಪವನ್ನು ಸಾಕಷ್ಟು ಖಚಿತವಾಗಿ ವಿವರಿಸಲು ಬೇಕಾದ ಪದಸಂಪತ್ತು 'ವಿಜ್ಞಾನ'ದಲ್ಲಿ ನಿರ್ಮಾಣವಾಗಿರುವ ಹಾಗೆ ಅನುಭವದ, ಅರಿವಿನ ಅಭಿವ್ಯಕ್ತಿಗೆ ಬೇಕಾದ ಭಾಷೆ ನಿರ್ಮಾಣವಾಗಿಲ್ಲ. ದೇಹ ಮತ್ತು ಮನಸ್ಸುಗಳ ತೊಡಕು ಬೇರೆ ಬಗೆಯದು. ಮನಸ್ಸು ಇಂದ್ರಿಯವೋ ಪ್ರಕ್ರಿಯೆಯೋ ಎಂಬ ಪ್ರಶ್ನೆ ಇದೆ. ಆಗುವ ಅನುಭವಗಳ ಬಿಡಿಸಲಾರದ ಭಾಗಗಳೇ ಆಗಿರುವ ದೇಹ–ಮನಸ್ಸುಗಳು ತಮ್ಮನ್ನು ಅನುಭವದಿಂದ ಬೇರ್ಪಡಿಸಿಕೊಂಡರೆ ಅನುಭವ ಸುಳ್ಳಾಗಿ ಕಾಣತೊಡಗುತ್ತದೆ. ಅವೂ ಅನುಭವವೂ ಬೇರೆ ಅಲ್ಲ ಅಂದುಕೊಂಡರೆ ಹೇಳಬೇಕಾದ ವಸ್ತು ಇರುವುದೇ ಅಲ್ಲ. ತತ್ವಶಾಸ್ತ್ರಜ್ಞರು,

ಮನಶ್ಶಾಸ್ತ್ರಜ್ಞರು ಅರಿವಿನ ಅನ್ವೇಷಣೆಯಲ್ಲಿ ವ್ಯಕ್ತಿಯೇ ವಸ್ತುವಾಗಬೇಕಾದ ಸಮಸ್ಯೆಯನ್ನು ಚರ್ಚಿಸಿದ್ದಾರೆ.

ಕನ್ನಡದಲ್ಲಿ ಅಲ್ಲಮನ ವಚನಗಳು ಅರಿವನ್ನು ವ್ಯಾಖ್ಯಾನಿಸುವ ಮುಖ್ಯ ಆಕರಗಳಾಗಿವೆ. 'ಅರಿ', 'ಅರಿವು', ಎಂಬ ಪದಗಳು ಮತ್ತು ಅವುಗಳ ನಿಷ್ಪನ್ನ ರೂಪಗಳು ಅಲ್ಲಮನ ಸುಮಾರು ಮುನ್ನೂರಕ್ಕಿಂತ ಹೆಚ್ಚು ವಚನಗಳಲ್ಲಿ ಕಾಣುತ್ತವೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಆಯ್ದುಕೊಂಡು ಅರಿವಿನ ಸ್ವರೂಪದ ಬಗ್ಗೆ ಅಲ್ಲಮನ ಚಿಂತನೆಗಳನ್ನು ಇಲ್ಲಿ ಸ್ಥೂಲವಾಗಿ ಮಾತ್ರ ಗಮನಿಸಬಹುದು.

೧. ಅರಿವು ಸದಾ ಕಾಲದಲ್ಲೂ ಇರುವ 'ಇರುವಿಕೆ'. ಈ ಇರುವಿಕೆಯ ಅತ್ಯಲ್ಪಭಾಗ 'ವ್ಯಕ್ತಿತ್ವ'. ನನ್ನತನ ಎಂಬುದು ಸ್ಪಷ್ಟವಾದ ಬಳಿಕ ನಾನಲ್ಲದ್ದನ್ನೂ ಒಳಗೊಳ್ಳುವ, ಪೂರ್ವ ಅರಿವನ್ನು ಸಾಧಿಸುವ ಹಂಬಲ ಬೆಳೆಯುತ್ತದೆ. (೭ ರಿಂದ ೧೦)

೨. ಅರಿವಿಗೆ ಎರಡು ಮುಖಗಳಿವೆ. ಒಂದು ಗ್ರಹಿಕೆ, ಇನ್ನೊಂದು ಸಂವೇದನೆ. ಸಂವೇದನೆಗೆ ಪರಿಮಿತಗಳಿವೆ. ಅದು ಇಂದ್ರಿಯಗಳಿಂದ ಉಂಟಾಗುವ ಪರಿಮಿತಿ. ಸಂವೇದನೆ ದೇಹದ ಪಾತಳಿಯದು. ಗ್ರಹಿಕೆ ಸಂವೇದನೆಯಿಂದಲೇ ಮೂಡಿದರೂ ಅದು ಅಖಂಡವಾದದ್ದು. "ಸಿಡಿಲು ಹೊಯ್ದು ಬಯಲಿಂಗೆ ಬಣ್ಣವುಂಟೆ" (೩೫) ಎಂದು ಅಲ್ಲಮ ಕೇಳುವಾಗ ಆತ ಸಂವೇದನೆಗಳನ್ನು ನಿರಾಕರಿಸಿ, ಗ್ರಹಿಕೆಗೆ ಒತ್ತು ಕೊಡುತ್ತಿದ್ದಾನೆ. ಬಣ್ಣ ಸಂವೇದನೆಯ ಹಂತದ್ದು. ಸಿಡಿಲು ಹೊಯ್ದು ಬಯಲು ಗ್ರಹಿಕೆಗೆ ಸಂಬಂಧಿಸಿದ್ದು.

೩. ಅರಿವು ಎಂಬುದು ಕೇವಲ ತಿಳಿವಳಿಕೆಯಲ್ಲ. ತಿಳಿವಳಿಕೆ ಬುದ್ಧಿಯ ಪಾತಳಿಯದು. ತಿಳಿವಳಿಕೆಯಲ್ಲಿ ತಿಳಿಯಲಾಗದೆ ಉಳಿದದ್ದವರ ಬಗ್ಗೆ ದುಗುಡ ಇರುತ್ತದೆ. ಅರಿವು, ತಿಳಿವಳಿಕೆಯನ್ನು ಮೀರಿದ ನಿರ್ಣಯ. ಅಲ್ಲಿ ದುಗುಡಕ್ಕೆ ಅವಕಾಶ ಇಲ್ಲ. "ನಿರ್ಣಯವನರಿಯದ ಮನವೇ ದುಗುಡವನಾಹಾರ ಗೊಂಡೆಯಲ್ಲಾ... ಕಂಗಳೊಳಗಣ ಕತ್ತಲೆ ತಿಳಿಯದಲ್ಲಾ" (೪೫) ಎಂಬುದು ಅಲ್ಲಮನ ಆಶ್ಚರ್ಯ.

೪. ಗ್ರಹಿಕೆಯಲ್ಲೂ ಹಂತಗಳಿವೆ. ಗ್ರಹಿಕೆಯ ಮೇಲಿನ ಹಂತವನ್ನು ಏರಿದಂತೆ ಕೆಳಹಂತದ ಗ್ರಹಿಕೆಯ ಮಿತಿಗಳು ತಿಳಿಯುತ್ತವೆ. "ಹೃದಯ ಕಮಲ ಮಧ್ಯದಲ್ಲಿ ಗುರುವನರಿದು.... ಹಿಂದಣ ಹುಟ್ಟುಱಿತು ಹೋದುದ ಕಂಡೆನಯ್ಯಾ" (೫೬) ಎಂಬ ವಚನವನ್ನು ನೋಡಿ.

೫. ಅರಿವಿನ ಗ್ರಹಿಕೆಯಲ್ಲಿ ಒಳಗು ಮತ್ತು ಹೊರಗು ಎಂಬ ವ್ಯತ್ಯಾಸಗಳು ಇರುವುದಿಲ್ಲ. "ಹೊಱಗಣ ಹೊಱಗು ಅಱಿಯ ಬಲ್ಲವರಿಲ್ಲ" (೫೮) ಅನ್ನುವಾಗ ಅರಿವಿಗೆ ಅಂತರಂಗ ಮತ್ತು ಬಹಿರಂಗ ಎಂಬ ವ್ಯತ್ಯಾಸ ಇಲ್ಲ ಎಂಬುದನ್ನು ಅಲ್ಲಮ ಸ್ಪಷ್ಟಗೊಳಿಸುತ್ತಾನೆ.

೬. ಅರಿವು ಕೇವಲ ಮಾಹಿತಿಯಾಗಲಿ, ತಿಳಿವಳಿಕೆಯಾಗಲಿ ಅಲ್ಲ. ಅದು ಜ್ಞಾನ. "ಅಕ್ಷರವ ಬಲ್ಲೆವೆಂದು ಅಹಂಕಾರವೆಡೆಗೊಂಡು... ವಾಗದ್ವೈತ ಕಲಿತು ವಾದಿಪರಲ್ಲದೆ ಆಗು ಹೋಗೆಂಬುದನರಿಯರು" (೬೯), "ಬರಿಯ ಸಂಭ್ರಮಿಗಳೊಡತಣದನುಭಾವ ಐವತ್ತೆರಡಕ್ಷರ ತಮ್ಮಲ್ಲಿ ತಾವು ಉಲಿದಂತೆ ಉಲಿದವು" (೬೪೫), "ತಮ್ಮ ತಾವಱಿಯದೆ ಸತ್ತವರ ಹೆಸರ ಪತ್ರವ ನೋಡಿದಡೆ ಅದೆತ್ತಣ ಮುಕ್ತಿ" (೬೪೮) ಮುಂತಾದ ವಚನಗಳಲ್ಲಿ ಅರಿವು ಕೇವಲ ತಿಳಿವಳಿಕೆಯಾಗಲಿ ಮಾಹಿತಿಯಾಗಲಿ ಅಲ್ಲ ಎಂಬುದು ವ್ಯಕ್ತವಾಗಿದೆ.

೭. ಅರಿವು ಜ್ಞಾನವೂ ಅಲ್ಲ. ಯಾಕೆಂದರೆ ಜ್ಞಾನ ಅಹಂಭಾವವನ್ನು ಹುಟ್ಟಿಸಬಹುದು. "ಜ್ಞಾನ ಕೊಬ್ಬಿನಲಿ ಉಲಿವೆ, ಉಲಿದಂತೆ ನಡೆವೆ" (೧೦೫) ಎನ್ನುವಾಗ ಜ್ಞಾನವೂ ದುಷ್ಟ ಆಗಬಹುದೆಂಬ ಎಚ್ಚರ ಕಾಣುತ್ತದೆ.

೮. ಅರಿವಿಗೆ ಯಾವ ಕುರುಹೂ ಇಲ್ಲ. ಅರಿವಿಗೆ ಸಂಬಂಧಗಳು ಇಲ್ಲ. "ತೆರಹಿಲ್ಲದ ಘನಕ್ಕೆ ಕುರುಹು ಮುನ್ನಿಲ್ಲ"(೬೩೫),"ಅರಿವು ನೆಲೆಗೊಂಡಲ್ಲಿ ಕುರುಹಿಂಗೆ ಹೊರಗು (೧೦೭೭), "ಸಂಗವಿಲ್ಲದ ಸಂಬಂಧ ಸ್ವಯಮಪ್ಪ ಅನುಗ್ರಹವ ಕೊಂಬಂತೆ ಮಾಡಾ (೭೫೧).

೯. ಕಾಮ ಎಂಬುದು ದೇಹಕ್ಕೆ, ಇಂದ್ರಿಯಗಳ ಮಿತಿಗೆ ಅಷ್ಟೇ ಸಂಬಂದಿಸಿದ್ದಾದರೆ ಅದರ ಶಕ್ತಿಯನ್ನು ಅಪವ್ಯಯಮಾಡಿದಂತೆ. ಇಂದ್ರಿಯ ಸುಖಕ್ಕೆ ಕಾರಣವಾಗುವ ಕಾಮ ಅರಿವಿನ ಮುಖ್ಯ ಸ್ರೋತವೂ ಹೌದೆಂದು ತಿಳಿಯಬೇಕು. "ಅಮರಾವತಿ ಎಂಬುದು ದೇವೇಂದ್ರನಾಳುವ ನಂದನ" (೧೩೧) ಎಂಬ ವಚನದಲ್ಲಿ ಅನ್ಯೋಕ್ತಿಯ ಮೂಲಕ ಅಲ್ಲಮ ಕಾಮ ಮತ್ತು ಅರಿವಿನ ಸಂಬಂಧ ವಿವೇಚಿಸುತ್ತಾನೆ. ದೇವೇಂದ್ರ, ಅಮರಾವತಿ, ನಂದನ ಇವುಗಳ ಅನ್ಯಾರ್ಥ ಸಾಧ್ಯತೆಗಳನ್ನು ಯೋಚಿಸಬಹುದು. ಕಾಮ ದೇವೇಂದ್ರನ (ಇಂದ್ರಿಯಗಳ ಒಡೆಯನ ಆಣತಿಯನ್ನು ಪಾಲಿಸುವಂತಾಗದೆ "ಗುಹೇಶ್ವರ ಲಿಂಗವರಿ"ಯುವಂತಾಗಲಿ ಎಂದು ಅಲ್ಲಮ ಅಪೇಕ್ಷಿಸುತ್ತಾನೆ.

೧೦. ಅರಿಯಬೇಕಾದದ್ದು ತನ್ನಿಂದ ಬೇರೆಯಾಗಿ ಹೊರಗೆ ಎಲ್ಲೂ ಇಲ್ಲ. "ಬೇರೆ ಮತ್ತು ಅರಿಯಲುಂಟೆ" (೧೮೯), "ತಿಳಿಯಬಲ್ಲಡೆ ಗುಹೇಶ್ವರನ ನಿಲುವು ತಾನೆ" (೨೬೮). ಹಾಗೆ ಹೊರಗೆ ಇರುವ ವಸ್ತುವಲ್ಲ ಅರಿವು. ಆದ್ದರಿಂದಲೇ "ನಿನ್ನೊಳಗೆ ಅರಿವು ಭಿನ್ನವಾಗುತ್ತಿರಲು ಮುನ್ನವೇ ನೀನು ದೂರಸ್ಥನೋಡಾ" (೩೪೮) ಎನ್ನುತ್ತಾನೆ. ಆದರೆ ನನ್ನೊಳಗಿನ ಅರಿವನ್ನು ಪಡೆಯುವುದಕ್ಕೆ ದಾರಿಗಳೂ ಹಲವು ಇರಬಹುದು. "ದೂರವಿಲ್ಲದ ಗಮನಕ್ಕೆ ದಾರಿ ಪಯಣ ಹಲವಾಯಿತ್ತು" (೮೬).

೧೧. ಅರಿವು ಎಂಬುದು ಕೇವಲ ಪರಿಕಲ್ಪನೆಗಳ ಮೊತ್ತವಲ್ಲ, ಗಾಳಿ, ನೀರು, ಬೆಂಕಿ, ಆಕಾಶ, ಮನಸ್ಸು, ಬುದ್ಧಿ, ಅಹಂಕಾರ, ಸತ್ವ, ರಜಸ್ಸು, ತಮಸ್ಸು ಮುಂತಾದ ಪರಿಕಲ್ಪನೆಯಲ್ಲಿ ತೊಳಲುವವರು "ಆತ್ಮನ ಎತ್ತಲೆಂದರಿಯರು" (೧೯೯) ಎಂದೂ, ಪರಿಕಲ್ಪನೆಗಳ ಮುಖಾಂತರ ಅರಿವನ್ನೂ ವಿವರಿಸುವುದು "ಶಬ್ದದ ಲಜ್ಜೆ" ಎಂದೂ (೨೬೪) ಅಲ್ಲಮ ಹೇಳುತ್ತಾನೆ.

೧೨. ಅರಿವಿನಲ್ಲಿ ಪರಸ್ಪರ ವಿರೋಧದ ಸಂಗತಿಗಳು ಇಲ್ಲ. ಅರಿವು ಎಲ್ಲ ವಿರೋಧಗಳನ್ನೂ ಮೀರಿದ್ದು, ಅಥವಾ ಒಳಗೊಂಡಿದ್ದು ಆಗಿರುತ್ತದೆ. "ಇರುಳಿನ ಮುಖ ಹಗಲೆಂದರಿಯರು, ಹಗಲಿನ ಮುಖ ಇರುಳೆಂದರಿಯರು" (೨೧೮).

೧೩. ಅರಿವು ವಿಶಿಷ್ಟವಾದದ್ದು ಮತ್ತು ಲೋಕ ವಿಪರೀತವಾದದ್ದು. ಅದು ಮನಸ್ಸಿನ ವ್ಯವಹಾರವೂ ಅಲ್ಲ. "ಸುಳಿವ ಸುತ್ತುವ ಮನದ ವ್ಯವಹರಣೆಯುಳ್ಳನ್ನಕ್ಕರ ಅರಿಯೆನರಿಯೆನನನೆರಿ ಶಿವಪಥವ... ನಿಜವನರಿತಬಳಿಕ ಅರಿಯೆನರಿಯೆ ಲೋಕದ ಬಳಕೆಯ" (೨೯೪). "ಲೋಕಕ್ಕೆ ಅಬುಹದೆ ನಾನರಿದೆನು" (೨೭೭).

೧೪. ಅರಿವಿನಲ್ಲಿ ಸಂಶಯಗಳಿಲ್ಲ. "ಇದೇನೋ ಇದೆಂತೋ ಎಂಬೆರಡು ಮಾತಿನ ನಡುವೆ ಉರಿಹತ್ತಿತ್ತು ಮೂರುಲೋಕವು" (೩೩೮). ಇಂಥ ಸಂಶಯವಿಲ್ಲದ ಅರಿವಿನಲ್ಲಿ

ಅಖಂಡತೆಯಷ್ಟೆ ಇರುತ್ತದೆಯೇ ಹೊರತು ಬಹುಮುಖತೆ ಅಲ್ಲ. ಆದಿ ಎಂಬುದಿಲ್ಲ, ಅನಾದಿ ಎಂಬುದಿಲ್ಲ. "ಗುಹೇಶ್ವರನ ನಿಲವನರಿದಡೆ ಒಂದೂ ಅಲ್ಲ, ಅರಿಯದಿದ್ದಡೆ ಬಹುಮುಖ್ಯವಯ್ಯಾ" (೩೫೭).

೧೫. ಅರಿವು ಕ್ರಿಯೆ ಅಲ್ಲ ನೆನಪೂ ಅಲ್ಲ. (೬೩೫, ೬೩೬). ಮರೆತದ್ದು ಅರಿವಲ್ಲ ನೆನಪು ಇಟ್ಟುಕೊಂಡದ್ದು ಅರಿವಲ್ಲ.

೧೬. ಅರಿವು ಆಗಬೇಕಾದರೆ ನಮ್ಮೊಳಗನ್ನು ನಾವು ಖಾಲಿಮಾಡಿಕೊಳ್ಳಬೇಕು. ಆಗ ಸೃಷ್ಟಿಯೆಲ್ಲ ಭರಿತವಾಗಿರುವ ಅರಿವಿನಲ್ಲಿ ನಾವೂ ಒಂದಾಗಿಬಿಡುತ್ತೇವೆ. ಭ್ರಮೆಗಳು, ಕ್ರಿಯೆಯ ಅಪೇಕ್ಷೆ ಎಲ್ಲವೂ ಇಲ್ಲವಾದಾಗ ಮಾತ್ರ ಅರಿವು ನಮ್ಮೊಳಗೆ ತುಂಬಿಕೊಳ್ಳಬಹುದು (೩೬೩).

೧೭. ಅರಿವಿನ ಹಂತಗಳನ್ನು ಗುರುತಿಸುವುದು ಸಾಧ್ಯ. ಮೊದಲು ಉಪಮೆ ಬರುತ್ತದೆ. ಉಪಮೆ ಮನಸ್ಸಿನ ಕಲ್ಪನೆ. ಆದರೆ ಅರಿವು ಉಪಮೆಗೆ ಸಿಕ್ಕುವುದಿಲ್ಲ. ರೂಪಗೊಳಿಸಿಕೊಳ್ಳಲು ಮನಸ್ಸು ಬಯಸುತ್ತದೆ. ಅದು ಸಂಕೇತದ ನಿರ್ಮಾಣ ಸಾಮರ್ಥ್ಯ. ಅರಿವು ರೂಪವೂ ಅಲ್ಲ. ರೂಪವೂ ಅಲ್ಲವಾದ್ದರಿಂದ ಅರಿವೆಂಬುದು ಭಾವನೆಯೂ ಅಲ್ಲ. ಅರಿವು ಎಂದರೆ ಅರಿವು ಅಷ್ಟೇ. (೧೨೮೨). ಅದು 'ನಾನು' ಅಷ್ಟೆ. ತಾನು ತಾನೇ ಆಗುವುದು ಅಲ್ಲಮನ ಅರಿವಿನ ವ್ಯಾಖ್ಯೆ (೫೪೨).

೧೮. ಇಂಥ ಅರಿವು ತಮಗೆ ಆದ ಮೇಲೆ ಏನಾದರೂ ಬದಲಾವಣೆ ಇದ್ದರೆ ಅದು ತನ್ನಲ್ಲಿ ಮಾತ್ರ ಇರುತ್ತದೆ, ಲೋಕ ಎಂದಿನಂತೆ ತನ್ನ ಪಾಡಿಗೆ ಇರುತ್ತದೆ. "ಹುಟ್ಟುವವರ ಹುಟ್ಟ ಬೇಡೆಂದೆನೆ? ಹೊಂದುವವರ ಹೊಂದಬೇಡೆಂದೆನೆ, ಪ್ರಳಯದಲ್ಲಿ ಅಳಿವವರ ಅಳಿಯಬೇಡೆಂದೆನೆ ಗುಹೇಶ್ವರ, ನಿಮ್ಮನರಿದು ನೆರೆದ ಬಳಿಕ ಧರೆಯಮೇಲುಳ್ಳವರನಿರಬೇಡೆಂದೆನೆ?" (೪೩೬), "ನೀನಾನೆಂಬುದಿಲ್ಲ" (೪೪೪) ಎಂಬುದು ನನ್ನ ಮಟ್ಟಿಗೆ ಅಳಿದರೂ 'ನೀನು' ಎಂಬ ತತ್ವವೇ ಇಲ್ಲವಾಗುವುದಿಲ್ಲ. ದ್ವಂದ್ವ ಇರುತ್ತದೆ. ಅರಿವಿನಲ್ಲಿ ವ್ಯಕ್ತಿ ಅದನ್ನು ಮೀರುತ್ತಾನೆ.

ಭಾಗ ಒಂಭತ್ತು : ಸಮಾರೋಪ : ಹಲವು ದ್ವೀಪಗಳ ನಡುವೆ – ಪ್ರಳಯದ ಅಪೇಕ್ಷೆ

ನಾವು ಇಂದು ಹೊಸ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕೆಂಬ ತಹತಹದಲ್ಲಿದ್ದೇವೆ. ತಾಂತ್ರಿಕಯುಗದ ಮಾಹಿತಿಕ್ರಾಂತಿಯಲ್ಲಿ ಉತ್ಪಾದನೆ ಉಪಭೋಗಗಳ ವಿನ್ಯಾಸದಲ್ಲಿ ವ್ಯಕ್ತಿತ್ವದ ಕಲ್ಪನೆ ಬೇರೆಯೇ ಆಗುತ್ತದೆ. ಹಳೆಯ ಜಗತ್ತಿನಲ್ಲಿ ಪ್ರಳಯವಾದಾಗಲೇ ಹೊಸ ಜಗತ್ತು ಹುಟ್ಟುವುದು. ಹೊಸ ವ್ಯವಸ್ಥೆಯ ರೂಪಣವೆಂದರೆ ಹಳೆಯ ವ್ಯವಸ್ಥೆ ಪ್ರಳಯಕ್ಕೆ ಒಳಗಾಗುವುದೇ ಆಗಿದೆ. ಹನ್ನೆರಡನೆಯ ಶತಮಾನದ ಬದುಕಿನಲ್ಲಿ ಧರ್ಮಕ್ಕೆ ಇದ್ದ ಕೇಂದ್ರಸ್ಥಾನ ಇಂದು ಇಲ್ಲ. ರಾಜಕೀಯ ಇಂದಿನ ಬದುಕಿನ ಕೇಂದ್ರವಾಗಿದೆ. ಅನುಭಾವಕ್ಕಿಂತ ಐಡಿಯಾಲಜಿ ಮುಖ್ಯವಾಗಿದೆ. ಆದರೂ ಸ್ಥಳೀಯ, ದೇಶೀಯ ಧರ್ಮಗಳ ಬೇರು ಅಲುಗದೆ ಉಳಿದಿದೆ. ಇಂಥ ಧರ್ಮದಲ್ಲಿ ಆಳವೂ ಪ್ರಾಮಾಣಿಕವೂ ಆದ ನಂಬಿಕೆಯನ್ನು ಒಂದೆಡೆ ಇಟ್ಟುಕೊಂಡು ಇನ್ನೊಂದೆಡೆ ವಿಶ್ವವ್ಯಾಪಿಯಾದ ತಾಂತ್ರಿಕತೆಗೆ ನಮ್ಮನ್ನು ನಾವು ಒಡ್ಡಿಕೊಳ್ಳುವುದು ವ್ಯಕ್ತಿತ್ವದಲ್ಲಿ, ಸಮಾಜದಲ್ಲಿ ಅಸಹನೀಯವಾದ ಬಿರುಕುಗಳನ್ನು

ಮೂಡಿಸುತ್ತಿದೆ. ತಾಂತ್ರಿಕತೆ ಮನುಷ್ಯನಿಗೆ ಅಪಾರ ಸ್ವಾತಂತ್ರ್ಯವನ್ನು ತಂದುಕೊಟ್ಟಿದ್ದರೂ ಜಡತೆ, ನಿಷ್ಕ್ರಿಯತೆಗಳನ್ನೂ ಪ್ರೋತ್ಸಾಹಿಸುತ್ತಾ ವೈವಿಧ್ಯಗಳನ್ನು ನಾಶ ಮಾಡುತ್ತಿದೆ.

"ತನು ಒಂದು ದ್ವೀಪ, ಮನ ಒಂದು ದ್ವೀಪ, ಆಪ್ಯಾಯನ ಒಂದು ದ್ವೀಪ, ವಚನ ಒಂದು ದ್ವೀಪ" ಎಂದು ಬೇರೊಂದು ಸಂದರ್ಭದಲ್ಲಿ ಅಲ್ಲಮ ಹೇಳಿದ್ದು (೫೯೪) ಇಂದು ಮತ್ತೊಂದು ಅರ್ಥದಲ್ಲಿ ನಿಜ ಆಗುತ್ತಿದೆ. ಹಲವು ದ್ವೀಪಗಳಾಗಿರುವ ವ್ಯಕ್ತಿತ್ವ, ಹಲವು ದ್ವೀಪಗಳಾಗಿರುವ ಸಮಾಜ ಬೇರೊಂದು ಪ್ರಳಯಕ್ಕೆ ಕಾದಿದೆ. "ಹಿಂದೆ ಎಷ್ಟು ಪ್ರಳಯವಾಯಿತೆಂದರಿಯೆ, ಮುಂದೆ ಎಷ್ಟು ಪ್ರಳಯವಾಯಿತೆಂದರಿಯೆ, ತನ್ನ ಸ್ಥಿತಿಯ ತಾನರಿತಡೆ ಅದೇ ಪ್ರಳಯವಲ್ಲಾ" (೭೦೪) ಎಂಬ ಅಲ್ಲಮನ ಮಾತು ಸಿಡಿಲಿನ ಹಾಗಿದೆ. ಸಮಾಜದ ವ್ಯವಸ್ಥೆಯಲ್ಲಿ ಆಗಬೇಕೆಂದು ನಾವು ಬಯಸುವ ಪ್ರಳಯ ಮೊದಲು ನಮ್ಮ ಒಳಗೆ ಆಗಬೇಕು. ವ್ಯಕ್ತಿಯಾಗಿ ತನ್ನ ಸ್ಥಿತಿಯನ್ನು ಅರಿಯಬೇಕೆನ್ನುವ ಅಲ್ಲಮನ ನಿಲುವು ಇಂದಿನ ಪರಿಸ್ಥಿತಿಯಲ್ಲಿ ರಾಜಕೀಯದ ನಿಲುವೇ ಆಗುತ್ತದೆ.

ಬಸವ ಒಂದು ಬಗೆಯ ಲಯಕರ್ತ. ತನ್ನ ಕಾಲದ ಹಳೆಯ ಸಮಾಜವನ್ನು ಲಯಗೊಳಿಸಿ ಹೊಸ ವ್ಯವಸ್ಥೆಯನ್ನು ಕಟ್ಟ ಬಯಸಿದವನು. ಅವನ ಅವಲಂಬನೆಗಳು ಇಂದು ಅಪ್ರಸ್ತುತ ಆಗಬಹುದು. ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ, ಇತ್ಯಾದಿ ಕುರುಹುಗಳು ವಿಶಾಲ ಲೋಕವ್ಯಾಪಾರದಲ್ಲಿ ಮಹತ್ವದವೆನಿಸಲಾರವು. ಆದರೆ ಕುರುಹುಗಳನ್ನೇ ಒಲ್ಲದ ಅಲ್ಲಮನಿಗಿಂತ ಹೊಸ ಕುರುಹುಗಳನ್ನು ಸೃಷ್ಟಿಸಿಕೊಂಡು ವ್ಯಕ್ತಿಯ ಇರುವಿಕೆಗೆ ಸಮಾಜದ ಅವಲಂಬನೆಯನ್ನೂ, ಸಮಾಜದ ಸೃಷ್ಟಿಗೆ ವ್ಯಕ್ತಿತ್ವದ ಅವಲಂಬನೆಯನ್ನು ಒದಗಿಸಿಕೊಟ್ಟ ಬಸವನ ಪರಿ ಇಂದೂ ಮುಖ್ಯವೇ. ಬಸವನ ಒಂದು ವಚನದಲ್ಲಿ ವಾಹನ ಎಂಬ ಮಾತು ಮತ್ತೆ ಮತ್ತೆ ಬರುತ್ತದೆ (ವಚನ ೪). ಬಸವ ಒಂದು ವಾಹನ. ತನ್ನೊಡನೆ ಬಂದವರನ್ನು ಗಮ್ಯಕ್ಕೆ ತಲುಪಿಸುವವನು. ತನ್ನ ಎಲ್ಲ ಜನ್ಮಗಳಲ್ಲೂ ತಾನು ವಾಹನವಾಗಿದ್ದೆ ಎಂದು ಹೇಳಿಕೊಳ್ಳುತ್ತಾನೆ. ಅಲ್ಲಮ ಈ ವಾಹನದ ಇಂಧನ. ಅಲ್ಲಮ ಸಿದ್ಧಾಂತ, ಬಸವ ಪ್ರಯೋಗ, ಹನ್ನೆರಡನೆಯ ಶತಮಾನದ ಸಿದ್ಧಾಂತ ಮತ್ತು ಪ್ರಯೋಗ ಮುಖಗಳನ್ನು ನಮ್ಮ ಅರಿವಿನ ಭಾಗವಾಗಿಸಿಕೊಳ್ಳುವುದರಿಂದ, ಭಿನ್ನ ದ್ವೀಪಗಳಲ್ಲಿ ಪ್ರಳಯ ಸಂಭವಿಸಿ ಹೊಸ ವ್ಯವಸ್ಥೆ ರೂಪುಗೊಳ್ಳಲು ಸಹಾಯ ದೊರೆತೀತು.

ಇಂದಿನ ಹೆಜ್ಜೆ, ೧೯೯೭

ಬಸವ ಮತ್ತು ಕಬೀರ

●

ಡಾ. ಟಿ.ಜಿ. ಪ್ರಭಾಶಂಕರ್ ಪ್ರೇಮಿ

ಬಸವಣ್ಣ ೧೨ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಉದಯಿಸಿದರೆ ಕಬೀರದಾಸ ೧೫ನೇ ಶತಮಾನದಲ್ಲಿ ಕಾಶಿಯಲ್ಲಿ ಉದಯಿಸಿದ. ಇವರ ನಡುವೆ ೩ ಶತಮಾನಗಳ ಅಂತರವಿದ್ದರೂ ಇವರ ನಂಬಿಕೆ–ವಿಶ್ವಾಸಗಳಲ್ಲಿ, ಆಚಾರ–ವಿಚಾರಗಳಲ್ಲಿ ವಿಶೇಷವಾದ ಸಾಮ್ಯವನ್ನು ಕಾಣಬಹುದು. ಈ ಸಾಮ್ಯಗಳ ಬಗ್ಗೆ ವಿಚಾರ ಮಾಡುವುದೇ ಈ ಪ್ರಬಂಧದ ಉದ್ದೇಶವಾಗಿದೆ.

ಬಸವಣ್ಣ ಶೈವಬ್ರಾಹ್ಮಣ ಕುಲದಲ್ಲಿ ಬಾಗೇವಾಡಿ ಗ್ರಾಮದಲ್ಲಿ ಮಾದರಸ ಮೊದಲಾಂಬಿಕೆಯರ ಮುದ್ದು ಮಗನಾಗಿ ಕ್ರಿ.ಶ. ೧೧೩೧ರಲ್ಲಿ ಜನಿಸಿದ. ಬಾಲ್ಯದಿಂದಲೇ ತನ್ನ ಸುತ್ತಮುತ್ತಲ ಆಗುಹೋಗುಗಳನ್ನು ಗಮನಿಸುತ್ತಾ ಸ್ನೇಹಪರವಾಗಿ ಬೆಳೆದು, ತನ್ನ ಇತರರಿಗಿಲ್ಲದ, ಸ್ವಂತ ತನ್ನ ಅಕ್ಕನಿಗಿಲ್ಲದ ಉಪನಯನ ಸಂಸ್ಕಾರವನ್ನು ವಿರೋಧಿಸಿ ಜನಿವಾರವನ್ನು ಕರ್ಮಲತೆಯೆಂದು ಕಿತ್ತೊಗೆದು, ಮನೆ ತೊರೆದು ಕೂಡಲಸಂಗಮಕ್ಕೆ ಬಂದು ಅಲ್ಲಿ ಶಾಸ್ತ್ರಾಧ್ಯಯನ ನಡೆಸಿದ.

ಅತ್ತ ಕಬೀರದಾಸ ಕಾಶಿಯಲ್ಲಿ ವಿಧವಾ ಬ್ರಾಹ್ಮಣಿಗೆ ಹುಟ್ಟಿದನೆಂದು ಪ್ರತೀತಿ. ಲೋಕಾಪವಾದಕ್ಕೆ ಅಂಜಿ ವಿಧವಾ ತಾಯಿ ಮಗುವನ್ನು ಲಹರ ತಾರಾ ಕೆರೆಯ ದಂಡೆಯ ಮೇಲೆ ಬಿಟ್ಟು ಹೋದಳಂತೆ. ಆ ಮಗುವನ್ನು ಮಕ್ಕಳಿಗಾಗಿ ಹಂಬಲಿಸುತ್ತಿದ್ದ ನೀರು–ನೀಮಾದಂಪತಿಗಳು ಸಾಕಿಕೊಂಡರಂತೆ. ಹೀಗೆ ಅನಾಥ ಬಾಲಕ ಕಬೀರ ಮುಸಲ್ಮಾನ ನೇಕಾರರ ಮನೆಯಲ್ಲಿ ಬೆಳೆದ. ಆದರೆ ಬಸವಣ್ಣನಂತೆ ಆತನಿಗೆ ಗುರು ಸಿಗಲಿಲ್ಲ. ಭಾರತದ ವಿದ್ಯೆಯ ಕೇಂದ್ರವಾದ, ಜ್ಞಾನಾರ್ಜನೆಗೆ ಹೆಸರಾದಂತಹ ಕಾಶಿಯಲ್ಲಿ ಗುರುವನ್ನು ಅರಸುತ್ತ ಇದ್ದ ಕಬೀರ ತನ್ನನ್ನು 'ನಿಗುರಾ' (ಗುರುವಿಲ್ಲದವ) ಎಂದು ಕರೆದುಕೊಂಡಿದ್ದಾನೆ.

ಜಾತವೇದಮುನಿಗಳಲ್ಲಿ ಜ್ಞಾನಾರ್ಜನೆಯನ್ನು ಪೂರೈಸಿಕೊಂಡು, ಕೂಡಲ ಸಂಗಮದಿಂದ ಬಸವಣ್ಣ ಮಂಗಳವೇಡೆಗೆ ಬಂದ. ಅಲ್ಲಿ ಅವನ ಸೋದರಮಾವ ಬಲದೇವ ಬಿಜ್ಜಳನ ಮಂತ್ರಿಯಾಗಿದ್ದ. ಅಲ್ಲಿಯೇ ಬಸವಣ್ಣ ಕರಣಿಕ ವೃತ್ತಿ ಆರಭಿಸಿದ. ಕ್ರಮೇಣ ತನ್ನ ಬುದ್ಧಿ ಸಾಮರ್ಥ್ಯಗಳಿಂದ ರಾಜನ ಮೆಚ್ಚುಗೆ ಪಡೆದು ಕಲ್ಯಾಣದಲ್ಲಿ ಪ್ರಧಾನಮಂತ್ರಿ ಪದವಿಯವರೆಗೂ ಮೇಲೇರಿದ. ಬಸವಣ್ಣ ತನ್ನ ಸೋದರಮಾವ ಬಲದೇವನ ಮಗಳು

ಗಂಗಾಂಬಿಕೆಯನ್ನು ನಂತರ ರಾಜ ಬಿಜ್ಜಳನ ಸಾಕುತಂಗಿ ನೀಲಾಂಬಿಕೆಯನ್ನು ವರಿಸಿ ಸುಖದಾಂಪತ್ಯ ನಡೆಸುತ್ತ ಇವುಗಳ ನಡುವೆಯೇ ಇಷ್ಟಲಿಂಗ ಏಕದೇವೋಪಾಸನೆ ಮಾಡುತ್ತಾ ಎಲ್ಲರ ಏಳಿಗೆಗಾಗಿ, ಸರ್ವ ಸಮತೆಗಾಗಿ, ಸುಧಾರಣಾ ಕಾರ್ಯಗಳನ್ನು ಮಾಡುತ್ತ ಕಲ್ಯಾಣನಗರದಲ್ಲಿ ಪ್ರಸಿದ್ಧನಾದ.

ಕಬೀರ ವ್ಯಕ್ತಿ ಗುರುವನ್ನು ಪಡೆಯದಿದ್ದರೂ ಜ್ಞಾನವನ್ನು ಗುರುವೆಂದು ತಿಳಿದು, ರಾಮಾನಂದರ 'ರಾಮನಾಮ'ವನ್ನೇ ಮಂತ್ರವೆಂದು ಸ್ವೀಕರಿಸಿ ಸತ್ಸಂಗದಿಂದ, ಯೋಗ ಮಾರ್ಗದಿಂದ, ಅಂತರ-ಮಂಥನದಿಂದ ಜ್ಞಾನಸಂಪಾದಿಸಿ, ಸಮಾಜದ ಕೆಟ್ಟ ಪ್ರವೃತ್ತಿಗಳನ್ನು, ಕೆಟ್ಟ ಸಂಸ್ಕಾರಗಳನ್ನು, ಕುರುಡು ನಂಬಿಕೆಗಳನ್ನು ತೊಡೆದುಹಾಕಲು ಜೀವನ ಪರ್ಯಂತ ಶ್ರಮಿಸಿದವನು. ಕಬೀರನು ಗೃಹಸ್ಥಾಶ್ರಮ ಸ್ವೀಕರಿಸಿದ್ದನು. ಅವನಿಗೆ ಲೋಯಿ ಎಂಬ ಹೆಂಡತಿಯೂ ಮತ್ತು ಕಮಾಲ ಮತ್ತು ಕಮಾಲಿ ಎಂಬ ಪುತ್ರ-ಪುತ್ರಿಯರು ಇದ್ದರಂತೆ. ಕಬೀರನು ಒಂದು ಕಡೆ ನನಗೆ ಕಮಾಲನೆಂಬ ಕುಪುತ್ರ ಹುಟ್ಟಿದ್ದಾನೆ. ಅವನು ನಾಳೆಗಾಗಿ ಸಂಗ್ರಹಿಸಿಡುತ್ತಾನೆ ಎಂದು ಹೇಳಿದ್ದಾನೆ. ಬಸವಣ್ಣನಂತೆಯೇ ಕಬೀರ ಅಸಂಗ್ರಹಿ. ಅಂದಿನ ಅನ್ನವನ್ನು ಅಂದೇ ದುಡಿದು ತಿನ್ನಬೇಕು ಎಂಬ ಕಾಯಕ ಮಂತ್ರ ಅವನದು. ಕಬೀರ ತನ್ನ ಸುಧಾರಣಾ ಕಾರ್ಯದಿಂದಾಗಿ ಕಾಶಿಯಲ್ಲಿ ಹಿಂದೂ-ಮುಸ್ಲಿಮರಲ್ಲಿ ಪ್ರಸಿದ್ಧನಾಗಿ ನೇಕಾರ ವೃತ್ತಿ ಮಾಡಿಕೊಂಡಿದ್ದನು.

ಬಸವಣ್ಣ ಕಲ್ಯಾಣವನ್ನು ಕೈಲಾಸವನ್ನಾಗಿ ಮಾಡಿದ. ದೀನದಲಿತರಿಗೆ, ಮಹಿಳೆಯರಿಗೆ ಸಮಾಜದಲ್ಲಿ ಸ್ಥಾನಮಾನ ಕಲ್ಪಿಸಿದ. ಎಲ್ಲರೂ ಕಾಯಕ ಮಾಡಲೇಬೇಕೆಂದು 'ಗುರುವಾದರೂ ಕಾರ್ಯದಿಂದಲೇ ಮುಕ್ತಿ' ಎಂಬ ಸಿದ್ಧಾಂತದಿಂದಾಗಿ ಬೇಡುವ ಪದ್ಧತಿಗೆ ಕಡಿವಾಣ ಹಾಕಿದ. ತನ್ನ ಮನೆ-ಮಹಾಮನೆಯನ್ನು 'ಅನುಭವ ಮಂಟಪ'ವನ್ನಾಗಿ ಮಾಡಿದ. ಅಲ್ಲಿ ಜಾತಿ, ಧರ್ಮ, ಲಿಂಗಭೇದವಿಲ್ಲದೆ ಎಲ್ಲರೂ ಸೇರಿ ಶಿವಾನುಭವಗೋಷ್ಠಿ ನಡೆಸುತ್ತಿದ್ದರು. ಇದರ ಫಲವಾಗಿ ಸುಮಾರು ೩೦೦ ಜನ ಶರಣರು ಮತ್ತು ೩೩ಕ್ಕೂ ಮಿಗಿಲಾಗಿ ಶರಣೆಯರು ವಚನ ರಚಿಸಿದುದ್ದನ್ನು ಕಾಣುತ್ತೇವೆ. ಹೀಗೆ ಅಲ್ಲಮಪ್ರಭುಗಳ ಅಧ್ಯಕ್ಷತೆಯಲ್ಲಿ ಸಿದ್ಧರಾಮ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಮೋಳಿಗೆ ಮಾರಯ್ಯ, ಮಡಿವಾಳ ಮಾಚಿದೇವ ಮೊದಲಾದ ಶರಣರ ಸಂಗದಲ್ಲಿ ಬಸವಣ್ಣ ಭಕ್ತಿಭಂಡಾರಿ ಎನಿಸಿರಲು ಒಂದು ವಿಶೇಷ ಘಟನೆ ಕಲ್ಯಾಣ ಕ್ರಾಂತಿಗೆ ನಾಂದಿಯಾಯಿತು. ಮೊದಲೇ ಬಸವಣ್ಣನ ಸುಧಾರಣಾಕಾರ್ಯಗಳಿಂದಾಗಿ ಅಸಮಾಧಾನದಿಂದಿದ್ದ ಸಂಪ್ರದಾಯಸ್ಥರು, ಅವನಲ್ಲಿ ದೋಷ ಕಂಡು ಹಿಡಿಯುವುದರಲ್ಲೇ ನಿರತರಾಗಿದ್ದರು. ಶರಣರಾಗಿದ್ದ ಅಸ್ಪೃಶ್ಯ ಹರಳಯ್ಯನ ಮಗ ಶೀಲವಂತ ಮತ್ತು ಶರಣರಾಗಿದ್ದ ಬ್ರಾಹ್ಮಣ ಮಧುವರಸನ ಮಗಳು ಲಾವಣ್ಯವತಿಯರ ವಿವಾಹ ಬಸವಣ್ಣನ ನೇತೃತ್ವದಲ್ಲಿ ನಡೆಯಿತು. ಇದರಿಂದಾಗಿ ಸನಾತನಿಗಳು ಇದು ಧರ್ಮಬಾಹಿರ ಎಂದು ರಾಜನಲ್ಲಿ ದೂರಿದರು ಮತ್ತು ಶಿಕ್ಷೆ ವಿಧಿಸುವಂತೆ ಬಲವಂತಪಡಿಸಿದರು. ರಾಜಾಜ್ಞೆಯಂತೆ ಹರಳಯ್ಯ-ಮಧುವರಸರಿಗೆ ಎಳೆಹೂಟೆ ಶಿಕ್ಷೆಯಾಯಿತು. ಇದರಿಂದ ಕಲ್ಯಾಣದಲ್ಲಿ ಕ್ಷೋಭೆಯುಂಟಾಗಿ, ಸಮಯ ಸಾಧಿಸಿ ರಾಜಕೀಯ ವೈರಿಗಳು ರಾಜ ಬಿಜ್ಜಳನ ವಧೆಗೈದರು. ಇದರ ಕಳಂಕ ಶರಣರಿಗೆ ತಗುಲಿತು. ಕಲ್ಯಾಣ ಕ್ರಾಂತಿಯಲ್ಲಿ ಶರಣರು ಚದುರಿಹೋದರು. ಬಸವಣ್ಣ ಕೂಡಲ

ಸಂಗಮದಲ್ಲಿ ಐಕ್ಯರಾದರು ೧೧೬೭ರಲ್ಲಿ). ಅಕ್ಕನಾಗಮ್ಮ, ಚೆನ್ನಬಸವಣ್ಣ ಮೊದಲಾದವರು ಉಳಿವಿಯಲ್ಲಿ ಕಾಡಿನ ಆಶ್ರಯ ಪಡೆದರು.

ಕಬೀರದಾಸ ಕ್ರಾಂತಿಕಾರಿ ಧೋರಣೆ ಮತ್ತು ಸಮಾಜ ಸುಧಾರಣಾಕಾರ್ಯದಿಂದಾಗಿ ಜನಸಾಮಾನ್ಯರಲ್ಲಿ ಪ್ರಸಿದ್ಧನಾಗಿದ್ದರೂ, ಹಿಂದೂ ಮತ್ತು ಮುಸಲ್ಮಾನ ಧಾರ್ಮಿಕ ಮುಖಂಡರಿಗೆ ಇವನ ವಿದ್ರೋಹಿ ಪ್ರವೃತ್ತಿ ಹಿಡಿಸುತ್ತಿರಲಿಲ್ಲ. ಅವರ ದೃಷ್ಟಿಯಲ್ಲಿ ಕಬೀರ ಧರ್ಮವಿರೋಧಿ. ಎರಡೂ ಧರ್ಮದ ಮುಖಂಡರು ದಿಲ್ಲಿ ಸುಲ್ತಾನನಿಗೆ ದೂರು ಸಲ್ಲಿಸಿದರು. ಸುಲ್ತಾನನ ಆಜ್ಞೆಯಂತೆ ಕಬೀರನನ್ನು ಕಾಶಿಯಿಂದ ಗಡೀಪಾರು ಮಾಡಿ ಮಗಹರ ಎಂಬ ಹಳ್ಳಿಗೆ ಕಳುಹಿಸಿದರು. ಮಗಹರನಲ್ಲಿ ಸಾಯುವವರು ನರಕಕ್ಕೆ ಹೋಗುವರು ಎಂಬ ಪ್ರತೀತಿಯಿದೆ. ಕಬೀರ 'ನಾನು ಮಗಹರದಲ್ಲೆ ಸಾಯುವೆ' ಎಂದಿದ್ದ. ಕಬೀರ ದೀರ್ಘಾಯುಷಿ. ಆತ ತನ್ನ ೧೨೦ನೇ ವಯಸ್ಸಿನಲ್ಲಿ ಮಗಹರನಲ್ಲಿ (೧೫೧೮ರಲ್ಲಿ) ದೇಹತ್ಯಾಗ ಮಾಡಿದ. ಆಗ ಹಿಂದು ಮತ್ತು ಮುಸಲ್ಮಾನರು ಅಂತಿಮ ಸಂಸ್ಕಾರ ಮಾಡಲು ಮುಂದೆ ಬಂದರಂತೆ.

ಅಕ್ಷರಾಭ್ಯಾಸ ಮಾಡಿದ ಕಬೀರ ಮತ್ತ ಸಕಲ ವಿದ್ಯಾಪಾರಂಗತ ಬಸವಣ್ಣ ಇಬ್ಬರು ಪುಸ್ತಕದ ಜ್ಞಾನವನ್ನು ತಿರಸ್ಕರಸಿದರು. ಅವರು ಅನುಭವಗಮ್ಯವಾದ ಆತ್ಮಜ್ಞಾನವನ್ನು ಪುರಸ್ಕರಿಸಿದರು. ಅವರು ಮಾನವತಾವಾದಿಗಳು, ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವುದೇ ಅವರ ಬದುಕಿಗೆ ಧ್ಯೇಯವಾಗಿತ್ತು. ಅವರ ನಡೆ-ನುಡಿ, ಚಿಂತನೆ, ಅನುಭವ, ಅನುಭಾವ ಎಲ್ಲದರಲ್ಲೂ ಸಮಾನತೆ ಎದ್ದು ಕಾಣುತ್ತದೆ.

ಇಬ್ಬರೂ 'ದೇವನೊಬ್ಬನೇ ನಾಮ ಹಲವು', 'ಸಾಹಬ ಮೇರಾ ಏಕ ಹೈ' ಎಂದು ಸಾರಿದರು. ಆ ದೇವರನ್ನು ಬಸವಣ್ಣ 'ಇಷ್ಟಲಿಂಗ'ದ ಸಂಕೇತದಲ್ಲಿ ಕಂಡರೆ, ಕಬೀರ 'ರಾಮ' ನಾಮದಲ್ಲಿ ಅವನನ್ನು ಸಾಕ್ಷಾತ್ಕರಿಸಿಕೊಂಡ. ಬಹುದೇವೋಪಾಸಕರನ್ನು ಬಸವಣ್ಣನಂತೆಯೇ ಕಬೀರ ಕಠೋರ ಶಬ್ದಗಳಲ್ಲಿ ಮೂದಲಿಸುತ್ತಾನೆ.

ರಾಮ ಪಿಯಾರೇ ಛಾಡಿಕೆ ಕರೇ ಆನ್‌ಕಾ ಜಾಪ್ ।
ವೇಶ್ಯಾ ಕೇರಾಪೂತ ಜ್ಯೂ ಕಹೇ ಕೌನ್ ಸು ಬಾಪ್ ॥

(ಎಲ್ಲರಿಗೂ ಪ್ರಿಯನಾದ 'ರಾಮ'ನನ್ನು ಬಿಟ್ಟು ಅನ್ಯದೇವರ ಜಪಿಸುವುದು ವೇಶ್ಯೆಯ ಪುತ್ರನಂತೆ. ಅವ ಯಾರನ್ನು ತಂದೆಯೆನ್ನುವ!)

ಇಬ್ಬರೂ ದೇವರ ನಿರ್ಗುಣ ಸ್ವರೂಪವನ್ನು ಬಣ್ಣಿಸಿದ್ದಾರೆ. ಬಸವೇಶ್ವರರ ದೇವರ ವಿರಾಟ್ ಸ್ವರೂಪವನ್ನು ಅಗಮ್ಯ, ಅಗೋಚರ ಅಪ್ರತಿಮಲಿಂಗವು ಕರಸ್ಥಳದಲ್ಲಿ ಚುಳುಕಾಗುವುದನ್ನು ಬಣ್ಣಿಸಿದ್ದಾನೆ.

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ
ಅಗಮ್ಯ, ಅಗೋಚರ ಅಪ್ರತಿಮಲಿಂಗವೇ
ಕೂಡಲಸಂಗಮದೇವ
ಬಂದೆನ್ನ ಕರಸ್ಥಳದೊಳಗೆ ಚುಳುಕಾದಿರಯ್ಯ

ಕಬೀರದಾಸ ನಿರ್ಗುಣ ಸ್ವರೂಪವನ್ನು ಹೀಗೆ ಬಣ್ಣಿಸುತ್ತಾನೆ:

ಜಾಕೆ ಮುಹ್ ಮಾಥಾ ನಹೀಂ, ನಹೀಂ ರೂಪ ಅರೂಪ ।
ಪುಹುಪ ಬಾಸತೆ ಪಾತರಾ ಐಸಾತತ್ವ ಅನೂಪ ॥

(ಬಾಯಿಲ್ಲ, ನೊಸಲಿಲ್ಲ, ರೂಪ ಅರೂಪನಲ್ಲ, ನೆನೆಯೊಳಗಣ ಪರಿಮಳದಂತೆ ಸೂಕ್ಷ್ಮ ಈ ಅನುಪಮ 'ನಲ್ಲ')

ದೇವರ ಸೌಂದರ್ಯ ನೋಡ ಹೋಗಿ ಆ ಸೌಂದರ್ಯದ ಭಾಗ ತಾನೇ ಆದುದನ್ನು ಹೀಗೆ ಬಣ್ಣಿಸುತ್ತಾನೆ:

ಲಾಲೀಮೇರೇ ಲಾಲ್ ಕೀ ಜಿತ ದೇಖೋ ತಿತ ಲಾಲ್ ।
ಲಾಲೀ ದೇಖನ್ ಮೈಗಯೀ ಮೈ ಭೀ ಹೋಗಯಿ ಲಾಲ್ ॥

(ನನ್ನ ನಲ್ಲನ ಸೊಬಗು, ಎತ್ತೆತ್ತ ನೋಡಿದಡತ್ತತ್ತ ಬೆಳಗು, ನಾ ಹೋದೆ ನೋಡಲು ನಲ್ಲನ ಸೊಬಗ, ನಾನೂ ಆ ಸೊಬಗಾಗಿ ಹೋದೆ)

ಬಸವೇಶ್ವರ ಶಕ್ತಿವಿಶಿಷ್ಟಾದ್ವೈತ ಪ್ರತಿಪಾದಿಸಿದರೆ ಕಬೀರದಾಸ ಅದ್ವೈತವನ್ನು ಒಪ್ಪಿದವನು. ಆದರೆ ಇಬ್ಬರದೂ ಮಾಧುರ್ಯ ಭಕ್ತಿ. ಬಸವಣ್ಣ 'ಲಿಂಗಪತಿ–ಶರಣಸತಿ' ಭಾವ ವ್ಯಕ್ತಪಡಿಸಿದಂತೆ ಕಬೀರದಾಸನೂ ಅದೇ ಭಾವವನ್ನು ಅಭಿವ್ಯಕ್ತಿಸಿದ್ದಾನೆ.

ಬಸವಣ್ಣ 'ನಾನು ಮುತ್ತೈದೆ. ಕೂಸಲ ಸಂಗಮದೇವನೆಂಬ ಗಂಡ ನನ್ನವ' ಎಂದರೆ, ಕಬೀರದಾಸ

'ರಾಮ ಮೇರಾ ಪೀವಾ, ಮೈ ರಾಮ್‌ಕೀ ಬಹುರಿಯಾ'
(ರಾಮಾ ನನ್ನ ಪ್ರಿಯತಮ, ನಾನು ರಾಮನ ಪ್ರಿಯೆ)
ಕಬೀರದಾಸ ಆ 'ಪ್ರಿಯತಮ'ನನ್ನು ಒಲಿಸಿಕೊಳ್ಳುವ ಪರಿಯನ್ನು ನೋಡಿ:
ನೈನನ್ ಕೀ ಕರಿ ಕೋಠರಿ, ಪುತರೀ ಪಲಂಗ ಭಿಛಾಯ್ ।
ಪಲಕನ್ ಕೀ ಚಿಕ್ ಟಾರಿಕೆ, ಪಿಯ ಕೋ ಲೇಯಿ ರಿಝಾಯ್
(ಕಣ್ಣ ಕೋಣೆಯೊಳು, ಪಾಪೆಯ ಸೆಜ್ಜೆಯ ಮಾಡಿ ರೆಪ್ಪೆಯ ತೆರೆ ಹಾಕಿ, ಪ್ರಿಯನೊಡನಾನಂದಿಸುವೆ)

ಬಸವೇಶ್ವರ ಆ 'ಕೂಟ'ವನ್ನು ಬೆಳಗು ಬೆಳಗ ಕೂಡಿದ ಪರಿಯನ್ನು ವರ್ಣಿಸುವ ಬಗೆ ನೋಡಿ:

ಬೆಳಗಿಂಗೆ ಬೆಳಗು ಸಿಂಹಾಸನವಾಗಿ ಬೆಳಗು ಬೆಳಗ
ಕೂಡಿದ ಕೂಟವ ಸಂಗಯ್ಯ ತಾನೇ ಬಲ್ಲ

ಬಸವೇಶ್ವರ ಮತ್ತು ಕಬೀರದಾಸರಿಬ್ಬರೂ 'ಗುರು'ವಿಗೆ ಅತ್ಯುನ್ನತ ಸ್ಥಾನವನ್ನು ಕೊಟ್ಟಿದ್ದಾರೆ. **'ಅರಿವೇ ಗುರು'** ಎಂದಿದ್ದಾರೆ.

ಕಬೀರನಿಗೆ ಗುರು–ಗೋವಿಂದರಲ್ಲಿ ಭೇದವೇ ಇಲ್ಲ. ಗುರು ಗೋವಿಂದನ ದರ್ಶನ ಮಾಡಿಸುವವ–

ಗುರು ಗೋವಿಂದ ದೋವೂ ಖಡೆ ಕಾಕೆ ಲಾಗೌಪಾಯ್ ।
ಬಲಿಹಾರಿ ಗುರು ಆಪನೆ ಗೋವಿಂದ ದಿಯೊ ಬತಾಯ್ ॥

(ಗುರು ಗೋವಿಂದರಿಬ್ಬರೂ ಎದುರು! ಯಾರ ಚರಣಕೆ ಎರಗಲಿ? ಗೋವಿಂದನ ಕುರುಹ ತಿಳುಹಿದ ಗುರುವಿನ ಚರಣಕೆ ಎರಗುವೆ)

ಬಸವಣ್ಣ 'ಮಾಯೆ'ಯನ್ನು ಸ್ತ್ರೀರೂಪದಲ್ಲಿ ಕಾಣುವುದಾಗಲಿ, ನಿಂದಿಸುವುದಾಗಲಿ ಮಾಡಿಲ್ಲ. ಹೆಣ್ಣು, ಹೊನ್ನು, ಮಣ್ಣುಗಳನ್ನು ಮಾಯೆ ಎಂಬುದನ್ನು ಒಪ್ಪದೆ ಮನದ ಮುಂದಣ ಆಸೆಯೇ ಮಾಯೆ ಎನ್ನುತ್ತಾನೆ. ಆದರೆ ಕಬೀರ;

ನಾರಿ ನಸಾವೈ ನೀತಿಸುಖ, ಜೊ ನರ ಪಾಸೈ ಹೋಯ್
(ಹೆಣ್ಣಿಂದ ಎಲ್ಲ ಸುಖಗಳು ನಾಶವಾಗುವುವು)

ಎಂದಿದ್ದಾನೆ. ಬಸವಣ್ಣ ಹೆಣ್ಣನ್ನು ಪರವಧುವ 'ಮಹದೇವಿ' ಎಂದು ಅತ್ಯುನ್ನತ ಸ್ಥಾನದಲ್ಲಿಟ್ಟಿದ್ದಾನೆ. ಸ್ತ್ರೀಯರ ಏಳಿಗೆಗಾಗಿ ಬಸವಣ್ಣ ಕೈಕೊಂಡ ಕಾರ್ಯಗಳು ಬೆರಗುಗೊಳಿಸುವಂಥವು. ಅನುಭವ ಮಂಟಪದಲ್ಲಿ ಕೆಳಸ್ತರದಿಂದ ಬಂದ ಶರಣೆಯರಿದ್ದರು. ಅವರೆಲ್ಲ ವಚನಕಾರ್ತಿಯರಾದರು. ಬಸವಣ್ಣನಾದಿಯಾಗಿ ಶರಣರೆಲ್ಲರೂ ತಮ್ಮ ಪತ್ನಿಯರೊಡಗೂಡಿ ಚಿಂತನೆ ನಡೆಸುತ್ತಿದ್ದರೆಂದರೆ ಸೋಜಿಗವೇ ಸರಿ. ಇಂತಹ ಉದಾಹರಣೆ ಕಬೀರನ ಸಂದರ್ಭದಲ್ಲಿ ಸಿಗುವುದಿಲ್ಲ. ಕಬೀರನ ಹೆಂಡತಿ ಕಬೀರನೊಡನೆ ಅವನ ಸಾಧನೆಯಲ್ಲಿ ಎಷ್ಟು ನೆರವಾದಳೆಂಬುದಕ್ಕೆ ಮಾಹಿತಿಯಿಲ್ಲ.

ಬಸವಣ್ಣ ಮತ್ತು ಕಬೀರದಾಸರಿಬ್ಬರೂ ಬಹುದೇವೋಪಾಸನೆ, ಮೂರ್ತಿಪೂಜೆ ಮತ್ತು ತೀರ್ಥಾಟನೆ, ಶಿರ ಮುಂಡನೆ ಮೊದಲಾದ ಕುರುಡು ವಿಶ್ವಾಸಗಳನ್ನು ಖಂಡಿಸಿದ್ದಾರೆ.

ಬಸವಣ್ಣ ದೇಹವೇ ದೇವಾಲಯವೆಂದ;

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡಲಿ ಬಡವನಯ್ಯ
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರ ಹೊನ್ನ ಕಳಸವಯ್ಯ
ಕೂಡಲಸಂಗಮದೇವ ಕೇಳಯ್ಯ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ!

ಕಬೀರದಾಸನೆನ್ನುವ–

ಪಾಥರ ಪೂಜೆ ಹರಿ ಮಿಲೈ ತೊ ಮೈ ಪೂಜೂ ಪಹಾರ್ ।
ತಾತೆ ಯೇ ಚಾಕೀ ಭಲೀ ಪೀಸ್ ಖಾಯ್ ಸಂಸಾರ್ ॥

(ಕಲ್ಲ ಪೂಜಿಸಿದಡೆ ಹರಿ ಕಾಂಬನಾದರೆ, ನಾ ಬೆಟ್ಟವನೆ ಪೂಜೆ ಮಾಡೇನು । ಅದಕ್ಕಿಂತ ಬೀಸಿ ತಿನ್ನಲುಪಯೋಗಿ ಈ ಬೀಸುಕಲ್ಲ ಪೂಜೆ ಮಾಡಿರೊ!)

ಕಾಂಕಡ ಪಾಥರ್ ಜೋಡ್ ಕೆ ಮಸಜಿದ್ ಲಯಿ ಚುನಾಯ್ ।
ತಾ ಪರ ಮುಲ್ಲಾ ಬಾಂಗ್‌ದೇ ಬಹರಾ ಹುವಾ ಖುದಾಯ್ ॥

(ಕಟ್ಟಿ ಮಣ್ಣಲಿ ಮಸೀದಿಯನು ಮೇಲೇರಿ ಕೂಗುವನು ಮುಲ್ಲಾ ಕಿವುಡನಾದನೇನು ಅಲ್ಲಾ!)

ಜಾತಿಭೇದವ ಖಂಡಿಸುತ್ತಾ ಬಸವಣ್ಣ ;
ಕೊಲುವವನೇ ಮಾದಿಗ ಹೊಲಸು ತಿಂಬುವನೇ ಹೊಲೆಯ
ಕುಲವೇನು ಆವಂದಿರ ಕುಲವೇನು?
ಸಕಲ ಜೀವಾತ್ಮಾರ ಲೇಸನೇ ಬಯಸುವ
ನನ್ನ ಕೂಡಲಸಂಗನ ಶರಣರೇ ಕುಲಜರು.
ಎಂದರೆ ಕಬೀರ 'ಸಾಧುಗಳಲ್ಲಿ ಜಾತಿಯನರಸದಿರಿ' ಎನ್ನುವ
ಜಾತಿ ನ ಪೂಛೋ ಸಾಧು ಕೀ ಪೂಛ ಲೀಜಿಯೇ ಜ್ಞಾನ ।
ಮೋಲ್‌ಕರೊ ತಲವಾರ ಕಾ ಪಡೆ ರಹನೆದೋ ಮ್ಯಾನ್ ॥

(ಜಾತಿಯನರಸುವರೇ ಸಾಧುಗಳಲಿ, ಅರಸಬೇಕಲ್ಲದೆ ಅವರಲ್ಲಿ ಜ್ಞಾನ! ಕತ್ತಿಗೆ ಬೆಲೆಯ ಕಟ್ಟದೆ, ಕಟ್ಟುವರೆ ಒರೆಗೆ ಬೆಲೆಯಾ!)

ಬಸವಣ್ಣನ 'ಕಾಯಕತತ್ವ' ಇಂದಿಗೂ ಪ್ರಸ್ತುತ. ಶರಣರೆಲ್ಲರನ್ನು ಕಾಯಕಜೀವಿಗಳಾಗಿ ಮಾಡಿದ. ಬೇಡುವವರಿಲ್ಲದಂತೆ ಮಾಡಿದ ಕಲ್ಯಾಣವನ್ನು 'ಗುರುವಾದರೂ ಕಾಯಕದಿಂದಲೇ ಮುಕ್ತಿ' ಎಂಬುದು ಅವನ ದಿಟ್ಟ ನಿಲುವು.

ಕಬೀರ ಸ್ವತಃ ನೇಕಾರ ಮತ್ತು ಅವನ ಅನುಯಾಯಿಗಳೆಲ್ಲ ಕಾಯಕಜೀವಿಗಳೇ. ಪ್ರಸಿದ್ಧ ರೈದಾಸ ಮೋಚಿ.

ಬಸವಣ್ಣ–ಕಬೀರರಿಬ್ಬರು ಅಸಂಗ್ರಹಿಗಳು. ಅಂದಂದಿನ ದುಡಿಮೆ ಅಂದಿಗೆ. ನಾಳೆಗೆಂದು ಇಡುವವರಲ್ಲ. 'ಹೊನ್ನಿನೊಳಗೊಂದೊರೆಯ...."

ಕಬೀರ ದೇವರಲ್ಲಿ ಬೇಡುವುದು 'ಇಷ್ಟೆ' ಕೊಡು ಎಂದು;

ಸಾಯಿ ಇತನಾ ದೀಜಿಯ ಜಾಮೆ ಕುಟುಂಬ ಸಮಾಯ್
ಮೈ ಭೀ ಭೂಖಾ ನರಹೂ ಸಾಧು ನ ಭೂಖಾ ಜಾಯ್ ॥
(ಮನೆ ಮಂದಿಯ ಸಾಕುವಷ್ಟು ಕೊಡು ತಂದೆ
ನಾ ತಿಂದು ಸಾಧುವಿಗೂ ನೀಡುವಷ್ಟೆ ಸಾಕೆಂಬೆ)

ಹಾಗೆಯೇ ನಾಳೆಗಾಗಿ ಕೂಡಿಡುವ ಮಗ ಕಮಾಲ್‌ನನ್ನು ಕೆಟ್ಟಮಗ ಹುಟ್ಟಿದನೆಂದು ನಿಂದಿಸುತ್ತಾನೆ.

ಬಸವಣ್ಣ ಶುದ್ಧಕಾಯಕದಿಂದ ಗಳಿಸಿರಿ, ಪಾಪದ ಹಣ ಪ್ರಾಯಶ್ಚಿತ್ತಕ್ಕೆ ಮಾತ್ರ, ಸತ್ಪಾತ್ರನಿಗೆ ಸಲ್ಲದು ಎಂದಿದ್ದಾನೆ.

ಬಸವಣ್ಣ ಮತ್ತು ಕಬೀರದಾಸರದು ನಡೆ–ನುಡಿ ಒಂದಾದ ಭಕ್ತಿ. ನುಡಿದಂತೆ ನಡೆದವರು ಬಸವಣ್ಣ;

'ನುಡಿದಂತೆ ನಡೆಯದಿರ್ದಡೆ ಹಿಡಿದಿಪ್ಪ ಲಿಂಗ
ಘಟಸರ್ಪ'

ಎಂದರೆ, ಕಬೀರದಾಸ ಹೇಳುತ್ತಾನೆ:

'ಕರನೀ ಬಿನ್ ಕಥನೀ ಕಥೈ, ಅಜ್ಞಾನೀ ದಿನ ರಾತ್ ।
ಕೂಕರ ಜ್ಯೋಂ ಭೂಂಕತ ಫಿರೈ, ಸುನೀ ಸುನಾಯಿ ಬಾತ್ ॥

(ಅಜ್ಞಾನಿ ಹಗಲಿರುಳು ಆಚರಣೆ ಮಾಡದೆ ಉಪದೇಶಿಸುತ್ತಾರೆ. ಅವರು ಹೇಳಿದ್ದನ್ನೆ, ಕೇಳಿದ್ದನ್ನೆ ನಾಯಿಯಂತೆ ಬೊಗಳುತ್ತಾರೆ.)

ಆದ್ದರಿಂದ ಕಬೀರ, 'ಈ ಜಗತ್ತಿನಲ್ಲಿ ಉಪದೇಶಿಸುವವರನ್ನು ಕಂಡೆ. ಆದರೆ ಅದನ್ನು ಆಚರಿಸುವವರನ್ನು ಕಾಣಲಿಲ್ಲ' ಎಂದು ಹೇಳುತ್ತಾನೆ.

ಬಸವಣ್ಣ ಮತ್ತು ಕಬೀರದಾಸ 'ದಯೆಯೇ ಧರ್ಮದ ಮೂಲ'ವೆಂದರು. ಬಸವಣ್ಣ 'ದಯವಿಲ್ಲದ ಧರ್ಮವದಾವುದಯ್ಯಾ' ಎಂದು ಪ್ರಶ್ನಿಸಿದರೆ, ಕಬೀರದಾಸ 'ಜಹಾಂ ದಯಾ ಹೈ ವಹಾಂ ಧರ್ಮ ಹೈ' 'ಎಲ್ಲಿ ದಯೆಯಿದೆಯೋ ಅಲ್ಲಿ ಧರ್ಮವಿದೆ' ಎನ್ನುತ್ತಾನೆ.

ಬಸವಣ್ಣ ಮತ್ತು ಕಬೀರದಾಸ ಇಬ್ಬರ ಉದ್ದೇಶವೂ ಶೋಷಣೆರಹಿತ ಸಮಾಜ ನಿರ್ಮಾಣ, ಕಾಯಕ ಶುದ್ಧ, ಸ್ವಾವಲಂಬಿಗಳನ್ನಾಗಿ ಮಾಡುವುದು. ಭಗವಂತನನ್ನು ತನ್ನೊಳಗೆ ಸಾಕ್ಷಾತ್ಕರಿಸಿಕೊಳ್ಳುವುದು. ಬಸವಣ್ಣನದು ಭಕ್ತಿಮಾರ್ಗವಾದರೆ ಕಬೀರನದು ಜ್ಞಾನ ಮೂಲದ ಯೋಗಮಾರ್ಗ.

ಬಸವಣ್ಣ ಮತ್ತು ಕಬೀರದಾಸ ನುಡಿದುದೇ ವಚನಗಳಾದವು, ಕಾವ್ಯಗಳಾದವು. ಅವರ ಆತ್ಮಾನುಭವ, ರಹಸ್ಯಾನುಭೂತಿಗಳೇ ರಚನೆಯ ವಸ್ತುಗಳಾದವು. ಬಸವಾದಿ ಶರಣರು 'ವಚನ'ವೆಂಬ ಗದ್ಯಗೀತಗಳಲ್ಲಿ ಬರೆದರೆ ಕಬೀರದಾಸ ತನ್ನ ಅನುಭೂತಿ, ಉಪದೇಶಗಳನ್ನು 'ದೋಹ' ಮತ್ತು 'ಪದ' ಶೈಲಿಯಲ್ಲಿ ಹೇಳಿದ್ದು ಅವು ಲಿಪಿಬದ್ಧವಾಗಿ ಸಾಖಿ, ಶಬದ ಮತ್ತು ರಮ್ಯೆನಿಗಳಲ್ಲಿ ವಿಂಗಡಿಸಲ್ಪಟ್ಟಿವೆ.

ಬಸವಣ್ಣ ವೀರಶೈವ ಅಥವಾ ಲಿಂಗಾಯುತ ಧರ್ಮವನ್ನೆ ಕಟ್ಟಿ ಶರಣ ಸಮಾಜದ ವಿಕಾಸಕ್ಕೆ ಕಾರಣಾದರೆ ಕಬೀರದಾಸ ಅಂತಹ ಯಾವ ಧರ್ಮ ಅಥವಾ ಸಮಾಜವನ್ನು ಕಟ್ಟಲಿಲ್ಲ. ಆದರೆ ಅವನ ವಿಚಾರಕ್ಕೆ, ತತ್ವಕ್ಕೆ ಬದ್ಧರಾಗಿ ಆತನ ಅನುಯಾಯಿಗಳು 'ಕಬೀರ ಪಂಥ'ವನ್ನು ನಿರ್ಮಿಸಿದರು. ಈಗಲೂ ಉತ್ತರಭಾರತದಲ್ಲಿ ಕಬೀರಪಂಥಿಗಳು ಏಕತಾರ ಹಿಡಿದು ಕಬೀರನ ರಚನೆಗಳನ್ನು ಹಾಡುತ್ತಾ ತಿರುಗುತ್ತಾರೆ. ಮೊಟ್ಟಮೊದಲು ಇಂತಹ ಕಬೀರ ಪಂಥಿಗಳಿಂದ ಹಾಡುಗಳನ್ನು ಕೇಳಿ ಲಿಪಿಬದ್ಧಮಾಡಿಕೊಂಡು ಕವಿವರ ರವೀಂದ್ರನಾಥ ಠಾಗೂರರು ೧೯೧೨ರಲ್ಲಿಯೇ ಇಂಗ್ಲಿಷ್‌ನಲ್ಲಿ '೧೦೦ Poems of Kabir' ಗ್ರಂಥ ರಚಿಸಿ ಲಂಡನ್ನಿನಿಂದ ಪ್ರಕಟಿಸಿದ್ದರು. ಬಸವಣ್ಣನ ವಚನಗಳು ಕೂಡ ಸಂಪಾದಿತವಾಗಿ ಗ್ರಂಥರೂಪ ಕಂಡದ್ದು ಶ್ರೀ ಹಳಕಟ್ಟಿಯಂಥವರ ಶ್ರಮದಿಂದಲೇ.

ನಿಜಕ್ಕೂ ಭಕ್ತಿ ಹುಟ್ಟಿದುದೇ ದೇವರನ್ನು ಜನಸಾಮಾನ್ಯರಿಗೆ ಹತ್ತಿರದಿಂದ ಪರಿಚಯಿಸಲು. ದೇವರು ಎಲ್ಲರ ಒಳಗೂ ಇದ್ದಾನೆ ಎಂಬ ಸತ್ಯವನ್ನು ತಿಳಿಸಲು; ನಡುವಿನವರ ಶೋಷಣೆ ಯನ್ನು ತಪ್ಪಿಸಲು.

ದೇವರು ಎಷ್ಟು ಹತ್ತಿರ ಎಂಬುದಕ್ಕೆ ಬಸವಣ್ಣ ಮತ್ತು ಕಬೀರದಾಸರ ಈ ಸಾಲುಗಳೇ ಸಾಕ್ಷಿ. ಇವು ದೇವರು ಭಕ್ತನೊಡನೆ ನಡೆಸಿದ ಸಂವಾದ–

ಬಸವ ಬಾರೈ
ಮರ್ತ್ಯಲೋಕದೊಳು ನನ್ನ ಭಕ್ತರಿದ್ದಾರೆಯೇ ಹೇಳಯ್ಯಾ
ಮತ್ತಾರು ಭಕ್ತರಿಲ್ಲ, ಮತ್ತಾರು ಭಕ್ತರಿಲ್ಲ
ನಾನೊಬ್ಬನೇ ಭಕ್ತ, ಮಿಕ್ಕವರೆಲ್ಲ
ಜಂಗಮ, ಲಿಂಗ ತಾವೆ ಆದಕಾರಣ
ಕೂಡಲಸಂಗಮದೇವ.

ಕಬೀರನನ್ನು 'ದೇವ' ಪ್ರಶ್ನಿಸುವ–

ಮೋಕೋ ಕಹಾಂ ಡೂಂಢ್ಯೆ ಬಂದೆ, ಮೈ ತೋ ತೇರೆ ಪಾಸ್ ಮೇ।
ನಾ ಮೈ ದೇವಲ್ ನಾ ಮೈ ಮಸಜಿದ್, ನಾ ಕಾಬೆ ಕೈಲಾಸ ಮೇ।
ನಾ ತೋ ಕೌನ್ ಕ್ರಿಯಾ–ಕರ್ಮ ಮೇ, ನಹೀ ಯೋಗ ಬೈರಾಗಿ ಮೇ।
ಖೋಜಿಹೋಯ್ ತೊ ತುರತೈ ಮಿಲಹೌ, ಪಲ–ಭರ್ ಕೀ ತಲಾಸ್ ಮೇ
ಕಹೈಕಬೀರ ಸುನೋ ಭಯಿಸಾಧೊ, ಸಬ ಸ್ವಾಂಸೋಂ ಕೀ ಸ್ವಾಂಸ್ ಮೇ॥

('ಎಲ್ಲಿ ಅರಸುವೆ, ಮರುಳೆ ನನ್ನನು, ನಾನು ನಿನ್ನಯ ಬಳಿಯಿರೆ' ಇಲ್ಲ ನಾ ಮಂದಿರ ಮಸೀದಿಗಳಲಿ, ಇಲ್ಲ ನಾ ಕಾಬಾ ಕೈಲಾಸಗಳಲಿ ಇಲ್ಲ ನಾ ಕ್ರಿಯೆ–ಕರ್ಮಗಳಲಿ, ಇಲ್ಲ ನಾ ಯೋಗ ವೈರಾಗ್ಯಗಳಲಿ ಹುಡುಕಿದರೆ ಪರಿಶುದ್ಧ ಮನದಿ, ಕ್ಷಣಮಾತ್ರದಲಿ ನಾ ಕಾಂಬೆನು! ಕೇಳಿ ಸಂತರೆ ಕಬೀರನುಲಿವ ನಾ ಉಸಿರೊಳುಸಿರಾಗಿರುವೆನು!)

❐

ಬಸವೇಶ್ವರರು ಮತ್ತು ಕಬೀರದಾಸರು

●

ಲೀಲಾ ಗರಡಿ

ಹಿಂದಿನಿಂದ ಇಂದಿನವರೆಗೆ ಹಲವಾರು ಮಹಾವ್ಯಕ್ತಿಗಳು ಈ ಜಗತ್ತನ್ನು ತಮ್ಮ ಆದರ್ಶಜೀವನದ ಪ್ರಕಾಶದಿಂದ ಬೆಳಗಿ ಹೋಗಿದ್ದಾರೆ. ಮಾನವ ಸತತವಾಗಿ ಪ್ರಗತಿಯತ್ತ ಪ್ರವೃತ್ತನಾಗಿರುತ್ತಾನೆ. ಒಂದು ಗುರಿಯನ್ನು ಹೊಂದಿರುತ್ತಾನೆ. ಆ ಗುರಿಯನ್ನು ಸುಗಮತೆಯಿಂದ ಸಾಧಿಸಲು ತನಗೆ ತಾನೆ ಕೆಲವು ನಿಯಮಗಳನ್ನು ಹಾಕಿಕೊಳ್ಳುತ್ತಾನೆ. ಆರಂಭದಲ್ಲಿ ಈ ನಿಯಮಗಳನ್ನು ಪಾಲಿಸಿ ಕೊನೆಗೆ ತನ್ನ ಗುರಿಯನ್ನು ಸಾಧಿಸುವತ್ತ ಅವನ ದೃಷ್ಟಿ ಇರುತ್ತದೆ. ಆದರೆ ಕಾಲಾಂತರದಲ್ಲಿ ಮಾನವ ಸಮಾಜವು ಸ್ವನಿರ್ಮಿತ ತೊಡಕುಗಳಲ್ಲಿ ಸಿಕ್ಕು ಗುರಿ ಕಾಣದಾಗುತ್ತದೆ. ಗುರಿಯನ್ನು ಮೆರತು ಮಧ್ಯದಲ್ಲಿಯೇ ನಿದ್ರಿಸುತ್ತದೆ. ಆಗ ಮರೆವಿನ ಅಂಧಕಾರವನ್ನು ಹೋಗಲಾಡಿಸಲು ಜ್ಞಾನ ಬೆಳಕಿನೊಂದಿಗೆ ಚೈತನ್ಯ ಮಂತ್ರವನ್ನು ಉದ್ಘೋಷಿಸುತ್ತ ಮಹಾಪುರುಷರ ಆಗಮನವಾಗುತ್ತದೆ. ಈ ಮಹಾಪುರುಷರು ಜನರಿಗೆ ಮಾರ್ಗದರ್ಶನ ಮಾಡಿ ಅವರ ಉದ್ಧಾರಕ್ಕೆ ಕಾರಣರಾಗುತ್ತಾರೆ. ದೀನದಲಿತರ ಪಥಪ್ರದರ್ಶಕರಾಗುತ್ತಾರೆ. ಅಂತಹವರಲ್ಲಿ ಕಬೀರದಾಸರು ಮತ್ತು ಬಸವೇಶ್ವರರು ಪ್ರಮುಖರು.

ಕಾಲಮಾನದ ದೃಷ್ಟಿಯಿಂದ ಇವರಿಬ್ಬರು ಜೀವನದಲ್ಲಿ ೨೦೦ ವರ್ಷಗಳ ಅಂತರವಿದೆ. ಆದರೆ ಇವರ ನಡೆ ನುಡಿಯಲ್ಲಿ ಬಹಳ ಸಾಮ್ಯವಿದೆ. ಹನ್ನೆರಡನೆಯ ಶತಮಾನದ ಬಸವೇಶ್ವರರ ಭಕ್ತಿಮಾರ್ಗ ಹಾಗೂ ಧಾರ್ಮಿಕ ಸಾಮಾಜಿಕ ಕ್ರಾಂತಿ ಹದಿನೈದನೆಯ ಶತಮಾನದ ಕಬೀರದಾಸರಲ್ಲಿ ಸ್ಫುಟವಾಗಿ ಹೊರಹೊಮ್ಮಿ ಬಂದಿದೆ ಎಂದು ಹಲವಾರು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈ ಇಬ್ಬರೂ ಮಹಾಪುರುಷರು ತಮ್ಮ ಸಮಕಾಲೀನ ಸಮಸ್ಯೆಗಳನ್ನು ಅರಿತು ಅರಗಿಸಿಕೊಂಡು ಅವುಗಳಿಂದ ಮುಕ್ತರಾಗಲು ಜನತೆಗೆ ಮಾರ್ಗವನ್ನು ತೋರಿಸಿಕೊಟ್ಟವರು. ತಮ್ಮ ಉಜ್ವಲ ಜೀವನದಿಂದ, ತಮ್ಮ ವಚನಗಳಿಂದ ಸಮಾಜವನ್ನು ಸುಧಾರಣೆಯತ್ತ ಕೊಂಡೊಯ್ದರು. ಇವರು ಕೇವಲ ವ್ಯಕ್ತಿಗಳಾಗಿರದೆ ಶಕ್ತಿಗಳಾಗಿದ್ದರು.

ಕಬೀರದಾಸರು ಕ್ರಿ.ಶ. ೧೩೯೮ರಲ್ಲಿ ಕಾಶಿಯಲ್ಲಿ ಜೂಹಾ (ನೇಕಾರ) ಜಾತಿಯಲ್ಲಿ ಜನ್ಮ ಹೊಂದಿದರು. ಸಮಾಜದಲ್ಲಿ ಈ ಜಾತಿಯು ಉಪಹಾಸ್ಯಕ್ಕೀಡಾದ ನಿಮ್ನ ವರ್ಗದ್ದಾಗಿತ್ತೆಂದು

ತಿಳಿಯುತ್ತದೆ. ಅವರೇ ಒಂದು ಕಡೆ "ಕಬೀರ ಮೇರಿ ಜಾತಿಕೋ ಸಬಕೋಯಿ ಹಸನೋಹಾರ" (ನನ್ನ ಜಾತಿಯನ್ನು ಎಲ್ಲರೂ ಹಾಸ್ಯ ಮಾಡುತ್ತಾರೆ) ಎಂದು ಹೇಳಿದ್ದಾರೆ. ಈ ಜೂಲಾಹ ಜಾತಿಯು ಮೊದಲು ಹಿಂದುಧರ್ಮಕ್ಕೆ ಸೇರಿದ್ದು ನಂತರ ಕಬೀರರ ಜನ್ಮಕ್ಕೆ ಸ್ವಲ್ಪ ಸಮಯ ಪೂರ್ವದಲ್ಲಿಯೇ ಇಸ್ಲಾಂ ಎಂದಾಗಿರಬೇಕೆಂದು ಹಜಾರಿ ಪ್ರಸಾದದ್ವಿವೇದಿ ಅವರು ಅಭಿಪ್ರಾಯ ಪಡುತ್ತಾರೆ.[೧] ಏಕೆಂದರೆ ಕಬೀರದಾಸರ ಮೇಲೆ ಇಸ್ಲಾಂ ಧರ್ಮಕ್ಕಿಂತಲೂ ಹಿಂದೂ ಧರ್ಮದ ಪ್ರಭಾವ ಅತ್ಯಧಿಕವಾಗಿದೆ. ಇವರ ತಂದೆಯ ಹೆಸರು ನೀಮಾ ಎಂದು. ತಂದೆಯ ವ್ಯವಹಾರ ಮಗನೊಂದಿಗೆ ಸ್ನೇಹಪೂರ್ಣವಾಗಿತ್ತು. ಆದರೆ ತಾಯಿಗೆ ಇವರ ಆಚಾರ ವಿಚಾರಗಳು ಅಷ್ಟಾಗಿ ಹಿಡಿಸುತ್ತಿರಲಿಲ್ಲ. ಕಬೀರರಿಗೆ ಇಬ್ಬರು ಪತ್ನಿಯರಿದ್ದರು. ಮೊದಲನೆಯ ಪತ್ನಿ ಲೋಯಿ. ಅವಳ ಮತ್ತು ಕಬೀರರ ವಿಚಾರಗಳಲ್ಲಿ ಒಮ್ಮತವಿರಲಿಲ್ಲ. ಅವಳಿಂದ ಅವರು ಅಸಂತುಷ್ಟರಾಗಿದ್ದರೆಂದು ತಿಳಿದು ಬರುತ್ತದೆ.

ಇವರ ಎರಡನೆಯ ಪತ್ನಿ ಧನಿಯಾ ಅಥವಾ ರಮಜನಿಯಾ. ಪತಿಯ ಮನವನ್ನರಿತು ನಡೆದು ಪತಿಗೆ ತಕ್ಕ ಸತಿಯಾಗಿ ಕಬೀರದಾಸರ ಹೊಗಳಿಕೆಗೆ ಪಾತ್ರಳಾಗಿದ್ದಾಳೆ. ಕಬೀರದಾಸರ ಗುರುಗಳು ಯಾರು ಎಂಬ ವಿಷಯದಲ್ಲಿಯೂ ಒಮ್ಮತವಿಲ್ಲ. ಕಬೀರದಾಸರ ಹಿಂದೂ ಅನುಯಾಯಿಗಳು ರಮಾನಂದರನ್ನು ಇವರ ಗುರುಗಳೆಂದು ಹೇಳಿದರೆ ಇವರ ಮುಸಲ್ಮಾನ ಅನುಯಾಯಿಗಳು ಶೇಖತಕಿಯನ್ನು ಇವರ ಗುರುಗಳೆಂದು ಹೇಳುತ್ತಾರೆ. ಆದರೆ ರಮಾನಂದರೆ ಇವರ ಗುರುಗಳಾಗಿದ್ದರೆಂದು ತೋರಿಸಲು ಹೆಚ್ಚು ಆಧಾರಗಳು ದೊರೆಯುತ್ತವೆ. ಕಬೀರದಾಸರು ಓದು ಬರಹ ಬಲ್ಲವರಾಗಿದ್ದಿಲ್ಲ. ಅವರು ಒಂದು ಕಡೆ "ವಿದ್ಯಾನ ಪರವುವಾದ ಸಂಹ ಜಾನವು" ಅಂದರೆ "ಓದು ಕಲಿತವನಲ್ಲ ವಾದ ಮಾಡಲು ಬರುವುದಿಲ್ಲ" ಎಂದು ಹೇಳಿದ್ದಾರೆ. ಆದರೆ ತಮ್ಮ ಸುತ್ತಮುತ್ತಲಿನ ಜನ ಜೀವನದ ಆಗು ಹೋಗುಗಳನ್ನು, ಜನರ ನಡತೆಯನ್ನು, ಅವರ ಪ್ರತಿಕ್ರಿಯೆಯನ್ನು ಗಮನಿಸಿ ವಿಮರ್ಶಿಸುವ ಸೂಕ್ಷ್ಮದೃಷ್ಟಿ ಅವರದಾಗಿತ್ತು. ಕಬೀರದಾಸರು ಸತ್ಸಂಗಕ್ಕೆ ಅತ್ಯಂತ ಮಹತ್ವವನ್ನು ನೀಡಿದವರಾಗಿದ್ದರು. ಸತ್ಸಂಗದ ಆಸೆಯಿಂದ ಅವರು ದೇಶಾಟನೆಗೈಯುತ್ತಿದ್ದರು. ಕಬೀರದಾಸರು ಯಾವ ಒಂದು ಜಾತಿಯನ್ನೇ ಆಗಲಿ ಶ್ರೇಷ್ಠವೆಂದು ನಂಬಲಿಲ್ಲ. ಜಾತಿಗಿಂತಲೂ ನೀತಿಗೆ ಹಾಗೂ ಹೃದಯ ಪರಿಶುದ್ಧತೆಗೆ ಮಹತ್ವವನ್ನು ಕೊಟ್ಟಿದ್ದರು. ಹೀಗಾಗಿ ಅವರ ಹತ್ತಿರ ಜಾತಿಮತ ಭೇದವಿಲ್ಲದೆ ಎಲ್ಲ ಸಾಧುಸಂತರು ಬರುತ್ತಿದ್ದರು. ಇವರೂ ಸಹ ಸಾಧು ಸಂತರ ಸತ್ಸಂಗದ ಆಸೆಯಿಂದ ಮಕ್ಕಾ ಮದೀನ, ಮಥುರಾ, ದ್ವಾರಕ ಎಂಬ ಭೇದ ಭಾವವಿಲ್ಲದೆ ಎಲ್ಲ ಕಡೆಗೂ ಹೋಗುತ್ತಿದ್ದರು. ಅದರಿಂದಲೇ ಅವರು ನಾನಾ ತರದ ಜನರ ಮನೋಭಾವನೆಗಳನ್ನು ಅರಿತವರಾಗಿದ್ದರು. ಅವರ ನ್ಯೂನ್ಯತೆಗಳನ್ನು ಅರಿತಿದ್ದರು. ಅವರು ಸಮಾಜ ಸುಧಾರಕರಾಗಲು ಅವರ ಜೀವನದ ಅನುಭವಗಳೇ ಸಹಾಯಕವಾದವು.

ಕೆಳವರ್ಗದ ಜಾತಿಯಲ್ಲಿ ಜನ್ಮವೆತ್ತಿ ನೇಕಾರನ ಕಾಯಕಮಾಡಿ ನಾನಾ ಸ್ಥಳಗಳನ್ನು ಸಂದರ್ಶಿಸಿದ್ದರಿಂದ ಅವರಿಗೆ ನಾನಾ ವಿಧದ ಜನರ ಹೃದಯದವರೆಗೂ ಮುಟ್ಟುವ ಸಾಮರ್ಥ್ಯವಿತ್ತು. ಸಮಾಜವು ಡಾಂಭಿಕತೆ, ಅಂಧ ವಿಶ್ವಾಸ ಮತ್ತು ಜಾತಿಯ ದುರಾಭಿಮಾನದಿಂದ ನರಳುತ್ತಿದೆ ಎಂಬುದನ್ನು ನೋಡಿ ಅವರು ಅದಕ್ಕೆ ಕಾರಣರಾದವರನ್ನು ಖಂಡಿಸುವುದರ ಮೂಲಕ ಸಮಾಜದ ಪಥ ಪ್ರದರ್ಶಕರಾದರು.

ಅಂದು ಬಹುದೇವೋಪಾಸನೆ, ಮೂರ್ತಿಪೂಜೆ ಹೆಚ್ಚು ಪ್ರಚಾರದಲ್ಲಿದ್ದವು. ಮೂರ್ತಿಪೂಜೆ ನಾನಾ ವಿಧವಾಗಿ, ಆಡಂಬರ ಪೂರ್ಣವಾಗಿ ನಡೆಯುತಿತ್ತು. ಮುದ್ರೆ ಮತ್ತು ಮಾಲೆಗಳನ್ನು ಧರಿಸಿ ವೈಷ್ಣವರೆಂದು ಹೇಳಿಕೊಳ್ಳುವ ಡಾಂಭಿಕ ಜನರನ್ನು ಕಂಡು ಅವರು ಹೇಳಿದ್ದಾರೆ;

"ವೈಸನೌ ಭಯಾ ತೌ ಕಾಭಯಾ ಬೂಝಾ ನಂಹಿ ಬಚೇಕ
ಭಾಪಾ ತಿಲಕ ಬನಾಯಿಕರಿ, ಧಗ್‌ಧ್ಯಾಲೋಕ ಅನೇಕ" ॥

ಕೇವಲ ವೇಷ ಧರಿಸುವುದರಿಂದ ಯಾವ ಲಾಭವೂ ಇಲ್ಲ, ತಿಲಕ ಮತ್ತು ಮುದ್ರೆಗಳನ್ನು ಧರಿಸುವುದರಿಂದ ವಿವೇಕ ಉದಿಸುವುದಿಲ್ಲ. ನಿಜವಾದ ಭಕ್ತಿ ಇಲ್ಲದೆ, ಆತ್ಮದ ಪರಿಸ್ಥಿತಿ ಇಲ್ಲದೆ ಕೇವಲ ವೇಷ ಧರಿಸಿ ಜನರನ್ನು ಏಕೆ ಮೋಸಗೊಳಿಸುತ್ತೀರಿ ಎಂದು ಹೇಳಿದ್ದಾರೆ.

ಕಲ್ಲನಾಗರ ಕಂಡರೆ ಹಾಲನೆರೆ ಎಂಬರು
ದಿಟದ ನಾಗರಕಂಡರೆ ಕೊಲ್ಲೆಂಬರಯ್ಯ
ಉಂಬ ಜಂಗಮ ಬಂದಡೆ ನಡೆಯೆಂಬರು
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯ
ನಮ್ಮ ಕೂಡಲ ಸಂಗನ ಶರಣರ ಕಂಡು ಉದಾಸೀನವ ಮಾಡಿದಡೆ
ಕಲ್ಲು ತಾಗಿದ ಮಿಟ್ಟೆಯಂತಪ್ಪರಯ್ಯ

ದೇವರು ಪ್ರಾಣಿದಯೆಗೆ ಒಲಿಯುವನು. ಅದನ್ನು ಬಿಟ್ಟು ಜನರು ಕಲ್ಲುನಾಗರಕ್ಕೆ ಹಾಲನ್ನೆರೆಯುತ್ತಾರೆ. ಉಣ್ಣದ ಲಿಂಗಕ್ಕೆ ಎಡೆ ಹಿಡಿಯುತ್ತಾರೆ. ಆದರೆ ಹಸಿದ ಜಂಗಮ ಬಂದರೆ ನಡೆ ಎಂದು ಹೇಳುತ್ತಾರೆ. ಈ ರೀತಿಯಾಗಿ ಶರಣರನ್ನು ಉದಾಸೀನ ಮಾಡಿದರೆ ಅವರ ಸರ್ವನಾಶವಾಗುತ್ತದೆ ಎಂದು ಹೇಳಿ ಬಸವೇಶ್ವರರು ಜನರನ್ನು ಎಚ್ಚರಿಸುತ್ತಾರೆ.

ಹಲವು ಮಣಿಯ ಕಟ್ಟಿ ಕುಣಿಕುಣಿದಾಡಿ
ಹಲವು ಪರಿಯಲಿ ವಿಭೂತಿಯ ಹೂಸಿ
ಗಣಡಂಬದ ನಡುವೆ ನಲಿನಲಿದಾಡಿ
ಉಂಡು ತಾಂಬೂಲವಗೊಂಡು ಹೋಹುದಲ್ಲಿ
ತನು ಮನ ಧನವ ಸಮರ್ಪಿಸದವರ
ಕೂಡಲ ಸಂಗಮದೇವರೆಂತೊಲಿವನು

ಎಂದು ವೇಷಧಾರಿ ಜನರನ್ನು ಪ್ರಶ್ನಿಸಿದ್ದಾರೆ ಬಸವೇಶ್ವರರು. ಸಂನ್ಯಾಸಿಯ ವೇಷವನ್ನು ಧರಿಸಿದ ಕೂಡಲೆ ಮನದ ಅಹಂಕಾರ ದೂರವಾಗುವುದಿಲ್ಲ. ತನುಮನ ಸಮರ್ಪಿಸಿದಲ್ಲದೆ ಅದು ಡಂಭಾಚಾರವಾಗುತ್ತದೆ. ಇಂತಹ ಡಂಭಾಚಾರದಿಂದ ದೇವರು ಹರಿದಾರಿ ದೂರವಿರುತ್ತಾನೆ.

ದೇವರ ನಿಜವಾದ ಇರವನ್ನು ಅರಿಯದೆ, ಅವನ ಸಾಮರ್ಥ್ಯವನ್ನು ಅರಿಯದೆ ಬರಿದೆ ಅವನನ್ನು ಕೂಗಿ ಕರೆಯುವವರನ್ನು ಕಂಡು ಕಬೀರದಾಸರು ಈ ರೀತಿಯಾಗಿ ಹೇಳಿದ್ದಾರೆ;

"ಮಸ್ಜಿದ ಭೀಕರ ಮುಲ್ಲಾಪುಕಾರೈ, ಕ್ಯಾ ಸಾಹಬ ತೇರಾ ಬಹಿರಾಹೈ?
ಚಿವುಂಟಿ ಕೆ ಪಗೆ ನೀವರ ಬಾಜೆ ಸೋ ಭೀ ಸಾಹಬ ಸುನತಾ ಹೈ? ।
ಪಂಡಿತ ಹೋಯ ತೆ ಆಸನ ಮಾರೈ, ಲಂಬೀ ಮಾಲಾ ಜಪತಾ ಹೈ ॥
ಅಂತರ ತೇರೆ ಕಪಟ ಕತರನೀ, ಸೋ ಭೀ ಸಾಹಬ ಬತಾ ಹೈ ।

ಹೀರಾ ಪಾಯ ಪರಬ ನಹಿ ಜಾನೆ, ರೌಡೀ ಪರಾಬನಿ ಕತರಾ ಹೈ।
ಕಹಿತ ಕಬೀರ ಸುನೊ ಭಾಯಿ ಸಾಧೋ, ಹರಿ ಜೈಸೆ ತೊ ತೈಸಾಹೈ॥

ಮಸೀದಿಯಲ್ಲಿ ಮುಲ್ಲಾ ಧ್ವನಿ ಎತ್ತರಿಸಿಕೊಂಡು ಕೂಗುತ್ತಾನೆ. ಕಬೀರದಾಸರು ಅವನನ್ನು ಕುರಿತು ಹೇಳುತ್ತಾರೆ. ಯಾಕೆ? ನಿನ್ನ ದೇವರು ಕಿವುಡನೆ? ಇಲ್ಲ! ಅವನು ಇರುವೆ ಕಾಲಿನ ನೂಪುರದ ಧ್ವನಿಯನ್ನು ಸಹ ಕೇಳಬಲ್ಲವನಾಗಿದ್ದಾನೆ. ಪಂಡಿತನು ದೊಡ್ಡ ಜಪಸರವನ್ನು ಎಣಿಸುತ್ತಾನೆ. ಯೋಗಸನಗಳನ್ನು ಹಾಕುತ್ತಾನೆ. ಆದರೆ ಅವನ ಅಂತರಂಗ ಕಪಟತೆಯಿಂದ ತುಂಬಿ ಹೋಗಿರುತ್ತದೆ. ಅದನ್ನು ಸಹ ದೇವರು ನೋಡುತ್ತಾನೆ. ದೇವನೆಂಬ ಮಾಣಿಕ್ಯವನ್ನು ನೋಡಿಯೂ ಅದರ ಬೆಲೆಯನ್ನು ಅರಿಯದವನಾಗಿದ್ದೀಯೇ, ಕೇವಲ ಕಾಡಿಯ ಬೆಲೆ ಕಟ್ಟುವುದನ್ನು ಮಾತ್ರ ತಿಳಿದಿದ್ದೀಯೇ. ಕಬೀರದಾಸರು ಹೇಳುತ್ತಾರೆ – ಅಣ್ಣಗಳಿರಾ, ಕೇಳಿರಿ ಭಕ್ತರ ಭಕ್ತಿಗೆ ತಕ್ಕ ಫಲವನ್ನು ದೇವರು ಕೊಡುತ್ತಾನೆ ಎಂದು.

ಈ ರೀತಿಯಾಗಿ ಅವರು ಆತ್ಮವಿಶ್ವಾಸದ ಬಲದಿಂದ ನಿಶ್ಚಿಂತೆಯಾಗಿ ಅವರವರ ತಪ್ಪುಗಳನ್ನು ತೋರಿಸಿಕೊಟ್ಟು ಡಾಂಭಿಕತೆಗೆ ಅಘಾತವನ್ನುಂಟು ಮಾಡಿದರು. ಬಸವಣ್ಣನವರೂ ಸಹ ಮನದಲ್ಲಿ ಲೇಸಿಲ್ಲದೆ ಭಸಿತವನ್ನು ಪೂಸುವ "ಅವಿರಳವಾಗಿ ಮಣಿಯನೆಣಿಸುವ "ಮನದಲ್ಲಿ ನಿಜವಿಲ್ಲದೆ ಲಿಂಗವನ್ನು ಪೂಜಿಸುವ" ಮತ್ತು ನಂಬದೆ ನೆಚ್ಚದೆ ಬರಿದೆ ಕರೆವ "ಡಾಂಭಿಕರನ್ನು ತೆಗಳಿದ್ದಾರೆ. ನಂಬದೆ ನೆಚ್ಚದೆ ಬರಿದೆ ಕರೆವರ ಕೊಂಬ ಮೆಟ್ಟಿ ಕೂಗೆಂದ ನಮ್ಮ ಕೂಡಲ ಸಂಗಮದೇವಾ ಎಂದು ನಿಷ್ಠುರವಾಗಿ ಹೇಳಿದರು. ನುಡಿಯಲ್ಲಿ ಮತ್ತು ನಡೆಯಲ್ಲಿ ಹೊಂದಾಣಿಕೆ ಇಲ್ಲದಿದ್ದರೆ ಹೇಗೆ, ನುಡಿದಂತೆ ನಡೆಯುವುದು ಶರಣರ ಧರ್ಮ ಅಂತೆಯೇ ಪರಮಸುಖದತ್ತ ಕೊಂಡೊಯ್ಯುವ ಮಾರ್ಗವು ಹೌದು. ಇದನ್ನೇ ಕಬೀರದಾಸರು ಹೀಗೆ ಹೇಳಿದ್ದಾರೆ;

"ಕಥನೀ ಮೀಠೀ ಖಾಂಡ ಸೀ ಕರನೀ ಪಿಪ ಕೀ ಲೋಯ।
ಕಥನೀ ತಜಿ ಕರನೀ ತರ್ಪೆ ವಿಪಿ ಸೆ ಅಮೃತ ಹಾಯ"॥

ಎಂದರೆ ಉಪದೇಶ ಮಾಡುವದು ಕಬ್ಬಿನಂತೆ ಸಿಹಿಯಾದದ್ದು. ಅಂದರೆ ಸಂತೋಷದಾಯಕ ಮತ್ತು ಸುಲಭವಾದದ್ದು. ಉಪದೇಶದಂತೆ ನಡಯುವದು ವಿಷ ಸೇವಿಸಿದಷ್ಟೇ ಕಠಿಣವಾದದ್ದು. ಆದರೆ ಉಪದೇಶ ಮಾಡುವುದನ್ನು ಬಿಟ್ಟು ಕೇವಲ ನಡೆಯಲ್ಲಿ ಮಾತ್ರ ಅದನ್ನು ತೋರಿದರೆ ವಿಷವೇ ಅಮೃತವಾಗುತ್ತದೆ. ಅಂದರೆ ಪರಮಾತ್ಮನು ಸುಲಭವಾಗಿ ಒಲಿಯುತ್ತಾನೆ. ಕೇವಲ ಉಪದೇಶಮಾಡುವವರಿಗೆ ಬುದ್ಧಿವಾದವನ್ನು ಹೇಳಿ ದೇವನೊಲುಮೆಯ ಅಮೃತವನ್ನು ಪಡೆಯುವ ದಾರಿಯನ್ನು ತೋರಿದರು. ಬಸವೇಶ್ವರರೂ ಸಹ ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿದ್ದ ಲಿಂಗ ಘಟಸರ್ಪದಂತೆ ಎಂದಿದ್ದಾರೆ. ದಿಟವ ನುಡಿವುದು ನುಡಿದಂತೆ ನಡೆವುದು ಲೇಸು. ಆದರೆ ನುಡಿದು ಹುಸಿವ ನಡೆದು ತಪ್ಪುವ ಪ್ರಪಂಚಿಯನೊಲ್ಲ ಕೂಡಲಸಂಗಮದೇವಾ ಎಂದು ಹೇಳಿದ್ದಾರೆ.

ಅಂಧವಿಶ್ವಾಸವೆಂಬ ಅಂಧಕಾರ ಜನರ ಮನದಲ್ಲಿ ಜಡವಾಗಿ ಮನೆ ಮಾಡಿತ್ತು. ಅದನ್ನು ಹೋಗಲಾಡಿಸಲು ಕಬೀರದಾಸರು ಅನೇಕ ರೀತಿಯ ಉದಾಹರಣೆಗಳನ್ನು ಕೊಟ್ಟು ಅದರ ಟೊಳ್ಳುತನವನ್ನು ತೋರಿಸಿಕೊಟ್ಟಿದ್ದಾರೆ;

"ಕೊಸೋ ಕಹಾ ಬಿಗಾರಿಯಾ ಜೊ ಮೂಂಡೇ ಸೌಬಾರ್
ಮನ ಕೌ ರೌಹೆನ ಮೂದಿಡಿಯೇ ಜಾಮ್ಮೆ ವಿಷಯ ವಿಕಾರ."

ಸಂನ್ಯಾಸಿಗಳಾದವರು ಕೂದಲು ತೆಗೆಸುವುದು ಎಲ್ಲರಿಗೂ ಗೊತ್ತಿರುವ ವಿಷಯ. ಅದನ್ನು ನೋಡಿದ ಕಬೀರದಾಸರು. "ಮತ್ತೆ ಮತ್ತೆ ಏಕೆ ಕೂದಲನ್ನು ತೆಗೆಸುತ್ತೀರಿ. ಕೂದಲಿನದೇನು ತಪ್ಪು ಮನದಲ್ಲಿರುವ ವಿಷಯ ವಿಕಾರಗಳನ್ನು ದೂರ ಮಾಡಿರಿ ಮನವು ಮಾಡಿದ ತಪ್ಪಿಗೆ ಕೂದಲಿಗೆ ಶಿಕ್ಷೆಯೆ? ಇದು ಯಾವ ನ್ಯಾಯ, ಮನದಲ್ಲಿರುವ ಅರಿಷಡ್ವರ್ಗಗಳನ್ನು ದೂರ ಮಾಡಿರಿ. ಕೇಶ ಮುಂಡನದಿಂದ ಸಂನ್ಯಾಸತ್ವ ಲಭಿಸುವುದಿಲ್ಲ. ಕೇಶಕ್ಕೂ ಸಂನ್ಯಾಸತ್ವಕ್ಕೂ ಸಂಬಂಧವಿಲ್ಲ ಎಂದು ಹೇಳಿದರು. ಮನದ ಶುದ್ಧಿಯತ್ತ ಗಮನ ಕೊಡಿರೆಂದು ಹೇಳಿದರು. ಇದೇ ಮಾತನ್ನು ಇನ್ನೂ ಚಮತ್ಕಾರಪೂರ್ಣವಾಗಿ ಇನ್ನೊಂದೆಡೆ ಹೇಳಿದ್ದಾರೆ;

"ಮೂಂಡ್ ಮೂಂಡಾಯೆ ಹರಿಮಿಲ್ಬೆ ಸಖ ಕೋಯಿತಿಯೇ ಮುಂಡಾಯ।
ಬಾರ್ ಬಾರ್ ಕೇ ಮೂಂಡತೆ, ಭೇಡ ನವೈಕುಂಠ ಜಾಯ।

ಕೇವಲ ಕೇಶಮುಂಡನದಿಂದ ದೇವರು ಸಿಗುವ ಹಾಗಿದ್ದರೆ ಎಲ್ಲರೂ ಕೇಶ ಮುಂಡನ ಮಾಡಿಸಿಕೊಳ್ಳುತ್ತಿದ್ದರು. ಮತ್ತೆ ಮತ್ತೆ ಮುಂಡನ ಮಾಡಿಸಿಕೊಂಡರೂ ಸಹ ಕುರಿ ಸ್ವರ್ಗಕ್ಕೆ ಹೋಗುವುದಿಲ್ಲ ಎಂದು ಹೇಳಿ ದೇವರನ್ನು ಒಲಿಸಿಕೊಳ್ಳಲು ಕೇಶಮುಂಡನೆ ಮಾಡಿಸಿಕೊಳ್ಳುವುದು ಎಷ್ಟು ಹಾಸ್ಯಾಸ್ಪದವಾದದ್ದು ಎಂಬುದನ್ನು ತೋರಿಸಿಕೊಟ್ಟರು.

ಇದೇ ಮಾತನ್ನು ಬಸವೇಶ್ವರರು 'ಹುತ್ತವ ಬಡಿದರೆ ಹಾವು ಸಾವಬಲ್ಲುದೇ ಅಯ್ಯಾ? ಎಂದು ಕೇಳಿದರು. ಉಡಿಗೆ ತೊಡುಗೆಗಳಿಂದ ಹೊರನೋಟದಿಂದ ಹಿರಿಯರಾಗಿ ತಿಳಿಸಬಾರದು. ಒಳಗೆ ಕುಟಿಲತೆ ತುಂಬಿರುವಾಗ ಕೇವಲ ವೇಷಧರಿಸಿದರೆ ಅದರಿಂದ ಲಾಭವಿಲ್ಲ. ಹುತ್ತವನ್ನು ಬಡಿದರೆ ಹಾವು ಸಾಯುವುದಿಲ್ಲ. ಅದೇ ರೀತಿಯಾಗಿ ದೇಹವನ್ನು ದುಡಿಸಿದರೆ ಮನದ ವಿಕಾರಗಳು ಅಳಿಯುವುದಿಲ್ಲ ಎಂದರು.

ಜನರು ಮೂರ್ತಿಪೂಜೆಯೇ ಧರ್ಮವೆಂದು ನಂಬಿದ್ದರು. ಈ ಮೂರ್ತಿಪೂಜೆಯಲ್ಲಿ ಕಬೀರರಿಗೆ ಕೇವಲ ಅಜ್ಞಾನ ಮತ್ತು ಮೂರ್ಖತೆಯೇ ಗೋಚರಿಸುತ್ತಿತ್ತು.

"ವಾಹನ ಪೂಜ್ಯೆ ಹರಿ ಮಿಲ್ಬೆ ತೊ ಮೈ ಪೂಜೂಂ ಪೂಹಾರ್
ಯಾತಿ ತೋ ಚಾರೇ ಭಲೀ ಪೀಸ್ ಖಾಯ್ ಸಂಸಾರ್"।

ಈ ಸುಂದರವಾದ ಎರಡು ಪಂಕ್ತಿಗಳಲ್ಲಿ ಅವರು ಮೂರ್ತಿಪೂಜೆಯು ಎಷ್ಟು ವಿಸ್ತಾರವಾದದ್ದು ಎಂಬುದನ್ನು ಹೇಳಿದ್ದಾರೆ. ಶಿಲೆಯನ್ನು ಪೂಜಿಸುವುದರಿಂದ ದೇವರು ಸಿಗುವ ಹಾಗಿದ್ದರೆ ನಾನು ಬೆಟ್ಟವನ್ನೇ ಪೂಜಿಸುತ್ತೇನೆ. ಏಕೆಂದರೆ ಬೆಟ್ಟದ ಗರ್ಭದಲ್ಲಿ ಅನೇಕ ಶಿಲೆಗಳಿವೆ. ಅಷ್ಟೊಂದು ಶಿಲೆಗಳನ್ನು ಪೂಜಿಸುವುದರಿಂದ ಮಹಾಭಾಗ್ಯವೇ ನನ್ನದಾಗಬೇಕು. ಆದರೆ ನನಗೆ ಅದಕ್ಕಿಂತಲೂ ಈ ಬೀಸುವ ಕಲ್ಲನ್ನು ಪೂಜಿಸುವುದೇ ಲೇಸೆಂದು ತೋರುತ್ತದೆ. ಏಕೆಂದರೆ ಇದರ ಉಪಯೋಗವನ್ನು ಪಡೆದುಕೊಂಡು ಜನರು ತಮ್ಮ ಹೊಟ್ಟೆಯನ್ನಾದರೂ ಹೊರೆದುಕೊಳ್ಳುತ್ತಾರೆ. ಯಾವ ಉಪಯೋಗಕ್ಕೂ ಬಾರದ ಮೂರ್ತಿಪೂಜೆ ಏತಕ್ಕೆ? ಎಂದು ಹೇಳುತ್ತಾರೆ.

ದೇವರು ಮಂದಿರದ ವಿಗ್ರಹದಲ್ಲಿಯೇ ಇಲ್ಲ, ನಂಬಿದವರ ಹೃದಯದಲ್ಲಿಯೂ ಅವನ ಸ್ಥಾನವಿದೆ ಎಂದು ಹೇಳಿದರು ಕಬೀರದಾಸರು;

"ಜ್ಯೊಂವ್ ತಿಲಮಾಹಿ ತೇಲ ಜ್ಯೊಂವ್ ಚಕಮಕ ಮೆ ಆಗಿ
ತೇರಾ ಸಾಯಿ ತಂಜ್ಜ ಮೇ ಜಾಗಿ ನಕ್ಷೆ ತೋ ಜಾಗಿ॥

ತಿಲದಲ್ಲಿ ತೈಲವಿರುವಂತೆ ಶಿಲೆಯಲ್ಲಿ ಅಗ್ನಿಯಿರುವಂತೆ ನಿನ್ನ ದೇವರು ನಿನ್ನ ಹೃದಯದಲ್ಲಿಯೇ ಇರುವನು. ನೀನು ಎಚ್ಚೆತ್ತುಕೋ ಎಂದರು.

ಕಸ್ತೂರಿ ಕುಂಡಲಿ ಬಸ್ತ ಮೃಗ ಢೂಂಢೈ ಬನ ಮಾಹಿ।
ಐಸೆ ಘಾಟ ಘಾಟ ರಾಮ ಹೈ ದುನಿಯಾ ದೇಖೈ ನಾಹಿ॥

ಕಸ್ತೂರಿಯನ್ನು ತನ್ನಲ್ಲಿಯೇ ಇರುವ ಅರಿವಿಲ್ಲದೇ ಅದಕ್ಕಾಗಿ ಕಾಡೆಲ್ಲ ಹುಡುಕುವುದು ಕಸ್ತೂರಿಮೃಗ. ಅದರಂತೆಯೇ ದೇಹವೆಂಬ ದೇಗುಲದಲ್ಲಿ ದೇವರು ಇರುವಾಗ ಅದರ ಅರಿವಿಲ್ಲದೆ ಜನರು ಅವನನ್ನು ತೀರ್ಥಸ್ಥಾನ, ಮಂದಿರ, ಮಸೀದಿ ಮುಂತಾದ ನಾನಾ ಸ್ಥಾನಗಳಲ್ಲಿ ಹುಡುಕುತ್ತಾರೆ.

ದೇವರ ವ್ಯಾಪ್ತಿಯ ವಿಷಯವನ್ನು ಬಸವೇಶ್ವರರು ಈ ರೀತಿಯಾಗಿ ಹೇಳಿದ್ದಾರೆ;

ಎತ್ತೆತ್ತ ನೋಡಿದರತ್ತ ನೀನೇ ದೇವಾ।
ಸಕಲ ವಿಸ್ತಾರ ರೂಹು ನೀನೇ ದೇವಾ।
ವಿಶ್ವತೋ ಚಕ್ಷು ನೀನೆ ದೇವಾ
ವಿಶ್ವತೋ ಮುಖ ನೀನೆ ದೇವಾ
ವಿಶ್ವತೋ ಬಾಹು ನೀನೆ ದೇವಾ
ವಿಶ್ವತೋ ಪಾದ ನೀನೇ ದೇವಾ ಕೂಡಲ ಸಂಗಮದೇವಾ।

ಈ ರೀತಿಯಾಗಿ ಎಲ್ಲೆಡೆಗೂ ಇರುವ ದೇವರು ಭಕ್ತನ ಶರೀರದಲ್ಲಿಲ್ಲವೇ? ಅದಕ್ಕಾಗಿ ಆ ದೇವನ ಇರುವಿಗಾಗಿ ಈ ದೇಹವನ್ನು ಯೋಗ್ಯವಾಗಿ ಪರಿವರ್ತಿಸಬೇಕು. ದೇಹವೇ ದೇಗುಲವಾಗಬೇಕು. ಆಗ ದೇಹ ದೇವರ ನಿವಾಸಕ್ಕೆ ಯೋಗ್ಯವಾಗುತ್ತದೆ. ಅದಕ್ಕೆ ಬಸವೇಶ್ವರರು;

ಉಳ್ಳವರು ಶಿವಾಲಯ ಮಾಡುವರು
ನಾನೇನು ಮಾಡಲಿ ಬಡವನಯ್ಯಾ
ಎನ್ನ ಕಾಲೇ ಕಂಬ ದೇಹವೇ ದೇಗುಲ
ಶಿರ ಹೊನ್ನ ಕಳಸವಯ್ಯ
ಕೂಡಲ ಸಂಗಮದೇವ ಕೇಳಯ್ಯಾ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ

ಎಂದು ದೇವಾಲಯಗಳನ್ನು ಕಟ್ಟಿ ಮಾಡುವ ಸ್ಥಾವರ ಪೂಜೆಯನ್ನು ಖಂಡಿಸಿದ್ದಾರೆ. ಪ್ರತಿಯೊಬ್ಬನ ಹೃದಯದಲ್ಲಿರುವ ಪರಮಾತ್ಮನನ್ನು ಗುರುತಿಸಿದರೆ ಜಾತಿಯ ಭೇದಭಾವವು ತಾನೇ ತಾನಾಗಿ ಅಳಿದು ಹೋಗುತ್ತದೆ. ಜಾತಿಮತ ಎಂದು ಬಡಿದಾಡುವ ಜನರನ್ನು ಕುರಿತು ಕಬೀರದಾಸರು ಹೇಳಿದರು;

ಹಿಂದೂ ತುರಕ ಕಾ ಕರತಾ ಏಕೈ"

ಹಿಂದೂ ಮುಸ್ಲಮಾನರನ್ನು ಸೃಷ್ಟಿಸಿದವನು ಒಬ್ಬನೆ ಎಂದು.

"ಏಕ ಜ್ಯೋತಿ ಥ್ಯ ಸಬ ಉತಪನಾಂ ಕೇನ ಬ್ರಾಹ್ಮನ ಕೇನಸೂದಾ" ಜ್ಯೋತಿ ರೂಪಿ ಬ್ರಹ್ಮನಿಂದ ಎಲ್ಲರೂ ಹುಟ್ಟಿರುವಾಗ ಇವನು ಬ್ರಾಹ್ಮಣ, ಇವನು ಶೂದ್ರನೆಂದು ಹೇಳಲು, ಸಾಧ್ಯವೇ? ಎಲ್ಲರೂ ಸಮಾನ ಧರ್ಮಿಗಳು.

"ದಯಾ ಸಬಪರ ರೇಜಿಯೆ ರೌ ಪರ ನಿರ್ದಯ ಹೋಯ್।
ಸಾಯೀ ಕೆ ಸಬ ಜೀವ ಹೈ ಕಿವೀ ಕುಂಜರ ಹೋಯ್॥

ಗಿಳಿಯಂತಹ ಸಣ್ಣ ಪಕ್ಷಿಯಿಂದ ಹಿಡಿದು ದೊಡ್ಡ ಪ್ರಾಣಿಯಾದ ಆನೆಯವರೆಗೂ ಇಲ್ಲಿರುವ ಸಕಲ ಜೀವಿಗಳು ಭಗವಂತನ ಪ್ರತಿರೂಪವಾಗಿವೆ, ಯಾರೂ ನಿರ್ದಯತೆಗೆ ಪಾತ್ರರಲ್ಲ. ಎಲ್ಲರನ್ನೂ ದಯೆಯಿಂದಲೇ ನೋಡು, ದಯೆ ಮತ್ತು ಕ್ಷಮೆಯಲ್ಲಿಯೇ ದೇವರಿದ್ದಾನೆ.

"ಜಂಹಾ ದಯಾ ತಂಹ ಧರ್ಮ ಹೈ, ಜಂಹಾ ಲೋಭ ತಂಹ ಪಾಪ।
ಜಂಹಾ ಕ್ರೋಧ ತಂಹ ಕಾಲ ಹೈ, ಜಂಹಾ ಛಿಯಾ ತಂಹ ಆಪ॥

ಎಂದರೆ ದಯವಿದ್ದಲ್ಲಿ ಧರ್ಮವಿದೆ. ಲೋಭವಿದ್ದಲ್ಲಿ ಪಾಪವಿದೆ. ಕ್ರೋಧವಿದ್ದಲ್ಲಿ ಕಾಲನಿದ್ದಾನೆ. ಕ್ಷಮೆ ಇದ್ದಲ್ಲಿ ದೇವರಿದ್ದಾನೆ. ಜಾತಿಯಿಂದ ದೇವರನ್ನು ಪಡೆಯಲು ಸಾಧ್ಯವಿಲ್ಲ. ಅಂತರಂಗ ಶುದ್ಧಿ ಬಹಿರಂಗ ಶುದ್ಧಿಯಿಂದಲೇ ದೇವರನ್ನು ಒಲಿಸಬಹುದು. ವ್ಯಕ್ತಿ ಜಾತಿಯಿಂದ ನೀಚನಾದರೂ ಸಹ ನಡತೆಯಿಂದ ಉಚ್ಚನಾಗಬಹುದು. ಅದಕ್ಕೆಂದೇ ಕಬೀರದಾಸರು ಹೇಳಿರುವ;

ಜಾತಿ ನ ಪೂಛಿಯೇ ಸಾಧಕೀ ಪೂಛಲೀಜಿಯೆ ಜ್ಞಾನ್।
ಮೋಲ ಕರೋ ತಲವಾರಕೀ ಪಡಾ ರಹನೇ ದೋ ಮ್ಯಾನ್॥

ಸಾಧು ಸಂತರ ಜಾತಿಯನ್ನು ಕೇಳಬೇಡಿರಿ, ಅವರ ಜ್ಞಾನ ಎಷ್ಟು ಎಂಬುದನ್ನು ತಿಳಿಯಿರಿ. ಕತ್ತಿಯ ಬೆಲೆಯನ್ನು ಕಟ್ಟಿರಿ ಅದರ ಒರೆ ಹಾಗೆಯೇ ಬಿದ್ದಿರಲಿ, ಎಂದರೆ ಹೇಗೆ ಒರೆಕ್ಕಿಂತಲೂ ಕತ್ತಿಯೇ ಮುಖ್ಯವಾದದ್ದೋ ಹಾಗೆಯೆ ಜಾತಿಗಿಂತಲೂ ಜ್ಞಾನವೇ ಮುಖ್ಯವಾದದ್ದು.

ಬಸವೇಶ್ವರರು ಯಾವ ಜಾತಿಯ ವ್ಯಕ್ತಿಯೇ ಆಗಿರಲಿ ಶರಣ ಧರ್ಮವನ್ನು ಪಾಲಿಸಿ ಕೂಡಲ ಸಂಗಮ ದೇವರನ್ನು ಒಲಿಸಿಕೊಳ್ಳಬಹುದು ಎಂದರು. ಆ ಶರಣ ಧರ್ಮದ ಸಾರ ಈ ಎರಡು ವಚನಗಳಲ್ಲಿದೆ;

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯ ಬೇಡ ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ
ಮತ್ತು
ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳಲ್ಲಿ
ದಯವೇ ಧರ್ಮದ ಮೂಲವಯ್ಯಾ
ಕೂಡಲ ಸಂಗಯ್ಯ ಅಂತಲ್ಲದೊಲ್ಲನಯ್ಯಾ!

ಉಚ್ಚ ಕುಲದವರು ಎಂದು ಹೇಳಿಕೊಂಡು ಕೆಲವರು ಪ್ರಾಣಿ ಬಲಿಯನ್ನು ಕೊಡುತ್ತಿದ್ದರು. ಯಾವ ಧರ್ಮವಾದರೇನು ದಯವೇ ಧರ್ಮದ ಮೂಲವೆಂಬುದನ್ನು ಅವರು ಮರೆತ್ತಿದ್ದರು. ಉತ್ತರ ಭಾರತದಲ್ಲಿ ಪ್ರಾಣಿಹತ್ಯೆ ಮಾಡುವವರನ್ನು ನೋಡಿ, ಒಂದು ಕಡೆ ಉಪಾಸನೆ ಇನ್ನೊಂದು ಕಡೆ ಪ್ರಾಣಿಹತ್ಯೆ, ಹೀಗಾದರೆ ದೇವರು ಹೇಗೆ ಸಂತುಷ್ಟನಾಗುತ್ತಾನೆ? ಎಂದು ಕಬೀರರು ತಿಳಿಹೇಳಿದರು.

ಅಂದಿನ ಸಮಾಜದಲ್ಲಿ ವಿದ್ಯೆಯು ಕೇವಲ ಉಚ್ಚವರ್ಣೀಯರ ಸ್ವತ್ತಾಗಿತ್ತು. ಕೆಳಜಾತಿಯ

ಜನರು ವಿದ್ಯೆಯಿಂದ ವಂಚಿತರಾಗಿ ಸದಾ ಅಜ್ಞಾನದಲ್ಲಿ ಜೀವನವನ್ನು ಕಳೆಯುತ್ತಿದ್ದರು. ಮತ್ತು ಪಂಡಿತೋತ್ತಮರು ತಾವು ಪಡೆದ ವಿದ್ಯೆಯಿಂದ ಅಹಂಕಾರದಿಂದ ಮೆರೆಯುತ್ತಿದ್ದರು.

"ಪೋಥಿ ಫಡ ಪಢ ಜಗಮು, ಪಂಡಿತ ಭಯಾನ ಕೋಯೀ।
ಢಾಯಿ ಅಚ್ಚರ ಪ್ರೇಮ ತಾ ಪಢೈಸೋ ಪಂಡಿತ ಹೋಯೀ" ॥

ಗ್ರಂಥಗಳನ್ನು ಓದಿ ಓದಿ ಜಗತ್ತು ಸತ್ತಿದೆ. ಎಂದರೆ ಜಗತ್ತು ಪಾಂಡಿತ್ಯದ ಅಹಂಕಾರದಿಂದ ಜಡವಾಗಿ ಹೋಗಿದೆ. ಆದರೆ ಒಬ್ಬನೂ ಪಂಡಿತನಾಗಲಿಲ್ಲ. 'ಪ್ರೇಮ'ವೆಂಬ ಎರಡುವರೆ ಅಕ್ಷರವನ್ನು ಕಲಿತರೆ ಮಾತ್ರ ಪಂಡಿತನಾಗಲು ಸಾಧ್ಯ. ವೇದ, ಕುರಾನ, ಶಾಸ್ತ್ರ, ಜಪ, ತಪ, ಮೂರ್ತಿಪೂಜೆ ಎಲ್ಲವುಗಳು ಈ ಪ್ರೇಮ ಎಂದರೆ ಭಗವದ್ ಭಕ್ತಿ ಇಲ್ಲದೆ ನಿರರ್ಥಕವಾಗುತ್ತದೆ. ಆದ್ದರಿಂದಲೇ ಭಗವದ್‌ಭಕ್ತಿಯು ಸರ್ವಶ್ರೇಷ್ಟವಾದದ್ದು ಎಂದು ಕಬೀರದಾಸರು ಹೇಳಿದರು.

"ಜಾ ಘಟ ಪ್ರೇಮನ ಸಂಚರೈ, ಸೋ ಘಟ ಜಾನ್ ಮಸಾನ್।
ಜೈಸ ಬಾಲ ಲೋಹಾರ ಕೀ ಸಾಂಸ್ ಲೇತ ಬಿನು ಪ್ರಾನ್" ॥

ಯಾರ ಹೃದಯದಲ್ಲಿ ಪ್ರೇಮವಿರುವುದಿಲ್ಲವೋ ಅದು ಜೀವಂತವಾಗಿದ್ದರೂ ಸಹ ಸ್ಮಶಾನದಂತಿರುತ್ತದೆ. ಕಲಾಯಿ ಕೆಲಸ ಮಾಡುವವನ ಚರ್ಮದ ಚೀಲದಂತೆ ನಿರ್ಜೀವವಾಗಿದ್ದರೂ ಸಹ ಶ್ವಾಸ ತೆಗೆದುಕೊಳ್ಳುತ್ತಿರುತ್ತದೆ ಎಂದೂ ಹೇಳಿರುವರು.

ಬಸವೇಶ್ವರರು : ನೂರನೋದಿ ನೂರ ಕೇಳಿದರೇನು?
ಆಸೆ ಹರಿಯದು ರೋಷ ಬಿಡದು
ಮಜ್ಜನಕ್ಕೆರದು ಫಲವೇನು?
ಮಾತಿನಂತೆ ಮನವಿಲ್ಲದ ಜಾತಿ
ಡೊಂಬರ ನೋಡಿ ನಗುವ ನಮ್ಮ
ಕೂಡಲಸಂಗಮದೇವ

ಎಂದರು. ನಾದ ಪ್ರಿಯನಲ್ಲ ವೇದ ಪ್ರಿಯನಲ್ಲ ಭಕ್ತಿಪ್ರಿಯ ನಮ್ಮ ಕೂಡಲ ಸಂಗಮದೇವಾ ಎಂದರು. ಭಕ್ತಿಯಾಗಲಿ ಸುಗುಣಗಳಾಗಲಿ ಶಾಸ್ತ್ರಾಭ್ಯಾಸದಿಂದ ಬರುವುದಿಲ್ಲ. ಭಕ್ತಿ ಇಲ್ಲದೆ ಬೇರೆ ಏನನ್ನು ಅಭ್ಯಾಸ ಮಾಡಿದರೂ ಪ್ರಯೋಜನವಿಲ್ಲ ಎಂದರು.

ಭಗವದ್ ಭಕ್ತಿಯೇ ಸರ್ವಶ್ರೇಷ್ಠವೆಂದು ಹೇಳಿದ ಮೇಲೆ ಆ ದಾರಿಯಲ್ಲಿ ಬಹುದೊಡ್ಡ ಕಂಟಕಪ್ರಾಯವಾಗಿ ಬರುವ ಅಹಂಕಾರದ ಬಗ್ಗೆಯೂ ಜನರನ್ನು ಎಚ್ಚರಿಸಿದ್ದಾರೆ.

"ಜಬ ಮೈ ಪಾ ತಬಗುರು ಸಂಹಿ
ಜಬ ಗುರು ಹೈ ತಬ ಮೈ ನಹಿ।
ಪ್ರೇಮ ಗಲಿ ಅತಿ ಸಾಂಕರಿ ತಾಮ್ಮೈ ದೋ
ನ ಸಮಾಹಿ ॥

ಕಬೀರರ ಈ ವಾಣಿ ಬಹುಸುಂದರವಾಗಿ ಮೂಡಿಬಂದಿದೆ. ನಾನಿದ್ದಾಗ ಅಂದರೆ ಅಹಂಕಾರವಿದ್ದಾಗ ಗುರು ಅಂದರೆ ಪರಮಾತ್ಮನಿರಲಿಲ್ಲ, ಯಾವಾಗ ನನ್ನಲ್ಲಿ ಪರಮಾತ್ಮನಿದ್ದನೋ ಆಗ ನಾನಿರಲಿಲ್ಲ. ಎಂದರೆ ಅಹಂಕಾರವಿದ್ದಲ್ಲಿ ದೇವರಿರುವುದಿಲ್ಲ ಮತ್ತು ದೇವರಿದ್ದಲ್ಲಿ ಅಹಂಕಾರವಿರುವುದಿಲ್ಲ. ಲಿಂಗಪತಿ ಶರಣಸತಿ ಎಂಬಂತೆಯೇ ಕಬೀರರೂ ಸಹ ಜೀವಸತಿ ಪರಮಾತ್ಮಪತಿ ಎಂದು ನಂಬಿದರು. ಜೀವ ಭಗವತ್ ಪ್ರೇಮ ಅಥವಾ ಭಗವದ್ ಭಕ್ತಿ ಎಂಬ ಮಾರ್ಗದಿಂದ ದೇವನನ್ನು ಪಡೆಯುತ್ತದೆ. ಈ ಮಾರ್ಗ ಅತ್ಯಂತ ಇಕ್ಕಟ್ಟಿನದಾಗಿದೆ.

ಇಲ್ಲಿ ಕೇವಲ ಪ್ರೇಮ ಮಾತ್ರ ಹಿಡಿಸುತ್ತದೆ. ಅಹಂಕಾರಕ್ಕೆ ಇಲ್ಲಿ ಸ್ಥಳವೇ ಇಲ್ಲ. ತಾನು ತನ್ನವರೆಂಬ ಭಾವನೆ ಭಕ್ತನಲ್ಲಿರುವವರೆಗೆ ಅವನ ಹೃದಯವು (ದೇವರ) ವಾಸಕ್ಕೆ ಯೋಗ್ಯವಾಗಿರುವುದಿಲ್ಲ. ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ ಎಂದು ಬಸವೇಶ್ವರರು ಹೇಳಿದ್ದಾರೆ. ಅಹಂಕಾರ ರಹಿತವಾದ ಭಕ್ತನ ಭಕ್ತಿಗೆ ಮೆಚ್ಚಿ ದೇವರು ಬೇಡಿದ್ದನ್ನು ಕೊಡಲು ಸಿದ್ಧವಾಗುತ್ತಾನೆ. ಆದರೆ ಆಗ ಭಕ್ತನು ಬ್ರಹ್ಮಪದವಿಯನೊಲ್ಲ ವಿಷ್ಣುಪದವಿಯನೊಲ್ಲ, ರುದ್ರಪದವಿಯನೊಲ್ಲ ಯಾವ ಪದವಿಯನ್ನೂ ಒಲ್ಲ. ಕೂಡಲಸಂಗಮ ದೇವರ ಪಾದವನರಿದಿಪ್ಪ ಮಹಾ ಪದವಿ ಮಾತ್ರ ಕೇಳುತ್ತಾನೆ. ಅದೇ ರೀತಿಯಾಗಿ ಕಬೀರದಾಸರು;

"ಸರಗ ಲೋಕನ ವಾಂಛಿಯೆ....
.... ಮನಹು ನ ಕೀಜೈ ಝೂಕೀ ಆಸ"।

ನನಗೆ ಸ್ವರ್ಗದ ಆಸೆ ಇಲ್ಲ. ನರಕದ ಭಯವಿಲ್ಲ, ಮಿಥ್ಯಾ ಆಸೆಯನ್ನು ನಾನು ಮಾಡುವವನಲ್ಲ ಎಂದು ಹೇಳುತ್ತಾರೆ. ಭಕ್ತಿಯ ಕೊನೆಯ ಹಂತದಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ದೇವರಿಗೆ ಅರ್ಪಿಸಿಕೊಳ್ಳುತ್ತಾರೆ. "ನಾನು ನಿನಗೆ ಶರಣು ಬಂದಿದ್ದೇನೆ. ಬೇರೆ ಯಾವ ದೇವರು ನನಗೆ ಗೊತ್ತಿಲ್ಲ" ಎನ್ನುತ್ತಾರೆ. ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡ ಬಳಿಕ ಅಲ್ಲಿ ಭೇದಭಾವವಿರುವುದಿಲ್ಲ.

"ಮಾಡುವಾತ ನಾನಲ್ಲಯ್ಯ ನೀಡುವಾತ ನಾನಲ್ಲಯ್ಯ
ನಿನಗೆ ನೀನೇ ಮಾಡಿಕೋ" ಎಂದು ಬಸವೇಶ್ವರರೂ
ಮೇರಾ ಮುಝುವೆ ಕುಛ ನಂಹಿ, ಜೋ ಕುಛ ಹೈ ಸೋ ತೇರಾ"

ಎಂದರೆ "ನನ್ನದಾಗಿ ನನ್ನ ಹತ್ತಿರ ಏನೂ ಇಲ್ಲ. ನನ್ನ ಹತ್ತಿರ ಇರುವುದೆಲ್ಲ ನಿನ್ನದೆ" ಎಂದು ಕಬೀರದಾಸರು ಹೇಳುತ್ತಾರೆ.

ಈ ರೀತಿಯಾಗಿ ಕಬೀರದಾಸರು ಮತ್ತು ಬಸವೇಶ್ವರರು ಕೇವಲ ತಮ್ಮ ವಚನಗಳ ಮೂಲಕ ಮಾತ್ರವಲ್ಲದೆ ತಮ್ಮ ಜೀವನದಿಂದಲೂ ಸಮಾಜಕ್ಕೆ ಆದರ್ಶಪ್ರಾಯರಾದರು. ವೇಷಧಾರಿಗಳಿಗೆ ತಮ್ಮ ಪ್ರಚಂಡ ರೂಪವನ್ನು ತೋರಿ ಸ್ವತಃ ಹೃದಯ ಪರಿಶುದ್ಧತೆಯ ಮಾರ್ಗವನ್ನು ತೋರಿದರು. ಕಬೀರದಾಸರು ಜನ್ಮದಿಂದ ಅಪಹಾಸ್ಯಕ್ಕೀಡಾಗಿ ಕರ್ಮದಿಂದ ವಂದನೀಯರಾದರು. ಬಸವೇಶ್ವರರು ಉಚ್ಚ ಜಾತಿಯಲ್ಲಿ ಜನ್ಮತಾಳಿಯೂ ಅದನ್ನು ತೊರೆದು ಸಾಮಾನ್ಯನಿಗೂ ಮರ್ಯಾದೆ ದೊರೆಯುವಂತೆ ಮಾಡಿದರು. ತಮ್ಮ ಉಚ್ಚ ಆದರ್ಶಮಯ ಜೀವನದಿಂದ ಜನರ ಮನದ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ ಈ ಇಬ್ಬರೂ ಮಹಾ ಪುರುಷರು ನಮ್ಮೆಲ್ಲರಿಗೂ ಪೂಜ್ಯರಾಗಿದ್ದಾರೆ.

ಆಧಾರ ಗ್ರಂಥಗಳು

'ಕಬೀರ ಲೇ: ಹಜಾರಿ ಪ್ರಸಾದ ದ್ವಿವೇದಿ, ಕಬೀರವಾಣಿ – ಲೇ: ಸರನಾಮಸಿಂಹ ಶರ್ಮ, ಬಸವಣ್ಣನವರ ವಚನಗಳು –ಸಂ. ಡಾ. ಆರ್.ಸಿ. ಹೀರೇಮಠ

❐

ಬಸವಣ್ಣ ಮತ್ತು ಸರ್ವಜ್ಞ

●

ಡಾ. ಮುನಿಯಪ್ಪ

ಬಸವಣ್ಣನ ವಚನಗಳಲ್ಲಿ ಮತ್ತು ಸರ್ವಜ್ಞನ ವಚನಗಳಲ್ಲಿ ಮನುಷ್ಯನ ವೈಯಕ್ತಿಕ ನೆಲೆ ಹಾಗೂ ಸಾಮಾಜಿಕ ನೆಲೆಗೆ ಸಂಬಂಧಿಸಿದಂತೆ, ಅನೇಕ ಪ್ರಗತಿಪರ ನಿಲುವುಗಳನ್ನು ಗುರುತಿಸಬಹುದು. ಚಾರಿತ್ರಕವಾಗಿ ಕಾಲದ ದೃಷ್ಟಿಯಿಂದ ಬಸವಣ್ಣ ಮತ್ತು ಸರ್ವಜ್ಞ ಇವರುಗಳ ನಡುವಿನ ಅಂತರ ಸುಮಾರು ಮುನ್ನೂರು ವರ್ಷಗಳಷ್ಟಿದ್ದರೂ, ಅವರು ಪ್ರತಿಪಾದಿಸಿದ ಸಮಾಜಮುಖಿ ಮಾನವೀಯ ಮೌಲ್ಯಗಳು ತುಂಬ ಮಹತ್ವವಾದವುಗಳು, ಸಮಾಜಕ್ಕೆ ಯಾವಾಗಲೂ ಪ್ರಸ್ತುತವಾಗುವಂತಹವುಗಳು. ಜೊತೆಗೆ ಇವರು ಸಮಾಜದ ಪರಿವರ್ತನೆ ಅಥವಾ ಬದಲಾವಣೆಯನ್ನು ತಮ್ಮ ಪರಿವರ್ತನೆಯೊಂದಿಗೆ ಬಯಸಿದವರು. ಆ ಮೂಲಕ ಹೊಸ ಸಮಾಜವೊಂದರ ನಿರ್ಮಾಣಕ್ಕೆ ಪ್ರಯತ್ನಿಸಿದವರು. ಬಸವಣ್ಣನವರಂತು ಈ ದೃಷ್ಟಿಯಿಂದ ಹೆಚ್ಚು ಪ್ರಮುಖರಾಗುತ್ತಾರೆ. ಬಿಜ್ಜಳನ ಮಂತ್ರಿಯಾಗಿ ಅಂತರ್ ಜಾತಿಯ ವಿವಾಹದ ಮೂಲಕ ಸಮಾನತೆ ತರಲು ಪ್ರಯತ್ನಿಸಿದ್ದು ಹಾಗೂ ನಂತರದ ವಿದ್ಯಮಾನಗಳನ್ನು ನೋಡಿದರೆ, ಬಸವಣ್ಣ ಹನ್ನೆರಡನೆಯ ಶತಮಾನದಲ್ಲಿಯೇ ಕ್ರಾಂತಿಯನ್ನು ಉಂಟು ಮಾಡಿದ ಹರಿಕಾರ. ಹಾಗೆ ಕ್ರಾಂತಿಯ ಸಫಲತೆ ಮತ್ತು ವಿಫಲತೆಗಳಿಗಿಂತ ಮುಖ್ಯವಾಗಿ ಸಮಾಜದ ಪರಿವರ್ತನೆಗೆ ಪ್ರಯತ್ನಿಸಿರುವಂತಹದು ಶ್ಲಾಘನೀಯವಾದದ್ದು. ಜನಪದರ ಸರಳವಾದ ಆಡುಭಾಷೆಯ ಮೂಲಕ ವಚನಗಳನ್ನು ರಚಿಸಿ, ಸಾಮಾನ್ಯ ಜನರ ಹೃದಯವನ್ನು ಪರಿವರ್ತನೆ ಮಾಡಲು ವಚನ ಸಾಹಿತ್ಯಕ್ಕೆ ಬಸವಣ್ಣನವರು ಕೊಟ್ಟಂತಹ ಕೊಡುಗೆಯು ತುಂಬ ಅಮೂಲ್ಯವಾದದ್ದು.

ಅದೇ ರೀತಿಯಲ್ಲಿ ಸರ್ವಜ್ಞ ತ್ರಿಪದಿಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು ವಿಡಂಬನೆ ಮಾಡಿದವರು. ಆ ಮೂಲಕ ಬಸವಣ್ಣ ಹಾಗೂ ಸರ್ವಜ್ಞ ವೈಯಕ್ತಿಕ ನೆಲೆಯೊಂದಿಗೆ ಸಮಾಜದ ಪರಿವರ್ತನೆಗೆ ಪ್ರಯತ್ನಿಸಿ, ಚಲನಶೀಲ ಸಮಾಜವೊಂದನ್ನು ಕಟ್ಟಲು ಕನಸು ಕಂಡಂತಹವರು. ಆದ್ದರಿಂದ ಬಸವಣ್ಣ ಹಾಗೂ ಸರ್ವಜ್ಞರ ವಿಚಾರಗಳಲ್ಲಿ ವೈಚಾರಿಕ ಮತ್ತು ಪ್ರಗತಿಪರವಾದ ಆಶಯಗಳನ್ನು ಸಾಮ್ಯತೆಯ ನೆಲೆಯಲ್ಲಿ ಗುರುತಿಸಬಹುದಾಗಿದೆ. ಇವರು ಜಾತಿಗಿಂತ ಮುಖ್ಯವಾಗಿ ಮನುಷ್ಯನ ಗುಣಗಳಿಗೆ ಹಾಗೂ ಮೌಲ್ಯಗಳಿಗೆ ಕೊಟ್ಟಂತಹ ಪ್ರಾಮುಖ್ಯತೆಯನ್ನು ಗಮನಿಸುವುದಾಗಿದೆ.

ಬಸವಣ್ಣನವರು ಬಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಕ್ರಿ.ಶ. ಸುಮಾರು ೧೧೩೧ರಲ್ಲಿ ಮಾದರಸ ಮತ್ತು ಮಾದಲಾಂಬಿಕೆಯರ ಮಗನಾಗಿ ಜನಿಸಿದರು. ಬಿಜ್ಜಳನ ಭಂಡಾರಿಯಾಗಿಯು ಕಾರ್ಯನಿರ್ವಹಿಸಿದ ಬಸವಣ್ಣನವರು ಸುಮಾರು ಒಂದು ಸಾವಿರಕ್ಕೂ ಹೆಚ್ಚಿನ ವಚನಗಳನ್ನು ರಚಿಸಿದರು. 'ಕೂಡಲಸಂಗಮದೇವ' ಎನ್ನುವ ಅಂಕಿತದಲ್ಲಿ ವಚನಗಳನ್ನು ರಚಿಸಿದಂತಹ ಬಸವಣ್ಣ ಮನುಷ್ಯನ ಯೋಗ್ಯತೆಯನ್ನು ಹುಟ್ಟಿನಿಂದ ನಿರ್ಧರಿಸುವುದಕ್ಕೆ ಬದಲಾಗಿ, ಅವನ ಗುಣ–ನಡತೆಯಿಂದ ನಿರ್ಧರಿಸಬೇಕು ಎಂದು ಪ್ರಸ್ತುತಪಡಿಸಿದವರು. ಬಸವಣ್ಣನವರ ವಚನಗಳು ಅನೇಕ ನೆಲೆಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಹನ್ನೆರಡನೆಯ ಶತಮಾನದ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಜೀವನದ ಚಿತ್ರಣವನ್ನು ಬಸವಣ್ಣನವರ ವಚನಗಳು ಕಟ್ಟಿಕೊಡುತ್ತವೆ. ಬಸವಣ್ಣನವರ ಮೂಲ ಆಶಯವೆಂದರೆ ಸರ್ವಸಮಾನತೆಯ ಸಮಾಜವೊಂದನ್ನು ಕಟ್ಟುವುದು.

ಇವರ ಅನೇಕ ವಚನಗಳು ಮನುಷ್ಯನ ವೈಯಕ್ತಿಕ, ವೈಚಾರಿಕ ಹಾಗೂ ಆಧ್ಯಾತ್ಮಿಕ ಪ್ರಗತಿಗೆ ಸಂಬಂಧಿಸಿದಂತೆ ಪ್ರಮುಖವಾಗುತ್ತವೆ. ಒಟ್ಟಿನಲ್ಲಿ ಬಸವಣ್ಣನವರು ತಮ್ಮ ಹಾಗೂ ವಚನಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಟ್ಟದಲ್ಲಿ ಅನನ್ಯತೆಯನ್ನು ತಂದುಕೊಟ್ಟಂತಹವರು. ತಮ್ಮ ವಚನಗಳಲ್ಲಿನ ಮೌಲ್ಯಗಳು ಪ್ರಸ್ತುತ ಸಮಾಜಕ್ಕೂ ಮುಖ್ಯವಾಗುವಂತಹುಗಳು.

ಸರ್ವಜ್ಞ ಧಾರವಾಡ ಜಿಲ್ಲೆಯ ಮಾಸೂರು ಎಂಬ ಗ್ರಾಮದವರು. ಸರ್ವಜ್ಞನ ಕಾಲ ಮತ್ತು ತಂದೆ–ತಾಯಿಗಳ ಬಗ್ಗೆ ವಿದ್ವಾಂಸರಲ್ಲಿ ಒಮ್ಮತವಾದ ಅಭಿಪ್ರಾಯವಿಲ್ಲ. ಮಹಲಿಂಗದೇವ ಕವಿಯು ೧೫೩೦ ಎಂದು ತನ್ನ 'ಗುರುಬೋಧಾಮೃತ' ಕಾವ್ಯದಲ್ಲಿ ಸರ್ವಜ್ಞನನ್ನು ಸ್ಮರಿಸಿಕೊಂಡಿದ್ದಾನೆ. ತಂದೆ ಬಸವರಸ (ಬ್ರಾಹ್ಮಣ) ತಾಯಿ ಕುಂಬಾರ ಜಾತಿಯ ಮಾಳಿ ಎನ್ನುವ ಅಭಿಪ್ರಾಯವಿದೆ. ಸರ್ವಜ್ಞ ಮತ್ತು ಬಸವಣ್ಣನವರ ಕಾಲ ಅಥವಾ ತಂದೆ–ತಾಯಿಗಳ ಮಾಹಿತಿಗಿಂತ ಮುಖ್ಯವಾಗಿ ಅವರ ವಿಚಾರಗಳು ಸಮಾಜಕ್ಕೆ ಎಷ್ಟು ಮುಖ್ಯ ಎನ್ನುವ ನೆಲೆಯಲ್ಲಿ ಇಬ್ಬರು ತುಂಬ ಮುಖ್ಯವಾಗುತ್ತಾರೆ ಎಂದು ಹೇಳಬಹುದು. ಸರ್ವಜ್ಞ ಎಂಬ ಅಂಕಿತದ ಮೂಲಕ ತ್ರಿಪದಿಗಳನ್ನು ರಚಿಸಿದರೂ, ಅವುಗಳು ಸರ್ವಜ್ಞನ ವಚನಗಳು ಎಂದೇ ಮಹತ್ವವನ್ನು ಪಡೆದುಕೊಂಡಿವೆ. ಸರ್ವಜ್ಞ ಹೇಗೆ ಆದ ಎನ್ನುವುದನ್ನು ಸ್ವತಃ ಸರ್ವಜ್ಞ ಹೇಳಿಕೊಂಡಿರುವ ಈ ವಚನವು ಹೆಚ್ಚು ಅರ್ಥಪೂರ್ಣವಾಗಿದೆ.

> **"ಸರ್ವಜ್ಞನೆಂಬುವನು ಗರ್ವದಿಂದಾವನೆ?**
> **ಸರ್ವರೊಳಗೊಂದೊಂದು ನುಡಿಯಗಲಿತು ವಿದ್ಯೆಯ**
> **ಪರ್ವತವೇ ಆದ ಸರ್ವಜ್ಞ..."**

ಎನ್ನುವ ವಚನದಲ್ಲಿ ಅವನಲ್ಲಿಯ ಪಾಂಡಿತ್ಯ, ಸಮಾಜವನ್ನು ಕುರಿತು ತನಗಿದ್ದಂತಹ ಅನುಭವದ ಸ್ಪಷ್ಟತೆಯು ಸಿಗುತ್ತದೆ.

ಬಸವಣ್ಣ ಮತ್ತು ಸರ್ವಜ್ಞ ಕವಿಯು ವೈಯಕ್ತಿಕ ಅನುಭವದ ನೆಲೆ ಮತ್ತು ಸಾಮಾಜಿಕ ನೆಲೆಗಳನ್ನು ಮುಖ್ಯವಾಗಿಸಿಕೊಂಡು ತಮ್ಮ ಚಿಂತನೆಗಳನ್ನು ವಚನಗಳ ಮೂಲಕ ಕಟ್ಟಿಕೊಟ್ಟವರು. ಇವರ ಚಿಂತನೆಗಳು ಸಮಾಜವನ್ನು ತಮ್ಮ ಸ್ವಂತ ಅನುಭವದಲ್ಲಿ ನೋಡಿದ ವಿಚಾರಗಳಾದ್ದರಿಂದ ಹೆಚ್ಚು ಪ್ರಸ್ತುತವಾಗುತ್ತವೆ. ಆದ್ದರಿಂದ ಇವರ ವಿಚಾರಗಳು ಒಂದು

ರೀತಿಯಲ್ಲಿ ಸಮಾಜದ ಪ್ರತಿಬಿಂಬಗಳೇ ಆಗಿವೆ. ಬಸವಣ್ಣನವರು ಕೌಟುಂಬಿಕ ನೆಲೆಯಲ್ಲಿ ನಿಂತು ಸಮಾಜವನ್ನು ಅವಲೋಕಿಸಿ, ತನ್ನ ಪರಿವರ್ತನೆಯೊಂದಿಗೆ ಸಮಾಜದ ಪರಿವರ್ತನೆಗೆ ನಾಂದಿಯನ್ನು ಹಾಡಿದವರು. ಸರ್ವಜ್ಞ ವಿರಕ್ತಿಯಾಗಿ ಅಥವಾ ವೈರಾಗ್ಯ ಮೂರ್ತಿಯಾಗಿ ಸಮಾಜವನ್ನು ವಿಡಂಬನೆ ಮಾಡಿದವರು. ಇಬ್ಬರ ವಚನಗಳು ಸಾಮಾನ್ಯ ವ್ಯಕ್ತಿಗೂ ಕೂಡ ಸರಳವಾಗಿ, ಸುಲಭವಾಗಿ ಅರ್ಥವಾಗುವಂತಿದ್ದು ಅವರನ್ನು ಚಿಂತನ-ಮಂಥನಗಳಿಗೆ ಒಡ್ಡಿಕೊಳ್ಳಲು ಹೆಚ್ಚು ಸಹಾಯಕವಾಗುತ್ತವೆ. ಆ ಮೂಲಕ ಸಮಾಜದ ಅವ್ಯವಸ್ಥೆಯ ಪರಿವರ್ತನೆಗೂ ಹೆಚ್ಚು ನೆರವಾಗುತ್ತವೆ.

ಬಸವಣ್ಣ ಮತ್ತು ಸರ್ವಜ್ಞ ಇವರ ವಚನಗಳಲ್ಲಿ ಸಂಕೀರ್ಣವಾದ ಅಥವಾ ಬಹಳಷ್ಟು ವ್ಯಾಪಕ ವಿಚಾರಗಳನ್ನು ಕೆಲವೇ ಪದಗಳಲ್ಲಿ ಅಡಗಿಸಿಕೊಟ್ಟುಕೊಂಡಿರುವ ಜಾಣ್ಮೆಯನ್ನು ಒಳಗೊಂಡಿದೆ. ಆದ್ದರಿಂದ ಇವುಗಳು ಜನಪದರ ಗಾದೆ ಮಾತುಗಳಿಗೆ ಹತ್ತಿರವಾಗಿರುವಂತೆ ಭಾಸವಾಗುತ್ತದೆ. ಇವರ ವಚನಗಳು ವ್ಯಕ್ತಿಯ ಅಂತರಂಗ-ಬಹಿರಂಗಗಳ ಶುದ್ಧತೆ, ಕುಟುಂಬದ ನೆಲೆಯಲ್ಲಿ ವ್ಯಕ್ತಿಯ ನಡತೆ, ಮನುಷ್ಯನ ಅಂಧಕಾರ, ಅಜ್ಞಾನ, ಜಾತಿಪದ್ಧತಿ, ಅಹಿಂಸೆ, ನೀತಿ, ಜ್ಞಾನ.... ಇತ್ಯಾದಿಗಳನ್ನು ಅವಲೋಕಿಸುತ್ತಲೇ ಸಮಾಜವನ್ನು ವಿಡಂಬಿಸಲಾಗುತ್ತದೆ.

ಸಮಾಜದ ಮಧ್ಯೆ ಜೀವಿಸುವ ವ್ಯಕ್ತಿಗೆ ಮಾತು ಎಷ್ಟು ಮುಖ್ಯವಾಗುತ್ತದೆ ಎನ್ನುವುದನ್ನು ತಿಳಿಸುವ ಬಸವಣ್ಣನವರ ಈ ವಚನ ಎಲ್ಲ ಕಾಲಕ್ಕು ಹೆಚ್ಚು ಪ್ರಸ್ತುತವಾಗುತ್ತದೆ.

"ನುಡಿದರೆ ಮುತ್ತಿನಹಾರದಂತಿರಬೇಕು.
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚು ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮ ದೇವನೆಂತೊಲಿವನಯ್ಯ"

ಇಲ್ಲಿ ಮನುಷ್ಯನಿಗೆ ಮೂಲಭೂತವಾಗಿ ಇತರರೊಂದಿಗೆ ಸಹಕರಿಸಲು ಅಗತ್ಯವಾಗಿ ಬೇಕಾಗಿರುವ ನುಡಿಯ ಹಾಗು ನಡೆಯ ಮಹತ್ವವನ್ನು ವಿವರಿಸಲಾಗಿದೆ. ಇದೇ ಸಂದರ್ಭ ಸರ್ವಜ್ಞನ ಈ ಎರಡು ವಚನಗಳಲ್ಲಿ ಹೀಗೆ ವ್ಯಕ್ತವಾಗಿದೆ;

"ಮಾತು ಮಾತಿಗೆ ಆತು ಮಾತು ಕೋಟಿಗಳುಂಟು
ಮಾತಾಡಿ ಮನಕೆ ಮುನಿಸಕ್ಕು ಮಾತಿನಲಿ
ಸೋತವನೇ ಜಾಣ ಸರ್ವಜ್ಞ"

ಇಲ್ಲಿ ಮಾತಿನಿಂದಲೇ ಅತಿಯಾದ ಮಾತು ಬೆಳೆದು ಮಾತಿಗೆ ಮಾತು ಸೇರಿ ಬಹಳವಾಗುತ್ತದೆ. ಇಂತಹ ಬಹಳವಾದ ಮಾತಿನಿಂದಲೇ ಮನಸ್ಸು ನೋಯುತ್ತದೆ. ಆದರೂ ಹೀಗೆ ಮಾತಿನಲ್ಲಿ ಸೋತವನೆ ಜಾಣನಾಗುತ್ತಾನೆ ಎಂದು ಮೇಲಿನ ವಚನದಲ್ಲಿ ಹೇಳಿದರೆ, ಈ ವಚನದಲ್ಲಿ ಹೀಗೆ ಹೇಳುವರು;

"ಮಾತಿನಿಂ ನಗೆ ನುಡಿಯು ಮಾತಿನಿಂ ಹಗೆ ಹೊಲೆಯು
ಮಾತಿನಿಂ ಸರ್ವಸಂಪದವು ಲೋಕಕ್ಕೆ
ಮಾತೆ ಮಾಣಿಕವು ಸರ್ವಜ್ಞ

ಇದು ಬಸವಣ್ಣನವರ 'ನುಡಿದರೆ ಮುತ್ತಿನ ಹಾರದಂತಿರಬೇಕು" ಎನ್ನುವ ವಚನಕ್ಕೆ ಹೆಚ್ಚು ಹತ್ತಿರವಾಗುವುದರ ಜೊತೆಗೆ ಮಾತಿನಿಂದ ನಗುವು, ಸಂತೋಷ ಉಂಟಾದಂತೆ, ಮಾತಿನಿಂದಲೇ ದ್ವೇಷ, ವೈರತ್ವ ಹುಟ್ಟಿಕೊಳ್ಳಲು ಕಾರಣವಾಗುತ್ತದೆ. ಸರ್ವಸಂಪತ್ತು ಮಾತಿನಿಂದಲೇ ಉಂಟಾಗುವುದು. ಆದ್ದರಿಂದ ಮಾತು ಮನುಷ್ಯನಿಗೆ ಮಾಣಿಕ್ಯದಂತೆ ಶ್ರೇಷ್ಠವಾಗಿರಬೇಕು.

ಭಕ್ತಿಯ ನೆಲೆಯನ್ನು ಕುರಿತು ಬಸವಣ್ಣ ವ್ಯಕ್ತಿಯ ಅಂತರಂಗದ ನೆಲೆಯಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ನೀಡುವರು. ಹಾಗೆ ಬಡವ ಮತ್ತು ಶ್ರೀಮಂತರ ನಡುವಿನ ಭಕ್ತಿಯ ಸಂದರ್ಭಕ್ಕೆ ಈ ವಚನ ಉತ್ತಮ ನಿದರ್ಶನ;

"ಉಳ್ಳವರು ಶಿವಾಲಯ ಮಾಡುವರು
ನಾನೇನ ಮಾಡಲಯ್ಯ ಬಡವನು
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರವೇ ಹೊನ್ನ ಕಳಸವಯ್ಯ
ಕೂಡಲಸಂಗಮದೇವ ಕೇಳಯ್ಯ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ"

ಎಂಬ ಈ ವಚನವು ವ್ಯಕ್ತಿಯ ಅಂತರಂಗ ಶುದ್ಧತೆಯ ನೆಲೆಯಲ್ಲಿ ಹೆಚ್ಚು ಮುಖ್ಯವಾಗುವುದರ ಜೊತೆಗೆ ವೈಚಾರಿಕ ನೆಲೆಯಲ್ಲಿಯೂ ಮುಖ್ಯವಾಗುತ್ತದೆ. ಹಾಗೆ ಸ್ಥಾವರ ಮತ್ತು ಜಂಗಮದ ಮಹತ್ವವನ್ನು ತಿಳಿಸಿಕೊಡುತ್ತದೆ. ಇಂತಹ ಭಕ್ತಿಯ ಸಂದರ್ಭವನ್ನು ಸರ್ವಜ್ಞ ಈ ವಚನದಲ್ಲಿ ಹೀಗೆ ಗುರುತಿಸಬಹುದು;

"ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು?
ಎತ್ತು ಗಾಣವನು ಹೊತ್ತು ತಾ ನಿತ್ಯದಿ
ಸುತ್ತಿ ಬಂದಂತೆ ಸರ್ವಜ್ಞ"

ಈ ವಚನವು ಮನುಷ್ಯನ ಮನಸ್ಸು ಶಿವನಲ್ಲಿರದೆ, ಗುಡಿಯನ್ನು ಅನೇಕ ಬಾರಿ ಸುತ್ತಿದರೆ ಗಾಣವನ್ನು ಹೊತ್ತು ಸಾಗುವ ಎತ್ತಿನಂತೆ. ಇಡೀ ದಿನವು ಸುತ್ತಿದರೆ ವ್ಯರ್ಥವಾಗುವುದು ಎನ್ನುವುದನ್ನು ತಿಳಿಸುವುದು.

ಸಮಾಜದಲ್ಲಿ ಶ್ರೀಮಂತಿಕೆಯ ಸೊಕ್ಕು ಹಿಡಿದಿರುವ ವರ್ಗವನ್ನು ವಿಡಂಬನೆ ಮಾಡುವುದನ್ನು ಬಸವಣ್ಣನವರ ಈ ವಚನದಲ್ಲಿ ಕಾಣಬಹುದಾಗಿದೆ. ಹಾಗೆ ಇಲ್ಲಿ ಮನುಷ್ಯನಿಗೆ ಬಡತನವಿದ್ದಾಗ ಶ್ರೀಮಂತರು ಅವನನ್ನು ನೋಡುವ ಕ್ರಮ ಹಾಗೂ ಬಡತನ ತೊಲಗಿದ ನಂತರ ಅವನನ್ನು ನೋಡುವ ಕ್ರಮವನ್ನು ಅರ್ಥಪೂರ್ಣವಾಗಿ ವಿಡಂಬಿಸಲಾಗಿದೆ;

"ಹಾವು ತಿಂದವರ ನುಡಿಸಬಹುದು
ಗರ ಹೊಡೆದವರ ನುಡಿಸಬಹುದು
ಸಿರಿಗರ ಹೊಡೆದವರ ನುಡಿಸಲುಬಾರದು ನೋಡಯ್ಯ
ಬಡತನವೆಂಬ ಮಂತ್ರವಾದಿ ಹೋಗಲು ಒಡನೆ ನುಡಿಯುವರು
ಕೂಡಲ ಸಂಗಮದೇವ."

ಶ್ರೀಮಂತಿಕೆ ಎಂಬುದು ಸಮಾಜದಲ್ಲಿ ಮನುಷ್ಯರ ಮಧ್ಯೆ ತಾರತಮ್ಯ ಉಂಟು ಮಾಡಲು ಕಾರಣವಾಗುವುದು. ಸರ್ವಜ್ಞನ ವಚನದಲ್ಲಿ ಬಡತನವೆಂಬುದು ಮನುಷ್ಯನಿಗೆ ಎಷ್ಟು ಕ್ರೂರವಾಗಿರುತ್ತದೆ ಎನ್ನುವುದನ್ನು ಗುರುತಿಸಬಹುದಾಗಿದೆ;

"ಬಡವ ಬಟ್ಟೆಯ ಹೋಗಲೊಡನೆ ಸಂದೇಹವೇಕೆ
ಬಡತನವೆಂಬ ಹುಲಿಗೂಡಿ ಬರುವಾಗ
ನುಡಿಸುವವರಿಲ್ಲ ಸರ್ವಜ್ಞ"

ಬಡವನು ದಾರಿಯಲ್ಲಿ ಹೋಗುವಾಗ ಅವನ ಸಂಗಡ ಯಾರು ಇರಬೇಕಾಗಿರುವುದಿಲ್ಲ. ಆದರೆ ಅವನ ಸಂಗಡ ಬಡತನವೆಂಬ ಹುಲಿ ಇರುವುದರಿಂದ ಅವನನ್ನು ಯಾರು ಮಾತನಾಡಿಸುವುದಿಲ್ಲ. ಆದ್ದರಿಂದ ಬಡತನವೆಂಬುದು ಮನುಷ್ಯನಿಗೆ ಎಷ್ಟು ಅಪಾಯಕಾರಿ ಯಾಗಿರುತ್ತದೆ ಎನ್ನುವುದನ್ನು ಸರ್ವಜ್ಞ ಈ ವಚನದಲ್ಲಿ ವಿಶ್ಲೇಷಿಸಿರುವನು.

ಮನುಷ್ಯನ ಡಂಭಾಚಾರವನ್ನು ಕುರಿತು ಬಸವಣ್ಣನವರು ಈ ವಚನದಲ್ಲಿ ಅರ್ಥಪೂರ್ಣವಾಗಿ ಹೇಳುವರು. ವ್ಯಕ್ತಿ ಮೊದಲು ತಾನು ಶುದ್ಧನಾಗುವುದರ ಮೂಲಕ ಅಥವಾ ತಾನು ಸರಿಯಾಗಿ ನಡೆದುಕೊಳ್ಳುವುದರ ಮೂಲಕ ಮತ್ತೊಬ್ಬರ ಪರಿವರ್ತನೆಗೆ ಕಾರಣನಾಗಬೇಕು. ಅದನ್ನು ಬಿಟ್ಟು ನೀತಿಯನ್ನು ಇತರರಿಗೆ ಬೋಧನೆ ಮಾಡಿ, ತಾನು ಮಾತ್ರ ಅನೀತಿಯ ಮಾರ್ಗವನ್ನು ಹಿಡಿದರೆ ಏನು ಪ್ರಯೋಜನ! ಆದ್ದರಿಂದ ಮೊದಲು ತನ್ನ ಪರಿವರ್ತನೆಯೊಂದಿಗೆ, ಸಮಾಜದ ಪರಿವರ್ತನೆ ಮಾಡಬೇಕು ಎಂದು ಈ ವಚನದಲ್ಲಿ ಸ್ಪಷ್ಟಪಡಿಸುವರು;

"ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯವರ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ"

ಎಂದು ವ್ಯಕ್ತಿಗೆ ತನ್ನ ಸಮಸ್ಯೆಯನ್ನು ಬಗೆ ಹರಿಸಿಕೊಳ್ಳುವದು ಮುಖ್ಯವೇ ಹೊರತು, ಮತ್ತೊಬ್ಬರ ಸಮಸ್ಯೆಯ ಬಗ್ಗೆ ಚಿಂತಿಸುವುದು ಸರಿಯಲ್ಲ ಎಂದು ಹೇಳುವರು. ಇಂತಹದೇ ಸಂದರ್ಭ ಸರ್ವಜ್ಞನ ವಚನದಲ್ಲಿ ಹೀಗೆ ವ್ಯಕ್ತವಾಗಿದೆ;

"ಕೊಂದು ಮಾಡುವ ಧರ್ಮದಂದವನು ಅನೊರೆವೆ
ಗಂಧದ ಮರದ ನೆರೆಸುಟ್ಟು ಇದ್ದಿಲನು
ತಂದು ಬಡಿದಂತೆ ಸರ್ವಜ್ಞ"

ಎಂದು ಹೋಮಗಳ ಹೆಸರಲ್ಲಿ ಪ್ರಾಣಿಹಿಂಸೆ ಮಾಡುವುದು, ಇದ್ದಿಲಿಗಾಗಿ ಗಂಧದ ಮರವನ್ನು ತಂದು ಸುಟ್ಟಂತೆ ಉತ್ತಮ ಕಾರ್ಯವಾಗಲು ಸಾಧ್ಯವಿಲ್ಲ ಎಂದು, ಮೌಢ್ಯತೆಯಿಂದ ಮಾಡುವ ಹಿಂಸೆ, ಹೋಮ ಮತ್ತು ಯಾಗಗಳನ್ನು ಕುರಿತು ಟೀಕಿಸುವನು.

ಮನುಷ್ಯನ ಅಂತರಂಗ ಬಹಿರಂಗಗಳ ಶುದ್ಧಿಯನ್ನು ಕುರಿತಂತೆ, ಬಸವಣ್ಣನವರ ಅನೇಕ ವಚನಗಳನ್ನು ಗುರುತಿಸಬಹುದಾಗಿದೆ. ಅವುಗಳಲ್ಲಿ ಈ ವಚನ ತುಂಬ ಪ್ರಮುಖವಾದದ್ದು;

"ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ
ಇದೇ ಅಂತರಂಗಶುದ್ಧಿ ಇದೇ ಬಹಿರಂಗಶುದ್ಧಿ
ಇದೇ ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ".

ಈ ವಚನವು ಮನುಷ್ಯನ ಒಟ್ಟು ನಿಷ್ಕಲ್ಮಶ ವ್ಯಕ್ತಿತ್ವಕ್ಕೆ ಕನ್ನಡಿಯನ್ನು ಹಿಡಿಯುತ್ತದೆ. ಒಬ್ಬ ಹಿಂಸಾರಹಿತ ವ್ಯಕ್ತಿಯ ಒಟ್ಟು ನಡವಳಿಕೆಯನ್ನು ಇಲ್ಲಿ ಬಿಂಬಿಸಲಾಗಿದೆ. ಈ ಸಂದರ್ಭವನ್ನು ಸರ್ವಜ್ಞ ತನ್ನ ವಚನದಲ್ಲಿ ಜ್ಞಾನದ ಮೂಲಕ ವಿಶ್ಲೇಷಿಸಿರುವನು;

"ಜ್ಞಾನದಿಂದಲಿ ಇಹವು ಜ್ಞಾನದಿಂದಲಿ ಪರವು
ಜ್ಞಾನವಿಲ್ಲದಿರೆ ಸಕಲವು ತಮಗಿದ್ದು
ಹಾನಿಕಾಣಯ್ಯ ಸರ್ವಜ್ಞ"

ವ್ಯಕ್ತಿ ಜ್ಞಾನದ ಮೂಲಕ ತನ್ನ ಅಜ್ಞಾನ, ಅಂಧಕಾರಗಳನ್ನು ತೊಲಗಿಸಲು ಸಾಧ್ಯ. ಹಾಗೆ ಜ್ಞಾನದಿಂದ ಒಬ್ಬ ಉತ್ತಮ ವ್ಯಕ್ತಿಯಾಗಿ ಸಮಾಜದಲ್ಲಿ ಬದುಕಲು ಸಾಧ್ಯ. ಒಂದು ವೇಳೆ ಜ್ಞಾನವಿಲ್ಲದೆ ತನಗೆ ಸಕಲ ಸಂಪತ್ತುಗಳಿದ್ದರೂ ಅದರಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು.

ಸಮಾಜದಲ್ಲಿ ಶತಶತಮಾನಗಳಿಂದ ಆಚರಣೆಯಲ್ಲಿರುವ ಜಾತಿಪದ್ಧತಿ ಅಥವಾ ಕುಲದ ವಿಚಾರವನ್ನು ಬಸವಣ್ಣನವರು ತಮ್ಮ ಅನೇಕ ವಚನಗಳಲ್ಲಿ ವಿವರಿಸುವರು. ಮನುಷ್ಯನ ಹುಟ್ಟಿನಿಂದ ಜಾತಿಯನ್ನು ನಿರ್ಧರಿಸುವಂತಹದು ತಪ್ಪು. ಮನುಷ್ಯ ಮಾಡುವ ಕೆಲಸದಿಂದಲೇ (ಕೃತ್ಯದಿಂದ) ಜಾತಿ ನಿರ್ಧಾರವಾಗಬೇಕು ಎಂದು ಜಾತಿಪದ್ಧತಿಯನ್ನು ಕುರಿತು ವೈಚಾರಿಕ ನೆಲೆಯಲ್ಲಿ ಮತ್ತು ಪ್ರಗತಿಪರ ನೆಲೆಯಲ್ಲಿ ಬಸವಣ್ಣನವರು ಈ ವಚನದಲ್ಲಿ ಬಹಳ ಅರ್ಥಪೂರ್ಣವಾಗಿ ವಿಶ್ಲೇಷಿಸಿರುವರು;

"ಕೊಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ
ಕುಲವೇನೋ ಅವಂದಿರ ಕುಲವೇನೋ
ಸಕಲ ಜೀವಾತ್ಮರಿಗೆ ಲೇಸನು ಬಯಸುವ
ನಮ್ಮ ಕೂಡಲ ಸಂಗನ ಶರಣರೇ ಕುಲಜರು"

ಜಾತಿಯ ವಿಚಾರದಲ್ಲಿ ಬಸವಣ್ಣನವರಿಗಿದ್ದಂತಹ ನಿಲುವು, ಸರ್ವಜ್ಞನ ವಚನಗಳಲ್ಲಿ ಗುರುತಿಸಬಹುದಾಗಿದೆ. ಇಬ್ಬರು ಜಾತಿರಹಿತ ಸಮಾಜವನ್ನು ಕುರಿತಂತೆ ತಮ್ಮ ಹಲವಾರು ವಚನಗಳಲ್ಲಿ ಹೇಳಿರುವರು. ಜಾತಿಯ ಬಗ್ಗೆ ಇಂದಿಗೂ ಜನರಲ್ಲಿ ಬೇರೂರಿರುವ ಅಜ್ಞಾನವನ್ನು ಕುರಿತು ಸರ್ವಜ್ಞನ ಈ ವಚನವು ಬಹಳ ಅರ್ಥಪೂರ್ಣವಾಗಿ ಅಭಿವ್ಯಕ್ತಿಸುತ್ತದೆ;

"ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು
ಸುಡುವುದೊಂದೇ ಅಗ್ನಿ ಇರುತಿರಲು ಕುಲ ಗೋತ್ರ
ನಡುವೆ ಎತ್ತಣದು ಸರ್ವಜ್ಞ"

ಎಂದು ಮನುಷ್ಯನಿಗೆ ಬದುಕಲು ಅಗತ್ಯವಾಗಿರುವ ಮಣ್ಣು, ನೀರು, ಬೆಂಕಿ ಮಹತ್ವವನ್ನು ಹೇಳುತ್ತಲೇ ಭೂಮಿಯ ಮೇಲೆ ಜಾತಿಯು ಎಲ್ಲಿದೆ ಎಂದು ಪ್ರಶ್ನಿಸುವನು. ಅದೇ ರೀತಿ ಇದೇ ಸಂದರ್ಭವನ್ನು ಕುರಿತು ಸರ್ವಜ್ಞ ತನ್ನ ಮತ್ತೊಂದು ವಚನದಲ್ಲಿ ಹೀಗೆ ಹೇಳುವನು;

"ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ
ಜಾತಿ ವಿಜಾತಿ ಎನಬೇಡ ದೇವನೊಲಿ
ದಾತನೇ ಜಾತ ಸರ್ವಜ್ಞ"

ಎಂದು ಜಾತಿಯ ವ್ಯವಸ್ಥೆಯನ್ನು ಕುರಿತು ಸರ್ವಜ್ಞ ಪ್ರಬಲವಾಗಿ ಟೀಕಿಸುವನು. ಹಾಗೆ ಕವಿಯು ಮನುಷ್ಯನಿಗೆ ಸಾಲವನ್ನು ತೆಗೆದುಕೊಳ್ಳುವಾಗ ಇರುವಂತಹ ಶ್ರದ್ಧೆಯು ಅದನ್ನು ಹಿಂತಿರುಗಿಸುವ ಸಮದಲ್ಲಿ ಇರುವುದಿಲ್ಲ. ಅಂತಹ ಸಂದರ್ಭವನ್ನು ಕುರಿತು ಈ ವಚನದಲ್ಲಿ ಹೇಳುವರು;

"ಸಾಲವನು ಕೊಂಬಾಗ ಹಾಲೋಗರುಂಡಂತೆ
ಸಾಲಿಗನು ಬಂದು ಸೆಳೆದಾಗ ಕಿಬ್ಬದಿಯ
ಕೀಲು ಮುರಿದಂತೆ ಸರ್ವಜ್ಞ"

ಎಂದು ಸಾಲಿಗನು ಸಾಲವನ್ನು ತೆಗೆದುಕೊಳ್ಳುವಾಗ ಹಾಲು ಅನ್ನ ಉಂಡಂತೆ ಇದ್ದರೆ, ಅದನ್ನು ಮತ್ತೆ ಹಿಂದಿರುಗಿಸುವಾಗ, ಸಾಲ ಕೊಟ್ಟವನು ಬಂದು ಕೇಳುವಾಗ ಅವನ ಮನಃಸ್ಥಿತಿ ಕಿಬ್ಬದಿಯ ಕೀಲು ಮುರಿದಂತೆ ಇರುವುದು ಎಂದು ಸಮಾಜದ ವಿಡಂಬನೆಯನ್ನು ಮಾಡುವನು.

ಹೀಗೆ ಬಸವಣ್ಣ ಮತ್ತು ಸರ್ವಜ್ಞನ ಅನೇಕ ವಚನಗಳಲ್ಲಿ ಸಮಾಜಮುಖಿಯಾದ ಚಿಂತನೆಗಳನ್ನು ಗುರುತಿಸಬಹುದಾಗಿದೆ. ಹನ್ನೆರಡನೆಯ ಶತಮಾನದ ವಚನ ಚಳವಳಿಯ ನಾಯಕ ಬಸವಣ್ಣ ಸಮಾಜದ ಅನೇಕ ನೆಲೆಗಳನ್ನು ಕುರಿತು ತಮ್ಮ ವಚನಗಳಲ್ಲಿ ವಿಡಂಬಿಸುವರು. ಅವರ ಅನೇಕ ವಚನಗಳಲ್ಲಿರುವ ಮೌಲ್ಯಗಳು ಇಂದಿಗೂ ಜೀವಂತವಾಗಿವೆ. 'ಕಾಯಕವೇ ಕೈಲಾಸ ಮತ್ತು ದಾಸೋಹ ತತ್ವಗಳು ಬಹಳ ಅರ್ಥಪೂರ್ಣವಾದವುಗಳು. ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಸಮಾನತೆ, ಮಾನವೀಯತೆ, ಭಕ್ತಿಯ ಮಹತ್ವ, ಅಂತರಂಗ–ಬಹಿರಂಗಗಳ ಶುದ್ಧಿ, ಲಿಂಗ ಭೇದ–ಜಾತಿಯ ಅಸಮಾನತೆ, ಮೌಢ್ಯತೆ, ಪ್ರಾಣಹಿಂಸೆ... ಇತ್ಯಾದಿ ವಿಚಾರಗಳನ್ನು ತಮ್ಮ ವಚನಗಳಲ್ಲಿ ವಿಶ್ಲೇಷಿಸಿ ಅವುಗಳು ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಸರಳವಾದ ಭಾಷೆಯಲ್ಲಿ ಅಭಿವ್ಯಕ್ತಿಸಿದರು. ಜೊತೆಗೆ ಅನುಭವಮಂಟಪದಲ್ಲಿ ಬೇರೆ ಬೇರೆ ವಚನಕಾರರು ತಮ್ಮ ಅನುಭವಗಳನ್ನು ಅಭಿವ್ಯಕ್ತಿಸಿಕೊಳ್ಳಲು ಸಹಾಯಕರಾದರು. ಸರ್ವ ಸಮಾನತೆಯ ಜಾತಿರಹಿತ ಸಮಾಜವೊಂದನ್ನು ಕಟ್ಟಲು ಶ್ರಮಿಸಿದರು. ಬಸವಣ್ಣನವರು ಬದುಕಿದ್ದು ಹನ್ನೆರಡನೆಯ ಶತಮಾನವಾದರೂ ಅವರು ಪ್ರತಿಪಾದಿಸಿದ ಮೌಲ್ಯಗಳು, ತತ್ವಗಳು ಇಂದಿಗೂ ಕೂಡ ಪ್ರಸ್ತುತವೆನಿಸಿಕೊಳ್ಳುತ್ತವೆ. ಒಟ್ಟಿನಲ್ಲಿ ಪ್ರಗತಿಶೀಲ ಮತ್ತು ಚಲನಶೀಲ ಸಮಾಜವೊಂದನ್ನು ಕಟ್ಟಲು ಪರಿಶ್ರಮ ಪಟ್ಟ ಬಸವಣ್ಣನವರು ಜಾಗತಿಕ ಮಟ್ಟದಲ್ಲಿ ಪ್ರಮುಖ ವ್ಯಕ್ತಿ ಎಂದು ಹೇಳಬಹುದು.

ಹಾಗೆ ಹದಿನಾರನೆಯ ಶತಮಾನದ ಸರ್ವಜ್ಞ ಸಮಾಜವನ್ನೇ ತನ್ನ ಕುಟುಂಬ ನ್ನಾಗಿಸಿಕೊಂಡು ಜೀವಿಸಿದವನು. ಆ ಮೂಲಕ ತಾನು ಸಮಾಜದ ಓರೆ–ಕೋರೆಗಳನ್ನು ಅನುಭವದ ನೆಲೆಯಲ್ಲಿ ಗುರುತಿಸಿದವನು. ತಾನು ನಿಂತಲ್ಲಿ ನಿಲ್ಲದೇ ಸಮಾಜವನ್ನು ವಿಡಂಬನೆ ಮಾಡುವನು. ಸರ್ವಜ್ಞ ಮನುಷ್ಯನ ಒಟ್ಟು ವ್ಯಕ್ತಿತ್ವವನ್ನು ಕುರಿತಂತೆ ತನ್ನ ಹಲವಾರು ವಚನಗಳಲ್ಲಿ ವಿಶ್ಲೇಷಿಸಿರುವನು. ಸರ್ವಜ್ಞನ ವಚನಗಳು ಉಪಮೆ, ರೂಪಕಗಳನ್ನು ಬಳಸಿಕೊಂಡು ಸಮಾಜವನ್ನು ವಿಡಂಬನೆ ಮಾಡಲಾಗಿದೆ. ಬಸವಣ್ಣನವರ ವಚನಗಳಲ್ಲಿಯೂ ಇಂತಹ ಅನೇಕ ಉಪಮೆ ರೂಪಕಗಳು ಬಳಕೆಯಾಗಿರುವುದನ್ನು ಕಾಣಬಹುದು. ಸರ್ವಜ್ಞನ ಅನೇಕ ವಚನಗಳು ಇಂದಿಗೂ ಕೂಡ ಜನಪದರ ಗಾದೆಗಳಂತೆ ಬಳಕೆಯಾಗುತ್ತಿದೆ. ವ್ಯಕ್ತಿ ಮತ್ತು ಸಮಾಜದ ಹಲವಾರು ನೆಲೆಗಳನ್ನು ಸರ್ವಜ್ಞನ ವಚನಗಳಲ್ಲಿ ವಿಡಂಬನೆ ಮಾಡಿರುವುದನ್ನು ಮುಖ್ಯವಾಗಿ ಗುರುತಿಸಬಹುದಾಗಿದೆ.

ಒಟ್ಟಿನಲ್ಲಿ ಬಸವಣ್ಣ ಮತ್ತು ಸರ್ವಜ್ಞ ಇವರ ವಚನಗಳು ಆಧುನಿಕ ಸಮಾಜದ ಮನುಷ್ಯ ಸಂಕುಲಕ್ಕೆ ಬೆಳಕನ್ನು ನೀಡುವಲ್ಲಿ ಹಾಗೂ ಸಮಾಜದ ವಿಡಂಬನೆ ಮಾಡುವಲ್ಲಿ ಹೆಚ್ಚು ಪ್ರಸ್ತುತವಾಗುತ್ತವೆ.

❐

ಬಸವೇಶ್ವರ ಮತ್ತು ಪುರಂದರದಾಸರ ಸಾಧನೆ

●

ಡಾ. ಬಸವರಾಜ ಸಬರದ

ಸಾಧನೆ

ಬಸವೇಶ್ವರರು ಮತ್ತು ಪುರಂದರದಾಸರು, ಧಾರ್ಮಿಕ-ಸಾಮಾಜಿಕ-ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಬಹುಮುಖ್ಯವಾದ ಸಾಧನೆಯನ್ನು ಮಾಡಿದವರಾಗಿದ್ದಾರೆ. ಇವರಿಬ್ಬರೂ ಧಾರ್ಮಿಕ-ಕ್ಷೇತ್ರದ ಮೂಲಕವೇ ಗುರುತಿಸಿಕೊಂಡರೂ, ಇವರ ಹೆಸರು ಇಂದಿಗೂ ಹಸಿರಾಗಿರುವುದು ಇವರ ನಿರಂತರ ಸಾಧನೆಗಳಿಂದ. ಸಾಧನೆಯಿಂದ ಮನುಷ್ಯ ಎಂತಹ ಎತ್ತರವನ್ನು ಮುಟ್ಟಬಲ್ಲನೆನ್ನಲಿಕ್ಕೆ ಬಸವೇಶ್ವರ ಮತ್ತು ಪುರಂದರದಾಸರ ಬದುಕೇ ಮುಖ್ಯ ಉದಾಹರಣೆಯಾಗಿದೆ. ಮಹಾ ಮಾನವತಾವಾದಿಗಳಾದ ಇವರೀರ್ವರು ವೈಚಾರಿಕತೆಯಿಂದ, ಪ್ರಾಮಾಣಿಕವಾದ ಮಾರ್ಗದಲ್ಲಿ ಸಾಧನೆ ಕೈಕೊಂಡಿದ್ದರಿಂದ ಅವರಿಂದಿಗೂ ಪ್ರಸ್ತುತರಾಗಿದ್ದಾರೆ.

ಬಸವೇಶ್ವರರು ಮತ್ತು ಪುರಂದರದಾಸರನ್ನು ಕೇವಲ ಧಾರ್ಮಿಕ ಪುರುಷರೆಂದಾಗಲಿ, ಸಂತರೆಂದಾಗಲಿ, ಅನುಭಾವಿಗಳೆಂದಾಗಲಿ ಮಾತ್ರ ಗುರುತಿಸದೆ, ಅವರನ್ನು ಸಮಾಜ ವಾದಿಗಳನ್ನಾಗಿ ಹೋರಾಟಗಾರರನ್ನಾಗಿ, ಮಾನವತಾವಾದಿಗಳನ್ನಾಗಿ, ಮಹಾಸಾಧಕರನ್ನಾಗಿ ಗುರುತಿಸಬೇಕಾಗಿದೆ. ಈ ದೇಶದ ಚರಿತ್ರೆಯಲ್ಲಿ, ಅನುವಂಶಿಕ ಅಧಿಕಾರ ಪಡೆದು ಅರಸರಾಗಿ ಮೆರೆದವರು ವಿಜೃಂಭಿಸಿರಬಹುದು; ಧರ್ಮದ ಹೆಸರಿನಲ್ಲಿ ಧರ್ಮ ಸಂಸ್ಥಾಪಕರು ಕಂಗೊಳಿಸಿರಬಹುದು, ರಾಜಾಶ್ರಯ ಪಡೆದ ಕವಿ ಪುಂಗವರು ಮಿಂಚಿರಬಹುದು; ಆದರೆ ನುಡಿದಂತೆ ನಡೆದು, ಸಾಮಾನ್ಯರಂತೆ ಬದುಕಿ ಬೆಳೆದು ಸಾಧನೆಯೊಂದರಿಂದಲೇ ತಮ್ಮನ್ನು ಗುರುತಿಸಿಕೊಂಡು ಮೇಲೆದ್ದವರು ತುಂಬಾ ವಿರಳ. ಅಂತಹ ವಿರಳ ವ್ಯಕ್ತಿಗಳ ಸಾಲಿನಲ್ಲಿ ಇವರಿಬ್ಬರು ಸೇರುತ್ತಾರೆ.

ಬಸವೇಶ್ವರ-ಪುರಂದರರು ಉಚ್ಚ ಜಾತಿಯೆಂದು ಕರೆಯಿಸಿಕೊಳ್ಳುತ್ತಿದ್ದ ಜಾತಿಗಳಲ್ಲೇ ಹುಟ್ಟಿದರೂ, ಅಂತಹ ಜಾತಿ ವ್ಯವಸ್ಥೆಯನ್ನು ಮೀರಿ ಮುಂದೆ ಬಂದವರು; ಆರ್ಥಿಕವಾಗಿ ಸಬಲರಾಗಿದ್ದರೂ ಅದನ್ನು ತಿರಸ್ಕರಿಸಿ ಬಂದವರು. ಯಾವುದೂ ಇಲ್ಲದ್ದಕ್ಕಾಗಿ ಒಲ್ಲೆನೆಂದವರಲ್ಲ ಇವರು; ಎಲ್ಲಾ ಇದ್ದ ಅವುಗಳನ್ನು ತೊರೆದವರು. ಸ್ವತಃ ಮಂತ್ರಿಯಾಗಿದ್ದ

ಬಸವೇಶ್ವರರು ಎಲ್ಲ ಸವಲತ್ತುಗಳನ್ನು ಬಳಸಿಕೊಂಡು ರಾಜರಾಗಿ ಮೆರೆಯಬಹುದಿತ್ತು; ಅಗರ್ಭ ಶ್ರೀಮಂತರಾಗಿದ್ದ ಪುರಂದರದಾಸರು ಸಂಪತ್ತಿನ ಸಿರಿಯಲ್ಲಿಯೇ ವಿಜೃಂಭಿಸಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ, ಅದೆಲ್ಲವನ್ನೂ ತೊರೆದರು, ಮಾನವೀಯತೆಗಾಗಿ ಹಾತೊರೆದರು; ಸಾಮಾನ್ಯರಂತೆ ಬಾಳಿದರು, ಸರಳಜೀವನ ನಡೆಸಿದರು, ಮಹಾಸಾಧನೆ ಗೈದರು.

ಧಾರ್ಮಿಕ ಸಾಧನೆ

ಧಾರ್ಮಿಕ ಕ್ಷೇತ್ರದಲ್ಲಿ ಬಸವೇಶ್ವರ–ಪುರಂದರರು ಸಾಧಿಸಿದ ಸಾಧನೆ ಗಮನಾರ್ಹವಾದುದು. ಧರ್ಮದ ವ್ಯಾಖ್ಯೆಯನ್ನು ಸ್ಪಷ್ಟಗೊಳಿಸಿದ ಬಸವೇಶ್ವರರು ಧಾರ್ಮಿಕ–ಆಚರಣೆಗಳನ್ನು ಸರಳಗೊಳಿಸಿದರು. ಅವರ ಕಾಲದಲ್ಲಿ ಧರ್ಮ ದಯೆಯಾಯಿತು, ಕರ್ಮ ಕ್ರಿಯೆಯಾಯಿತು. 'ದಯೆಯೇ ಧರ್ಮದ ಮೂಲವಯ್ಯ' ಎಂದು ಹೇಳಿದ ಬಸವೇಶ್ವರರು, ಧರ್ಮಕ್ಕೆ ಹೊಸ ವ್ಯಾಖ್ಯಾನ ನೀಡಿದರು. ಮಾನವೀಯ ಧರ್ಮವೇ ನಿಜವಾದ ಧರ್ಮವೆಂದು ಸಾರಿದರು. ಮನುಷ್ಯನ ಶೋಷಣೆಗೆ ಕಾರಣವಾಗಿದ್ದ ಧರ್ಮ ಇವರ ಕಾಲಕ್ಕೆ ಮನುಷ್ಯನ ಪೋಷಣೆ ಮಾಡತೊಡಗಿತು. ಮನುಷ್ಯ ಬದುಕಿನ ಮೂಲಕ ಇಲ್ಲಿಯ ಧರ್ಮ ಪ್ರಾಮುಖ್ಯತೆಯನ್ನು ಪಡೆಯಿತು. ಇದು ಬಸವೇಶ್ವರರ ಮಹತ್ವದ ಸಾಧನೆಯಾಗಿದೆ.

ಶಿವಭಕ್ತಿಯಿಂದ ಅವರು ಸಾಧಿಸಿದ್ದು ಸಮಾನತೆ. ಜಾತಿ ಮೂಲವಾಗಿದ್ದ ವ್ಯವಸ್ಥೆಯನ್ನು ವಿರೋಧಿಸಿದ ಬಸವೇಶ್ವರರು, ಸಾಮಾನ್ಯ ಜನತೆಯ ಜೀವನವನ್ನು ಎತ್ತರಗೊಳಿಸಲು ಜನಪರ ವಿಚಾರಗಳನ್ನು ಧರ್ಮದ ಮೂಲಕ ಬಿತ್ತರಿಸಿದರು. ಅದುವರೆಗೆ ಮತಧರ್ಮವಾದದ್ದು ಬಸವೇಶ್ವರರ ಕಾಲಕ್ಕೆ ಮನುಷ್ಯ ಧರ್ಮವಾಯಿತು. 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನ್ನೆಲ್ಲ ಒಂದೇ ಎಂಬೆ' ಎನ್ನುವ ಅವರ ನುಡಿ ಜಾತಿ ಮೂಲವಾಗಿದ್ದ ವ್ಯವಸ್ಥೆಯನ್ನು ಬದಲಾಯಿಸುವುದೇ ಆಗಿದೆ. ಜಾತಿಭೇದ, ಲಿಂಗಭೇದ, ವೃತ್ತಿಭೇದದಂತಹ ಭೇದಗಳನ್ನು ಅಳಿಸಿ ಹಾಕಲು ಬಸವೇಶ್ವರರು ಏಕದೇವೋಪಾಸನೆಯಂತಹ ಸರಳ ಮಾರ್ಗವನ್ನನುಸರಿಸಿದರು, ಎಲ್ಲರಿಗೂ ಮುಕ್ತ ಅವಕಾಶ ನೀಡಿದರು; ಶೋಷಣೆಗೆ ಕಾರಣವಾಗಿದ್ದ ದೇವಾಲಯ ಸಂಸ್ಕೃತಿಯನ್ನು ತಿರಸ್ಕರಿಸಿ, ಸ್ವತಃ ದೇವಾಲಯಗಳಾಗಿ ಬೆಳೆಯುವ ಸಾಧ್ಯತೆಗಳನ್ನು ಹೇಳಿಕೊಟ್ಟರು. ಚಾತುರ್ವರ್ಣ ಪದ್ಧತಿಯ ಮತೀಯ ವ್ಯವಸ್ಥೆಯಲ್ಲಿ ಶತಮಾನಗಳಿಂದ ಶೋಷಿತರಾಗಿದ್ದ ಅಸ್ಪೃಶ್ಯರನ್ನು ಬಸವೇಶ್ವರರು ಸೋದರರಂತೆ ಕಂಡರು. 'ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರಕಕ್ಕಯ್ಯನೆಂದು' ಮನಬಿಚ್ಚಿ ಹೇಳಿದರು. ಶತಮಾನಗಳಿಂದ ಧಾರ್ಮಿಕ ಕ್ಷೇತ್ರದಿಂದ ವಂಚಿತರಾದ ಸಾಮಾನ್ಯ ಮುಗ್ಧ ಜನತೆಗೆ ಬಸವೇಶ್ವರರು ಧರ್ಮವನ್ನು ಸರಳಗೊಳಿಸಿ, ಅಂತವರಿಗೆ ಧಾರ್ಮಿಕ ಕ್ಷೇತ್ರದಲ್ಲಿ ಅತ್ಯುನ್ನತ ಸ್ಥಾನವನ್ನು ಕಲ್ಪಿಸಿದರು. ಚಾತುರ್ವರ್ಣ ಪದ್ಧತಿಯನ್ನು ವಿರೋಧಿಸುವುದರ ಮೂಲಕ, ಯಜಮಾನ ಸಂಸ್ಕೃತಿಯನ್ನು ಅಲ್ಲಗಳೆಯುವುದರ ಮೂಲಕ ಬಸವೇಶ್ವರರು ಜನಪರ ಸಂಸ್ಕೃತಿ ಬೆಳೆದು ಬರಲು ಪ್ರಯತ್ನಿಸಿದರು.

ಚಾತುರ್ವರ್ಣ ಪದ್ಧತಿ ಆಚರಣೆಯಲ್ಲಿ ಆ ಸಂದರ್ಭದಲ್ಲಿ ಹುಟ್ಟೊಂದೇ ಮುಖ್ಯವಾಗಿತ್ತು, ಆಯಾ ಜಾತಿಗಳಲ್ಲಿ ಹುಟ್ಟಿದವರು, ಅಲ್ಲಿಯಸಂಪ್ರದಾಯಗಳನ್ನು

ಆಚರಿಸುತ್ತಿದ್ದರು. ಬಸವೇಶ್ವರರು ಚಾತುರ್ವರ್ಣ ಪದ್ಧತಿಯನ್ನು ವಿರೋಧಿಸುವುದರ ಮೂಲಕ ಹುಟ್ಟು ಕೇವಲ ಆಕಸ್ಮಿಕವೆಂದು ಸಾರಿ ಹೇಳಿದರು. ಜಾತಿಗಳ ಹೆಸರಿನಲ್ಲಿ ಹೋಳಾಗಿ ಹೋಗಿದ್ದ ಸಮಾಜ ವ್ಯವಸ್ಥೆಯನ್ನು ಮಾನವೀಯ ಧರ್ಮದ ಆಚರಣೆಯ ಮೂಲಕ ಒಂದುಗೂಡಿಸಿದರು. ಕುಲಗಳ ಹಿರಿಮೆಯನ್ನು ವರ್ಣಾಶ್ರಮದ ಅಳತೆಗೋಲಿನಿಂದ ಅಳೆಯದೆ, ಶಿವಭಕ್ತಿಯನ್ನು ಮಾನದಂಡವನ್ನಾಗಿಸಿ ಮನುಷ್ಯತ್ವವುಳ್ಳವನೇ ನಿಜವಾದ ಕುಲಜನೆಂದು ಸ್ಪಷ್ಟಪಡಿಸಿದರು. ಮನದ ಮೈಲಿಗೆಯನ್ನು ತೊಳೆಯದೆ ಹೊರಗೆ ತೊಳೆದು ಬಹಿರಂಗ ಶುದ್ಧಿಯಾದವರನ್ನು, 'ಹೆಂಡದ ಮಡಕೆಯ ಹೊರಗೆ ತೊಳೆದಂತೆ' ಎಂದು ಸ್ಪಷ್ಟಪಡಿಸಿದರು. 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಸದಿರಯ್ಯ' ಎಂದು ಕುಲದ ಭ್ರಮೆಯನ್ನು ನಿರಶನಗೊಳಿಸಿದರು.

ಧರ್ಮದ ಹೆಸರಿನಲ್ಲಿ ಶತಮಾನಗಳಿಂದ ಬೇರೂರಿದ್ದ ಮೂಢನಂಬಿಕೆ–ಅಂಧಸಂಪ್ರದಾಯಗಳನ್ನು ತಿರಸ್ಕರಿಸಿ, ಪ್ರಗತಿಪರ ವಿಚಾರಧಾರೆಯನ್ನು ಆಚರಣೆಗೆ ತಂದದ್ದು ಬಸವೇಶ್ವರರ ದೊಡ್ಡ ಸಾಧನೆಯೆನ್ನಬಹುದು. ಮರ ಮಡಕೆಗಳು ದೈವವಾಗಿದ್ದ ಸಂದರ್ಭದಲ್ಲಿ, ಕಾಲಿಡಲು ಇಂಬಿಲ್ಲದಂತೆ ದೇವರುಗಳನ್ನು ಬೆಳೆಸಿದ ಸಮಾಜವ್ಯವಸ್ಥೆಯಲ್ಲಿ ಬಸವೇಶ್ವರರು ಏಕದೇವೋಪಾಸನೆಯ ಮೂಲಕ ಮೂಲ ಸಮಸ್ಯೆಗೆ ಉತ್ತರ ಕಂಡುಕೊಂಡರು. ಧರ್ಮದ ಹೆಸರಿನಲ್ಲಿ ಆಚರಿಸುತ್ತಿದ್ದ ಮಡಿ–ಮೈಲಿಗೆಯಂತಹ ಕ್ಷುಲ್ಲಕ ಆಚರಣೆಗಳನ್ನು ಕೈಬಿಟು ಮನುಷ್ಯರಾಗಿ ಬೆಳೆಯುವ, ವಿನಯವಂತರಾಗಿ ಬಾಳುವ ಮಾರ್ಗವನ್ನು ಹಾಕಿಕೊಟ್ಟರು. ವೇದ ಶಾಸ್ತ್ರ–ಆಗಮ–ಪುರಾಣಗಳನ್ನು ನೇರವಾಗಿ ತಿರಸ್ಕರಿಸುವುದರ ಮೂಲಕ ಅವುಗಳ ಪೊಳ್ಳುತನವನ್ನು ಬಯಲು ಮಾಡಿದರು. ಮಾರಿ–ಮಸಣಿ ದೈವಗಳನ್ನು ಹೊಡೆದೋಡಿಸಿ, ಜನಸಾಮಾನ್ಯರಲ್ಲಿದ್ದ ಭಯ–ಭೀತಿಗಳನ್ನು ತೊಲಗಿಸಿದರು. ಹುಸಿಯಾಚರಣೆಗಳನ್ನು, ಡಾಂಭಿಕ ಕ್ರಿಯೆಗಳನ್ನು ತಿರಸ್ಕರಿಸುವುದರ ಮೂಲಕ ಅಂದಿನ ಜನಸಮುದಾಯವನ್ನು ಹೊಸ ಸಂಸ್ಕಾರದಲ್ಲಿ ಬೆಳೆಸಿದರು.

ಭಕ್ತ ಮತ್ತು ದೇವರ ನಡುವೆ ಅಡ್ಡವಾಗಿದ್ದ ಪೂಜಾರಿ ಮತ್ತು ಪುರೋಹಿತಶಾಹಿ ಪದ್ಧತಿಯನ್ನು ತಿರಸ್ಕರಿಸಿದ್ದು ಶರಣರ ದೊಡ್ಡ ಸಾಧನೆಯಾಗಿದೆ. ಧರ್ಮದ ಹೆಸರಿನಲ್ಲಿ ಮುಗ್ಧ ಭಕ್ತರನ್ನು ಶೋಷಣೆ ಮಾಡುತ್ತ ಬಂದಿದ್ದ ಪುರೋಹಿತಶಾಹಿ ವ್ಯವಸ್ಥೆಯನ್ನು ವಿರೋಧಿಸುವುದರ ಮೂಲಕ ಬಸವೇಶ್ವರರು ಧರ್ಮದ ಹೊಸ ಸಾಧ್ಯತೆಗಳನ್ನು ವಿಸ್ತರಿಸಿದರು. ಸಮಾಜವ್ಯವಸ್ಥೆ ಪುರೋಹಿತಶಾಹಿ ಹಿಡಿತದಿಂದ ಬಳಲುತ್ತಿರುವಾಗ, ಬಸವೇಶ್ವರರು ಏಕದೇವೋಪಾಸನೆಯ ಸಂಕೇತವಾಗಿ ಇಷ್ಟಲಿಂಗದತ್ತ ಜನತೆಯ ಗಮನ ಸೆಳೆಯುತ್ತಲೇ ಬಹು ದೇವೋಪಾಸನೆಯನ್ನು ಅಲ್ಲಗಳೆದರು. ಪುರೋಹಿತಶಾಹಿ ವ್ಯವಸ್ಥೆಯನ್ನು ಧಿಕ್ಕರಿಸಿದರು. ದೇವಾಲಯಗಳೆಲ್ಲಾ ಶೋಷಣೆಯ ಕೇಂದ್ರಗಳಾಗಿದ್ದಾಗ, ದೇವಾಲಯಗಳನ್ನೇ ತಿರಸ್ಕರಿಸಲು ಕರೆಕೊಟ್ಟರು. ದೇಹವೇ ದೇಗುಲವನ್ನಾಗಿ ಪರಿವರ್ತಿಸಿ, ಅರಿವೇ ಗುರುವಾಗಿ ಬೆಳೆಯುವ ಹೊಸ ನೀತಿಯನ್ನು ಹೇಳಿಕೊಟ್ಟದ್ದು ಶರಣರ ಪ್ರಮುಖ ಸಾಧನೆಯಾಗಿದೆ.

ಧಾರ್ಮಿಕ ಕ್ಷೇತ್ರಕ್ಕೆ ಅಸ್ಪೃಶ್ಯರಾಗಿದ್ದ ದಲಿತರು–ಮಹಿಳೆಯರಿಗೆ ಹೆಚ್ಚಿನ ಅವಕಾಶ ಕಲ್ಪಿಸಿದ ಬಸವೇಶ್ವರರು ಅವರಿಲ್ಲದ ಧರ್ಮ ಧರ್ಮವೇ ಅಲ್ಲವೆನ್ನುವ ಹಂತವನ್ನು ತಲುಪಿ ಅವರನ್ನು

ಮೇಲೆತ್ತಿ ಎಲ್ಲ ಕ್ಷೇತ್ರಗಳಲ್ಲೂ ಬೆಳೆಯುವಂತೆ ಪ್ರೋತ್ಸಾಹ ನೀಡಿದರು. ಅಂತೆಯೇ ಹರಳಯ್ಯ, ಉರಿಲಿಂಗಪೆದ್ದಿ, ಕಾಳವ್ವೆ, ಸೂಳೆಸುಂಕವ್ವೆಯಂತಹ ದಲಿತ ವರ್ಗದ ವಚನಕಾರರು; ಅಕ್ಕಮಹಾದೇವಿ, ಲಿಂಗಮ್ಮ, ಅಕ್ಕಮ್ಮ ನೀಲಾಂಬಿಕೆ, ಸತ್ಯಕ್ಕರಂತಹ ಮಹಿಳೆಯರು ಧಾರ್ಮಿಕ ಕ್ಷೇತ್ರಕ್ಕೆ ಅನಿವಾರ್ಯವಾದರು. ಯಾವ ಧರ್ಮ ಇಂತಹವರನ್ನು ಶತಮಾನಗಳಿಂದ ದೂರವಿಟ್ಟಿತ್ತೋ ಅಂತವರು ಬಸವೇಶ್ವರರ ಚಳವಳಿಯಲ್ಲಿ ಧರ್ಮದ ಪ್ರಮುಖ ಅಂಗವಾದರೆಂಬುದು ಅವರ ಮಹತ್ವದ ಸಾಧನೆಯಾಗಿದೆ. ಅಕ್ಕಮಹಾದೇವಿ, ಮುಕ್ತಾಯಕ್ಕ, ಹಡಪದಲಿಂಗಮ್ಮ, ಸೂಳೆಸುಂಕವ್ವೆ, ಕಾಳವ್ವೆ, ಗೊಗ್ಗವ್ವೆ, ಅಮುಗೆ ರಾಯಮ್ಮ, ಅಕ್ಕಮ್ಮ, ಸತ್ಯಕ್ಕ ಈ ಮುಂತಾದ ವಚನಕಾರ್ತಿಯರು ಪುರುಷರಿಗೆ ಮಾರ್ಗದರ್ಶಕರಾಗಿ ಅನೇಕ ಹೊಸ ಸಿದ್ಧಾಂತಗಳನ್ನು ಆಚರಣೆಗೆ ತರಲು ಮುಖ್ಯ ಕಾರಣರಾಗಿದ್ದಾರೆ. ಅವರೇ ಈ ವಚನ ಚಳವಳಿಯ ಮೂಲ ಶಕ್ತಿಯಾಗಿದ್ದಾರೆ.

ಧರ್ಮದ ವ್ಯಾಖ್ಯೆಯನ್ನು ಅತ್ಯಂತ ಸರಳಗೊಳಿಸಿ ಹೇಳಿದ ಬಸವೇಶ್ವರರು, ಧಾರ್ಮಿಕ ಆಚರಣೆಗಳಲ್ಲಿಯೂ ಸುಲಭ ಮಾರ್ಗ ತೋರಿಸಿದರು. ತಮಗಿಂತ ಪೂರ್ವದಲ್ಲಿದ್ದ ಶಕ್ತಿ ಆರಾಧಕರು, ಕಾಪಾಲಿಕರು, ಲಕುಲೀಶರು ಆಚರಿಸುತ್ತಿದ್ದ ಕಠಿಣ ಪರವಾದ ನಿಯಮಗಳನ್ನು ಅಲ್ಲಗಳೆದ ಬಸವೇಶ್ವರರು ಜೈನರ ಕಠಿಣ ವ್ರತಗಳನ್ನು, ಶೈವರ ವ್ಯರ್ಥ ಆಚರಣೆಗಳನ್ನು ಕೈಬಿಟ್ಟು ಇಷ್ಟಲಿಂಗದೇವೋಪಾಸನೆಯಂತಹ ಸುಲಭ ಮಾರ್ಗದ ಮೂಲಕ ಏಕಾಗ್ರತೆಯನ್ನು ಕಲಿಸಿದರು. ಶಿವನಿಗೆ ಹೆಂಡತಿ ಮಕ್ಕಳನ್ನು ದಾನ ಮಾಡುವ, ಕೈಕಾಲುಗಳನ್ನು ಕತ್ತರಿಸಿಕೊಡುವ ಹೇಯ ಪದ್ಧತಿಗಳನ್ನು ಅಲ್ಲಗಳೆದು ಮನಸ್ಸಿನ ಸಮರ್ಪಣಾ ಭಾವವನ್ನು ಕಲಿಸಿದರು. 'ನಂಬಿ ಕರೆದರೆ ಓ ಎನ್ನನೆ ಶಿವನು' ಎಂದ್ಹೇಳಿ ನಂಬುಗೆಯಂತಹ ಗುಣವನ್ನು ಮೌಲ್ಯವನ್ನಾಗಿಸಿದರು. ಅರವತ್ತುಮೂರು ಪುರಾತನರ ಉಗ್ರ ಆಚರಣೆಗಳನ್ನು ಅಲ್ಲಗಳೆದ ಅವರು ವೈದಿಕರ ಹೇಯ ಆಚರಣೆಗಳನ್ನೂ ತಿರಸ್ಕರಿಸಿದರು.

ಧರ್ಮದ ಹೆಸರಿನಲ್ಲಿ ಬದುಕುತ್ತಿದ್ದ ಕಪಟ ಸಂನ್ಯಾಸಿಗಳು, ಸುಳ್ಳು ಜೋಯಿಸರು, ಸ್ವಾರ್ಥಿಪುರೋಹಿತರು, ಮೂರ್ಖ ಪೂಜಾರಿಗಳು ವಚನ ಚಳವಳಿಯನ್ನು ವಿರೋಧಿಸಿದರು. ಸಮಾಜ ವ್ಯವಸ್ಥೆಯಲ್ಲಿ ಸದಾ ಭಯ–ಭೀತಿಗಳನ್ನು ಬಿತ್ತಿದ್ದ ಈ ದುಷ್ಟಶಕ್ತಿಗಳಿಗೆ ವಚನ ಚಳವಳಿ ನುಂಗಲಾರದ ತುತ್ತಾಯಿತು; ಆಗ ಅವರು ರಾಜಕೀಯ ಕುತಂತ್ರದಿಂದ ಚಳವಳಿ ಬೆಳೆಯದಂತೆ ನೋಡಿಕೊಂಡರು. ವಚನ ಚಳವಳಿ ಸಂಪೂರ್ಣವಾಗಿ ಯಶಸ್ವಿಯಾಗದಿದ್ದರೂ ಅದು ಹಾಕಿದ ಸೈದ್ಧಾಂತಿಕ ನೆಲೆ ಇಂದಿಗೂ ಪ್ರಸ್ತುತವಾಗಿದೆ. ವಚನಕಾರರ ವಿಚಾರಗಳು ಇಂದಿಗೂ ಆದರ್ಶವಾಗಿವೆ, ಅವರ ಬದುಕು ಇಂದಿಗೂ ಮಾದರಿಯಾಗಿದೆ. ಮನುಷ್ಯನನ್ನು ಮನುಷ್ಯನಂತೆ ಕಾಣಲು ಕಲಿಸಿದ ಬಹು ಮಹತ್ವದ ಧರ್ಮವಿದು. ಮನುಷ್ಯ ಮನುಷ್ಯರಲ್ಲಿಯೇ ಜಾತಿಗೋಡೆಗಳನ್ನು ಕಟ್ಟಿದ ವ್ಯವಸ್ಥೆಯಲ್ಲಿ 'ಇವನಾರವ ಇವನಾರವನೆಂದೆನಿಸದೆ, ಇವ ನಮ್ಮವ, ಇವ ನಮ್ಮವ'ನೆಂದು ಅಪ್ಪಿಕೊಂಡ ಬಸವೇಶ್ವರರ ಧಾರ್ಮಿಕ ಸಾಧನೆ ಅತ್ಯಂತ ಉನ್ನತವಾದುದು.

ಬಸವೇಶ್ವರರಂತೆ ಪುರಂದರದಾಸರೂ ಕೂಡ ಧಾರ್ಮಿಕ ಕ್ಷೇತ್ರದಲ್ಲಿ ಮಹತ್ತರ ವಾದುದನ್ನು ಸಾಧಿಸಿದ್ದಾರೆ. ಪುರಂದರದಾಸರು ದ್ವೈತಮತದ ಪ್ರಚಾರಕರಂತೆ ಕಂಡರೂ ವೈದಿಕ ಸಂಸ್ಕೃತಿಯ ಅನೇಕ ವ್ಯರ್ಥಾಚರಣೆಗಳನ್ನು ಅಲ್ಲಗಳೆದಿದ್ದಾರೆ. ಬಸವೇಶ್ವರರಂತೆ

ಇವರಿಗೂ ಧರ್ಮ ಬಹುಮುಖ್ಯವಾದುದು. ಶ್ರೀಮಂತರಾಗಿದ್ದ ಶೀನಪ್ಪ ನಾಯಕರು ಎಲ್ಲ ಸಂಪತ್ತನ್ನು ದಾನ ಮಾಡಿ, ದಂಡಿಗೆ ಬುಟ್ಟಿ ಹಿಡಿದುಕೊಂಡು ದಾಸರಾಗಿ ತಿರುಗಾಡಲು ಮುಖ್ಯ ಪ್ರೇರಣೆ ಧರ್ಮವೇ ಆಗಿದೆ. ತಾವು ಹೀಗೆ ದಾಸರಾಗಲಿಕ್ಕೆ ತಮ್ಮ ಮಡದಿಯೇ ಕಾರಣವೆಂದು ಅವರು ಒಂದು ಕೀರ್ತನೆಯಲ್ಲಿ ಹೇಳಿದ್ದಾರೆ. ಧರ್ಮವೆಂಬುದು ಅವರಿಗೆ ಕೇವಲ ಕಠಿಣವ್ರತಗಳ ಆಚರಣೆಯಾಗಿರದೆ ಅದು ದಿವ್ಯ ಮಂತ್ರವಾಗಿ ಪರಿಣಮಿಸಿದೆ.

ವ್ಯಾಸರಾಯರ ನೇತೃತ್ವದಲ್ಲಿ ಹುಟ್ಟಿಕೊಂಡ ದಾಸಕೂಟದ ಪ್ರಮುಖರಾಗಿ ಪುರಂದರರು ಧಾರ್ಮಿಕ ಕ್ಷೇತ್ರದಲ್ಲಿ ಅನೇಕ ಸುಧಾರಣೆಗಳನ್ನು ತಂದಿದ್ದಾರೆ. ಸಂಸ್ಕೃತ ಭಾಷೆ ದೇವಭಾಷೆ, ಆ ಭಾಷೆಯಲ್ಲಿ ಮಾತ್ರ ಕೀರ್ತನಗಳನ್ನು ರಚಿಸಬೇಕೆಂಬ ಪದ್ಧತಿಯಿದ್ದಂತಹ ಸಂದರ್ಭದಲ್ಲಿ ವ್ಯಾಸಕೂಟಕ್ಕೆ ಬದಲಾಗಿ ದಾಸಕೂಟವನ್ನು ಕಟ್ಟಿ ಆ ಮೂಲಕ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿ ಸಾಮಾನ್ಯರ ಹತ್ತಿರ ಹೋದದ್ದು ಪುರಂದರದಾಸರ ಜನಪರ ನಿಲುವಿಗೆ ಮುಖ್ಯ ಉದಾಹರಣೆಯಾಗಿದೆ. ಇಂದಿಗೂ ಕೂಡ ಸಂಸ್ಕೃತದಲ್ಲೇ ದೇವರ ಸ್ತುತಿ ನಡೆದಿರುವಾಗ, ಮದುವೆಯ ಸಂದರ್ಭದಲ್ಲಿ ಸಂಸ್ಕೃತದ ಮಂತ್ರಗಳನ್ನೇ ಪಠಿಸುತ್ತಿರುವಾಗ, ಈಗ ನಾಲ್ಕುನೂರು ವರ್ಷಗಳ ಹಿಂದೆ ಪುರಂದರದಾಸರಂತವರು ದಾಸಕೂಟದ ಮೂಲಕ ಸಾಮಾನ್ಯರ ಭಾಷೆಗೆ ಬೆಲೆಕೊಟ್ಟು ಕನ್ನಡದಲ್ಲೇ ದೇವರಸ್ತುತಿ ರಚಿಸಿ ಹಾಡಿದ್ದು ಗಮನಾರ್ಹವಾಗಿದೆ.

ಮಾಧ್ವಮತದ ಅನುಯಾಯಿಯಾಗಿಯೂ ವೈದಿಕ ಸಂಸ್ಕೃತಿಯ ಕರ್ಮಟತನಗಳನ್ನು ಅಲ್ಲಗಳೆದದ್ದು, ಚಾತುರ್ವರ್ಣ ಪದ್ಧತಿಯ ಜಾತಿಗೋಡೆಗಳನ್ನು ಕೆಡವಿ ಹಾಕಿದ್ದು, ನಿಜವಾದ ಹೊಲೆಯನಾರೆಂದು ಸಾರಿ ಹೇಳಿದ್ದು, ಡಾಂಭಿಕತೆಯನ್ನು ಅಲ್ಲಗಳೆದು ಸರಳತೆಯನ್ನು ತಂದದ್ದು, ದೇವಭಾಷೆಯನ್ನು ಕೈಬಿಟ್ಟು ಜನಭಾಷೆಯಲ್ಲಿ ಆಡಿದ್ದು-ಹಾಡಿದ್ದು ಈ ಮುಂತಾದ ಅಂಶಗಳು ಪುರಂದರದಾಸರು ಧಾರ್ಮಿಕ ಕ್ಷೇತ್ರದಲ್ಲಿ ತಂದ ಸುಧಾರಣೆಗಳಾಗಿವೆ.

ದಕ್ಷಿಣ ಭಾರತದ ಅನೇಕ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಬಂದ ಪುರಂದರದಾಸರು, ತಮ್ಮ ಸ್ವಂತ ಅನುಭವದಿಂದ ಇದೆಲ್ಲಾ ವ್ಯರ್ಥವೆಂದು ತಿಳಿದುಕೊಂಡರು. ಊರೂರ ನದಿಗಳಲಿ ಬಾರಿ ಬಾರಿಗೆ ಮುಳುಗಿ ತೀರ್ಥಯಾತ್ರೆಯನ್ನು ಮಾಡುವುದಕ್ಕಿಂತ ಶ್ರೀಹರಿಯ ಪಾದವನ್ನು ನಂಬಿದರೆ ಸಾಕು ಎಂದು ಉಪದೇಶಿಸಿದರು. ಧರ್ಮದ ಹೆಸರಿನಲ್ಲಿ ದೇವಾಲಯಗಳಲ್ಲಿ, ತೀರ್ಥಕ್ಷೇತ್ರಗಳಲ್ಲಿ ನಡೆಯುವ ಶೋಷಣೆಯನ್ನು ಕಂಡ ದಾಸರು ಪೂಜಾ ವಿಧಾನವನ್ನು ಸರಳಗೊಳಿಸಿ, ಧ್ಯಾನ-ಏಕಾಗ್ರತೆಗೆ ಮಹತ್ವ ನೀಡಿದರು.

ಪುರಂದರದಾಸರು ಕೃಷ್ಣನ ಪರಮಭಕ್ತರು. ವಿಷ್ಣುವಿನ ಅವತಾರವಾದ ಕೃಷ್ಣನನ್ನು ಅವರು ಮಧುರ ಭಕ್ತಿಯ ಮೂಲಕ ಸೊಗಸಾಗಿ ವರ್ಣಿಸಿದ್ದಾರೆ. ದಾಸರು ಚಿತ್ರಿಸಿದ ಕೃಷ್ಣ ಪುರಾಣ ಕಾವ್ಯದ ಕೃಷ್ಣನಾಗಿರದೆ, ಜನ ಸಮುದಾಯದ ನಡುವೆ ಆಟವಾಡುವ ಮುದ್ದುಕೃಷ್ಣನಾಗಿದ್ದಾನೆ. ಸಾಮಾನ್ಯರ ಮೂಲಕ ಹೀಗೆ ದೇವರನ್ನು ಕಾಣುವ ದಾಸರ ರೀತಿ ವಿಶಿಷ್ಟವಾಗಿದೆ. ಹನುಮಂತ, ನರಸಿಂಹ, ಕೃಷ್ಣ ಮೊದಲಾದ ಪ್ರತೀಕಗಳನ್ನು ದಾಸರು ಜನಸಾಮಾನ್ಯರ ಬದುಕಿನ ಮೂಲಕ ಕಟ್ಟಿಕೊಡುವ ರೀತಿ ವಿನೂತನವಾಗಿದೆ.

ವ್ಯಾಸಸ್ಮೃತಿ, ಮನುಸ್ಮೃತಿಗಳನ್ನು ದಾಸರು ಆಳವಾಗಿ ಅಧ್ಯಯನ ಮಾಡಿದ್ದರು, ಅಲ್ಲಿರುವ ಅನೇಕ ಸಾಂಪ್ರದಾಯಿಕ ಗುಣಗಳನ್ನು ವಿರೋಧಿಸಿದ ಪುರಂದರರು ಧರ್ಮಕ್ಕೆ ಹೊಸ ತಿರುವು

ನೀಡಿದರು. ಇದುವರೆಗೆ ಆಚರಣೆಯಲ್ಲಿದ್ದ ವೈಷ್ಣವ ಧರ್ಮಕ್ಕೂ, ಪುರಂದರದಾಸರು ಆಚರಣೆಗೆ ತಂದ ವೈಷ್ಣವ ಧರ್ಮಕ್ಕೂ ವ್ಯತ್ಯಾಸವಿದೆ. ಕೆಳವರ್ಗದಿಂದ ಬಂದ ಕನಕದಾಸರಂತವರನ್ನು ಗೌರವದಿಂದ ಕಂಡು ದಾಸಕೂಟದ ಮೂಲಕ ಬೆಳೆಸಿದ ಕೀರ್ತಿ ಪುರಂದರದಾಸರಿಗೆ ಸಲ್ಲುತ್ತದೆ. ಹುಟ್ಟಿಗೆ ಬಹಳ ಬೆಲೆ ಕೊಡುವ ವೈದಿಕ ಸಂಸ್ಕೃತಿಯನ್ನು ಅಲ್ಲಗಳೆದ ದಾಸರು ಆ ಧರ್ಮದಲ್ಲಿ ಅನೇಕ ಸುಧಾರಣೆಗಳನ್ನು ತಂದರು.

ಮೋಕ್ಷ ಪಡೆಯುವುದಕ್ಕೆ ದಾಸರು ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟರೂ ಕೂಡ, ಮಾನವೀಯತೆಯನ್ನು ಅವರು ಧರ್ಮದ ಮೂಲಕ ಬೆಳೆಸಿದರು. ಬಡವರ ಬಗೆಗೆ – ದೀನ ದಲಿತರ ಬಗೆಗೆ ಅತ್ಯಂತ ಅನುಕಂಪವುಳ್ಳವರಾಗಿದ್ದ ದಾಸರು, ಧಾರ್ಮಿಕ ಕ್ಷೇತ್ರದಲ್ಲಿ ಸಕಲರಿಗೂ ಅವಕಾಶಗಳಿರಬೇಕೆಂದು ವಾದಿಸಿದರು.

ಹೀಗೆ ಬಸವೇಶ್ವರ ಮತ್ತು ಪುರಂದರದಾಸರು ಧಾರ್ಮಿಕ ಕ್ಷೇತ್ರದಲ್ಲಿ ಅನೇಕ–ಸುಧಾರಣೆ ಗಳನ್ನು ತಂದು ಪ್ರಮುಖವಾದುದನ್ನು ಸಾಧಿಸಿದ್ದಾರೆ. ಭಕ್ತನಾದರೆ ಬಸವಣ್ಣಂತಿರಬೇಕೆಂದು ಅಲ್ಲಮಪ್ರಭು ಹೇಳಿದ್ದರೆ, ದಾಸರೆಂದರೆ ಪುರಂದರದಾಸರಯ್ಯಯೆಂದು ವ್ಯಾಸರಾಯರು ಹೇಳಿದ್ದಾರೆ. ಬಸವೇಶ್ವರ ಮತ್ತು ಪುರಂದರದಾಸರಿಬ್ಬರೂ, ಭಕ್ತಿಪಂಥದ ಎರಡು ಪ್ರಮುಖ ಸಾಧನೆಗಳಂತೆ ಕಾಣುತ್ತಾರೆ.

ಬಸವೇಶ್ವರರು ಮತ್ತು ಪುರಂದರದಾಸರು ಧಾರ್ಮಿಕ ಕ್ಷೇತ್ರದ ಮೂಲಕವೇ ತಮ್ಮನ್ನು ಗುರುತಿಸಿಕೊಂಡರೂ, ಬಸವೇಶ್ವರರು ಧರ್ಮದ ಮೂಲಕ ಸಮಾಜ ಬದಲಾವಣೆಗೆ ಪ್ರಯತ್ನಿಸಿ, ಧರ್ಮವನ್ನು ಚಳವಳಿಯ ಹಂತದಲ್ಲಿ ಬೆಳೆಸಿದರೆ, ಪುರಂದರದಾಸರು ಧರ್ಮಸುಧಾರಣೆಯ ಮೂಲಕ ಸಾಮಾಜಿಕ ನ್ಯೂನತೆಗಳನ್ನು ಹೇಳಿದ್ದಾರೆ. ಪುರಂದರದಾಸರು ಭಕ್ತಿಪಂಥಗಳ ಪ್ರಮುಖರಲ್ಲಿ ಒಬ್ಬರಾದರೆ, ಬಸವೇಶ್ವರರು ಹಾಗೆ ಪ್ರಮುಖವಾಗುವದ ರೊಂದಿಗೆ, ಧರ್ಮವನ್ನು ಸಮಾಜ ವ್ಯವಸ್ಥೆಯ ಬದಲಾವಣೆಗಾಗಿ ಬಳಸಿಕೊಂಡ ವಿಶಿಷ್ಟವ್ಯಕ್ತಿತ್ವದ ಕ್ರಾಂತಿಕಾರಿಗಳಾಗಿ ಕಾಣಿಸುತ್ತಾರೆ. ಬಸವೇಶ್ವರರಲ್ಲಿ ಕಾಣುವ ಸೈದ್ಧಾಂತಿಕ ಸ್ಪಷ್ಟತೆ, ಧರ್ಮದ ಅರ್ಥವಿವರಣೆ, ಧರ್ಮ–ಸಮಾಜಕ್ಕಿರುವ ಅರ್ಥಪೂರ್ಣ ಸಂಬಂಧದ ವಿಶ್ಲೇಷಣೆ ಉಳಿದವರಲ್ಲಿ ಕಾಣುವುದಿಲ್ಲ. ಹೀಗಾಗಿ ಬಸವೇಶ್ವರರು ಕೇವಲ ಪುರಂದರದಾಸರಿಗೆ ಮಾತ್ರವಲ್ಲ ಇತರ ಯಾವುದೇ ಮಹಾವ್ಯಕ್ತಿಗಳಿಗಿಂತಲೂ ವಿಶಿಷ್ಟವಾಗಿ ಕಾಣುತ್ತಾರೆ.

ಬಸವೇಶ್ವರರು ಆಚರಣೆಗೆ ತಂದ ಶರಣಧರ್ಮ ಮೊದಲಿನ ವೀರಶೈವ ಧರ್ಮಕ್ಕಿಂತ ತುಂಬ ವಿನೂತನವಾದುದು. ಎಲ್ಲ ಜಾತಿ ಸಮುದಾಯವನ್ನು ಒಂದೆಡೆ ಸೇರಿಸಿ ಧರ್ಮದ ಮೂಲಕ ಸಾಮಾಜಿಕ ಹೋರಾಟವೊಂದನ್ನು ಹುಟ್ಟುಹಾಕಿದ ಬಸವೇಶ್ವರರ ಧಾರ್ಮಿಕ ಸಾಧನೆ ಈ ದೇಶದಲ್ಲಿಯೇ ತುಂಬ ವಿಶಿಷ್ಟವಾದುದು. ಬಸವೇಶ್ವರರು ತಾವು ಹಾಕಿಕೊಂಡಿರುವ ಗೆರೆಗಳನ್ನು ತಾವೇ ದಾಟಿ ಮುನ್ನಡೆದಿರುವುದು ಅವರ ವೈಚಾರಿಕ ನಿಲುವಿಗೆ ಸ್ಪಷ್ಟ ನಿದರ್ಶನವಾಗಿದೆ. ಧಾರ್ಮಿಕ ಕ್ಷೇತ್ರದ ಮೂಲಕ ಬೆಳೆದು ಬಂದ ಯಾವ ಧರ್ಮಪುರುಷನೂ ಇಂತಹ ದಿಟ್ಟ ನಿಲುವುಗಳನ್ನು ತೆಗೆದುಕೊಂಡಿಲ್ಲವೆಂಬುದಕ್ಕೆ ಚರಿತ್ರೆಯಲ್ಲಿಯೇ ಆಧಾರಗಳಿವೆ. ಹೀಗೆ ಧಾರ್ಮಿಕ ಕ್ಷೇತ್ರಕ್ಕೆ ಸರಳತೆಯನ್ನು ತಂದು ಆ ಮೂಲಕ ಸಾಮಾಜಿಕ ಚಳವಳಿಯನ್ನು ಹುಟ್ಟಿಹಾಕಿದ್ದ ಬಸವೇಶ್ವರರು ಜಗತ್ತಿನಲ್ಲಿಯೇ ತುಂಬ ವಿಶಿಷ್ಟ ವ್ಯಕ್ತಿಗಳಾಗಿ ಕಾಣುತ್ತಾರೆ.

ಸಾಮಾಜಿಕ ಸಾಧನೆ

ಬಸವೇಶ್ವರರು ಧಾರ್ಮಿಕ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆಯಂತೆ, ಅವರು ಸಾಮಾಜಿಕ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆಯೂ ತುಂಬ ಮುಖ್ಯವಾದುದು. ಜನಸಾಮಾನ್ಯರ ನಡುವೆ ಬೆಳೆದ ಬಸವೇಶ್ವರರಿಗೆ ತಮ್ಮ ಬಾಲ್ಯದಲ್ಲಿಯೇ ಈ ಸಮಾಜವ್ಯವಸ್ಥೆಯಲ್ಲಿರುವ ಅಸಮಾನತೆ ಸ್ಪಷ್ಟವಾಯಿತು. ಜಾತಿ–ಮತಗಳ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಯನ್ನು ಕಂಡ ಅವರ ಮನಸ್ಸು ನವ ಸಮಾಜದ ನಿರ್ಮಾಣಕ್ಕೆ ಕರೆಕೊಟ್ಟಿತು. ಅಂತೆಯೇ ಬಸವೇಶ್ವರರು ಜಾತಿ ರಹಿತವಾದ ಸಂಘಟನೆಯನ್ನು ಕಟ್ಟಿ ಅದನ್ನು ಚಳವಳಿಯನ್ನಾಗಿ ಬೆಳೆಸಿದರು. ಧಾರ್ಮಿಕ ಕ್ಷೇತ್ರದಿಂದಲೇ ಅವರು ಗುರುತಿಸಿಕೊಂಡಿದ್ದರೂ ಅವರ ಮುಖ್ಯ ಉದ್ದೇಶ ನವಸಮಾಜ ನಿರ್ಮಾಣವಾಗಿತ್ತು. ಧರ್ಮದ ಹೆಸರಿನಲ್ಲಿ ಜನಸಾಮುದಾಯವನ್ನು ಒಂದುಗೂಡಿಸಿದ ಅವರು, ಸಮಾಜ ಬದಲಾವಣೆಗಾಗಿ ಸಂಘಟನೆಯನ್ನು ಕಟ್ಟಿ ನಿಲ್ಲಿಸಿದರು.

ಸಮಾಜದ ಬೆಳವಣಿಗೆಗೆ ಕಂಟಕವಾಗಿದ್ದ ಮೂಢ–ನಂಬಿಕೆ, ಅಂಧಸಂಪ್ರದಾಯ ಗಳನ್ನವರು ಮೊದಲು ಹೋಗಲಾಡಿಸಿದರು. ದಾನ ಪದ್ಧತಿಯನ್ನು ಕೈಬಿಟ್ಟು ದಾಸೋಹ ಪದ್ಧತಿಯನ್ನು ಆಚರಣೆಗೆ ತಂದರು. ಕಾಯಕಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ಆರ್ಥಿಕ ಸಮಾನತೆ ತರಲು ಪ್ರಯತ್ನಿಸಿದರು. ಮಹಿಳೆಯರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ದುಡಿಯುವ ಹಕ್ಕನ್ನು ಕಲ್ಪಿಸಿಕೊಡುವುದರ ಜತೆಗೆ ಸಾಂಸ್ಕೃತಿಕವಾಗಿ ಬೆಳೆಯಲು ಕಾರಣರಾದರು. ಶತಮಾನಗಳಿಂದ ಅಸಮಾನತೆಗೆ ಕಾರಣವಾಗಿದ್ದ ಅಸ್ಪೃಶ್ಯತೆಯ ವಿರುದ್ಧ ನಿರಂತರವಾಗಿ ಹೋರಾಡಿದರು. ಎಲ್ಲ ಕಾಯಕಗಳಿಗೂ ಗೌರವ ಕೊಟ್ಟು ಕಾಯಕಗಳಲ್ಲಿಯ ಭಿನ್ನತೆಯನ್ನು ಹೊಡೆದೋಡಿಸಿದರು. ಬಡವರನ್ನು–ದಲಿತರನ್ನು ಬೆಳೆಸುವುದರ ಮೂಲಕ ಜಾತೀಯತೆಯನ್ನು, ವರ್ಗ ಅಸಮಾನತೆಯನ್ನು ಹೋಗಲಾಡಿಸಿದರು: ಸೈದ್ಧಾಂತಿಕ ಸಂಘಟನೆಯನ್ನು ಕಟ್ಟಿ ಪ್ರಮುಖ ಚಳವಳಿಯನ್ನಾಗಿ ಬೆಳೆಸಿದರು. ಹೊಲೆಯರಿಗೆ–ಬ್ರಾಹ್ಮಣರಿಗೆ ಅಂತರ್ಜಾತಿಯ ವಿವಾಹವನ್ನು ಮಾಡಿಸಿ ಚಾರಿತ್ರಿಕ ದಾಖಲೆ ನಿರ್ಮಿಸಿದರು. ಅಹಿಂಸಾ ತತ್ವದ ಮೂಲಕ, ಶಿಸ್ತು–ಸಂಘಟನೆಗಳ ಮೂಲಕ ಸ್ನೇಹ–ಸೌಹಾರ್ದತೆಯ ಮೂಲಕ ಸಾಮಾಜಿಕವಾಗಿ ಆಮೂಲಾಗ್ರ ಬದಲಾವಣೆ ಯನ್ನು ತಂದ ಬಸವೇಶ್ವರರ ಸಾಮಾಜಿಕ ಸಾಧನೆ ತುಂಬ ಮಹತ್ವವಾದುದಾಗಿದೆ.

ಬಸವೇಶ್ವರರ ಮಹತ್ತರವಾದ ಸಾಧನೆಯೆಂದರೆ ಜಾತೀಯತೆಯನ್ನು ಹೊಡೆದೋಡಿಸಲು ಹೋರಾಡಿದ್ದಾಗಿದೆ. ಅವರ ಚಳವಳಿಗೆ ಮೂಲ ಕಾರಣವೇ ಈ ಜಾತಿ ವ್ಯವಸ್ಥೆ, ಮತ್ತೆ ಈ ಚಳವಳಿಯ ವಿಫಲತೆಗೂ ಅದೇ ಕಾರಣವಾಗಿದೆ. ಜಾತಿ ಮೂಲವಾಗಿದ್ದ ವ್ಯವಸ್ಥೆಯಲ್ಲಿ ಮಾನವೀಯತೆ–ಸಾಧನೆ–ಸಮಾನತೆಗಳನ್ನು ಅವರು ಕಲಿಸಿದರು. ಜಾತಿ–ಕುಲ–ಗೋತ್ರಗಳನ್ನನುಸರಿಸಿ ವರ್ಣಭೇದಗಳಾಗಿದ್ದವು. ಬಸವೇಶ್ವರರ ಸಾಮಾಜಿಕ ವ್ಯವಸ್ಥೆಯಲ್ಲಿ ಈ ಕುಲಭೇದ–ವರ್ಣಭೇದ–ವೃತ್ತಿಭೇದ–ಲಿಂಗಭೇದಗಳೆಲ್ಲಾ ಅಳಿದು ಕಾಯಕ ಮುಖ್ಯವಾಯಿತು. ಸಮಾನತೆ ಮುಖ್ಯವಾಯಿತು, ದಾಸೋಹ ಮುಖ್ಯವಾಯಿತು, ಮಾನವೀಯತೆ ಮುಖ್ಯವಾಯಿತು. ಎಲ್ಲ ಕುಲಗಳೂ ಅಳಿದು ಮಾನವ ಕುಲವೊಂದೇ ಉಳಿಯಿತು. ಹೊಲೆಯ ಎಂಬುದು ಒಂದು ಜಾತಿಯಲ್ಲ, ಅದೊಂದು ಮನೋಭಾವವೆಂದು ಹೇಳಿದ ಬಸವೇಶ್ವರರು 'ಕೊಲುವವನೇ ಮಾದಿಗ, ಹೊಲಸು ತಿನ್ನುವವನೇ ಹೊಲೆಯನೆಂದು ಸ್ಪಷ್ಟಪಡಿಸಿದರು. 'ಹೊಲೆಯ ಹೊಲಬಿಗನಾದರೆ ಆತನ ಹೊಲೆಯುಲಿಪ್ಪುದು ಲೇಸು

ಕಂಡಯ್ಯಾ' ಎಂದು ಹೇಳಿದ ಅವರು 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಸದಿರಯ್ಯಾ' ಎಂದು ಹೇಳಿಕೊಂಡರು. ಸಕಲರಿಗೂ ಲೇಸನೇ ಬಯಸುವವರು ನಿಜವಾದ ಕುಲಜರೆಂದು ಸಾರಿ ಹೇಳಿದರು. 'ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರಕಕ್ಕಯ್ಯ'ನೆಂದು ಹೇಳಿದ ಅವರು ಚಿಕ್ಕಯ್ಯ, ಬೊಮ್ಮಯ್ಯರನ್ನು ನೆನಪಿಸಿದರು. ತಾವು ಉತ್ತಮ ಕುಲದಲ್ಲಿ ಹುಟ್ಟಿದವರೆಂಬುದನ್ನು ಮರೆತು, ಕೀಳು ಕುಲದವರೆಂದು ಕರೆಸಿಕೊಳ್ಳುವವರ ಜತೆ ಒಂದಾಗಿ ಬಾಳಿದರು. 'ಕೀಳಿಂಗಲ್ಲದೆ ಹಯನ ಕರೆಯದು' ಎಂದು ಸ್ಪಷ್ಟಪಡಿಸಿದರು. ಯಜಮಾನ ಸಂಸ್ಕೃತಿ ನಿರ್ಮಿಸಿದ ಜಾತಿ ವ್ಯವಸ್ಥೆಯನ್ನು ನಾಶಗೊಳಿಸುವುದರ ಮೂಲಕ ಜನಸಮುದಾಯ ಸಂಸ್ಕೃತಿಯನ್ನು ಬೆಳೆಸಿ ನಿಲ್ಲಿಸಿದ್ದು ಬಸವೇಶ್ವರರ ಬಹುದೊಡ್ಡ ಸಾಧನೆಯಾಗಿದೆ. ಕೀಳಿಂಗೆ ಗೌರವ ನೀಡುವುದು, ಹೊಲೆಯರನ್ನು ಅಪ್ಪ-ಬೊಪ್ಪರೆಂದು ಅಪ್ಪಿಕೊಳ್ಳುವುದು ಪ್ರತಿಕೂಲ ಸಂಸ್ಕೃತಿಯನ್ನು ನಾಶಪಡಿಸುವುದರ ಜತೆಗೆ, ಜನಪರ ಸಂಸ್ಕೃತಿಯನ್ನು ಬೆಳೆಸುವುದಾಗಿದೆ. ಉಚ್ಚಕುಲದವರೆಂದು ಕರೆಯಿಸಿಕೊಳ್ಳುತ್ತಿದ್ದ ಮಧುವರಸರ ಮಗಳೊಂದಿಗೆ, ಕೀಳು ಕುಲದವರೆಂದು ಕಡೆಗಣಿಸಿದ್ದ ಹರಳಯ್ಯನ ಮಗನನ್ನು ಜತೆಗೂಡಿಸಿ ವಿವಾಹ ಮಾಡುವ ಅವರ ಮುಖ್ಯ ಉದ್ದೇಶ ಜಾತಿ ವ್ಯವಸ್ಥೆಯನ್ನು ಹೊಡೆದೋಡಿಸಿ ಸಾಮಾಜಿಕ ಸಮಾನತೆಯನ್ನು ಸಾಧಿಸುವುದೇ ಆಗಿದೆ.

ಬಸವೇಶ್ವರರ ಮತ್ತೊಂದು ಮಹತ್ತರವಾದ ಸಾಧನೆಯೆಂದರೆ ಕಾಯಕಕ್ಕೆ ಪ್ರಾಮುಖ್ಯತೆ ನೀಡಿ ಕಾಯಕಗಳಲ್ಲಿದ್ದ ತಾರತಮ್ಯವನ್ನು ಹೋಗಲಾಡಿಸಿದ್ದಾಗಿದೆ. ವರ್ಣಾಶ್ರಮಧರ್ಮದ ನಿಯಮಗಳನ್ನು ಕಟ್ಟುನಿಟ್ಟಾಗಿ ಆಚರಿಸುತ್ತಿದ್ದ ಅಂದಿನ ಕಾಲದಲ್ಲಿ ಬೇರೆ ಬೇರೆ ಜಾತಿಯವರಿಗೆ ಬೇರೆ ಬೇರೆ ಉದ್ಯೋಗಗಳು ನಿಗದಿಯಾಗಿದ್ದವು. ಬ್ರಾಹ್ಮಣರಿಗೆ ವೇದಾಧ್ಯಯನ, ಅಧ್ಯಾಪನ, ಯಾಜನದಂತಹ ಕಾರ್ಯಗಳಿದ್ದರೆ, ಕ್ಷತ್ರಿಯರಿಗೆ ದೇಶರಕ್ಷಿಸುವ, ರಾಜ್ಯವನ್ನಾಳುವ ಕಾರ್ಯಗಳಿದ್ದವು. ವೈಶ್ಯರಿಗೆ ವ್ಯಾಪಾರ-ಒಕ್ಕಲತನ, ಶೂದ್ರರಿಗೆ ಪರಸೇವೆ ಮಾಡುವುದು, ಪಂಚಮರಿಗೆ ಮಲಹೊರುವುದು ಈ ಮುಂತಾದ ಉದ್ಯೋಗಗಳು ರೂಢಿಮೂಲವಾಗಿದ್ದ ಸಂದರ್ಭದಲ್ಲಿ ಬಸವೇಶ್ವರರು ಉದ್ಯೋಗವನ್ನು ಕಾಯಕವನ್ನಾಗಿ ಪರಿವರ್ತಿಸಿ, ಹುಟ್ಟಿನ ಆಧಾರವನ್ನು ಕೈಬಿಟ್ಟು, ಅರ್ಹತೆಯ, ಅಭಿರುಚಿಯ ಆಧಾರದ ಮೇಲೆ ಕಾಯಕಗಳನ್ನು ಮಾಡಲು ಹೇಳಿ ಎಲ್ಲ ಕಾಯಕಗಳಿಗೂ ಸಮಾನ ಸ್ಥಾನ ಕಲ್ಪಿಸಿದರು. ಶ್ರಮಪಟ್ಟು ಬೆವರು ಸುರಿಸಿ ದುಡಿಯಬೇಕಾದ ಉದ್ಯೋಗಗಳೆಲ್ಲ ಶೂದ್ರರು-ದಲಿತರಿಗೆ ಮೀಸಲಾಗಿದ್ದು, ಅವು ಅತಿ ಕೀಳು ಉದ್ಯೋಗಗಳೆಂದು ಕರೆಯಲ್ಪಟ್ಟಿದ್ದವು. ಇಂತಹ ವೃತ್ತಿಗಳ ಮೂಲಕವೇ ಕುಲಗಳು ಹುಟ್ಟಿಕೊಂಡು ಜಾತಿವ್ಯವಸ್ಥೆಯನ್ನು ಭದ್ರವಾಗಿ ಕಟ್ಟಿದ್ದವು. ಈ ಸಮಸ್ಯೆಯ ಮೂಲವನ್ನು ಹುಡುಕಿದ ಬಸವೇಶ್ವರರು ಎಲ್ಲ ವೃತ್ತಿಗಳಿಗೂ ಸಮಾನ ಗೌರವ ನೀಡಿ ಅವುಗಳನ್ನು ಕಾಯಕಗಳ ಹಂತಕ್ಕೆ ಬೆಳೆಸಿದರು.

'ಸೆಟ್ಟಿಯೆಂಬೆಗೆ ಸಿರಿಯಾಳನ? ಮಡಿವಾಳನೆಂಬೆನ ಮಾಚಯ್ಯನ?' ಎನ್ನುವಂತಹ ಅವರ ವಚನಗಳ ಮೂಲಕ ಈ ಸತ್ಯವನ್ನು ಕಂಡುಕೊಳ್ಳಬಹುದಾಗಿದೆ. ಪ್ರತಿಯೊಬ್ಬ ವ್ಯಕ್ತಿಗೂ, ಪ್ರತಿಯೊಂದು ವೃತ್ತಿಗೂ ಅವರು ಗೌರವ ನೀಡಿದ್ದರಿಂದ, ಶತಮಾನಗಳಿಂದ ಬೆಳೆದು ಬಂದಿದ್ದ ವೃತ್ತಿ ಅಸಮಾನತೆ ತನ್ನಷ್ಟಕ್ಕೆ ತಾನೇ ಹೊರಟು ಹೋಗುವಂತಾಯಿತು. ಉದ್ಯೋಗದ ಅಳತೆಗೋಲಿನಿಂದ ಜನತೆಯನ್ನು ಮೇಲು-ಕೀಳುಯೆಂದು ನಿರ್ಧರಿಸುವುದು ತಪ್ಪೆಂದು

ಹೇಳುವುದರ ಸಲುವಾಗಿಯೇ ಅವರು 'ಕಾಸಿಕಮ್ಮಾರನಾದ ಬೀಸಿ ಮಡಿವಾಳನಾದ' ಎಂದು ಸ್ಪಷ್ಟಪಡಿಸಿದರು. ಕಾಯಕಕ್ಕೆ ಪ್ರಾಮುಖ್ಯತೆ ನೀಡಿ ಎಲ್ಲರೂ ಸಂಪಾದಿಸಿದ ಹಣವನ್ನು ಒಂದೆಡೆ ಸೇರಿಸಿ ದಾಸೋಹದ ಮೂಲಕ ಅದನ್ನು ವ್ಯಯ ಮಾಡತೊಡಗಿದ್ದು ಬಸವೇಶ್ವರರ ಹೊಸ ಆರ್ಥಿಕ ನೀತಿಗೆ ಬುನಾದಿ ಹಾಕಿದಂತಿದೆ. ಕಾಯಕವೆಂದರೆ ಕೇವಲ ಕೆಲಸವಾಗಿರದೆ, ಅದರಲ್ಲಿ ಆದರ್ಶವೂ ಕೂಡಿಕೊಂಡು ಅದೊಂದು ಮೌಲ್ಯವಾಯಿತು. ಗುರುವಾಗಲಿ, ಜಂಗಮವಾಗಲಿ ಕಾಯಕದಿಂದಲೇ ಮುಕ್ತಿಯೆಂದು ಸಾರಿದ್ದರಿಂದ ಆಲಸ್ಯ-ದಾರಿದ್ರ್ಯ ಹೊರಟುಹೋಗಿ ಎಲ್ಲರೂ ದುಡಿದು ಸ್ವಾವಲಂಬನೆಯಿಂದ ಬದುಕಲು ಸಾಧ್ಯವಾಯಿತು.

ದಾನಪದ್ಧತಿಯನ್ನು ಕೈಬಿಟ್ಟು ದಾಸೋಹ ಪದ್ಧತಿಯನ್ನು ಜಾರಿಗೆ ತಂದದ್ದು ಬಸವೇಶ್ವರರ ಪ್ರಮುಖ ಸಾಧನೆಯಾಗಿದೆ. ದಾನ ಪದ್ಧತಿಯಲ್ಲಿ ಕೊಡುವವ ಪಡೆಯುವವನೆಂಬ ಭೇದ ಹುಟ್ಟಿ ವರ್ಗಪದ್ಧತಿ ನಿರಂತರವಾಗಿ ಉಳಿದುಕೊಂಡು ಬರುತ್ತಿದ್ದುದನ್ನು ಗಮನಿಸಿದ ಬಸವೇಶ್ವರರು, ಕೊಡುವ-ಪಡೆಯುವ ಸಮಾನ ಅವಕಾಶ ಹೊಂದಿದ ದಾಸೋಹ ಪದ್ಧತಿಯನ್ನು ಆಚರಣೆಗೆ ತಂದದ್ದರಿಂದ ಒಂದು ರೀತಿಯ ವರ್ಗ ಹೋರಾಟದ ಆಶಯಗಳನ್ನು ಆಗಲೇ ಹುಟ್ಟುಹಾಕಿದರೆಂಬುದು ಸ್ಪಷ್ಟವಾಗುತ್ತದೆ. ನಾನು ಕೊಟ್ಟೆನೆಂಬ ಅಹಂಭಾವ ದಾನ ಪದ್ಧತಿಯಲ್ಲಿದ್ದರೆ, ಅರ್ಪಿಸಿದೆನೆಂಬ ಸಮರ್ಪಣಾಭಾವ ದಾಸೋಹ ಪದ್ಧತಿಯಲ್ಲಿದೆ. ನಾನು ಪಡೆದೆನೆಂಬ ಕೀಳರಿಮೆ ದಾನ ಪದ್ಧತಿಯಲ್ಲಿದ್ದರೆ, ನಾನು ಸ್ವೀರಸಿದೆನೆಂಬ ಪ್ರಸಾದಗುಣ ದಾಸೋಹ ಪದ್ಧತಿಯಲ್ಲಿದೆ. ಅಸಮಾನತೆಗೆ ಕಾರಣವಾದುದನ್ನು ಗುರುತಿಸಿ ಅಲ್ಲಿ ಬದಲಾವಣೆ ಮಾಡುವುದರ ಮೂಲಕ ಸಮಾನತೆಯನ್ನು ಹುಟ್ಟು ಹಾಕಿದ ಶ್ರೇಯಸ್ಸು ಬಸವೇಶ್ವರರಿಗೆ ಸಲ್ಲುತ್ತದೆ. ಅಹಂಭಾವ-ಕೀಳರಿಮೆ ಹೊರಟು ಹೋಗಿ, ಸಮರ್ಪಣಾಭಾವ-ವಿನಯತೆ-ಬೆಳೆದು ಬರಲು ಮುಖ್ಯ ಕಾರಣವೆಂದರೆ ದಾನಪದ್ಧತಿಯ ಬದಲಾಗಿ ದಾಸೋಹ ಪದ್ಧತಿ ಜಾರಿಗೆ ಬಂದುದಾಗಿದೆ.

ಬಸವೇಶ್ವರರ ಇನ್ನೊಂದು ಸಾಧನೆಯೆಂದರೆ ಸಂಘಿಕಜೀವನಕ್ಕೆ ಮಹತ್ವ ನೀಡಿದುದಾಗಿದೆ. ಜನ ಸಮುದಾಯವೆಲ್ಲಾ ಒಂದೆಡೆ ಸೇರಿ ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದರ ಮೂಲಕ, ತಮ್ಮ ತಮ್ಮ ಗುಣದೋಷಗಳನ್ನು ತಿಳಿದುಕೊಳ್ಳುವುದರ ಮೂಲಕ ಬೆಳೆಯಬಹುದಾದ ಮಹತ್ವದ ಸಾಧನವೆಂದರೆ ಸಾಂಘಿಕ ಜೀವನ. ಬಸವೇಶ್ವರರು ಅನುಭವ ಮಂಟಪದ ಮೂಲಕ ಇಂತಹ ಸಾಂಘಿಕ ಜೀವನಕ್ಕೆ ಬುನಾದಿ ಹಾಕಿದರು. ಬುದ್ಧನೂ ಕೂಡ ಸಾಂಘಿಕ ಜೀವನಕ್ಕೆ ಬಹಳ ಮಹತ್ವದ ಸ್ಥಾನ ನೀಡಿದುದನ್ನು ಇಲ್ಲಿ ಗಮನಿಸಬಹುದು. ಅನೇಕ ವಿದ್ವಾಂಸರು ಹೇಳುವಂತೆ ಅನುಭವ ಮಂಟಪ ಮೊಟ್ಟಮೊದಲನೇ ಪಾರ್ಲಿಮೆಂಟಾಗಿತ್ತು. 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ' ಎಂದು ಹೇಳಿದ ಬಸವೇಶ್ವರರು ಜ್ಞಾನವರ್ಧನೆಗೆ, ಮುಕ್ತ ಚರ್ಚೆಗೆ, ವಿಚಾರಗಳ ಸಂಘರ್ಷಕ್ಕೆ ಅನುಭವ ಮಂಟಪವನ್ನು ಕಟ್ಟಿ, ಬೌದ್ಧಿಕ ದಾಸೋಹವನ್ನೇರ್ಪಡಿಸಿದರು. ವಯಸ್ಸು, ಲಿಂಗ, ಜಾತಿ, ದೇಶ, ಭಾಷೆ, ಅಂತಸ್ತು, ಅಧಿಕಾರ ಇದಾವುದರ ಭೇದವಿರದೆ ವಚನ ಚಳವಳಿಯಲ್ಲಿ ಭಾಗವಹಿಸಿದ ಸಕಲರೂ ಒಂದೆಡೆ ಸೇರಿ, ಮುಕ್ತವಾಗಿ ಚರ್ಚಿಸಿ, ತಮ್ಮನ್ನು ತಾವೇ ತಿದ್ದಿಕೊಂಡು, ತಮ್ಮ ಗೆರೆಗಳನ್ನು ತಾವೇ ದಾಟಿಕೊಂಡು ಮುನ್ನಡೆದದ್ದು ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಸಂಗತಿಯಾಗಿದೆ.

ಸ್ತ್ರೀ ಶೋಷಣೆಯನ್ನು ತಡೆದು, ಮೊಟ್ಟಮೊದಲ ಬಾರಿಗೆ ಸ್ತ್ರೀ ಸ್ವಾತಂತ್ರ್ಯ ತಂದು ಕೊಟ್ಟವರಲ್ಲಿ ಬಸವೇಶ್ವರರು ಪ್ರಮುಖರು. ಮಹಿಳೆಯರಿಗೆ ಪುರುಷರಷ್ಟೇ ಸಮಾನ ಅವಕಾಶಗಳನ್ನು ಒದಗಿಸಲು ಅವರು ಪ್ರಯತ್ನಿಸಿದರು. 'ಪರವಧುವ ಮಹಾದೇವಿಯೆಂಬೆ, ಎನ್ನ ಹೆತ್ತ ತಾಯ್ಗಳೆಂಬೆ' ಎನ್ನುವ ಸ್ತ್ರೀಯರ ಬಗೆಗಿನ ಅವರ ಭಾವನೆಗಳು ಪವಿತ್ರವಾಗಿವೆ. ಸ್ತ್ರೀಯನ್ನು ಕೇವಲ ಭೋಗದ ವಸ್ತುವೆಂದು ತಿಳಿದ ಯಜಮಾನ ಸಂಸ್ಕೃತಿ ಆಕೆಯನ್ನು ಗುಲಾಮಳಂತೆ ನಡೆಸಿಕೊಂಡು ಬಂದ ಸಂದರ್ಭದಲ್ಲಿ, ಬಸವೇಶ್ವರರು ಆ ಶೋಷಣೆಯನ್ನು ತಪ್ಪಿಸಿ ಆಕೆಗೂ ಸಮಾನವಾಗಿ ಬದುಕುವ ಅವಕಾಶವನ್ನು ನೀಡಿದರು. ಆಕೆಯನ್ನು ಹೆಣ್ಣೆಂದು ಕಡೆಗಣಿಸದೆ, ಮಾಯೆಯೆಂದು ದೂರದೆ, ಮಾತೆಯೆಂದು ಗೌರವಿಸಿದರು. ಪರಸತಿಯನೊಲ್ಲೆನೆಂಬ ಛಲ ಶರಣನಿಗಿರಬೇಕೆಂದರು. ಪರವಧುವ ನೋಡುವ ಸರಸಬೇಡ ಎಂದು ಸಾರಿದ ಅವರು ಮಹಿಳೆಗೆ ಅತ್ಯಂತ ಗೌರವದ ಸ್ಥಾನವನ್ನು ಕಲ್ಪಿಸಿದರು.

ಯಾವ 'ಧರ್ಮ' ಮಹಿಳೆಯನ್ನು ಶತಮಾನಗಳಿಂದ ದೂರವಿಟ್ಟಿತ್ತೋ, ಆ 'ಧರ್ಮ'ಕ್ಕೆ ಮಹಿಳೆ ಅನಿವಾರ್ಯವಾಗುವ ಹಾಗೆ ಮಾಡಿದ್ದು ಶರಣರ ಸಾಧನೆಯಾಗಿದೆ. ಮಹಾದೇವಿಯಕ್ಕನಂತಹ ಮಹಿಳೆ ಅನುಭವ ಮಂಟಪದ ಸಾಧಕಳಾಗಿ ಬೆಳೆದದ್ದು, ಲಕ್ಕಮ್ಮನಂತಹ ಮಹಿಳೆ ಈಸಕ್ಕಿಯ ಅತಿಯಾಸೆ ಸರಿಯಲ್ಲವೆಂದು ಗಂಡನಿಗೆ ಬುದ್ಧಿ ಹೇಳಿದ್ದು, ಅವರೆಂತ ಕುಲಜರೆಂದು ಕಾಳವ್ವೆಯಂತವರು ಸಮಾಜ ವ್ಯವಸ್ಥೆಯನ್ನು ಪ್ರಶ್ನೆ ಮಾಡಿದ್ದು, ಹೆಣ್ಣು ಏಕೆ ಒಡವೆ ಗಂಡೇಕೆ ಒಡವೆಯಾಗಬಾರದೆಂದು ಗೊಗ್ಗವ್ವೆಯಂತವರು ಕೇಳಿದ್ದು; ನಾನೆಂಬುದ ಬಿಡಲಾರದವ ನೀನೇನ ಹೇಳಿಬಲ್ಲೆಯೆಂದು ಮುಕ್ತಾಯಕ್ಕನಂತಹ ಮಹಿಳೆ ಪ್ರಭುವನ್ನೇ ಪ್ರಶ್ನಿಸಿದ್ದು–ಇವೆಲ್ಲ ಪ್ರಸಂಗಗಳನ್ನು ಗಮನಿಸಿದಾಗ ವಚನಕಾರ್ತಿಯರು ಎಂತಹ ಸ್ವಾಭಿಮಾನಿಗಳಾಗಿದ್ದರು, ಎಂತಹ ಆತ್ಮಗೌರವವುಳ್ಳವರಾಗಿದ್ದರೆಂಬುದು ಸ್ಪಷ್ಟವಾಗುತ್ತದೆ. ಹೀಗೆ ಈ ಮಹಿಳೆಯರೆಲ್ಲ ಆಧ್ಯಾತ್ಮ ಕ್ಷೇತ್ರದಲ್ಲಿ, ಸಾಮಾಜಿಕ ಸಂದರ್ಭದಲ್ಲಿ ಬೆಳೆದು ನಿಲ್ಲಲು, ಅವರಿಗೆ ಪ್ರೇರಣೆಯಾಗಿ ನಿಂತು ಪ್ರೋತ್ಸಾಹಿಸಿದವರು ಬಸವೇಶ್ವರರು. ಬಸವೇಶ್ವರರು ತಂದ ಮಹಿಳಾ ಸಮಾನತೆ ಕೇವಲ ನುಡಿಯಲ್ಲಿರದೆ ನಡೆಯಲ್ಲಿದ್ದುದನ್ನು ಕಾಣಬಹುದಾಗಿದೆ. ಹಾಗೂ 'ಬಸವಣ್ಣನವರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು' ಎನ್ನುವ ಮಹಾದೇವಿಯಕ್ಕನ ವಚನವೊಂದನ್ನು ಗಮನಿಸಿದಾಗ ಈ ಮಾತು ಇನ್ನೂ ಸ್ಪಷ್ಟವಾಗುತ್ತದೆ. ಕೇವಲ ಭೋಗದ ವಸ್ತುವಾಗಿದ್ದ ಸ್ತ್ರೀಗೆ ಎಲ್ಲ ಸ್ವಾತಂತ್ರ್ಯವನ್ನೂ ಕೊಟ್ಟು, ಮಾತೆಯೆಂದು ಗೌರವಿಸಿ ಅವರನ್ನು ಎತ್ತರೆತ್ತರಕ್ಕೆ ಬೆಳೆಸಿದ ಬಸವೇಶ್ವರರ ಸಾಧನೆ ಉನ್ನತವಾದುದಾಗಿದೆ.

ಅಂದಿನ ಸಮಾಜ ವ್ಯವಸ್ಥೆಯಲ್ಲಿ ಜನಜಾಗೃತಿಯನ್ನುಂಟು ಮಾಡುವ ಕಾರ್ಯಕ್ರಮ ಹಾಕಿಕೊಂಡದ್ದು ಬಸವೇಶ್ವರರ ದೊಡ್ಡ ಸಾಧನೆಯಾಗಿದೆ. ಜನಸಾಮಾನ್ಯರ ಬೆಳವಣಿಗೆ ಗಾಗಿಯೇ ಅವರ ಹೋರಾಟ ಕೇಂದ್ರೀಕೃತವಾದುದರಿಂದ ಸಾಮಾನ್ಯರು ಅತ್ಯಂತ ಮುಖ್ಯವೆಂದು ತಿಳಿದು ಮೊದಲು ಗೌರವಿಸಿದವರು ಬಸವೇಶ್ವರರೇ ಆಗಿದ್ದಾರೆ.

ಅಂದಿನ ಸಮಾಜದಲ್ಲಿ ಮೂಢನಂಬಿಕೆ–ಅಂಧಸಂಪ್ರದಾಯಗಳು ಬೇರೂರಿದ್ದಾಗ ಅವುಗಳನ್ನು ಹೊಡೆದೋಡಿಸಲು ಬಸವೇಶ್ವರರು ಅನೇಕ ಲೌಕಿಕ ಉದಾಹರಣೆಗಳ ಮೂಲಕ ಜನಸಾಮನ್ಯರ ಬದಲಾವಣೆಗೆ ಪ್ರಯತ್ನಿಸಿದರು. ಪುರಾಣಗಳಲ್ಲಿದ್ದ ಸುಳ್ಳು ಕಂತೆಗಳನ್ನೆಲ್ಲ ಬಯಲಿಗೆಳೆದರು. ಮಾರಯ್ಯ, ಬೀರಯ್ಯ, ಮಾರಿ, ಮಸಣಿ, ಕೇಚರ, ಗಾವಿಲ, ಅಂತರ,

ಬೆಂತರ, ಕಾಳಯ್ಯ, ಕೇತಯ್ಯ ಇಂತಹ ಅಸಂಖ್ಯಾತ ದೇವತೆಗಳು ಕಾಲಿಡಲು ಇಂಬಿಲ್ಲದಂತೆ ತುಂಬಿಕೊಂಡ ಸಂದರ್ಭದಲ್ಲಿ ಬಸವೇಶ್ವರರು ಏಕದೇವೋಪಾಸನೆಯನ್ನು ಆಚರಣೆಗೆ ತರುವುದರ ಮೂಲಕ ಈ ಪುಡಿದೈವಗಳನ್ನು ತಿರಸ್ಕರಿಸಿದರು. ಅನೇಕ ಭೀಕರ ವ್ರತಗಳನ್ನು ಕೈಬಿಡಲು ತಿಳಿಸಿದರು. ಬಾಯಿಗೆ ಬೀಗಹಾಕಿಕೊಳ್ಳುವುದು, ಬೆಂಕಿಯಕೊಂಡ ಹಾರುವುದು, ಬೆತ್ತಲೆ ತಿರುಗುವುದು, ಮಲಮೂತ್ರ ತಿನ್ನುವುದು–ಈ ಮುಂತಾದ ಅಮಾನವೀಯ ಚಟುವಟಿಕೆಗಳು ದೇವರ ಹೆಸರಿನಲ್ಲಿ ನಡೆಯುತ್ತಿದ್ದಾಗ, ಬಸವೇಶ್ವರರು ಇವುಗಳಿಗೆ ಸಂಬಂಧಿಸಿದಂತೆ ಸ್ಪಷ್ಟ ವಿವರಣೆ ನೀಡಿ ಸಾಮಾನ್ಯ ಜನತೆಯನ್ನು ಮೂಢ ನಂಬಿಕೆಗಳಿಂದ ದೂರವಿರಿಸಿದರು. ಅನೇಕ ರೀತಿಯ ನೇಮಗಳನ್ನು ಮಾಡುತ್ತಿದ್ದವರನ್ನು, ಮಡಿ ಮೈಲಿಗೆಯೆಂದು ಡಾಂಭಿಕ ಭಕ್ತಿ ಮಾಡುವುತ್ತಿದ್ದವರನ್ನು, ಪವಾಡಗಳನ್ನು ಮಾಡಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದವರನ್ನು ಕಟುವಾಗಿ ಟೀಕಿಸಿದ ಬಸವೇಶ್ವರರು ಅವರೆಲ್ಲರಲ್ಲಿ ವೈಚಾರಿಕ ಮನೋಭಾವವನ್ನು ಬೆಳೆಸಿದರು.

ಶುಭಕಾರ್ಯಕ್ಕೆ ಶುಭ ಮೂಹರ್ತಬೇಕೆಂದು ಪುರೋಹಿತರ ಹತ್ತಿರ ಹೋಗಿ ಪರಿತಪಿಸುತ್ತಿದ್ದವರನ್ನು, ಚಂದ್ರಬಲ ತಾರಾಬಲಕ್ಕಾಗಿ ಸಮಯವ್ಯರ್ಥ ಮಾಡುತ್ತಿದ್ದವರನ್ನು, ಕರ್ಮಕಾಂಡದಲ್ಲಿ ಮುಳುಗಿ ಕೊಳೆಯುತ್ತಿದ್ದವರನ್ನು, ಕೀಳರಿಮೆಯಿಂದ ನರಳುತ್ತಿದ್ದವರನ್ನು, ಅಹಂಭಾವದಿಂದ ಬೀಗುತ್ತಿದ್ದವರನ್ನು, ವಶೀಕರಣ ಮಾಡಿ ಕುಣಿಯುತ್ತಿದ್ದವರನ್ನು, ವೇಷ ಹಾಕಿ ಮೋಸ ಮಾಡುತ್ತಿದ್ದವರನ್ನು ಇಂತಹ ಎಲ್ಲ ರೀತಿಯ ಜನರನ್ನು ಕಂಡು ತಿಳಿಸಿ ಹೇಳಿ ಅವರೆಲ್ಲರನ್ನೂ ಮನುಷ್ಯರಂತೆ ಬಾಳಲು ಹಚ್ಚಿದ ಶ್ರೇಯಸ್ಸು ಬಸವೇಶ್ವರರಿಗೆ ಸಲ್ಲುತ್ತದೆ.

ಪುರಂದರದಾಸರು ಸಾಮಾಜಿಕ ಹೋರಾಟಗಾರರಾಗಿರದಿದ್ದರೂ ತಾವು ಕಂಡ ಸಮಾಜದ ವಾಸ್ತವ ಚಿತ್ರಣವನ್ನು ತಮ್ಮ ಕೀರ್ತನೆಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಮುಖ್ಯವಾಗಿ ಅವರು ವೈಷ್ಣವ ಮತದ ಅನುಯಾಯಿಗಳು, ಸಂಸಾರದಿಂದ ದೂರಿದ್ದು ಆಧ್ಯಾತ್ಮ ಸಾಧಿಸಬೇಕೆಂದು ಹೊರಟವರು. ಆದರೆ ತಾಳ–ತಂಬೂರಿ ಹಿಡಿದು ಧರ್ಮಪ್ರಚಾರಕ್ಕೆಂದೇ ಅವರು ಹೊರಟರೂ, ಸಾಮಾಜಿಕ ಸಂಬಂಧಗಳ ಜತೆ ಬಿಡಿಸಿಕೊಳ್ಳಲಾರದೆ ಅಂದಿನ ಸಮಾಜದ ಸ್ಥಿತಿಗತಿಗಳನ್ನು ಕುರಿತು, ಅಂದಿನ ಜನಸಮುದಾಯದ ಗುಣ–ಸ್ವಭಾವಗಳನ್ನು ಕುರಿತು ಬರೆದವರು, ಸಾಮಾಜಿಕ ಅಸಮಾನತೆಯನ್ನು ಕಂಡು ಅವರೂ ಪರಿತಪಿಸಿದ್ದಾರೆ. ಜಾತಿ ಕಲಹವನ್ನು ಕಂಡು ನೊಂದು ನುಡಿದಿದ್ದಾರೆ. ಆದರೆ ಬಸವೇಶ್ವರರಂತೆ ಸಾಮಾಜಿಕ ಬದಲಾವಣೆಗಾಗಿ, ಹೋರಾಟ ಮಾಡಿದವರಲ್ಲ, ಚಳವಳಿ ಕಟ್ಟಿದವರಲ್ಲ. ಸಾಮಾಜಿಕ ಕಳಕಳಿ ಮಾತ್ರ ಅವರಲ್ಲಿ ಕಾಣಿಸುತ್ತದೆ. ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಜನಸಾಮಾನ್ಯರಲ್ಲಿ ಅವರು ತಿಳುವಳಿಕೆಯನ್ನುಂಟು ಮಾಡಿದ್ದಾರೆ. ಅಸ್ಪೃಶ್ಯತೆಯ ಬಗೆಗೆ ಅಸಹ್ಯ ಪಟ್ಟುಕೊಂಡಿದ್ದಾರೆ, ಮೂಢನಂಬಿಕೆ–ಅಂಧ ಸಂಪ್ರದಾಯಗಳ ವಿರುದ್ಧ ಮಾತನಾಡಿದ್ದಾರೆ; ಆತ್ಮ ವಿಮರ್ಶೆಗಾಗಿ ಕರೆ ಕೊಟ್ಟಿದ್ದಾರೆ.

'ಹೊಲೆಯ ಹೊರಗಹನೆ ಊರೊಳಗಿಲ್ಲವೆ?' ಎಂದು ಪ್ರಶ್ನಿಸಿದ ಪುರಂದರದಾಸರು ನಿಜವಾದ ಹೊಲೆಯನಾರೆಂದು ಸ್ಪಷ್ಟಪಡಿಸಿದ್ದಾರೆ. 'ಹೊಲಸು ತಿಂಬುವುವನೇ ಹೊಲೆಯ'ನೆಂದು ಬಸವೇಶ್ವರರು ಹೇಳಿದರೆ; 'ಪರಧನ–ಪರಸತಿಗೆ ಆಸೆ ಮಾಡಿದವ, ಹಿರಿಯರಿಗೆ ಗೌರವ ಕೊಡದವ, ಅರಿತು ಆಚಾರ ಮಾಡದವ' – ಈ ಮುಂತಾದವರೆಲ್ಲಾ

ಹೊಲೆಯರೇ ಹೊರತು, ಊರ ಹೊರಗಿರುವವರು ಹೊಲೆಯರಲ್ಲವೆಂದು ವಿಶ್ಲೇಷಿಸಿದ್ದಾರೆ. ಹೊಲೆತನವೆಂಬುವುದು ಒಂದು ಸ್ವಭಾವವಾದುದರಿಂದ ಅಂತಹ ಸ್ವಭಾವದವರು ಕೇವಲ ಊರ ಹೊರಗೆ ಮಾತ್ರ ಇರುವುದಿಲ್ಲ ಊರೊಳಗೂ ಇದ್ದಾರೆಂಬ ಕಟು ಸತ್ಯವನ್ನು ಸಾರಿದ್ದಾರೆ. ಹೊಲೆತನವೆಂಬುದು ಗುಣಸ್ವಭಾವದಿಂದ ಬರುತ್ತದೆಯೇ ಹೊರತು ಹುಟ್ಟಿನಿಂದಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಮಡಿಮಡಿಯೆಂದು ಮಾರುದ್ದ ಹಾರುವವರಿಗೆ 'ಮಡಿಯೆಲ್ಲಿ ಬಂತೋ ಭಿಕನಾಶಿ' ಎಂದು ಟೀಕಿಸಿದ್ದಾರೆ. ಗಂಗೆಯಲ್ಲಿ ಮುಳುಗಿ ಏಳುವವರನ್ನು ಕಂಡು, ಕಾಶಿಗೆ ಹೋಗಿ ಪವಿತ್ರರಾದೆವೆಂದುಕೊಂಡವರನ್ನು ನೋಡಿ ಕಟುವಾಗಿ ವಿಡಂಬಿಸಿದ್ದಾರೆ.

ಸಂಸಾರವನ್ನು ತೊರೆದಾಕ್ಷಣ ಸಾಮಾಜಿಕ ಬದುಕಿನಿಂದ ಅವರು ವಿಮುಖರಾಗಬೇಕೆಂದು ಹೇಳಲಿಲ್ಲ; ಈಸಬೇಕು ಇದ್ದು ಜಯಿಸಬೇಕೆಂದೇ ಅವರು ಹೇಳಿದರು. 'ವಿಷವನುಣಿಸಿದವಗೆ ಷಡ್ರಸವನುಣಿಸಲು ಬೇಕು' ಎನ್ನುವಂತಹ ಅವರ ನುಡಿಗಳಲ್ಲಿ ಅಹಿಂಸಾತತ್ವದ ಪ್ರತಿಪಾದನೆಯಿದೆ. ದ್ವೇಷ–ಅಸೂಯೆ ಮದ–ಮತ್ಸರಗಳಿಂದ ಏನನ್ನೂ ಸಾಧಿಸಲಿಕ್ಕಾಗುವುದಿಲ್ಲವೆಂದು ಅವರು ಸ್ಪಷ್ಟಪಡಿಸಿದರು. ಅಂದಿನ ಸಂದರ್ಭದಲ್ಲಿ ತಾಳ–ತಂಬೂರಿ ಹಿಡಿದು ತಮ್ಮ ಹಾಡುಗಳ ಮೂಲಕ ಹೀಗೆ ಜನಸಾಮಾನ್ಯರನ್ನು ವಿಚಾರವಂತರನ್ನಾಗಿ ಮಾಡಿದ್ದು, ಬದುಕಿಗೆ ಸಂಬಂಧಿಸಿದಂತೆ ಅನೇಕ ವಿಚಾರಗಳನ್ನು ತಿಳಿಸಿ ಹೇಳಿದ್ದು ಪುರಂದರದಾಸರ ಸಾಮಾಜಿಕ ಕಳಕಳಿಯಾಗಿದೆ. ಅವರದು ಭಾಗವತ ಮಾನವತಾವಾದ. ಇಡೀ ದಾಸಪರಂಪರೆಯಲ್ಲಿಯೇ ಸಾಮಾಜಿಕ ಕಳಕಳಿಯಿಂದ ಹೆಚ್ಚು ಮುಖ್ಯರೆನಿಸಿದವರು ಪುರಂದರದಾಸರೇ ಆಗಿದ್ದಾರೆ.

ಮಹಿಳೆಯರ ಬಗೆಗೆ ಪುರಂದರದಾಸರು ಹೆಚ್ಚು ಹೇಳಿಲ್ಲ. ಸ್ತ್ರೀ ಸ್ವಾತಂತ್ರ್ಯಕ್ಕೆ ಅವರು ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿಲ್ಲ. ದಲಿತರ ಬಗೆಗೂ ಕೂಡ ಅವರಲ್ಲಿ ಅಂತಹ ಆಳವಾದ ಆಲೋಚನೆಗಳಿಲ್ಲ. ಅವರು ಮುಖ್ಯವಾಗಿ ಆಧ್ಯಾತ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದುದರಿಂದ, ಸಾಮಾಜಿಕ ಸಮಸ್ಯೆಗಳಾಗಲಿ, ಸಮಾಜದಲ್ಲಿ ಜನಸಾಮಾನ್ಯರ ಶೋಷಣೆಯಾಗಲಿ, ಅದಕ್ಕೆ ಕಾರಣವಾದ ವ್ಯವಸ್ಥೆಯಾಗಲಿ ಅವರಿಗೆ ಮುಖ್ಯವಾಗಲಿಲ್ಲ. ಅವರು ಬದುಕಿದ್ದ ಸಂದರ್ಭದಲ್ಲಿ, ಅವರು ನಂಬಿದ್ದ ವಿಚಾರಗಳಿಗನುಗುಣವಾಗಿ ತಮ್ಮ ಇತಿ–ಮಿತಿಗಳಲ್ಲಿಯೇ ಕೆಲವು ಸಮಾಜ ಸುಧಾರಣೆಯ ಮಾತುಗಳನ್ನಾಡಿದರು, ಅಲ್ಲಲ್ಲಿ ಕಾಣುವ ಸಮಾಜದ ಲೋಪದೋಷಗಳನ್ನು ಎತ್ತಿ ಹೇಳಿದರು. ಹೀಗಾಗಿ ಅವರ ಸಾಮಾಜಿಕ ಸಾಧನೆಯನ್ನು ಅವರ ಬದುಕಿನ ಇತಿಮಿತಿಗಳಲ್ಲಿ ಗುರುತಿಸಬೇಕೇ ಹೊರತು, ಇವತ್ತಿನ ವೈಜ್ಞಾನಿಕ ಸಂದರ್ಭದ ಹಿನ್ನಲೆಯಲ್ಲಿ, ವೈಚಾರಿಕ ನೆಲೆಗಳ ಹಿನ್ನಲೆಯಲ್ಲಿ ಗುರುತಿಸಲಿಕ್ಕಾಗುವುದಿಲ್ಲ. ಬಸವೇಶ್ವರರು ಮತ್ತು ಪುರಂದರದಾಸರೀರ್ವರೂ ಸಾಮಾಜಿಕವಾಗಿ ಮಾತನಾಡಿದರೂ, ಬಸವೇಶ್ವರರಲ್ಲಿರುವ ಸಾಮಾಜಿಕ ಹೋರಾಟ ಪುರಂದರದಾಸರಲ್ಲಿ ಕಾಣುವುದಿಲ್ಲ, ಹಾಗೆ ಹೋರಾಟ ಮಾಡುವುದೂ ಕೂಡ ಅವರ ಮುಖ್ಯ ಉದ್ದೇಶವಾಗಿರಲಿಲ್ಲ. ಆದುದರಿಂದ ಪುರಂದರದಾಸರಲ್ಲಿ ಕಾಣುವುದು ಸಾಮಾಜಿಕ ಕಳಕಳಿಯೇ ಹೊರತು, ಸಾಮಾಜಿಕ ಸಾಧನೆಯಲ್ಲ. ಆದರೆ ಭಕ್ತಿ ಪಂಥದ ಪ್ರಮುಖರಾಗಿಯೂ ಅವರು ಸಮಾಜದ ಕಡೆ ಗಮನ ಹರಿಸಿದ್ದು ಮುಖ್ಯವೆನಿಸುತ್ತದೆ.

ಸಾಹಿತ್ಯಕ ಸಾಧನೆ

ಬಸವೇಶ್ವರರು ಮತ್ತು ಪುರಂದರದಾಸರು ಸಾಹಿತಿಗಳಾಗಬೇಕೆಂದು ಸಾಹಿತ್ಯ ರಚಿಸಲು ಹೊರಟವರಲ್ಲ. ಧಾರ್ಮಿಕ ಕ್ಷೇತ್ರದ ಮೂಲಕ ಗುರುತಿಸಿಕೊಂಡ ಅವರಿಗೆ ಜನಸಾಮಾನ್ಯರನ್ನು ತಲುಪಲು ಸಾಹಿತ್ಯ ಒಂದು ಮಾಧ್ಯಮವಾಯಿತು. ಹೀಗೆ ಆಕಸ್ಮಿಕವಾಗಿ ಸಾಹಿತ್ಯ ಕ್ಷೇತ್ರ ಪ್ರವೇಶಿಸಿದ ಇವರಿಬ್ಬರು ಕನ್ನಡ ಸಾಹಿತ್ಯದ ಅನೇಕ ಸಾಧ್ಯತೆಗಳನ್ನು ಮೊದಲ ಬಾರಿಗೆ ತೋರಿಸಿಕೊಟ್ಟಿದ್ದಾರೆ. ಯಾವ ಆಸ್ಥಾನಕವಿಗಳಲ್ಲಿಯೂ ಇರದ ಹೊಸ ಆಯಾಮಗಳನ್ನು ಇವರು ಕಟ್ಟಿಕೊಟ್ಟಿದ್ದಾರೆ. ಆಕಸ್ಮಿಕವಾಗಿ ಸಾಹಿತ್ಯಕ್ಷೇತ್ರ ಪ್ರವೇಶಿಸಿದ ಇವರು ಇಂದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅನಿವಾರ್ಯವಾಗಿದ್ದಾರೆ. ಇವರನ್ನು ಬಿಟ್ಟು ಕನ್ನಡ ಸಾಹಿತ್ಯ ಚರಿತ್ರೆ ಮುಂದೇ ಸಾಗುವದೇ ಇಲ್ಲ. ಇವರ ಧಾರ್ಮಿಕ-ಸಾಮಾಜಿಕ ಸಾಧನೆಯಷ್ಟೇ ಸಾಹಿತ್ಯಕ ಸಾಧನೆಯೂ ಗಮನಾರ್ಹವಾಗಿದೆ.

ಬಸವೇಶ್ವರರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಮೂಲ್ಯವಾದುದು. ಸಾಹಿತ್ಯದ ಭಾಷೆಯ ದೃಷ್ಟಿಯಿಂದ, ಸಂವಹನದ ದೃಷ್ಟಿಯಿಂದ ಇವರ ರಚನೆಗಳು ಸರಳವಾಗಿರುವುದರ ಜತೆಗೆ ಸತ್ವಪೂರ್ಣವಾಗಿವೆ. ಸ್ಪಷ್ಟವಾಗಿರುವುದರ ಜತೆಗೆ ಗಹನವಾಗಿವೆ. ಅಪಾರ ಅನುಭವದ ಆಳ-ವಿಸ್ತಾರಗಳ ಜತೆಗೆ ಕಲಾತ್ಮಕವಾಗಿ, ಪರಿಣಾಮಕಾರಿಯಾಗಿ ಮನಮುಟ್ಟುವ ಇವರ ವಚನಗಳು ಧ್ವನಿಪೂರ್ಣವಾಗಿವೆ. ಸಾಹಿತ್ಯದ ರೂಪದ ದೃಷ್ಟಿಯಿಂದಂತೂ ಇವರದು ಅದ್ಭುತವಾದ ಕೊಡುಗೆಯಾಗಿದೆ. ಕನ್ನಡ ಸಾಹಿತ್ಯದಲ್ಲಿ ಈಗಾಗಲೇ ಬಳಸಲಾಗಿದ್ದ ಚಂಪೂ-ಕಂದದಂತಹ ರೂಪಗಳನ್ನು ಕೈಬಿಟ್ಟು, ಹೊಸ ವಿಚಾರಗಳಿಗನುಗುಣವಾಗಿ ಹೊಸ ರೂಪಗಳನ್ನು ಸೃಷ್ಟಿಸಿಕೊಂಡು ಹೊಸತಾದ ರೀತಿಯಲ್ಲಿಯೇ ಅಭಿವ್ಯಕ್ತಿಸಿದ್ದು ವಚನಕಾರರ ಪ್ರಮುಖ ಕೊಡುಗೆಯಾಗಿದೆ. ಇವರು ಕೇವಲ ಸಾಹಿತ್ಯ ರಚಿಸದೆ, ಬರೀ ಮಾತಿನಲ್ಲಿ ನುಡಿಯದೆ; ಬರೆದ ಹಾಗೆ ಬದುಕಿದರು, ನುಡಿದ ಹಾಗೆ ನಡೆದರು. ಹೀಗೆ ನಡೆ-ನುಡಿ ಒಂದಾಗಿರುವ, ಬದುಕು-ಬರಹದಲ್ಲಿ ಸಾಮ್ಯವಿರುವ ಸಾಹಿತ್ಯ ಕನ್ನಡದಲ್ಲಿ ವಚನ ಸಾಹಿತ್ಯ ಮಾತ್ರವೆಂದು ಹೇಳಬಹುದಾಗಿದೆ.

ವಚನ, ಸ್ವರವಚನದಂತಹ ಹೊಚ್ಚ ಹೊಸ ರೂಪಗಳನ್ನು ಕನ್ನಡಕ್ಕೆ ಕೊಟ್ಟವರು ವಚನಕಾರರು. ಅದರಲ್ಲಿಯೂ ಬಸವೇಶ್ವರರ ವಚನಗಳು ಸರಳವಾಗಿ, ಸತ್ವಪೂರ್ಣವಾಗಿ, ಸುಂದರವಾಗಿ ಅಭಿವ್ಯಕ್ತಗೊಂಡಿವೆ. ಇತ್ತ ಗದ್ಯವಲ್ಲದ, ಅತ್ತ ಪದ್ಯವಲ್ಲದ ವಚನಗಳು ಗದ್ಯ-ಪದ್ಯಗಳೆರಡರ ಸಾರ-ಸತ್ವಗಳನ್ನರಗಿಸಿಕೊಂಡು ನಳನಳಿಸಿದ ವಿನೂತನ ಪ್ರಯೋಗಗಳಾಗಿವೆ.

ಬದುಕಿನ ದಿಟ್ಟ ಅನುಭವದಿಂದೊಡಗೂಡಿ, ಸೂಕ್ಷ್ಮ ಸಂವೇದನೆಯಲ್ಲಿ, ತೀವ್ರ ಉತ್ಕಟತೆಯಲ್ಲಿ ಮಾಗಿ ಬಂದ ವಚನಗಳು ಕನ್ನಡ ಸಾಹಿತ್ಯದ ಮೂಲ ನಿಧಿಯಾಗಿವೆ. "ಆಡುನುಡಿಯ ಜೀವಂತಿಕೆ, ಅನುಭಾವದ ಹೊಸ ನುಡಿಗಟ್ಟು, ಶ್ಲೇಷಾರ್ಥಗಳ ಸ್ವಾರಸ್ಯ, ಉಪಮಾನ-ದೃಷ್ಟಾಂತಗಳ ಸಮರ್ಪಕತೆ, ಚಿತ್ರಣದ ಜಾಣ್ಮೆ, ವಿಡಂಬನೆಯ ಶಕ್ತಿ, ಕಲ್ಪಕತೆಯ ಸೊಗಸು, ಸಮಾಜ ವಿಮರ್ಶೆಯ ಪ್ರಖರತೆ, ಜನತೆಯ ಮನವನ್ನು ನೇರವಾಗಿ ಪುಗುವ ಆತ್ಮೀಯಶೈಲಿ, ಸಲಿಗೆಯ ಸಂಬೋಧನೆ ಈ ಗುಣಗಳಿಂದ ಕೂಡಿದ ಬಸವಣ್ಣನ ವಚನಗಳು ಇಡಿಯ ವಚನ ಸಾಹಿತ್ಯವನ್ನು ಸರಿಯಾಗಿ ಪ್ರತಿನಿಧಿಸುವಂತಿವೆ"[೧] ಎನ್ನುವಂತಹ

ಮಾತುಗಳಲ್ಲಿ ಅತಿಶಯೋಕ್ತಿ ಇಲ್ಲವೆನಿಸುತ್ತದೆ. ಜನವಾಣಿಯನ್ನೇ ದೇವವಾಣಿಯನ್ನಾಗಿಸಿ, ಗ್ರಂಥಪ್ರಾಮಾಣ್ಯ ತೊರೆದು ಅನುಭವ ಪ್ರಾಮಾಣ್ಯಕ್ಕೆ ಮಹತ್ವ ನೀಡಿದವರು ಬಸವೇಶ್ವರರು.

"ವಚನಗಳು ಕನ್ನಡಕ್ಕೆ ಅನುಭವದ ಹೊಸ ಕ್ಷೇತ್ರಗಳನ್ನು ಗೆದ್ದುಕೊಟ್ಟವು. ಅಭಿವ್ಯಕ್ತಿಗೆ ಜನಭಾಷೆಯು ಎಷ್ಟು ಪರಿಣಾಮಕಾರಿ ಮಾಧ್ಯಮವೆಂಬುದನ್ನು ತೋರಿಸಿಕೊಟ್ಟವು. ಜನಗಳಲ್ಲಿ ನೀತಿಬೋಧನೆ ಮಾಡಲು, ಧರ್ಮ ಪ್ರಚಾರವಾಗಲು ಅವು ಮಾಧ್ಯಮವಾದವು. ಅವುಗಳನ್ನು ಕರ್ನಾಟಕದ ಆಚೆಯ ಭಕ್ತವರ್ಗದವರೂ ಹಾಡಿ ಸಂತೋಷಿಸಿದರು. ವಚನಗಳು ಸಾಮಾನ್ಯ ಜನತೆಗೆ ವೇದ, ಆಗಮ, ಶಾಸ್ತ್ರ, ಪುರಾಣ, ಕಾವ್ಯ ಎಲ್ಲವೂ ಆದವು."[೨] ಎನ್ನುವಂತಹ ನುಡಿಗಳಲ್ಲಿ ಸತ್ಯವೇ ಅಡಗಿರುವುದನ್ನು ಕಾಣಬಹುದಾಗಿದೆ. ಇಂತಹ ಎಲ್ಲಾ ಶ್ರೇಷ್ಠಗುಣಗಳನ್ನೊಳಗೊಂಡ ವಚನ ಸಾಹಿತ್ಯ, ಕನ್ನಡವು ವಿಶ್ವ ಸಾಹಿತ್ಯಕ್ಕೆ ಕೊಟ್ಟ ಶ್ರೇಷ್ಠ ಕೊಡುಗೆಯಾಗಿದೆ.

ವಚನಗಳು ಇಡೀ ವಿಶ್ವಸಾಹಿತ್ಯದಲ್ಲಿಯೇ ವಿಶಿಷ್ಟ ಗುಣ–ಸ್ವರೂಪಗಳನ್ನು ಹೊಂದಿವೆ. ಜನಸಾಮಾನ್ಯರ ನುಡಿಗಟ್ಟು, ಆಡುಮಾತಿನ ಲಯಗಳನ್ನೊಳಗೊಂಡ ಈ ರೂಪ ಕನ್ನಡದ ವಿನೂತನ ಪ್ರಕಾರವಾಗಿದೆ. "ಛಂದೋಗಂಧಿತ್ವ, ಸಾಮಾನ್ಯರ ಮಾತಿನ ಬಳಕೆ, ನಿತ್ಯ ಜೀವನದಲ್ಲಿ ಕಾಣುವ ವಸ್ತು ಸ್ಥಿತಿಗಳನ್ನೇ ಅಲಂಕಾರದಂತೆ ಬಳಸಿಕೊಳ್ಳುವ ರೀತಿ, ಸಮಗ್ರ ಭಾವನೆಯ ಅಭಿವ್ಯಕ್ತಿ, ಬಂಧುರವಾದ ಬಂಧ, ಸಾಮಾಜಿಕ ಚಳವಳಿಯೊಂದರ ಪ್ರಸಾರಕ್ಕೆ ಇವು ನೆರವಾದ ರೀತಿ, ಸಾರ್ವತ್ರಿಕ ಅನುಭವಗಳ ನಿರೂಪಣೆ, ಧಾರ್ಮಿಕ ಹಿನ್ನಲೆಯಲ್ಲಿ ಮಾನವೀಯ ಗುಣಗಳಿಗಿತ್ತ ಪ್ರಾಧಾನ್ಯತೆ, ಸಾರ್ವಕಾಲಿಕ ಮೌಲ್ಯಗಳ ಪ್ರತಿಪಾದನೆ, ಹಾಗೂ ಇವೆಲ್ಲಕ್ಕಿಂತ ಮಿಗಿಲಾಗಿ ತಮ್ಮ ಅನುಭವದ ಕಾವು ಇವುಗಳು ವಚನ ಸಾಹಿತ್ಯ ಪ್ರಕಾರವನ್ನು ಜಗತ್ತಿನ ಇತರ ಸಾಹಿತ್ಯ ಪ್ರಕಾರಗಳಿಗಿಂತ ವಿಶಿಷ್ಟವಾಗುವಂತೆ ಮಾಡಿವೆ."[೩] ಎನ್ನವಂತಹ ವಿಚಾರಗಳು ಗಮನಾರ್ಹವಾಗಿವೆ. ಬಸವೇಶ್ವರರು ರಚಿಸಿದ ವಚನ ಪ್ರಸಾರಕ್ಕೆ ಸಂಬಂಧಿಸಿದಂತೆ ಅನೇಕ ಸಂಶೋಧಕರು, ವಿದ್ಯಾಂಸರು ಮೆಚ್ಚಿ ಬರೆದಿದ್ದಾರೆ. ಅವರ ಇನ್ನೊಂದು ಪ್ರಕಾರವಾದ 'ಸ್ವರವಚನ' ಸ್ವರೂಪದ ಬಗೆಗೂ ಅದರ ಪ್ರಾಮುಖ್ಯತೆಯ ಬಗೆಗೂ ಈಗಾಗಲೇ ಹಲವು ವಿದ್ವಾಂಸರು ಚರ್ಚಿಸಿದ್ದಾರೆ.

ಸ್ವರವಚನಗಳು ವಚನಕಾರರು ಸೃಷ್ಟಿಸಿದ ಕನ್ನಡದ ಮೊದಲ ಕೀರ್ತನೆಗಳು. ಶರಣರ ಹಾಡುಗಳೆಂದೇ ಜನಪ್ರಿಯವಾದ ಸ್ವರವಚನಗಳು ತಾಳ ಪ್ರಧಾನವಾಗಿವೆ. "ವಚನಗಳನ್ನು ಕೊಡುಗೆಯಾಗಿ ಕೊಟ್ಟ ಹನ್ನೆರಡನೇ ಶತಮಾನದ ಶರಣರು ಸ್ವರವಚನಗಳನ್ನೂ ರಚಿಸಿ ಮೊಟ್ಟಮೊದಲ ಕೀರ್ತನಕಾರರೆಂಬ ಹಿರಿಮೆಗೆ ಕಾರಣರಾಗಿದ್ದಾರೆ. ೧೨ನೇ ಶತಮಾನದಲ್ಲಿ ಕೀರ್ತನ ಸಾಹಿತ್ಯದ ಪರಂಪರೆ ಅಧಿಕೃತವಾಗಿ ಪ್ರಾರಂಭವಾಯಿತೆಂದು ಹೇಳಬಹುದು"[೪] ಈ ನುಡಿಗಳಲ್ಲಿ ಕಟುಸತ್ಯವಿದೆ. ಶಬ್ದಮಾಧ್ಯಮದ ಜತೆಗೆ ನಾದ ಮಾಧ್ಯಮವನ್ನೂ ಬೆಳೆಸಿದ ವಚನಕಾರರ ಸಾಹಿತ್ಯಕ ಕೊಡುಗೆ ಅತ್ಯಮೂಲ್ಯವಾಗಿದೆ. ಹೀಗೆ ವಚನಗಳ ಜತೆಗೆ ಸ್ವರವಚನಗಳೂ ಸೇರಿಕೊಂಡು ವಚನ ಸಾಹಿತ್ಯದ ಸತ್ವ ಶ್ರೀಮಂತಿಕೆಯನ್ನು ಹೆಚ್ಚಿಸಿವೆ.

"ಬಸವಣ್ಣನ ವಚನಗಳು ಮನುಷ್ಯನ ಚಿತ್ತಸ್ಥಿತಿಯ ವಿವಿಧ ಮುಖಗಳ ಪ್ರದರ್ಶನ ಶಾಲೆ. ತೀವ್ರ ಸಂವೇದನಾಶೀಲನಾದ ಅವನಿಗೆ ವಚನ ರಚನೆ ಎಷ್ಟೋ ವೇಳೆ ಅನಿವಾರ್ಯ ಕ್ರಿಯೆಯಾಗಿದ್ದಿತು. ವಚನಕಾರರಲ್ಲೇ ಇಷ್ಟು ಭಾವುಕನಾದ ಮುಕ್ತ ಮನಸ್ಸಿನ ವ್ಯಕ್ತಿ

ಮತ್ತೊಬ್ಬನಿಲ್ಲ ಎನ್ನಿಸಿಬಿಡುತ್ತದೆ.[೫] ಎಂಬಂತಹ ನುಡಿಗಳು ಬಸವೇಶ್ವರರ ಸಾಹಿತ್ಯಕ ಸಾಧನೆಯನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸುತ್ತವೆ.

ವಚನದಂತಹ ರೂಪ ದಾಸಿಮಯ್ಯನ ಕಾಲಕ್ಕೆ ಸೃಷ್ಟಿಯಾಗಿದ್ದರೂ, ವೀರಶೈವಧರ್ಮ ತಮಗಿಂತ ಪೂರ್ವದಲ್ಲೇ ಇದ್ದರೂ ಬಸವೇಶ್ವರರು ಇವೆರಡಕ್ಕೂ ಹೊಸ ಆಯಾಮ ನೀಡಿ ಅವುಗಳನ್ನು ಚಳವಳಿಯ ಹಿನ್ನಲೆಯಲ್ಲಿ ದುಡಿಸಿಕೊಂಡಿದ್ದಾರೆ. ಇವುಗಳಿಗೆ ವೈಜ್ಞಾನಿಕ ಶಿಸ್ತನ್ನು, ವೈಚಾರಿಕ ನೆಲೆಯನ್ನು ಒದಗಿಸಿದ ಬಸವೇಶ್ವರರು ಧರ್ಮ–ಸಮಾಜ–ಸಾಹಿತ್ಯಗಳಲ್ಲಿ ಸಮನ್ವಯವನ್ನು ಸಾಧಿಸಿದವರಾಗಿದ್ದಾರೆ.

ಬಸವೇಶ್ವರ ವಚನ–ಸ್ವರವಚನಗಳಲ್ಲಿ ವಸ್ತು ವೈವಿಧ್ಯತೆಯಿದೆ. ವಚನಗಳಲ್ಲಿಯ ನುಡಿ ಆಡುಮಾತಿನಂತಿದ್ದರೆ, ಸ್ವರವಚನಗಳಲ್ಲಿನ ಪದಗಳು ತಾಳಪ್ರಧಾನವಾಗಿವೆ. ಧರ್ಮ–ಸಮಾಜ–ರಾಜಕೀಯ–ಆರ್ಥಿಕ ಎಲ್ಲ ಕ್ಷೇತ್ರಗಳತ್ತ ಕಣ್ಣು ಹಾಯಿಸಿದ ಅವರ ರಚನೆಗಳಲ್ಲಿ ಬದುಕಿನ ಅನೇಕ ಒಳನೋಟಗಳಿವೆ. ಕನ್ನಡ ಸಾಹಿತ್ಯದಲ್ಲಿ ಸ್ವತಂತ್ರ ರೂಪವನ್ನು ಸಿದ್ಧಗೊಳಿಸಿಕೊಂಡು ಸಾಹಿತ್ಯ ರಚಿಸಿದವರಲ್ಲಿ ಬಸವೇಶ್ವರ ಮುಂತಾದ ವಚನಕಾರರೇ ಮೊದಲಿಗರಾಗಿದ್ದಾರೆ. ಸಂಸ್ಕೃತದ ಚಂಪೂ ರೂಪವನ್ನೇ ಪಂಪ–ಪೊನ್ನ–ರನ್ನರು ಕನ್ನಡದಲ್ಲಿ ಮುಂದುವರಿಸಿದರೆ; ಜನಸಾಮಾನ್ಯರನ್ನು ಮುಟ್ಟಬಲ್ಲ ಜನಪರ ರೂಪಗಳನ್ನು ಶೋಧಿಸಿ ಅವುಗಳ ಮುಖಾಂತರವೇ ತಮ್ಮ ಅನುಭವಗಳನ್ನು ಅಭಿವ್ಯಕ್ತಿಸಿ ಆ ರೂಪಗಳು ಇಂದು ಸಾಹಿತ್ಯ ಚರಿತ್ರೆಯಲ್ಲಿ ವಿಪುಲವಾಗಿ ಬೆಳೆದು ನಿಲ್ಲಲು ವಚನಕಾರರೇ ಕಾರಣರಾಗಿದ್ದಾರೆ. ಈ ಹಿನ್ನಲೆಯಲ್ಲಿ ಬಸವೇಶ್ವರರ ಸಾಹಿತ್ಯಕ ಸಾಧನೆ ಉಲ್ಲೇಖಾರ್ಹವಾಗಿದೆ.

ಪುರಂದರದಾಸರ ಸಾಧನೆ ಸಾಹಿತ್ಯಕವಾಗಿಯೂ ಮುಖ್ಯವಾಗಿದೆ. ಬಸವೇಶ್ವರ ಮುಂತಾದ ವಚನಕಾರರು ರಚಿಸಿದ ವಚನ–ಸ್ವರವಚನಗಳ ಮಾದರಿಯಲ್ಲಿಯೇ ಇವರು ಉಗಾಭೋಗ–ಕೀರ್ತನೆಗಳನ್ನು ರಚಿಸಿದರೂ ಕೂಡ 'ಸುಳಾದಿ'ಯಂತಹ ಹೊಸ ಸಾಹಿತ್ಯ ರೂಪವೊಂದನ್ನು ಕನ್ನಡಕ್ಕೆ ಕೊಟ್ಟವರಾಗಿದ್ದಾರೆ. ಹನ್ನೆರಡನೆಯ ಶತಮಾನದ ಶಿವಶರಣರು ಕೀರ್ತನ ಸಾಹಿತ್ಯದ (ಹಾಡಿನ ಸಾಹಿತ್ಯದ) ಪ್ರವರ್ತಕರಾದರೂ, ಈ ಪರಂಪರೆಗೆ ಒಂದು ಮಹಾಪೂರವನ್ನು ತಂದು ಕೊಟ್ಟವರು ಹರಿದಾಸರೆಂಬುದನ್ನು ಮರೆಯಲಿಕ್ಕಾಗುವುದಿಲ್ಲ.

ಪುರಂದರದಾಸರು ರಚಿಸಿದ ಎಲ್ಲ ರಚನೆಗಳೂ ಈಗ ಲಭ್ಯವಾಗಿಲ್ಲ. ಸಧ್ಯ ದೊರೆತ ರಚನೆಗಳಲ್ಲಿ ಹೆಚ್ಚಿನವುಗಳಲ್ಲಿ ವಾಚ್ಯತೆ ಇದ್ದರೂ ಹಾಡಿನ ರೂಪದಲ್ಲಿ ತಾಳ ಪ್ರಧಾನವಾಗಿ ಅವು ಬಂದಾಗ ಸೊಗಸಾಗಿ ಕೇಳಿಸುತ್ತವೆ. ದಾಸರು ತಮ್ಮ ಕೃತಿಗಳಲ್ಲಿ ವಿವಿಧ ರೀತಿಯ ವಸ್ತುವನ್ನು ಕುರಿತು ಹೇಳಿದರೂ, ಮುಖ್ಯವಾಗಿ ಅವರ ಉದ್ದೇಶ ಮೋಕ್ಷ ಸಂಪಾದನೆಯಾಗಿರುವುದು ಕಂಡುಬರುತ್ತದೆ.

"ಪುರಂದರದಾಸರ ಕೀರ್ತನೆಗಳ ಸಾಹಿತ್ಯಿಕ ಸ್ವರೂಪವು ಲೌಕಿಕ ಭಾವನೆಗಳಿಂದ ಪ್ರೇರಿತವಾದುದಲ್ಲ. ಪ್ರೇಮದ ವಿಫಲತೆ, ದಾರಿದ್ರ್ಯ ಇವುಗಳಿಂದಾಗಲಿ, ವೈಯಕ್ತಿಕ ಲಾಭ ಹಾನಿಗಳಿಂದ ಸುಖದುಃಖಗಳಿಂದ ಅದು ಹುಟ್ಟಲಿಲ್ಲ. ಅವರ ಕೀರ್ತನೆಗಳಲ್ಲಿ ಅಭಿವ್ಯಕ್ತವಾದದ್ದು ವಿರಹವಲ್ಲ, ಮಿಲನವಲ್ಲ, ಕ್ರೌರ್ಯವಲ್ಲ, ಯುದ್ಧವಲ್ಲ, ಆದರ ಗುರಿ ಲೋಕಾಯತ ದರ್ಶನವಲ್ಲ. ದೇವ–ಮಾನವ ಸಂಬಂಧ ಅವರ ಕಾವ್ಯವಸ್ತು. ಅದು ಲೌಕಿಕ ಕಾವ್ಯದಂತೆ ಐಂದ್ರಿಯಕ ಅನುಭವವನ್ನು ತನ್ನ ವಸ್ತುವನ್ನಾಗಿ ಮಾಡಿಕೊಂಡಿಲ್ಲ."[೬] ಇಂತಹ

ಅಭಿಪ್ರಾಯಗಳಲ್ಲಿ ಸತ್ಯವೇ ಅಡಗಿದೆ. ಪುರಂದರದಾಸರಿಗೆ ಇಹಕ್ಕಿಂತ ಪರವೇ ಮುಖ್ಯವಾಗಿ ಕಾಣುತ್ತದೆ. ಬಸವೇಶ್ವರರು ಇಹದ ಬದುಕಿಗೆ ಪ್ರಾಮುಖ್ಯತೆ ಕೊಟ್ಟು ಇಹದ ಮೂಲಕ ಪರವನ್ನು ಪರಿಚಯಿಸಿದರೆ, ಪುರಂದರದಾಸರು ಇಹದ ಬದಕಿಗೆ ನಿಸ್ಸಾರತೆಯನ್ನೇ ಎತ್ತಿಹೇಳುತ್ತಾರೆ. ವಸ್ತು–ಉದ್ದೇಶ–ಆಶಯಗಳಲ್ಲಿ ಇಬ್ಬರಲ್ಲೂ ಪ್ರಮುಖವಾದ ವ್ಯತ್ಯಾಸವಿದ್ದರೂ ಕೂಡ ಪುರಂದರದಾಸರ ಸಾಧನೆಯನ್ನು ಅಲ್ಲಗಳೆಯಲಿಕ್ಕಾಗುವುದಿಲ್ಲ. ಆ ಕಾಲದಲ್ಲಿ ಸಂಸ್ಕೃತವನ್ನು ಕೈಬಿಟ್ಟು, ದಾಸಕೂಟ ರಚಿಸಿ ಕೀರ್ತನೆ ರಚಿಸಿದವರಲ್ಲಿ ಇವರ ಹೆಸರು ಪ್ರಮುಖವಾದುದು.

ಪುರಂದರದಾಸರು ಕರ್ನಾಟಕ ಸಂಗೀತಕ್ಕೆ ನೀಡಿದ ಕೊಡುಗೆ ದೊಡ್ಡದು. ಕರ್ನಾಟಕ ಸಂಗೀತ ಪಿತಾಮಹರಾಗಿ ಅವರು ಸಂಗೀತ ಕ್ಷೇತ್ರದಲ್ಲಿ ಮಹತ್ತರವಾದುದನ್ನು ಸಾಧಿಸಿದ್ದಾರೆ. ಸಂಗೀತ ಸಾರಾಮೃತ ಎಂಬ ಹೆಸರಿನ ಲಕ್ಷಣಶಾಸ್ತ್ರ ಗ್ರಂಥವನ್ನು ಬರೆದ ತಂಜಾವರದ ತುಳಾಜೀ ಮಹಾರಾಜನು ಪುರಂದರದಾಸರಿಗೆ ಸಂಗೀತ ಪ್ರಪಂಚದಲ್ಲಿದ್ದ ಮಹತ್ವದ ಸ್ಥಾನವನ್ನು ಒಪ್ಪಿ ಪ್ರಶಂಸಿಸಿದ್ದಾನೆ. ಹತ್ತೊಂಬತ್ತನೆಯ ಶತಮಾನದಲ್ಲಿದ್ದ ತಿರುವಾಂಕೂರಿನ ರಾಜಮನೆತನದ ಸ್ವಾತಿ ತಿರುನಾಳರು ಭಾರತ ಸಂಗೀತ ಪ್ರಪಂಚದಲ್ಲಿ ಹೆಸರಾಗಿದ್ದವರು, ಅವರೂ ಕೂಡ ಪುರಂದರದಾಸರ ಸಂಗೀತ ಸಾಧನೆಯನ್ನು ಕುರಿತು ಕೊಂಡಾಡಿದ್ದಾರೆ, ಅಪಾರವಾದ ಗೌರವ ವ್ಯಕ್ತಪಡಿಸಿದ್ದಾರೆ.

ತಮಿಳುನಾಡಿನಲ್ಲಿಯ ಪ್ರತಿಯೊಬ್ಬ ಸಂಗೀತಗಾರನೂ ಸಂಗೀತ ಕಚೇರಿಗಳಲ್ಲಿ ಪುರಂದರದಾಸರಿಗೆ ಮನ್ನಣೆ ಸಲ್ಲಿಸಲು ತಪ್ಪದೇ ಅವರ ಕೀರ್ತನೆಗಳನ್ನು ಹಾಡುವ ಪದ್ಧತಿಯಿತ್ತೆಂದು ವಾಡಿಕೆಯಿದೆ. ಪುರಂದರದಾಸರ ಬಗೆಗಿದ್ದ ಇಂತಹ ಒಂದು ಶ್ರದ್ಧೆಯೇ ಅವರ ಕೆಲವು ಪ್ರಸಿದ್ಧ ಕೀರ್ತನೆಗಳನ್ನು ಸಮರಾಗ ತಾಳಗಳಲ್ಲಿ, ತಮಿಳಿನಲ್ಲಿ ಅನುವಾದ ಮಾಡಿ ಪ್ರಕಟಿಸಿದುದಾಗಿದೆ. “ತೆಲುಗು ತಮಿಳು ದೇಶಗಳಲ್ಲಿ ಈಗಲೂ ಚಿಕ್ಕಮಕ್ಕಳ ಸಂಗೀತದ ಪ್ರಾರಂಭದ ಪಾಠಗಳು ಪುರಂದರದಾಸರ ಕೃತಿಗಳಿಂದಲೇ ಪ್ರಾರಂಭವಾಗುತ್ತಿರುವುದನ್ನು ನೋಡಿದಾಗ ದಕ್ಷಿಣ ದೇಶದ ಸಂಗೀತಜ್ಞರಲ್ಲಿ, ಪುರಂದರದಾಸರ ವಿಷಯದಲ್ಲಿ ಎಷ್ಟೊಂದು ಭಕ್ತ್ಯಾದರಗಳಿದ್ದವೆಂಬುದು ಕಂಡುಬರುತ್ತದೆ.”[೭]

ಇದರಂತೆ ಮಹಾರಾಷ್ಟ್ರದ ಅನೇಕ ಭಕ್ತಕವಿಗಳು ಪುರಂದರದಾಸರ ಪ್ರಭಾವಕ್ಕೊಳಗಾಗಿದ್ದಾರೆ. ದಾಕ್ಷಿಣಾತ್ಯ ಸಂಗೀತದ ಜನಕರೂ ಆದ ಪುರಂದರದಾಸರು ಸಂಗೀತ ಕ್ಷೇತ್ರದಲ್ಲಿ ಪ್ರಾರಂಭಿಸಿದ ಕಾರ್ಯವನ್ನು ಮುಂದೆ ಶತಮಾನಗಳ ನಂತರ ಬಂದ ತ್ಯಾಗರಾಜರು ಪೂರ್ತಿಗೊಳಿಸಿದುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಸಂಗೀತಶಾಸ್ತ್ರ ಹಾಗೂ ಕಲಾಭ್ಯಾಸವನ್ನು ವ್ಯವಸ್ಥಿತಗೊಳಿಸಿ ಬೆಳೆಸಿದ ಶ್ರೇಯಸ್ಸು ಪುರಂದರದಾಸರಿಗೆ ಸಲ್ಲುತ್ತದೆ.

“ರಾಗದ ಮೂಲತತ್ವವನ್ನು ಅರಿತುಕೊಳ್ಳಲಿಚ್ಚಿಸುವವರಿಗೆ ಪ್ರತಿಯೊಂದು ರಾಗದ ಸ್ವರೂಪ ಮತ್ತು ಅಂತರಂಗದ ಪರಿಚಯ ಬಯಸುವವರಿಗೆ ಪುರಂದರದಾಸರ ಕೀರ್ತನೆಗಳ, ಶ್ರವಣವನ್ನು ಬಿಟ್ಟು ಬೇರಾವ ಪದ್ಧತಿಯೂ ಇಲ್ಲ”[೮]ವೆನ್ನುವ ವಿಚಾರಗಳಲ್ಲಿ ಪುರಂದರದಾಸರ ಸಾಧನೆಯಂತಹದೆಂಬುದು ಸ್ಪಷ್ಟವಾಗುತ್ತದೆ. ಸಂಗೀತ ಕ್ಷೇತ್ರದಲ್ಲಿ ಹೀಗೆ ಅನಿವಾರ್ಯವಾಗಿ ಬೆಳೆದ ಪುರಂದರದಾಸರ ಸಾಹಿತ್ಯಕ ಸಾಧನೆಯಂತೆ ಸಾಂಸ್ಕೃತಿಕ ಸಾಧನೆಯೂ ಪ್ರಮುಖವಾಗಿದೆ. ಎಂಬತ್ತಕ್ಕಿಂತಲೂ ಹೆಚ್ಚು ರಾಗಗಳನ್ನು ಉಪಯೋಗಿಸಿ, ಕರ್ನಾಟಕ

ಸಂಗೀತದ ಹುಟ್ಟಿಗೆ ಕಾರಣರಾದ ಪುರಂದರದಾಸರ ಸಂಗೀತ–ಸಾಹಿತ್ಯದ ಕೊಡುಗೆ ಅಪೂರ್ವವಾದುದಾಗಿದೆ.

"It was left to one Purandaradas a mendicant and Versatile composer to lend an ivdividuality to the music of the south with his compositions and interpretations of the Ragas"1

"Purandaradas has been Justly termed the father of carnatic music. He was not merely a composer, but a Lakshnakara of the highest caliblre. The system of South India music as we now have it is entirely has gift"[8]

ಈ ಎಲ್ಲ ಅಭಿಪ್ರಾಯಗಳಿಂದ ಪುರಂದರದಾಸರ ಸಾಂಸ್ಕೃತಿಕ ಸಾಧನೆ ಎಷ್ಟು ಮುಖ್ಯವಾದುದೆಂದು ತಿಳಿದುಬರುತ್ತದೆ. ಬಸವೇಶ್ವರ ಮತ್ತು ಪುರಂದರದಾಸರು ಸಾಂಸ್ಕೃತಿಕವಾಗಿ ಈ ದೇಶದ ಚರಿತ್ರೆಯಲ್ಲಿ ತುಂಬಾ ಮುಖ್ಯವಾಗುತ್ತಾರೆ.

❐

---

೧. ಸ.ಸ. ಮಾಳವಾಡ–'ಬಸವಣ್ಣನ ಕಾಲ, ಜೀವನ, ವ್ಯಕ್ತಿತ್ವ 'ಸ.ಕ.ಸಾ.ಚ. ಪುಟ: ೧೦೧ ಬೆಂವಿ.ವಿ.

೨. ಡಾ. ಎಂ. ಚಿದಾನಂದಮೂರ್ತಿ–'ವಚನ ಸಾಹಿತ್ಯ' ಸಾ.ಕ.ಸಾ.ಚ. ಪುಟ: ೧೭೪ ಬೆಂ.ವಿ.ವಿ.

೩. ಶಿ.ಶಿ. ಬಸವನಾಳ: "ಬಸವಣ್ಣನವರ ವಚನಗಳು" ಪ್ರಸ್ತಾವನೆ ಪುಟ : ಎನ್ನುವಂತಹ ವಿಚಾರಗಳು

೪. ಎಚ್.ಎಸ್. ವೆಂಕಟೇಶಮೂರ್ತಿ: "ಕೀರ್ತನಕಾರರು" ಪುಟ: ೪ ಸಾ.ಸಾ.ಚ.ಬೆಂ.ವಿ.ವಿ.

೫. ಎಂ. ಚಿದಾನಂದಮೂರ್ತಿ: 'ವಚನ ಸಾಹಿತ್ಯ' ಸಾ.ಸಾ.ಚ. ಬೆಂ.ವಿ.ವಿ. ಪುಟ: ೬೮

೬. ಡಾ. ವ.ಅ. ದಿವಾಣಜಿ : "ಪ್ರಸಾದ ಯೋಗ" ಪುಟ : ೧೪೭, ಉಷಾ ಸಾಹಿತ್ಯಮಾಲೆ ಮೈಸೂರು

೭. ಬೆಟಗೇರಿ ಕೃಷ್ಣಶರ್ಮ ಮತ್ತು ಬೆಂಗೇರಿ ಹುಚ್ಚರಾಯ (ಸಂ): "ಸಂಕೀರ್ಣಸಂಗ್ರಹ" ಪುಟ: ೮೫–೮೬

೮. ವ್ಹಿ.ವ್ಹಿ. ಷಡ್ಗೋಪನ್ "ಭಾರತೀಯ, ಸಂಗೀತಕ್ಕೆ ಪುರಂದರದಾಸರ ಕಾಣಿಕೆ" "ಶ್ರೀ ಪುರಂದರದಾಸರು" ಪುಟ: ೧೫೪.

ಬಸವಣ್ಣ : ವೇಮನ

●

ಡಾ. ಅರ್ಜುನ ಗೊಳಸಂಗಿ

ಭಾರತೀಯ ಸಮಾಜಕ್ಕೆ ಅಂಟಿಕೊಂಡಿರುವಂಥ ಜಾತಿ ಮತ್ತು ಮೂಢನಂಬಿಕೆಯನ್ನು ಕಿತ್ತೊಗೆಯಲು ಸಾಮಾಜಿಕ ಪರಿವರ್ತನೆಗಾಗಿ ಹಲವಾರು ಆಂದೋಲನಗಳು ಕ್ರಾಂತಿಗಳು ನಡೆದವು. ಜನ ಮಾನಸದೊಳಗೆ ಆಳವಾಗಿ ಬೇರೂರಿರುವ ಅಜ್ಞಾನ-ಅಂಧಶ್ರದ್ಧೆ, ಜಾತಿಯ ಮುಳ್ಳನ್ನು ಕೀಳಲು, ಮನುಕುಲದ ಉದ್ಧಾರಕ್ಕೆ ಅನೇಕ ಸಂತರು, ಸಾಧು ಸತ್ಪುರುಷರು, ಶರಣರು, ದಾರ್ಶನಿಕರು, ತತ್ವಜ್ಞಾನಿಗಳು ಉದಿಸಿಬಂದರು. ವೈಧಿಕ ಧರ್ಮದ ಬಹುದೇವತಾರಾಧನೆಯನ್ನು ಖಂಡಿಸಿ ಜನಸಾಮಾನ್ಯರತ್ತ ದೇವರು ಧರ್ಮವನ್ನು ತಂದವರು ಮಹಾಪುರುಷರಾದ ಮಹಾವೀರ ಮತ್ತು ಗೌತಮಬುದ್ಧರು ಎನ್ನಬೇಕು. ಅಂದಿನ ಜನಸಾಮಾನ್ಯರ ಭಾಷೆಗಳಾದ ಪ್ರಾಕೃತ ಪಾಲಿ ಭಾಷೆಗಳ ಮೂಲಕ ಧರ್ಮದಿಂದ ವಂಚಿತರಾದವರಿಗೆ ಆಶ್ರಯಕೊಟ್ಟು ಧರ್ಮವನ್ನು ಜ್ಯೋತಿಯಾಗಿಸಿದರು, ಸಮಾನತೆಯ ಬೀಜವನ್ನು ಬಿತ್ತಿದರು.

ಬದಲಾವಣೆ ನಿಸರ್ಗದ ಸಹಜ ನಿಯಮ. ಆಯಾ ಕಾಲಕ್ಕೆ ತಕ್ಕಂತೆ ಸಾಮಾಜಿಕ, ಧಾರ್ಮಿಕ, ರಾಜಕೀಯ ಮೌಲ್ಯಗಳು ರೂಪುಗೊಳ್ಳುತ್ತವೆ. ಅಂತಹ ಬದಲಾವಣೆಯನ್ನು ತಂದ ಮನುಕುಲದ ಹರಿಕಾರ ಕ್ರಾಂತಿಯೋಗಿ ಬಸವಣ್ಣನವರೂ ಒಬ್ಬರು. ಅಜ್ಞಾನ, ಮೂಢನಂಬಿಕೆಯಿಂದ ತುಂಬಿಕೊಂಡ ಸಮಾಜಕ್ಕೆ 'ವಚನ' ದೀಪ್ತಿಯ ಮೂಲಕ 'ದೇವನೊಬ್ಬ ನಾಮ ಹಲವು', 'ಮಾನವ ಕುಲವು ಒಂದೇ' ಎಂಬ ಸಿದ್ಧಾಂತಗಳನ್ನು ಪ್ರಚುರಪಡಿಸಿದರು. 'ನುಡಿದಂತೆ ನಡೆದರು, ನಡೆದಂತೆ ನುಡಿದರು'. ಇದರಿಂದ ಹನ್ನೆರಡನೆಯ ಶತಮಾನ ಸಮತಾವಾದದ ನೆಲೆಗಟ್ಟಿನ ಮೇಲೆ ರೂಪುಗೊಳ್ಳಲು ಸಾಧ್ಯವಾಯಿತು. ಅರ್ಥವಾಗದ ಸಂಸ್ಕೃತವನ್ನು ಧಿಕ್ಕರಿಸಿ ಸರಳ ಸುಲಲಿತವಾದ ಕನ್ನಡ 'ನುಡಿಮುತ್ತಿನಹಾರ'ವನ್ನು ಜನರ ನಾಲಗೆಮೇಲೆ ಎದೆಯಾಳದಲ್ಲಿ ಉಳಿಯುವಂತೆ ಮಾಡಿದರು. ಶರಣ ಸಂಸ್ಕೃತಿಯ ಮೂಲಕ ಜಡ ಸಮಾಜವನ್ನು ಚಲನಶೀಲ ಸಂಸ್ಕೃತಿಯ ಸಮಾಜವನ್ನು ರೂಪಿಸಿದರು. ಇದೆಲ್ಲದರ ನಾಯಕತ್ವವನ್ನು ವಹಿಸಿದವರು ಬಸವಣ್ಣನವರು. ಯಜಮಾನ ಸಂಸ್ಕೃತಿಯ ವಿರುದ್ಧ ಸಿಡಿದೆದ್ದವರು ಬಸವಣ್ಣನವರು.

ಬೌದ್ಧಧರ್ಮವನ್ನು ದೇಶದಿಂದಾಚೆಗಟ್ಟಿದ ವೈದಿಕರೆ ಸಂಚು ಹೂಡಿ, ರಾಜನನ್ನು ತಮ್ಮ

ಬುಟ್ಟಿಗೆ ಹಾಕಿಕೊಂಡು, ಬಸವಣ್ಣನನ್ನು ಹಿಂಸಿಸುತ್ತಾರೆ. ಇದನ್ನು ಅಜ್ಞಾನ ವಶರಾದ ಶೂದ್ರಾತಿಶೂದ್ರರು ಮಿಳಿಮಿಳಿನೇ ನೋಡುತ್ತಾರೆಯೇ ಹೊರತು, ಅದರಲ್ಲಿ ಪಾಲ್ಗೊಳ್ಳಬೇಕೆಂಬ ಹೆಗ್ಗಳಿಕೆ ಹಿರಿಮೆ ಇವರಲಿಲ್ಲ. ಸಾವಿರಾರು ವರ್ಷಗಳಿಂದ ಅವರನ್ನು ಅಜ್ಞಾನಾಂಧಕಾರದಲ್ಲಿ ಮುಳುಗಿಸಿದ್ದೇ ಅಂಥ ಹೀನಪರಿಸ್ಥಿತಿಗೆ ಕಾರಣವಾಯಿತು. ಬಸವಣ್ಣನವರು ಬ್ರಾಹ್ಮಣ ಮನೆತನದಲ್ಲಿ ಹುಟ್ಟಿ, ಬಾಲ್ಯದಲ್ಲಿಯೇ ವೇದಾಧ್ಯಯನ ಸಂಪನ್ನರಾಗಿ, ಅವರ ಸುಪ್ತ ಚಿತ್ತದಲ್ಲಿ ಪ್ರಖರವಾಗಿ ವಿಕಾಸಗೊಂಡಿದ್ದ ಮಾನವತೆಯ ಒತ್ತಡದಿಂದಾಗಿ ತಮ್ಮ ಸುತ್ತಮುತ್ತ ಕೊಳೆತು ನಾರುತ್ತಿದ್ದ ಸಮಾಜದ ಹೀನಸ್ಥಿತಿಯ ಕಡೆಗೆ ಅವರ ಗಮನ ಹರಿಯುತ್ತದೆ. ಅಂಥ ಪರಿಸ್ಥಿತಿಗೆ ವೈದಿಕರೇ ಕಾರಣವೆಂದು ಅವರ ಮಧ್ಯದಲ್ಲಿಯೇ ಹುಟ್ಟಿ ಬೆಳೆದ ಮಾನವೀಯ ಹೃದಯಿ ಬಸವಣ್ಣನವರಿಗೆ ಬಹುಬೇಗ ಅರ್ಥವಾಗುತ್ತದೆ. ಹೀಗಾಗಿ ಅಂದಿನ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿ ಚಿಕಿತ್ಸೆಯನ್ನು ನೀಡಿದರು. ಮಹಾಮಾನವತಾವಾದಿಯಾದರು. ವಚನ ಸಾಹಿತ್ಯದ ಕನ್ನಡದ ಜನಕಲ್ಯಾಣದ ಸಮಾಜ ಸುಧಾರಕ ಹನ್ನೆರಡನೆಯ ಶತಮಾನದಲ್ಲಿ ಸಮಾನತೆಯ ಬೆಳೆಯನ್ನು ಬಿತ್ತಿದ ಪ್ರಗತಿಪರ ಚಿಂತಕ ಅಣ್ಣ ಬಸವಣ್ಣನವರು.

ಹಾಗೆಯೇ ನೆರೆಯ ಆಂಧ್ರದನಾಡಿನಲ್ಲಿ ಸಾಮಾಜಿಕ, ಸಾಹಿತ್ಯಿಕ ಕ್ರಾಂತಿಯ ಹರಿಕಾರನೆಂದರೆ, ರಾಜಯೋಗಿ ವೇಮನರು. ಕೊಂಡುವೀಡು ರೆಡ್ಡಿ ರಾಜ್ಯವಂಶದ ಕುಡಿಯಾದ ವೇಮನ ಕ್ರಿ.ಶ. ೧೩೮೦–೧೪೦೦ರ ವರೆಗೆ ರಾಜ್ಯವಾಳಿದ ಕೊಮರಾಗಿರಿ ರೆಡ್ಡಿಯ ಮಗ, ತಾಯಿಮಲ್ಲಮ್ಮ, ವೇಮನ ಜನಿಸಿದ್ದು ಕ್ರಿ.ಶ. ೧೪೧೨. ಅರಸು ಕುಮಾರನಾದ ವೇಮನ ಜನಸಾಮಾನ್ಯರ ಭಾಷೆಯಲ್ಲಿ ವಚನ ಬರೆದ ತೆಲುಗುನಾಡಿನ ಕವಿಗಳಲ್ಲಿ ಅಗ್ರಗಣ್ಯ. ಅತ್ಯಂತ ಜನಪ್ರಿಯ ಕವಿ. ಅರಸೊತ್ತಿಗೆಯನ್ನು ತೊರೆದು ಜನಸಾಮಾನ್ಯರತ್ತ ನಡೆದು ಬಂದ ಯೋಗಿ.

ಬಸವಣ್ಣ ಕನ್ನಡ ನಾಡಿನ ಚಿಂತಕನಾದರೆ, ವೇಮನ ತೆಲುಗುನಾಡಿನ ಕವಿ ಚಿಂತಕ. ಇಬ್ಬರೂ ಸಮಾಜದ ಮೇಲುಸ್ತರದಿಂದಲೇ ಬಂದವರು. ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಷಮ ಪರಿಸರದಿಂದ ಸಿಡಿದು ಹೊರಬಂದು ಹೊಸ ಸಮಾಜದ ಪರಿಕಲ್ಪನೆಯ ಕನಸನ್ನು ಕಂಡರು. ಆ ದಿಶೆಯಲ್ಲಿ ಅವಿರತ ಪ್ರಯತ್ನವನ್ನು ಕೂಡಾ ಮಾಡಿದರು. ಅವರ ಹೋರಾಟದ ಸುಧಾರಣೆಯ ಚಿಂತನೆಯ ಎಳೆಗಳನ್ನು ವಚನಗಳ ಹಿನ್ನೆಲೆಯಲ್ಲಿ ಈ ಲೇಖನದಲ್ಲಿ ವಿವೇಚಿಸಲಾಗಿದೆ.

ವೇದ–ಶಾಸ್ತ್ರ–ಪುರಾಣಗಳನ್ನು ಸಾಮಾಜಿಕ ನ್ಯಾಯ ಪದ್ಧತಿಯನ್ನು ಧರ್ಮವನ್ನು ಬಸವಣ್ಣ ಮತ್ತು ವೇಮನರು ವಿಡಂಬಿಸಿದ್ದಾರೆ. 'ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ', 'ಪುರಾಣವೆಂಬುದು ಪುಂಡರ ಗೋಷ್ಠಿ', 'ಶಾಸ್ತ್ರವೆಂಬುದು ಸಂತೆಯ ಸುದ್ದಿ' ಎಂದು ಕಟುವಾಗಿ ಟೀಕಿಸಿದ್ದಾರೆ. ವೇದಗಳ ಮೂಲಕ ಜನರನ್ನು ಶೋಷಣೆ ಮಾಡುತ್ತಾರೆಂದು ಧಿಕ್ಕರಿಸಿದ್ದಾರೆ. ವೇಮನರೂ ಕೂಡಾ 'ಸಾವು ಕೇಡರಿಯದ ಶಾಸ್ತ್ರ ಓದನೇಕೆ?' 'ವೇದಗಳನ್ನು ಓದಿ ಒಣಜಂಭ ಪಡುವರು', 'ವೇದೋಪನಿಷತ್ತುಗಳ ಸತ್ಯವನ್ನು ತಿರುಚಿ ಬರೆದು' ನಾಚಿಸಿದ ಜನರೂ ಇಲ್ಲದಿರಲಿಲ್ಲ. ಈ ಎರಡೂ ವರ್ಗದವರು ಅಪಾಯ ಎನ್ನುತ್ತಾನೆ ವೇಮನ.

'ಧರ್ಮ' ಎಂಬುದು ಮನುಷ್ಯನನ್ನು, ಜೀವಿಗಳನ್ನು ರಕ್ಷಿಸಬೇಕು. ಆದರೆ ನಮ್ಮ

ಧರ್ಮಗಳಲ್ಲಿ ಕೆಲವು ಮನುಷ್ಯನನ್ನೇ ಬಲಿತೆಗೆದು ಕೊಂಡಿವೆ. ಅವನ ಬದಕಿನಲ್ಲಿ ಬೆಳಕಿನ ಬದಲು ಕತ್ತಲನ್ನು ಒಡ್ಡಿವೆ. ದೇವರ ಹಿಂದಿರುವ ದೇವಾಲಯ ಸಂಸ್ಕೃತಿ, ಪೂಜೆ, ಭಕ್ತಿ ಎಲ್ಲವನ್ನೂ ಬಸವಣ್ಣನವರು ಖಂಡಿಸಿದ್ದಾರೆ;

"ಉಳ್ಳವರು ಶಿವಾಲಯ ಮಾಡುವರು;
ನಾನೇನು ಮಾಡಲಿ? ಬಡವನಯ್ಯಾ,
ಎನ್ನ ಕಾಲೇ ಕಂಬ, ದೇಹವೇ ದೇಗುಲ,
ಶಿರ ಹೊನ್ನ ಕಳಸವಯ್ಯ
ಕೂಡಲಸಂಗಮದೇವ, ಕೇಳಯ್ಯಾ,
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲಾ"

ಬಸವಣ್ಣನವರ ದೃಷ್ಟಿಯಲ್ಲಿ ದೇವಾಲಯ ಎನ್ನುವುದು ಶ್ರೀಮಂತರೂ, ಮತಾಂಧರೂ ಆದ ಜನರ ಸಾಂಸ್ಥಿಕತೆಯನ್ನು ಪ್ರತಿನಿಧಿಸುತ್ತದೆ. ದೇವಾಲಯ ಕಟ್ಟಿಸುವುದು, ದೇವಾಲಯದೊಳಗಣ ಶಿವನನ್ನು ಪೂಜಿಸುವುದು ಯಾವುದೂ ಸರಿಯಲ್ಲ. ಶಿವಲಿಂಗವೇ ಆತ್ಮಲಿಂಗ. ದೇವಾಲಯವು ಸ್ಥಾವರವಾದ್ದರಿಂದ ಇದು ಜಡತ್ವವನ್ನೂ, ನಾಶವನ್ನು ಸೂಚಿಸುತ್ತದೆ. ಆದರೆ ಜಂಗಮವೆಂಬ ದೇಹ ಚಲಿಸುವ ದೇವಾಲಯ, ಅದು ಚೈತನ್ಯವನ್ನು ಸೂಚಿಸುತ್ತದೆ. ಆದ್ದರಿಂದ 'ದೇಹಾಲಯವನ್ನೇ ದೇವಾಲಯ ಮಾಡಿಕೊಳ್ಳು ಎನ್ನುತ್ತಾನೆ'. ಬಡವರಿಗೆ ಕೆಳವರ್ಗದವರಿಗೆ ದೇವಾಲಯ ಪ್ರವೇಶ ಇಲ್ಲದ ಕಾಲದಲ್ಲಿ ಬಸವಣ್ಣನವರು ಇಷ್ಟಲಿಂಗ ಪರಿಕಲ್ಪನೆಯ ಮೂಲಕ ದೇವಾಲಯ ಪರಿಕಲ್ಪನೆಯನ್ನೇ ಪರಿವರ್ತಿಸಿದರು. ದೇವಾಲಯ ಸಂಸ್ಕೃತಿಯ ವಿರುದ್ಧ ಸಿಡಿದೆದ್ದರು. ದೈವೀಶಕ್ತಿ ಎಂಬುದು ಅಂತರ್ಗತವಾದುದೇ ಹೊರತು ಬಹಿರಂಗವಲ್ಲ. ಸಂಪತ್ತನ್ನು ವ್ಯಯಮಾಡುವುದು, ಜನವರ್ಗವೊಂದನ್ನು ಶೋಷಣೆ ಮಾಡುವ ಸಂಪ್ರದಾಯಕ್ಕೆ ಬಸವಣ್ಣನವರು ವಿದಾಯ ಹೇಳಿದರು. ಅಂತಹ ಚಳವಳಿಯನ್ನೇ ಮಾಡಿದರು.

ವೇಮನರೂ ಕೂಡಾ ದೇವರ, ದೇವಾಲಯದ ಅಂದಿನ ಸಂಪ್ರದಾಯವನ್ನು ಖಂಡಿಸಿದ್ದಾರೆ.

"ಕಲ್ಲುಬೊಂಬೆಗೇಕೆ ಕೆಲ ಬಣ್ಣದವಸ್ತ್ರ
ಗುಡಿಗೋಪುರವೆಲ್ಲ ಕಂಭ ಮತ್ತೆ;
ಬಟ್ಟೆ ಅನ್ನ ತಾನು ಬಯಸುತಿಹನೆ ದೇವ?
ವಿಶ್ವದಾಭಿರಾಮ ಕೇಳುವೇಮ".

ಎನ್ನುವಲ್ಲಿ ಕಲ್ಲುಗೊಂಬೆ, ಗುಡಿ ಗೋಪುರವೆಲ್ಲ ಕಂಬದಂತೆ ನಿರ್ಜೀವ ವಸ್ತುಗಳು, ಅವು ಹೇಗೆ ಅನ್ನ-ಬಟ್ಟೆಯನ್ನು ಬೇಡುತ್ತವೆ? ಎಂದು ಪ್ರಶ್ನಿಸುವಲ್ಲಿ ಅಂದಿನ ಧರ್ಮದ ವಿರುದ್ಧ ಸಿಡಿದೆದ್ದಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

"ಶಿಲೆಯ ನೋಡಿ ಜನರು ಶಿವನೆಂದು ಭಾವಿಸುವ
ಶಿಲೆಯು ಶಿಲೆಯೆ ಹೊರತು ಶಿವನಲ್ಲ
ತನ್ನೊಳಿರುವ ಶಿವನ ತಾನು ತಿಳಿಯನೇಕೋ
ವಿಶ್ವದಾಭಿರಾಮ ಕೇಳುವೇಮ"

ಎಂದು ಮೂಢನಂಬಿಕೆಯ ಜನರನ್ನು ಜರಿದಿದ್ದಾರೆ. ಈ ಜನರನ್ನು ಅಂಧಕಾರದಲ್ಲಿ

ಕೆಡುವವರು, ತಪ್ಪುದಾರಿ ಹಿಡಿಸುವವರು ಬೇರೆ ಯಾರೂ ಅಲ್ಲ, ಹಾರುವರೆಂದು ಹೇಳುತ್ತಾನೆ. 'ಗುಡಿಯ ದೇವರೆಂದು ಗುರುತು ನಿಲಿಸಿ ಗೋಣಗುವವರು' ಅವರೇ ಎಂದಿದ್ದಾನೆ. 'ಬಿಳಿಯ ಶಿಲೆಯ ತಂದು ಬೇರೆ ಗುಡಿಯ ಕಟ್ಟಿ' ಅದನ್ನು ಪೂಜಿಸುತ್ತಿದ್ದಾರೆ. 'ಶಿಲೆಯೊಳಗೆ ಏನುಂಟು?' ಶಿಲೆಯೊಳಗೆ ಶಿವನಿಲ್ಲ ಜೀವದೊಳಗೆ ಇದ್ದಾನೆಂದು ಹೃದಯ ಗುಹೆಯ ಶಿವನನ್ನು ಆರಾಧಿಸಿರಿ ಗುಡ್ಡದ ಗುಹೆಗೆ ಹೋಗಬೇಡಿರಿ ಎಂದು ಸಾರಿದ್ದಾನೆ.

ಮೂಢನಂಬಿಕೆಗಳು ಹಾಗೂ ಅಂಧಶ್ರದ್ಧೆಗಳು ನಮ್ಮ ಭಾರತೀಯ ಸಮಾಜದಲ್ಲಿ ಬಹಳ ಕಾಲದಿಂದಲೂ ಬೇರೂರಿವೆ. ಯಾವುದೇ ಕೆಲಸವನ್ನು ಮಾಡಬೇಕಾದರೆ ದಿನ ವಾರ, ತಿಥಿ, ನಕ್ಷತ್ರ ನೋಡುವ ಪರಿಪಾಠವಿದೆ. ಕಾಲವನ್ನು ಒಳ್ಳೆಯದು ಕೆಟ್ಟದು ಎಂದು ತಿಳಿದುಕೊಂಡಿದ್ದಾರೆ. ಇಂತಹ ಮೂಢನಂಬಿಕೆಗಳನ್ನು ಸಮಾಜದಿಂದ ಕಿತ್ತೊಗೆಯಲು ಶರಣರು ಬಸವಣ್ಣನವರ ನೇತೃತ್ವದಲ್ಲಿ ಪ್ರಯತ್ನಿಸಿದರು. ಆದರೆ ಆ ತತ್ವ-ಸಿದ್ಧಾಂತಗಳು ಪುಸ್ತಕಗಳಲ್ಲಿ ಉಳಿದವೇ ವಿನಃ ಇದುವರೆಗೆ ಆಚರಣೆಯಲ್ಲಿ ಬರಲಿಲ್ಲ. ಇಂದು ವೈಜ್ಞಾನಿಕ ಯುಗದಲ್ಲಿಯೂ ಕೂಡಾ ಜನ ಆ ನಂಬಿಕೆಯ ಜಾಲದಿಂದ ಸಂಪೂರ್ಣ ಹೊರಬಂದಿಲ್ಲ. ಮದುವೆ ಮೊದಲಾದ ಶುಭಕಾರ್ಯಗಳಿಗಂತೂ, ಜ್ಯೋತಿಷಿಗಳ ನುಡಿಕೇಳದೆ ಏನೂ ಮಾಡುವುದಿಲ್ಲ. ಇದು ಬಸವ ಪಥಕ್ಕೆ ಸಲ್ಲದು.

> **"ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ;**
> **ರಾಶಿಕೂಟ ಋಣಸಂಬಂಧವುಂಟೆಂದು ಹೇಳಿರಯ್ಯ;**
> **ಚಂದ್ರಬಲ ತಾರಾ ಬಲವುಂಟೆಂದು ಹೇಳಿರಯ್ಯ;**
> **ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯ;**
> **ಕೂಡಲ ಸಂಗಮದೇವರ ಪೂಜಿಸಿದ ಫಲ ನಿಮ್ಮದಯ್ಯ"!**

ಬಸವಣ್ಣನವರು ಅವಾಸ್ತವವಾದ ಮೂಢನಂಬಿಕೆಗಳನ್ನು ಸಾರಾ ಸಗಟಾ ತಳ್ಳಿಹಾಕುತ್ತಾರೆ. ಫಲಜ್ಯೋತಿಷ್ಯವನ್ನು, ಶಕುನವನ್ನು ಅವರು ಬಲವಾಗಿ ನಿರಾಕರಿಸುತ್ತಾರೆ. ಮನುಷ್ಯನಲ್ಲಿ ಭಯಬಿತ್ತುವುದನ್ನು ಅವರೆಂದೂ ಒಪ್ಪುವುದಿಲ್ಲ. ವರ್ತಮಾನವನ್ನು ಸರಿಯಾಗಿ ಬದುಕಿದರೆ, ಭವಿಷ್ಯ ಸರಿಯಾಗಿ ರೂಪುಗೊಳ್ಳುತ್ತದೆಯೇ ವಿನಃ ಯಾವುದೇ ದಿನ, ಉದಯ, ಅಸ್ತಮಾನ, ರಾಸಿ, ನಕ್ಷತ್ರಗಳ ಮೇಲೆ ಬದುಕು ಭವಿಷ್ಯ ಅವಲಂಬಿಸಿಲ್ಲ ಎಂಬುದನ್ನು ಪ್ರತಿಪಾದಿಸಿದ್ದಾರೆ. ಮದುವೆಯ ಸಂದರ್ಭದಲ್ಲಿ ಪರಸ್ಪರ ಪ್ರೀತಿ ವಿಶ್ವಾಸ, ನಂಬುಗೆಗಳು ಮುಖ್ಯವೇ ವಿನಃ ರಾಶಿ, ಕೂಟ, ಗಣ ಸಂಬಂಧಗಳು ಅಲ್ಲ ಎಂದು ಈ ಮೇಲಿನಂತೆ ಹೇಳಿದ್ದಾರೆ.

ರಾಜಯೋಗಿ ವೇಮನರೂ ಮೂಢನಂಬಿಕೆಗಳನ್ನು ಕುರಿತು ವಿಡಂಬಿಸಿದ್ದಾರೆ. ತನ್ನ ಒಳಿತು ಕೆಡಕುಗಳಿಗೆ ತನ್ನ ಕರ್ಮಗಳೇ ಕಾರಣ. ಅದನ್ನು ಅರಿತು ತಾನು ಸುಧಾರಿಸಿಕೊಳ್ಳದ ಮಾನವ ಗ್ರಹಗತಿಯನ್ನೋ ಇಲ್ಲವೆ ಹಲವಾರು ಅಪಶಕುನ, ಶುಭಶಕುನಗಳನ್ನೋ ನಂಬುತ್ತ, ಬೆಕ್ಕು ಅಡ್ಡ ಬಂದುದರಿಂದ ಕಾರ್ಯಸಿದ್ಧಿಯಾಗಲಿಲ್ಲ ಎಂದು ನಂಬಿದ್ದಾನೆ. ಮೂಢನಂಬಿಕೆಗಳಿಗೆ ಬಲಿಯಾಗಿ ಶಕುನಹೇಳುವ, ಶುಭ ಘಳಿಗೆ ಸೂಚಿಸುವ ವಿಪ್ರನ ಕೈವಶವಾಗುವುದನ್ನು ಕುರಿತು ಕ್ಷ-ಕಿರಣದಂತಹ ಮಾತುಗಳನ್ನಾಡಿದ್ದಾರೆ.

> **"ಶುಭದ ಶಕುನ ನಂಬಿ, ಶುಭಲಗ್ನವೆಂಬರು;**
> **ಒಬ್ಬರವರೊಳಿಲ್ಲ, ಅಬ್ಬ ಜಗದಿ।**

ಸಂತಸ, ಹಬ್ಬವೆಲ್ಲ ಶಕುನದಲ್ಲಿ ಇಹವೆ
ವಿಶ್ವದಾಭಿರಾಮ ಕೇಳುವೇಮ"

ಎಂದು ಶುಭಾಶುಭ ಶಕುನವನ್ನು ತಳ್ಳಿಹಾಕಿದ್ದಾರೆ. 'ಹಾಲಕ್ಕಿ ಶಕುನದಿಂದ ಯಾವ ಫಲವು ಬರುವುದಿಲ್ಲ.' ಗ್ರಹ-ರಾಶಿಗಳಿಂದ ಯಾವುದೇ ಒಳಿತು ಕೆಡುಕುಗಳಿಲ್ಲ. 'ಗೂಗೆ, ಬಳುವ ಹೊಕ್ಕಮನೆ ಅಳಿವು' ಎನ್ನುತ್ತಾರಲ್ಲ. ಆ ಹಕ್ಕಿಗೂ ಏನಾಗುವುದಿಲ್ಲ. ಮನೆಗೂ ಏನಾಗುವುದಿಲ್ಲವೆಂಬ ಸತ್ಯವನ್ನು ಜನ ತಿಳಿದುಕೊಳ್ಳಬೇಕೆನ್ನುತ್ತಾರೆ. ವೇಮನರು ಇಂತಹ ಕಂದಾಚಾರ ಮೂಢನಂಬಿಕೆಗಳನ್ನು ತೊರೆದು ವೈಚಾರಿಕ ಪ್ರಜ್ಞೆಯನ್ನು ಅಳವಡಿಸಿ ಕೊಳ್ಳುವಂತೆ ಜನರಿಗೆ ಆಹ್ವಾನಿಸಿದ್ದಾರೆ.

ಜನರು ಅನುಸರಿಸುತ್ತಿದ್ದ ಕಂದಾಚಾರ, ಡಾಂಭಿಕತೆಯನ್ನು ಬಸವಣ್ಣನವರು ಅಲ್ಲಗಳೆದಿದ್ದಾರೆ. ಅದರಲ್ಲೂ ಆಡಂಬರದ ಭಕ್ತಿಯನ್ನು ತೀವ್ರವಾಗಿ ವಿಡಂಬಿಸಿದ್ದಾರೆ. ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು' 'ಎನಿಸು ಕಾಲಕಲ್ಲು ನೀರೊಳಗಿದ್ದರೇನು ನೆನೆದು ಮೃದುವಾಗಬಲ್ಲುದೆ ಅಯ್ಯಾ' ಎಂದು ಪ್ರಶ್ನಿಸುತ್ತ;

"ನೀರಕಂಡಲ್ಲಿ ಮುಳುಗುವರಯ್ಯ
ಮರನಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವ ಮರವ
ಮೆಚ್ಚಿದವರು ನಿಮ್ಮನ್ನೆತ್ತ ಬಲ್ಲರು
ಕೂಡಲ ಸಂಗಮದೇವ"

ಎನ್ನುತ್ತಾರೆ. ನಮ್ಮ ಜನ 'ನಿಂತದ್ದೇ ನೀರು ಹರಿದದ್ದೇ ತೀರ್ಥ' ಎಂದು ಭಾವಿಸಿದವರು. ನೀರು ಕಂಡರೆ ಸಾಕು, ಮೂಗು ಹಿಡಿದು ಮುಳುಗಿ ಜಪಮಾಡುವವರು; ಮರವೊಂದನ್ನು ಕಂಡದ್ದೇ ತಡ ಅದಕ್ಕೆ ಸುತ್ತು ಹಾಕುವರು. ಒಣಗುವ ಮರ, ಬತ್ತುವ ಜಲವನ್ನೇ ನಂಬುವ ಜನ ಚೈತನ್ಯವನ್ನು ಅದ್ಹೇಗೆ ಬಲ್ಲರು? ಎಂದು ಕೇಳುತ್ತಾರೆ.

ವೇಮನರೂ ಕೂಡ ಇಂತಹ ಡಂಭಾಚಾರವನ್ನು ಖಂಡಿಸಿದ್ದಾರೆ. ನೀರಲ್ಲಿ ಮುಳುಗಿ ಏಳುವುದರಿಂದ ಯಾವ ಲಾಭವೂ ಇಲ್ಲ. ಅಲ್ಲಿ ಕಪ್ಪೆ ಮೀನು, ಎಮ್ಮೆ, ಕೋಣ ಮುಳುಗಿ ಏಳುತ್ತವೆ. ಇದರಿಂದ ಯಾವುದೇ ಫಲವಿಲ್ಲ ಎನ್ನುತ್ತಾರೆ.

"ನೀರು ಮುಳುಗಲೇನು? ನಿಧಿಯ ಹೂಳಲೇನು
ಮನದಿ ಗುಡಿಯೆಡೆ ಕರ ಮುಗಿದರೇನು?
ಒಳಗೆ ಕಪಟ ಕಲ್ಮಶ ಒಡಲು ತುಂಬಿ ಇರಲು
ವಿಶ್ವದಾಭಿರಾಮ ಕೇಳುವೇಮ"

ಎಂದು ಬಹಿರಂಗದ ಈ ಕಂದಾಚಾರಗಳಿಂದ ಯಾವ ಫಲವಿಲ್ಲ ಎನ್ನುತ್ತಾರೆ. ತನು ಶುದ್ಧವಾದರೇನು? ಮನಶುದ್ಧಿ ಇರದೆ? ಎಂದು ಕೇಳುತ್ತಾರೆ. ನೀರೊಳಗೆ ಮುಳುಗಿ ಏಳುವವರು 'ನೀರುಗೂಳಿ' ಎನ್ನುತ್ತಾನೆ. 'ಆತ್ಮಶುದ್ಧಿ ಇರದ ಆಚಾರ ಮಡಿಕೆ ಶುದ್ಧಿ ಇರದ ಅಡುಗೆ' ಒಂದೆ ಎನ್ನುತ್ತಾನೆ.

ಭಕ್ತಿ ಭಂಡಾರಿ ಎನಿಸಿದ ಬಸವಣ್ಣನವರು 'ಭಕ್ತಿ ಇಲ್ಲದ ಬಡವನಾನಯ್ಯ ಎಂದರೂ 'ಭಕ್ತಿ ಎಂಬುದು ಗರಗಸದಂತಯ್ಯಾ ಹೋಗುತ್ತಲೂ ಕೊರೆಯುವುದು, ಬರುತ್ತಲೂ ಕೊರೆಯುವುದು ಎಂದು ಹೇಳುತ್ತ, 'ಕಂಡಭಕ್ತರಿಗೆ ಕೈಮುಗಿಯುವಾತನೇ ಭಕ್ತ', 'ಭಕ್ತನಾದವನು

ಶಾಂತನಾಗಿರಬೇಕು'. 'ಮಾಡುವ ಭಕ್ತಂಗೆ ಮನ ಹೀನವಾದರೆ ಅದೇ ಕಡೆ' 'ಅನುಭವಿ ಯಾದರೇನು? ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ', 'ಮಾಡುವ ಭಕ್ತನ ಕಾಯ ಬಾಳೆಯ ಕಂಬದಂತಿರಬೇಕು' ಎಂದೆಲ್ಲಾ ಭಕ್ತನ ಅರ್ಹತೆಗಳ ಬಗೆಗೆ ಬಸವಣ್ಣನಿಗೆ ಎಷ್ಟು ಹೇಳಿದರೂ ಕಡಿಮೆಯೆ.

"ಅರೆಭಕ್ತರಾದವರ ನೆರೆ ಬೇಡ, ಹೊರೆಬೇಡ
ದಾರಿಸಂಗಡಬೇಡ, ದೂರನುಡಿಯಲುಬೇಡ
ಕೂಡಲ ಸಂಗನ ಶರಣರಲ್ಲಿ ಅಚ್ಚಲಿಂಗೈಕ್ಯಂಗೆ
ತೊತ್ತಾಗಿಹುದಯ್ಯ"

ಎಂದು, ಭಕ್ತನಾದವನು ಹೇಗಿರಬೇಕೆಂದು ಹೇಳುತ್ತಾನೆ. ಆಡಂಬರದ, ಅರೆಭಕ್ತರ, ಅಜ್ಞಾನಿಗಳ ಸಹವಾಸವೇ ಬೇಡ ಎನ್ನುತ್ತಾನೆ. ಇಡೀ ಸಮಾಜವನ್ನು ಭವಿಕುಲ, ಭಕ್ತಕುಲವೆಂದು ವಿಂಗಡಿಸಿದ್ದನು. ತೋರಿಕೆಯ ಡಾಂಭಿಕ ಭಕ್ತರು ಹೆಚ್ಚಿರುವುದರಿಂದ ಶಿವಭಕ್ತನಾಗುವವನು ಸತ್ಯ, ಶುದ್ಧ ಕಾಯಕ ಮನದವನಾಗಿರಬೇಕು 'ಸದಾಚಾರ, ಸದ್ಭಕ್ತಿಯಿಲ್ಲದವನು ಶಿವಭಕ್ತನಾಗಲಾರನು' ಎಂದು ಸಾರಿದನು.

ಯೋಗಿ ವೇಮನ 'ಭಕ್ತಿಯೋಗ'ದವನು 'ಭಕ್ತಿವಿಹೀನ ಪುರುಷನು ಪರಮ ಪುರುಷರಿಂದ ದೂರಾಗುತ್ತಾನೆ.' ಭಕ್ತನು ಜ್ಞಾನಸಂಪನ್ನನಾಗಿರಬೇಕು. ಅದನ್ನೇ ಹೀಗೆ ಹೇಳುತ್ತಾನೆ;

"ಭಕ್ತಿಯುಳ್ಳ ಎಡೆಗೆ ಪರಮೇಶ್ವರನುಂಟು;
ಭಕ್ತಿ ಇಲ್ಲದೆಡೆಗೆ ಪಾಪ ಉಂಟು
ಭಕ್ತಿ ಹೊಂದಿದವನೆ ಪರಮಾತ್ಮನಾಗುವ
ವಿಶ್ವದಾಭಿರಾಮ ಕೇಳುವೇಮ"

ಎಂಬ ವಚನದಲ್ಲಿ ಎಲ್ಲಿ ಭಕ್ತಿ ಇರುತ್ತದೆಯೋ ಅಲ್ಲಿ ಶಿವನಿರುತ್ತಾನೆ. ಆಗ ಆತ ಶಿವಭಕ್ತ ನಾಗುತ್ತಾನೆ. ಶಿವನಿಲ್ಲದ ಭಕ್ತ, ಭಕ್ತಿ ಅದು ಪಾಪದಂತೆ. ನಿಜವಾದ ಭಕ್ತನೇ ಶಿವನಾಗುತ್ತಾನೆ. 'ಅದು ಉದಕದೊಳಗಣ ಪಾವಿಕದಂತೆ' ಹೃದಯದೊಳಗಿರುವ ಓಂಕಾರವು ಕೇಳುವ ಸ್ಥಿತಿಗೆ ತಲುಪಿದವನೇ ನಿಜವಾದ ಭಕ್ತನು. ಆತ್ಮಕ್ಕೂ ಪರಮಾತ್ಮನಿಗೂ ಎಳ್ಳೆಣ್ಣೆಯ ನಂಟು. ಮೊಸರಿನಲ್ಲಿ ತುಪ್ಪ, ಮರದೊಳಗಣ ಕಿಚ್ಚಿನಂತೆ' ಶಿವನ ಇರವು ಭಕ್ತಿಯ ಸಾಧನ, ಸ್ವರೂಪವನ್ನು ವೇಮನರು ವಿವೇಚಿಸಿದ್ದಾರೆ. ಭಕ್ತಿಯೆಂದರೆ ಮೂಢಭಕ್ತಿಯೆಂದೂ ಮೂರ್ತಿಪೂಜೆಯೆಂದು ನಂಬಿಕುಳಿತಿರುವ ಜನಕೋಟಿಯ ಕಣ್ಣು ತೆರೆಯಿಸುವ ಪ್ರಯತ್ನ ಮಾಡಿದ್ದಾರೆ.

ಸಮಾನತೆಯ ನೆಲೆಗಟ್ಟಿನ ಮೇಲೆ ವರ್ಗ, ವರ್ಣ, ಲಿಂಗರಹಿತ ಸಮಾಜವೊಂದನ್ನು ಕಟ್ಟ ಬಯಸಿದವನು ಬಸವಣ್ಣ. ವ್ಯಕ್ತಿಯೋರ್ವನ ಯೋಗ್ಯತೆಯು ಅವನು ಮಾಡುವ ಕಾರ್ಯ ಮತ್ತು ದಕ್ಷತೆಯನ್ನು ಅವಲಂಬಿಸಬೇಕೆ ಹೊರತು, ಅವನ ಜಾತಿಯಲ್ಲ ಎಂಬುದು ಅವರ ನಿಲುವಾಗಿತ್ತು. ಅಂತಹ ಕಾರ್ಯಯೋಗಿ ಅವರು. ಕುಡಿವ ನೀರು, ನಡೆವನೆಲ, ಬೀಸುವ ಗಾಳಿ ಒಂದೇ ಆಗಿರುವಾಗ ತಾರತಮ್ಯ ಏಕೆ? ಹೊಲಗೇರಿ, ಹೊಲೆಯ ಎಂದೇಕೆ ಎಣಿಸುತ್ತೀರಿ ಎಂದು 'ಇವನಾರವ, ಇವನಾರವ, ಇವನಾರವ ಎಂದೆನಿಸದೆ ಇವ ನಮ್ಮವ, ಇವನಮ್ಮವ ಇವನಮ್ಮವ' ಎಂದೆನಿಸಲು ಹೇಳುತ್ತಾನೆ.

"ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಾ ಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ;
ಫಲವೊಂದೆ ಷಡುದರುಶನ ಮುಕ್ತಿಗೆ;
ನಿಲವೊಂದೆ, ಕೂಡಲಸಂಗಮದೇವಾ,
ನಿಮ್ಮ ನರಿದವಂಗೆ".

ಎಂದು ಹೇಳುವಲ್ಲಿ, ಬಸವಣ್ಣನವರು ಎಲ್ಲರಿಗೂ ನಡೆಯಲು ಇರುವ ನೆಲವೊಂದೆ, ಸ್ನಾನಕ್ಕೆ ಕುಡಿಯಲು ಎಲ್ಲರಿಗೂ ಒಂದೇ ನೀರು ಇರುವಾಗ, ಕುಲವನು ಎಣಿಸುವುದು ನ್ಯಾಯವೆ? ತನ್ನನ್ನು ತಾನು ಅರಿಯುವುದೆ ಕುಲ. 'ಆವಕುಲವಾದರೇನು? ಶಿವಲಿಂಗವಿದ್ದವನೆ ಕುಲಜನು ಕುಲವನರಸುವರೆ ಶರಣರಲ್ಲಿ ಜಾತಿ ಸಂಕರವಾದ ಬಳಿಕ?' ಎಂದು ಕುಲಕುಲಗಳ ನಡುವೆ ವೈವಾಹಿಕ ಸಂಬಂಧ ಕೂಡಾ ನಡೆಯಿಸುವಷ್ಟರ ಮಟ್ಟಿಗೆ ಅಂದು ಬಸವಣ್ಣನವರು ಪ್ರಯತ್ನಿಸಿದ್ದು ಸಾಮಾನ್ಯ ಮಾತೇನಲ್ಲ. ಜಾತಿನಿರ್ಮೂಲನೆಗೆ ಬಸವಣ್ಣ ಕಂಡು ಕೊಂಡ ಮಾರ್ಗ ಇದು.

ಸಮಾಜ ಚಿಂತಕ ವೇಮನರು ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ಅದರಲ್ಲೂ ಜಾತಿಪದ್ಧತಿಯ ವಿರುದ್ಧ ಪ್ರತಿಭಟಿಸಿದ್ದಾರೆ. ಈ ನೆಲದಮೇಲೆ ಎಲ್ಲರು, ಒಂದೆಡೆ ನೆಲೆನಿಂತು, ಒಂದೆಡೆ ಊಟಮಾಡಿ ಸ್ನೇಹತ್ವವನ್ನು ಅರಳಿಸಬೇಕು ಎನ್ನುತ್ತಾರೆ. ಕುಲದಲ್ಲಿ ಮೇಲು ಕೀಳು ಎನಿಸಬಾರದು;

"ಜಾತಿಯೊಳಗೆ ಮೇಲುಜಾತಿ ಕೀಳು ಎಲ್ಲಿ?
ನಿಜವರಿಯದೆ ತಿರುಗಲೇನು ಫಲವು?
ಇದನರಿತ ಮನುಜನ ಕುಲವೆ ಮಿಗಿಲುಕಣಾ
ವಿಶ್ವದಾಭಿರಾಮ ಕೇಳುವೇಮ"

ಎನ್ನುವಲ್ಲಿ ಈ ಜಗದಲ್ಲಿ ಜಾತಿಯೊಳಗೆ ಉಚ್ಚನೀಚ ಇಲ್ಲ. ಈ ಸತ್ಯವನ್ನು ತಿಳಿಯದೆ ಜಾತಿಯನ್ನು ಎಣಿಸಿ ಗುಣಿಸುತ್ತಿದ್ದಾರೆ. ಕುಲಗಳಲ್ಲಿ 'ಮಾನವಕುಲ'ವೇ ಶ್ರೇಷ್ಠ ಎಂದು ಸಾರುತ್ತಾನೆ. ಪಂಪ ಹೇಳಿದ 'ಮನುಜ ಕುಲಂ ತಾನೊಂದೆವಲಂ' ಎಂಬ ಮಾತು ಸಾರ್ವಕಾಲಿಕ ಸತ್ಯವಾದುದು ಎಂದೆನಿಸುತ್ತದೆ.

"ಜಾತಿಮತವ ತೊರೆದು ಯೋಗಿಯಾಗೆ ಮೇಲು; ಜಾತಿಯೊಳಗೆ ಮುಳುಗಿ ನೀತಿ ಹೇಳಲೇಕೆ?" ಎಂದು ಕೇಳುವ ಧೈರ್ಯ ವೇಮನರಿಗಲ್ಲದೆ ಇನ್ನಾರಿಗೆ ಬರಲು ಸಾಧ್ಯ ಹೇಳಿ? ನರಮನುಷ್ಯ ಮಾತ್ರವಲ್ಲ; ಇಂದಿನ ಸಂನ್ಯಾಸಿಗಳೇ ನಿಂತು ಜಾತಿ ಸಂಘಟನೆ, ಸಮಾವೇಷ ಮಾಡುವಾಗ; ಜಾತಿಗೊಬ್ಬ ಜಗದ್ಗುರು, ಮಠ ನಿರ್ಮಾಣವಾಗುತ್ತಿರುವಾಗ ಬುದ್ಧ, ಬಸವ, ವೇಮನರ ಸಂದೇಹಗಳು ಈ ಜನಕ್ಕೆ ಯಾವ ಫಲ ನೀಡುತ್ತವೆ? ಜಾತಿಯಲ್ಲಿ ಮುಳುಗಿ ನೀತಿ ಹೇಳುವುದು ಸೂಕ್ತವಲ್ಲ ಎಂದು ಪ್ರತಿಪಾದಿಸಿದ್ದಾರೆ. ಜಾತಿಯ ಮರದ ಬೇರು ತುಂಬಾ ಆಳಕ್ಕೆ ಇಳಿದಿರುವಾಗ ಇನ್ನು ಅನೇಕ ಮಹಾತ್ಮರು ಬರಬೇಕು. ಅನೇಕ ಶತಮಾನಗಳು ಬೇಕು. ಆಗ ಸಮತಾ ಸಮಾಜ ನಿರ್ಮಾಣ ಆದೀತು. ಬಸವಣ್ಣ ಹಾಗೂ ವೇಮನರ ವಚನಗಳು ಕನ್ನಡ ತೆಲುಗು ಸಾಹಿತ್ಯದ ಜನಪ್ರಿಯ ಸಾಹಿತ್ಯ. ಜನಸಾಮಾನ್ಯರ ನಾಲಗೆಯ ಮೇಲೆ ನಲಿದ, ಹೃದಯವನ್ನು ಅರಳಿಸಿದ, ಸಂಸ್ಕಾರಗೊಳಿಸಿದ ಸಾಹಿತ್ಯ ಮನುಷ್ಯನಿಗೆ ಮಾನವೀಕರಣದ

ದೀಕ್ಷೆಯನ್ನು ಕೊಟ್ಟವು. ಅವರ ಜಾನಪದಶೈಲಿಯ ಪಡೆನುಡಿಗಳು, ಮೊನಚಾದ ಆತ್ಮಾವಲೋಕನದ ಕ್ರಮ ವಿಶಿಷ್ಟವಾದುದು. ಇಬ್ಬರು ಪುಣ್ಯಪುರುಷರು ಮಾನವಧರ್ಮದ ನೀತಿ, ಜಾತಿ, ಭಕ್ತಿ, ಕಾಯಕ, ದೇವರು ಧರ್ಮ ಎಂದರೆ ಯಾವುದೆಂಬುದನ್ನು ವಿವೇಚಿಸಿದ್ದಾರೆ. 'ವೈಚಾರಿಕ ಬದುಕಿನ' ತಳಪಾಯವನ್ನು ಕಟ್ಟಿ ಕ್ರಾಂತಿ ಮಾಡಿದ್ದಾರೆ. ಅವರು ಹಾಕಿಕೊಟ್ಟ ದಾರಿ, ತೋರಿದ ಬೆಳಕಿನಲ್ಲಿ ನಡೆದರೆ ಜೀವನ ಸಾರ್ಥಕ. ಮಹಾತ್ಮರ ತತ್ವಸಿದ್ಧಾಂತಗಳಿಗೆ ನಾವು ತೋರುವ ನಿಜವಾದ ಗೌರವ ಎಂದೆನಿಸುತ್ತದೆ.

❐

ಮಹಮ್ಮದ್(ಸ) ಪೈಗಂಬರ್ ಮತ್ತು ಬಸವೇಶ್ವರರು

●

ಜಿ. ಅಬ್ದುಲ್ ಬಷೀರ್

ಇಸ್ಲಾಂ ಧರ್ಮದ ಸಂಸ್ಥಾಪನಾಚಾರ್ಯರಾದ ಮಹಮ್ಮದ್ (ಸ) ಪೈಗಂಬರ್ ಮತ್ತು ವೀರಶೈವಧರ್ಮದ ಉದ್ದೀಪನಾಚಾರ್ಯರಾದ ಶ್ರೀಬಸವೇಶ್ವರರು ಪ್ರಯತ್ನ ಪಟ್ಟಿದ್ದರೆ ತಮ್ಮ ಅಂತರಂಗದ ದೈವಿಭಕ್ತಿಯನ್ನು ಬಹಿರಂಗದ ಸರಕನ್ನಾಗಿ ಮಾಡಿಕೊಂಡು ಬಗೆಬಗೆಯ ಕೋಮುವಾದಗಳನ್ನು ಸೃಷ್ಟಿಸಿ ರಾಜಕೀಯ ಚದುರಂಗದಾಟವನ್ನು ಆಡಬಹುದಿತ್ತು. ಅರೇಬಿಯಾ ದೇಶದ ಕುರೈಕ್‌ವಂಶದ ನಾಯಕನಾದ ಅಬೂಸುಫ್ಯಾನನ್ನೂ, ಕರ್ನಾಟಕದ ಕಲಚೂರಿ ವಂಶದ ರಾಜನಾದ ಬಿಜ್ಜಳನನ್ನೂ ಸೋಲಿಸಿ, ಸುಲಭವಾಗಿ ರಾಜ ಗದ್ದುಗೆ ಏರಬಹುದಿತ್ತು. ಅದರೆ ಈ ಇಬ್ಬರೂ ಮಾನವ ಪ್ರೇಮಿಗಳು ಹಾಗೆ ಮಾಡಲಿಲ್ಲ. ಜನಪರ ನಿಲುವನ್ನು ತಳೆದ ಈ ಲೋಕ ನಾಯಕರು ತಮ್ಮ ನಾಡುಗಳ ಅಖಂಡತೆಗೂ ಜನತೆಗೂ ದ್ರೋಹ ಬಗೆಯದೆ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದ್ದು ಪ್ರಪಂಚದ ಇತಿಹಾಸದಲ್ಲಿಯೇ ಒಂದು ಅಪೂರ್ವವಾದ ಸಂಗತಿಯಾಗಿದೆ. ಜಾತ್ಯಾತೀತ ತತ್ವವನ್ನು ಪ್ರತಿಪಾದಿಸಿ ಆದರ್ಶ ಸಮಾಜಗಳನ್ನು ಸೃಷ್ಟಿಸಿದ್ದು ಈ ಇಬ್ಬರೂ 'ವಿಶ್ವಧರ್ಮಿಗಳು' ಮಾಡಿದ ಪವಾಡ ಸದೃಶ ಘಟನೆಯಾಗಿದೆ.

'ಭಕ್ತಿ' ಅಂತರಂಗಕ್ಕೆ ಸಂಬಂಧಿಸಿದ ವಿಚಾರವೇ ಹೊರತು ಅದನ್ನು ತೋರಿಸಿ ಮಾಡುವಂಥ, ಮಾಡಿಸುವಂಥ ಕಾರ್ಯವಲ್ಲ. ಭಕ್ತಿ ಗರಗಸದಂತೆ, ಅದು 'ಹೋಗುತ್ತ ಕೊಯ್ವುದು ಬರುತ್ತ ಕೊಯ್ವುದು' ಇದನ್ನು ಮಹಮ್ಮದ್(ಸ) ಮತ್ತು ಬಸವೇಶ್ವರರು ಅರಿತಂತೆ ಬೇರೆ ಯಾರೂ ಅರಿಯಲು ಸಾಧ್ಯವಾಗದಿದ್ದುದಕ್ಕೆ ಕಾರಣ ಅವರ ಹೃದಯ ವೈಶಾಲ್ಯದ ಕೊರತೆ. ಇವರಿಬ್ಬರ ಬದುಕಿನಲ್ಲಿ ನಡೆದಿರಬಹುದಾದ ಪವಾಡಗಳ ಪಟ್ಟಿಯತ್ತ ಕಣ್ಣು ಹಾಯಿಸಿದರೆ, ಅವರಿಬ್ಬರೂ ಪವಾಡ ಸದೃಶ ಘಟನೆಗಳನ್ನೇ ತಮ್ಮ ಬಂಡವಾಳವನ್ನಾಗಿ ಮಾಡಿಕೊಂಡು, ಪ್ರಪಂಚದ ಮೂಲೆ ಮೂಲೆಗಳಿಗೂ ಜಗಜ್ಜಾಹಿರ ಮಾಡಿ ಮುಗ್ಧ ಜನತೆಯನ್ನು ರಾಜಾಧಿರಾಜರನ್ನೂ ತಮ್ಮತ್ತ ಆಕರ್ಷಿಸಬಹುದಿತ್ತು; ಶೋಷಿಸಬಹುದಿತ್ತು; ಬಲಿ ತೆಗೆದುಕೊಳ್ಳಬಹುದಿತ್ತು; ಆ ಮೂಲಕ ಸರ್ವಾಧಿಕಾರಿಗಳಾಗಿ ಮೆರೆಯಬಹುದಿತ್ತು. ಆದರೆ ಈ ವಿಶ್ವ ಮಾನವತಾವಾದಿಗಳು ಹಾಗೆ ಮಾಡದಿದ್ದುದೇ ಅವರ ಹಿರಿಮೆಯ ದ್ಯೋತಕವಾಗಿದೆ.

ಪ್ರಪಂಚದ ಪ್ರಸ್ತುತ ಪರಿಸ್ಥಿತಿಯನ್ನು ನೋಡಿದರೆ, ಇವರಿಬ್ಬರ ಸಂದೇಶ ಪಾಲನೆ ಎಂಥ ಫಲವನ್ನು ನೀಡಬಹುದೆಂಬ ಬಗ್ಗೆ ಆಲೋಚಿಸಬೇಕಾಗಿದೆ. ಈ ದೃಷ್ಟಿಯಿಂದ ಇಸ್ಲಾಂ ಮತ್ತು ವೀರಶೈವ ಧರ್ಮಗಳ ಕಥೆ ತ್ಯಾಗ ಬಲಿದಾನಗಳ ಕಥೆ ಎಂದು ನನಗನಿಸುತ್ತದೆ.

"ಅಲ್ಲಾಹನೆಂದೂ ನಿಮ್ಮನ್ನು ಅಪಮಾನಕ್ಕೀಡು ಮಾಡುವುದಿಲ್ಲ.
ನೀವು ಬಂಧುಗಳ ಹಕ್ಕುಗಳನ್ನು ತೀರಿಸುತ್ತೀರಿ,
ಇತರರ ಹೊರೆಯನ್ನು ಹೊರುತ್ತೀರಿ;
ಅಪೇಕ್ಷಿಸುವವರಿಗೆ ನೆರವಾಗುತ್ತೀರಿ;
ಅತಿಥಿಗಳನ್ನು ಆದರಿಸುತ್ತೀರಿ;
ಸತ್ಯ ಮಾರ್ಗದಲ್ಲಿ ಸಂಕಷ್ಟಗಳು ಬಂದಾಗ ಸಹಾಯ ಮಾಡುತ್ತೀರಿ".

(ಪ್ರವಾದಿವರ್ಯ (ಸ)ರ ವಚನ ರತ್ನಗಳು ಪುಟ ೧೭-೧೮)

ದಿವ್ಯ ಧರ್ಮ ನಿಷ್ಠರಾದ (ಹ)ಬೀಬಿ ಖದೀಜಾ(ರ) ಅವರು ಮಹಾ ಸಾಧಕರಾದ ಪ್ರವಾದಿ ಮಹಮ್ಮದ್ (ಸ) ಅವರನ್ನು ಕುರಿತು ಹೇಳಿರುವ ವ್ಯಾಖ್ಯಾನ ರೂಪದ ವಚನವಿದು. ಈ ರೂಪಕದಲ್ಲಿ ಮಹಮ್ಮದರ (ಸ) ಸಮಗ್ರ ವ್ಯಕ್ತಿತ್ವವೂ ಸ್ವಚ್ಛಂದ ಲಹರಿಯ ವಚನ ರತ್ನಗಳ ಸ್ವರೂಪವೂ ಅಡಗಿದೆ.

"ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತಿರ್ದುದಯ್ಯ ಶಿವನ ಪ್ರಕಾಶ". *(ವಸಾಸಂ. ಪುಟ ೫೯೧)*

ದಿವ್ಯ ಅನುಭಾವಿಗಳಾದ ಅಲ್ಲಮ ಪ್ರಭುದೇವರು ಮಹಾಸಾಧಕರಾದ ಶ್ರೀ ಬಸವೇಶ್ವರರನ್ನು ಕುರಿತು ಬರೆದಿರುವ ವ್ಯಾಖ್ಯಾನ ರೂಪದ ವಚನವಿದು. ಈ ರೂಪದಲ್ಲಿ ಬಸವೇಶ್ವರರ ಸಮಗ್ರ ವ್ಯಕ್ತಿ ಚಿತ್ರವೂ ಸ್ವಚ್ಛಂದ ಲಹರಿಯ ವಚನ ರತ್ನಗಳ ಸ್ವರೂಪವೂ ಅಡಗಿದೆ.

ಮುಂದಿನದು ಮಹಮ್ಮದ್(ಸ) ಅವರೇ ನುಡಿದಿರುವ ವಚನ:

"ಅಲ್ಲಾಹನು ಯಾವ ಜ್ಞಾನ ಮತ್ತು ಮಾಗದರ್ಶನದೊಂದಿಗೆ ನನ್ನನ್ನು ಕಳುಹಿಸಿರುವನೋ ಅದರ ಉದಾಹರಣೆಯು ಮಳೆಯಂತಿದೆ. ಮಳೆಯು ಭೂಮಿಯ ಮೇಲೆ ಸುರಿದಾಗ ಭೂಮಿ ಅದರ ನೀರನ್ನು ಹೀರಿಕೊಂಡಿತು ಮತ್ತು ಅದರ ಮೇಲೆ ಧಾರಾಳ ಹುಲ್ಲುಗಿಡಗಳು ಬೆಳೆದವು. ಅದರಲ್ಲಿನ ಮೃದುವಾದ ಭಾಗವು ನೀರನ್ನು ಶೇಖರಿಸಿಟ್ಟು ಕೊಂಡಿತು. ಈ ರೀತಿ ಅಲ್ಲಾಹನು ಅದರಿಂದ ಜನರಿಗೆಲ್ಲ ಪ್ರಯೋಜನವನ್ನೊದಗಿಸಿದನು. ಜನರು ಸ್ವತಃ ನೀರು ಕುಡಿದರು, ಇತರರಿಗೂ ಕುಡಿಸಿದರು. ಆದರೆ ಭೂಮಿಯಲ್ಲಿದ್ದ ಬರಡಾದ ಬಯಲುಗಳ ಮೇಲೆ ಮಳೆ ಸುರಿದಾಗ, ನೀರನ್ನು ತಡೆದಿಡಲು ಅವುಗಳಿಗಾಗಲಿಲ್ಲ. ಅವುಗಳ ಮೇಲೆ ಹುಲ್ಲು ಗಿಡಗಳೂ ಬೆಳೆಯಲಿಲ್ಲ. ಈ ಪೈಕಿ ಮೊದಲನೆಯ ಉದಾಹರಣೆಯು, ಅಲ್ಲಾಹನ ಧರ್ಮದ ಇಂಗಿತಗಳನ್ನರಿತುಕೊಂಡು, ನನ್ನೊಂದಿಗೆ ಅಲ್ಲಾಹನು ಕಳುಹಿಸಿರುವ ಜ್ಞಾನ ಮತ್ತು ಮಾರ್ಗದರ್ಶನದಿಂದ ಪ್ರಯೋಜನ ಪಡೆದವರಿಗೆ ಅನ್ವಯಿಸುತ್ತದೆ. ಅವರು ಸ್ವತ ತಾವೂ ಜ್ಞಾನವನ್ನು ಸಂಪಾದಿಸಿದರು ಮತ್ತು ಇತರರಿಗೂ ಈ ಜ್ಞಾನವನ್ನು ಪಸರಿಸಿದರು. ಇನ್ನೊಂದು ಉದಾಹರಣೆಯು ಈ ಜ್ಞಾನದ ಕಡೆಗೆ ಗಮನಹರಿಸದೆ, ನಾನು ತಂದಿರುವ ಮಾರ್ಗದರ್ಶನವನ್ನು ಸ್ವೀಕರಿಸದೆ ಇರುವವರಿಗೆ, ಅನ್ವಯವಾಗುತ್ತದೆ.

(ಪ್ರವರ. ಪುಟ. ೧೨೯-೧೩೦).

ಮುಂದಿನದು ಸಾಧಕ ಬಸವೇಶ್ವರರೇ ನುಡಿದಿರುವ ವಚನ :

"ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದರೆ,
ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣಾ
ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದಡೆ
ನಿಚ್ಚ ನಿಚ್ಚ ಕೆಸಱಹುದಲ್ಲದೆ ಅದರಚ್ಚುಗ ಬಿಡದಣ್ಣಾ
ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ
ಕೆಟ್ಟವನೇಕೆ ಸದ್ಭಕ್ತನಹನು ಕೂಡಲ ಸಂಗಮದೇವಾ."

(ಬಸವೇಶ್ವರ ಪುಟ. ೧೬೩).

ಮನುಷ್ಯನು ಮನುಷ್ಯನಂತೆ ಬದುಕಿದರೆ ಸಾಕಾಗುವುದಿಲ್ಲ. ಆತನು ದೇವತ್ವದೆಡೆಗೆ ತುಡಿಯಬೇಕೆಂಬುದು ಇಬ್ಬರ ವಚನಗಳಿಂದಲ್ಲೂ ವ್ಯಕ್ತವಾಗುತ್ತದೆ. ಇಸ್ಲಾಂ ಮತ್ತು ವೀರಶೈವ ಧರ್ಮಗಳೆರಡು ಸಾರಿದ್ದು ಇದನ್ನೇ. "ಇಸ್ಲಾಂ' ಎಂದರೆ 'ಶರಣು' ಶಾಂತಿ, ಆಜ್ಞಾಪಾಲನೆ, ಸಮರ್ಪಣೆ ಎಂದರ್ಥ. 'ವೀರಶೈವ ಎಂದರೆ ಶಿವನಲ್ಲಿ ಅನನ್ಯ ವೀರನಿಷ್ಠೆ ಎಂದರ್ಥ. ಶಿವನೆಂದರೆ ಕಲ್ಯಾಣಕಾರಕನು. ಶಿವಾಭಿಮಾನ ಶೈವ ಧರ್ಮದ ಕಠೋರ ಆಚರಣೆಗಳನ್ನು ಪರಿಪಾಲಿಸುವದರಿಂದ 'ವೀರಶೈವ' ಎಂಬ ಹೆಸರು ಬಂದಿತು. 'ಲಿಂಗಾಂಗ ಸಾಮರಸ್ಯ' ಎಂಬ ಮಾತಿನಲ್ಲಿ ಶಿವಶರಣರ ಸಂಪೂರ್ಣ ಸಾಧನಾ ವಿಧಾನಗಳು ವ್ಯಕ್ತವಾಗುತ್ತವೆ.

ವಚನ ಪ್ರಕಾರದಲ್ಲಿರುವ ಇಸ್ಲಾಂಧರ್ಮ ಬೋಧನೆ ಮತ್ತು ವೀರಶೈವ ಧರ್ಮ ಬೋಧನೆಗಳಲ್ಲಿ 'ದೇವರ ಅಸ್ತಿತ್ವ ಭಕ್ತಿಯ ಅನನ್ಯತೆ ಭಕ್ತನ ಆಂತರಿಕ ತೊಳಲಾಟ, ಸಮಾಜ ವಿಮರ್ಶೆ, ಧರ್ಮ ಪ್ರಚಾರ ದೃಷ್ಟಿ, ವ್ಯಕ್ತಿಯ ಚಾರಿತ್ರ್ಯ, ದೃಷ್ಟಾಂತ–ಪ್ರತಿಮೆ–ಧ್ವನಿಗಳನ್ನೊಳಗೊಂಡ ಕಾವ್ಯ ಸೌಂದರ್ಯ ಮುಂತಾದವು ಹರಳುಗೊಂಡಿವೆ. ಈ ಎಲ್ಲಾ ಅಂಶಗಳನ್ನೂ ಏಕಕಾಲದಲ್ಲಿ ಇಸ್ಲಾಂ ಧರ್ಮ ಬೋಧಕರಾದ ಪ್ರವಾದಿ ಮಹಮ್ಮದ್ (ಸ) ಅವರ ವಚನಗಳಲ್ಲಿಯೂ ಮಹಾಸಾಧಕರಾದ ಬಸವೇಶ್ವರರ ವಚನಗಳಲ್ಲಿಯೂ ಕಾಣಬಹುದು. ಏಕದೈವ, ನಿರಾಕಾರ ಪೂಜೆ, ಪಂಚಾಚಾರಗಳು ಮಹಮ್ಮದ್ (ಸ) ಮತ್ತು ಬಸವೇಶ್ವರರು ಬೋಧಿಸಿದ ಧರ್ಮಗಳಲ್ಲಿರುವ ಸಮಾನ ಧರ್ಮಗಳು.

ಪ್ರಾರ್ಥನೆ (ದಿನಕ್ಕೈದು ಬಾರಿ), (ರಂಜಾನ್ ತಿಂಗಳಲ್ಲಿ) ಉಪವಾಸ, ಧರ್ಮಪಾಲನೆ, ಧರ್ಮಯುದ್ಧ, ಮೆಕ್ಕಾಯಾತ್ರೆ ಇವು ಇಸ್ಲಾಂಧರ್ಮದ ಐದು ಸ್ತಂಭಗಳು. ಲಿಂಗಾಚಾರ (ಇಷ್ಟಲಿಂಗಪೂಜೆ), ಸಮಯಾಚಾರ (ಕಾಯಕ ಸಂಪಾದನೆಯಿಂದ ಗುರುಲಿಂಗ ಜಂಗಮಕ್ಕರ್ಪಿಸಿ ಪ್ರಾಮಾಣಿಕತೆಯಿಂದಿರುವುದು). ಶಿವಾಚಾರ (ಶಿವಶರಣರಲ್ಲಿ ಜಾತಿ–ವರ್ಣ–ವರ್ಗಗಳನ್ನು ಮಾಡದೆ ಎಲ್ಲರೂ ಎಲ್ಲರಲ್ಲಿಯೂ ಊಟ ಮಾಡುವುದು). ಗಣಾಚಾರ (ಶಿವಾಚಾರದನಿಂದೆ ಆಲಿಸದಿರುವುದು), ಭೃತ್ಯಾಚಾರ (ಶಿವಭಕ್ತರೇ ಹಿರಿಯರು, ತಾವು ಕಿರಿಯರೆಂದು ನಡೆದುಕೊಳ್ಳುವುದು) ಇವು ವೀರಶೈವ ಧರ್ಮದ ಐದು ಸ್ತಂಭಗಳು.

ಇಸ್ಲಾಂ ಧರ್ಮದಲ್ಲಿ ಬರುವ ಪ್ರಾರ್ಥನೆ ಮತ್ತು ವೀರಶೈವ ಧರ್ಮದಲ್ಲಿ ಬರುವ ಲಿಂಗಾಚಾರಗಳು ವೈಯಕ್ತಿಕ ಮಟ್ಟದಲ್ಲಿ ನಿಲ್ಲುತ್ತವೆ. ಉಳಿದವೆಲ್ಲಾ ಸಾಮಾಜಿಕ ಹಿತಚಿಂತನೆಯನ್ನೊಳಗೊಂಡಂಥವು. ವ್ಯಕ್ತಿ ಧರ್ಮ – ಸಮಾಜ ಧರ್ಮಗಳೆರಡಕ್ಕೂ ಏಕಕಾಲದಲ್ಲಿ ಗೌರವ ಕೊಟ್ಟಿರುವುದು ಎರಡೂ ಧರ್ಮಗಳ ವೈಶಿಷ್ಟ್ಯಗಳು. ಇಂಥ

ವಿಶ್ವಮಾನವ ಧರ್ಮವನ್ನು ಬೋಧಿಸಿದ ಮಹಮ್ಮದರು (ಸ) ಮತ್ತು ಬಸವೇಶ್ವರರು ಲೋಕ ನಾಯಕರೆನಿಸಿದ್ದಾರೆ. ಇವರ ಸಂದೇಶಗಳು ಎಲ್ಲ ಜನರ ಅಂತರಂಗದಲ್ಲುಳಿಯುವಂಥವು. ಇವರ 'ವಿಶ್ವಭ್ರಾತೃತ್ವ'ಕ್ಕಾಗಿ "ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಭವಿಯಾದ ವರನೆಲ್ಲರನೊಂದೆ ಎಂದೆ" ಎಂಬ ಬಸವೇಶ್ವರರ ವಚನವನ್ನು ಪರಿಭಾವಿಸಬೇಕು. ಇವತ್ತಿನ ಸಮಾಜಕ್ಕೆ ಇವರ ಬೋಧನೆಗಳು ಹೆಚ್ಚು ಪ್ರಸ್ತುತವಾಗುತ್ತವೆ. ಹಿಂಸೆ, ಅರಾಜಕತೆ, ಪ್ರತ್ಯೇಕತಾವಾದಗಳು ಇಂದು ಎಲ್ಲೆಲ್ಲೂ ತಾಂಡವವಾಡುತ್ತಿವೆ. ಇವರು ಬೋಧಿಸಿದ ಅಹಿಂಸೆ, ಸಮಗ್ರತೆ, ಸಹೋದರತ್ವಗಳನ್ನು ಮರೆತಿದ್ದೇವೆ.

ಮಹಮ್ಮದೀಯ ಧರ್ಮ ಉದಯವಾದದ್ದು ಅರೇಬಿಯಾ ದೇಶದಲ್ಲಿ, ಆರನೆಯ ಶತಮಾನದಲ್ಲಿ ಅಲ್ಲಿನ ಜನರು ಕಾಡು ಜನರಂತೆ ವರ್ತಿಸುತ್ತಿದ್ದರು. ಜನ ತಮ್ಮ ತಮ್ಮಲ್ಲಿಯೇ ಹೊಡೆದಾಡುತ್ತಿದ್ದರು; ಬಗೆ ಬಗೆಯ ವಿಗ್ರಹಗಳನ್ನು ಪೂಜಿಸುತ್ತಿದ್ದರು; ಅಸಹ್ಯ ಅನಾಚಾರ ಪದ್ಧತಿಗಳನ್ನು ಪರಿಪಾಲಿಸುತ್ತಿದ್ದರು; ಒಗಟ್ಟಿರಲಿಲ್ಲ; ಯಹೂದಿ ಜೇಸ್, ಖಝುಜ್, ಸರೀಫ್, ಯುನಾಫ್, ಬಗೂ ಅಮಿರ್, ಬನೀಝುರ್, ಮತ್ತು ಕುರೈಶ್ ಜನಾಂಗದಂಥ ಅಧರ್ಮಿಗಳ ನೆಲೆಯಲ್ಲಿತ್ತು; ಅವರಿಗೆ ಮಹಮ್ಮದರು (ಸ) ತಿಳಿಯ ಹೇಳಿದರು; ಆದರೆ ಆ ಕ್ರೂರಿಗಳು ಯಾವುದನ್ನೂ ಒಪ್ಪಲಿಲ್ಲ. ಆದ್ದರಿಂದ ಅವರ ವಿರುದ್ಧ ಧರ್ಮಯುದ್ಧವನ್ನು ಸಾರಿದರು. ಮಹಮ್ಮದರ (ಸ) ಶತ್ರು ಸಮೂಹದ ನಾಯಕ ಉರ್ವೆಬಿನ್ ಮೆಸ್‌ಊದ್‌ನನ್ನು ನಿಗ್ರಹಿಸಿದರು. ಬದ್ರ್ ಯುದ್ಧದಲ್ಲಿ ಸತ್ಯಧರ್ಮಗಳಿಗೆ ವಿಜಯಲಭಿಸಿತು. ಉಹೈದ್, ಕಂದಕ, ಕೈಬರ್, ಹುನೈನ್ ತಬೂಕ್‌ನಲ್ಲಿ ಯುದ್ಧಗಳು ನಡೆದವು. ಅನಾಗರಿಕರನ್ನು ತಿದ್ದಿ, ಅವರಿಗೆ ಏಕದೇವೋಪಾಸನೆಯನ್ನು ಬೋಧಿಸಿ, ಜಡ ಜನತೆಯಲ್ಲಿ ನವ ಚೈತನ್ಯವನ್ನು ತುಂಬಿ, ಆ ಜನ ಭಾಷೆಯನ್ನೇ ದೇವವಾಣಿಯ ಮಟ್ಟಕ್ಕೇರಿಸಿದ ಕೀರ್ತಿ ಮಹಮ್ಮದರಿಗೆ (ಸ) ಸಲ್ಲುತ್ತದೆ. ಇವರೆ ಮಹಮ್ಮದೀಯ ಅಥವಾ ಇಸ್ಲಾಂ ಧರ್ಮ ಸಂಸ್ಥಾಪನಾಚಾರ್ಯಗಳು. (ಹ) ಅಲೀ ಝೈದ್, ಸಿದ್ದೀಕ್, ಹಂ ಝಾ, ಮಹಮ್ಮದ (ಸ)ರ ಸಹಚರರು.

ಅರೇಬಿಯಾ ದೇಶದಲ್ಲಿ ಬಹುದೇವತಾರಾಧನೆ, ಶವಗಳನ್ನು ಭಕ್ಷಿಸುವುದು, ವಂಶಾಭಿಮಾನ, ಮಧ್ಯಪಾನ, ಜೂಜು, ಉಝು ಎಂಬ ದೇವತಾ ಪೂಜೆ, ಅಗ್ನಿಪೂಜೆ, ಶಿಶುಹತ್ಯೆ ಅದರಲ್ಲೂ ಹೆಣುಮಕ್ಕಳ ಕೊಲೆ, ಲೂಟಿ, ಬಡತನ ದಾರಿದ್ರ್ಯಗಳಿಂದ ಕೂಡಿದ ಬದುಕು, ಕ್ಷುದ್ರ ದೇವತೆಗಳಿಗೆ ಹರಕೆ ಹೊರುವುದು, ಆಣೆ ಇಡುವುದು, ಮನುಷ್ಯ ಬಲಿ, ಜ್ಯೋತಿಷ್ಯದಲ್ಲಿ ನಂಬಿಕೆ ಇಡುವುದು, ಮೂಢನಂಬಿಕೆ, ಕಂದಾಚಾರಗಳು, ವ್ಯಭಿಚಾರ, ಮಾತ್ಸರ್ಯ, ದ್ವೇಷ, ಮೋಸ, ಮೂಢ ಕಾನೂನುಗಳು, ಸೇಡಿನ ಕಿಡಿ, ಯುದ್ಧ, ವಿಲಾಸ ಭೋಗಗಳು, ಅಶ್ಲೀಲ ನಗ್ನತೆಗಳು, ಸ್ವಾರ್ಥ, ಅಹಂಕಾರ, 'ಸುಳ್ಳು, ಆರೋಪ ಹೊರಿಸುವುದು, ಗುಲಾಮಗಿರಿ, ಕೆಂಪಗೆ ಕಾದ ಸರಳುಗಳಿಂದ ಗಾಯಗಳನ್ನು ಒತ್ತುವುದು, ಶತ್ರು ಪ್ರತೀಕಾರ, ಅಜ್ಞಾನ ಮುಂತಾದ ಅನಾಚಾರಗಳು ಮಹಮ್ಮದ್ (ಸ) ಅವರು ಹುಟ್ಟಿದ ಸಮಾಜದಲ್ಲಿದ್ದವು.

ಮುಸ್ಲಿಂ ವರ್ಷದ ಮೂರನೆಯ ತಿಂಗಳಾದ 'ರಬೀಉಲ್ ಅವ್ವಲ್'ನ ಹನ್ನೆರಡನೆಯ ದಿನಾಂಕದಂದು (ಕ್ರಿ.ಶ. ೫೭೦ರಲ್ಲಿ) ಮಕ್ಕಾದಲ್ಲಿ ಮಹಮ್ಮದ(ಸ) ರು ಜನಿಸಿದರು. ತಾಯಿ(ಹ) ಅಮೀನಾ ತಂದೆ ಅಬ್ದುಲ್ಲಾಹ್, ಇವರು ಕುರೇಶ್ ವಂಶದವರು, ಬಾಲ್ಯದಲ್ಲಿಯೇ ತಂದೆ-ತಾಯಿಗಳನ್ನು ಕಳೆದುಕೊಂಡು ಅನಾಥರಾದರು. ಸರ್ವರೀತಿಯಲ್ಲಿಯೂ ಶ್ಲಾಘನೀಯವಾದ,

ಎಲ್ಲರಿಂದಲೂ ಮೆಚ್ಚುಗೆ ಗಳಿಸುವ ಒಳ್ಳೆಯ ಎಂಬರ್ಥಗಳನ್ನುಳ್ಳ ಶಬ್ದ ಮಹ್ಮದ್(ಸ), ಬಗೆ ಬಗೆಯ ಕಷ್ಟಗಳನ್ನು ಅನುಭವಿಸಿದ ಮಹ್ಮದ(ಸ) ರು ವ್ಯಾಪಾರ ವೃತ್ತಿಯನ್ನವಲಂಬಿಸಿದರು. ೨೫ವರ್ಷ ವಯಸ್ಸಿನ ಅವಿದ್ಯಾವಂತರಾದ ಇವರು ಇಬ್ಬರು ದಂಪತಿಗಳನ್ನು ಕಳೆದುಕೊಂಡ ನಲವತ್ತುವರ್ಷ ವಯಸ್ಸಿನ ವ್ಯಾಪಾರಿ ಮನೆತನದ (ಹ) ಖದೀಜಾ (ರ) ಅವರನ್ನು ವರಿಸಿದರು. ಆ ಮೂಲಕ ವಿಧವೆಯರಿಗೆ ಗೌರವವನ್ನು ತಂದುಕೊಟ್ಟರು. ಮಹ್ಮದ(ಸ) ರು ಹುಟ್ಟಿದ ತಿಂಗಳು ಪವಿತ್ರವಾದುದೆಂದು ಭಾವಿಸಿ ಮುಸ್ಲಿಂರು ಜಯಂತಿಯನ್ನು ಅಪಾರ ಶ್ರದ್ಧೆ, ಭಕ್ತಿ, ಉತ್ಸಾಹಗಳಿಂದ ಆಚರಿಸುತ್ತಾರೆ. ಇದೇ 'ಈದ್ ಮಿಲಾದ್' ದಾನ, ಪುಣ್ಯ ಮತ್ತು ತ್ಯಾಗದ ಕಾರ್ಯಗಳಿಗೆ ಪ್ರೇರಣೆ ನೀಡುವುದು; ಬಡವ–ಬಲ್ಲಿದ, ಶತೃ–ಮಿತ್ರ ಗಂಡು–ಹೆಣ್ಣು, ಒಡೆಯ–ಸೇವಕ, ಪರಿಚಿತ–ಅಪರಿಚಿತ ವ್ಯಕ್ತಿ ಎಂಬ ಭೇದ ಭಾವವನ್ನು ತೋರಿಸದಿರುವಂತೆ ತಿಳಿವಳಿಕೆ ನೀಡುವುದು ಇದರ ಹಿಂದಿರುವ ಉದ್ದೇಶ (ಬಸವೇಶ್ವರರ ಜಯಂತಿಯನ್ನು ಇದರೊಡನೆ ಹೋಲಿಸಿ) ಹೆಣ್ಣುಮಕ್ಕಳು ಹುಟ್ಟುವುದೇ ಪಾಪವೆಂದು ಭಾವಿಸುತ್ತಿದ್ದ ಆ ಕಾಲದಲ್ಲಿ ಸ್ತ್ರೀಯರ ದೈನ್ಯಾವಸ್ಥೆಯನ್ನು ಸುಧಾರಿಸಿ, ಸ್ತ್ರೀ–ಪುರುಷರೆಂಬ ಅಸಮತಾ ಮನೋಭಾವಕ್ಕೆ ಮಂಗಳ ಹಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಸಾಮಾನ್ಯ ಜನತೆಯ ಸಹಾಯವನ್ನು ಪಡೆದ ಮಹ್ಮದ(ಸ)ರು ಎಷ್ಟೋ ಅಡ್ಡಿ ಆತಂಕಗಳು ರಾಜ–ಮಹಾರಾಜ, ಅಧಿಕಾರಿ, ಶ್ರೀಮಂತರಿಂದ ಬಂದರೂ–ಅಲ್ಲಾಹನ ಆದೇಶಾನುಸಾರ ಜನತೆಯನ್ನು ಧರ್ಮ–ಸತ್ಯ–ಮಾರ್ಗದತ್ತ ಒಯ್ದದ್ದು ಬಹುದೊಡ್ಡ ವಿಚಾರವಾಗಿದೆ. ಸತ್ಯಸಂದರು ಸರಳಜೀವಿಗಳೂ, ಕಾರ್ಯತತ್ಪರರೂ ಸದ್ಗುಣ ಭರಿತರೂ, ಶಾಂತಿಪ್ರಿಯರೂ, ಶುಭಕಾರ್ಯನಿರತರೂ, ಕಷ್ಟಸಹಿಷ್ಣುಗಳೂ, ಅನ್ಯಧರ್ಮ ಸಹಿಷ್ಣುಗಳೂ ಆದ ಮಹ್ಮದ್(ಸ) ರ ಆಕರ್ಷಣೆಗೆ ಜನ ಒಳಗಾದರು. ದೈವ ಮತ್ತು ಮಾನವನತ್ತ ಅವರು ತೋರಿದ ಒಲವು, ಭಕ್ತ ಬದುಕಿನ ಮಹಾಸಾಧನೆ ಎಂಥವರನ್ನು ಬಡಿದೆಬ್ಬಿಸುತ್ತಿತ್ತು. ಮಕ್ಕಾದಿಂದ ಆರು ಮೈಲಿ ದೂರದಲ್ಲಿದ್ದ 'ಹಿರಾ' ಎಂಬ ಗುಹೆಗೆ ಆಗಾಗ ಹೋಗುತ್ತಿದ್ದರು. ಮಹ್ಮದ್(ಸ) ಅವರ ನಲವತ್ತನೆಯ ವಯಸ್ಸಿನಲ್ಲಿ ಸ್ವಪ್ನಗಳು ಕಂಡವು; ಸತ್ಯದರ್ಶನವಾಯಿತು. 'ಮಲಕ್' ಎಂದರೆ ದೇವಚಾರ ಅವರ ಬಳಿ ಬಂದು "ಓದಿರಿ" ಎಂದು ಹೇಳಿದನು. ಮಹಮ್ಮದ್(ಸ) ಅವರು "ಓದಲು ಬರುವುದಿಲ್ಲ" ಎಂದರು. ಆಗ ದೇವಚಾರನು ನಿಮ್ಮನ್ನು ಸೃಷ್ಟಿಸಿದ ನಿಮ್ಮ ಪ್ರಭುವಿನ ನಾಮದಿಂದ ಪಠಿಸಿರಿ, ಆತನು ಮನುಷ್ಯನನ್ನು ಹೆಪ್ಪು ಗಟ್ಟಿದ ರಕ್ತದಿಂದ ಸೃಷ್ಟಿಸಿದನು. ಪಠಿಸಿರಿ. ನಿಮ್ಮ ಪ್ರಭುವಾದರೋ ಮಹಾಉದಾರಿ. ಲೇಖನಿಯ ಮೂಲಕ ಜ್ಞಾನ ದಯಪಾಲಿಸಿದನು. ಆತನು ಮನುಷ್ಯನಿಗೆ ತಿಳಿಯದೆ ಇರುವವುಗಳ ಬಗ್ಗೆ ಜ್ಞಾನಕೊಟ್ಟನು. "ನಾನು ಜಿಬ್ರೀಲ್ ನೀವು ವಾಹಕರು" ಎಂದನು ಮುಂದೆ ಮಹಮ್ಮದ್(ಸ)ರ ಧರ್ಮಪಥ ಸುಗಮವಾಯಿತು. (ಹ) ಅಬೂಬಕರ್ (ರ) ಉಮರ್ (ರ) ಅವರಂಥ ಸಂಗಾತಿಗಳು ದೊರೆತರು (ಮಕ್ಕಾ–ಮದಿನಾ–ಅಬಿಸೀನಿಯಾ–ಸಿರಿಯಾ ದೇಶಗಳಲ್ಲಿ ಓಡಾಡಿದರು) ಬದುಕಿನ ನಡುವೆ ಅನೇಕ ಪವಾಡಗಳೂ ನಡೆದವು. ಸಾಮಾನ್ಯರಂತೆ ಹುಟ್ಟಿ ೬೩ ವರ್ಷ ಬದುಕನ್ನು ನಡೆಸಿ ಸಾಮಾನ್ಯರಂತೆ ದೈವಾಧೀನರಾದ ಮಹಮ್ಮದ(ಸ)ರು ಸಾಧಿಸಿದ್ದು ಅಷ್ಟಿಷ್ಟಲ್ಲ. ರೂಢಿ ಮೂಲವಾಗಿದ್ದ ಬಗೆಬಗೆಯ ಕರ್ಮಕಾಂಡಗಳನ್ನು ಜ್ಞಾನಕಾಂಡಗಳನ್ನು ಕಿತ್ತೊಗೆದು ಸುಲಭವಾದ ಎಲ್ಲರ ಕೈಗೂ ಎಟುಕುವ ಭಕ್ತಿಮಾರ್ಗವನ್ನು ಬೋಧಿಸಿದ ಕೀರ್ತಿ ಒಟ್ಟಿಗೇ ಮಹಮ್ಮದ(ಸ)ರಿಗೂ ಬಸವೇಶ್ವರರಿಗೂ

ಸಲ್ಲುತ್ತದೆ. ಅವರ ಬದುಕಿನಲ್ಲಿ ನಡೆದ ಪವಾಡಗಳ ಬಗ್ಗೆ ಏನೆ ಅಭಿಪ್ರಾಯಗಳು ವ್ಯಕ್ತವಾಗಿದ್ದರೂ ಅವುಗಳ ಹಿಂದಿರುವ ಮಾನವಿಯ ತುಡಿತ, ಭಕ್ತಿಧೋರಣೆ, ಸಾಮಾಜಿಕ ಕಳಕಳಿಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಮಹಮ್ಮದ(ಸ)ರಿಗೂ ಬಸವೇಶ್ವರರಿಗೂ ನಡುವೆ ಎದ್ದು ಕಾಣುವ ವ್ಯತ್ಯಾಸವೆಂದರೆ ಅನಕ್ಷರಸ್ಥರಾದ ಮಹಮ್ಮದ(ಸ) ರಿಗೆ ೪೦ ವರ್ಷಗಳ ಜೀವನ ನಡೆಸಿದ ಮೇಲೆ ದೈವವಾಣಿ ಅವತರಿಸಿದ್ದು ಮತ್ತು ದೇವದೂತ ಆಗಮಿಸಿ ಅಲ್ಲಾಹನ ಸಂದೇಶವನ್ನು ಮಹಮ್ಮದ(ಸ)ರಿಗೆ ತಲುಪಿಸಿದ್ದು ಸಮಸ್ಯೆಗಳ ಪರ್ವತಗಳೇ ಎದುರಾದಾಗ ಅವು ಮಂಜಿನಂತೆ ಕರಗಿದ್ದು; ಆದರೆ ಅಕ್ಷರಸ್ಥರಾಗಿದ್ದ ಬಸವೇಶ್ವರರ ಬದುಕಿನಲ್ಲಿಯೂ (ಬಾಗೇವಾಡಿ-ಕಪ್ಪಡಿಸಂಗಮ ಅಥವಾ ಕೂಡಲಸಂಗಮ ಮಂಗಳವಾಡ-ಕಲ್ಯಾಣಗಳಲ್ಲಿ ಶಿವಾನುಗ್ರಹವಾಯಿತು; ಬೆಟ್ಟದಂಥ ಕಷ್ಟಗಳೆದುರಾದರೂ ಶಿವನೇ ಕೈಹಿಡಿದು ನಡೆಸಿದಂತೆ ತಿಳಿದುಬರುತ್ತದೆ.

ಮಹ್ಮದರು(ಸ) 'ಹಿಲ್ಪ-ಉಲ್-ಫಜೂಲ್' ಎಂಬ ಸಂಘವೊಂದನ್ನು ಸ್ಥಾಪಿಸಿದ್ದರು. ಶಿವಶರಣರ 'ಅನುಭವ ಮಂಟಪಕ್ಕೆ ಸಂವಾದಿಯಾದ ಈ ಸಂಘದ ಗುರಿ ಬಡವ-ಅಶಕ್ತ-ವಿಧವೆಯರ ಸಂರಕ್ಷಣೆಮಾಡುವುದು. ಸ್ತ್ರೀಸ್ವಾತಂತ್ರಕ್ಕೆ ಪ್ರೋತ್ಸಾಹ ನೀಡುವುದು. ದೇವರು-ಧರ್ಮ-ಅಧ್ಯಾತ್ಮಕ್ಕೆ ಸಂಬಂಧಿಸಿದ ಚರ್ಚೆಗಳನ್ನು ನಡೆಸುವುದು. ದೀನದಲಿತರ ತೊಂದರೆಗಳನ್ನು ಪರಿಹರಿಸುವದು; ಸರ್ವರಿಗೂ ಸರ್ವರೀತಿಯ ಸಹಾಯ ಮಾಡುವುದು. ಕಾಯಕದಲ್ಲಿ ಉಚ್ಚ-ನೀಚಗಳೆಂಬ ಭೇದ ಮಾಡಬಾರದು ಎನ್ನುವ ಮಹಮ್ಮದರ ತತ್ತ್ವ ಬಸವಣ್ಣನವರ 'ಕಾಯಕವೇ' ಕೈಲಾಸ ಎಂಬ ತತ್ತ್ವಕ್ಕೆ ಸಂವಾದಿಯಾಗಿದೆ.

ನಿಸ್ವಾರ್ಥಿಗಳೂ ಸತ್ಯಸಂದರೂ ವಿನಯಶೀಲರೂ ಆಗಿದ್ದ ಮಹಮ್ಮದ(ಸ)ರು ಬಾಲ್ಯದಲ್ಲಿ ಕ್ರಾಂತಿಕಾರಿ ಧೀಶಕ್ತಿಯನ್ನಾಗಲಿ ಚಿಂತನೆಯನ್ನಾಗಲಿ ಪ್ರಕಟಿಸಿರಲಿಲ್ಲ. 'ಹಿರಾಗುಹೆಯಿಂದ' ಮರಳಿದಾಗ ಸಂಪೂರ್ಣಬದಲಾಗಿದ್ದರು, ಆದರೆ ಬಸವಣ್ಣನವರು ಬಾಲ್ಯಾವ್ಯವಸ್ಥೆಯಲ್ಲಿಯೇ ಕ್ರಾಂತಿಕಾರಿ ಮನೋಭಾವವನ್ನುಳ್ಳವರಾಗಿದ್ದರು. ರಾಜಮಹಾರಾಜರ ಬಳಿಯೇ ಸುಳಿದಾಡುತ್ತಿದ್ದ ಈ ಧೀಮಂತರು ಇಷ್ಟಪಟ್ಟಿದ್ದರೆ ಚಕ್ರವರ್ತಿ ಪದವಿಯನ್ನು ಪಡೆಯಬಹುದಿತ್ತು. ಧರ್ಮಪ್ರಚಾರದೆದುರು ಅದನ್ನು ಕಾಲಕಸವಾಗಿ ಕಂಡರು. ತತ್ತ್ವಜ್ಞಾನಿ, ವಾಗ್ಮಿ, ಪ್ರವಾದಿ, ಕಾನೂನುತಜ್ಞ, ದಂಡನಾಯಕ, ವಿಚಾರವಂತ, ಗ್ರಹಗತಿಗಳಿಲ್ಲದ ವೈಜ್ಞಾನಿಕ, ವೈಚಾರಿಕ ಆದರ್ಶಗಳ ನಿರ್ಮಾತ ಎನಿಸಿದ ಮಹಮ್ಮದರು ಲೌಕಿಕ ಹಾಗೂ ಆಧ್ಯಾತ್ಮಿಕ ಸ್ತರಗಳಲ್ಲಿ ಅತ್ಯುನ್ನತ ಯಶಸ್ಸನ್ನು ಗಳಿಸಿದವರು ಎಂಬ ಹೊಗಳಿಕೆಗೆ ಪಾತ್ರರಾಗಿದ್ದಾರೆ. ಮಹಮ್ಮದ(ಸ) ರ ಪ್ರೀತಿಯ ಮಗ ಇಬ್ರಾಹಿಂ ಮರಣ ಹೊಂದಿದಾಗ ಸೂರ್ಯಗ್ರಹಣವಾಯಿತು. ಆಗ ಜನ ಅಲ್ಲಾಹನೇ ಶೋಕ ಆಚರಿಸುತ್ತಿದ್ದಾನೆಂದು ಪ್ರಚಾರ ಮಾಡಿದರು; ಆದರೆ ಮಹಮ್ಮದ(ಸ)ರು "ಗ್ರಹಣವು ಪ್ರಕೃತಿ ಸಹಜ ಕ್ರಿಯೆಯಾಗಿದ್ದು ಮಾನವನ ಹುಟ್ಟು ಅಥವಾ ಸಾವಿಗೆ ಅದನ್ನು ತಳುಕು ಹಾಕುವುದು ಮೂರ್ಖತನ" ಎಂದರು. ಮಹಮ್ಮದ(ಸ)ರು ಈ ಸಂದರ್ಭವನ್ನು ಬಳಸಿಕೊಂಡು ಉದಾತ್ತ ವ್ಯಕ್ತಿಯಂತೆ, ಪವಾಡಪುರುಷರಂತೆ ಮೆರೆಯಬಹುದಿತ್ತು: ಆದರೆ ಅಜ್ಞಾನ-ಮೂಢನಂಬಿಕೆಗಳ ಕೂಪದಲ್ಲಿ ಕೊಳೆತು ನಾರುತ್ತಿದ್ದ ಆ ಜನಗಳನ್ನು ಜ್ಞಾನದ ಬಾವಿಯತ್ತ ಕರೆತಂದರು. ಇದು ಅವರ ಮಾನವ ಪ್ರೀತಿಗೆ ಅತ್ಯುತ್ತಮ ಉದಾಹರಣೆಯಾಗಿದೆ. ಯಾವ ವಿಚಾರವನ್ನೇ ಆಗಲಿ ಮಹಮ್ಮದ(ಸ)ರು ದೃಷ್ಟಾಂತಗಳ ಮೂಲಕ

ನಿರೂಪಿಸುತ್ತಿದ್ದರು. ಆ ದೃಷ್ಟಾಂತಗಳು ಲೋಕಾನುಭವದ ಉಗ್ರಾಣಗಳಿಂದ ಎತ್ತಿಕೊಂಡಂತಹವುಗಳಾಗಿವೆ.

ಸಾಮಾಜಿಕ ವ್ಯವಸ್ಥೆ ಜಡ್ಡುಗಟ್ಟಿ ವಿಷಮತೆ ತಲೆದೋರಿದಾಗ ನವೀನ ದೃಷ್ಟಿಕೋನದ ಜನರು ಅದನ್ನು ಪ್ರತಿಭಟಿಸುತ್ತಾರೆ: ಪ್ರತಿಭಟನೆ ಕ್ರಾಂತಿಯತ್ತ ಮುಖಮಾಡಿ ಬದಲಾವಣೆಗೆ ಕಾರಣವಾಗಬೇಕಾದರೆ ತಾತ್ತ್ವಿಕ ದೃಷ್ಟಿಯುಳ್ಳ ನೇತಾರರ ಅಗತ್ಯ ಬೀಳುತ್ತದೆ. ಇಂಥ ಒಂದು ಸ್ಥಿತಿ ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಉದ್ಭವವಾಯಿತು. ಜಾತಿ, ಕಸುಬು, ಉಳ್ಳವರು–ಇಲ್ಲದವರು, ಹೆಣ್ಣು–ಗಂಡು ಎಂಬ ಕಾರಣಗಳಿಗಾಗಿ ಉಚ್ಚ–ನೀಚಗಳೆಂಬ ಭಾವನೆ ಆ ಕಾಲದ ಸಮಾಜದಲ್ಲಿ ತೀವ್ರವಾಗಿತ್ತು. ಉಚ್ಚವರ್ಣದ ವೈದಿಕರು ಅನರ್ಥ ಕರ್ಮ–ಜ್ಞಾನ ಕಾಂಡಗಳಲ್ಲಿ ಮುಳುಗಿದ್ದರು: ನೀಚವರ್ಗದವರು ಅಜ್ಞಾನ, ಮೂಢನಂಬಿಕೆಗಳಲ್ಲಿ ಮೈಮರೆತಿದ್ದರು. ಹೀಗೆ ಬಗೆಬಗೆಯ ಕಾರಣಗಳಿಗಾಗಿ (ಧಾರ್ಮಿಕ, ಆರ್ಥಿಕ) ಬಗೆಬಗೆಯ ವರ್ಗಗಳ ಜನರ ಮಧ್ಯೆ ಅಂತರಗಳು ಎದ್ದು ತೋರುತ್ತಿದ್ದವು. ಇದನ್ನು ವೀರಶೈವ, ಜನ್ಮದಿಂದ ನಿರ್ಣಯವಾಗುವಂಥದ್ದಲ್ಲ: ಅದು ಆತನು ಬದುಕಿನ ಬಗ್ಗೆ ತಾಳುವ ಧೋರಣೆಯಿಂದ, ಬದುಕುವ ರೀತಿಯಿಂದ ತೀರ್ಮಾನವಾಗುವಂಥದ್ದು ಎಂಬ ಅಪೂರ್ವ ತಿಳಿವನ್ನು ತುಂಬಿದರು. ಬಸವೇಶ್ವರರು ವಚನ ಚಳವಳಿಯ ನೇತಾರರಾದರು. ಅಲ್ಲಮಪ್ರಭು ಅಕ್ಕಮಹಾದೇವಿ ಮುಂತಾದವರು ವಚನ ಚಳವಳಿಯಲ್ಲಿ ಭಾಗವಹಿಸಿ ಅದಕ್ಕೊಂದು ಖಚಿತವಾದ ರೂಪವನ್ನು ಕೊಟ್ಟರು. ಈ ಚಳವಳಿಗೆ ಅವರು, ಸಾಮಾನ್ಯ ಜನರನ್ನಾಶ್ರಯಿಸಿ ಅವರ ಆಶೋತ್ತರಗಳಿಗೆ ರೂಪವನ್ನು ನೀಡುವ ಕಾರ್ಯಮಾಡಿದರು. ಬದುಕಿನಲ್ಲಿ ಬಸವೇಶ್ವರರೇ ಮುಂತಾದವರು ಮಾಡಿಕೊಂಡ ಆಯ್ಕೆಯೇ ಇವರು ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ 'ವಚನ'ವನ್ನು ಆರಿಸಿಕೊಳ್ಳಲೂ ಕಾರಣವಾಯಿತು.

ಇವರು ವಚನಗಳಲ್ಲಿ ಬಳಸಿಕೊಂಡ ಭಾಷೆ ತಮ್ಮ ಪರಿಸರದ ಭಾಷೆ. ಇವರ ಶ್ರೋತೃಗಳು ಜನಸಾಮಾನ್ಯರು. ಹೀಗೆ ಶಿವಶರಣರು ಪ್ರಾಮುಖ್ಯವನ್ನು ಪಡೆಯಲು ಸಾಮಾಜಿಕ ಹಾಗೂ ಧಾರ್ಮಿಕ ಕಾರಣಗಳೊಂದಿಗೆ ಸಾಹಿತ್ಯಿಕ ಕಾರಣಗಳು ಕೂಡಿಕೊಂಡವು. ಬಸವೇಶ್ವರರು ಸ್ಥಗಿತವಾಗಿದ್ದ ಸಾಂಪ್ರದಾಯಿಕ ಧೋರಣೆಗಳನ್ನು ತಿರಸ್ಕರಿಸಿದಂತೆ. ನಿಂತ ನೀರಿನಂತಿದ್ದ ಕಾವ್ಯದ ಶಿಷ್ಟಭಾಷೆಯನ್ನು ತ್ಯಜಿಸಿ ಚೈತನ್ಯಪೂರ್ಣವಾದ ಜನಭಾಷೆಯನ್ನು ತಮ್ಮ ಅಭಿವ್ಯಕ್ತಿಗೆ ಆರಿಸಿಕೊಂಡದ್ದು ಕ್ರಾಂತಿಕಾರಕವಾದ ಸಂಗತಿಯಾಗಿದೆ. ಚಂಪೂಕವಿಗಳಿಂದ ಭಿನ್ನರಾದ ವಚನಕಾರರು ರಗಳೆ ಷಟ್ಪದಿ ಛಂದಸ್ಸುಗಳ ಅರ್ಥಪೂರ್ಣ ಬಳಕೆಗೆ ಕಾರಣರಾದರು. ಒಟ್ಟಾರೆ ವಚನಸಾಹಿತ್ಯ ಮುಂದಿನ ಕನ್ನಡ ಸಾಹಿತ್ಯ ಪಥವನ್ನು ಬದಲಾಯಿಸಲೂ ಬಹುಮಟ್ಟಿಗೆ ಕಾರಣವಾಯಿತು. ಹರಿದಾಸ ಸಾಹಿತ್ಯ ಇದಕ್ಕೆ ಸ್ಪಷ್ಟವಾದ ನಿದರ್ಶನವಾಗಿದೆ.

ಮೇಲಿನ ಅಂಶಗಳಲ್ಲಿ ಕೇಂದ್ರಶಕ್ತಿಯಾಗಿ ನಿಂತವರು ಬಸವೇಶ್ವರರು, ಒಂದೇ ಮಾತಿನಲ್ಲಿ ಹೇಳುವುದಾದರೆ ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಸಾಮಾಜಿಕ ಧಾರ್ಮಿಕ, ಸಾಹಿತ್ಯಕ್ರಾಂತಿಯ ನೇತಾರರು ಬಸವೇಶ್ವರರು. ಇವರು ಬಿಜಾಪುರ ಜಿಲ್ಲೆಯ ಬಾಗೇವಾಡಿಯ ಬ್ರಾಹ್ಮಣ ಮನೆತನದ ಮಾದಿರಾಜ ಮತ್ತು ಮಾದಲಾಂಬೆಯ ಪುತ್ರರಾಗಿ ಕ್ರಿ.ಶ. ೧೧೦೬ರಲ್ಲಿ (ಕ್ರಿ.ಶ. ೧೧೩೨ರಲ್ಲಿ?) ಜನಿಸಿದರು. ಬ್ರಾಹ್ಮಣಧರ್ಮ ಜಾತಿಪದ್ಧತಿಯನ್ನು ಪ್ರತಿಪಾದಿಸುತ್ತದೆ ಎಂದು ತಿಳಿದ ಬಸವೇಶ್ವರರು ವೈದಿಕ ಕರ್ಮಕಾಂಡಗಳಲ್ಲಿ ನಿರಾಸಕ್ತರಾಗಿ,

ವೈಚಾರಿಕ ನೆಲೆಯನ್ನು ತಲುಪಿ, ಜಾತಿವಿಹೀನವೂ ಭಕ್ತಿಪ್ರಧಾನವೂ ಆದ ಆಧ್ಯಾತ್ಮದಲ್ಲಿ ಅಸಕ್ತರಾದರು, ಅದಕ್ಕೆ ಸಂಕೇತವೋ ಎಂಬಂತೆ ತಮಗೆ ಮಾಡಲಿದ್ದ ಉಪನಯನ ಕರ್ಮಾದಿಗಳನ್ನು ಪ್ರತಿಭಟಿಸಿ ಪ್ರಗತಿಗಾಮಿ ಮನೋಭಾವದವರಾದರು. ಮುಂದೆ ಕೂಡಲಸಂಗಮಕ್ಕೆ ತೆರಳಿದ್ದು; ಅಲ್ಲಿನ ಶಿವ ಇವರ ಇಷ್ಟದೈವವಾದದ್ದು; ಈಶಾನ್ಯ ಗುರುಗಳ ಲಾಭ ಪಡೆದದ್ದು; ಹತ್ತು ಹನ್ನೆರಡು ವರ್ಷ ಅವಿಶ್ರಾಂತ ಆಧ್ಯಾತ್ಮಿಕ ತಪಸ್ಸಿನಲ್ಲಿದ್ದದ್ದು; ಮುಂದೆ ಮಂಗಳವಾಡಕ್ಕೆ ಹೋಗಿ ಕಲ್ಯಾಣದ ಚಾಲುಕ್ಯರ ಸಾಮಂತನಾಗಿದ್ದ ಬಿಜ್ಜಳನ ಬಳಿ ಭಂಡಾರಿಯಾದದ್ದು; ನೀಲಲೋಚನೆ ಹಾಗೂ ಗಂಗಾಂಬಿಕೆಯರನ್ನು ವರಿಸಿದ್ದು (ಮಹಮ್ಮದ(ಸ)ರೂ ಬಹುಪತ್ನೀ ವ್ರತಸ್ಥರೆಂಬುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಅವರಲ್ಲಿ ಇಬ್ಬರು ವಿಧವೆಯವರೆ ಆಗಿದ್ದಂತಹವರು.); ರಾಜನಾದ ಬಿಜ್ಜಳ ತನ್ನ ರಾಜ್ಯಧಾನಿಯನ್ನು ಕಲ್ಯಾಣಕ್ಕೆ ವರ್ಗಾಯಿಸಿದಾಗ ಅವನೊಡನೆ ಬಸವೇಶ್ವರರು ತೆರಳಿದ್ದು; ಎಲ್ಲರಿಗೂ ತಿಳಿದಿರುವ ಸಂಗತಿಯೆ ಆಗಿದೆ. ಆದರೆ ಇಲ್ಲಿಂದ ಮುಂದಿನ ಬಸವೇಶ್ವರರ ಬದುಕನ್ನು ಗಮನಿಸಿದರೆ ಮಹಮ್ಮದ(ಸ)ರಂತೆ ಅವರಿಗೆ ರಾಜಕೀಯದಲ್ಲಾಗಲಿ ಆಡಳಿತದಲ್ಲಾಗಲಿ ಅಭಿಲಾಷೆ ಇರಲಿಲ್ಲ. ಅವರ ಆಸಕ್ತಿ ಏನಿದ್ದರೂ ಸಾಮಾನ್ಯ ಜನತೆಯ ಉದ್ಧಾರದಲ್ಲಿ, ಶಿವನಲ್ಲಿ, ಶಿವಶರಣರಲ್ಲಿ ಮಾತ್ರ ಇತ್ತು. ಜಾತಿಪದ್ಧತಿಯಂಥ ಅಮಾನುಷ್ಯ ಪದ್ಧತಿಯನ್ನು ಬುದ್ಧನ ನಂತರ ನಮ್ಮ ದೇಶದಲ್ಲಿ ಖಂಡಿಸಿದವರು ಬಸವೇಶ್ವರರು ಮಾತ್ರ. ಬಸವೇಶ್ವರರ ವಿಚಾರಧಾರೆಗೆ ಮಾರುಹೋದ ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ ಮುಂತಾದ ಸಾವಿರಾರು ಜ್ಞಾನಿಗಳು, ಭಕ್ತರಲ್ಲಿ ವಿರಾಗಿಗಳು, ಯೋಗಿಗಳು, ದಲಿತರು, ಕಲ್ಯಾಣಕ್ಕೆ ಆಗಮಿಸಿದರು. ಬಸವೇಶ್ವರರ ಕ್ರಾಂತಿಕಾರಿ–ಸಮಾಜ ಪ್ರಗತಿ ವಿಚಾರಗಳು ಎಷ್ಟೋ ಜನಕ್ಕೆ (ಬಿಜ್ಜಳನನ್ನು ಒಳಗೊಂಡಂತೆ ಅವನ ಅನ್ಯಧರ್ಮೀಯ ಹಿತೈಷಿಗಳು) ಅಸೂಯೆಯನ್ನುಂಟು ಮಾಡಿದವು. ಆದರೆ ಬಸವೇಶ್ವರರು ಆದಾವುದಕ್ಕೂ ಸೊಪ್ಪುಹಾಕದೆ ಅಸ್ಪೃಶ್ಯ ಹರಳಯ್ಯನ ಪುತ್ರನಿಗೂ ಬ್ರಾಹ್ಮಣ ಮಧುವರಸನ ಪುತ್ರಿಗೂ ವಿವಾಹವನ್ನೇರ್ಪಡಿಸಿದರು. (ಮಹಮ್ಮದ(ಸ)ರೂ ಸಹ ಗುಲಾಮ ಝ್ಯೆದರಿಗೆ ಕುಲೀನೆಯಾಗಿದ್ದ ಝೈನಬರೊಡನೆ ಅಂತರ್ಜಾತೀಯ ವಿವಾಹವನ್ನೇರ್ಪಡಿಸಿದ್ದನ್ನಿಲ್ಲಿ ಸ್ಮರಿಸಿಕೊಳ್ಳಬಹುದು) ಕಾರಣಗಳು ಅನೇಕ ಇವೆ. ಒಟ್ಟಾರೆ ಬಿಜ್ಜಳನ ಕೊಲೆಯಾಗುತ್ತದೆ. ಈ ನಡುವಿನ ಅವಧಿಯಲ್ಲಿ ಅವರು ಹೋರಾಟದ ಬದುಕನ್ನು ನಡೆಸುತ್ತಾರೆ. ಆ ಹೋರಾಟ ಅಧರ್ಮದ ವಿರುದ್ಧ, ನೀಚ ಮನೋಭಾವದ ವಿರುದ್ಧ, ತಮ್ಮ ಅಂತರಂಗದ ವಿರುದ್ಧ. ಹಳಗನ್ನಡದಲ್ಲಿದ್ದ ಚಂಪೂವಿನ ಪ್ರೌಢಭಾಷೆ ಸತ್ವಗುಂದಿತ್ತು. ರಾಜಕೀಯ ಮೌಲ್ಯಗಳಾದ ಉತ್ಸಾಹ, ಪರಾಕ್ರಮ, ಬೃಹತ್ತಾದ ಅಶೋತ್ತರಗಳ ಸ್ಥಾನದಲ್ಲಿ ಸೋಮಾರಿತನ ವಂಚನೆ, ಕಪಟಗಳು ಕಾಣಿಸಿಕೊಂಡವು. ಹೀಗೆ ಸಾಮಾಜಿಕ ಮೌಲ್ಯಗಳೆಲ್ಲ ವಿಪತ್ತಿಗೊಳಗಾಗಿದ್ದವು. ಇಂಥಹ ಸ್ಥಿತ್ಯಂತರದ ಕಾಲದಲ್ಲಿ ಬಸವೇಶ್ವರರಿದ್ದರು.

ಬಸವೇಶ್ವರರ ೧೨೦೦ ವಚನಗಳು ಲಭಿಸಿವೆ. (ಮುಹಮ್ಮದ್(ಸ)ರು ೨೦೦ ವಚನಗಳು ಪ್ರಕಟವಾಗಿವೆ. ಅವರನ್ನು, ಅವರ ವಿಚಾರಧಾರೆಯನ್ನು ಕುರಿತು ಇತರರು ಹೇಳಿರುವ ವಚನಗಳೇ ಹೆಚ್ಚಾಗಿವೆ. ಈ ೨೦೦ರಲ್ಲಿ ಅವು ಸೇರಿಲ್ಲ. ಒಟ್ಟಾರೆ ಈ ಎಲ್ಲಾ ವಚನಗಳಲ್ಲಿ ಆದರ್ಶ ಜೀವನದ ಕೆಲವು ದೃಷ್ಟಾಂತಗಳು. ಚಾರಿತ್ರ್ಯನಿರ್ಮಾಣ, ಅಧಿಕಾರ ಮತ್ತು ಆಡಳಿತ ಇಹಲೋಕದ ವಾಸ್ತವಿಕತೆ, ಅತಿದೊಡ್ಡ ಪಾಪ, ಏಕದೇವತ್ವ, ಪ್ರಾದಿತ್ವ, ದೇವಗ್ರಂಥ,

ಮರಣೋತ್ತರ ಜೀವನ, ಧರ್ಮಸ್ವೀಕಾರ ಹೀಗೆ ಅನೇಕ ವಿಚಾರಗಳ ಪ್ರತಿಪಾದನೆಯಿದೆ.) ಬಸವೇಶ್ವರರು ಏಕಕಾಲದಲ್ಲಿ ಅಂತ್ಯಜರನ್ನು ಮೇಲಕ್ಕೆತ್ತಿ ಕನ್ನಡ ಭಾಷೆಯನ್ನು ಉದ್ಧರಿಸಿದ್ದು ಬಹುದೊಡ್ಡ ವಿಚಾರವಾಗಿದೆ. ಕವಿಹೃದಯದ ಬಸವೇಶ್ವರರು ಆಡಿದ್ದೆಲ್ಲಾ ಕಾವ್ಯವಾಯಿತು. ಆದ್ದರಿಂದಲೇ ಬಸವೇಶ್ವರರ ವಚನಗಳಲ್ಲಿ ಕಾವ್ಯಸೌಂದರ್ಯ ಹೆಚ್ಚು ಎಂದು ವಿಮರ್ಶಕರು ಹೇಳುತ್ತಾ ಬಂದಿದ್ದಾರೆ. ಕೆಲವು ಸಾಮಾನ್ಯ ಶಬ್ದ ಪ್ರಯೋಗಗಳಲ್ಲಿಯೂ ಲಯ, ಧ್ವನಿ, ಸ್ವಭಾವೋಕ್ತಿಯನ್ನು ತಂದು ಮೋಡಿಯನ್ನು ಮಾಡಿಬಿಡುತ್ತಾರೆ. ಮೇಲೆ ಹೇಳಿದ ಎರಡೂ ಅಂಶಗಳ ಸಮರ್ಥನೆಗಾಗಿ ಕೆಲವು ವಚನಗಳನ್ನು ನಿದರ್ಶನಕ್ಕಾಗಿ ನೀಡಬಹುದು.

೧) **"ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ?**
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ?
ತನುವಿನೊಳಗೆ ಹುಸಿ ತುಂಬಿ ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲಸಂಗಮದೇವ"

(ವ.ಸಾ.ಸಂ.ಪುಟ ೫೯)

"ಮನೆಯೊಳಗೆ ಮನೆಯೊಡೆಯನಿಲ್ಲದ ಈ ಮನೆಯ ಚಿತ್ರ ಮಾನವ ಮನಸ್ಸಿನ ರಿಕ್ತ ಸ್ಥಿತಿಯ ಸುಂದರವಾದ ಪ್ರತಿಮೆಯಾಗಿದೆ.

೨) **"ನುಡಿದರೆ ಮುತ್ತಿನ ಹಾರದಂತಿರಬೇಕು**
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಖೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವನೆಂತೊಲಿವನಯ್ಯಾ

ಮೂರು ರೂಪಕಗಳನ್ನೊಳಗೊಂಡ ಈ ವಚನ, ವಚನ ಸಾಹಿತ್ಯದ ಅಂತರಂಗ–ಬಹಿರಂಗ ಸ್ವರೂಪ ಚಿತ್ರಣಕ್ಕೆ ಲಕ್ಷ್ಯ–ಲಕ್ಷಣವೆರಡೂ ಆಗಿರುವುದು ಅಚ್ಚರಿಯ ಸಂಗತಿಯಾಗಿದೆ.

೩) **'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ**
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ
ತನ್ನಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ಕೂಡಲಸಂಗಮದೇವರನೊಲಿಸುವ ಪರಿ.

(ವ.ಸಾ.ಸಂ.ಪುಟ ೨೨೩)

೪) **ದಯವಿಲ್ಲದ ಧರ್ಮವದೇವುದಯ್ಯಾ?**
ದಯವೇಬೇಕು ಪ್ರಾಣಿಗಳೆಲ್ಲರಲ್ಲಿಯೂ
ದಯವೇ ಧರ್ಮದ ಮೂಲವಯ್ಯ
ಕೂಡಲಸಂಗಯ್ಯನನಂತಲ್ಲದೊಲ್ಲನಯ್ಯಾ!! *(ವಸಾಸಂ, ಪುಟ ೨೧೦)*

೫) **"ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ**
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ

ಫಲವೊಂದೆ ಷಡುದರುಶನ ಮುಕ್ತಿಗೆ
ನಿಲವೊಂದೆ, ಕೂಡಲಸಂಗಮದೇವಾ, ನಿಮ್ಮನರಿದವಂಗೆ"

(ವಸಾಸಂ, ಪುಟ ೮೩)

೩.೪ ಮತ್ತು ೫ನೆಯ ವಚನಗಳು ವಿಶ್ವಮಾನವ ನೀತಿಯನ್ನು ಬೋಧಿಸುತ್ತವೆ. ವಿಶ್ವಸಾಹಿತ್ಯಕ್ಕೆ ಬಸವೇಶ್ವರರು ನೀಡಿದ ಕೊಡುಗೆ ಮೇಲಿನ ಐದೂ ವಚನಗಳು ಕಾಲದೇಶ ವಯಸ್ಸು ಜೊತೆಗೆ ಜನಾತೀತವಾದ ಅಂದರೆ ಸಾರ್ವತ್ರಿಕವೂ ಸರ್ವಮಾನ್ಯವೂ ಆದ ಮೌಲ್ಯಗಳನ್ನೊಳಗೊಂಡಿವೆ ಆ ವಚನಗಳು. ಇಲ್ಲಿನ ಶಬ್ದ ಸಮೂಹಗಳ ಪುನರಾವರ್ತನೆ, ಸಹಜಪ್ರಾಸ, ಪಾದಗಳ ಜೋಡಣೆಯ ಲಯಬದ್ಧತೆ ಮತ್ತು ಕಾವ್ಯ ಪ್ರತಿಮೆ ಅಸಾಧಾರಣ ಕಾವ್ಯಸೃಷ್ಟಿಗೊಂದು ನಿದರ್ಶನವಾಗಿವೆ.

ಪ್ರಚಲಿತವಾಗಿದ್ದ ಶೈವಧರ್ಮವನ್ನು ಪರಿಷ್ಕರಿಸಿ, ಸುವ್ಯವಸ್ಥಿತ ರೂಪವೊಂದನ್ನು ಕೊಟ್ಟು, ಅದನ್ನು ವೀರಶೈವ ಧರ್ಮವೆಂದು ಹೆಸರಿಸಿ ನವೀನಧರ್ಮವೋ ಎಂಬಂತೆ ಮಾಡಿದ್ದು ಬಸವೇಶ್ವರರ ಹಿರಿಮೆ. ಆದರೆ ಮಹಮ್ಮದರು ಹೊಸಧರ್ಮವೊಂದನ್ನು ಸೃಷ್ಟಿಸಿ ಅದಕ್ಕೆ 'ಇಸ್ಲಾಂ' ಧರ್ಮವೆಂದು ಹೆಸರಿಸಿದರು. ಮೇಲಿನ ವಚನಗಳಿಗೆ ಸಂವಾದಿಯಾದ ವಚನಗಳನ್ನು ಮಹಮ್ಮದರು ನುಡಿದಿದ್ದಾರೆ. ಧೀಮಂತರು ಹೀಗೆ ಒಂದು ರೀತಿಯಲ್ಲಿ ಆಲೋಚನೆ ನಡೆಸಬಲ್ಲರು ಎಂಬುವುದಕ್ಕೆ ಇದು ನಿದರ್ಶನವೂ ಹೌದು (great men think alike). ಇಬ್ಬರ ವಚನಗಳಿಂದಲೂ, ಬದುಕಿನ ನಿದರ್ಶನಗಳಿಂದಲೂ ವ್ಯಕ್ತವಾಗುವುದು ಅವರು ಭಕ್ತಪ್ರೇಮಿಗಳು ವಿಚಾರವಾದಿಗಳು, ಮಾನವೀಯತೆಯ ಮೂರ್ತಿಗಳು, ಸಮರ್ಪಣಾ ಮನೋಭಾವದವರು, ಸತ್ಸಂತರು, ವಿನಯಶಾಲಿಗಳು, ಮಹಾದಾನಿಗಳು. ತಾವೂ ಕ್ಷುದ್ರರೆಂಬ ಭಾವನೆ ಜನತೆಯಲ್ಲಿ ಬೆಳೆಯುತ್ತದೆಂಬ ದೃಷ್ಟಿ ಇಬ್ಬರ ವಚನಗಳಿಂದಲೂ ವ್ಯಕ್ತಪಡುತ್ತದೆ. ಆಯಾ ನಾಡುಗಳಲ್ಲಿ ಈ ಮಹಾತ್ಮರು ಕಾಣಿಸಿಕೊಳ್ಳುವ ಮುನ್ನ ಮನುಷ್ಯ ಜೀವನ, ಬದುಕಿನ ಮೌಲ್ಯಗಳು, ಮಾನವ ಹಾಗೂ ಸಾಮಾಜಿಕ ಸಂಬಂಧ ಇಹಲೋಕ–ಪರಲೋಕ ಮತ್ತು ಮಾನವೀಯತೆಗಳ ಬಗ್ಗೆ ಬಹುಶಃ ಚಿಂತನೆಯೇ ನಡೆದಿರಲಿಲ್ಲವೆಂದು ತೋರುತ್ತದೆ! ವಚನಕಾರರಿಗೂ ಹಿಂದೆ ಇದ್ದ ವೈದಿಕ–ಜೈನಧರ್ಮಗಳು ತಾವು ನಂಬಿದ ಪಾರಂಪಾರಿಕ ಸತ್ಯದ 'ಸಿದ್ಧ' ಉತ್ತರಗಳನ್ನೇ ತಮ್ಮ ಅನುಯಾಯಿಗಳಿಗೆ ನೀಡುತ್ತಿದ್ದವು. ಜನ ಅದನ್ನು ಪ್ರಶ್ನಿಸದೆ, ಸುಮ್ಮನೆ ಒಪ್ಪಿಕೊಂಡು ಮುಂದಿನವರಿಗೆ ತಲುಪಿಸುತ್ತಿದ್ದರು ಅಷ್ಟೆ! ಪ್ರತಿಕೂಲ ಪರಿಸ್ಥಿತಿಯಲ್ಲಿ ಮಹಮ್ಮದ(ಸ) ಮತ್ತು ಬಸವೇಶ್ವರರು ಸಮಾಜ ಸುಧಾರಣೆ ಮಾಡಿದ್ದಿರಲಿ ಅವರು ಎಂತಹ ದೊಡ್ಡ ಸಾಧಕರು ಎಂಬುದನ್ನು ಮನಗಾಣಬೇಕು.

"ಉಳ್ಳವರು ಶಿವಾಲಯವ ಮಾಡುವರು
ನಾನೇನು ಮಾಡಲಿ ಬಡವನಯ್ಯಾ!
ಎನ್ನ ಕಾಲೇ ಕಂಬ, ದೇಹವೇ ದೇಗುಲ
"ಶಿರ ಹೊನ್ನ ಕಳಸವಯ್ಯಾ, ಕೂಡಲಸಂಗಮದೇವ
ಕೇಳಯ್ಯಾ, ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ!

(ವಸಾಸಂ, ಪು ೭೨೬)

ಬಸವೇಶ್ವರರ ಕಾಲದಲ್ಲಿ ಜಾತಿ ಸಮಸ್ಯೆ ತೀವ್ರವಾಗಿತ್ತು. ಅಸ್ಪೃಶ್ಯರಿಗೆ ದೇವಸ್ಥಾನ ಪ್ರವೇಶವಿರಲಿಲ್ಲ. ಜಾತ್ಯಾತೀತ ಸಮಾಜ ಸೃಷ್ಟಿಗೆ ಟೊಂಕಕಟ್ಟಿ ನಿಂತ ಬಸವೇಶ್ವರರು

'ದೇವಾಲಯವಿದ್ದರೆ ತಾನೆ ಈ ಸೋಂಕು" ಎಂದು ದೇವಾಲಯದ ಅಸ್ತಿತ್ವವನ್ನೇ ತಿರಸ್ಕರಿಸಿಬಿಟ್ಟರು. ಉಳ್ಳವರು ಅಂದರೆ ಶ್ರೀಮಂತರು ಅಹಂಕಾರ ಪ್ರದರ್ಶನ ಮಾಡಲು ಇದೊಂದು ವ್ಯವಸ್ಥೆ ಎನಿಸಿತು ಬಸವೇಶ್ವರರಿಗೆ. ಇದೇನಿದ್ದರೂ ಸಂಪ್ರದಾಯ ಜಡತ್ವದ ಪ್ರತೀಕ ಎನಿಸಿತು ಅವರಿಗೆ! ದೇಹವೆ ದೇಗುಲವಾಗುವ ಬಗೆಯನ್ನು ಇದಕ್ಕಿಂತ ಚೆನ್ನಾಗಿ ಯಾರೂ ಹೇಳಿಲ್ಲ. ಜಂಗಮ ಓಡಾಡುವ ದೇವರಿದ್ದಂತೆ: ಇಷ್ಟಲಿಂಗವೇನಿದ್ದರೂ ಒಂದು ಸಂಕೇತಮಾತ್ರ ಎಂದರಿತವರು ಶಿವಶರಣರು.

'ಸ್ಥಾವರ' 'ಜಂಗಮ'ಗಳೆಂಬ ಎರಡು ಅಪೂರ್ವ ಶಬ್ದಗಳಲ್ಲಿ ಮೊದಲನೆಯದು ಜಡತ್ವವನ್ನು, ಸ್ಥಗಿತವಾದುದನ್ನು ನಾಶಪಡಿಸುವುದನ್ನು ಧ್ವನಿಸಿದರೆ, ಎರಡನೆಯದು ಚೈತನ್ಯವನ್ನು ಸ್ಥಿತ್ಯಂತರಗಳಿಗೆ ತಕ್ಕಂತೆ ಹೊಂದಿಕೊಂಡು ಹೋಗುವ ಚಿರಂತನ ಗುಣವನ್ನು ಧ್ವನಿಸುತ್ತದೆ. ತಮಗೂ ಹಿಂದಿದ್ದ ಚಂಪೂ ಪರಂಪರೆಯ ಜಡತ್ವವನ್ನೂ ನೀಗಿ ಕಂದಾಚಾರಿಗಳ ಸ್ಥಗಿತಸಮಾಜವನ್ನೂ ಟೀಕಿಸಿ, ವಿಮರ್ಶಿಸಿ ಬಸವೇಶ್ವರರೂ ಸ್ವಚ್ಛಂಧವಾಗಿ ವಚನಗಳನ್ನು ರಚಿಸಿದ್ದನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಮೇಲಿನ ಮಾತುಗಳು (ಚಂಪೂ ಪರಂಪರೆಯ ಜಡತ್ವಕ್ಕೆ ಸಂಬಂಧಿಸಿದ ಮಾತನ್ನು ಹೊರತುಪಡಿಸಿ) ಇಸ್ಲಾಂಧರ್ಮಕ್ಕೂ ಸಂಬಂಧಿಸಿವೆ.

ಮಹಮ್ಮದ(ಸ)ರ ವಚನಗಳಲ್ಲಿ ಬೆಳೆದಂತಹ ಚೇತನವೊಂದು ಮಾತನಾಡಿದಂತೆ ಕಂಡುಬರುತ್ತದೆ. ಮಾನಸಿಕ ಸಂಘರ್ಷದ ಚಿತ್ರಗಳು ಪ್ರಖರವಾಗಿವೆ. ಭಕ್ತಿಭಂಡಾರಿ ಬಸವೇಶ್ವರರ ವಚನಗಳಲ್ಲಿ ಸಾಧಕ–ಭಕ್ತನೊಬ್ಬನ ಮಾನಸಿಕ ಸಂಘರ್ಷ ಅತ್ಯಂತ ತೀವ್ರವಾಗಿ ರೂಪ ಪಡೆದಿರುವುದು ಕಂಡುಬರುತ್ತದೆ:

'ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ,'
'ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನಬಾಳುವೆ'
'ಬೆದಕದಿರು ಬೆದಕದಿರು ಬೆದಕಿದರೆ ಹುರುಳಿಲ್ಲ'
'ಕೆಸರಲ್ಲಿ ಬಿದ್ದ ಪಶುವಿನಂತೆ ಆನು ದೆಸೆದೆಸೆಗೆ ಬಾಯಿ ಬಿಡುತ್ತಿದ್ದೆನಯ್ಯಾ'

ಎಂಬ ವಚನಗಳನ್ನು ನಿದರ್ಶನಕ್ಕಾಗಿ ನೋಡಬಹುದು, 'ಕೊಲ್ಲುವವನೇ ಮಾದಿಗ' 'ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯ; 'ಕಲ್ಲನಾಗರ ಕಂಡರೆ ಹಾಲ ನೆರೆಯೆಂಬರು' ಎಂಬೀ ವಚನಗಳಲ್ಲಿ ಬಸವೇಶ್ವರರ ಕಾಲದ ಸಾಮಾಜಿಕ ಅಂಕುಡೊಂಕುಗಳ ಟೀಕೆ ವಿಡಂಬನೆ–ವಿಮರ್ಶೆ ಇದೆ.

ಈ ಬಗೆಯ ವಚನಗಳನ್ನು ಮಹಮ್ಮದ(ಸ)ರು ನುಡಿದಿದ್ದಾರೆ.

"ನನ್ನ ಮತ್ತು ನಿಮ್ಮ ಉದಾಹರಣೆ ಹೇಗಿದೆಯೆಂದರೆ
ಒಬ್ಬ ವ್ಯಕ್ತಿ ಬೆಂಕಿ ಹೊತ್ತಿಸಿದಾಗ ಪತಂಗಗಳು ಮತ್ತು
ಹಾತೆಗಳು ಬಂದು ಅದರಲ್ಲಿ ಬೀಳತೊಡಗುತ್ತವೆ.
ಅವನು ಅವುಗಳನ್ನು ದೂರ ಅಟ್ಟುತ್ತಿದ್ದಾನೆ. ನಾನು
ಕೂಡ ನಿಮ್ಮ ಸೊಂಟ ಹಿಡಿದು ನಿಮ್ಮನ್ನು ಅಗ್ನಿಯಿಂದ
ದೂರಸರಿಸುತ್ತಿದ್ದೇನೆ. ನೀವಾದರೋ ನನ್ನ ಕೈಯಿಂದ
ತಪ್ಪಿಸಿಕೊಂಡು ಹೋಗುತ್ತಿದ್ದೀರಿ.

(ಪ್ರ.ವ. ಪುಟ ೧೨೩)

"ಕೆಟ್ಟ ಗುಮಾನಿಗಳಿಂದ ದೂರವಿರಿ, ಏಕೆಂದರೆ ಕೆಟ್ಟ ಗುಮಾನಿಯೂ ಅತ್ಯಂತ ಕೆಟ್ಟ ಸುಳ್ಳಾಗಿದೆ. ಜನರಲ್ಲಿ ದ್ವೇಷಗಳನ್ನು ಹುಡುಕಬೇಡಿ ಹೊಂದುಹಾಕಬೇಡಿ. ಪರಸ್ಪರರ ಮೇಲೆ ಅಸೂಯೆ ಪಡಬೇಡಿ. ಅಲ್ಲಾಹನದಾಸರೆ! ಪರಸ್ಪರ ಸಹೋದರರಾಗಿರಿ."

(ಪ್ರವ, ಪು.೮೯)

"ನೀನು ಅನ್ಯಾಯದ ವಿಷಯದಲ್ಲಿ ನಿನ್ನ ಜನಾಂಗಕ್ಕೆ ಸಹಾಯ ಮಾಡಿದರೆ ಅದುವೇ ಪಕ್ಷಪಾತ",

"ಹಸಿದವರಿಗೆ ಉಣಬಡಿಸಿರಿ, ರೋಗಿಯನ್ನು ಸಂದರ್ಶಿಸಿರಿ ಮತ್ತು ಕೈದಿಯನ್ನು ಬಿಡುಗಡೆಗೊಳಿಸಿರಿ".

"ಕೆಟ್ಟವರ ಸಂಗದಲ್ಲಿ ಇರುವುದಕ್ಕಿಂತ ಒಂಟಿಯಾಗಿ ಇರುವುದು ಮೇಲು, ಮಾತಾಡದೆ ಇರುವುದಕ್ಕಿಂತ ಜ್ಞಾನವನ್ನು ಹುಡುಕಿಕೊಂಡು ಹೋಗುವವನೊಡನೆ ಮಾತಾಡುವದು ಮೇಲು, ಕೆಟ್ಟಮಾತುಗಳನ್ನು ಆಡುವುದಕ್ಕಿಂತ ಮಾತಾಡದೆ ಮೌನವಾಗಿರುವದು ಮೇಲು".

ಮಹಮ್ಮದ(ಸ)ರ ವಚನಗಳು ಸ್ವಭಾವೋಕ್ತಿಗಳಿಂದ ಕೂಡಿದೆ; ನೇರ ನೀತಿಬೋಧೆಯೇ ಹೆಚ್ಚು; ಉಪಮೆ–ದೃಷ್ಟಾಂತ–ರೂಪಕಗಳು ಅಲ್ಲಲ್ಲಿ ಬರುತ್ತವೆ. ಈ ವಚನಗಳಲ್ಲಿ ವ್ಯಕ್ತವಾಗಿರುವ ಅವರ ಮಹಾನ್ ವ್ಯಕ್ತಿತ್ವ, ನಿಷ್ಕಳಂಕ ಚಾರಿತ್ರ್ಯ, ಆದರ್ಶ ಗುಣಗಳು ಅನುಕರಣೀಯವಾಗಿವೆ.

"ಏನಿ ಬಂದಿರಿ ಹದುಳವಿದ್ದಿರೆ? ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೆ?
ಕುಳ್ಳಿರೆಂದರೆ ನೆಲ ಕುಳಿಹೋಹುದೆ? ಒಡನೆ ನುಡಿದರೆ
ಶಿರ ಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ,
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮದೇವನು?

(ವ.ಸಾ.ಸಂ.ಪುಟ. ೨೧೧)

ಎಂಬ ಬಸವೇಶ್ವರರ ವಚನ ಮಹಮ್ಮದ(ಸ)ರ ಈ ಕೆಳಗಿನ ವಚನಕ್ಕೆ ಸಂವಾದಿಯಾಗಿದೆ:

"ಖಂಡಿತವಾಗಿಯೂ ಅಲ್ಲಾಹನು ನಿಮ್ಮ ರೂಪಗಳನ್ನೂ ಸಂಪತ್ತನ್ನೂ ನೋಡುವುದಿಲ್ಲ. ಅವನು ನಿಮ್ಮ ಮನಸ್ಸುಗಳನ್ನು ನಿಮ್ಮ ಕರ್ಮಗಳನ್ನು ನೋಡುತ್ತಾನೆ."

ದೇಶಗಳೂ ಧರ್ಮಗಳೂ ಬೇರೆ ಬೇರೆಯಾದರೂ ಮಾನವ ಮನೋಧರ್ಮ ಒಂದೇ ಎಂಬುದು ಇಲ್ಲಿ ಸುವ್ಯಕ್ತವಾಗಿದೆ. ವಚನಗಳು ಉಪನಿಷತ್ತುಗಳಿಗಿಂತ ಕಡಿಮೆ ದರ್ಜೆಯವು ಎನಿಸುವುದಿಲ್ಲ. 'ರೆಹ್ಮತುಲ್ಲಲ್ ಅಲಮೀನ್" ಎಂದರೆ "ವಿಶ್ವಕರುಣೆ) ಇದು ಮಹಮ್ಮದ(ಸ)ರ ವ್ಯಕ್ತಿ ವೈಶಿಷ್ಟ್ಯವಾಗಿತ್ತು. ಈ ಕೆಳಗಿನ ವಚನವನ್ನು ಗಮನಿಸಿ: "ಮುಸ್ಲಿಂನಾದವನು ತನ್ನ ತಂದೆ, ತಾಯಿ, ಸಂಬಂಧಿಕರು, ನೆರೆಹೊರೆಯವರಿಗೆ ಮಾತ್ರವಲ್ಲ ಸಂಪೂರ್ಣಮನುಕುಲ, ಪ್ರಾಣಿ, ಪಕ್ಷಿ, ಗಿಡಮರಗಳೊಡನೆ ಪ್ರೀತಿಯಿಂದ ವರ್ತಿಸಬೇಕು. "ಮೋಜಿಗಾಗಿ" ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಬಾರದು, ಫಲಕಾಯಿಗಳನ್ನು ನೀಡುವ ಗಿಡ–ಮರಗಳನ್ನು ಅನಿವಾರ್ಯವಾಗಿಯಲ್ಲದೆ ಕಡಿಯಬಾರದು."

ಧರ್ಮ, ದೇಶ, ಭಾಷೆ, ಪಂಗಡ, ವಂಶ, ವರ್ಣಭೇದಗಳು ಆತಂಕಗಳನ್ನು ನಿವಾರಿಸಿ ಅಸಮಾನತೆಯ ಶೃಂಖಲೆಗಳನ್ನು ಕಿತ್ತೊಗೆಯುವಂತೆ ಕೀರ್ತಿಯೇ ಹಂಬಲ, ಸಂಪತ್ತು,

ಅಧಿಕಾರಗಳಂಥ ದುರಾಸೆಗಳನ್ನು ಖಂಡಿಸುವಂತೆ ಇಡೀ ಮನುಕುಲಕ್ಕೆ ಕರೆನೀಡಿದ್ದಾರೆ. ಈ ಇಬ್ಬರು ಮಹಾತ್ಮರು, 'ವಿಶ್ವ ಭ್ರಾತೃತ್ವ'ವೆಂಬ ಅವರ ಮಾತು ಅಂದಿಗಿಂತ ಇಂದು ಹೆಚ್ಚು ಪ್ರಸ್ತುತವಾಗಿದೆ.

ದೇವರ ಬಗೆಗಿನ ಜ್ಞಾನ ಬಂಡವಾಳ, ವಿವೇಕ ನನ್ನ ವಿಶ್ವಾಸದ ಬೇರು. ಪ್ರೇಮ ನನ್ನ ಬುನಾದಿ, ಉತ್ಸಾಹ ನನ್ನ ವಾಹನ, ದೇವಸ್ಮರಣೆ ನನ್ನ ಮಿತ್ರ, ಸ್ಥಿರಚಿತ್ತ ನನ್ನ ಭಂಡಾರ, ದುಃಖ ನನ್ನ ಸಂಗಾತಿ, ಜ್ಞಾನ ನನ್ನ ಅಸ್ತ್ರ, ಸಹನೆ ನನ್ನ ದೀಪ, ಬಡತನ ನನ್ನ ಅಭಿಮಾನ, ಅರ್ಪಣಾ ಭಾವ ನನ್ನ ಕಲೆ, ಪಕ್ವ ನಿರ್ಧಾರ ನನ್ನ ಶಕ್ತಿ, ಸತ್ಯ ನನ್ನ ವಿಮೋಚಕ, ವಿಧೇಯತೆ ನನ್ನ ಸಂಪನ್ನತೆ, ಹೋರಾಟ ನನ್ನ ವಿಧಾನ ಮತ್ತು ನನ್ನ ಸಂತಸ, ನನ್ನ ಪ್ರಾರ್ಥನೆಯಲ್ಲಿದೆ". ಎಂಬ ಮಹಮ್ಮದ(ಸ)ರ ಮಾತುಗಳು*. ಸರ್ವ ಜನಾದರಣೀಯವಾಗಿವೆ. ಸಾರ್ವಕಾಲೀಕವಾಗಿವೆ.

ಬಸವೇಶ್ವರರ ವಚನಗಳ ಪ್ರಭಾವ ಹರಿದಾಸರ ಉಗಾಭೋಗಗಳ ಮೇಲೆ ಎಷ್ಟು ಆಗಿದೆ ಎಂಬುದಕ್ಕೆ ಒಂದು ನಿದರ್ಶನವನ್ನು ನೋಡಿ:

"ಆರು ಮುನಿದು ಎಮ್ಮೇನು ಮಾಡುವರು
ಊರು ಮುನಿದು ಎಮ್ಮನೆಂತು ಮಾಡುವುದು
ನಮ್ಮ ಕುನ್ನಿಗೆ ಕೂಡಕೊಡಬೇಡ
ನಿಮ್ಮ ಸೊಣಗಂಗೆ ತಳಿಗೆಯನಿಕ್ಕಬೇಡ
ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ
ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕ"

(ವಸಾಸಾ. ಪುಟ. ೩೩೩)

ಯಾರು ಮುನಿದು ನಮಗೇನು ಮಾಡುವರಯ್ಯ ಯಾರು ಒಲಿದು ನಮಗೇನು ಕೊಡುವರಯ್ಯ ಕೊಡಬೇಡ ನಮ್ಮ ಕುನ್ನಿಗೆ ಕೂಸನು ಈಯಲುಬೇಡ ನಮ್ಮ ಶುನಕಗೆ ತಳಿಗೆಯ ಆನೆ ಮೇಲೆ ಪೋಪಗೆ ಶ್ವಾನ ಮುಟ್ಟಬಲ್ಲುದೆ ನಮಗೆ ಶ್ರೀ ಪುರಂದರ ವಿಠಲನೆ ಸಾಕು. ಇಬ್ಬರ ರಚನೆಯಲ್ಲಿಯೂ ಆರು ಸಾಲುಗಳಿವೆ; ಅದೇ ನಿರ್ಭಯವಾಣಿ ಇದೆ: ಒಂದರ ಪ್ರತಿಬಿಂಬ ಮತ್ತೊಂದು ಎಂಬಂತಿದೆ. ಬಸವೇಶ್ವರರ ವಾಣಿಯೇ ಹಾಗೆ.

❐

---

* ಪ್ರವಾದಿ ಮಹಮ್ಮದ್ ಅವರ ಹೆಸರಿನಂತ್ಯದಲ್ಲಿ (ಸ) ಎಂದು ಆವರಣದಲ್ಲಿ ಕೊಟ್ಟಿದೆ. ಇದು ಅರಬ್ಬಿಭಾಷೆಯ "ಸಲ್ಲಲ್ಲಾಹು ಅಲೈವಸಲ್ಲಿಮ್" ಎಂಬ ಸ್ವಸ್ತಿ ವಚನದ ಸಂಕ್ಷೇಪ ರೂಪ. ಇದರ ಅರ್ಥ– ಅಲ್ಲಾಹನ ಅನುಗ್ರಹ ಮತ್ತು ಶಾಂತಿ ಅವರ ಮೇಲಿರಲಿ ಎಂದು.

(ರ) ಈ ಸಂಕೇತಾಕ್ಷರ ಬಂದಾಗ 'ರಜಿಯಲ್ಲಾಹು ಅನ್‌ಹು' ಎಂಬುದರ ಸಂಕ್ಷೇಪರೂಪ, 'ಅಲ್ಲಾಹನು ಅವರಿಂದ ಸುಪ್ರೀತನಾಗಲಿ' ಎಂದು ಅದರರ್ಥ
ಪ್ರವಾದಿವರ್ಯರ (ಸ) ಸಂಗಾತಿಗಳ ಉಲ್ಲೇಖ ಬಂದಾಗಲೆಲ್ಲ ಈ ನುಡಿ ಬರುತ್ತದೆ.
ಸತ್ಯಧರ್ಮಕ್ಕಾಗಿ ಅವರು ಮಾಡಿದ ತ್ಯಾಗ, ಬಲಿದಾನಗಳಿಗಾಗಿ ಇದು ಅಲ್ಲಾಹನು ಅವರಿಗೆ ನೀಡಿದ ಮೆಚ್ಚುಗೆಯ ಬಿರುದಾಗಿದೆ.

('ಹ') ಎಂಬ ಅಕ್ಷರವನ್ನು ಬಳಸಿದರೆ 'ಸನ್ಮಾನ್ಯರು' ಎಂಬ ಅರ್ಥವನ್ನುಳ್ಳ 'ಹಜ್ರತ್' ಎಂಬ ಶಬ್ದದ ಸಂಕ್ಷೇಪರೂಪವಿದು.

ಬಸವಣ್ಣ, ಪೈಗಂಬರ್ ಮತ್ತು ಕಾರ್ಮಿಕರು

●

ರಂಜಾನ್ ದರ್ಗಾ

ಐರೋಪ್ಯ ರಾಷ್ಟ್ರಗಳಲ್ಲಿ ಮೇ–೧, ವಸಂತ ಋತುವಿನ ಆರಂಭದ ದಿನವಾಗಿದೆ. ವಸಂತ ಋತುವಿನಲ್ಲಿ ಇಡೀ ನಿಸರ್ಗ ವರ್ಣರಂಜಿತ ವಾಗಿರುತ್ತದೆ. ಆದರೆ ಕಾರ್ಮಿಕರು ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ದುಡಿಯುವ ಪರಿಸ್ಥಿತಿ ಇತ್ತು. ಅವರ ಬದುಕಿನಲ್ಲಿ ವಿಶ್ರಾಂತಿ ಮತ್ತು ಮನರಂಜನೆ ಎಂಬುದು ಗೌಣವಾಗಿದ್ದವು. ಇಂಥ ಕಠಿಣ ಬದುಕಿನಿಂದ ಒಂದಿಷ್ಟು ಬಿಡುವು ಮಾಡಿಕೊಳ್ಳುವುದಕ್ಕಾಗಿ ಕೆಲಸದ ಅವಧಿಯನ್ನು ೮ ಗಂಟೆಗೆ ಸೀಮಿತಗೊಳಿಸಬೇಕೆಂದು ಒತ್ತಾಯಿಸಿ, ಅಮೆರಿಕದ ಷಿಕಾಗೊ ನಗರದ ೪೦ ಸಾವಿರಕ್ಕೂ ಹೆಚ್ಚುಕಾರ್ಮಿಕರು ೧೮೮೬ನೇ ಮೇ ೧ರಂದು ಶಾಂತಿಯುತ ಹೋರಾಟ ಆರಂಭಿಸಿದರು. ಮೇ–೩ರಂದು ಷಿಕಾಗೊದ ಮ್ಯಾಕೊರ್ಮಿಕ್ ಹಾರ್ವೆಸ್ಟರ್ ಪ್ಲಾಂಟ್‌ನಲ್ಲಿ ಪೊಲೀಸರು ಗುಂಡು ಹಾರಿಸಿದಾಗ ೬ ಮಂದಿ ಸತ್ತು ೫೦ ಮಂದಿ ಗಾಯಗೊಂಡರು. ಮೇ–೪ರಂದು ಹೇ ಮಾರ್ಕೆಟ್ ಚೌಕದಲ್ಲಿ ಭಾರಿ ಪ್ರತಿಭಟನಾ ಮೆರವಣಿಗೆ ಹೊರಡಿಸಲಾಯಿತು. ರ‍್ಯಾಲಿ ಮುಗಿಯುವ ಸಂದರ್ಭದಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಎಸೆದ ಬಾಂಬ್ ಸ್ಫೋಟಗೊಂಡಾಗ ಒಬ್ಬ ಪೊಲೀಸ್ ಮೃತಪಟ್ಟ. ನಂತರ ಆರಂಭವಾದ ಗಲಭೆಯಲ್ಲಿ ಆರುಮಂದಿ ಪೊಲೀಸರು ಮತ್ತು ನಾಲ್ವರು ಕಾರ್ಮಿಕರು ಸತ್ತು ಅನೇಕರು ಗಾಯಗೊಂಡರು. ಹೀಗೆ ವಿಶ್ವಾದ್ಯಂತ ಕಾರ್ಮಿಕರ ಹೋರಾಟದ ದಿನವಾಗಿ ಮೇ ದಿನಾಚರಣೆ ಆರಂಭವಾಯಿತು.

ಷಿಕಾಗೊ ದುರಂತಕ್ಕೆ ೩೮ ವರ್ಷಗಳ ಮೊದಲೇ ಮಾರ್ಕ್ಸ್ ಮತ್ತು ಏಂಗೆಲ್ಸ್ ಅವರು ರಚಿಸಿದ ಕಮ್ಯೂನಿಸ್ಟ್ ಪ್ರಣಾಳಿಕೆಯಲ್ಲಿ ಅಂತರ್‍ರಾಷ್ಟ್ರೀಯ ಮಟ್ಟದ ಕಾರ್ಮಿಕ ಚಳವಳಿಯ ಮಹತ್ವದ ಕುರಿತು ತಿಳಿಸಲಾಗಿದೆ. ಕಾರ್ಮಿಕರ ಶೋಷಣೆಯ ಕಾರಣಗಳನ್ನು ವಿವರಿಸಲಾಗಿದೆ. ವರ್ಗ ಹೋರಾಟದಿಂದ ಕಾರ್ಮಿಕರ ವಿಮೋಚನೆಯಾಗುವುದರ ಬಗ್ಗೆ ಸೂಚಿಸಲಾಗಿದೆ.

ಕಳೆದ ನೂರು ವರ್ಷಗಳ ಅವಧಿಯಲ್ಲಿ ವಿವಿಧ ಹೋರಾಟಗಳ ಫಲವಾಗಿ ವಿವಿಧ ಕ್ಷೇತ್ರಗಳ ಕಾರ್ಮಿಕರು ೮ ಗಂಟೆಗಳ ಕೆಲಸವೂ ಸೇರಿದಂತೆ ಅನೇಕ ಸೌಲಭ್ಯಗಳನ್ನು ಪಡೆದರು. ಅಂತರ್‍ರಾಷ್ಟ್ರೀಯ ಪ್ರಜ್ಞೆಯನ್ನೂ ಪಡೆದರು. ಆದರೆ ಕಳೆದ ೨೫ ವರ್ಷಗಳ ಅವಧಿಯಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಹೆಚ್ಚು ಹೆಚ್ಚು ಕಂಪ್ಯೂಟರ್ ತಂತ್ರಜ್ಞಾನದ ಬಳಕೆ ಮತ್ತು ಜಾಗತೀಕರಣದಿಂದಾಗಿ

ವಿಶ್ವದ ಮುಖವೇ ಬದಲಾಗುತ್ತಿದೆ. ಕಾರ್ಮಿಕರು ಉದ್ಯೋಗಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಇನ್ನು ಮುಂದೆ ಉತ್ಪಾದನೆಯಲ್ಲಿ ಕಾರ್ಮಿಕರ ಪಾತ್ರವೇ ಇಲ್ಲವೇನೋ ಎನ್ನುವ ರೀತಿಯಲ್ಲಿ ಕಂಪ್ಯೂಟರ್ ತಂತ್ರಜ್ಞಾನದ ಬಳಕೆಯಾಗುತ್ತಿದೆ. ದುಡಿಯುವ ಕೈಗಳು ಕೆಲಸ ಕಳೆದುಕೊಂಡಷ್ಟೂ ಹೋರಾಟಗಳು ಗೌಣವಾಗಿ ಅಪರಾಧಗಳು ಹೆಚ್ಚುತ್ತಿವೆ. ಕೌಟುಂಬಿಕ ಮತ್ತು ಸಾಮಾಜಿಕ ಬದುಕು ಅಸಹನೀಯವಾಗುತ್ತಿದೆ.

ಮಾನವನನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತ ಸುವ್ಯವಸ್ಥಿತ ಸಮಾಜವೊಂದನ್ನು ಸೃಷ್ಟಿಸಿ, ಉಳಿಸಿ ಬೆಳೆಸುವುದಕ್ಕಾಗಿ ಅನೇಕ ಧರ್ಮಸಂಸ್ಥಾಪಕರು ಪ್ರಯತ್ನಪಟ್ಟಿದ್ದಾರೆ. ಅವರೆಲ್ಲ ದುಡಿಯುವ ವರ್ಗಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದಾರೆ. ಬಡವರ ಹಕ್ಕುಗಳ ರಕ್ಷಣೆಯಾಗುವ ಹಾಗೆ ಧಾರ್ಮಿಕ ಕಟ್ಟಳೆಗಳನ್ನು ವಿಧಿಸಿದ್ದಾರೆ. ಆ ಮೂಲಕ ತಾವು ಸ್ಥಾಪಿಸಿದ ಅಥವಾ ವಿಕಾಸಗೊಳಿಸಿದ ಧರ್ಮಗಳು ಬಡವರ ಪರ ಎಂಬುದನ್ನು ಸೂಚಿಸಿದ್ದಾರೆ. ಅಂಥವರಲ್ಲಿ ೭ನೆಯ ಶತಮಾನದ ಮಹಮ್ಮದ್ ಪೈಗಂಬರ್ ಮತ್ತು ೧೨ನೆಯ ಶತಮಾನದ ಬಸವಣ್ಣನವರು ಪ್ರಮುಖರಾಗಿದ್ದಾರೆ. ಕ್ರಿಸ್ತಪೂರ್ವ ಆರನೆಯ ಶತಮಾನದ ಭಗವಾನ್ ಬುದ್ಧ ಮತ್ತು ಕ್ರಿಸ್ತ ಶಕೆಗೆ ಕಾರಣವಾದ ಏಸು ಕ್ರಿಸ್ತ ಕೂಡ ಬಡವರ ಪರವಾಗಿಯೇ ಧರ್ಮಸ್ಥಾಪನೆ ಮಾಡಿದವರು.

ದುಡಿಯುವ ವರ್ಗಕ್ಕೆ ಸಂಬಂಧಿಸಿದ ಶೂದ್ರರು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಕಟ್ಟಳೆಗಳಿಂದಾಗಿ ನರಕಯಾತನೆಯನ್ನು ಅನುಭವಿಸುತ್ತಿರುವ ಸಂದರ್ಭದಲ್ಲಿ ಭಗವಾನ್ ಬುದ್ಧ ದುಡಿಯುವ ಜನರ ಧರ್ಮ ಸ್ಥಾಪನೆ ಮಾಡಿದ. ವರ್ಗ, ವರ್ಣಭೇದಗಳನ್ನು ತಿರಸ್ಕರಿಸಿದ ಬೌದ್ಧಧರ್ಮವು ಕೆಳಜಾತಿ ಮತ್ತು ಕೆಳವರ್ಗದ ಜನರಿಗೆ ಹೊಸ ಆಶಾಕಿರಣವಾಯಿತು. ಏಸು ಕ್ರಿಸ್ತ ಕೂಡ ಭೇದಭಾವವಿಲ್ಲದ ಸಮಾಜಕ್ಕಾಗಿ ಧರ್ಮ ಮಾರ್ಗವನ್ನು ಹಾಕಿಕೊಟ್ಟ. ಪೈಗಂಬರರು ಮತ್ತು ಬಸವೇಶ್ವರರು ಬಡವರ ಪರವಾದ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ತಲ್ಲೀನರಾಗಿದ್ದರು.

"ಸಂಪತ್ತಿನ ಗುಲಾಮನನ್ನು ದೇವರು ತಿರಸ್ಕರಿಸುವನು" ಎಂದು ಪೈಗಂಬರರು ಎಚ್ಚರಿಸಿ ಮಾನವರ ಸಂಗ್ರಹ ಬುದ್ಧಿಯನ್ನು ವಿರೋಧಿಸಿದ್ದಾರೆ. "ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ" ಎಂದು ಬಸವಣ್ಣನವರು ತಿಳಿಸುವ ಮೂಲಕ ಸಂಪತ್ತಿನ ಸಂಗ್ರಹವನ್ನು ಅಲ್ಲಗಳೆದಿದ್ದಾರೆ.

ಸಂಗ್ರಹ ಬುದ್ಧಿಯು ಮಾನವನ ಎಲ್ಲ ದುರಂತಗಳಿಗೆ ಕಾರಣವಾಗಿದೆ. ಆತ ಸಂಪತ್ತನ್ನು ಗಳಿಸಿದಷ್ಟೂ ತಾನು ಬೇರೆಯವರಿಗಿಂತ ಭಿನ್ನ ಎಂಬ ಭಾವನೆ ತಾಳುತ್ತ ಹೋಗುತ್ತಾನೆ. ಅಂಥವರು ಹೆಚ್ಚಾಗುತ್ತ ಮೇಲ್ವರ್ಗವಾಗಿ ಪರಿಣಮಿಸುತ್ತಾರೆ. ಈ ಮೇಲ್ವರ್ಗದಿಂದಾಗಿ ಮೇಲ್ಜಾತಿಗಳ ಮತ್ತು ಉತ್ತಮವೆಂದು ಕರೆಯಿಸಿಕೊಳ್ಳುವ ಕುಲಗಳ ನಿರ್ಮಾಣವಾಗುತ್ತದೆ. ಎಲ್ಲ ರೀತಿಯ ಮೇಲು-ಕೀಳುಗಳಿಗೆ ನಾಂದಿಯಾಗುತ್ತದೆ. ಆದ್ದರಿಂದ ಪೈಗಂಬರರ ಮೂಲಕ ಅವತೀರ್ಣಗೊಂಡ ಕುರಾನ್‌ನಲ್ಲಿ ಮತ್ತು ಬಸವಣ್ಣನವರ ವಚನಗಳಲ್ಲಿ ನರನ ಸಂಗ್ರಹ ಬುದ್ಧಿಯನ್ನು ತಿರಸ್ಕರಿಸಲಾಗಿದೆ.

"ಕಾಯಕ ಜೀವಿಗಳು ದೇವರ ಪ್ರೀತಿಗೆ ಪಾತ್ರರಾಗುವರು" ಎಂದು ಹೇಳಿದ

ಪೈಗಂಬರರು, "ಕೂಲಿಯ ಒರಟು ಕೈಗಳನ್ನು ನಾನು ಪ್ರೀತಿಸುತ್ತೇನೆ" ಎಂದು ತಿಳಿಸಿದ್ದಾರೆ. "ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ" ಎಂದು ಬಸವಣ್ಣನವರು ಕಾಯಕ ಜೀವಿಗಳನ್ನು ಗೌರವಿಸಿದ್ದಾರೆ. ದುಡಿದು ಉತ್ಪಾದಿಸುತ್ತ ನಾವೆಲ್ಲ ಬದುಕಲು ಸಾಧ್ಯವಾಗುವಂತೆ ಮಾಡುವ ಕಾಯಕಜೀವಿಗಳ ಒರಟು ಕೈಗಳು ಅತ್ಯಂತ ಮಹತ್ವದ್ದಾಗಿವೆ ಎಂದು ಪೈಗಂಬರರು ಸೂಚಿಸಿದರೆ, ಅವರೇ ನಮ್ಮ ಹಿರಿಯರು ಎಂದು ಬಸವಣ್ಣನವರು ಶ್ಲಾಘಿಸುತ್ತಾರೆ.

"ನಿಮಗೆ ಅತ್ಯಧಿಕ ಪ್ರಿಯವಾದುದನ್ನು ದೇವಮಾರ್ಗದಲ್ಲಿ ವ್ಯಯಿಸುವ ತನಕ ನೀವು ಪುಣ್ಯ ಗಳಿಸಲಾರಿರಿ" ಎಂದು ಕುರಾನಿನಲ್ಲಿ ತಿಳಿಸಲಾಗಿದೆ. "ಧನವನಿರಿಸದಿರಾ, ಇರಿಸಿದಡೆ ಭವ ಬಪ್ಪುದು ತಪ್ಪದು. ಕೂಡಲಸಂಗನ ಶರಣರಿಗೆ ಸವೆಸಲೇಬೇಕು" ಎಂದು ಬಸವಣ್ಣನವರು ಎಚ್ಚರಿಸಿದ್ದಾರೆ. ಸಂಪತ್ತನ್ನು ಕೂಡಿಸುವುದರಿಂದ ಅದು ದಿನಗಳೆದಂತೆ ಮಾನವಕುಲಕ್ಕೆ ಕಂಟಕಪ್ರಾಯವಾಗುತ್ತ ಹೋಗುತ್ತದೆ. ದುಡಿಯುವ ಮತ್ತು ಸುಲಿಯುವ ವರ್ಗಗಳ ನಿರ್ಮಾಣಕ್ಕೆ ನಾಂದಿ ಹಾಡುತ್ತದೆ. ವರ್ಗರಹಿತವಾದ ಸಮಾಜದಲ್ಲಿ ಮಾತ್ರ ಮಾನವ ಏಕೋಭಾವದಿಂದ ಬದುಕಲು ಸಾಧ್ಯ ಎಂಬ ಆಶಯ ಪೈಗಂಬರರದ್ದು ಮತ್ತು ಬಸವಣ್ಣನವರದ್ದು ಆಗಿದೆ.

"ನಮಾಜನ್ನು ಸ್ಥಿರಗೊಳಿಸಿರಿ; ಜಕಾತ್ ಕೊಡಿರಿ" ಎಂದು ಕುರಾನ್ ಆದೇಶಿಸುತ್ತದೆ. "ನಾನು ಆರಂಭವ ಮಾಡುವೆನಯ್ಯಾ ಗುರು ಪೂಜೆಗೆಂದು, ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು, ನಾನು ಪರಸೇವೆಯ ಮಾಡುವೆನಯ್ಯ ಜಂಗಮ ದಾಸೋಹಕ್ಕೆಂದು" ಬಸವಣ್ಣನವರು ಹೇಳುತ್ತಾರೆ. ದೇವರ ಒಲುಮೆಯನ್ನು ಎರಡು ರೀತಿಯಿಂದ ಗಳಿಸಬೇಕು ಎಂಬುದು ಕುರಾನಿನ ಆದೇಶವಾಗಿದೆ ಎಂದು ಪೈಗಂಬರರು ಸೂಚಿಸಿದ್ದಾರೆ. ನಮಾಜ್ ಮಾಡುವುದು ದೇವರ ಆರಾಧನೆಯಾಗಿರುವಂತೆಯೇ ಜಕಾತ್ ಕೊಡುವುದು ಸಮಾಜವೆಂಬ ದೇವರ ಆರಾಧನೆಯಾಗಿದೆ. ದೇವರು ಸಮಾಜದ ರೂಪದಲ್ಲಿಯೂ ಇರುತ್ತಾನೆ ಎಂಬ ಭಾವವು ವರ್ಗರಹಿತ ಸಮಾಜದ ಭಾವವೇ ಆಗಿದೆ. ಬಸವಣ್ಣನವರು ಇಷ್ಟಲಿಂಗಪೂಜೆ ಮತ್ತು ಜಂಗಮಲಿಂಗ ಪೂಜೆಯ ಬಗ್ಗೆ ಹೇಳುತ್ತಾರೆ. ಇಷ್ಟಲಿಂಗ ಪೂಜೆಯು ನಮಾಜ್ ಸ್ಥಾನದಲ್ಲಿದ್ದರೆ, ಜಂಗಮಲಿಂಗ ಪೂಜೆಯು ಜಕಾತ್ ಸ್ಥಾನದಲ್ಲಿರುತ್ತದೆ. ಜಕಾತ್ ಎಂದರೆ ಶ್ರೀಮಂತರ ಸಂಪತ್ತಿನಲ್ಲಿ ಬಡವರ ಪಾಲು. ಜಂಗಮಲಿಂಗ ಪೂಜೆ ಎಂದರೆ ಕಾಯಕ ಮಾಡಿ ಗಳಿಸಿದ್ದನ್ನು ದಾಸೋಹ ರೂಪದಲ್ಲಿ ಸಮಾಜಕ್ಕೆ ಅರ್ಪಿಸುವುದು. ಇದುವೆ ಜಂಗಮ ದಾಸೋಹ. ಹೀಗೆ ಪೈಗಂಬರರು ಮತ್ತು ಬಸವಣ್ಣನವರು ಮಾನವನಲ್ಲಿ ಸಾಮಾಜಿಕ ಪ್ರಜ್ಞೆಯನ್ನು ತುಂಬುತ್ತ ಮೇಲಿಲ್ಲದ ಮತ್ತು ಕೀಳಿಲ್ಲದ ವ್ಯವಸ್ಥೆಯನ್ನು ಸೃಷ್ಟಿಸಲು ಮಾರ್ಗ ತೋರಿಸಿಕೊಟ್ಟರು.

"ವ್ಯಾಪಾರವನ್ನು ಅಲ್ಲಾಹನು ಧರ್ಮಬದ್ಧಗೊಳಿಸಿದ್ದಾನಲ್ಲದೆ ಬಡ್ಡಿಯನ್ನು ನಿಷೇಧಗೊಳಿಸಿದ್ದಾನೆ" ಎಂದು ಕುರಾನ್ ಸಾರಿದೆ. "ಹಡೆದೊಡವೆ ವಸ್ತುವನು ಮೃಡಭಕ್ತರಿಗಲ್ಲದೆ ಕಡಬಡ್ಡಿಯ ಕೊಡಲಾಗದು" ಎಂದು ಬಸವಣ್ಣನವರು ತಿಳಿಸುತ್ತಾರೆ. ದುಡಿಯದೆ ಬದುಕುತ್ತ ಸಂಪತ್ತನ್ನು ಸಂಗ್ರಹಿಸುವಲ್ಲಿ ಬಡ್ಡಿಯ ಪಾತ್ರ ಹಿರಿದಾಗಿದೆ. ಅದು ಅನೈತಿಕ ಬದುಕಿಗೆ ದಾರಿ ಮಾಡಿಕೊಡುವುದು. ಬಡ್ಡಿಯ ಹಣದಿಂದ ಮೌಲ್ಯಹೀನ ಸಮಾಜ

ನಿರ್ಮಾಣವಾಗುವುದು. ಅಂತೆಯೇ ಏಸುಕ್ರಿಸ್ತ ಮತ್ತು ಕಾರ್ಲ್‌ಮಾರ್ಕ್ಸ್ ಅವರ ಹಾಗೆ ಪೈಗಂಬರರು ಮತ್ತು ಬಸವಣ್ಣನವರು ಬಡ್ಡಿಯನ್ನು ತೀಕ್ಷ್ಣವಾಗಿ ವಿರೋಧಿಸಿದ್ದಾರೆ. ಬಡ್ಡಿಯ ಹಣದಿಂದಲೇ ವಿಶ್ವದಲ್ಲಿ ಕೆಲವೊಂದು ರಾಷ್ಟ್ರದಲ್ಲಿ ದೈತ್ಯ ರಾಷ್ಟ್ರಗಳಾಗಿ ರೂಪು ತಾಳಿದರೆ ನೂರಾರು ರಾಷ್ಟ್ರಗಳು ಅವುಗಳಿಗೆ ಬಡ್ಡಿಯನ್ನು ಕೊಡುತ್ತ ಬಡವಾಗಿವೆ. ಬಡ್ಡಿಯು ಇಡೀ ಜಗತ್ತನ್ನೇ ತಲ್ಲಣಗೊಳಿಸುತ್ತ ಸಾಗಿದೆ.

"ಜನರಿಗೆ ಕೃತಜ್ಞನಾಗಿರದವನು ಅಲ್ಲಾಹನಿಗೂ ಕೃತಜ್ಞನಾಗಿರಲಾರನು" ಎಂದು ಪೈಗಂಬರರು ಹೇಳುತ್ತಾರೆ. "ಜಂಗಮವಾಪ್ಯಾಯನವಾದಡೆ ಲಿಂಗ ಸಂತುಷ್ಟಿಯಹುದಯ್ಯಾ" ಎಂದು ಬಸವಣ್ಣನವರು ತಿಳಿಸುತ್ತಾರೆ. ಜನಸಮುದಾಯದ ಸುಂದರ ಬದುಕಿಗಾಗಿ ಚಿಂತಿಸುವುದು ಮತ್ತು ಅದಕ್ಕಾಗಿ ತನು ಮನ ಧನಗಳನ್ನು ಅರ್ಪಿಸುವುದು ನಿಜವಾದ ದೇವರ ಸೇವೆಯಾಗಿದೆ.

"ನನ್ನನ್ನು ಬಲಹೀನರ ಮತ್ತು ಬಡವರ ಮಧ್ಯೆ ಹುಡುಕಿರಿ. ನಿಶ್ಚಯವಾಗಿಯೂ ನೀವು ಅವರ ದುಡಿಮೆಯಿಂದಲೇ ಆಹಾರವನ್ನು, ಸಹಾಯವನ್ನು ಪಡೆಯುತ್ತೀರಿ" ಎಂದು ಪೈಗಂಬರರು ಹೇಳುತ್ತಾರೆ. "ಕುದುರೆ ಸತ್ತಿಗೆಯವರ ಕಂಡಡೆ ಹೊರಳಿಬಿದ್ದು ಕಾಲ ಹಿಡಿವರು, ಬಡಭಕ್ತರು ಬಂದಡೆ 'ಎಡೆಯಿಲ್ಲ, ಅತ್ತ ಸನ್ನಿ' ಎಂಬರು" ಎಂದು ಬಸವಣ್ಣನವರು ಸಾತ್ವಿಕ ಕೋಪವನ್ನು ವ್ಯಕ್ತಪಡಿಸುತ್ತಾರೆ. ಹೀಗೆ ಪೈಗಂಬರರು ಮತ್ತು ಬಸವಣ್ಣನವರು ಸದಾ ಬಡವರ ಪರವಾಗಿ ನಿಲ್ಲುತ್ತಾರೆ. ಬಡವರ ಬದುಕನ್ನು ಹಸನಾಗಿಸುವುದೇ ಧರ್ಮದ ಗುರಿ ಎಂದು ಸಾರುತ್ತಾರೆ.

"ನಿಮ್ಮ ಧನವನ್ನು ನೀವು ಅನ್ಯಾಯವಾಗಿ ತಿನ್ನಬಾರದು" ಎಂದು ಕುರಾನಿನ ಆದೇಶವಾಗಿದೆ. "ಧನವ ಕೊಟ್ಟು ಜಂಗಮವನೊಲಿಸಬೇಕು" ಎಂದು ಬಸವಣ್ಣನವರು ಹೇಳುತ್ತಾರೆ. ಧನವು ಸದಾ ಸಮಾಜದ ಸ್ವಾಸ್ಥ್ಯ ಕಾಪಾಡುವುದಕ್ಕೆ ಬಳಕೆಯಾಗಬೇಕು, ಇಲ್ಲದಿದ್ದರೆ ಅದು ಅಪರಾಧಗಳಿಗೆ ಮೂಲವಾಗುತ್ತದೆ. ಮನುಷ್ಯನನ್ನು ಮೌಲ್ಯವಂತನನ್ನಾಗಿ ಮಾಡುವುದು ಧರ್ಮದ ಕರ್ತವ್ಯವಾಗಿದೆ. ಆದರೆ ಆತ ಮೌಲ್ಯ ಕಳೆದುಕೊಳ್ಳತೊಡಗಿದಾಗ ಅಪರಾಧಗಳ ಸಮಾಜದ ಹುಟ್ಟಿಗೆ ಕಾರಣನಾಗುತ್ತಾನೆ. ಸಮಾಜದಲ್ಲಿ ನಡೆಯುವ ಸುಲಿಗೆಯಿಂದ ಅಪರಾಧಗಳ ಸೃಷ್ಟಿಯಾಗುತ್ತದೆ. ಸಮಾಜ ಸೇವೆಯಿಂದ ಸುಂದರ ಸಮಾಜದ ನಿರ್ಮಾಣವಾಗುತ್ತದೆ. ಆದ್ದರಿಂದ ನಮ್ಮ ಹಣ ಸತ್ಪಾತ್ರಕ್ಕೆ ಸಲ್ಲುವಂತೆ ನೋಡಿಕೊಳ್ಳುವುದು ಅವಶ್ಯವಾಗಿದೆ.

"ಪೂರ್ವ ಪಶ್ಚಿಮದ ಕಡೆಗೆ ನಿಮ್ಮ ಮುಖವನ್ನು ತಿರುಗಿಸುವಲ್ಲಿ ಧರ್ಮಶೀಲತೆ ಇಲ್ಲ. ಆದರೆ ಅಲ್ಲಾಹನಲ್ಲಿ, ಅಂತಿಮ ದಿವಸದಲ್ಲಿ, ದೇವದೂತರಲ್ಲಿ, ಪ್ರವಾದಿಗಳಲ್ಲಿ ವಿಶ್ವಾಸವಿಡುವವರು ತಮ್ಮ ಧನವನ್ನು ಆತನ ಸಂಪ್ರೀತಿಗಾಗಿ ಬಂಧುಗಳಿಗೆ, ಅನಾಥರಿಗೆ, ದರಿದ್ರರಿಗೆ, ಸಂಚಾರಿಗಳಿಗೆ, ಸಹಾಯಾರ್ಥಿಗಳಿಗೆ ಮತ್ತು ದಾಸ್ಯ ವಿಮೋಚನೆಗೆ (ಗುಲಾಮರನ್ನು ಸ್ವತಂತ್ರಗೊಳಿಸುವುದಕ್ಕೆ) ಕೊಡುವವರು. ನಮಾಜನ್ನು ಸ್ಥಿರಗೊಳಿಸುವವರು ತಾವು ವಾಗ್ದಾನವಿತ್ತಿದ್ದರೆ ಅದನ್ನು ಪೂರ್ಣಗೊಳಿಸುವರು. ಕಷ್ಟಕಾರ್ಪಣ್ಯದಲ್ಲಿ ಹಾಗೂ ಸಮರದಲ್ಲಿ ಸಹನೆ ಕಳೆದುಕೊಳ್ಳದವರೇ ಪುಣ್ಯಶೀಲರು. ಇಂಥವರೇ ದೈವಭಕ್ತರು ಆಗಿರುತ್ತಾರೆ" ಎಂದು ಕುರಾನ್ ಸ್ಪಷ್ಟಪಡಿಸಿದೆ. "ಉಂಬ ಜಂಗಮ ಬಂದಡೆ ನಡೆಯೆಂಬರು,

'ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ" ಎಂದು ಬಸವಣ್ಣನವರು ವಿಷಾದ ವ್ಯಕ್ತಪಡಿಸುತ್ತಾರೆ. ಜಗತ್ತನ್ನು ದುಃಖದಿಂದ ಮತ್ತು ಎಲ್ಲ ರೀತಿಯ ಅಸಹಾಯಕತೆಗಳಿಂದ ಪಾರು ಮಾಡುವಂಥ ಕ್ರಿಯೆಯಲ್ಲಿ ತೊಡಗುವುದು ಅವಶ್ಯವಾಗಿದೆ. ಸುಮ್ಮನೆ ನಮಾಜ್ ಮಾಡುತ್ತ ಇಲ್ಲವೆ ಇಷ್ಟಲಿಂಗಪೂಜೆ ಮಾಡುತ್ತ ಕೂಡುವುದರಲ್ಲಿ ಅರ್ಥವಿಲ್ಲ. ಅವುಗಳ ಜೊತೆ ಸತ್ಕಾರ್ಯಗಳನ್ನು ಮಾಡುವುದರಲ್ಲೇ ಬದುಕಿನ ಸಾರ್ಥಕತೆ ಇದೆ.

"ತುಳಿತಕ್ಕೀಡಾದವರು ಜಗತ್ತಿನ ನಾಯಕರು ಮತ್ತು ನೇರ ವಾರಸುದಾರರು ಆಗಬೇಕೆಂದು ನಾವು ಇಚ್ಛಿಸಿದ್ದೇವೆ" ಎಂದು ಕುರಾನ್ ಹೇಳುತ್ತದೆ. ಬಸವಣ್ಣನವರ ಕೂಡಲಸಂಗಮದೇವ ಮಾನವ ಹಕ್ಕುಗಳ ದೇವರಾಗಿದ್ದಾನೆ. ಆತ ಅಸ್ಪೃಶ್ಯ ಮಾದಾರ ಚೆನ್ನಯ್ಯನ ಮನೆಯಲ್ಲಿ ಅಂಬಲಿ ಕುಡಿಯುತ್ತಾನೆ. "ವೇದ ನಡನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯಾ!... ನಮ್ಮ ಕೂಡಲಸಂಗಯ್ಯನು ಮಾದಾರ ಚೆನ್ನಯ್ಯನ ಮನೆಯಲ್ಲುಂಡ ಕಾರಣ" ಎಂದು ಬಸವಣ್ಣನವರು ಹೇಳುತ್ತಾರೆ. ಹೀಗೆ ಪೈಗಂಬರರ ಅಲ್ಲಾಹ್ ಮತ್ತು ಬಸವಣ್ಣನವರ ಕೂಡಲಸಂಗಮದೇವ ಸದಾ ಬಡವರ, ದುಡಿಯುವವರ, ನಿರ್ಗತಿಕರ ಮತ್ತು ತುಳಿತಕ್ಕೊಳಗಾದವರ ಪರ ಇದ್ದಾರೆ. ಸದ್ಗುಣಗಳ ಆಗರವಾದವರ ಜೊತೆ ಇದ್ದಾರೆ.

"ದುಡಿದು ಸಂಪಾದಿಸುವ ಮುಸ್ಲಿಮನನ್ನು ಅಲ್ಲಾಹನು ಪ್ರೀತಿಸುತ್ತಾನೆ" ಎಂದು ಪೈಗಂಬರರು ಹೇಳುವಲ್ಲಿ ಪ್ರತಿಯೊಬ್ಬ ಮುಸ್ಲಿಮನು ಕಾಯಕಜೀವಿಯಾಗಿರಬೇಕಾಗುತ್ತದೆ ಎಂದು ಎಚ್ಚರಿಸುತ್ತಾರೆ. "ಶರಣರ ಬರವೆಮಗೆ ಪ್ರಾಣಜೀವಾಳಯ್ಯಾ" ಎಂದು ಬಸವಣ್ಣನವರು ತಮ್ಮ ಧರ್ಮದ ಮೂಲಾಧಾರಗಳಾದ ಕಾಯಕಜೀವಿಗಳನ್ನು ಕೊಂಡಾಡುತ್ತಾರೆ.

"ತನ್ನ ಕೈಯಿಂದ ಸಂಪಾದಿಸಿದುದಕ್ಕಿಂತ ಉತ್ತಮ ಆಹಾರವನ್ನು ಎಂದೂ ಯಾರೂ ತಿಂದಿಲ್ಲ" ಎಂದು ಪೈಗಂಬರರು ಹೇಳುತ್ತಾರೆ. "ಕೊಲುವನೆ ಮಾದಿಗ, ಹೊಲಸು ತಿಂಬುವನೆ ಹೊಲೆಯ, ಕುಲವೇನೊ ಆವಂದಿರ ಕುಲವೇನೊ, ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೆ ಕುಲಜರು" ಎಂದು ಬಸವಣ್ಣನವರು ಹೇಳುತ್ತಾರೆ. ಯಜ್ಞಯಾಗಾದಿಗಳಲ್ಲಿ ಪ್ರಾಣಿಬಲಿ ಕೊಡುವವರೇ ಮಾದಿಗರು. ಕಾಯಕ ಮಾಡದೆ, ವರ್ಷಗಟ್ಟಲೆ ನಡೆಯುವ ಆ ಯಜ್ಞಯಾಗಾದಿಗಳಲ್ಲಿ ಬರಿ ತಿನ್ನುವುದು ಹೊಲಸು. ಆದರೆ ಹೊಲೆ ಮಾದಿಗರು ಮೊದಲು ಮಾಡಿ ಜಾತಿ ಸಂಕರವಾಗಿ, ಎಲ್ಲರೂ ಒಂದಾಗಿ ದುಡಿಯುತ್ತ ಬದುಕುವ ಕೂಡಲ ಸಂಗನ ಶರಣರೇ ಕುಲಜರು ಎಂದು ಬಸವಣ್ಣನವರು ಘೋಷಿಸುತ್ತಾರೆ. ಕಾಯಕವು ಕಾಯವನ್ನು ಸುಂದರಗೊಳಿಸುತ್ತದೆ, ಸದೃಢಗೊಳಿಸುತ್ತದೆ. ಕಾಯಕದಿಂದ ಆಗುವ ಮಾನವನ ಬದುಕಿನಲ್ಲಿ ಹಸಿವು ಬಹುಮುಖ್ಯವಾಗಿದೆ. ಈ ಹಸಿವು ಮಾನವನ ರುಚಿಶಕ್ತಿಯನ್ನು ಹೆಚ್ಚಿಸುತ್ತದೆ. ಅದರಿಂದಾಗಿ ಸಾದಾ ಆಹಾರ ಕೂಡ ರುಚಿಕಟ್ಟಾಗುತ್ತದೆ. ಚೆನ್ನಾಗಿ ದುಡಿದಾಗ ಒಳ್ಳೆಯ ನಿದ್ರೆ ಬಂದು ನಿಜವಾದ ವಿಶ್ರಾಂತಿ ಲಭಿಸುವುದು. ಹೀಗೆ ಹಸಿವು, ರುಚಿ ಮತ್ತು ವಿಶ್ರಾಂತಿ ಎಂಬುದು ನಿಜವಾದ ಅರ್ಥದಲ್ಲಿ ಬಡವರ ಸೊತ್ತಾಗಿವೆ. ಶ್ರೀಮಂತರು ಎಷ್ಟೇ ಸಂಪತ್ತನ್ನು ಗಳಿಸಿದರೂ ಬಡವರ ಈ ಸೊತ್ತು ಅವರ ಪಾಲಾಗಲು ಸಾಧ್ಯವಿಲ್ಲ. ಬಡವರಿಗೆ ಕಾಯಕದಿಂದ ಸಿಗುವ ಆನಂದವನ್ನು ಶ್ರೀಮಂತರು ಖರೀದಿಸಲು ಸಾಧ್ಯವಿಲ್ಲ. ಇಂಥ ಬಡವರೇ ಬಸವಣ್ಣನವರ ಶರಣ ಸಂಕುಲದಲ್ಲಿ ಇದ್ದವರು. ಇವರು ಸ್ವತಂತ್ರಧೀರರು.

ಯಾವುದಕ್ಕೂ ಆಸೆಪಟ್ಟವರಲ್ಲ. ಕಾಯಕದಲ್ಲಿ ದೇವರನ್ನು ಕಂಡವರು. ಸಕಲ ಜೀವಾತ್ಮರಿಗೆ ಲೇಸ ಬಯಸಿದವರು. ಆ ಮೂಲಕ ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದವಿಲ್ಲದ ಸಮಾಜವನ್ನು ಸೃಷ್ಟಿಸಿದವರು. ಪೈಗಂಬರರು ಕೂಡ ಇಂಥದೇ ಸಮಾಜದ ನಿರ್ಮಾಣವನ್ನು ಬಯಸಿದ್ದರು.

❐

ಏಸುಕ್ರಿಸ್ತ ಮತ್ತು ಬಸವಣ್ಣ

●

ಡಾ. ಸಾ.ಶಿ. ಮರುಳಯ್ಯ

ಯೇಸು ಮತ್ತು ಬಸವಣ್ಣರಿಬ್ಬರನ್ನು ಪ್ರಾತಿನಿಧಿಕವಾಗುಳ್ಳ ಎರಡು ವಿಶುದ್ಧ ಧರ್ಮಗಳೆಂದರೆ ಕ್ರೈಸ್ತಧರ್ಮ ಮತ್ತು ವೀರಶೈವ ಅಥವಾ ಲಿಂಗಾಯತ ಧರ್ಮ ಇವುಗಳ ನೆಲೆಬೆಲೆಗಳನ್ನು ಗುರುತಿಸುವ ಸ್ತುತ್ಯಯತ್ನ ನಡೆಸಿ ಯಶಸ್ವಿಯಾಗಿದೆ. ಇಂದಿನ Inter faith work shop ಎಂಬ ಕಮ್ಮಟ ಇಲ್ಲಿ ನಡೆದಿರುವುದು ೨ ಧರ್ಮಗಳ ತುಲನೆ ಅಲ್ಲ ತಾಳೆ ಹಾಕಿ ನೋಡುವ ಕಾರ್ಯ ಅಲ್ಲ, ಗುಣಾವಗುಣಗಳನ್ನು ಗುರುತಿಸಿ, ಅವುಗಳ ಸ್ಥಾನ ನಿರ್ದೇಶಿಸುವುದಿಲ್ಲ. ವಿಶ್ವಧರ್ಮಗಳೆರಡು ಹೇಗೆ ಒಂದು ಸ್ಥರದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿವೆ ಎಂಬುದನ್ನು ವಿಶದೀಕರಿಸುವ ಪ್ರಾಮಾಣಿಕ ಪ್ರಯತ್ನ ಆ ಅರ್ಥದಲ್ಲಿ ಕ್ರೈಸ್ತಧರ್ಮ ಮತ್ತು ವೀರಶೈವಧರ್ಮಗಳು ವಿಭಿನ್ನವಾಗಿ ಕಾಣಿಸುವುದಿಲ್ಲ. ಎರಡು ವಿಶ್ವಧರ್ಮಗಳು ೨ ಆಸ್ತಿಕತೆಯನ್ನು ಪ್ರಚಾರಪಡಿಸುವ ಮನುಕುಲದ ಉದ್ಧಾರದ ಕಾಳಜಿಯನ್ನು ಬೆನ್ನಿಗೆ ಕಟ್ಟಿಕೊಂಡು ದುಡಿಯುತ್ತಿರುವ ಮಾನವ ಧರ್ಮಗಳು, ವಿಶ್ವಮಾನವ ಧರ್ಮಗಳು. ದೈವ, ಧರ್ಮ, ದಯೆ, ದಮ, ದಾನ, ತಪ, ಶೀಲ, ಇಹ, ಪರ ಎಲ್ಲವನ್ನೂ ನಂಬಿದವುಗಳು. ನಮಗೆಲ್ಲರಿಗೂ ಮೀರಿದ ಒಂದು ದೈವಶಕ್ತಿ ಇದೆ. ಅದು ಅಪ್ರತಿಹವಾದುದು. ಸರ್ವಶಕ್ತ, ಸರ್ವೋತ್ತಮನಾದ ಭಗವಂತನ ಮಕ್ಕಳು ನಾವು. ಅವನು ಮೆಚ್ಚುವಂತೆ ನಾವು ಬದುಕು ಮಾಡಬೇಕು. (ಲಿಂಗಮೆಚ್ಚಿ ಅಹುದಹುದೆನಬೇಕು : ಬಸವಣ್ಣ.) ಇಲ್ಲಿ ಸಂದು ಅಲ್ಲಿಯೂ ಸಲ್ಲಬೇಕು. ಮನುಕುಲದ ಸೇವೆಯೇ ಮಹಾದೇವನ ಪೂಜೆ, ವ್ಯಷ್ಟಿ (Individual) ಸಮಷ್ಟಿಯಲ್ಲಿ (Universal) ಒಂದಾಗುವ, ಚೆಂದಾಗುವ ಸಾಧನೆಯನ್ನು ಮಾಡಬೇಕು. ಸಂಕುಚಿತ ಸ್ವಾರ್ಥವನ್ನು ದೂರಮಾಡಿ ೨ ಧರ್ಮಗಳು ಸಾರಿದ ಉದಾತ್ತ ತತ್ವಗಳು ಇವು ಬರಿಯ ಶೋಧನೆಗಳಲ್ಲಿ ಅನುಷ್ಠಾನ ಯೋಗ್ಯ ಕ್ರಿಯೆಗಳು.

ಕ್ರೈಸ್ತರ ಧರ್ಮಗ್ರಂಥ ಬೈಬಲ್, ವೀರಶೈವದ ಶೂನ್ಯ ಸಂಪಾದನೆ ಬೈಬಲ ಅಂದರೆ 'ಪುಸ್ತಕ' (book) ವಚನ ಎಂದರೆ ಮಾತು. ಆದರೆ ಅದು ಬರಿಯ ಮಾತಲ್ಲ ಅದು ಜ್ಯೋತಿರ್ಲಿಂಗ । ಉಭಯ ಧರ್ಮಗಳು ಪ್ರಾಚೀನವಾದವುಗಳು ಕ್ರೈಸ್ತಹುಟ್ಟುವ ಹಿಂದಿನಿಂದಲೂ ಇತ್ತು ವೀರಶೈವಧರ್ಮ. ಜಿಸಸ್ ಮತ್ತು ಬಸವಣ್ಣ ಇಬ್ಬರು ಧರ್ಮ

ಪ್ರವರ್ತಕರು ಪ್ರವಾದಿಗಳು ಅವನ ಕಾರ್ಯಕ್ಷೇತ್ರ ನಜರತ್ ಇವನದು ಕಲ್ಯಾಣ. ಆತನ ಜನ್ಮಸ್ಥಳ ಬೆತ್ಲೆಹೇಮ್, ಇತನದು ಬಾಗೇವಾಡಿ. ಆತನ ಬೋಧನೆ ಹೀಬ್ರೂನಲ್ಲಿದ್ದರೆ, ಈತನದು ಅಚ್ಚಗನ್ನಡದಲ್ಲಿ. ಜೇಸಸ್ ಅಂದರೆ Salavation ಎಂದರ್ಥ. ಬಸವ ಎಂದರೆ ಕಾಯಕ (ದುಡಿಮೆ) ಎಂದರ್ಥ. ಅವನು ಬಂದು ನೆಲೆಸಿದ್ದು capemaum ಎಂಬ ನಗರದ ಹತ್ತಿರದ lake galilce ಎಂಬಲ್ಲಿ, ಇವನು ನೆಲೆಸಿದ್ದು ಹುನಗುಂದದ ಬಳಿಯ ಕೃಷ್ಣಾ ಮತ್ತು ಮಲಪ್ರಭಾ ನದಿಗಳ ಕೊಡಲದಲ್ಲಿ. ಜೀಸಸ್ ಜೋಸೆಫ್ ಮತ್ತು ಮೇರಿಯರ ಮಗ, ಬಸವಣ್ಣ ಮಾದರಸ ಮಾದಲಾಂಬಿಕೆಯರ ಪುತ್ರ. ಅಲ್ಲಿ ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಗಳಿದ್ದಂತೆ ಇಲ್ಲಿ ಸಿದ್ಧಾಂತ ಮತ್ತು ಅನುಭಾವ ಎಂಬ ೨ ರೂಪಗಳಿವೆ. ಆಬ್ರಹಾಂ, ಮೋಸಸ್ ಜಹುವಾ ಇತ್ಯಾದಿ. ಆ ಧರ್ಮದಲ್ಲಿ ಪ್ರಾಚೀನರು. ರೇವಣಸಿದ್ಧ ಕಾಳಾಮುಖ ಮೊದಲಾದವರು ಈ ಧರ್ಮದ ಪ್ರಾಚೀನರು ಅಲ್ಲಿ ಜೀಸಸ್ ಆರ್ವಾಚೀನ ಇಲ್ಲಿ ಬಸವಣ್ಣ ಅರ್ವಾಚೀನ. ೨ ಧರ್ಮಗಳು ದ್ವಂದ್ವ ಇದೆ. ಅಲ್ಲಿ ರೋಮನ ಕ್ಯಾಥೊಲಿಕ್ ಮತ್ತು ಪ್ರಾಟಸ್ಟೆಂಟ್ ಇದ್ದರೆ ಇಲ್ಲಿ ಆಚಾರ್ಯಪಂಥ ಮತ್ತು ವಿರಕ್ತಪಂಥ ಎಂಬ ೨ ಮಾರ್ಗಗಳಿವೆ. ಆದರೆ ಈ ದ್ವಂದ್ವದಲ್ಲಿ ಏಕತೆ ಇದೆ, ಕಣ್ಣೆರಡಾದರೂ ಕಾಣ್ಕೆ ಎರಡಲ್ಲ!

ಕ್ರೈಸ್ತಧರ್ಮ The parisees, The Sadducees & The Essenes ಇದ್ದಂತೆ ವೀರಶೈವರಲ್ಲಿ ಗುರು, ಲಿಂಗ, ಜಂಗಮ ಎಂಬ ತ್ರಿವಿಧರಿದ್ದಾರೆ. ಆ ತ್ರಿವಿಧರ ಆಚರಣೆಗಳಂತೆ ವೀರಶೈವರಲ್ಲಿ ಭಾವ ಜ್ಞಾನ ಮತ್ತು ಕ್ರಿಯಾ ಎಂಬ ತ್ರಿವಿಧಗಳಿವೆ. (The three laws of veerashaivism), ಅವರಲ್ಲಿ four Books called gospels' ಇದ್ದರೆ, ಇವರಲ್ಲಿ ಷಟ್‌ಸ್ಥಲ, ಅಷ್ಟಾವರಣ ಮತ್ತು ಪಂಚಾಚಾರಗಳೆಂಬ ಧಾರ್ಮಿಕಾಚರಣೆಗಳ ಕಲ್ಪನೆ ಇದೆ. ಹೊಸ ಒಡಂಬಡಿಕೆ 'ಪುಸ್ತಕಗಳ' ನಿರ್ಮಾಪಕರು Matthew, mark luke, and john ಇದ್ದರೆ ಬಸವಣ್ಣನ ಸಹಚಿಂತಕರಾಗಿ ಅಲ್ಲಮ್ಮ ಚನ್ನಬಸವ ಸಿದ್ಧಿರಾಮ ಅಕ್ಕಮಹಾದೇವಿ ಇದ್ದಾರೆ. ಅಲ್ಲಿ James (a servant of god and jesus) ಇಲ್ಲಿ ಶರಣ. ಅಲ್ಲಿ John ಯೇಸುನಾಥಸ್ನಾತಕ ಮಹಾಶಯ. ಇಲ್ಲಿ ment ಗಳು ಕ್ರೈಸ್ತಧರ್ಮ ದರ್ಶನಗಳ ಬೆನ್ನೆಲುಬಾದರೆ ಆಗಮಗಳು ವೀರಶೈವಕ್ಕೆ ಹಿನ್ನಲೆಯಾಗಿ ನಿಂತಿವೆ.

ಅಲ್ಲಿ ಸಾಲೊಮನ್ ಸಾರ್ವಭೌಮ, ಇಲ್ಲಿ ಬಿಜ್ಜಳ ಚಕ್ರವರ್ತಿ ಪೇರಿಕ್ಲಿಸನ ನಂತರ ಗ್ರೀಸ ಹಾಳಾಗಿ ರೋಮಗೆ ಒಕ್ಕಲಾದರೆ, ತೈಲಪನ ನಂತರ ಕಲ್ಯಾಣ ಚಾಲುಕ್ಯ ಚಕ್ರಾಧಿಪತ್ಯ ಹಾಳಾಗಿ ಕಳಚುರಿಗಳ ಕೈಗೆ ಸಿಕ್ಕಿತು. ಆದರೆ zealots ರೋಮರ ವಿರುದ್ಧ ಹೋರಾಡಿದರು ಮತ್ತು ತಮಗೆ ಸಹಾಯ ಮಾಡಿದ, ತಮ್ಮವರೇ ಆದ ಜ್ಯೂಗಳನೇಕರನ್ನು ಕೊಂದರು, ಶರಣರು ಕಳಚೂರಿಗಳ ವಿರುದ್ಧ ಹೋರಾಡಿದ್ದು ತಮ್ಮ ಆತ್ಮರಕ್ಷಣೆಗಾಗಿ.

ಕ್ರೈಸ್ತ ಮತ್ತು ವೀರಶೈವಧರ್ಮಗಳು ನೀತಿಗೆಟ್ಟ, ಜಾತಿಗಳಲ್ಲ, ಮೂಢರ ಮಂದಿರಗಳೂ ಅಲ್ಲ. ಪ್ರಾಚೀನ ಕಾಲದಿಂದಲೂ ಬೇರೂರಿದ್ದ ಪುರೋಹಿತಶಾಹಿ ವ್ಯವಸ್ಥೆಯನ್ನು ವಿರೋಧಿಸಿದುವು. ಜನಮನದ ಮೌಢ್ಯವನ್ನು ದೂರಮಾಡಲು ಯತ್ನಿಸಿದವು. ಕೆಳಗೆ ಬಿದ್ದವರಲ್ಲಿ ಆತ್ಮಪ್ರಜ್ಞೆ (self awareness) ಮೂಡಿಸಿ, ಅವರಲ್ಲಿ ಆತ್ಮ ಪ್ರತ್ಯಯ (self confidence) ವನ್ನು ತುಂಬಿದವು. compassion forgiveness, mercy & love ಈ ಬಗೆಯ ಮಾನವೀಯ ಮೌಲ್ಯಗಳನ್ನು ಬಿತ್ತಿ, ಸೌಹಾರ್ದದ ಸಸ್ಯವನ್ನು ಬೆಳೆದವು.

೨ ಧರ್ಮಗಳ ಮೂಲಗುರಿ ಮಾನವ ಕಲ್ಯಾಣ. ಮನುಷ್ಯ ತಾನು ಬದುಕಿ ಅನ್ಯರಿಗೆ ಬದುಕು ಕೊಡಬೇಕೆಂಬ ಸಕಲ ಜೀವಾತ್ಮರಿಗೆ ಲೇಸನ್ನೆ ಬದುಕುವ ಇಚ್ಛೆ ಏಕದೇವೋಪಾಸನೆ ದೈವದಲ್ಲಿ ನಂಬಿಕೆ ಕಾಯಕನಿಷ್ಠೆ ದಾಸೋಹಧ್ಯೇಯ ಅಸ್ಪೃಶ್ಯತಾ ನಿವಾರಣೆ ದೀನದಲಿತರ ಸೇವೆ, ಕಾಗೆ ಕೋಳಿಗಳಂತೆ sharing ಗುಣ, ವಿಶ್ವಪ್ರೇಮ, ವಿಶ್ವಮೈತ್ರಿ, ವಿಶ್ವಬಾಂಧವ್ಯ, ಅಹಿಂಸೆ, ಅಸ್ತೇಯ, ಅಪರಿಗ್ರಹ, ಆತ್ಮಪರಿಶೋಧನೆ, ಪರಸ್ತ್ರೀ ಕಾಮ, ವಿದೂರಣೆ ಅಜ್ಞಾನ ಜನ್ಯ ಅನಾಚಾರ ನಿವಾರಣೆ ಅಮಾಯಕರ (Innocents) ಶೋಷಣೆಯ ನಿರಾಕರಣೆ ಇವೆ ಮೊದಲಾದ ಬದುಕಿನ ಮೌಲ್ಯಗಳನ್ನು ಕೈಗೆತ್ತಿಕೊಂಡು ಅವುಗಳನ್ನು ಅರ್ಥಪೂರ್ಣವಾಗಿ ಎಲ್ಲರಿಗೂ ಕೊಡ ಮಾಡಿದರು. ಬಹುಶಃ ಸ್ತ್ರೀ ಸ್ವಾತಂತ್ರದ ಅಂಶವೊಂದನ್ನು ಬಿಟ್ಟು ಮಿಕ್ಕೆಲ್ಲ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಚಳವಳಿಗಳೂ ಕ್ರೈಸ್ತಧರ್ಮದಲ್ಲಿ ಉಜ್ವಲವಾಗಿವೆ.

ಕ್ರೈಸ್ತ ಮತ್ತು ವೀರಶೈವ ಧರ್ಮಗಳು ನುಡಿದಂತೆ ನಡೆದವು, ಕೆಲವು ಜೀವನ ಮೌಲ್ಯಗಳನ್ನು ಜೀಸಸ್ ಮತ್ತು ಬಸವಣ್ಣನವರ ಸುವಾರ್ತೆ ಮತ್ತು ವಚನಗಳ ಮೂಲಕ ಗುರುತಿಸಬಹುದು.

1. people that know, they
have great spiritual
needs are blessed.
The kingdom of heaven
belongs to those people.
people that are sad now
are blessed

God will conform those
people.
people that humble are blessed.
They will have the land god
promissed.
people that want to do
right more than anything
are blessed.

God will fully satisfy
them. People that give
mercy to other people
are blessed.
Mercy will be given to
them people that are
pure in their thinking
are blessed.

ಹಿರಿಯಯ್ಯ ಶ್ವಪಚಯ್ಯ
ಕಿಜಿಯಯ್ಯ ಡೋಹಾರ ಕಕ್ಕಯ್ಯ
ಅಯ್ಯಗಳಯ್ಯನು ನಮ್ಮ
ಮಾದಾರ ಚನ್ನಯ್ಯನು:
ಕೂಡಲ ಸಂಗಮ ದೇವಾ, ನಿಮ್ಮ
ಶರಣರೊಲಿದೆನ್ನ ಸಲಹುವರಾಗಿ.

ಮನೆ ನೋಡಾ ಬಡವರು
ಮನ ನೋಡಾ ಘನ
ಸೋಂಕಿನಲ್ಲಿ ಸುಖಿ; ಸರ್ವಾಂಗ
ಕಲಿಗಳು
ಪಸರಕ್ಕವಿಲ್ಲ; ಬಂದ
ತತ್ಕಾಲಕ್ಕುಂಟು.
ಕೂಡಲಸಂಗನ ಶರಣರು
ಸ್ವತಂತ್ರಧೀರರು.

ಶರಣ ನಿದ್ದೆಗೈದರೆ ಜಪಕಾಣಿರೋ
ಶರಣನೆದ್ದುಕುಳಿತರೆ ಶಿವರಾತ್ರಿ ಕಾಣಿರೋ
ನಡೆದುದೆ ಪಾವನ ಕಾಣಿರೋ
ಕೂಡಲ ಸಂಗನ ಶರಣನ ಕಾಯವೇ
ಕೈಲಾಸ ಕಾಣಿರೋ

Those people will be with
God. People that work
to bring peace are blessed
God will call those people
his sons.
People that are treated
badey for doing good
are blessed
The kingdom of heaven
belongs to those people.

2. You are the salt of the
earth. But if
the salt loses its
taste, then it cannot be
Made salty again salt
is good for nothing if it
loses its salty taste.
It Must be throw out
and people walk on it.

ಪರುಷ ಮುಟ್ಟಿದ ಬಳಿಕ ಕಬ್ಬುನವಾಗದು
ಲಿಂಗಮುಟ್ಟಿದ ಬಳಿಕ ಕುಚಿತ್ತಾರವಾಗದು
ಕೂಡಲ ಸಂಗನ ಶರಣರು
ಅನ್ಯವನರಿಯರಾಗಿ.

3. Don't think that I have
come to destroy the
law of mosses or the
teaching of the prophets
I have not come to
destroy their teachings
I come to give full
meaning to their teach
ings .... I tell you
that you must do
better than the teachers
of the law and
pharisces. If you are
not better people, then
you will not enter
the kingdom of heaven.

ಆದ್ಯರ ವಚನ ಪರಷ ಕಂಡಣ್ಣಾ
ಸದಾಶಿವನೆಂಬ ಲಿಂಗವ ನೆರೆ
ನುಂಬುವುದು
ನಂಬಲೊಡನೆ ನೀ ವಿಜಯಿ
ಕಂಡಣ್ಣಾ
ಅಧರಕ್ಕೆ ಕಹಿ, ಉದರಕ್ಕೆ ಸಿಹಿ
ಕೂಡಲ ಸಂಗನ ಶರಣರ ವಚನ
ಬೇವ ಸವಿದಂತೆ

4. I tell you don't be
angry with another
person. Every person
is your brother. If
you are angry with
others people, you
will be judged and if
you say bad things to
other person, ... will
be judged by the Jewish
council. And if you
called another peoson
a fool
than you will be in
danger of fire of hell

ಕಳಬೇಡ ಕೊಲಬೇಡ ಹುಸಿಯ
ನುಡಿಯಲು ಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯ
ಪಡಬೇಡ
ತನ್ನ ಬಣ್ಣಿಸಬೇಡ, ಇದಿರ
ಹಳಿಯಲುಬೇಡ
ಇದೇ ಅಂತರಂಗ ಶುದ್ಧಿ
ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರ
ನೊಲಿಸುವ ಪರಿ

5. You have heard that it
was said don't do the
sin of adultery, But I
tell you that if a person
looks at woman and
Wants to sin sexually
with her then the
person has already
done. That sin with the
woman in his wind if
your right eye makes
you sin that take it our
and throw it away. If
it is better to lose one
part of your body than
to have you whole
body thrown into
hell. if your right
hand makes you sin
their cut it off and
throw it away. It is

ಎಲ್ಲಿ ನೋಡಿದಡಲ್ಲಿ ಮನವೆಳಿಸಿದರೆ
ಆಣೆ, ನಿಮ್ಮಾಣೆ ನಿಮ್ಮ ಪ್ರಮಥ
ರಾಣೆ ಪರವಧುವನು ಮಹಾ
ದೇವಿಯೆಂಬೆ
ಕೂಡಲ ಸಂಗಮದೇವ

ಅತ್ತಲಿತ್ತ ಹೋಗದಂತೆ ಹೆಳವನ
ಮಾಡಯ್ಯ ತಂದೆ
ಸುತ್ತಿ ಸುಳಿದು ನೋಡದಂತೆ
ಅಂಧಕನ ಮಾಡಯ್ಯ ತಂದೆ
ಮತ್ತೊಂದು ಕೇಳದಂತೆ ಕಿವುಡನ
ಮಾಡಯ್ಯ ತಂದೆ
ನಿಮ್ಮ ಶರಣರ ಪಾದವಲ್ಲದೆ
ಅನ್ಯ ವಿಷಯಕ್ಕೆಳಸದಂತೆ
ಇರಿಸು ಕೂಡಲಸಂಗಮದೇವಾ.

better to lose a part
of your body than
for our whole body
to go into hell.

6. I tell you never make a
vow (promise) Don't make
a vow using the name
of heaven because, because
heven is God's thro
ne, Don't make a vow
using the name of earth
because the earth belongs
to god. Don't make
a vow using the name
of Jerusalem, be
cause it is the city
of the great king (God)
And don't even say.
that you own head is
proof that you will
keep your vow you
cannot make one hair
on your head become
white or black.

ಛಲಬೇಕು ಶರಣಂಗೆ
ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ
ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ
ಪರದೈವವನೊಲ್ಲೆನೆಂಬ
ಛಲಬೇಕು ಶರಣಂಗೆ
ಲಿಂಗಜಂಗಮ ಒಂದೆ ಎಂಬ
ಛಲಬೇಕು ಶರಣಂಗೆ ಪ್ರಸಾದದಿಟವೆಂಬ
ಛಲಬೇಕು ಛಲವಿಲ್ಲದವರ
ಮೆಚ್ಚ ನಮ್ಮ ಕೂಡಲಸಂಗಮದೇವ.

7. If someone hits you
on the right cheek
then turn ant let
him hit the other
cheek too.
You have heard that
it was said love your
neighbour and hate
you enemy. But I tell
you love your enemies
part for those people

ತನಗೆ ಮುನಿದವರಿಗೆ ತಾ
ಮುನಿಯಲೇಕಯ್ಯಾ?
ತನಗಾದ ಆಗೇನು
ಅವರಿಗಾದ ಚೇಗೇನು?
ತನುವಿನ ಕೋಪ ತನ್ನ
ಹಿರಿತನದ ಕೇಡು
ಮನೆಯೊಳಗಿನ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು
ಕೂಡಲ ಸಂಗಮದೇವ

that do bad things to
you. If you do this
then you will be
ture sons of your
father in the heaven.

8. When you give to poor
people don't announce
that you are giving
your giving should be
done in secret your
father can seen the
things that are
done in secret. And
he will reward you.

ನಾನು ಮಾಡಿದೆನೆಂಬುದು
ಮನದಲ್ಲಿ ಮೂಡಿದರೆ
ಏಡಿಸಿ ಕಾಡಿತ್ತು ಶಿವನ ಡಂಗುರ
ಮಾಡಿದೆನೆನ್ನದಿರಾ ಲಿಂಗಕ್ಕೆ
ಮಾಡಿದೆನೆನ್ನದಿರಾ ಜಂಗಮಕ್ಕೆ
ಮಾಡಿದೆನೆಂಬುದು ಮನದಲ್ಲಿಲ್ಲದಿದ್ದರೆ
ಬೇಡಿತ್ತ ನೀವ ಕೂಡಲಸಂಗಮದೇವ.

9. Judge not that ye not
be judged.
Don't Judge other people
and God will not judge
you. If you judge
other people you will
be judged in the same
way you judge them
And the forgiveness you
give to other people
will be given to you
why do you notice the
small piece of dust that
is in your brother's eye
But you don't notice
the big piece of wood
that is in your own eye?

ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳಿ
ನೆರೆಮನೆಯ ದುಃಖಕ್ಕೆ ಅಳುವವರ
ಮೆಚ್ಚ ನಮ್ಮ ಕೂಡಲಸಂಗಮದೇವ

ಆನೆ ಅಂಕುಶಕ್ಕೆ ಅಂಜುವುದೆ ಅಯ್ಯಾ
ಮಾಣದೆ ಸಿಂಹದ ನಖವೆಂದು
ಅಂಜುವುದಲ್ಲದೆ
ಆನೀ ಬಿಜ್ಜಳಂಗಂಜುವೆನೆ ಅಯ್ಯ
ಕೂಡಲಸಂಗಮದೇವಾ
ನೀನು ಸರ್ವಜೀವಿ ದಯಾಪರನಾದ
ಕಾರಣ ನಿನಗಂಜುವೆನಲ್ಲದೆ?

10. Fear God not people
Don't be afraid of peo
ple. They can only kill
the body. They cannot

kill the soul. the only
one you should fear is
The one (God) that can
destroy the body and
the soul. God even
knows how many hairs
are on your head so
don't be afraid, you
are worth much more
than many birds.

ಇಂತಹ ಅಮೃತೋಪಮ ನುಡಿಗಳಿಂದ ಜನಸಾಮಾನ್ಯರಲ್ಲಿ ಜಾಗೃತಿ ಉಂಟು ಮಾಡಿದ ಜೀಸಸ್ ಮತ್ತು ಬಸವರಿಬ್ಬರೂ ಪ್ರಾತಃಸ್ಮರಣೀಯರು. ಅಂದಿನ ಶ್ರೇಣೀಕೃತ (ವರ್ಣಾಶ್ರಮ) ಸಮಾಜ ರಚನೆಯ ವಿರುದ್ಧ ಸಿಡಿದೆದ್ದರು. ಅದರ ಅನ್ಯಾಯ ಅಧರ್ಮಗಳನ್ನು ಖಂಡಿಸಿದರು. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ದ್ರೋಹ, ದೇವರ ಹೆಸರಿನಲ್ಲಿ ಆಗುತ್ತಿದ್ದ ಅತ್ಯಾಚಾರ, ಅನಾಚಾರ, ಬಲಿ, ಶೋಷಣೆ, ಪುರೋಹಿತಶಾಹಿಗಳ ದಬ್ಬಾಳಿಕೆ ಮೊದಲಾದವುಗಳನ್ನು ಪ್ರತಿಭಟಿಸಿ ಹೋರಾಡಿದರು. ಜನತೆಯಲ್ಲಿ ಜ್ಞಾನಜ್ಯೋತಿ ಬೆಳಗುವಂತೆ ಮಾಡಿದರು. ಅವರದು ಯಾವ ರಾಜ್ಯದ ಅಥವಾ ಸಿಂಹಾಸನದ ಮೇಲಣ ಆಸೆಯಾಗಿರಲಿಲ್ಲ. ದೀನದಲಿತರ ಉದ್ಧಾರದ ಕನಸಾಗಿತ್ತು. ಸಮಾಜದ ಸರ್ವಾಂಗೀಣ ಪ್ರಗತಿಗಾಗಿ ಉತ್ತಮ ಪರಿಸರ ನಿರ್ಮಾಣ ಮಾಡುವ ಘನ ಉದ್ದೇಶ ಉಳ್ಳುದಾಗಿತ್ತು. ಅವರ ಚಿಂತನೆ ಸಾಧನೆಗಳು ಅಂದಿನ ಸಾಮಾಜಿಕ ವ್ಯವಸ್ಥೆಯನ್ನೇ ಪರಿವರ್ತಿಸಿದುವು. ವ್ಯಕ್ತಿ ಸುಧಾರಿಸಿದರೆ ಸಮಾಜ ಸುಧಾರಣೆಯಾಗುತ್ತದೆ. ತನ್ಮೂಲಕ ರಾಷ್ಟ್ರಪ್ರಗತಿ ಎಂಬುದನ್ನರಿತು ಅದಕ್ಕಾಗಿ ದುಡಿದರು. ನವಸಮಾಜ ನಿರ್ಮಾಣಕ್ಕಾಗಿ ಹೋರಾಡಿದರು. ದಲಿತೋದ್ಧಾರವೇ ಅವರ ಹಸಿವು-ಹಂಬಲಗಳಾಗಿದ್ದುವು. ಎಲ್ಲರಂತೆ ನಾನು ಮನುಷ್ಯ, ನನಗೂ ಬದುಕುವ ಹಕ್ಕುಂಟು ಎಂಬ ಆತ್ಮಪ್ರಜ್ಞೆ ಆತ್ಮವಿಶ್ವಾಸಗಳನ್ನು ಬೆಳಗಿಸಿದರು. ಸರ್ವ ಸಮಾನತೆಯ ಸೂಚಕವಾಗಿ ಅವರು ಶಿಲುಬೆ ಸಂಕೇತ ಕೊಟ್ಟರೆ ಇವರು ಇಷ್ಟಲಿಂಗವನ್ನಿತ್ತರು. ಇವೆರಡೂ 'ವಸ್ತು'ಗಳ ಕಲ್ಪನೆಯಿಂದ ಧರ್ಮ ಎಂಬುದು ಸಾಮೂಹಿಕ ಪ್ರದರ್ಶನ ಆಗಲಿಲ್ಲ. ವೈಯಕ್ತಿಕ ಅನುಸಂಧಾನ ಆಯಿತು. ಶಿಲುಬೆ ಮತ್ತು ಇಷ್ಟ ಲಿಂಗಗಳು ವ್ಯಕ್ತಿ ವ್ಯಕ್ತಿಗಳನ್ನು ಬೆಸೆಯುವ ಗೌರವಿಸುವ, ವ್ಯಕ್ತಿಸುಧಾರಣೆ ಮತ್ತು ಸಮಾನತೆಯ ಸಾಧನೆಗಳಾದವು.

ಅಂದಿನ ಪ್ರತಿಕೂಲ ಪರಿಸರದಲ್ಲೂ ಜೀಸಸ್ ಮತ್ತು ಬಸವಣ್ಣನವರು ಪ್ರಗತಿ ಸಾಧಿಸ ಹೊರಟದ್ದು ತಮ್ಮ ಪಾಂಡಿತ್ಯ ಅಥವಾ ಪ್ರಭುತ್ವಗಳ ನೆರಳಿನಲ್ಲಲ್ಲ; ತಮ್ಮ ಪ್ರಮಾಣಿಕತೆ ಸತ್ಯನಿಷ್ಠೆ, ಮಾನವೀಯ ಅನುಕಂಪ, ಆತ್ಮಶೋಧನೆ, ಸಾಮಾಜಿಕ ಕಳಕಳಿ ಮೊದಲಾದ ಮೌಲ್ಯಗಳಿಂದ ಮನುಷ್ಯ ಮಹಾತ್ಮನಾಗುವುದು, ಸೇವೆಯಿಂದ, ಪವಾಡ ಪ್ರತಾಪಗಳಿಂದಲ್ಲ ಅಂತಹ ಸೇವೆ ಸಲ್ಲಿಸಿ ವಿಶ್ವಪೂಜ್ಯರಾಗಿದ್ದಾರೆ ಜಿಸಸ್ ಮತ್ತು ಬಸವಣ್ಣ.

"ಜೀಸಸ್ ವಿಶ್ವಜ್ಯೋತಿ: ಬಸವಣ್ಣ ಜಗಜ್ಯೋತಿ:"

❐

ಬಸವಣ್ಣ ಮತ್ತು ಮಾರ್ಕ್ಸ್

●

ಎಸ್.ಡಿ. ಕರ್ಪೂರಮಠ

ಬಸವಣ್ಣ ಮತ್ತು ಮಾರ್ಕ್ಸ್ ಇವರನ್ನು ಜೊತೆ ಜೊತೆಗೆ ಹೋಲಿಸಿ ನೋಡುವ ಆತುರ ಮತ್ತು ಅದರ ಸಮರ್ಥನೆ ಅನೇಕ ಬುದ್ಧಿಜೀವಿಗಳ ಅಧ್ಯಯನ ಔನ್ನತ್ಯದ ಸಂಕೇತವಾಗಿ ಪರಿಣಮಿಸಿರುವುದನ್ನು ಅವರ ಭಾಷಣ ಮತ್ತು ಲೇಖನಗಳಲ್ಲಿ ಯಾರಾದರೂ ಗುರುತಿಸಬಹುದು. ಈ ತೆರನಾದ ಹೋಲಿಕೆಯ ಔಚಿತ್ಯ ಮತ್ತು ವೈಜ್ಞಾನಿಕತೆ ಇವೆರಡನ್ನು ವಿವೇಚಿಸುವುದು ಈ ಲೇಖನದ ಉದ್ದೇಶವಾಗಿದೆ.

ಬಸವಣ್ಣ ಮತ್ತು ಮಾರ್ಕ್ಸ್ ಇಬ್ಬರೂ ಭಿನ್ನ ಜನಾಂಗದವರು ಭಿನ್ನ ಪರಿಸರ ಮತ್ತು ಸನ್ನಿವೇಶಗಳಲ್ಲಿ ಬದುಕಿ ತಮ್ಮ ಪರಿಸರಕ್ಕೆ ವಿಭಿನ್ನವಾಗಿ ಸ್ಪಂದಿಸಿದವರು. ಮಾರ್ಕ್ಸ್ ನಾಸ್ತಿಕವಾದಿ ಶುದ್ಧ ಭೌತಿಕವಾದಿ ಬಸವಣ್ಣನವರು ಭಾರತ ಇತಿಹಾಸದ ದಾಖಲೆಯ ಮೂಲಗಳಾದ ವೇದಗಳು ನಿರ್ದೇಶಿಸಿದ ವರ್ಣ ವ್ಯವಸ್ಥೆಯನ್ನು ಕಂಡ ದೃಷ್ಟಿಯೇ ಬೇರೆ ಮಾರ್ಕ್ಸ್ ಇತಿಹಾಸವನ್ನು ಕಂಡ ಬಗೆಯೇ ಬೇರೆ.

ಬಸವಣ್ಣನವರು ಜಾತಿ ವ್ಯವಸ್ಥೆಯನ್ನು ವಿಶ್ಲೇಷಿಸಿದ ರೀತಿ ಮತ್ತು ಅದರ ಬಗ್ಗೆ ಅವರಿಗಿರುವ ಅಸಡ್ಡೆಯನ್ನು ಕೆಳಗಿನ ವಚನದಿಂದ ಕಾಣಬಹುದು;

ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?
ಇದು ಕಾರಣ ಕೂಡಲಸಂಗಮದೇವಾ
ಲಿಂಗಸ್ಥಲವನರಿದವನೆ ಕುಲಜನು!

ಅದರಂತೆ ಅವರು ಪ್ರತಿಪಾದಿಸಿದ ಮಾರ್ಗ ಅತ್ಯಂತ ಸುಲಭವಾದ ಭಕ್ತಿಮಾರ್ಗ. ಕೆಳಗಿನ ವಚನ ಇದನ್ನು ಸ್ಪಷ್ಟಪಡಿಸುತ್ತದೆ.

ನಾದ ಪ್ರಿಯ ಶಿವನೆಂಬರು ನಾದಪ್ರಿಯ ಶಿವನಲ್ಲಯ್ಯ
ವೇದಪ್ರಿಯ ಶಿವನೆಂಬರು ವೇದಪ್ರಿಯ ಶಿವನಲ್ಲಯ್ಯ
ನಾದವ ಮಾಡಿದ ರಾವಣಂಗೆ ಅರೆಯಾಯುಷ್ಯವಾಯಿತ್ತು
ವೇದವನೋದಿದ ಬ್ರಹ್ಮನ ಶಿರಹೋಯಿತ್ತು!

ನಾದ ಪ್ರಿಯನೂ ಅಲ್ಲ ವೇದ ಪ್ರಿಯನೂ ಅಲ್ಲ
ಭಕ್ತಿ ಪ್ರಿಯ ನಮ್ಮ ಕೂಡಲಸಂಗಮದೇವ.

ಈ ವಚನದಲ್ಲಿ ಅಂದಿನ ಆಧ್ಯಾತ್ಮ ಸಾಧನೆಯ ಮಾರ್ಗದ ಬಗ್ಗೆ ಅವರಿಗಿರುವ ಸ್ಪಷ್ಟ ಉಪೇಕ್ಷೆಯನ್ನು ಮತ್ತು ಪರಿಹಾಸ್ಯವನ್ನು ಕಾಣಬಹುದು.

ಮಾರ್ಕ್ಸ್ ಆರ್ಥಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಇತಿಹಾಸವನ್ನು ನೋಡಿದವ. ಅವನ ಪ್ರಕಾರ ವರ್ಗ ಸಂಘರ್ಷದ ಇತಿಹಾಸವೇ ಜಗತ್ತಿನ ಇತಿಹಾಸ. ಧಾರ್ಮಿಕ ಚೌಕಟ್ಟಿನಲ್ಲಿಯೇ ಬಸವಣ್ಣ ಕ್ಷಾತ್ರಧರ್ಮದ ಮುದ್ರೆ ಮತ್ತು ಪೌರೋಹಿತ್ಯ ಧರ್ಮದ ವಿವೇಕಗಳ ಹಿನ್ನೆಲೆಯಲ್ಲಿ ನಡೆದು ಬಂದ ವರ್ಣಾಶ್ರಮ ವ್ಯವಸ್ಥೆಯ ವಿರುದ್ಧ ಸಮರ ಸಾರಿ ಶೋಷಣೆಗೆ ಒಳಗಾದ ಶೂದ್ರರಿಗೆ ಅಧ್ಯಾತ್ಮದ ಅನುಭವ ಮಾಡಿಕೊಟ್ಟಿದ್ದಲ್ಲದೇ ಅನುಭಾವ ಸಾಹಿತ್ಯ ಸೃಷ್ಟಿಸಿದ್ದು ಭಾರತದ ಇತಿಹಾಸದಲ್ಲಿ ಅದ್ವಿತೀಯವಾದುದು.

ಮಾರ್ಕ್ಸ್‌ನ ಪ್ರಕಾರ ಧರ್ಮವೆಂದರೆ ಜನ ಸಾಮೂಹದ ಆಫೀಮು. ಈ ಮನುಷ್ಯನನ್ನು ನಿಷ್ಕ್ರಿಯಗೊಳಿಸುವಂತೆ ಧರ್ಮವೂ ಕೂಡಾ ಜನಸಮೂಹವನ್ನು ಅರ್ಥಾತ್ ಸಮೂಹ ಶಕ್ತಿಯನ್ನು ನಿಷ್ಕ್ರಿಯಗೊಳಿಸುವುದೇ ಆಗಿದೆ. ಬಸವಣ್ಣನವರು ಸಂಪಾದನೆಯ ಮೇಲೆ ಒತ್ತುಕೊಡದ ಶ್ರಮ ಗೌರವವನ್ನು ಮಾನವನ ಅಧ್ಯಾತ್ಮದ ಅಭ್ಯುದಯವನ್ನು ಮತ್ತು ವಿನಮ್ರತೆಯನ್ನು ಎತ್ತಿ ಹಿಡಿದರು. ಲಿಂಗಧಾರಿಗಳೆಲ್ಲ ಸಮಾನರು ಎಂಬುದು ಅವರ ವಾದ. ಅಂದರೆ ಆಧ್ಯಾತ್ಮಿಕ ಸಮತಾವಾದವನ್ನು ಪ್ರತಿಪಾದಿಸಿದರು.

ಶರಣರಲ್ಲಿ ಸಾಂಪತ್ತಿಕ ಪ್ರಗತಿಯ ಆದರ್ಶವಿರಲಿಲ್ಲ. ಖಾಸಗಿ ಸಂಪತ್ತಿನ ಒಡೆತನದ ಸಾಮಾಜಿಕರಣವಾಗಲಿ ಮತ್ತು ಉತ್ಪಾದನಾ ಸಾಮಗ್ರಿಗಳ ಒಡೆತನ ಸಮಾಜದ ಆಡಳಿತಕ್ಕೊಳಗಾಗುವದಾಗಲಿ ಬಸವಣ್ಣನವರ ಉದ್ದೇಶವಾಗಿರಲಿಲ್ಲ.

ಇನ್ನು ಬಸವಣ್ಣನವರ 'ಕಾಯಕ'ದ ಬಗೆಗೆ ಅವಲೋಕಿಸೋಣ. ಶರಣರು ಕಾಯಕ ನಿಷ್ಠರು, ನಾಳಿನ ಬಗೆಗಿನ ಯಾವ ಚಿಂತೆಯೂ ಅವರನ್ನು ಭಾದಿಸಕೂಡದು. ದಿನದ ಅಗತ್ಯದಷ್ಟು ಬೇಕಾದ ಆಹಾರ ಸಾಮಗ್ರಿಗಳನ್ನು ಉಪಯೋಗಿಸುವುದು ದೈನಂದಿನ ಜೀವನ ವಿಧಾನವಾಗಿತ್ತು. ಆಯ್ದಕ್ಕಿ ಮಾರಯ್ಯ ದಿನದ ಅಗತ್ಯಕ್ಕಿಂತ ಆಹಾರ ಧಾನ್ಯ (ಅಕ್ಕಿ)ವನ್ನು ಸಂಗ್ರಹಿಸಿ ತಂದಿದ್ದಕ್ಕಾಗಿ ಆತನ ಹೆಂಡತಿ ಹೆಚ್ಚಿನ ಧಾನ್ಯವನ್ನು ತಿರಿಗುಸುವಂತೆ ಮಾಡಿದ್ದು ಎಲ್ಲರಿಗೂ ಗೊತ್ತಿದ್ದ ಸಂಗತಿ. ಶರಣರ ಈ ಅಸಂಗ್ರಹ ಪ್ರವೃತ್ತಿಯಿಂದಾಗಿ ಕೆಲವು ಪರಿಣಾಮಗಳುಂಟಾದವು. ಶರಣರನ್ನು ಹೊರತುಪಡಿಸಿ ಉಳಿದ ವೀರಶೈವ ಅನುಯಾಯಿಗಳು ಮತ್ತು ಇತರರು ಅಸಂಗ್ರಹ ಪ್ರವೃತ್ತಿಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲೇ ಇಲ್ಲ. ಇದರ ಫಲವಾಗಿ ಸಂಗ್ರಹ ಪ್ರವೃತ್ತಿಯು ಅಸಂಖ್ಯ ಜನರ ದೈನಂದಿನ ಕ್ರಿಯೆಯಾಗಿ ಅವರನ್ನು ಅಗಾಧವಾದ ಭೌತಿಕ ಸಂಪತ್ತಿನ ಒಡೆಯರನ್ನಾಗಿ ಮಾಡಿತು ಎಂಬುದು ಶರಣ ಸಾಹಿತ್ಯ ಅಧ್ಯಯನದ ವಿಚಾರವಂತ ವಿದ್ಯಾರ್ಥಿಗಳಿಗಾಗಲಿ ಅಥವಾ ಶರಣ ಸಾಹಿತ್ಯದ ಬಗೆಗೆ ಅಧಿಕಾರವಾಣಿಯಿಂದ ಮಾತನಾಡುವ ಪಂಡಿತರಿಗೆ ಹೊಳೆಯುವುದೇ ಇಲ್ಲ! ಅಥವಾ ಮಾನ್ಯವಾಗುವುದಿಲ್ಲ.

ಮಾರ್ಕ್ಸ್ ಭೌತಿಕ ತತ್ವದ ಪ್ರತಿಪಾದಕ. ಆತನ ಮತ್ತು ಬಸವಣ್ಣನವರ ಸ್ವಾತಂತ್ರ್ಯದ ಬಗೆಗೆ ಇರುವ ಪರಿಕಲ್ಪನೆ ಏನಾಗಿತ್ತು ಎಂಬುದನ್ನು ತಿಳಿಯುವದು ತೀರಾ ಅಗತ್ಯವಾಗಿದೆ.

ಬಸವಣ್ಣನವರು ಹುಟ್ಟು ಹೋರಾಟಗಾರರಾಗಿದ್ದರೂ ಅವರದು ಭಕ್ತಿಮಾರ್ಗ, ಭಕ್ತಿಯ ಮೂಲಕ ಜೀವನ್ಮರಣಗಳ ಚಕ್ರದಿಂದಾಚೆ ಹೋಗುವುದೇ ಅವರ ಸ್ವಾತಂತ್ರ್ಯದ ಪರಿಕಲ್ಪನೆ. ಮಾರ್ಕ್ಸ್‌ನ ಸ್ವಾತಂತ್ರ್ಯದ ಪರಿಕಲ್ಪನೆ ಆತನ ಈ ಅಭಿಪ್ರಾಯದಿಂದ ಸುಸ್ಪಷ್ಟ–ಸ್ವಾತಂತ್ರ್ಯವೆಂದರೆ ಮನುಷ್ಯನು ನಿಸರ್ಗದ ಮೇಲೆ ನಿಯಂತ್ರಣವನ್ನು ಸಾಧಿಸುವ ಹಕ್ಕು.

ಬಸವಣ್ಣ ಮತ್ತು ಮಾರ್ಕ್ಸ್ ಬದುಕಿ ಬಾಳಿದ್ದು ವಿಭಿನ್ನ ಪರಿಸರ ಹಾಗೂ ವಿಭಿನ್ನ ಕಾಲದಲ್ಲಿ. ಬಸವಣ್ಣ ಬದುಕಿದ್ದು ಹನ್ನೆರಡನೆಯ ಶತಮಾನದಲ್ಲಿ ಔದ್ಯೋಗಿಕ ಕ್ರಾಂತಿಯ ಸುಳಿವೇ ಇಲ್ಲದ ಕಾಲದಲ್ಲಿ. ಮಾರ್ಕ್ಸ್ ಬದುಕಿದ್ದು ಕ್ರಾಂತಿಯ ಯುಗದಲ್ಲಿ. ತತ್ಪರಿಣಾಮವಾಗಿ ಸ್ಪಷ್ಟವಾಗಿ ರೂಪಗೊಂಡ ವರ್ಗ ಸಂಘಟನೆ ಮತ್ತು ವರ್ಗ ಸಂಘರ್ಷಗಳು ಬಸವಣ್ಣನವರ ಕಾಲದಲ್ಲಿ ಆಗಿರಲಿಲ್ಲ. ಬಸವಣ್ಣನವರ ಬಂಡಾಯ ವರ್ಣಾಶ್ರಮ ಧರ್ಮಪದ್ಧತಿಯ ವಿರುದ್ಧವಾಗಿತ್ತು. ಅವರ ಸಮರ, ವರ್ಗ ಸಂಘರ್ಷದ ಐಹಿಕ ಅಭ್ಯುದಯದ ಆದರ್ಶವಾಗಲಿ, ಉತ್ಪಾದನಾ ಸಾಮಗ್ರಿಗಳ ಒಡೆತನದ ಸಾಮಾಜೀಕರಣದ ಗುರಿಯನ್ನಾಗಲಿ ಹೊಂದಿರಲಿಲ್ಲ ಎಂಬುದು ನಿರ್ವಿವಾದ. ಸ್ವತಃ ಮಾರ್ಕ್ಸ್‌ನ ಹುಟ್ಟು ಮತ್ತು ಬದುಕು ಔದ್ಯೋಗಿಕ ಕ್ರಾಂತಿಗಿಂತ ಮುಂಚೆಯೇ ಆಗಿಹೋದಿದ್ದರೆ ಮಾರ್ಕ್ಸ್‌ನ ಸಾಧನೆ ಹೆಸರು ಏನಾಗಿರುತ್ತಿತ್ತೊ ಊಹೆಗೆ ನಿಲುಕದ ವಿಷಯ. ಅಥವಾ ಔದ್ಯೋಗಿಕ ಕ್ರಾಂತಿ ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಾಗಿದ್ದರೆ ಜಾಗತಿಕ ಇತಿಹಾಸದಲ್ಲಿ ಮಾರ್ಕ್ಸ್‌ನ ಸ್ಥಾನಮಾನಗಳು ಏನಾಗುತ್ತಿದ್ದವೋ ಎಂಬುದನ್ನು ಯಾರು ಹೇಳಬಲ್ಲರು? ಆದರೆ ಬಸವಣ್ಣನವರ ಜನ್ಮ, ಬದುಕು ಹೋರಾಡಿ ಆಧ್ಯಾತ್ಮಿಕ ಸಾಧನೆಯ ಔನ್ನತ್ಯ ಎಲ್ಲಕ್ಕೂ ಮಿಗಿಲಾಗಿ ನಿಮ್ನ ವರ್ಗದವರಿಗೆ ಆಧ್ಯಾತ್ಮಿಕ ಅನುಭವ ಮಾಡಿಕೊಟ್ಟಿದ್ದು ಅವರಿಂದ ಅನುಭವ ಸಾಹಿತ್ಯದ ಸೃಷ್ಟಿಯಾಗುವಂತೆ ಮಾಡಿದ್ದು ಇವೆಲ್ಲವುಗಳು ಅವರ ಅದ್ಭುತ ಹಿರಿಮೆ. ಸಾಧನೆಗಳಿಗೆ ಸಾಕ್ಷಿಯಾಗಿರುವಾಗ ಅವರನ್ನು ಮಾರ್ಕ್ಸ್‌ನೊಂದಿಗೆ ಹೋಲಿಸುವದು ಅದೆಷ್ಟು ಔಚಿತ್ಯಪೂರ್ಣವಾದುದು ಮತ್ತು ವೈಜ್ಞಾನಿಕವಾದುದು ಎಂಬುದನ್ನು ಪ್ರಾಜ್ಞರು ತಿಳಿಯಬೇಕೆಂಬುದೇ ಈ ಲೇಖನದ ಉದ್ದೇಶ. ಮಾರ್ಕ್ಸ್ ಇಲ್ಲವೆ ಲೆನಿನ್ ಜೊತೆ ಬಸವಣ್ಣನವರನ್ನು ಹೊಲಿಸದೇ ಇದ್ದಾಗ್ಯೂ ಅವರು ಮಹಾನ್ ವ್ಯಕ್ತಿಯಾಗಿದ್ದಾರೆ ಎಂಬ ಸತ್ಯಾಂಶವನ್ನು ಅರಿಯುವದು ಅನಿವಾರ್ಯವೂ ಅವಶ್ಯಕವೂ ಆಗಿದೆ. ಮಾರ್ಕ್ಸ್‌ನ ಜೊತೆ ಅವರನ್ನು ಹೋಲಿಸದಿದ್ದಲ್ಲಿ ಅವರ ಭವ್ಯ ವ್ಯಕ್ತಿತ್ವ ಸಂಕುಚಿತವಾಗುವದೇ? ಈ ವಿಚಾರಗಳ ಹಿನ್ನಲೆಯಲ್ಲಿ ಭಕ್ತಿ–ಭಂಡಾರಿ ಬಸವಣ್ಣನವರನ್ನು ಭೌತಿಕವಾದಿ ಮಾರ್ಕ್ಸ್‌ನ ಜೊತೆ ಹೋಲಿಸುವ ನಮ್ಮ ಬುದ್ಧಿ ಜೀವಿಗಳ ಆತುರ–ಕಾತುರಗಳು ಅವರ ಅಧ್ಯಯನದಲ್ಲಾಗಲಿ ಉಪನ್ಯಾಸ ಹಾಗೂ ಬರಹಗಳಲ್ಲಾಗಲಿ ಬಾಲಿಶ ರೂಪದಲ್ಲಿ ವ್ಯಕ್ತಿಗೊಳ್ಳಲಾರವು ಎಂದು ಆಶಿಸಬಹುದೆ?

❐

ಬಸವಣ್ಣನವರು ಹಾಗೂ ಕಾರ್ಲ್‌ಮಾರ್ಕ್ಸ್

●

ಮಂಗ್ಳೂರು ವಿಜಯ

ಒಂದು ಪ್ರತಿಕ್ರಿಯೆ

ಏಪ್ರಿಲ್ ೧೯೭೬ರ 'ತರಳಬಾಳು'ನಲ್ಲಿ ಶ್ರೀ ಕ.ಚ. ಪಾಟೀಲರ 'ಬಸವಣ್ಣನವರು ಹಾಗೂ ಕಾರ್ಲ್‌ಮಾರ್ಕ್ಸ್' ಸ್ಥೂಲ ತುಲನೆಯನ್ನು ಓದಿದನಂತರ ಮತ್ತೊಮ್ಮೆ ಓದಿ ಒಂದು ಪ್ರತಿಕ್ರಿಯೆ ಬರೆಯಬೇಕೆನಿಸಿತು. ಬರೆಯುವ ಮುಂಚೆ ಒಂದು ಮಾತು ಸ್ಪಷ್ಟಪಡಿಸಲಿಚ್ಛಿಸುತ್ತೇನೆ. ಶ್ರೀ ಕ.ಚ. ಪಾಟೀಲರಿಗಿಂತ ಭಿನ್ನವಾದ ರೀತಿಯಲ್ಲಿ ನನಗೆ ಅನಿಸಿದ ಕೆಲ ವಿಚಾರಗಳಿವು. ಮಾರ್ಕ್ಸ್‌ನನ್ನು ಮೇಲುಗಟ್ಟಿ ಬರೆಯುವುದು ಈ ಪ್ರತಿಕ್ರಿಯೆಯ ಉದ್ದೇಶವಲ್ಲ. ಈ ಪ್ರತಿಕ್ರಿಯೆ ಬರೆಯುವಾಗ ಸಂಬಂಧ ಇಲ್ಲವೆಂದೆನಿಸಬಹುದಾದ ಆದರೆ ವಾಸ್ತವವಾಗಿ ಇರುವ ಕೆಲ ವಿಷಯಗಳ ಬಗೆಗೂ ಬರೆಯಬೇಕಾದ ಅನಿವಾರ್ಯತೆ ನನಗೆ ಕಂಡುಬಂದಿದೆ.

ಇಂಡಿಯಾದಲ್ಲಿ ಜಾತಿಪದ್ಧತಿಯನ್ನು ಬಹಿರಂಗವಾಗಿ ವಿರೋಧಿಸುವಷ್ಟರ ಮಟ್ಟಿಗಿನ ವಿಚಾರಶೀಲತೆ ಈಚೆಗೆ ಬೆಳೆದಿದೆ. (ಕೆಲವಾರು ಕಡೆ ಢೋಂಗೀ ವಿಚಾರವಾದಿಗಳೂ ಇರಬಹುದು) ಅದೊಂದು ಶೋಷಣಾ ದೃಷ್ಟಿಯಿಂದ ಬೆಳೆಸಿಕೊಂಡು ಬರಲಾದ ಅಮಾನವೀಯ ಪದ್ಧತಿ ಎಂಬುದು ವಿಚಾರ ಮಾಡೋವರಿಗೆಲ್ಲ ಗೊತ್ತಾಗುವ ಸಂಗತಿ. ಹಾಗೇ 'ನಮಗೊಂದು ಧರ್ಮದ ತಲೆಪಟ್ಟಿ ಅನಿವಾರ್ಯವಾ? ಎಂಬ ಬಗ್ಗೆ ವಿಚಾರಮಾಡಬೇಕಾದ ಸಂದರ್ಭ ಈಗ ನಮಗೆ ಒದಗಿ ಬಂದಿದೆ. ಇದು ತನಕದ ಈ ನಾಡಿನ ಚರಿತ್ರೆಯನ್ನು ಅವಲೋಕಿಸಿದಾಗ ಧರ್ಮದ ತಲೆಪಟ್ಟಿ ಒಂದು ಅಮಲು ತರುವ ವಸ್ತುವಾಗಿ ಕಂಡುಬರುತ್ತದೆ. ಹುದುಗಿರಬಹುದಾದ ಸ್ವತಂತ್ರ ವೈಚಾರಿಕ ಶಕ್ತಿಯನ್ನು ಅದು ಕತ್ತರಿಸಿಹಾಕುವ ಕೆಲಸವನ್ನು ಪರೋಕ್ಷವಾಗಿಯಾದರೂ ಮಾಡುವುದು ಕಂಡುಬಂದಿದೆ. ಹಾಗಾಗೇ ಹತ್ತೆಂಟು ಧರ್ಮಗಳುದಯಿಸಿ ಎಲ್ಲ ಜನರಲ್ಲಿ ಧರ್ಮೀಯ ಭಾವನೆಗಳು ಪ್ರಚೋದನೆಗೊಳ್ಳಲು ಕಾರಣವಾಗಿವೆ. 'ಎಲ್ಲ ಧರ್ಮಗಳ ತಿರುಳೂ ಒಂದೇ ಎಂದು ಸಂಕ್ಷಿಪ್ತವಾಗಿ ಹೇಳಿಬಿಟ್ಟರೂ 'ಎಲ್ಲ ಧರ್ಮಗಳೂ ತೋರಿಸುವ ಮಾರ್ಗ ಒಂದೇ ಎಂದು ಯಾರು ಹೇಳುತ್ತಿಲ್ಲ. ಕಾರಣ ಸ್ಪಷ್ಟವಿದೆ. ಹಿಂದೂಗಳಿಗೆ ಅತಿ ಪವಿತ್ರವಾದ ಗೋಮಾತೆ–ಪಸು–ಬೇರೆ ಧರ್ಮದ ಅನುಯಾಯಿಗಳಿಗೆ ಒಂದು ಮಾಮೂಲಿ ಪ್ರಾಣಿ. ಹೀಗಿರುವಾಗ ನಮ್ಮ ನೆರೆಯ

ವಿಧರ್ಮೀಯನೊಬ್ಬ ಉದ್ದೇಶಪೂರ್ವಕವಲ್ಲದೆಯೂ ಕೂಡ ಹಸುವಿನ ಮಾಂಸವನ್ನು ತಿಂದರೆ–ನಮ್ಮಲ್ಲಿ ಹಲವಾರು ಜನ ಬೇರೆ ಪ್ರಾಣಿಗಳ ಮಾಂಸ ತಿನ್ನುವ ಥರ–ಹಿಂದೂಗಳಿಗೆ ಎಲ್ಲಿಲ್ಲದ ರೋಷ ಬರ್ತದೆ; ಬೆಂಕಿಕಾರಲು ಪ್ರಾರಂಭಿಸುತ್ತೇವೆ. ಕತ್ತಿಮಸೆಯತೊಡಗುತ್ತೇವೆ. ಇಂದಿಗೂ ಧರ್ಮಕ್ಕೆ ನಮ್ಮ ಸಮಾಜದಲ್ಲಿ ಪ್ರಥಮ ಸ್ಥಾನ ಇರುವುದರಿಂದಲೇ ಧರ್ಮ ಅನೇಕ ಬಗೆಯಲ್ಲಿ ಅನೇಕ ಅವೈಜ್ಞಾನಿಕ ವಿಚಾರಗಳನ್ನೆಲ್ಲ ಪ್ರೇರೇಪಿಸುವುದರಿಂದಲೇ ತುಂಬಾ ಮಹತ್ವ ಪಡೆಯಬೇಕಾದ ಆರ್ಥಿಕ ಅಸಮಾನತೆಯಂಥ ಜ್ವಲಂತ ಸಮಸ್ಯೆಗಳು ಸ್ಪರ್ಶೀಯವೆನಿಸದೇ ತೀರಾ ವೈಯಕ್ತಿಕ ಮಟ್ಟದಲ್ಲಿರಬೇಕಾದಲ್ಲಿ ಇರಬಹುದಾದ ಧರ್ಮ ಮತಗಳು ಪ್ರಥಮ ಎಂದೆನಿಸತೊಡಗಿವೆ. ಹಾಗಾಗಿಯೇ ನಾವು ನಮ್ಮ ಸಂಪೂರ್ಣ ನಿಗಾನ್ನ ಅರ್ಥ ವ್ಯವಸ್ಥೆಯನ್ನು ಭದ್ರಪಡಿಸುತ್ತ ತನ್ಮೂಲಕ ತುಣುಕು ರೊಟ್ಟಿ ತುಂಡು ಲಂಗೋಟಿ, ತುಸು ಸೂರು ದೊರಕಿಸಿಕೊಳ್ಳುವತ್ತ ವಿಚಾರ ಮಾಡದವರಾಗಿದ್ದೇವೆ.

ಪಾಶ್ಚಾತ್ಯ ದೇಶಗಳಲ್ಲಿ ಕೈಗಾರಿಕಾ ಕ್ರಾಂತಿಯ ನಂತರ ಶೋಷಣೆ ಪ್ರಾರಂಭವಾಯಿತು. ಸಾಮಾಜಿಕ ನ್ಯೂನತೆಗಳು ಉಲ್ಬಣಗೊಂಡವು ಎಂದೇನೂ ಇಲ್ಲ. ಪಾಶ್ಚಾತ್ಯ ಹಾಗೂ ಪೌರ್ವಾತ್ಯ ರಾಷ್ಟ್ರಗಳಲ್ಲಿ ಅದಕ್ಕಿಂತ ಹಿಂದಿನಿಂದಲೂ ನಾನಾ ಬಗೆಯಲ್ಲಿ ಶೋಷಣೆ ಅಸ್ತಿತ್ವದಲ್ಲಿತ್ತು. ಬಸವಣ್ಣ ಸುಮಾರು ೧೨ನೇ ಶತಮಾನದಲ್ಲಿ ಹುಟ್ಟಿ ಬಂದು ಅಂದಿನ ಜನತೆಗೆ ಸಮಾಜ ಅವಕಾಶ ದೊರಕಿಸುವುದರಲ್ಲಿ, ಭೇದ–ಭಾವ ದೂರ ಮಾಡುವಲ್ಲಿ ಶ್ರಮಿಸಿದಂಗೆ ೧೯ನೇ ಶತಮಾನದಲ್ಲಿ ಮಾರ್ಕ್ಸ್ ಶ್ರಮಿಸಿದ ಹಾಗಿದ್ದಾಗ್ಯೂ ಇವರಿಬ್ಬರೂ ಮಾಡುತ್ತ ಬಂದ ಕಾರ್ಯಗಳನ್ನು ಅವರಿಬ್ಬರೂ ಅನುಸರಿಸಿದ ಮಾರ್ಗಗಳನ್ನೇ ಗಂಭೀರವಾಗಿ ಗಮನಿಸಿದಾಗ ಅಪಾರ ಅಂತರ ಕಂಡುಬರುತ್ತದೆ. ಇಬ್ಬರೂ ಸಮಾಜದಲ್ಲಿ ಕೆಳವರ್ಗದವರು ಎಂದು ಗಣಿಸಲಾದವರ ಅಭ್ಯುದಯಕ್ಕಾಗಿ ಶ್ರಮಿಸಿದರೂ ಇಬ್ಬರಲ್ಲೂ ಇರುವ ಕಾರ್ಯೋನ್ಮುಖತೆಯ ಅಂತರವನ್ನು ಮರೆಯಬಾರದಾಗಿದೆ.

ಬಸವಣ್ಣನವರು ಸಮಾಜದ ಉಚ್ಚವರ್ಗದ ಜನ ಕೀಳುವರ್ಗದ ಜನರನ್ನು ದೂರೀಕರಿಸಿ ಎಲ್ಲಾ ಬಗೆಯಲ್ಲಿ ಅವರ ಶೋಷಣೆಯನ್ನು ಮಾಡಲಾಗಿತ್ತು ಎನ್ನುವುದನ್ನು ತಮ್ಮ ವಚನಗಳ ಮೂಲಕ ಸಾರಿದ್ದಾರೆ. 'ಜೀವನ ನಿರ್ವಹಣೆಗಾಗಿ ಕೈಕೊಂಡ ಕೆಲಸಗಳ ಮೇಲೆ ಕುಲಗಳನ್ನು ನಿರ್ಧರಿಸಬಹುದು: ಆದರೆ ಕುಲ–ಕುಲಗಳಲ್ಲಿ ಮೇಲು–ಕೀಳು ತರವಲ್ಲ; ಎಲ್ಲ ಕಾಯಕಜೀವಿಗಳೂ ಒಂದೇ ಎಂದೆಲ್ಲ ಹೇಳಿದವರು ಬಸವಣ್ಣನವರು. ಆದರೆ ಕಾರ್ಲ್‌ಮಾರ್ಕ್ಸ್ ಕುಲ–ಜಾತಿಗಳೇ ಇರಲಿ, ವರ್ಗಗಳೇ ಇರಲಿ ಅವುಗಳ ಒಳಮನಸ್ಸಿನ ಪದರುಗಳಲ್ಲಿರುವ ಶೋಷಣಾಪರ ವಿಚಾರಗಳನ್ನ, ಧೋರಣೆಗಳನ್ನು ಖಂಡಿಸಿದನು. ಮಾರ್ಕ್ಸ್ ಶ್ರಮಿಕ ವರ್ಗದ (the proletariat class) ಹಿತಾಸಕ್ತಿಯನ್ನು ತನ್ನ ಸಂಪೂರ್ಣ ಲಕ್ಷ್ಯವನ್ನು ಕೇಂದ್ರೀಕರಿಸಿ ಕಾಪಾಡ ಬಯಸಿದನು. ಬಸವಣ್ಣ ಸಂಪತ್ತಿನ ಸಂಗ್ರಹವನ್ನು ಖಂಡಿಸಿದುದರ ಹಾಗೂ ಕಾರ್ಲ್‌ಮಾರ್ಕ್ಸ್ ವೈಯಕ್ತಿಕ ಆಸ್ತಿಯನ್ನು ಹೊಂದುವುದನ್ನು ಖಂಡಿಸಿದುದರ ಹಿನ್ನಲೆಗಳು ಪರಸ್ಪರ ವಿರೋಧೀ ವಿಚಾರಗಳ ಮೇಲೆ ಅವಲಂಬಿಸಿವೆ. ಬಸವಣ್ಣನವರ ಕಾಯಕದಿಂದ ಯಾವುದೇ ಪ್ರಗತಿಶೀಲತೆಯ, ಚೈತನ್ಯದ ಗುರುತು ಕಾಣುವುದಿಲ್ಲ. 'ಸಂಪತ್ತನ್ನು ಸಂಗ್ರಹಿಸದಿರಿ' ಎನ್ನುವ ಬಸವಣ್ಣನವರ ಮಾತಿನ ಹಿಂದೆ ಜನತೆಯನ್ನು ಅವರ ಕಾರ್ಯಕ್ಷಮತೆಯನ್ನು ನಿರುತ್ತೇಜನಗೊಳಿಸುವ ಅಂಶ ಕಂಡುಬರುತ್ತದೆ.

ಬದಲಾಗಿ ಮಾರ್ಕ್ಸ್‌ನ ಮಾತುಗಳಲ್ಲಿ ಒಟ್ಟಾಗಿ ದುಡಿಯುವಾ ಒಟ್ಟಾಗಿ ತಿನ್ನುವಾ: ಒಟ್ಟಾಗಿ ಧಣಿಗಳಾಗುವಾ' ಎಂದು ಆಶಾದಾಯಕವಾದ ನೋಟವಿದೆ.

ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ಮಾರ್ಕ್ಸ್‌ನ ಮಾತುಗಳಲ್ಲಿ, ಸಿದ್ಧಾಂತಗಳಲ್ಲಿ ಕಾಣುವ ರೊಚ್ಚು, ನ್ಯಾಯ ಪಡೆಯಬೇಕೆನ್ನುವ ಛಲ ಬಸವಣ್ಣನವರ ವಚನಗಳಲ್ಲಿ ಕಾಣದಿರುವುದು. ಅವುಗಳನ್ನು ಉಪಯೋಗಿಸಲಾಗಿರುವುದರ ಹಿಂದಿನ ತೀವ್ರತರ ದುರಂತವೆಂದರೆ ಅವುಗಳ ಒಳ ಅರ್ಥವನ್ನೇ ಕೊಂದುಬಿಟ್ಟು ಕಣ್ಮುಚ್ಚಿ ಹಾಡುವಂಗೆ, ಮೈಮನ ಮರೆಯುವಂಗೆ ಹೊಲಸು ಮಾಡಿದ್ದು.

ಬಸವಣ್ಣನವರ ಭಕ್ತ–ಭವಿಗಳೊಂದಿಗೆ–ಮಾರ್ಕ್ಸ್‌ನ ಶೋಷಿತ–ಶೋಷಕರನ್ನು ಹೇಗೇ ಆಗಲಿ ತುಲನೆ ಮಾಡಹೋದರೆ ಚಾರಿತ್ರಿಕ ಸತ್ಯವನ್ನು ಬಹು ಕ್ರೂರವಾಗಿ ಸರಳಿಕರಿಸಿದಂಗೆ, ಇದ ತಿಳಿಯುವ ಮೊದಲು ಇನ್ನೂ ತನಕ ಅರ್ಥವ್ಯಾಪ್ತಿಗೆ ಸಿಕ್ಕಿದ 'ಧರ್ಮ'ವನ್ನೇ ಕೇಂದ್ರವಾಗಿಟ್ಟುಕೊಂಡ ಬಸವಣ್ಣ, ಎಲ್ಲರ ಪ್ರಮುಖ ವಸ್ತುವಾದ ಎಲ್ಲರಿಗೂ ತಿಳಿಯುವಂಥ ಬಗೆಯ 'ಅರ್ಥ'ವನ್ನು ಕೇಂದ್ರವಾಗಿಟ್ಟುಕೊಂಡ ಮಾರ್ಕ್ಸ್‌ನಿಂದ ಹೆಂಗೆ ಭಿನ್ನ ಅಂತ ಅರ್ಥಮಾಡಿಕೊಳ್ಳಬೇಕು.

ಮಹಿಳೆಯರ ವಿಷಯದಲ್ಲಿ ಅನುಭವಮಂಟಪ ಒಕ್ಕೂಟ ರಚಿಸಿಕೊಂಡುದರಲ್ಲಿ ಬಸವಣ್ಣ ಮಾರ್ಕ್ಸ್ ಸಹಮತ ಹೊಂದುತ್ತಾರೆಂಬುದು ಕೇವಲ ಬಾಹ್ಯನೋಟದಿಂದ ಸಿದ್ಧವಾಗುವ ವಿಚಾರ. ಆದರೆ ಇವರಿಬ್ಬರ ಒಳತುಡಿತಗಳು ವಿಚಾರಗಳಾಗಿ ರೂಪುಗೊಂಡು ಕ್ರಿಯಾತ್ಮಕವಾಗಿ ಹೊರಬರುವ ವಿಧಾನಗಳೇ ಬೇರೆ ಬೇರೆ. ಇಬ್ಬರ ಆಲೋಚನಾಕ್ರಮಗಳೂ ಭಿನ್ನ ಭಿನ್ನ. ಪರಸ್ಪರ ವಿರೋಧಿ ನೆಲಗಟ್ಟಿನ ಮೇಲೆ ಒರೆಗೆ ಹಚ್ಚಲ್ಪಟ್ಟು ರೆಡಿಯಾಗಿ ಬರುವಂಥ ಇಬ್ಬರ ವಿಚಾರಗಳು ಸಾರಾಸಗಟಾಗಿ ಒಂದೇ ಎಂಬಂತೆ ಕಂಡುಬಂದರೂ ವಾಸ್ತವವಾಗಿ ಅಪಾರ ಅಂತರವನ್ನು ಹೊಂದಿದವು. ಯಾವ ಮಿತಿಯು ಮಾನವನ ವೈಚಾರಿಕ ಶಕ್ತಿಗೆ ಅಡ್ಡಗಾಲು ಹಾಕುತ್ತದೆಂದು, ಮಾನವನು ಜೀವನವನ್ನು ಅವೈಜ್ಞಾನಿಕವಾಗಿ ನೋಡುವಂತೆ ಮಾಡುತ್ತದೆಂದು ಮಾರ್ಕ್ಸ್ ನಂಬಿದ್ದನೋ ಅದೇ ಮಿತಿಯೊಳಗಿದ್ದುಕೊಂಡು ಆಲೋಚನೆ ಮಾಡುವ, ಅದೇ ಮಿತಿಯಲ್ಲಿದ್ದುಕೊಂಡು ಜನತೆಯಲ್ಲಿ ಬದಲಾವಣೆ ಬರಬೇಕೆಂದು ಬಯಸುವ ಬಸವಣ್ಣ ಅದೆಂಗೆ ಮಾರ್ಕ್ಸ್‌ನ ಜೊತೆ ನಿಜ ಅರ್ಥದಲ್ಲಿ ಸಹಮತ ಹೊಂದಿಯಾರು? ಒಂದು ವೇಳೆ ಅಂಥ ಸಾಮ್ಯ ಏನಾದರೂ ಕಂಡುಬಂದಲ್ಲಿ ಅದು ಅಪ್ಪಟ ಬಾಹ್ಯ ಸಾಮ್ಯವೇ ಹೊರತು ಅಕ್ಷರಶಃ ಸಂಪೂರ್ಣ ಅರ್ಥದ ಸಾಮ್ಯ ಅಲ್ಲ.

ಹಾಗಿದ್ದಾಗ್ಯೂ ಬಸವಣ್ಣನವರ ಹೋರಾಟ ಅಂಥ ಸುವ್ಯವಸ್ಥಿತವಾದದ್ದಾಗಲಿಲ್ಲ. ಅವರ ವಿಚಾರಗಳು, ವಚನಗಳು ಕೆಲಮಟ್ಟಿಗಾದರೂ ಅವೈಜ್ಞಾನಿಕ ನೆಲಗಟ್ಟಿನ ಮೇಲೇ ನಿಂತವು. ಸಂಘಟನೆಯಂಥ ಅತ್ಯವಶ್ಯಕ ವಿಷಯದಲ್ಲಿ ಅವರು ಹೆಚ್ಚಿನ ಆಸಕ್ತಿ ವಹಿಸದೇ ಹೋದರು. ಸರಿಯಾದ ನಡತೆಯ ಒಬ್ಬ ರಾಜ, ಒಬ್ಬ ಶ್ರೀಮಂತ ವಣಿಕ ಕೂಡ ಅನುಭವ ಮಂಟಪದಲ್ಲಿ ಒಬ್ಬನಾಗಬಹುದಿತ್ತು; ಅಂದರೆ ಬಸವಣ್ಣ ಶ್ರೀಮಂತರು ಶ್ರೀಮಂತರು ಹೆಂಗಾದರು ಎಂಬ ಬಗ್ಗೆ, ಬಡವರು ಬಡವರು ಹೆಂಗಾದರು ಎಂಬ ಬಗ್ಗೆ ಶೋಧಿಸ ಹೋಗಲಿಲ್ಲ. ಮುಖ್ಯವಾಗಿ ವಿವರಣೆಯಾಚೆಗೆ ಸಾಗುವ, ಸ್ಪಷ್ಟ ಅರ್ಥವ್ಯಾಪ್ತಿಗೆ ಸಿಗದ ಧರ್ಮ ಮೋಕ್ಷಗಳನ್ನು

ಮುಂದುಮಾಡಲಾಯ್ತು. ಬಸವಣ್ಣನವರು ಸುಧಾರಣೆ ಬಯಸಿದರು. ಒಳ್ಳೆಯದನ್ನ ಬೆಳೆಸಿ ಕೆಟ್ಟದ್ದನ್ನ ಪರಿವರ್ತಿಸಲು ಬಯಸಿದರು.

ಇದೆಲ್ಲದಕ್ಕೆ ತದ್ವಿರುದ್ಧವಾಗಿ ಮಾರ್ಕ್ಸ್ ಬದಲಾವಣೆಯನ್ನು ಬಯಸಿದ. ಕೆಟ್ಟದ್ದನ್ನ ನಿರ್ದಾಕ್ಷಿಣ್ಯವಾಗಿ ಕೊಲ್ಲಬಯಸಿದ. ಮಧ್ಯಮ ವರ್ಗಕ್ಕಿಂತ ಶ್ರಮಿಕವರ್ಗವೇ ಕ್ರಾಂತಿಯ ನೇತಾರರಾಗಲು ಲಾಯಕ್ಕು ಎಂದು ನಿರ್ಧರಿಸಿದ. ಮುಖ್ಯವಾಗಿ ಪ್ರತಿಯೊಬ್ಬರಿಗೂ ಅರ್ಥವಾಗುವಂಗೆ ಸರಳ ಶಬ್ಧಗಳ ಮೂಲಕ ಜನತೆಗೆ ಮನವರಿಕೆ ಮಾಡಿಕೊಟ್ಟ. ಶೋಷಕರು ಬದಲಾಗುವುದು, ಶೋಷಣಾಪರ ವಿಚಾರಗಳನ್ನು ಬಿಡುವುದು ಸಾಧ್ಯವೇ ಇಲ್ಲವೆಂದು ತಿಳಿದಿದ್ದ. ಉಪದೇಶದಿಂದ ನಯ ಮಾತುಗಳಿಂದ ಶೋಷಕವರ್ಗದ ಪರಿವರ್ತನೆ ಅಸಾಧ್ಯ, ದಂಗೆಯಿಂದ ಪ್ರತಿಭಟನೆಯಿಂದ ಸಾಧ್ಯ ಎಂದು ಮಾರ್ಕ್ಸ್ ನಂಬಿದ್ದ.

ಹಾಗಾಗಿ ಪ್ರಶ್ನೆಗಳನ್ನು ಕೇಳಬಯಸುವ ವಿಚಾರವಂತರಿಗೆ, ಮೋಕ್ಷ–ಸ್ವರ್ಗಗಳಿಗೆ ಬೆಲೆ ಕೊಡದೇ ನಿಜ ಜೀವನಕ್ಕೆ ಹೆಚ್ಚು ಬೆಲೆಕೊಡುವ ಒಂದು ವರ್ಗಕ್ಕೆ, ಗೊಂದಲದ ಮಾತುಗಳಲ್ಲಿ ಮುಳುಗಿಸುವ, ತಿಳಿಯುವಂಗೆ ಸಾಕಷ್ಟು ವಿವರಣೆ ಕೊಡದ, ಹೆಚ್ಚು ಹೆಚ್ಚು ಭಾವುಕರನ್ನಾಗಿಸುವ ಬಸವಣ್ಣನವರ ಮಾತು–ವಚನ–ಸಿದ್ಧಾಂತಗಳಿಗಿಂತ ನೇರವಾದ, ನಿಷ್ಠುರವಾದ, ನಿಖರವಾದ ಮಾತು ಸಿದ್ಧಾಂತಗಳನ್ನು ಕೊಡುವ ಮಾರ್ಕ್ಸ್ ಹೆಚ್ಚು ಸ್ಪರ್ಶೀಯ ಅನಿಸಿದರೆ ಅಚ್ಚರಿಯಿಲ್ಲ.

❐

ಪ್ಲೇಟೋ : ಬಸವ

●

ಡಾ. ಬಿ.ವ್ಹಿ. ಮಲ್ಲಾಪುರ

ಪ್ರಪಂಚದ ದಾರ್ಶನಿಕರಲ್ಲಿ ಪ್ಲೇಟೋ ಹೆಸರು ಅಜರಾಮರ. ಇವನ ಕಾಲ ಕ್ರಿ.ಪೂ. ೪೨೭ ರಿಂದ ೩೪೭. ಸಾಕ್ರೆಟೀಸನ ಶಿಷ್ಯನಾಗಿದ್ದ ಇವನು ಕೆಲವು ದೃಷ್ಟಿಯಿಂದ ಅವನಿಗಿಂತ ಬೇರೆಯಾಗಿದ್ದುದನ್ನು ಮರೆಯಲಾಗದು. ಇವನು ಅಥೆನ್ಸಿನ ಸುಪ್ರಸಿದ್ಧ ಶ್ರೀಮಂತ ಮನೆತನಕ್ಕೆ ಸೇರಿದವ. ಆದುದರಿಂದ ಇವನು ಯಾವಾಗಲೂ ಮೇಲ್ವರ್ಗದ ಜನರ ಜೊತೆಯೇ ಹೆಚ್ಚಾಗಿ ಇರುತ್ತಿದ್ದ. ಸಾಕ್ರೆಟೀಸನದು ವಿಕಾರ ರೂಪವಾಗಿದ್ದರೆ ಇವನದು ಸುಂದರ ರೂಪ, ದೃಢವಾದ ಮೈಕಟ್ಟು, ನೀತಿವಂತನಾಗಿದ್ದ ಇವನು ೨೦ ವರ್ಷದ ಪ್ರಾಯದಲ್ಲಿ ಸಾಕ್ರೆಟೀಸನ ಸಂಪರ್ಕಕ್ಕೆ ಬಂದು ಅವನ ಶಿಷ್ಯನಾದಂತೆ ತಿಳಿದುಬರುತ್ತದೆ. ಸಾಕ್ರೆಟೀಸನು ಇತರರೊಡನೆ ನಡೆಸುತ್ತಿದ್ದ ಚರ್ಚೆಗಳಲ್ಲಿ ತಾನೂ ಭಾಗವಹಿಸುತ್ತ ತನ್ನ ಜ್ಞಾನದ ಕ್ಷಿತಿಜವನ್ನು ವಿಸ್ತರಿಸಿಕೊಂಡ. ಸ್ವೋಪಜ್ಞನಾದ ಇವನು ತನ್ನ ಗುರುವಾದ ಸಾಕ್ರೆಟೀಸನ ವಿಚಾರಗಳನ್ನು ಅನೇಕ ಸಂದರ್ಭಗಳಲ್ಲಿ ಒಪ್ಪದಿರುವುದೂ ಉಂಟು. ಆದರೂ ಇವನು ತನ್ನ ಪ್ರಬಂಧಗಳನ್ನು ಸಾಕ್ರೆಟೀಸ ಹೇಳಿದಂತೆ ಬರೆದಿರುವುದಾಗಿ ತಿಳಿಯಲಾಗುತ್ತದೆ. ಇವನು 'ರಿಪಬ್ಲಿಕ್' ಹಾಗೂ "ಐಡಿಯಾ ಆಫ್ ಗುಡ್‌ನೆಸ್"ದಂತಹ ಸುಪ್ರಸಿದ್ಧ ಪ್ರಬಂಧಗಳ ನ್ನೊಳಗೊಂಡು ಒಟ್ಟು ೩೫ ಕೃತಿಗಳನ್ನು ರಚಿಸಿದಂತೆ ತಿಳಿದುಬರುತ್ತದೆ.

ಪ್ಲೇಟೋನ ಕೃತಿಗಳಲ್ಲಿ ತತ್ವವಿಚಾರ ಸಾಕ್ರೆಟೀಸನಿಗಿಂತ ಹೆಚ್ಚು ಪ್ರಮಾಣದಲ್ಲಿ ಬಂದಿರುವುದಾಗಿ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇವನ ತತ್ವಜ್ಞಾನದ ಬೆಳವಣಿಗೆಗೆ ಸಾಕ್ರೆಟೀಸ್, ಪ್ರೊಟ್ಯಾಗೊರಸ್, ಅನೆಗ್ಜಗೋರಸ್, ಪೈಥಾಗೋರಸ್ ಮೊದಲಾದ ವಿವಿಧ ಪಂಥೀಯರ ವಿಚಾರಗಳು ಹಿನ್ನೆಲೆಯಾಗಿವೆ. ಸಾಕ್ರೆಟೀಸ ಅಭಿಪ್ರಾಯಗಳಿಂದ ಇವನು ಹೆಚ್ಚು ಪ್ರಭಾವಿತನಾಗಿರುವುದರಲ್ಲಿ ಸಂದೇಹವಿಲ್ಲ. ಪ್ರೊಟ್ಯಾಗೊರಸ್‌ನ ಅಭಿಪ್ರಾಯಗಳನ್ನು ಕೆಲವೆಡೆ ಇವನು ಒಪ್ಪದೇ ಹೋಗಿದ್ದಾನೆ.

ತತ್ವಜ್ಞಾನಕ್ಕೆ ಸಂಬಂಧಪಟ್ಟಂತೆ ಪ್ಲೇಟೋ ಹಾಗೂ ಬಸವ ಇವರಲ್ಲಿ ಕೆಲವು ಅಂಶಗಳು ಸಮಾನವಾಗಿದ್ದರೆ ಇನ್ನು ಕೆಲವು ಅಂಶಗಳು ಹೊಂದಾಣಿಕೆಯಾಗುವುದಿಲ್ಲ.

ಪ್ಲೇಟೋ ಒಬ್ಬ ಭಾವನಾವಾದಿ (ಐಡಿಯಾಲಿಸ್ಟ್). ಭಾವನೆಗಳು ವಸ್ತುಗಳನ್ನು

ಸೃಷ್ಟಿಸಲಾರವು. ಅದಕ್ಕಾಗಿ ಇವನು ದೇವರನ್ನು ಕಲ್ಪಿಸಿಕೊಳ್ಳುತ್ತಾನೆ. ಇದರಿಂದ ಅವನ ಭಾವನೆಗಳಲ್ಲಿ ಸ್ವಯಂ ಶಕ್ತಿಯ ಅಭಾವವಿರುವುದು ಸ್ಪಷ್ಟ. ಇದು ಅವನ ತತ್ವ ವಿವೇಚನೆ ಯಲ್ಲಿರುವ ಒಂದು ದೊಡ್ಡ ಕೊರತೆ.

ಬಸವಣ್ಣನವರದು ನೈಜ ಅಥವಾ ವಸ್ತು ಸತ್ತಾವಾದ (ರಿಯಲಿಸ್ಟ್). ಅದು ಸ್ವಯಂ ಶಕ್ತಿಯುತ ನಿತ್ಯಪರಿಪೂರ್ಣ ಪರಮಾತ್ಮನ ಅಸ್ತಿತ್ವವನ್ನು ಒಪ್ಪುತ್ತದೆ. ಪ್ಲೇಟೋನಂತೆ ಅದು ಕಲ್ಪಿತ ವಸ್ತುಗಳ ಅಸ್ತಿತ್ವವನ್ನು ನಿರ್ಮಿಸಿ, ತತ್ವಶಾಸ್ತ್ರಕ್ಕೆ ವಿರೋಧ ತಂದುಕೊಂಡಿಲ್ಲ. ಪರವಸ್ತು ಸ್ವಯಂ ಸಿದ್ಧವಿದ್ದಾಗ ಮಾತ್ರ ಅದರಿಂದ ಜಗತ್‌ಸೃಷ್ಟಿಗೆ ಕಾರಣವೂ ಬೋಧವಾಗುತ್ತದೆ. ಆದರೆ ಪ್ಲೇಟೋನ 'ಭಾವನೆಗಳು' ಹಾಗಿಲ್ಲದಿರುವುದನ್ನು ಗಮನಿಸಬೇಕು.

ದೃಶ್ಯ ಜಗತ್ತು ಅಸ್ಥಿರ, ಅಸತ್ಯ ಎಂದು ಹೆರಾಕ್ಲೈಟಸ್ ಹೇಳುವುದನ್ನು ಪ್ಲೇಟೋ ಒಪ್ಪುತ್ತಾನೆ. ಬಸವಣ್ಣನವರಿಗೆ ಇದು ಒಪ್ಪಿತವಲ್ಲ. ಶಕ್ತಿವಿಶಿಷ್ಟ ನಿತ್ಯಪರಿಪೂರ್ಣ ವಸ್ತುವಿನಿಂದ ಹುಟ್ಟಿದ ಜಗತ್ತು ಕೂಡ ಸತ್ಯನಿತ್ಯವೆಂದು ಬಸವಣ್ಣನವರು ಪ್ರತಿಪಾದಿಸುತ್ತಾರೆ. ಇದರಿಂದ ಪ್ಲೇಟೋನದು ದ್ವೈತವಾದರೆ, ಬಸವಣ್ಣನವರದು ಅದ್ವೈತ ಅಥವಾ ಶಕ್ತಿವಿಶಿಷ್ಟಾದ್ವೈತವಾಗುತ್ತದೆ.

ಆತ್ಮ ತತ್ವವನ್ನು ಕುರಿತಂತೆ ಪ್ಲೇಟೋ ಕೆಲವು ಮಾತುಗಳನ್ನು ಹೇಳಿದ್ದಾನೆ. ಅವನ ಪ್ರಕಾರ 'ಆತ್ಮ' ಅಮರ. ಬಸವಣ್ಣನವರಿಗೂ ಇದು ಒಪ್ಪಿತವೇ. ಆದರೆ ಆ ಆತ್ಮ ಭಾವನಾಲೋಕಕ್ಕೆ ಸಂಬಂಧಿಸಿದ್ದೆಂದು ಹೇಳುವ ಪ್ಲೇಟೋ ಅದು ಕ್ರಿಯಾರಹಿತವೆಂದು ವಾದಿಸುತ್ತಾನೆ. ಇದು ಸಾಂಖ್ಯದರ್ಶನದ ಪ್ರತಿಪಾದನೆಯಂತಿದೆ.

ಆದರೆ ಬಸವಣ್ಣನವರ ಅಭಿಪ್ರಾಯ 'ಆತ್ಮತತ್ವ'ವನ್ನು ಕುರಿತಂತೆ ಹಾಗಿಲ್ಲ. ಅವರ ಪ್ರಕಾರ 'ಆತ್ಮ' (ಕ್ರಿಯಾ) ಶಕ್ತಿಯುಳ್ಳದ್ದಾಗಿದೆ. ಆಧುನಿಕ ವಿಜ್ಞಾನಿಗಳಿಗೆ ಕೂಡ ಇದು ಒಪ್ಪಿತ.

ಪ್ಲೇಟೋ ಪುನರ್ಜನ್ಮವನ್ನು ಒಪ್ಪುತ್ತಾನೆ. ಅದಕ್ಕೆ ಆತ್ಮ 'ಭಾವನೆ'ಗಳಿಂದ ಕೂಡಿತ್ತು. ಈ ಜನ್ಮದಲ್ಲಿ ಅವು ಮರೆತುಹೋಗಿವೆ. ಆದರೆ ಜಗತ್ತಿನಲ್ಲಿಯ ವಸ್ತುಗಳನ್ನು ನೋಡುವುದರಿಂದ 'ಭಾವನೆ'ಗಳು ಆತ್ಮಕ್ಕೆ ನೆನಪಾಗುತ್ತವೆ. ಹೀಗೆ ಪ್ಲೇಟೋ ನೆನಪಿನ ಸಹಾಯದಿಂದ ಹಿಂದಣ ಜನ್ಮದ ಅಸ್ತಿತ್ವವನ್ನು ಸ್ಥಾಪಿಸಲು ಪ್ರಯತ್ನಿಸಿದ್ದಾನೆ.

ಬಸವಣ್ಣನವರು ಹಿಂದಣ ಜನ್ಮವನ್ನು ತಮ್ಮ ಹಲವಾರು ವಚನಗಳಲ್ಲಿ ಉಲ್ಲೇಖಿಸಿದ್ದಾರೆ. ಇದರಿಂದ ಅವರು ಹಿಂದಣ ಜನ್ಮವನ್ನು ಒಪ್ಪುತ್ತಾರೆಂಬುದು ಸ್ಪಷ್ಟವಾಗುತ್ತದೆ. ಆದರೆ ಈ ಜನ್ಮದಲ್ಲಿ ವೀರಶೈವಾಚರಣೆಯ ಮೂಲಕ ಅರ್ಥಾತ್ ಅದು ಪ್ರತಿಪಾದಿಸುವ ಷಟ್‌ಸ್ಥಲ ಮಾರ್ಗದಲ್ಲಿ ನಡೆಯುವ ಮೂಲಕ ಆತ್ಮವು ಪರಮಾತ್ಮನಲ್ಲಿ ಬೆರೆತುಹೋಗುವುದರಿಂದ ಅದಕ್ಕೆ ಪುನರ್ಜನ್ಮದ ಪ್ರಮೇಯವೇ ಉಂಟಾಗುವುದಿಲ್ಲವೆಂದು ಬಸವಣ್ಣನವರು ತಿಳಿಸುತ್ತಾರೆ.

ಆತ್ಮ ಪರಲೋಕಕ್ಕೆ ಸಂಬಂಧಿಸಿದ್ದೆಂದು ಪ್ಲೇಟೋನ ನಂಬಿಕೆ. ಇಹಲೋಕ ಪಾಪಮಯವೆಂದೂ ಅವನು ಹೇಳುತ್ತಾನೆ. ಇಂತಹ ಪಾಪಮಯ ಲೋಕದಿಂದ 'ಆತ್ಮ' ದೇವರ ಸನ್ನಿಧಿಗೆ ಹೋಗಬೇಕು. ಪರಮಾತ್ಮನ ಜ್ಞಾನ ಪಡೆಯುವುದರಿಂದ ಮಾತ್ರ ಅದು ಸಾಧ್ಯ. ಅದೇ ಸದ್ಗುಣವೆಂಬ ಅಭಿಪ್ರಾಯ ಅವನದು.

ಇಹಲೋಕ ಪಾಪಮಯವೆಂಬುದನ್ನೂ ಅದು ತ್ಯಾಜ್ಯವೆಂಬುದನ್ನೂ ಬಸವಣ್ಣನವರು ಒಪ್ಪುವುದಿಲ್ಲ. ಅವರ ದೃಷ್ಟಿಯಲ್ಲಿ ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ. ಇಲ್ಲಿ

ಸಲ್ಲುವವರು ಅಲ್ಲಿಯೂ ಸಲ್ಲುತ್ತಾರೆಂಬ ಗಟ್ಟಿ ನಂಬಿಕೆ ಬಸವಣ್ಣನವರದು. ದೇವರ ಸಾನ್ನಿಧ್ಯವಿರುವ ಮತ್ತೊಂದು ಲೋಕದ ಪರಿಕಲ್ಪನೆಯನ್ನೇ ಬಸವಣ್ಣನವರು ನಿರಾಕರಿಸುತ್ತಾರೆ.

ಇಹಲೋಕ ಪಾಪಮಯವೆಂಬ ಪ್ಲೇಟೋನ ಮೊದಲಿನ ಕಲ್ಪನೆ ತದನಂತರದ ದಿನಗಳಲ್ಲಿ ಬದಲಾವಣೆಗೊಂಡಂತೆ ತೋರುತ್ತವೆ. "ನೈತಿಕ ವರ್ತನೆಯು ಇಹ–ಪರ ಸುಖದಾಯ" ಎಂಬ ಅವನ ಮಾತಿನಲ್ಲಿ ಅದನ್ನು ಗುರುತಿಸಬಹುದಾಗಿದೆ.

'ಪ್ರೇಮ' ಅಥವಾ 'ಪ್ರೀತಿ'ಯ ಬಗೆಗಿನ ಪ್ಲೇಟೋನ ಅಭಿಪ್ರಾಯಗಳು ಬಸವಣ್ಣನವರ ಭಕ್ತಿ ಅಥವಾ ಭಕ್ತನ ಬಗೆಗಿನ ಅಭಿಪ್ರಾಯಗಳಿಗೆ ಹೆಚ್ಚು ಹೊಂದಿಕೊಳ್ಳುವಂತೆ ತೋರುತ್ತದೆ. ಪ್ಲೇಟೋ ಪ್ರಕಾರ 'ಪ್ರೇಮ' ಎಂದರೆ ಅಪರಿಪೂರ್ಣತೆಯಿಂದ ಪರಿಪೂರ್ಣತೆಯತ್ತ ಸಾಗುವ ಮತ್ತು ಅದನ್ನು ಹೊಂದುವ ಇಚ್ಛೆ ಎಂದು ಹೇಳಬಹುದಾಗಿದೆ. ಇಂಥ ಇಚ್ಛೆ ಅಧಿಕವಾಗುತ್ತ ಹೋಗಿ ಕೊನೆಗೆ ಅದು ಧಾರ್ಮಿಕ ವಲಯದಲ್ಲಿ ಸದ್ವಸ್ತುವಿನ ಬಗೆಗಿನ ಪ್ರೇಮವಾಗಿ ಪರಿವರ್ತನೆಗೊಂಡಾಗ ಮನುಷ್ಯ ಅಮರತ್ವ ಸ್ಥಿತಿಯನ್ನು ತಲುಪುತ್ತಾನೆ. ಇಂತಹ ಅವನ ಅಭಿಪ್ರಾಯಗಳನ್ನು ಪರಿಶೀಲಿಸಿದಾಗ ಪ್ಲೇಟೋ ಹೇಳುವ "ಪ್ರೇಮ" ಪಾರಮಾರ್ಥಿಕವೆಂಬುದು ವಿದಿತವಾಗುತ್ತದೆ. ಅದರ ಅಂತಿಮ ಧ್ಯೇಯ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಳ್ಳುವುದು, ತನ್ಮೂಲಕ ಅಮರತ್ವ ಪಡೆಯುವುದೇ ಆಗಿದೆ.

ಆತ್ಮ, ಬುದ್ಧಿ, ಇಂದ್ರಿಯ, ಮನ ಮತ್ತು ಶರೀರ–ಇವುಗಳನ್ನು ಕುರಿತು ಪ್ಲೇಟೋ ಹೇಳಿರುವ ಮಾತುಗಳು ಮನನೀಯವಾಗಿವೆ. ಅವನ ಪ್ರಕಾರ "ಆತ್ಮವು ರಥಿ, ಬುದ್ಧಿ ಸಾರಥಿ, ಇಂದ್ರಿಯಗಳು ಕುದುರೆಗಳು, ಶರೀರಿವೇ ರಥ, ಮನಸ್ಸು ಕಡಿವಾಣ". ಇನ್ನೂ ಮುಂದುವರಿದು ಒಂದುವೇಳೆ ಸಾರಥಿ ಬಲಿಷ್ಠನಾಗಿರದಿದ್ದರೆ ಇಂದ್ರಿಯಗಳೆಂಬ ಕುದುರೆಗಳು ಅಡ್ಡ ಹಾದಿ ಹಿಡಿಯುವ ಸಾಧ್ಯತೆ ಅಧಿಕವಾಗುತ್ತದೆ. ಅದರಿಂದ ಮನಸ್ಸೆಂಬ ಕಡಿವಾಣದಿಂದ ಅವುಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದು ತುಂಬಾ ಮುಖ್ಯ. ಅವನ ಇಂತಹ ಮಾತುಗಳನ್ನು ಓದಿದಾಗ ಕಠೋಪನಿಷತ್ತಿನಲ್ಲಿ ಬರುವ "ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ಚ" ಎಂಬಂತಹ ಶ್ಲೋಕಗಳು ನೆನಪಿಗೆ ಬರುತ್ತವೆ. ಅವೆರಡರಲ್ಲಿಯೂ ಅದೆಂತಹ ಸಾಮ್ಯ! ಪ್ಲೇಟೋ ಒಂದೆಡೆ ಇಂದ್ರಿಯ ಸುಖದ ಮೂಲದಲ್ಲಿ ಬಯಕೆ ಇರುವುದರಿಂದ ಅದು ಪರಿಣಾಮಗಳಲ್ಲಿ ದುಃಖದಾಯಿಯಾಗುತ್ತದೆಂದು ಹೇಳಿರುವಂತೆ ತಿಳಿದು ಬರುತ್ತದೆ.

ಬಸವಣ್ಣನವರು ಇಂದ್ರಿಯಗಳ ಮೂಲಕ ನಡೆಯುವ ವಿಷಯ ಭೋಗವನ್ನು ಎಲ್ಲರೂ ನಿಲ್ಲಿಸುವುದು ಅಸಾಧ್ಯವಾದ ಮಾತೆಂದು ತಿಳಿದಿದ್ದರು. ಆದುದರಿಂದ ವಿಷಯಸುಖವನ್ನು ಅನುಭವಿಸುವ ಹೊಸ ವಿಧಾನವೊಂದನ್ನು ಕುರಿತು ಆಲೋಚಿಸಿದರು. ಅದೇ ಅರ್ಪಣ ವಿಧಾನ. ಅರ್ಪಣ ವಿಧಾನದಲ್ಲಿ ವಿಷಯ ಪದಾರ್ಥಗಳನ್ನು ಲಿಂಗಕ್ಕೆ ಅರ್ಪಿಸಿ, ಪ್ರಸಾದ ರೂಪದಲ್ಲಿ ಅವುಗಳನ್ನು ಭೋಗಿಸಲು ತಿಳಿಸಲಾಗಿದೆ. ಪದಾರ್ಥವನ್ನು ಪ್ರಸಾದವಾಗಿಸಿ ಸ್ವೀಕರಿಸುವ ಕ್ರಮವನ್ನು "ಲಿಂಗ ಭೋಗೋಪಭೋಗ" ಎಂದು ಕರೆಯುತ್ತಾರೆ. ಇಂದ್ರಿಯ ಸುಖವನ್ನು ಇಲ್ಲಿ ಪ್ರಸಾದ ರೂಪದಲ್ಲಿ ಅನುಭವಿಸುವುದರಿಂದ ಪರಿಣಾಮದಲ್ಲಿ ಅದು ದುಃಖದಾಯಿಯಾಗುವ ಪ್ರಮೇಯವೇ ಇರುವುದಿಲ್ಲ.

ಮನುಷ್ಯನ ಶ್ರೇಯಸ್ಸು ಹೆಚ್ಚಾಗಿ ಜ್ಞಾನಕ್ಕೆ ಸಂಬಂಧಿಸಿದೆ ಎಂದು ಪ್ಲೇಟೋ ಅಭಿಪ್ರಾಯ ಪಡುತ್ತಾನೆ. ಇದರಿಂದ ಅವನು ಜ್ಞಾನಕ್ಕೆ ಪ್ರಾಧಾನ್ಯ ಕೊಟ್ಟಿರುವುದು ವಿದಿತವಾಗುತ್ತದೆ.

ಬಸವಣ್ಣನವರು ಜ್ಞಾನ ಕ್ರಿಯೆಗಳೆರಡಕ್ಕೂ ಸಮಾನ ಪ್ರಾಧಾನ್ಯವೀಯುತ್ತಾರೆ. ಜ್ಞಾನವಿಲ್ಲದ ಕ್ರಿಯೆ, ಕ್ರಿಯೆಯಿಲ್ಲದ ಜ್ಞಾನ ಎರಡೂ ನಿಷ್ಫಲವೆಂಬ ಅಭಿಪ್ರಾಯ ಅವರದು. ಅವೆರಡರ ಸಮನ್ವಯವನ್ನು ನಾವು ಬಸವಣ್ಣನವರಲ್ಲಿ ಕಾಣುತ್ತೇವೆ.

"ನಾವು ಸತ್ಕಾರ್ಯವನ್ನು ಸತ್ಕಾರ್ಯಕ್ಕಾಗಿಯೇ ಮಾಡಬೇಕು. ಫಲಾಪೇಕ್ಷೆಗಾಗಿ ಮಾಡಬಾರದು. ಸದ್ಗುಣವೇ ಸದ್ಗುಣದ ಪ್ರತಿಫಲ. ನ್ಯಾಯವಂತನೂ ನೀತಿವಂತನೂ ಸದ್ಗುಣಿಯೂ ಆಗಿರುವವನೇ ನಿಜಸುಖಿ. ಜೀವನದ ಸರ್ವವಿಧದ ಸುಸ್ಥಿತಿಯೇ ಸುಖ. ಅಂಥ ಸುಸ್ಥಿತಿಯನ್ನು ತಂದುಕೊಳ್ಳುವುದೇ ಜೀವನದ ಧ್ಯೇಯವಾಗಬೇಕು" ಎಂಬಂತಹ ಪ್ಲೇಟೋನ ಈ ಮಾತುಗಳು ಬಹುತೇಕ ಎಲ್ಲರಿಗೂ ಒಪ್ಪಿಗೆಯಾಗುವಂತಹವೇ ಆಗಿವೆ.

ಬಸವಣ್ಣನವರಿಗೂ ಇವು ಒಪ್ಪಿತವೇ. ಆದರೆ ಸತ್ಕಾರ್ಯ ಅಥವಾ ಸತ್ಕಾರ್ಯಕ್ಕೆ ಸಂಬಂಧಿಸಿದಂತೆ ಅವರ ವಚನಗಳಲ್ಲಿ ಬಂದಿರುವುದನ್ನು ಪರಿಶೀಲಿಸಿದಾಗ ಬಸವಣ್ಣನವರು ಈ ವಿಚಾರದಲ್ಲಿ ಇನ್ನೂ ಮುಂದುವರಿದಿರುವುದು ವಿದಿತವಾಗುತ್ತದೆ. ಅವರು ಕಾಯಕಕ್ಕೆ ಆಧ್ಯಾತ್ಮಿಕ ಸ್ಪರ್ಶವನ್ನಿತ್ತಿರುವುದನ್ನು ಪರಾಮರ್ಶಿಸಿದಾಗ ಅದು ನಮ್ಮ ತಿಳಿವಳಿಕೆಗೆ ಬರುತ್ತದೆ. ಸತ್ಕಾರ್ಯದಿಂದ ಬಂದುದನ್ನು ಸತ್ಕಾರ್ಯಕ್ಕೆ ಎಂದರೆ ಸಮಾಜಕ್ಕೆ ಅರ್ಪಿಸಬೇಕೆಂಬ ಬಸವಣ್ಣನವರ ವಿಚಾರ ಪ್ಲೇಟೋವಿನ "ಸತ್ಕಾರ್ಯಕ್ಕಾಗಿಯೇ ಮಾಡಬೇಕೆಂಬ" ವಿಚಾರಕ್ಕೆ ಹೊಂದಾಣಿಕೆಯಾಗುತ್ತದಾದರೂ ಆ ಸತ್ಕಾರ್ಯಗಳಾವುವೆಂಬುದನ್ನು ಪ್ಲೇಟೋ ಸ್ಪಷ್ಟಪಡಿಸಿಲ್ಲ. ಅವು ಲೋಕೋಪಕಾರದ ಕಾರ್ಯಗಳೇ ಆಗಿರಬೇಕೆಂದು ಗ್ರಹಿಸಬಹುದಾಗಿದೆ. ಆದರೆ ಬಸವಣ್ಣನವರ ಸತ್ಕಾರ್ಯ ಪಾರಮಾರ್ಥಿಕಕ್ಕೆ ಸಂಬಂಧಿಸಿರುವುದನ್ನೂ ಮರೆಯಲಾಗದು. ಸದ್ಗುಣ, ಸುಸ್ಥಿತಿಗಳೇ ಜೀವನದ ಧ್ಯೇಯವಾಗಬೇಕೆಂಬ ಪ್ಲೇಟೋನ ಮಾತುಗಳು ಲೌಕಿಕ ಜೀವನಕ್ಕೆ ಸಂಬಂದಿಸಿದವುಗಳೆಂದು ನನ್ನ ಅನಿಸಿಕೆ. ಆದರೆ ಬಸವಣ್ಣನವರ ಪ್ರಕಾರ ಜೀವನದ ಚರಮಧ್ಯೇಯ ಲಿಂಗಾಂಗ ಸಾಮರಸ್ಯವಾಗಿದ್ದು, ಅದು ಪಾರಮಾರ್ಥಿಕಕ್ಕೆ ಸಂಬಂಧಿಸಿದ್ದೆಂಬುದು ನೆನಪಿನಲ್ಲಿಡಬೇಕು.

ಸರಕಾರದ ಬಗ್ಗೆ, ಸಮಾಜ ವ್ಯವಸ್ಥೆಯ ಬಗ್ಗೆ ಪ್ಲೇಟೋ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಆಲೋಚನೀಯವಾಗಿವೆ. ಪ್ರಜಾರಾಜ್ಯಕ್ಕಿಂತ ಏಕವ್ಯಕ್ತಿ ಪ್ರಭುತ್ವವೇ ಒಳ್ಳೆಯದೆಂದು ಅವನು ಹೇಳಿದ್ದಾನೆ. ಇದರ ಹಿಂದೆ ಯಾವುದೋ ಕಾರಣವಿರಬೇಕೆನಿಸುತ್ತದೆ.

ಬಸವಣ್ಣನವರು ಏಕವ್ಯಕ್ತಿ (ಬಿಜ್ಜಳ)ಯ ಪ್ರಭುತ್ವವನ್ನು ಒಪ್ಪಿಕೊಂಡು ಅವನಲ್ಲಿ ಅರ್ಥಮಂತ್ರಿಗಳಾಗಿದ್ದರು. ದೊರೆಯಾದವನು ಪ್ರಜಾಭಿಪ್ರಾಯಕ್ಕೆ, ಅವರ ಕ್ಷೇಮಾಭಿವೃದ್ಧಿಗೆ ಬದ್ಧನಾಗಿರಬೇಕೆಂಬ ಅಭಿಪ್ರಾಯ ಅವರದಾಗಿದ್ದಿತು. ರಾಜಸತ್ತೆ ತನ್ನ ಬದ್ಧತೆಯನ್ನು ಮೀರಿದರೆ ಅದನ್ನು ಎದುರಿಸುವ ದಿಟ್ಟತನ ಅವರಲ್ಲಿದ್ದುದನ್ನು ಅವರ ಕೆಲವು ವಚನಗಳು ಸಾಬೀತುಪಡಿಸುತ್ತವೆ. "ಆನೆ ಅಂಕುಶಕ್ಕೆ ಅಂಜುವುದೇ ಅಯ್ಯಾ" ಎಂದು ಆರಂಭವಾಗುವ ವಚನದಲ್ಲಿ ಅವರು "ಆನೀ ಬಿಜ್ಜಳಂಗಂಜುವೆನೆ ಅಯ್ಯಾ" ಎಂದಿರುವುದನ್ನು ಇಲ್ಲಿ ಗಮನಿಸಬಹುದು.

"ವ್ಯಕ್ತಿಯ ಸುಖಕ್ಕಿಂತ ಸಮಾಜದ ಸುಖ ಸರಕಾರದ ಧ್ಯೇಯವಾಗಿರಬೇಕು. .... ವಿದ್ಯಾಪ್ರಸಾರ ಪ್ರಭುತ್ವದ ಮೊದಲ ಕರ್ತವ್ಯ" ಮುಂತಾದ ಪ್ಲೇಟೋನ ಅಭಿಪ್ರಾಯಗಳು ಬಸವಣ್ಣನವರಿಗೂ ಒಪ್ಪಿತವೇ. ಸಮಾಜದಲ್ಲಿ ಸುಖ-ಶಾಂತಿಗಳನ್ನು ತರುವ ಉದ್ದೇಶದಿಂದಲೇ

ಅವರು ಪಟ್ಟಭದ್ರರ ವಿರುದ್ಧ ಹೋರಾಟ ನಡೆಸಿದರು. ವಿದ್ಯಾಭ್ಯಾಸದಿಂದ ವಂಚಿತರಾಗಿದ್ದ ಕೆಳಗಿನ ವರ್ಗದವರಿಗೆ ಹೆಣ್ಣುಮಕ್ಕಳಿಗೆ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು, ಸ್ವತಂತ್ರ ರೀತಿಯಲ್ಲಿ ಅವರು ವಿಚಾರ ಮಾಡುವಂತೆ ಪ್ರೇರೇಪಿಸಿದರು. ಎಂತಲೇ ಆ ಕಾಲದಲ್ಲಿ ಹಲವಾರು ಜನ ಕೆಳವರ್ಗದವರು ಮತ್ತು ಸ್ತ್ರೀಯರು ವಿಚಾರಪೂರ್ಣ ವಚನಗಳನ್ನು ಬರೆಯುವುದು ಸಾಧ್ಯವಾಯಿತು.

ಪ್ಲೇಟೋ ಮೂರು ಸಾಮಾಜಿಕ ವಿಭಾಗಗಳನ್ನು ಪ್ರತಿಪಾದಿಸುತ್ತಾನೆ ಮತ್ತು ಅವುಗಳನ್ನು ಆತ್ಮನ ಮೂರು ಸ್ವರೂಪ ಹಾಗೂ ಮೂರು ಸ್ಥಿತಿಗಳನ್ನು ಆಧರಿಸಿ ಮಾಡಿರುವುದಾಗಿ ಸಮರ್ಥಿಸಿಕೊಳ್ಳುತ್ತಾನೆ. ಬುದ್ಧಿವಂತರು, ಶೂದ್ರರು ಮತ್ತು ಸಾಮನ್ಯರು ಇವೇ ಆ ಮೂರು ವಿಭಾಗಗಳು. ಬುದ್ಧಿವಂತರೇ ರಾಜ್ಯ ಭಾರ ನಡೆಸಲು ಸಮರ್ಥರು. ಆದುದರಿಂದ ಅವರು ರಾಜ್ಯ ಸೂತ್ರಗಳನ್ನು ಹಿಡಿಯಬೇಕು. ಶೂದ್ರರು ಶಕ್ತಿಶಾಲಿಗಳು. ಅವರು ರಾಜ್ಯವನ್ನು ಸಂರಕ್ಷಿಸಬೇಕು. ಸಾಮಾನ್ಯರು ವ್ಯಾಪಾರ ಇಲ್ಲವೆ ಸೇವಾ ವೃತ್ತಿಯನ್ನು ಮಾಡಬೇಕೆಂದು ಅವರವರ ಕರ್ತವ್ಯಗಳನ್ನು ನಿರ್ದೇಶಿಸಿದ್ದಾನೆ. ಧರ್ಮಶಾಸ್ತ್ರಕಾರ ಮನುವಿನ ಚಾತುರ್ವರ್ಣ ವ್ಯವಸ್ಥೆಯನ್ನು ಇದು ಹೋಲುತ್ತಿರುವುದನ್ನು ಗಮನಿಸಬೇಕು.

ವರ್ಣ ವ್ಯವಸ್ಥೆಯನ್ನು ನಖಶಿಖಾಂತ ವಿರೋಧಿಸುವ ಬಸವಣ್ಣನವರಿಗೆ ಇದು ಒಪ್ಪಿಗೆಯಾಗದು. ಮನು ವೃತ್ತಿಯನ್ನು ಜಾತಿಗೆ ತಳಕು ಹಾಕಿ, ವ್ಯಕ್ತಿಯ ವೃತ್ತಿ ಸ್ವಾತಂತ್ರ್ಯವನ್ನೇ ಕಸಿದುಕೊಂಡಿದ್ದಾನೆ.

ವ್ಯಕ್ತಿಯ ವೃತ್ತಿ ಮತ್ತು ಉದ್ಯೋಗಗಳಿಗೆ ಸಂಬಂಧಿಸಿದಂತೆ ಪ್ಲೇಟೋ ಹೇಳಿರುವ ಕೆಲವು ಮಾತುಗಳು ನಮಗೆ ವಿಚಿತ್ರವಾಗಿ ಕಾಣಿಸುತ್ತವೆ. ವ್ಯಕ್ತಿಯ ಸ್ಥಿತಿಗತಿಗಳನ್ನು ಪರೀಕ್ಷಿಸಿ ಅವನಿಗೆ ಉದ್ಯೋಗವನ್ನು ಸರಕಾರವೇ ಕೊಡಬೇಕು. ವ್ಯಕ್ತಿ ಸ್ವಯಂ ಆಗಿ ಉದ್ಯೋಗ ಹುಡುಕಿಕೊಳ್ಳಬಾರದು. ಮಕ್ಕಳನ್ನು ಹಡೆಯಲು ಸರಕಾರದ ಒಪ್ಪಿಗೆ ಬೇಕು. ಅಶಕ್ತ ಕೂಸುಗಳನ್ನು ನಾಶ ಮಾಡಬೇಕು. ಮಕ್ಕಳ ಸಂರಕ್ಷಣೆಯ ಭಾರ ಸರಕಾರದ್ದೇ ಹೊರತು ತಂದೆ–ತಾಯಿಗಳದಲ್ಲ. ಪ್ರಜೆಗಳಿಗೆ ಆಸ್ತಿ ಇರಬಾರದು. ಹೆಣ್ಣು–ಗಂಡುಗಳು ವಿವಾಹ ಬಂಧನಕ್ಕೊಳಗಾಗದೆ ಬೇಕಾದರೆ ಸ್ವೇಚ್ಛೆಯಿಂದ ಇರಬಹುದು. ಮಕ್ಕಳ ವಿದ್ಯಾಭ್ಯಾಸದ ಹೊಣೆ ಸರಕಾರದ್ದು. ಆರು ವರ್ಷಗಳವರೆಗೆ ಮಕ್ಕಳಿಗೆ ಪೋಷಣೆ ಒದಗಿಸುವ ಜೊತೆಗೆ ಅವರನ್ನು ಧಾರ್ಮಿಕ ಸಮಾರಂಭಗಳಿಗೆ ಕರೆದೊಯ್ಯುತ್ತಿರಬೇಕು. ಆರು ವರ್ಷಗಳ ನಂತರ ಬಾಲಕ–ಬಾಲಕಿಯರಿಗೆ ಪ್ರತ್ಯೇಕ ವಿದ್ಯಾಭ್ಯಾಸ ಮಾಡಿಸಬೇಕು. ವಿದ್ಯಾಭ್ಯಾಸದಲ್ಲಿ ಕುದುರೆ ಸವಾರಿ, ಬಿಲ್ಲುವಿದ್ಯೆ, ಸಂಗೀತ, ವ್ಯಾಯಾಮ ಇವು ಕಡ್ಡಾಯವಾಗಿರಬೇಕು. ಮೂವತ್ತು ವರ್ಷದ ನಂತರ ತತ್ವಶಾಸ್ತ್ರದ ಅಭ್ಯಾಸ ಆರಂಭಿಸಬೇಕು. ಅದನ್ನು ಬುದ್ಧಿವಂತರಿಗೆ ಮಾತ್ರ ಕೊಡಬೇಕು. ಪ್ಲೇಟೋ ಈ ಅಭಿಪ್ರಾಯಗಳನ್ನು ಪರಿಶೀಲಿಸಿದಾಗ ಕಮ್ಯುನಿಜಂಗೆ ಇವೇ ಮೂಲ ಸ್ತೋತ್ರವಾಗಿರಬೇಕೆನಿಸುತ್ತದೆ.

ಬಸವಣ್ಣನವರಿಗೆ ಪ್ಲೇಟೋನ "ವ್ಯಕ್ತಿ ಸ್ವಯಂ ಆಗಿ ಉದ್ಯೋಗ ಹುಡುಕಿಕೊಳ್ಳಬಾರದು. ಮಕ್ಕಳನ್ನು ಹಡೆಯಲು ಸರಕಾರದ ಒಪ್ಪಿಗೆ ಬೇಕು, ಅಶಕ್ತ ಕೂಸುಗಳನ್ನು ನಾಶ ಮಾಡಬೇಕು. ಪ್ರಜೆಗಳಿಗೆ ಆಸ್ತಿ ಇರಬಾರದು" ಇತ್ಯಾದಿ ವಿಚಾರಗಳೂ ಹಾಗೆಯೇ ಸ್ತ್ರೀಯರನ್ನು ಕುರಿತು ಹೇಳಿದ ಮಾತುಗಳೂ ಒಪ್ಪಿಗೆಯಾಗಲಾರವೆನಿಸುತ್ತದೆ.

ಪ್ಲೇಟೋ ಮಾಡಿದ ಒಂದು ಬಹುದೊಡ್ಡ ಕಾರ್ಯವೆಂದರೆ ಅಥೆನ್ಸ ನಗರದಲ್ಲಿ ತತ್ವಜ್ಞಾನಕ್ಕೆ ಸಂಬಂಧಿಸಿದಂತೆ ಅಕಾಡೆಮಿಯನ್ನು ಸ್ಥಾಪಿಸಿದ್ದು. ಬಸವಣ್ಣನವರು ಸ್ಥಾಪಿಸಿದ ಅನುಭಾವ ಮಂಟಪ ಅದನ್ನು ಹೋಲುತ್ತದೆಂದು ಕೆಲವು ಜನ ವಿದ್ವಾಂಸರ ಹೇಳಿಕೆ. ಬಸವಣ್ಣ ಅನೇಕ ಶರಣರ ಮಧ್ಯೆಯಿದ್ದು, ಪ್ಲೇಟೋನಂತೆ ಕೃತಿ ರಚಿಸಿದ. ಪ್ಲೇಟೋನಿಗೆ ಸಾಕ್ರೆಟೀಸ ಇದ್ದಂತೆ ಬಸವಣ್ಣನವರಿಗೆ ಪ್ರಭುದೇವನಿದ್ದ.

❐

ಕನ್‌ಫ್ಯೂಸಿಯಸ್ : ಬಸವ

●

ಡಾ. ಬಿ.ವ್ಹಿ. ಮಲ್ಲಾಪುರ

ಚೀನಾದೇಶದ ಈ ಸುಪ್ರಸಿದ್ಧ ಸಂತ ಮತ್ತು ಬಸವ ಇಬ್ಬರೂ ಸರ್ವಸಮಾನತೆಯ ಬುನಾದಿಯ ಮೇಲೆ, ಆರೋಗ್ಯಕರ ಸಮಾಜನಿರ್ಮಾಣಕ್ಕೆ ಅರ್ಪಿತ ಮನೋಭಾವದಿಂದ ದುಡಿದ ದಾರ್ಶನಿಕರು.

ಬಸವಣ್ಣ ತನ್ನ ಕಾಲದ ಸಮಾಜದಲ್ಲಿ ರೂಢಿಯಲ್ಲಿದ್ದ ಅರ್ಥಹೀನ ಸಂಪ್ರದಾಯಗಳನ್ನು ಒಪ್ಪದೆ, ಅದರಲ್ಲಿಯ ಕುಂದು ಕೊರತೆಗಳನ್ನು ಎತ್ತಿತೋರಿಸಿ ಹೊಸ ಸಮಾಜವೊಂದಕ್ಕೆ ಶ್ರೀಕಾರ ಹಾಕಿ, ಇಡೀ ಮಾನವಕುಲದ ಉದ್ಧಾರಕ್ಕೆ ಮಾರ್ಗದರ್ಶಿಯಾಗಬಲ್ಲ ಸೂತ್ರಗಳನ್ನು ಜನತೆಯ ಮುಂದಿಟ್ಟ. ಚೀನಾದೇಶದಲ್ಲಿ ಕನ್‌ಫೂಸಿಯಸ್ (ಕ್ರಿಪೂ. ಆರನೆಯ ಶತಮಾನ) ಮಾಡಿದ್ದೂ ಕೂಡ ಇದನ್ನೇ. ಆದರೆ ಬಸವಾದಿಶರಣರ ಅನಂತರ ಅವರ ಅನುಯಾಯಿಗಳಲ್ಲಿ ಮಠ ಸಂಪ್ರದಾಯ ಬೆಳೆದು ಬಂದಂತೆ ಮತ್ತು ಏಸುವಿನ ಅನಂತರ ಕ್ರಿಶ್ಚಿಯನ್ ಧರ್ಮದಲ್ಲಿ ಚರ್ಚ ವ್ಯವಸ್ಥೆ ಹುಟ್ಟಿಕೊಂಡಂತೆ, ಕನ್‌ಫೂಸಿಯಸ್ ಅನುಯಾಯಿಗಳಲ್ಲಿ ಅಂಥದು ಕಾಣಿಸಿಕೊಂಡಂತೆ ತೋರುವುದಿಲ್ಲ. ಅವನದು ಒಂದು ಧಾರ್ಮಿಕ ವ್ಯವಸ್ಥೆಯೆನ್ನುವುದಕ್ಕಿಂತ ಒಂದು ನೈತಿಕ ವ್ಯವಸ್ಥೆಯೆನ್ನುವುದು ಹೆಚ್ಚು ಸೂಕ್ತವೆನಿಸುತ್ತದೆ.

ಬಸವಣ್ಣ ಒಬ್ಬ ಭಕ್ತಿಭಂಡಾರಿಯಾಗಿದ್ದರೂ ಅದನ್ನು ಹೇಳಿಕೊಳ್ಳದೆ 'ಭಕ್ತಿಯಿಲ್ಲದ ಬಡವ', 'ಎನಗಿಂತ ಕಿರಿಯರಿಲ್ಲ' ಎಂದು ಹೇಳಿಕೊಂಡಂತೆ, ದೈವೀ ಸಂತತನ ಒಳ್ಳೆಯ ಮಾನವೀಯತೆ ತನ್ನಿಂದ ಬಹುದೂರ ಎಂದು ಕನ್‌ಫ್ಯೂಸಿಯಸ್ ಹೇಳಿಕೊಂಡಿದ್ದಾನೆ. ಅವನ 'ಅನಾಲೆಕ್ಟ್ಸ್' (Analects) ಗಳಲ್ಲಿ ಈ ಅರ್ಥದ ಮಾತು ಬರುತ್ತದೆ. ಆದರೆ ಅವನ ಅನಂತರ ಬಂದವರು ಅವನನ್ನು ದೇವತ್ವಕ್ಕೆ ಏರಿಸಿ ಅವನೊಬ್ಬ 'ಪ್ರಥಮ ಪವಿತ್ರಾತ್ಮ', 'ವಿಶ್ವದ ತಂದೆ' ಎಂದು ಕೊಂಡಾಡಿದ್ದಾರೆ. ಬಸವಣ್ಣನವರ ವಿಷಯದಲ್ಲಿಯೂ ಹೀಗೆಯೇ ಆಗಿದೆ.

ಮಾನವನ ನೈಜ ಆನಂದ ಕೇವಲ ಭೌತಿಕ ಸಮೃದ್ಧಿಯನ್ನು ಅವಲಂಬಿಸದೆ ಅವನ ನೈತಿಕ ಪ್ರಗತಿಯನ್ನೂ ಅವಲಂಬಿಸಿದೆ ಎಂಬ ಮಾತಿನಲ್ಲಿ ಇಬ್ಬರೂ ಗಟ್ಟಿ ನಂಬಿಕೆಯಿಟ್ಟವರು, ಭೌತಿಕಸಮೃದ್ಧಿ ಅನೇಕ ಬಾರಿ ಮಾನವನನ್ನು ತಪ್ಪುದಾರಿಗೆಳೆದು ಅವನ ಆಧ್ಯಾತ್ಮಿಕ ಪ್ರಗತಿಗೆ

ಮಾರಕವಾಗುತ್ತದೆ. ಆದುದರಿಂದ ಇಬ್ಬರೂ ತಮ್ಮ ಕಾಲದ ಸಮಾಜದಲ್ಲಿ ಎದ್ದುಕಾಣುತ್ತಿದ್ದ ನೈತಿಕ ಅಧಃಪತನವನ್ನು ಹೋಗಲಾಡಿಸಲು ಮನಃಪೂರ್ವಕ ದುಡಿದರು.

ಕನ್‌ಫ್ಯೂಸಿಯಸ್‌ನ ನೀತಿಸಂಹಿತೆ ಅವನ ಅನಾಲೆಕ್ಟ್ಸ್‌ಗಳಲ್ಲಿ ಕಂಡುಬಂದರೆ, ಬಸವನದು ಅವನ 'ವಚನ'ಗಳಲ್ಲಿ ಅವತರಣಗೊಂಡಿದೆ. ನೈತಿಕನೆಲೆಗಟ್ಟಿಲ್ಲದೆ ಸಾಮಾಜಿಕ ಏಕತೆ ಸಾಧ್ಯವಾಗದೆಂಬುದನ್ನು ಮನಗಂಡಿದ್ದ ಇಬ್ಬರೂ ತಾವು ಪ್ರತಿಪಾದಿಸುವ ಜೀವನದ ಆತ್ಯಂತಿಕ ಧ್ಯೇಯಸಾಧನೆ ಅತ್ಯಂತ ಕಠಿಣವಾಗಿದ್ದರೂ ಮಾತು-ಕ್ರಿಯೆ ಮತ್ತು ವಿಚಾರಗಳಲ್ಲಿ ನೈತಿಕತೆ ಇದ್ದರೆ ಅದು ಸಾಧ್ಯವಾಗಿಯೇ ತೀರುತ್ತದೆಂದು ಬೋಧಿಸಿದರು.

ಹೀಗೆ ಕನ್‌ಫ್ಯೂಸಿಯಸ್ ಮತ್ತು ಬಸವ ಇಬ್ಬರೂ ತಮ್ಮ ಬೋಧನೆಯಲ್ಲಿ ನೈತಿಕತೆಗೆ ಹೆಚ್ಚಿನ ಮಹತ್ವ ಕೊಟ್ಟಿದ್ದರೂ ಅವರಿಬ್ಬರ ಆತ್ಯಂತಿಕ ಧ್ಯೇಯಗಳು ಭಿನ್ನವಾಗಿರುವುದು ಗಮನಿಸಬೇಕಾದ ಅಂಶ. ಬಸವನ ದೃಷ್ಟಿಯಲ್ಲಿ ಜೀವನದ ಚರಮಧ್ಯೇಯ 'ಲಿಂಗಾಂಗಸಾಮರಸ್ಯ'. ಅದನ್ನು ಇಲ್ಲಿ, ಈ ಲೋಕದಲ್ಲಿ ಜೀವಿಸಿದ್ದಾಗಲೇ ಭಕ್ತಿ, ಸಚ್ಚಾರಿತ್ರ, ಸರ್ವಸಮಾನ ದೃಷ್ಟಿ, ಸೇವಾ ಮನೋಭಾವನೆ ಹಾಗೂ ಧ್ಯಾನಾದಿಗಳಿಂದ ಪಡೆಯಲು ಸಾಧ್ಯವೆಂಬುದು ಬಸವಣ್ಣನ ನಂಬಿಕೆಯಾಗಿತ್ತು. ಕಳ್ಳದ, ಕೊಲ್ಲದ, ಹುಸಿನುಡಿಯದಂತಹ ನೀತಿಗಳ ಪಾಲನೆಯಿಂದ ಅಂತರಂಗ ಬಹಿರಂಗ ಶುದ್ಧಿಯ ಜೊತೆಗೆ ಧ್ಯಾನಾದಿಗಳಿಂದ ದೇವನನ್ನು ಒಲಿಸುವುದು ಹಾಗೂ ಅವನಲ್ಲಿ ಬೆರೆತು ಹೋಗುವುದು ಸಾಧ್ಯವೆಂದು ಅವರು ಪ್ರತಿಪಾದಿಸಿದರು.

ಕನ್‌ಫ್ಯೂಸಿಯಸ್‌ಗೆ ದೇವರ ಅಸ್ತಿತ್ವದಲ್ಲಿ ಹೆಚ್ಚಿನ ನಂಬಿಕೆ ಇರಲಿಲ್ಲ. 'ಬುದ್ಧನಂತೆ ಅವನು ಪುರುಷರೂಪಿ ದೇವರ ಹಾಗೂ ಅವಿನಾಶಿ ಆತ್ಮದ ವಿಚಾರಗಳನ್ನು ತೆಗೆದು ಹಾಕಿದ್ದನು (Charles T. Gorham : Ethics of Great Religion ಪುಟ – ೪೬). ಕನ್‌ಫ್ಯೂಸಿಯಸ್ ದೃಷ್ಟಿಯಲ್ಲಿ ವ್ಯಕ್ತಿ ಪರಿಪೂರ್ಣತೆಯ ಕಡೆ ಎಷ್ಟು ಎತ್ತರಕ್ಕೆ ಹೋಗಬಲ್ಲನೊ (ಅವನಿಗೆ ಆ ಶಕ್ತಿಯಿದೆ) ಅಷ್ಟು ಎತ್ತರಕ್ಕೆ ಹೋಗುವುದೇ ಜೀವನದ ಗುರಿ. ಆ ಒಂದು ಹಂತದಲ್ಲಿ ಜೀವ ವಿಶ್ರಾಂತಿ ಪಡೆಯತ್ತ ಇರಬಹುದು. ಜೈನಧರ್ಮದ ವಿಚಾರಗಳಿಗೆ ಇದು ಹೊಂದಿಕೆ ಯಾಗುತ್ತದೆ. ಜೀವ ಮೂಲತಃ ಶುದ್ಧವಾದುದು. ಅದು ಸ್ವರ್ಗದ ಕಾಣಿಕೆ. ಅದರ ಸ್ವಭಾವ ಒಳ್ಳೆಯತನ. ಪರಿಪೂರ್ಣತೆಯತ್ತ ಸಾಗುತ್ತಿರುವಾಗ ಸರಿಯಾದ ಮಾರ್ಗದಲ್ಲಿ ಹೋಗುತ್ತಿರುವಾಗ ಅದು ತನ್ನ ಅತ್ಯುನ್ನತ ಹಂತವನ್ನು ತಲುಪಲು ಅದಕ್ಕೆ ಅವಕಾಶ ಒದಗಿಸಬೇಕು. ಜೀವನ ಅಂಥ ಪ್ರಯತ್ನದಲ್ಲಿ ಯಾವುದೇ ದೇವತೆಯ ಅಗತ್ಯ ಅದಕ್ಕೆ ಬೇಕಾಗುವುದಿಲ್ಲ. ಜೀವನದಿಂದ ಪಲಾಯನ ಮಾಡಬೇಕಾಗಿಯೂ ಇಲ್ಲ. ಸಚ್ಚಾರಿತ್ರ, ಸದ್ಗುಣ, ಸುನೀತಿ ಇವುಗಳ ಪಥವಿಡಿದು ಆ ಎತ್ತರದ ಹಂತವನ್ನು ತಲುಪಬಹುದು.

ಬಸವಣ್ಣನ ದೃಷ್ಟಿಯಿಂದ ಹೇಳಬೇಕೆಂದರೆ ಕನ್‌ಫ್ಯೂಸಿಯಸ್ಸನು ಹೇಳುವ ಜೀವದ ಪರಿಪೂರ್ಣತೆಯ ಆ ಅತ್ಯುನ್ನತ ಹಂತವು ಜೀವವು ಶಿವನಲ್ಲಿ ಬೆರೆಯುವುದಕ್ಕೆ ಒಂದು ಸಾಧನವೆನ್ನಬಹುದು. ಆದರೆ ಇಬ್ಬರೂ ಹೇಳುವ ಜೀವನದ ಅಂತಿಮ ಧ್ಯೇಯಗಳು ನೈತಿಕ ಶಿಸ್ತಿಗೆ ಒಳಗಾಗದೆ ಸಾಧ್ಯವಾಗದೆಂಬುದನ್ನು ಎಲ್ಲರೂ ನೆನಪಿನಲ್ಲಿಡುವುದು ಮುಖ್ಯ.

ಜೀವ ತನ್ನ ಉದ್ದೇಶಿತ ಚರಮಗುರಿ ತಲುಪಲು ಚಾರಿತ್ರಶುದ್ಧಿ, ಶಿವನಲ್ಲಿ ಶ್ರದ್ಧೆ ಮತ್ತು ಭಕ್ತಿ ಎರಡೂ ಮುಖ್ಯವೆಂದು ಬಸವಣ್ಣ ಹೇಳಿದರೆ, ಕನ್‌ಫ್ಯೂಸಿಯಸ್ ನೈತಿಕ ವ್ಯವಸ್ಥೆಯಲ್ಲಿ ಶ್ರದ್ಧೆ

ಮುಖ್ಯವೆನ್ನುತ್ತಾನೆ. 'ನಾವು ಯಾವಾಗಲೂ ಅಸತ್ಯದಿಂದ, ಬಿರುಸು ಮಾತಾಡುವುದರಿಂದ, ಹಿಂದೆ ಆಡಿಕೊಳ್ಳುವುದರಿಂದ, ಚೇಷ್ಟೆ, ಹಾಸ್ಯ ಮಾಡುವುದರಿಂದ ದೂರವಿರಬೇಕು.... ಮೈಗಳ್ಳತನ, ಆಲಸ್ಯ ಮೊದಲಾದವು ಜೀವ ಎತ್ತರೆತ್ತರಕ್ಕೆ ಹೋಗಲು ಅಡಚಣೆಯುಂಟು ಮಾಡುತ್ತವೆ. ದುಡಿಮೆ ಶಾಪವಿಲ್ಲ, ಅದು ಜೀವನದ ಬಹುದೊಡ್ಡ ವರ. ಆದುದರಿಂದ ಸಮಾಜೋಪಕಾರಿಯಾದ ಯಾವುದಾದರೂ ಉದ್ಯೋಗದಲ್ಲಿ ತೊಡಗಿರಬೇಕು' ಎಂದು ಹೇಳುವ ಕನ್‌ಫ್ಯೂಸಿಯಸ್ ವಿಚಾರಗಳು ಬಸವಣ್ಣನಲ್ಲಿಯೂ ಕಂಡುಬರುತ್ತಿರುವುದು ಗಮನಿಸಬೇಕಾದ ಅಂಶ. ಉದಾಹರಣೆಗಾಗಿ ಬಸವಣ್ಣನ 'ಕಳಬೇಡ ಕೊಲಬೇಡ' ಎಂಬ ಸುಪ್ರಸಿದ್ಧ ವಚನವನ್ನು ಹಾಗೆಯೆ 'ಮೃದುವಚನಂಗಳೆ ಸಕಲ ಜಪಂಗಳಯ್ಯ', 'ಸದುವಿನಯವೆ ಸದಾಶಿವನ ಒಲುಮೆಯಯ್ಯಾ', 'ಕೋಪಿಮಜ್ಜನಕ್ಕೆರೆದರೆ ರಕ್ತದ ಧಾರೆ' ಎಂಬಂತಹ ಅವರ ಮಾತುಗಳನ್ನೂ ಪರಿಶೀಲಿಸಬೇಕು. ದೈಹಿಕ ದುಡಿಮೆಯನ್ನು, ಅದು ಸತ್ಯಶುದ್ಧವಾಗಿರಬೇಕೆಂಬುದನ್ನು, ವ್ಯಷ್ಟಿ-ಸಮಷ್ಟಿಗಳ ಒಳಿತಿಗಾಗಿ ಯಾವುದಾದರೂ ಒಂದು ಕಾಯಕ ಅವಶ್ಯ ಬೇಕೆಂಬುದನ್ನು ಬಸವಣ್ಣನೂ ಒಪ್ಪುತ್ತಾನೆ. ಇಲ್ಲಿ ಗಮನಿಸಬೇಕಾದ ಒಂದು ಮಹತ್ವದ ಅಂಶವೆಂದರೆ ದುಡಿಮೆ ಅಥವಾ ಕಾಯಕವನ್ನು ಬಸವಾದಿ ಶರಣರು ತತ್ವದ ಮಟ್ಟಕ್ಕೇರಿಸಿರುವುದು. ಆದರೆ ಕಾಯಕಕ್ಕೂ ಮುಕ್ತಿಗೂ ಸಂಬಂಧಕಲ್ಪಿಸಿ, ಕಾಯಕದಿಂದ ಕಾಯವನ್ನು ಕೈಲಾಸ ಮಾಡಿಕೊಳ್ಳಬಹುದೆಂದು ಹೇಳಿರುವುದು ಕನ್‌ಫ್ಯೂಸಿಯಸ್ಸನಲ್ಲಿ ಕಂಡುಬರುವುದಿಲ್ಲ. ಆತ್ಮಗಳ ವಲಸೆ, ಅವುಗಳ ಓಡಾಟ ಅಥವಾ ಜೀವಾತ್ಮನಿಗೊದಗುವ ಕಷ್ಟಕೋಟಲೆಗಳ ಪರಿಕಲ್ಪನೆ ಕನ್‌ಫ್ಯೂಸಿಯಸ್‌ಗೆ ಇರಲಿಲ್ಲ. ಆದುದರಿಂದ ಮುಕ್ತಿಯ ವಿಚಾರ ಅವನಲ್ಲಿ ಬರುವುದಿಲ್ಲ.

ಹೀಗೆ ಸರಿಯಾದ ಮನೋವೃತ್ತಿಯನ್ನು ಬೆಳೆಸಿಕೊಳ್ಳಲು ಇಬ್ಬರೂ ಒತ್ತುಕೊಟ್ಟಿದ್ದಾರೆ. ಏಕೆಂದರೆ ಅವರ ಪ್ರಕಾರ ಮನೋವೃತ್ತಿ ಸಾಧುವಾದುದಾಗಿದ್ದರೆ ಚಾರಿತ್ರಶುದ್ಧಿ ಸಾಧ್ಯವಾಗುತ್ತದೆ. ಆದುದರಿಂದ ಪರಸ್ಪರ ಪ್ರೀತಿ, ವಿಶ್ವಾಸ, ದಯೆ, ಸಹನೆ, ಅನುಕಂಪೆಯಂತಹ ಒಳ್ಳೆಯ ಮನೋಭಾವನೆಗಳನ್ನು ಬೆಳೆಸಿಕೊಳ್ಳಬೇಕೆಂಬ ಮಾತನ್ನು ಇಬ್ಬರಲ್ಲಿಯೂ ಕಾಣುತ್ತೇವೆ. ಆದರೆ ಬಸವಣ್ಣ ಇನ್ನೂ ಮುಂದುವರಿದು ಆಲೋಚಿಸಿದ್ದಾನೆ.

❐

ಸಾಕ್ರೆಟೀಸ – ಬಸವಣ್ಣ

●

ಡಾ. ಬಿ.ವ್ಹಿ. ಮಲ್ಲಾಪುರ

ಬಸವಣ್ಣನವರದು ಕಣ್ಣುಕುಕ್ಕಿಸುವ ತೇಜಃಪುಂಜ ಬಹುಮುಖಿ ವ್ಯಕ್ತಿತ್ವ. ಅವರೊಬ್ಬ ಮಹಾಮಾನವತಾವಾದಿ, ತತ್ವದರ್ಶಿ, ವೈಚಾರಿಕತೆಯ ನೆಲೆಗಟ್ಟಿನಮೇಲೆ ಸಮಾಜಸೌಧವನ್ನು ನಿರ್ಮಿಸಬಯಸಿದ ಹಿರಿಯ ಚಿಂತಕ. ಚಲನಶೀಲತೆಗೆ ಅಡ್ಡಗಾಲಾಗುವ ಮೂಢನಂಬಿಕೆ, ಅರ್ಥ ಕಳೆದುಕೊಂಡಿರುವ ಸಂಪ್ರದಾಯಗಳ ಉಚ್ಚಾಟನೆಗೆ ನಿರಂತರ ಶ್ರಮಿಸಿದ ಸಾಹಸಿ. ಶೋಷಣೆ ಹಾಗೂ ಶೋಷಕರ ವಿರುದ್ಧ ಸಡ್ಡು ಹೊಡೆದು ನಿಂತು ಹೋರಾಡಿದ ಧೀರ, ಅಸಹಾಯಕ ಸ್ತ್ರೀಯರ, ದೀನದಲಿತರ ಧ್ವನಿಯಾಗಿ ಅವರ ಉದ್ಧಾರಕ್ಕೆ ಅರ್ಪಿತ ಮನೋಭಾವದಿಂದ ದುಡಿದು, ಅವರಲ್ಲಿ ಸತ್ವ-ಶಕ್ತಿಗಳನ್ನು ತುಂಬಲು ಶ್ರಮಿಸಿದ ಮಹಾನುಭಾವ, ಸತ್ಯಶುದ್ಧ ಕಾಯಕದ ಮೂಲಕ ಕಾಯವನ್ನು ಕೈಲಾಸವಾಗಿಸುವ ಹಾದಿಯನ್ನು ತೋರಿದ ಧೀಮಂತ; ಇನ್ನೂ ಏನೇನೋ.

ಇಂತಹ ಅಪರೂಪ ವ್ಯಕ್ತಿತ್ವದ ಬಸವಣ್ಣನವರನ್ನು ಪ್ರಪಂಚದ ದಾರ್ಶನಿಕರ ಸಾಲಿನಲ್ಲಿ ನಿಲ್ಲಿಸಿ ಬೆಲೆ ಕಟ್ಟುವುದು ಬಹಳ ಕಷ್ಟಸಾಧ್ಯವಾದ ಕಾರ್ಯ. ಪ್ರಪಂಚದಲ್ಲಿ ಆಗಿಹೋಗಿರುವ ದಾರ್ಶನಿಕರ ಸಂಖ್ಯೆ ಸಣ್ಣದೇನಲ್ಲ. ಅವರು ಜೀವಿಸಿದ ಕಾಲ, ದೇಶ, ಬೆಳೆದ ಪರಿಸರ, ಅವರ ಸಾಂಸ್ಕೃತಿಕ ಹಿನ್ನೆಲೆ, ಮನೆತನದ ಇತಿಹಾಸ, ಅವರು ದಾರ್ಶನಿಕರಾಗಲು ಒದಗಿಬಂದ ಕಾರಣ, ಪ್ರಭಾವ-ಪ್ರೇರಣೆಗಳು ತೀರ ಭಿನ್ನ. ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಇವೆಲ್ಲವುಗಳ ಪಾತ್ರ ಹಿರಿದು. ಇಂಥ ಒಂದು ಸಂದರ್ಭದಲ್ಲಿ ಬಸವಣ್ಣನವರನ್ನು ಪ್ರಪಂಚದ ಇತರ ಕೆಲವೇ ಕೆಲವು ದಾರ್ಶನಿಕರ ಜೊತೆ ಹೋಲಿಸಿ ನೋಡಿ, ಅವರ ವೈಶಿಷ್ಟ್ಯ-ವಿಶೇಷಗಳನ್ನು ಗುರುತಿಸುವುದು ಮಾತ್ರ ಸಾಧ್ಯವಾಗಬಹುದು. ಪ್ರಸ್ತುತ ಲೇಖನದಲ್ಲಿ ಬಸವಣ್ಣ ಮತ್ತು ಸಾಕ್ರೆಟೀಸ ಅವರನ್ನು ಮುಖಾ-ಮುಖಿಯಾಗಿಸುವ ಒಂದು ಕಿರುಪ್ರಯತ್ನ ಮಾಡಲಾಗಿದೆ. ಇಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸುವುದು ಅವಶ್ಯವೆನಿಸುತ್ತದೆ. ಬಸವಣ್ಣನವರಲ್ಲಿ ಆಧ್ಯಾತ್ಮಿಕತೆ ಮತ್ತು ಮಾನವೀಯತೆಗಳು ಪರಸ್ಪರ ಪೂರಕ ಪರಿಪೂರ್ಣಗಳಾಗಿವೆ. ಪ್ರಪಂಚದ ಬಹುತೇಕ ದಾರ್ಶನಿಕರಲ್ಲಿ ಇವೆರಡೂ ಇರುತ್ತವೆಯಾದರೂ ಕೆಲವರು ಒಂದಕ್ಕೆ ಮಾತ್ರ ಒತ್ತು ಕೊಟ್ಟಿರುವುದು ಕಂಡುಬರುತ್ತದೆ. ವ್ಯಕ್ತಿಯ ಉದ್ಧಾರಕ್ಕೆ ಮಾತ್ರ ಕಾರಣವಾಗುವ,

ಆಧ್ಯಾತ್ಮಿಕತೆಗಿಂತ ಸಮಷ್ಟಿಯ ಉದ್ಧಾರಕ್ಕೆ ಕಾರಣವಾಗುವ ಮಾನವೀಯತೆ ಹೆಚ್ಚು ಅಪೇಕ್ಷಣೀಯ. ಆದುದರಿಂದ ಅವರನ್ನು ತಾತ್ವಿಕ ನೆಲೆಯಲ್ಲಿ ನೋಡುವುದಕ್ಕಿಂತ ಮಾನವೀಯತೆಯ ನೆಲೆಯಲ್ಲಿ ಅಭ್ಯಸಿಸುವುದು ಇಂದಿನ ದಿನಮಾನಗಳಲ್ಲಿ ಉಪಯುಕ್ತ. ಆದುದರಿಂದ ಆಧ್ಯಾತ್ಮಿಕತೆಯ ಜೊತೆಗೆ ಮಾನವೀಯತೆಗೆ ಇಲ್ಲಿ ಹೆಚ್ಚು ಒತ್ತು ಕೊಡಲಾಗಿದೆ.

ಪ್ರಪಂಚದ ದಾರ್ಶನಿಕರಲ್ಲಿ ಗ್ರೀಕ ತತ್ವಜ್ಞಾನಿ ಸಾಕ್ರೆಟೀಸನದು ಬಹುದೊಡ್ಡ ಹೆಸರು (ಕ್ರಿ.ಪೂ. ೪೬೯). ಅವನ ಶಿಷ್ಯರಲ್ಲಿ ಗಮನಾರ್ಹ ದಾರ್ಶನಿಕನೆನಿಸಿದ ಪ್ಲೇಟೋ, ಪ್ರಸಿದ್ಧ ಇತಿಹಾಸಕಾರ ರೆವಿನೋ ಪೋನ, ಪ್ರಖ್ಯಾತ ರುದ್ರನಾಟಕಕಾರ ಯುರಿಪಿಡಿಟಿಸ್‌ರಂತಹ ಮಹಾನ್ ವ್ಯಕ್ತಿಗಳಿದ್ದಾರೆ. ಪ್ಲೇಟೊ ತನ್ನ ಗುರು ಸಾಕ್ರೆಟೀಸನನ್ನು ಕುರಿತು "ಅವನೊಬ್ಬ ತತ್ಕಾಲೀನ ಯುಗದ ಅತ್ಯುತ್ತಮ ವ್ಯಕ್ತಿ. ಹೆಚ್ಚಾಗಿ ಅವನು ಅತ್ಯುತ್ತಮ ಜ್ಞಾನಿ. ನ್ಯಾಯನಿಷ್ಠುರಿ. ಅವನ ಜೀವನ, ಅವನ ಆದರ್ಶಗಳಿಗೆ ಜೀವಂತ ದೃಷ್ಟಾಂತವಾಗಿತ್ತು. ಅವನ ತತ್ವದರ್ಶನ ಮಾನವ ಜನಾಂಗದ ಬೌದ್ಧಿಕ ಇತಿಹಾಸದಲ್ಲಿ ಒಂದು ಹೊಸ ಆಯಾಮವನ್ನೇ ತೆರೆಯಿತು" ಎಂದು ಮನದುಂಬಿ ಹೇಳಿದ್ದರೆ, ರೋಮನಗರದ ಮಹಾವಿದ್ವಾಂಸ ಸಿಸರೊ "ತತ್ವಜ್ಞಾನವನ್ನು ಭೂಮಿಗೆ ತಂದಿರಿಸಿದ ಮಹಾಪುರುಷ" ಎಂದು ತುಂಬಾ ಅರ್ಥವತ್ತಾಗಿ ಬಣ್ಣಿಸಿದ್ದಾನೆ.

ಗ್ರೀಸ ದೇಶದ ಇಂಥ ಒಬ್ಬ ದಾರ್ಶನಿಕ ಹಾಗೂ ಕರ್ನಾಟಕದ ಬಸವಣ್ಣ (೧೨ನೆಯ ಶತಮಾನ) ಇವರಿಬ್ಬರ ವ್ಯಕ್ತಿತ್ವದಲ್ಲಿ ಕೆಲವು ಸಾಮ್ಯಗಳಿರುವುದನ್ನು ಗುರುತಿಸಬಹುದಾಗಿದೆ. ಅವುಗಳಲ್ಲಿ ಮುಖ್ಯವಾದುದು ಇಬ್ಬರಲ್ಲಿಯೂ ಎದ್ದು ಕಾಣುವ ಮಾನವೀಯತೆ, "ಸಾಕ್ರೆಟೀಸನ ಜಿಜ್ಞಾಸೆಯ ಕ್ಷೇತ್ರ, ಅವನ ವಿಚಾರದ ಕೇಂದ್ರಬಿಂದು, ಮಾನವ, ಮನವೀಯತೆ ಹಾಗೂ ಮಾನವೀಯ ವರ್ತನೆ. ಮಾನವ ಜನಾಂಗಕ್ಕೆ ಒಳಿತನ್ನುಂಟು ಮಾಡುವುದು. ಒಳಿತನ್ನು ಬೋಧಿಸುವುದು ಸಾಕ್ರೆಟೀಸನ ಪರಮಗಂತವ್ಯ." ಸಾಕ್ರೆಟೀಸನ ದೃಷ್ಟಿಯಲ್ಲಿ ಎಲ್ಲರಿಗೂ ಒಳಿತು ಮಾಡುವುದೇ ಪುಣ್ಯ. ಹಾಗೆ ಮಾಡದವನ ಬಾಳು ಬಾಳೇ ಅಲ್ಲ. ಒಳಿತಿನ ಮಹತ್ವದ ಬಗ್ಗೆ ಮನವರಿಕೆಯಾದರೆ, ಯಾವುದು ಒಳಿತು ಎಂಬುದು ಸ್ಪಷ್ಟವಾದರೆ ಮಾನವರೆಲ್ಲ ಒಳಿತನ್ನೇ ಮಾಡುತ್ತ ಹೋಗುತ್ತಾರೆ. "ಒಳಿತಿನ ಅರಿವೇ ಎಲ್ಲ ಪುಣ್ಯದ ತವರು. ಒಳಿತಿನ ಮರವೆಯೇ ಪಾಪ." ಇದು ಅವನ ಗಟ್ಟಿ ನಂಬಿಕೆಯಾಗಿತ್ತು. ಅವನ ಎಲ್ಲ ತಾತ್ತ್ವಿಕ ಚರ್ಚೆಯ ಪ್ರಧಾನ ಉದ್ದೇಶ ಮಾನವನಲ್ಲಿ ಒಳಿತಿನ ಭಾವನೆಗಳನ್ನು ಜಾಗೃತಗೊಳಿಸುವುದಾಗಿತ್ತು. ಮಾನವಕುಲದ ಒಳಿತಿಗಾಗಿ ಅರ್ಪಿತ ಮನೋಭಾವದಿಂದ ಶ್ರಮಿಸಿದ ಮಹಾಪುರುಷ, ಸಾಕ್ರೆಟೀಸ.

ನಮಗೆಲ್ಲರಿಗೆ ತಿಳಿದಿರುವಂತೆ ಬಸವಣ್ಣನವರು ಮಾನವೀಯತೆಯ ಸಾಕಾರಮೂರ್ತಿಯಾಗಿದ್ದರು. ಅವಕಾಶಹೀನರ, ಸ್ತ್ರೀಯರ, ದೀನದಲಿತರ, ದುರ್ಬಲರ, ಶೋಷಣೆಗೆ ಒಳಗಾದವರ ಬಗ್ಗೆ ಅವರಿಗಿರುವ ಅನುಕಂಪೆ ಗಮನಾರ್ಹವಾದುದು. ಅದನ್ನು ಅವರು ಅನುಕಂಪದ ಮಟ್ಟಕ್ಕೆ ನಿಲ್ಲಿಸದೆ, ಕಾರ್ಯರೂಪಕ್ಕೆ ತಂದರು. ಅಂಥವರ ಒಳಿತಿಗಾಗಿ ಸಮಾಜದಲ್ಲಿ ಅವರಿಗೆ ಯೋಗ್ಯಸ್ಥಾನವನ್ನು ಒದಗಿಸುವುದಕ್ಕಾಗಿ ಪಟ್ಟಭದ್ರರ ವಿರುದ್ಧ ಹೋರಾಡಿದರು. ದಯವೇ ಧರ್ಮದ ಮೂಲವೆಂದು ಸಾರಿದರು. ಸಕಲ ಜೀವಾತ್ಮರಿಗೆ ಒಳ್ಳೆಯದನ್ನು ಬಯಸುವುದೇ ಅವರ ಮೂಲಮಂತ್ರವಾಗಿತ್ತು. "ದಯವೇ ಧರ್ಮದ ಮೂಲ" ಎಂಬ ಅವರ ಮಾತಿನಲ್ಲಿಯೂ ಮಾನವೀಯ ಗುಣವನ್ನೇ ಕಾಣುತ್ತೇವೆ.

ಇವರಿಬ್ಬರಲ್ಲಿ ಎದ್ದು ಕಾಣುವ ಇನ್ನೊಂದು ಸಮಾನಗುಣವೆಂದರೆ ನ್ಯಾಯನಿಷ್ಠುರತೆ. ಎಂತಹ ಪ್ರಸಂಗವೇ ಬರಲಿ, ಯಾರನ್ನೇ ಎದುರು ಹಾಕಿಕೊಳ್ಳಬೇಕಾಗಿರಲಿ ನ್ಯಾಯದ ಪರವಾಗಿಯೇ ನಿಲ್ಲುವ ನಿಷ್ಠುರ ಸ್ವಭಾವ ಸಾಕ್ರೆಟೀಸನದು. ಅಥೆನ್ಸ್‌ನಗರದ ನ್ಯಾಯಮಂಡಳಿ ಕೆಲವು ಜನ ದಳಪತಿಗಳ ವಿಚಾರಣೆಯನ್ನು ಕೈಗೆತ್ತಿಕೊಂಡಿತ್ತು. ಸಾಕ್ರೆಟೀಸ ಆ ನ್ಯಾಯ ಮಂಡಳಿಯ ಒಬ್ಬ ಸದಸ್ಯನಾಗಿದ್ದ. ಜನತೆಯ ಒತ್ತಾಯದಿಂದಾಗಿ ಉಳಿದೆಲ್ಲ ಸದಸ್ಯರು, ದಳಪತಿಗಳು ಮಾಡಿದ ಅಪರಾಧಕ್ಕಾಗಿ ಅವರಿಗೆ ಮರಣ ದಂಡನೆ ವಿಧಿಸಬೇಕೆಂಬ ನಿರ್ಣಯಕ್ಕೆ ಬಂದರು. ಆದರೆ ಅಂತಹ ಕಠಿಣ ದಂಡನೆಗೆ ಕಾನೂನಿನಪ್ರಕಾರ ಅವಕಾಶವಿರಲಿಲ್ಲ. ಜನರು ಬೇಕಾದಷ್ಟು ಕೂಗಾಡಿದರೂ ಸಾಕ್ರೆಟೀಸ ಮರಣದಂಡನೆಯ ವಿರುದ್ಧ ಮತ ನೀಡಿದ.

ಇನ್ನೊಂದು ಪ್ರಸಂಗ : ಕ್ರಿ.ಪೂ. ೪೦೪ರಲ್ಲಿ ಅಥೆನ್ಸ ಸಾಮ್ರಾಜ್ಯ ಕೊನೆಗೊಂಡ ಮೇಲೆ, ಉಂಟಾದ ಅರಾಜಕತೆಯಲ್ಲಿ ಮೂವತ್ತು ಜನರ ಒಂದು ಗುಂಪು ಏನಕೇನ ಕಾರಣಗಳಿಂದಾಗಿ ಆಡಳಿತದ ಸೂತ್ರವನ್ನು ತನ್ನ ಕೈಗೆ ತೆಗೆದುಕೊಂಡಿತು. ಅದು ಹಲವಾರು ಅಸಂಬದ್ಧ ಕಾನೂನುಗಳನ್ನು ಜಾರಿಗೆ ತಂದು, ಆ ಕಾನೂನು ಮುರಿದವರನ್ನು ಸೆರೆ ಹಿಡಿಯುವಂತೆ ಸಾಕ್ರೆಟೀಸನಿಗೆ ಸೂಚಿಸಿತು. ಹಾಗೆ ಮಾಡುವುದು ನ್ಯಾಯ ಸಮ್ಮತವಲ್ಲವೆಂದು ಸಾಕ್ರೆಟೀಸನಿಗೆ ಅನಿಸಿದ್ದರಿಂದ ಅವರ ಸೂಚನೆಯನ್ನು ಸ್ಪಷ್ಟವಾಗಿ ನಿರಾಕರಿಸಿದ. ಹಾಗೆ ಮಾಡುವುದರಿಂದ ತನಗೆ ಮರಣದಂಡನೆ ವಿಧಿಸಲಾಗುವುದೆಂದು ತಿಳಿದಿದ್ದರೂ ಅನ್ಯಾಯದ ಸಾವಿನಿಂದ ಅವರನ್ನು ಉಳಿಸಲು ತಾನೇ ಸಾಯುವುದು ಸರಿಯೆಂದು ಭಾವಿಸಿದ ಸಾಕ್ರೆಟೀಸ, ಆ ಮೂವತ್ತು ಜನರ ಆಜ್ಞೆಯನ್ನು ನಿರಾಕರಿಸಿಬಿಟ್ಟ. ಅನ್ಯಾಯದ ವಿರುದ್ಧ ಸೆಟೆದು ನಿಂತು ಅದನ್ನು ಪ್ರತಿಭಟಿಸುವ ನಿಷ್ಠುರತೆ ಸಾಕ್ರೆಟೀಸನದಾಗಿತ್ತು.

ಬಸವಣ್ಣನವರ ಜೀವನದಲ್ಲಿಯೂ ಅವರ ನ್ಯಾಯ–ನಿಷ್ಠುರತೆಯನ್ನು ಒರೆಗೆ ಹಚ್ಚುವ ಪ್ರಸಂಗಗಳು ಬಂದಿವೆ. ಆಗೆಲ್ಲ ಅವರು ನ್ಯಾಯದ ಪರವಾಗಿಯೇ ನಿಂತಿದ್ದಾರೆ. ಮೇಲಿನವರು ಅನುಸರಿಸಿಕೊಂಡು, ಪ್ರತಿಪಾದಿಸಿಕೊಂಡು ಬರುತ್ತಿದ್ದ ವರ್ಣಪದ್ಧತಿ ಲಿಂಗ–ಭೇದಾದಿ ಅರ್ಥಹೀನ ಸಂಪ್ರದಾಯಗಳನ್ನು ಆಧಾರಸಮೇತ ಖಡಾಖಂಡಿತವಾಗಿ ನಿರಾಕರಿಸುವಲ್ಲಿ ಅವರ ನ್ಯಾಯ–ನಿಷ್ಠುರ ಸ್ವಭಾವವನ್ನು ನಾವು ಗುರುತಿಸಬಹುದು. ಮೇಲಿನವರೆನಿಸಿಕೊಂಡವರ ವಿರೋಧವನ್ನು ಎದುರಿಸಬೇಕಾಗಬಹುದೆಂಬ ಸತ್ಯಗೊತ್ತಿದ್ದರೂ "ನ್ಯಾಯ ನಿಷ್ಠುರಿ ದಾಕ್ಷಿಣ್ಯಪರ ನಾನಲ್ಲವಯ್ಯ, ಲೋಕ ವಿರೋಧಿ ಶರಣನಾರಿಗಂಜುವನಲ್ಲ" ಎನ್ನುತ್ತ, ತಮ್ಮ ನ್ಯಾಯಪರ ಚಟುವಟಿಕೆಗಳನ್ನು ಮುಂದುವರಿಸಿದರು. ಶೂದ್ರ ಹರಳಯ್ಯನ ಮಗ, ಬ್ರಾಹ್ಮಣ ಮಧುವರಸನ ಮಗಳು ಇವರಿಬ್ಬರ ಮದುವೆ ಮಾಡಿಸುವ ಮಟ್ಟಕ್ಕೂ ಅವರು ಮುಂದುವರಿದರು. ಇದು ವರ್ಣ ಪ್ರತಿಪಾದಕರಲ್ಲಿ ಅಲ್ಲೋಲ–ಕಲ್ಲೋಲವನ್ನುಂಟು ಮಾಡಿತು. ತಮ್ಮವೇ ಆದ ಆಧಾರ, ಉದಾಹರಣೆಗಳ ಮೂಲಕ ಬಸವಣ್ಣನವರು ತಾವು ನ್ಯಾಯ ಪಕ್ಷಪಾತಿ ಎಂಬುದನ್ನು ತೋರಿಸುತ್ತ ಸರ್ವರ ಸಮಕ್ಷಮದಲ್ಲಿ ಅವರಿಬ್ಬರ ವಿವಾಹವನ್ನು ನೆರವೇರಿಸಿಯೇ ಬಿಟ್ಟರು. ಕಲ್ಯಾಣದಲ್ಲಿ ದೊಡ್ಡ ಕ್ರಾಂತಿಯಾಗಿ ಹರಳಯ್ಯ ಮಧುವರಸರನ್ನು ಅತ್ಯಂತ ಕ್ರೂರ ದಂಡೆಗೆ ಗುರಿಪಡಿಸಲಾಯಿತು. ಆ ಸಂದರ್ಭದಲ್ಲಿ ಬಸವಣ್ಣನವರು ಪಂಚಾಚಾರಗಳಲ್ಲಿ ಒಂದಾದ ಗಣಾಚಾರದಲ್ಲಿಯ ಒಂದು

ವಿಧಾನವನ್ನನುಸರಿಸಿ ಕೂಡಲಸಂಗಮಕ್ಕೆ ಹೋದರೆಂದು ಹೇಳಲಾಗುತ್ತದೆ. ಬಸವಣ್ಣನವರ ಈ ಕ್ರಮ ಸಾಕ್ರೆಟೀಸನಂತಿಲ್ಲ. ಆದುದರಿಂದ ಇದನ್ನು ಒಪ್ಪದವರೂ ಇದ್ದಾರೆ. ಆದರೆ ಬಸವಣ್ಣನವರ ಸಾಮಾಜಿಕ ನ್ಯಾಯ ಪ್ರಶ್ನಾತೀತವೆಂಬುದನ್ನು ನಾವು ಮರೆಯುವಂತಿಲ್ಲ. ಅಸಹಾಯಕರಿಗೆ ಸಾಮಾಜಿಕ ನ್ಯಾಯ ಒದಗಿಸುವಲ್ಲಿ ದೊರೆ ಬಿಜ್ಜಳನನ್ನು ಕೂಡ ಎದುರು ಹಾಕಿಕೊಳ್ಳಲು ಬಸವಣ್ಣನವರು ಸಿದ್ಧರಿದ್ದುದನ್ನು "ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು, ಆರು ಮುನಿದು ನಮ್ಮನೇನ ಮಾಡುವರು" ಎಂಬಂತಹ ಅವರ ವಚನಗಳಲ್ಲಿ ಕಂಡುಕೊಳ್ಳಬಹುದಾಗಿದೆ.

ಏನೇ ಇರಲಿ, ಏನೇ ಬರಲಿ ಅದೆಲ್ಲವನ್ನು ದೇವರ ಇಚ್ಛೆಯೆಂದು ನಂಬಿ ಸ್ವೀಕರಿಸುವ ಮನೋಭಾವ ಇಬ್ಬರಲ್ಲಿಯೂ ಇತ್ತು. ೭೦ ವರ್ಷದ ಮುದುಕ ಸಾಕ್ರೆಟೀಸನ ಮೇಲೆ "ನಮ್ಮ ದೇವದೇವತೆಗಳ ಬಗ್ಗೆ ಸಾಕ್ರೆಟೀಸನಿಗೆ ಭಕ್ತಿ ಶ್ರದ್ಧೆಗಳಿಲ್ಲ. ಏನೇನನ್ನೋ ಯುವಕರಿಗೆ ಹೇಳಿ ಅವರ ತಲೆಕೆಡಿಸುತ್ತಿದ್ದಾನೆ" ಮುಂತಾಗಿ ಅವನ ಮೇಲೆ ಅಪವಾದ ಹೊರಿಸಿ, ವಿಷ ಕುಡಿಸಿ ಸಾಯುವ ಶಿಕ್ಷೆ ವಿಧಿಸಿ ಅವನನ್ನು ಕಾರಾಗೃಹಕ್ಕೆ ತಳ್ಳಲಾಗುತ್ತದೆ. ಅವನನ್ನು ಅಲ್ಲಿಂದ ಪರಾರಿ ಮಾಡಲು ಅವನ ಒಬ್ಬಿಬ್ಬ ಶಿಷ್ಯರು ಪ್ರಯತ್ನಿಸುತ್ತಾರೆ. ಆದರೆ ಸಾಕ್ರೆಟೀಸನು ಸರ್ವಥಾ ಒಪ್ಪದೆ, ವಿಷ ಕುಡಿದು ಸಾಯುವ ಶಿಕ್ಷೆಯನ್ನು ದೇವನ ಆಜ್ಞೆಯೆಂದು ಭಾವಿಸಿ ಸಾಯುವುದಕ್ಕೆ ಸಿದ್ಧನಾಗುತ್ತಾನೆ.

ಬಸವಣ್ಣನವರಲ್ಲಿಯೂ ಬಂದುದನ್ನು ಸಂತೋಷದಿಂದ ಅದು ಒಳ್ಳೆಯದಿರಲಿ ಕೆಟ್ಟದ್ದಾಗಿರಲಿ ಸ್ವೀಕರಿಸುವ ಮನೋಭಾವನೆ ಇದ್ದುದು ಅವರ "ಉರಿ ಬರಲಿ ಸಿರಿ ಬರಲಿ ಬೇಕು ಬೇಡೆನ್ನೆನು", "ನೀ ಹುಟ್ಟಿಸಿದಲ್ಲಿ ಹುಟ್ಟಿ ನೀ ಕೊಂದಲ್ಲಿ ಸಾಯದೇ ಎನ್ನ ವಶವೆ ಅಯ್ಯಾ? ನೀವಿರಿಸಿದಲ್ಲಿ ಇರದೆ ಎನ್ನ ವಶವೆ ಅಯ್ಯಾ?" "ಕೂಡಲಸಂಗಮದೇವರ ಬರೆದ ಬರಹದ ತಪ್ಪಿಸುವಡೆ ಹರಿಬ್ರಹ್ಮಾದಿಗಳಿಗಳವಲ್ಲ" ಎಂಬಂತಹ ಮಾತುಗಳಲ್ಲಿ ಕಂಡುಬರುತ್ತದೆ.

ಬಸವಣ್ಣನವರು ಮತ್ತು ಸಾಕ್ರೆಟೀಸ ಅವರಲ್ಲಿ ಗುರುತಿಸಬಹುದಾದ ಇನ್ನೊಂದು ಸಮಾನ ಅಂಶವೆಂದರೆ ಅವರಿಬ್ಬರು ದೈವಭಕ್ತರು, ದೇವರಲ್ಲಿ ನಂಬಿಕೆಯುಳ್ಳವರು. ಸಾಕ್ರೆಟೀಸ ವಿಚಾರಣೆ ನಡೆದಾಗ "ನ್ಯಾಯಾಧೀಶರೆ ಆ ದೇವತೆಗಳ ಅಧಿಕಾರ ನಿಮ್ಮದಕ್ಕಿಂತಲೂ ನನಗೆ ಹೆಚ್ಚು ಪ್ರಮಾಣ ಭೂತ. ಇನ್ನು ಮುಂದೆ ನನ್ನ ಸತ್ಯಶೋಧನೆಯನ್ನು ಮುಂದುವರಿಸಬೇಕೆಂಬ ಷರತ್ತು ಹಾಕಿ ನನ್ನನ್ನು ಬಿಡುಗಡೆ ಮಾಡುವುದಾದರೆ, ಅಥೆನ್ಸಿನ ನಾಗರಿಕರೆ, ನಾನು ದೇವರ ಆಜ್ಞೆಯನ್ನು ಪಾಲಿಸುವವನು. ಅವನೇ ನನಗೆ ಈ ಕಾರ್ಯವನ್ನು ವಹಿಸಿದ್ದಾನೆ. ನಿಮಗಿಂತಲೂ ನಾನು ದೇವರಿಗೇ ವಿಧೇಯ. ನನ್ನಲ್ಲಿ ಕೊನೆಯ ಉಸಿರು ಇರುವ ತನಕ ನನ್ನ ತತ್ವಾರ್ಥ ವಿವೇಚನೆಯನ್ನು ಬಿಡುವುದಿಲ್ಲ. ನನಗೆ ಸಾವಿನ ಭಯವಿಲ್ಲ. ನನ್ನ ನಿಲುವನ್ನು ನಾನು ಬಿಟ್ಟುಕೊಡುವುದಿಲ್ಲ. ಒಳ್ಳೆಯದನ್ನು ಬಿಡುವುದು ಬಹಳ ಕೆಟ್ಟದ್ದು. ಒಳಿತನ್ನು ಒಳ್ಳೆಯದನ್ನು ನಾನು ಯಾವಾಗಲೂ ಸ್ವಾಗತಿಸುತ್ತೇನೆ" ಎಂದು ಹೇಳಿರುವಲ್ಲಿ ಸಾಕ್ರೆಟೀಸನ ದೈವಭಕ್ತಿ, ದೈವಾಜ್ಞೆ ಪಾಲಿಸುವ ಛಲ ಮತ್ತು ಮರಣವನ್ನು ಸಂತೋಷದಿಂದ ಸ್ವಾಗತಿಸುವ ಗುಣ ಮೇಳವಿಸಿರುವುದನ್ನು ಕಾಣುತ್ತೇವೆ.

ಬಸವಣ್ಣನವರದು ದೈವಭಕ್ತಿಗೆ ಮತ್ತೊಂದು ಹೆಸರು. ಸಮಕಾಲೀನ ಶರಣರು ಅವರನ್ನು "ಭಕ್ತಿಭಂಡಾರಿ" ಎಂದು ಕರೆದಿದ್ದಾರೆ. "ಭಕ್ತನಾದರೆ ಬಸವಣ್ಣನಂತಾಗಬೇಕೆಂದು

ಹಾರೈಸಿದ್ದಾರೆ. ತಮ್ಮ ಆರಾಧ್ಯ ದೈವ ಕೂಡಲಸಂಗನನ್ನು ಗುರು–ಲಿಂಗ–ಜಂಗಮ ರೂಪದಲ್ಲಿ ಕಾಣುತ್ತಿದ್ದ ಅವರು ಆ ಗುರು–ಲಿಂಗ–ಜಂಗಮದಲ್ಲಿ ತೋರುತ್ತಿದ್ದ ಭಕ್ತಿ ಅನುಪಮವಾದುದು, ಅನನ್ಯವಾದುದು. ಎಂತಹ ಕಷ್ಟಗಳೇ ಬರಲಿ, ಎಂತಹ ಹಿಂಸೆ–ದಬ್ಬಾಳಿಕೆಗಳಿಗೆ ತಾವು ಪಕ್ಕಾಗಿರಲಿ, ತಮ್ಮ ಬಂಧು–ಬಳಗಕ್ಕೆ ನಾನಾ ವಿಧದ ತೊಂದರೆಗಳನ್ನುಂಟು ಮಾಡುತ್ತಿರಲಿ, ಅವರನ್ನು ಅವಮಾನ ಪಡಿಸುತ್ತಿರಲಿ, ಸ್ವತಃ ತಮ್ಮನ್ನು ಹಾಕೊಂದೆಸೆ ಹನ್ನೊಂದೆಸೆಯಾಗಿ ಮಾಡುತ್ತಿರಲಿ, ಆದರೂ ಆರಾಧ್ಯ ದೈವದ ಬಗೆಗಿನ ತಮ್ಮ ಭಕ್ತಿಯನ್ನು, ಕಿಂಚಿತ್ತೂ ಬಿಡದ ವೀರಪ್ರತಿಜ್ಞೆ ಅವರದು. ಇದೆಲ್ಲವನ್ನು ಅವರ "ಅರ್ಥನನರ್ಥವ ಮಾಡಿ ಕೋಲಾಹಲಂಗೆಯ್ಯುತ್ತಿರಲಿ" ಎಂದು ಆರಂಭವಾಗುವ ವಚನದಲ್ಲಿ ಕಾಣುತ್ತೇವೆ. ಭಕ್ತ್ಯಾಚರಣೆಯ ಸಂದರ್ಭದಲ್ಲಿ ವಿರೋಧಿಗಳಿಂದ ಮರಣವುಂಟಾದರೂ ಅದನ್ನು ಸ್ವಾಗತಿಸುವ, ಅದನ್ನು ಮಹಾನವಮಿಯೆಂದು ಭಾವಿಸುವ ಜಾಯಮಾನ ಬಸವಣ್ಣನವರದು. ಅವರ ದೈವಭಕ್ತಿ ಸಾಕ್ರೆಟೀಸನಿಗಿಂತ ಎಷ್ಟೋ ಮಿಗಿಲು.

ತತ್ವಾರ್ಥ ವಿವೇಚನಾ ವಿಧಾನದಲ್ಲಿ ಕೂಡ ಇಬ್ಬರಲ್ಲಿ ಒಂದು ಬಗೆಯ ಸಾಮ್ಯವನ್ನು ಕಾಣುತ್ತೇವೆಯಾದರೂ ಒಂದಿಷ್ಟು ಭಿನ್ನತೆಯೂ ಇದೆ. ಪ್ರಶ್ನೋತ್ತರ ರೂಪದಲ್ಲಿ ತತ್ವವಿವೇಚನೆ ನಡೆಯುವುದು ಹೆಚ್ಚು ಪ್ರಯೋಜನಕಾರಿಯೆಂದು ಸರಿಯಾಗಿಯೇ ಭಾವಿಸಿದ್ದ ಸಾಕ್ರೆಟೀಸ, ಅದನ್ನೇ ಉದ್ದಕ್ಕೂ ಅನುಸರಿಸಿಕೊಂಡು ಬಂದ. "ಬೀದಿ–ಬೀದಿಗಳಲ್ಲಿ ಅಲೆಯುತ್ತ ಸಂತೆ–ಪೇಟೆಗಳನ್ನು ಸುತ್ತುತ್ತ ಯಾರೇ ಸಿಕ್ಕಲಿ, ಅವರಿಗೆ ತನಗೇನೂ ತಿಳಿಯದೆಂಬಂತೆ ಪ್ರಶ್ನೆ ಹಾಕಿ, ಅವರ ಮನಸ್ಸಿನಲ್ಲಿ ಸಂಶಯ ಹುಟ್ಟಿಸಿ, ಅವರ ವಿಚಾರವನ್ನು ಕೆಣಕಿ, ಅವರೊಡನೆ ಮಾತಾಡುತ್ತಲೇ ತಥ್ಯ–ಸತ್ಯಗಳ ತೀರ್ಮಾನವನ್ನು ಅವರಿಂದಲೇ ಹೊರಡಿಸುತ್ತಿದ್ದ. ತಾನು ಅವರಿಗೆ ತಿಳಿಸಬೇಕಾದ ವಿಷಯವನ್ನು, ಪ್ರಶ್ನೆ ಹಾಕುತ್ತ ಅವರಿಂದ ಬರುವ ಉತ್ತರಗಳ ಮೂಲಕವೇ ಹೊರಗೆಡಹುತ್ತಿದ್ದ. ಹೀಗೆ ಪ್ರಶ್ನೆ, ಪರಿಪ್ರಶ್ನೆ, ಮರುಪ್ರಶ್ನೆಗಳನ್ನು ಕೇಳುತ್ತಲೇ ಕೇಳುಗರನ್ನು ವಿಚಾರಿಸಲು ಹಚ್ಚುತ್ತಿದ್ದ. ಜಿಜ್ಞಾಸುಗಳಿಗೆ ಚತುರ ಪ್ರಶ್ನೆ ಹಾಕಿ ಅವರಿಂದಲೇ ಹೊಸ ತಥ್ಯಗಳನ್ನು, ಸತ್ಯದ ಹೊಸ ಮುಖಗಳನ್ನು ಹೊರ ಹೊರಡಿಸುತ್ತಿದ್ದ." ಈ ರೀತಿ ತತ್ವಬೋಧದ ಹೊಸ ವಿಧಾನವನ್ನು ರೂಪಿಸಿ, ಹದಗೊಳಿಸಿ ಅದನ್ನು ಅಥೆನ್ಸನಗರದಲ್ಲಿ ರೂಢಿಗೆ ತಂದ ಕೀರ್ತಿ ಸಾಕ್ರೆಟೀಸನಿಗೆ ಸಲ್ಲುತ್ತದೆ. ಈ ಪದ್ಧತಿ ಅವನ ಹೆಸರಿನಿಂದಲೇ ಪ್ರಸಿದ್ಧವಾಗಿದೆ. ನಮ್ಮ ಉಪನಿಷತ್ತುಗಳಲ್ಲಿಯೂ ಈ ವಿಧಾನವನ್ನು ಕಾಣುತ್ತೇವೆ.

ಬಸವಣ್ಣನವರು ತಾವು ರೂಪಿಸಿದ ಅನುಭಾವ ಮಂಟಪವೆಂಬ ವೇದಿಕೆಯಲ್ಲಿ ತತ್ವವಿವೇಚನೆಗೆ ಪ್ರಶ್ನೋತ್ತರ ವಿಧಾನವನ್ನೇ ಅನುಸರಿಸಿದರೂ ಎಲ್ಲ ಶರಣರು ಜಾತಿ–ಮತ–ಲಿಂಗ ಭೇದವಿಲ್ಲದೆ ಅಲ್ಲಿ ಸೇರಿ ಒಟ್ಟಾಗಿ ಕುಳಿತು ಚರ್ಚಿಸುತ್ತಿದ್ದರೆ ವಿನಾ ಬೀದಿ ಬೀದಿ ಸಂತೆ–ಸಂತೆಗಳಲ್ಲಿ ಅಲೆಯುತ್ತ ಹೋಗುತ್ತಿರಲಿಲ್ಲ. ಸಾಕ್ರೆಟೀಸನಿಗೆ ಚರ್ಚೆಯನ್ನು ಆರಂಭಿಸಲು ನಿರ್ದಿಷ್ಟ ಸಮಯವೆಂಬುದೇನೂ ಇರಲಿಲ್ಲ. ಇಬ್ಬರೊ ಮೂವರೊ ಕೂಡಿದರೆ ಸಾಕು ಪ್ರಶ್ನೋತ್ತರ ಮಾಧ್ಯಮದ ಮೂಲಕ ಚರ್ಚೆ ಆರಂಭವಾಗುತ್ತಿತ್ತು. ಬಸವಣ್ಣನವರಿಗಿಂತ ಮೊದಲು ಕೊಂಡಗುಳಿ ಕೇಶಿರಾಜ–ತೆಲುಗು ಜೊಮ್ಮಯ್ಯ ಹಾಗೆಯೇ ಶಂಕರ ದಾಸಿಮಯ್ಯ–ಜೇಡರ ದಾಸಿಮಯ್ಯ ಇವರು ಪರಸ್ಪರರಲ್ಲಿ ತಾತ್ವಿಕ ವಿಷಯಗಳನ್ನು ಕುರಿತು ಗೋಷ್ಠಿ ನಡೆಸುತ್ತಿದ್ದ ಬಗ್ಗೆ ಗಟ್ಟಿ ಆಧಾರಗಳಿವೆ. ಪ್ರಾಯಃ ಬಸವಣ್ಣನವರು ತತ್ವಾರ್ಥ ನಿರ್ಣಯಕ್ಕೆ ಮತ್ತು

ಸಮಸ್ಯೆಗಳ ಪರಿಹಾರಕ್ಕೆ ಅಂತಹ ಗೋಷ್ಠಿಗಳು ಹೆಚ್ಚು ಉಪಯುಕ್ತವಾಗುವುದನ್ನು ಗುರುತಿಸಿ, ಅವು ಹೆಚ್ಚು ಪ್ರಭಾವಶಾಲಿಯಾಗಿ ಕಾರ್ಯ ನಿರ್ವಹಿಸುವುದಕ್ಕೆ ಅವುಗಳ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿ, ಅದರ ವ್ಯಾಪ್ತಿಯನ್ನು ಹಿಗ್ಗಿಸಲು ಮಾಡಿದ ಪ್ರಾಮಾಣಿಕ ಪ್ರಯತ್ನದ ಫಲವೇ ಅನುಭಾವ ಮಂಟಪ. ಅಲ್ಲಿ ನಿರ್ದಿಷ್ಟ ಸಮಯದಲ್ಲಿ, ನಿರ್ದಿಷ್ಟ ವಿಷಯವನ್ನು ಕುರಿತು ಚರ್ಚಿಸುತ್ತಿದ್ದರು. ಕಾರ್ಯಕ್ರಮದಲ್ಲಿ ಕೆಲವೊಮ್ಮೆ ಬದಲಾವಣೆ ಆಗುತ್ತಿರಲೂಬಹುದು.

ಇನ್ನು ಇವರಿಬ್ಬರಲ್ಲಿಯೂ ಸಮಾನವಲ್ಲದ ವಿಷಯಗಳಿರುವುದನ್ನು ಮರೆಯಲಾಗದು. ಸಾಕ್ರೆಟೀಸನಿಗೆ ದೇವರಲ್ಲಿ ನಂಬಿಕೆಯೇನೋ ಇತ್ತು ಆದರೆ ಜೀವ, ಜಗತ್ತು, ಆತ್ಮಾದಿ ತತ್ವಗಳ ವಿವೇಚನೆಗೆ, ಸೈದ್ಧಾಂತಿಕ ನಿಲುವುಗಳಿಗೆ ಹೆಚ್ಚಿನ ಗಮನ ಹರಿಸಿದಂತೆ ಕಾಣುವುದಿಲ್ಲ. ಅವನು ಮುಖ್ಯವಾಗಿ ಒತ್ತು ಕೊಟ್ಟದು ಮೊದಲೇ ಹೇಳಿರುವಂತೆ ಮಾನವನಿಗೆ, ಮಾನವೀಯ ವರ್ತನೆಗೆ, ಮಾನವೀಯತೆಗೆ ಮತ್ತು ಇವೆಲ್ಲಕ್ಕೂ ಮೂಲಾಧಾರವಾದ ನೀತಿಗೆ. ಪಾಶ್ಚಾತ್ಯ ಇತಿಹಾದಲ್ಲಿ ಇವನನ್ನು ನೀತಿ ದರ್ಶನದ ಆದ್ಯ ಆಚಾರ್ಯನೆಂದು ಮನ್ನಿಸಲಾಗಿದೆ.

ಸಾಕ್ರೆಟೀಸ ಕೆಲವೊಮ್ಮೆ ಅನುಭಾವಿಯಂತೆ ತಾಸುಗಟ್ಟಲೆ ಧ್ಯಾನಮಗ್ನನಾಗಿರುತ್ತಿದ್ದಂತೆ ಉಲ್ಲೇಖ ಬರುತ್ತದೆ. ಆಗ ಒಂದು ಸಣ್ಣ ಒಳದನಿ ಅವನಿಗೆ ಕೆಲವು ಕೆಲಸಗಳನ್ನು ಮಾಡದಿರಲು ತಡೆಯುತ್ತದೆಂದು ಅವನು ಹೇಳುತ್ತಿದ್ದನಂತೆ. ಪ್ರಾಯಃ ಆ ಒಳದನಿಯೇ ಅವನಿಗೆ ಯಾವುದಾದರೂ ಸಂದೇಹ ಬಂದಾಗ ಹಾದಿ ತೋರುವ ದೇವತೆಯಾಗಿರಬಹುದು.

ಬಸವಣ್ಣನವರು ಮಾನವೀಯತೆಗೆ, ಮಾನವೀಯ ಮೌಲ್ಯಗಳಿಗೆ ಮಹತ್ವ ಕೊಡುವ ಜೊತೆಗೆ ಅಧ್ಯಾತ್ಮಜೀವಿಯೂ ಆಗಿದ್ದುದನ್ನು ಮರೆಯಲಾಗದು. ತಮ್ಮ ಆರಾಧನ ದೈವ ಕೂಡಲಸಂಗನಲ್ಲಿ ಬಸವಣ್ಣನವರಿಗೆ ಅಪಾರ ಭಕ್ತಿ. ಮತ್ತೆಮತ್ತೆ ವಿಷಯದತ್ತ ಹರಿಯುವ ತಮ್ಮ ಮನಸ್ಸನ್ನು ಲಿಂಗಸಮ್ಮುಖಗೊಳಿಸುವ ತಮ್ಮ ಆರಾಧ್ಯದೈವವನ್ನು ಅವರು ಭಕ್ತಿಪೂರ್ವಕ ಅನೇಕ ವಚನಗಳಲ್ಲಿ ಬೇಡಿಕೊಂಡಿದ್ದಾರೆ, ಪರಿಪರಿಯಾಗಿ ಮೊರೆ ಇಟ್ಟಿದ್ದಾರೆ. "ವಿಷಯವೆಂಬ ಹಸಿರನೆನ್ನ ಮುಂದೆ ತಂದು ಪಸರಿಸದಿರಯ್ಯ" ಮತ್ತು "ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ" ಎಂದು ಆರಂಭವಾಗುವಂತಹ ಅವರ ವಚನಗಳನ್ನು ಇಲ್ಲಿ ನೋಡಬಹುದು ಇಷ್ಟಲಿಂಗದಲ್ಲಿಯೇ ದಿಟ್ಟಿಯನ್ನು ಕೇಂದ್ರೀಕರಿಸಿ ದೃಷ್ಟಿಯೋಗದ ಮೂಲಕ, ಆತ್ಮವಿಶ್ವಾಸದ ಕೊನೆಯ ಹಂತವಾದ ಲಿಂಗಸಾಮರಸ್ಯ ಸುಖವನ್ನನುಭವಿಸಿದ ಅಧ್ಯಾತ್ಮಜೀವಿ ಬಸವಣ್ಣನವರು. ಇದು ಸಾಕ್ರೆಟೀಸನಲ್ಲಿ ಎದ್ದು ಕಾಣುವ ಹಾಗೆ ಇದ್ದಂತೆ ತೋರುವುದಿಲ್ಲ.

ಸಾಕ್ರೆಟೀಸ ಒಂದು ನಿಯಮಿತ, ವಿಶಿಷ್ಟ ತತ್ವಸಂಪ್ರದಾಯವನ್ನಾಗಲಿ ಸುವ್ಯವಸ್ಥಿತ ಸಿದ್ಧಾಂತವನ್ನಾಗಲಿ ಸ್ಥಾಪಿಸಲಿಲ್ಲ. ಪ್ರಶ್ನೆ ಕೇಳಿ ಚರ್ಚೆ ಮಾಡಿ ಜನರ ಮನಸ್ಸನ್ನು ಬೆಳಕಿನತ್ತ ತಿರುಗಿಸುವಷ್ಟರಲ್ಲಿ ಮಾತ್ರ ಅವನು ತೃಪ್ತನಾದ.

ಆದರೆ ಬಸವಣ್ಣನವರು ಉಪನಿಷತ್ ತತ್ವಜ್ಞಾನದ ಹಿನ್ನೆಲೆಯಲ್ಲಿ ಜೀವಾತ್ಮ, ಪರಮಾತ್ಮ, ಜಗತ್ತು ಇವುಗಳ ಸ್ವರೂಪ, ಇವುಗಳಲ್ಲಿರುವ ಪರಸ್ಪರ ಸಂಬಂಧ, ಬಂಧ, ಬಂಧಕ, ಮೋಕ್ಷ, ಮೋಕ್ಷೋಪಾಯ ಇತ್ಯಾದಿ ಅಧ್ಯಾತ್ಮಕ್ಕೆ ಸಂಬಂಧಿಸಿದ ಗೂಢ ವಿಷಯಗಳನ್ನು ಕುರಿತು ಸಾಮೂಹಿಕವಾಗಿ ಚರ್ಚಿಸಿ ಒಂದು ಪ್ರಗತಿಪರ ಸಿದ್ಧಾಂತದ ಪ್ರತಿಪಾದನೆ ಮಾಡಿದ್ದಾರೆ. ಈ ರೀತಿಯಾಗಿ ಬಸವಣ್ಣನವರು ಸಾಕ್ರೆಟೀಸನಿಂದ ಸಿಡಿದು ನಿಲ್ಲುವರು.

ಸಾಕ್ರೆಟೀಸ ತನ್ನ ನಾಗರಿಕ ಬಾಂಧವರನ್ನು ಸುಖಿವಾಗಿರಿಸಲು ತುಂಬಾ ಸರಳ ರೀತಿಯಲ್ಲಿ ನೀತಿಶಾಸ್ತ್ರವನ್ನು ಪ್ರತಿಪಾದಿಸಿದ. ಸಾಮಾನ್ಯ ಜನರನ್ನು ಒಳಿತಿನತ್ತ ಸತ್ಯದತ್ತ ಕರೆದೊಯ್ಯುವವ. ಒಳಿತು–ಕೆಡುಕುಗಳ ಬಗ್ಗೆ ನಿಜವಾದ ಅರಿವು ಮೂಡಿಸುವ ಪ್ರಯತ್ನವನ್ನು ತನ್ನ ಜೀವನದುದ್ದಕ್ಕೂ ಅವನು ಮಾಡುತ್ತ ಬಂದ. ಹತ್ತು ಹಲವು ಪ್ರತಿರೋಧಗಳು, ಅಡ್ಡಿ ಆತಂಕಗಳು ಬಂದರೂ ಸಾಕ್ರೆಟೀಸ ತನ್ನ ಉದಾತ್ತ ಧ್ಯೇಯದಿಂದ ವಿಮುಖನಾಗಲಿಲ್ಲ. "ಕೇವಲ ಬುದ್ಧಿ ಪ್ರಾಮಾಣ್ಯವನ್ನು ಮನ್ನಿಸಿ" ತನ್ನ ಜೀವನವನ್ನು ವಿವೇಕ ಮತ್ತು ವಿಚಾರಗಳ ಪ್ರಭುತ್ವಕ್ಕೆ ಒಳಪಡಿಸಿ ನಡೆದ ವಿಶಿಷ್ಟ ದಾರ್ಶನಿಕ. ಬಸವಣ್ಣನವರು ಇವೆಲ್ಲವುಗಳ ಜೊತೆಗೆ ಅನುಭಾವಕ್ಕೂ ಮಹತ್ವವಿತ್ತ ಅನುಭಾವಿಗಳು, ಮಹಾನುಭಾವಿಗಳು.*

❐

* ಈ ಲೇಖನ ಸಿದ್ಧಪಡಿಸಲು ಹಲವಾರು ಗ್ರಂಥಗಳ ಸಹಾಯ ಪಡೆದಿದ್ದೇನೆ.

ಬಸವಣ್ಣ : ಸ್ವಾಮಿ ವಿವೇಕಾನಂದ

●

ಡಾ. ಸೋಮನಾಥ ಯಾಳವಾರ

ಭಾರತದ ನೆಲದ ಮೇಲೆ ಜರುಗಿರುವ ಹಲವು ವೈಚಾರಿಕ ಕ್ರಾಂತಿಯ ಹರಿಕಾರರಲ್ಲಿ ಬಸವಣ್ಣ ಮತ್ತು ಸ್ವಾಮಿ ವಿವೇಕಾನಂದರು ಅತ್ಯಂತ ಪ್ರಮುಖರು. ವಿಭಿನ್ನ ಪ್ರದೇಶ, ವಿಭಿನ್ನ ಪರಿಸರ ಹಾಗೂ ವಿಭಿನ್ನ ಸಂಸ್ಕೃತಿಯಲ್ಲಿ ಬಾಳಿದ್ದ ಇವರು ವಿಭಿನ್ನ ತತ್ವಗಳ ಚಿಂತಕರು. ತಮ್ಮದೇ ಆಗಿರುವ ನೆಲೆಗಳಲ್ಲಿ ಬಾಳಿ, ಬದುಕಿ ತಮ್ಮ ವ್ಯಕ್ತಿತ್ವವನ್ನು ಉದಾತ್ತೀಕರಿಸಿಕೊಂಡು ಜಾಗತಿಕ ಸಂಸ್ಕೃತಿಗೆ ಘನತೆಯನ್ನು ನೀಡಿದವರು. ಜಡತ್ವ ವಿರೋಧಿಗಳಾದ ಇಬ್ಬರೂ ವಿಚಾರ ಹಾಗೂ ಪ್ರಚಾರವಾದಿಗಳು. ಮಾನವೀಯತೆ ಹಾಗೂ ಸಾಮಾಜಿಕ ಸಂದರ್ಭಗಳಲ್ಲಿ ಇಬ್ಬರ ಚಿಂತನೆಗಳು ಜೀವನ ವಿಧಾನಗಳಾಗಿವೆ. ಅಂತೆಯೇ ಇವರಲ್ಲಿ ಬಸವಣ್ಣನವರನ್ನು ಯುಗಪುರುಷ, ಯುಗದ ಉತ್ಸಾಹ, ಜಗಜ್ಯೋತಿ ಎಂದು ಕರೆದರೆ, ವಿವೇಕಾನಂದರನ್ನು ಸ್ವಾಮಿ, ಜಾಗತಿಕ ಮಹಾಪುರುಷ 'ದಾರ್ಶನಿಕ' ಎಂದು ಮುಂತಾಗಿ ಕರೆಯಲಾಗುತ್ತದೆ.

ಬಸವಣ್ಣ – ಸ್ವಾಮಿವಿವೇಕಾನಂದರನ್ನು ಮುಖಾಮುಖಿ ಯಾಗಿಸುವಾಗ ಹಲವು ವೈರಿಧ್ಯಗಳು ಎದುರಾಗಬಹುದಾದರೂ, ಕೆಲವು ಚಿಂತನೆಗಳಲ್ಲಿ ಆಶ್ಚರ್ಯಕರವಾದ ಸಾದೃಶ್ಯಗಳು ಗೋಚರಿಸುತ್ತವೆ. ಈ ಈರ್ವರು ಮಹಾವ್ಯಕ್ತಿಗಳಲ್ಲಿ ಸು. ೭೦೦ ವರ್ಷಗಳಷ್ಟು ಅಂತರವಿದ್ದು, ಬಸವಣ್ಣನವರು ಹುಟ್ಟಿದ್ದು ಕ್ರಿ.ಶ. ೧೧೬೧ರಲ್ಲಿ ಕನ್ನಡ ನಾಡಿನ ಬಾಗೇವಾಡಿ ಗ್ರಾಮದಲ್ಲಿ. ವಿವೇಕಾನಂದರು ಜನಿಸಿದ್ದು ಕ್ರಿ.ಶ. ೧೮೬೩ರಲ್ಲಿ ಕಲ್ಕತ್ತಾದಲ್ಲಿ. ವಿವೇಕಾನಂದರ ಬಾಲ್ಯದ ಹೆಸರು ನರೇಂದ್ರ. ಬಾಳಿದ ಅಲ್ಪವಯಸ್ಸಿನಲ್ಲಿಯೇ ಅಸಾಮಾನ್ಯ ಕಾರ್ಯಗೈದ ಹೆಗ್ಗಳಿಕೆ ಬಸವಣ್ಣ ಹಾಗೂ ವಿವೇಕಾನಂದರದು. ಬಾಲ್ಯದಿಂದಲೇ ವಿಮಾರ್ಶಾತ್ಮಕ ಹಾಗೂ ವೈಚಾರಿಕ ಬುದ್ಧಿಶಕ್ತಿಯನ್ನು ಬೆಳೆಸಿಕೊಂಡಿದ್ದ ಈರ್ವರಲ್ಲಿ ಸತ್ಯವನ್ನು ಕಂಡುಕೊಳ್ಳುವ ಮಹಾದಾಸೆಯಿದ್ದುದನ್ನು ಕಾಣಬಹುದು. ಆಯಾ ಕಾಲಗಳ ಸಾಂಸ್ಕೃತಿಕ ಮೌಲ್ಯಗಳ ಸಂಘರ್ಷ ಕಂಡ ಇವರು ಆಧ್ಯಾತ್ಮಿಕ ಹಾಗೂ ಭೌತಿಕ ಜತ್ತಿನ ಪ್ರವೃತ್ತಿಗಳ ನಡುವಿನ ನಡೆ–ನುಡಿ ಕಂಡು ರೋಸಿಹೋಗಿದ್ದರು. ಅಂಥ ಸಂಪ್ರದಾಯ, ಮೂಢನಂಬಿಕೆ, ಅಸಮಾನತೆ, ಜಾತಿಭೇದಗಳು ಪರಿಸರದ ಬ್ರಾಹ್ಮಣವರ್ಗದ ಇಬ್ಬಂದಿ ಜೀವನ ಸೂಕ್ಷ್ಮಸಂವೇದನಾಶೀಲರಾದ ಬಸವಣ್ಣನವರಿಗೆ ಬೇಸರತರಿಸಿದ್ದರೆ, ಬ್ರಿಟಿಷರ ದಬ್ಬಾಳಿಕೆ, ಸಾಂಸ್ಕೃತಿಕ ಗುಲಾಮಿತನ, ಅಶಿಕ್ಷಿತ

ವಾತಾವರಣ, ಭಾರತದ ಬಡತನ ಮುಂತಾದ ಸಂದರ್ಭಗಳು ವಿವೇಕಾನಂದರನ್ನು ಕಾಡಿದವು. ಇವುಗಳ ಪರಿಹಾರಕ್ಕಾಗಿ ಮನಸ್ಸು ಮಾಡಿದ್ದ ಈ ಮಾನವತಾವಾದಿಗಳಿಗೆ ಯೋಗ್ಯ ಶಿಕ್ಷಣ ಹಾಗೂ ಗುರು ಸ್ಥಾನಗಳು ದೊರೆಕಿದ್ದವು ಎಂಬುದು ಗಮನಾರ್ಹ ಅಂಶ. ಬಸವಣ್ಣನವರದು ತುಂಬ ಸಂಪ್ರದಾಯಶೀಲವಾದ ಹಾಗೂ ಸಂಸ್ಕೃತ ವಿದ್ವಾಂಸರ ಕುಟುಂಬವಾಗಿತ್ತು. ಅವರು ಬಾಲಕನಾಗಿದ್ದಾಗ ಅಸಂಖ್ಯಾತ ವೇದಮಂತ್ರಗಳನ್ನು ಪಾರಾಯಣ ಮಾಡಿದ್ದರು. ಆದರೆ ಅವುಗಳ ವಿವೇಚನೆಯಾದದ್ದು ಕೂಡಲ ಸಂಗಮದಲ್ಲಿ. ಅವರ ಗುರುವಿನ ಸ್ಥಾನವಾಗಿದ್ದ ಆ ಸಂಗಮವು, ಅವರಿಗೆ ಆಧ್ಯಾತ್ಮ ಶಿಕ್ಷಣದೊಂದಿಗೆ ಲೋಕವನ್ನು ಮತ್ತೊಂದು ದೃಷ್ಟಿಯಲ್ಲಿ ನೋಡುವಂತೆ ಮಾಡಿತು. ಈ ಜ್ಞಾನವೇ ಬಸವಣ್ಣನವರ 'ಕಲ್ಯಾಣ'ದ ಕಾರ್ಯಕ್ಕೆ ಅಡಿಪಾಯ ಹಾಕಿತು. ಹಾಗೆಯೇ ವಿವೇಕಾನಂದರ ತಂದೆ ವಿಶ್ವನಾಥದತ್ತರು ಕಲ್ಕತ್ತಾದ ಶ್ರೇಷ್ಠ ನ್ಯಾಯವಾದಿಗಳು. ತಾಯಿ ಭುವನೇಶ್ವರಿದೇವಿ ಸುಸಂಸ್ಕೃತ ಗೃಹಿಣಿ, ಸದಾ ಮಗನ ಅಭ್ಯುದಯವನ್ನು ಬಯಸುವ ಅವರದು ಪೂರ್ವ ಕಾಲದಿಂದಲೂ ದಾನ, ಧರ್ಮ, ವಿದ್ಯೆಗೆ ಖ್ಯಾತಿವೆತ್ತ ಮನೆತನವಾಗಿತ್ತು. ಆದ್ದರಿಂದ ನರೇಂದ್ರರಿಗೆ ಪಾಲಕರು ಸ್ವಭಾವಿಕವಾಗಿಯೇ ಒಳ್ಳೆಯ ಶಿಕ್ಷಣ ಮತ್ತು ಸಂಸ್ಕಾರಗಳ ಏರ್ಪಾಡನ್ನು ಮಾಡಿದ್ದರಲ್ಲಿ ವಿಶೇಷತೆಯಿಲ್ಲ. ಆರಂಭದ ಶಿಕ್ಷಣದಿಂದಲೇ ಪ್ರತಿಭಾವಂತರೆಂದು ಗುರುತಿಸಲಾಗುವ ಈರ್ವರೂ ದೈವಭಕ್ತರು ಹಾಗೂ ಕ್ರಿಯಾಶೀಲರಾಗಿ ಬೆಳೆದರು. ಬಸವಣ್ಣನವರು ಸಂಸ್ಕೃತ ಹಾಗೂ ಕನ್ನಡ ಭಾಷೆಗಳೆರಡರಲ್ಲಿಯೂ ಮಹಾನ್ ಪ್ರತಿಭೆ ಹಾಗೂ ಪ್ರಭುತ್ವವನ್ನು ಹೊಂದಿದ್ದರೆ, ನರೇಂದ್ರರು ಸಂಸ್ಕೃತ ಮತ್ತು ಬೆಂಗಾಲಿ ಭಾಷೆಗಳೆರಡರಲ್ಲಿಯೂ ಸಾಕಷ್ಟು ಪ್ರಭುತ್ವವನ್ನು ಗಳಿಸಿಕೊಳ್ಳುವುದರೊಂದಿಗೆ ಇಂಗ್ಲಿಷಿನಲ್ಲಿಯೂ ಪಾಂಡಿತ್ಯ ಪಡೆದರು. ಕಾವ್ಯ ಹಾಗೂ ತತ್ವಜ್ಞಾನಗಳಲ್ಲಿ ಇಬ್ಬರದೂ ತೀರದ ತೃಷೆಯಾಗಿತ್ತು. ಲೋಕಾನುಭವವನ್ನು ವಿಶಾಲವಾಗಿ ಪಡೆದಿದ್ದ ಮಹನೀಯರುಗಳ ಜೀವನಪ್ರೀತಿ ಅನುಪಮವಾದುದು.

ಕಪ್ಪಡಿ ಸಂಗಮದ ದೇವಾಲಯದ ಅಧಿಕಾರಿ ಸಂಗಮೇಶ ಗುರುಗಳು ಬಸವಣ್ಣನವರ ಶ್ರೇಷ್ಠತೆಯನ್ನು ಗುರುತಿಸಿ ಮಾರ್ಗದರ್ಶಿಯಾದರೆ, ದಕ್ಷಿಣೇಶ್ವರದ ಶ್ರೀ ರಾಮಕೃಷ್ಣ ಪರಮಹಂಸರು ನರೇಂದ್ರರ ಗುರುವಾದರು. ಈ ಈರ್ವರ ಗುರು-ಶಿಷ್ಯ ಸಂಬಂಧದಲ್ಲಿ ಒಂದು ಲೌಕಿಕತೆಯಿದೆ. ಅದು ಮೇಲುನೋಟದಲ್ಲಿ ಕಾಣಿಸುವ ಉಪದೇಶ-ಶಿಕ್ಷೆಯಂತಲ್ಲ; ಅಂತರಂಗಿಕವಾಗಿ ನೀಡಿದ ಆದೇಶ-ಭಕ್ತಿಯ ನೆಲೆಯಂತಿದೆ. ಈ ಸಂಬಂಧಗಳಲ್ಲಿ ಈರ್ವರು ವ್ಯಕ್ತಿಗಳಲ್ಲಿ ಪರಿಚಯ ಮಾತ್ರ ಕಾಣದೆ, ಎರಡು ವ್ಯಕ್ತಿಗಳ ಸಮ್ಮಿಲನದಿಂದ ಹೊರಹೊಮ್ಮಿದ ಆತ್ಮಜ್ಯೋತಿ ಗೋಚರಿಸುತ್ತದೆ. ಒಂದರ್ಥದಲ್ಲಿ ಈ ಇಬ್ಬರ ಇಲ್ಲಿಯ ಸಾಧನೆಯು ಒಂದೇ ಶಕ್ತಿಯ ಎರಡು ಮುಖಗಳಂತೆ ಗೋಚರಿಸುತ್ತದೆ. ಮಹಾವ್ಯಕ್ತಿತ್ವದ ಮುಂದಿನ ಜೀವನ ವಿಕಾಸಕ್ಕೆ ಈ ಕ್ಷೇತ್ರಗಳೇ ರಂಗಸಜ್ಜಿಕೆಗಳಾಗಿ ನಿಂತಿರುವುದನ್ನು ಅರಿಯಬಹುದು. ಆಯಾ ಕ್ಷೇತ್ರದ ಇಲ್ಲಿಯ ಗುರುವರ್ಯರು ಬಸವ ಹಾಗೂ ನರೇಂದ್ರರಿಗೆ ಸತ್ಯದರ್ಶನ ಮಾಡಿಸಲು ಪ್ರಯತ್ನಿಸಿದರು. ಸಾಧಕರ ಉಜ್ವಲ ವ್ಯಕ್ತಿತ್ವವನ್ನು ಗುರುತಿಸುವ ದಿವ್ಯದೃಷ್ಟಿ ಶ್ರೀ ಸಂಗಮೇಶ ಗುರು ಹಾಗೂ ಪರಮಹಂಸರದಾಗಿತ್ತು. ಅಂತೆಯೇ ಇವರು ಬಸವ ಹಾಗೂ ನರೇಂದ್ರರಲ್ಲಿರುವ ಅಗಾಧ ಶಕ್ತಿಯನ್ನು ಚೇತನಗೊಳಿಸಿ, ಆ ಮುಖಾಂತರವೇ ಸತ್ಯ ಸಂದೇಶಗಳನ್ನು ವಿಶ್ವಕ್ಕೆಲ್ಲ ತೋರಿದರು.

ಅನಂತರದಲ್ಲಿ ಬಸವನು ಬಸವಣ್ಣನಾಗಿ ಕಪ್ಪಡಿ ಸಂಗಮದಿಂದ ಮಂಗಳವೇಡೆ ಹಾಗೂ ಬಿಜ್ಜಳನ ರಾಜ್ಯ ಕಲ್ಯಾಣಕ್ಕೆ ಆಗಮಿಸಿ, ಒಬ್ಬ ಅಧಿಕಾರಿಯಾಗಿ ಲೋಕಕಲ್ಯಾಣ ಕಾರ್ಯ ಕೈಗೊಂಡಂತೆ, ನರೇಂದ್ರನು ವಿವೇಕಾನಂದನೆನಿಸಿ, ಭಾರತದ ಸಂಪೂರ್ಣ ಪರ್ಯಟನೆ ಕೈಗೊಂಡು ಜನಜೀವನದ ಏರಿಳಿತ ಅರಿತು, ಪರದೇಶಕ್ಕೂ ಪ್ರಯಾಣಿಸಿ ಭಾರತದ ಬಡತನ, ನಿರುದ್ಯೋಗ ಹಾಗೂ ಅಜ್ಞಾನ ನಿವಾರಣೆಗಾಗಿ ಪ್ರಯತ್ನಿಸಿದರು.

ವೇದ-ವೇದಾಂಗ, ವ್ಯಾಕರಣ, ಛಂದಸ್ಸು, ಸಂಗೀತ, ಸಾಹಿತ್ಯ, ಆರು ದರ್ಶನ ಮುಂತಾದವುಗಳನ್ನು ಆಳವಾಗಿ ಅಭ್ಯಾಸಮಾಡಿ ಬಸವಣ್ಣ ಹಾಗೂ ಸ್ವಾಮಿ ವಿವೇಕಾನಂದರು ಲೋಕಾನುಭವದೊಂದಿಗೆ ಅವುಗಳನ್ನು ವಿವೇಚಿಸಿದರು. ಹಲವು ದೃಷ್ಟಿಯಲ್ಲಿ ವಿಮರ್ಶಿಸಿದ ಅವರು ಭಾರತೀಯ ಸಂಸ್ಕೃತಿಯನ್ನು, ಅದರ ಶ್ರೇಷ್ಠತೆಯನ್ನು ಬಿತ್ತಿ ಬೆಳೆಯಲು ಅಹೋರಾತ್ರಿ ಶ್ರಮಿಸಿದರು. ಕಲ್ಯಾಣದಲ್ಲಿ ಬಸವಣ್ಣನವರು ಶರಣರ ಸಂಘಟನೆಗಾಗಿ ತಮ್ಮನ್ನು ಅರ್ಪಿಸಿಕೊಂಡು ಯಶಸ್ವಿಯಾಗುತ್ತಾರೆ. ಅದರಲ್ಲೂ ಸಾಮಾಜಿಕ (ಕೆಳವರ್ಗದ) ಜನರಿಗೆ ಸ್ಫೂರ್ತಿಯಾಗಿ ನಿಂತು ಅವರ ಧ್ವನಿಯಾಗುತ್ತಾರೆ. 'ದೇವ ನಿಮ್ಮ ನಂಬದವ ಹೊಲೆಯ, ಹುಸಿವವ ಹೊಲೆಯ, ಹೊಲಸು ತಿಂಬುವವನೇ ಹೊಲೆಯ' ಎಂದು ಹೇಳಿ,

> **'ಹೊಲೆಯೊಳಗೆ ಹುಟ್ಟಿ ಕುಲವನರಸುವ**
> **ಎಲವೋ ಮಾತಂಗಿ ಮಗ ನೀನು'**

ಎನ್ನುವಲ್ಲಿ ಕುಲವನರಸುವವರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಇಷ್ಟಕ್ಕೆ ನಿಲ್ಲದೆ 'ಎಡದ ಕೈಯಲ್ಲಿ ಕತ್ತಿ, ಬಲದ ಕೈಯಲ್ಲಿ ಮಾಂಸ, ಬಾಯಲ್ಲಿ ಸುರೆಯ ಗಡಿಗೆ ಕೊರಳಲ್ಲಿ ದೇವರಿರಲಿ ಅವರ ಲಿಂಗನೆಂಬೆ, ಸಂಗನೆಂಬೆ' ಎಂದು ಘೋಷಿಸುತ್ತಾರೆ ಬಸವಣ್ಣನವರು. ಇದನ್ನೇ ಸ್ವಾಮಿ ವಿವೇಕಾನಂದರು ದೀನರಲ್ಲಿ ಹುದುಗಿದ ದೇವನೇ ದೇವ ದರಿದ್ರರಲ್ಲಿ ಅಡಗಿದ ದೇವನೇ ದೇವ! ಈ ದೀನದಲಿತರ ಸೇವೆಗಾಗಿ ಒಂದೇಕೆ ಹಲವೇಕೆ ಸಾವಿರಾರು ಜನ್ಮ ಬಂದರೂ ಬರಲಿ, ಜನ್ಮಜನ್ಮಾಂತರಗಳಲ್ಲಿ ಕಷ್ಟ ಬಂದರೂ ಬರಲಿ ನಾನು ಸಿದ್ಧನಿದ್ದೇನೆ' ಎಂದು ಹೇಳುತ್ತ, 'ದೇವರ ಸೇವೆ ಮಾಡಬಯಸುವಿಯಾದರೆ ಮಾನವ ಸೇವೆಯನ್ನು ಮಾಡು' ಎಂದು ಉಪದೇಶಿಸಿದ್ದಾರೆ.

ಧರ್ಮ ಮತ್ತು ಅದರ ಕಾರ್ಯವ್ಯಾಪ್ತಿಯನ್ನು ಕುರಿತು ಈ ಇಬ್ಬರು ಆಲೋಚಿಸಿದ ರೀತಿ ತುಂಬಾ ವೈಜ್ಞಾನಿಕ ಮತ್ತು ವೈಚಾರಿಕವಾದುದು. 'ಹೇಡಿ ಹೆಣಗಳನ್ನಲ್ಲ; ಮನುಷ್ಯನನ್ನು ನಿರ್ಮಿಸುವ ಮಾನವಧರ್ಮ ನಮಗಿಂದು ಬೇಕು' ಎಂಬ ವಿಶಾಲ ಚಿಂತನೆ ವಿವೇಕಾನಂದರದಾಗಿತ್ತು. ಹಾಗೆಯೇ ಬಸವಣ್ಣನವರು-

> **'ದಯವಿಲ್ಲದ ಧರ್ಮವದೇವುದಯ್ಯ**
> **ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ'**

ಎನ್ನುವ ಮೂಲಕ ಈ ಮಾನವೀಯತೆಯ ಧರ್ಮವನ್ನು ತಿಳಿಸುತ್ತಾರೆ. ಸತ್ಯ, ಶುದ್ಧತೆ, ತ್ಯಾಗ ಮತ್ತು ಭ್ರಾತೃತ್ವ ಇತ್ಯಾದಿ ತತ್ವಗಳನ್ನು ಬೋಧಿಸಿದರಲ್ಲದೇ ಸ್ವತಃ ಅನುಸರಿಸಿದರು. ಇಡೀ ಮನುಕುಲವು ಶಾಂತಿ-ಸಮರಸಗಳಿಂದ ಬಾಳಬೇಕೆಂಬ ಉತ್ಕಟ ಬಯಕೆಯನ್ನು ಇಬ್ಬರೂ ಹೊಂದಿದ್ದರು.

ತಾತ್ವಿಕ ವಿಚಾರಗಳು : ಬಸವಣ್ಣ ಹಾಗೂ ವಿವೇಕಾನಂದರಿಬ್ಬರೂ ಸ್ವಭಾವತಃ

ಪ್ರಗತಿಪರರು. ವಿಚಾರವಾದಿಗಳು ಹಾಗೂ ವೈಜ್ಞಾನಿಕ ಮನೋಭಾವದವರು. ಮಾನವೀಯತೆ ಹಾಗೂ ಸಾಮಾಜಿಕ ಮನೋಧರ್ಮದ ಮಹಾನುಭಾವರು. ದೃಷ್ಟಿಯಲ್ಲಿ ಅವರು ಪ್ರತಿಭಟನಾಕಾರರೂ ಹೌದು. ವೇದ-ವೇದಾಂಗಗಳನ್ನು ಸರಿಯಾಗಿ ಅರ್ಥಮಾಡಿಕೊಂಡವರು. ಧರ್ಮದ ಜಡವಾದ ಆಚಾರ-ವಿಚಾರಗಳನ್ನು ಖಂಡಿಸುತ್ತಾರೆ.

ದೇವರ ಅಸ್ತಿತ್ವ : ೧೨ನೆಯ ಶತಮಾನದಲ್ಲಿದ್ದ ಬಸವಣ್ಣನವರು ದೇವರ ಪರಿಕಲ್ಪನೆಯ ಬಗ್ಗೆ ಆಳವಾಗಿ ಆಲೋಚಿಸಿದರು. ಈ ವೇಳೆಗಾಗಲೇ ಜನಮನದಲ್ಲಿ ಬೇರೂರಿದ್ದ 'ದೇವರ ಅಸ್ತಿತ್ವ'ದ ಪರಿಕಲ್ಪನೆ ವಿಪರೀತವಾಗಿತ್ತು. ಇಡೀ ಮಾನವಕುಲ ಮೂಢನಂಬಿಕೆ ಹಾಗೂ ಅಂಧ ಸಂಪ್ರದಾಯಗಳ ಆಚರಣೆಯಲ್ಲಿ ಮುಳುಗಿತ್ತು. ಇದರಿಂದ ಸಮಾಜದಲ್ಲುಂಟಾದ ಏರಿಳಿತಗಳು ಅಸಮಾನತೆಯನ್ನು ಹುಟ್ಟುಹಾಕಿದ್ದವು. ಇದನ್ನು ಮನಗಂಡ ಬಸವಣ್ಣನವರು ದೇವಸ್ಥಾನದ ಆವರಣಕ್ಕೂ ಬರಲು ಹೆದರುತ್ತಾ ದೂರವೇ ಉಳಿದಿರುವ ಅಸಂಖ್ಯಾತ ದೀನ-ದಲಿತ-ಅಸ್ಪೃಶ್ಯ ಜನಾಂಗದ ಅಸಹಾಯಕತೆ ಕಂಡು ಚಿಂತಿಸಿದರು. ಅಂತೆಯೇ ಆ ದೇವನ ಅಸ್ತಿತ್ವವನ್ನು ಜನಮನದಲ್ಲಿಯೇ ತೋರಿಸಿದರು. ಇದು ಉಪನಿಷತ್ತಿನಲ್ಲಿ ಕಾಣಸಿಗುವ ಅಂಶವೆನಿಸಿದರೂ ಅದನ್ನು ನವೀನವಾಗಿ ತಿಳಿಸಿ ತೋರಿಸಿದರು.

ಕಾವ್ಯ ಹಾಗೂ ತತ್ವಜ್ಞಾನಗಳಲ್ಲಿ ಅಭಿರುಚಿಯುಳ್ಳ ವಿವೇಕಾನಂದರು ಮಿಲ್ ಮತ್ತು ಸ್ಪೆನ್ಸರರ ತತ್ವಗಳನ್ನು ಆಳವಾಗಿ ಅಧ್ಯಯನ ಮಾಡಿದರಲ್ಲದೆ ಶೆಲ್ಲಿ ಹಾಗೂ ವರ್ಡ್ಸ್‌ವರ್ತ್ ಕಾವ್ಯಗಳನ್ನು ಮೆಚ್ಚಿಕೊಂಡಿದ್ದರು. ಈ ಸಂದರ್ಭದಲ್ಲಿ 'ದೇವರ ಇರುವಿಕೆ'ಯ ಬಗೆಗೆ ಜಿಜ್ಞಾಸೆಯುಂಟಾಗಿ ಯಾರಿಂದಲೂ ಸಮರ್ಪಕ ಉತ್ತರವನ್ನು ಕಾಣದೇ ದೇವರನ್ನು ಹಳಿಯುತ್ತ ನಾಸ್ತಿಕನಂತೆ ವರ್ತಿಸತೊಡಗುತ್ತಾರೆ. ನರೇಂದ್ರರ ಈ ವರ್ತನೆಯನ್ನು ಗ್ರಹಿಸಿದ ಕಾಲೇಜಿನ ಪ್ರಿನ್ಸಿಪಾಲ್ ಹಸಿಟೆ ಎಂಬುವವರು ಶ್ರೀ ರಾಮಕೃಷ್ಣ ಪರಮಹಂಸರ ಸಂಪರ್ಕವನ್ನು ಬೆಳೆಸಿಕೊಳ್ಳಲು ನರೇಂದ್ರರಿಗೆ ಮಾಗದರ್ಶನ ಮಾಡುತ್ತಾರೆ. ಅದರಂತೆ ಪರಮಹಂಸರನ್ನು ಸಂದರ್ಶಿಸಿ ದೇವರ ಅಸ್ತಿತ್ವವನ್ನು ಕುರಿತು ಅನಿರ್ವಚನೀಯವಾದ ವಿಚಿತ್ರ ಅನುಭವ ವೊಂದನ್ನು ಅನುಭವಿಸಿ, ನಂತರ ಅದರ ಮಹತ್ವವನ್ನು ಸಾರುತ್ತಾರೆ. ವೇದಾಂತದ ತಿರುಳನ್ನು ಅರ್ಥಪೂರ್ಣವಾಗಿ ಸಾರಲು ಕಂಕಣಬದ್ಧರಾಗಿ ಭಾರತದ ಪರ್ಯಟನೆ ಮಾಡುತ್ತಾರೆ. ದೀನ-ದಲಿತರಲ್ಲಿಯೇ ದೇವನನ್ನು ಕಾಣುತ್ತ, ತಮ್ಮ ಜೀವನವನ್ನು ಅವರ ಸೇವೆಗಾಗಿ ಮೀಸಲಿಡಲು ನಿರ್ಧರಿಸಿ ಕಾರ್ಯೋನ್ಮುಖರಾಗುತ್ತಾರೆ. ಬಸವಣ್ಣನವರು ದೀನ-ದಲಿತರ ಸೇವೆಗಿಂತ ಅವರಲ್ಲಿರುವ ನಿಜಜ್ಞಾನವನ್ನು ಬಡಿದೆಬ್ಬಿಸಿ ಅವರನ್ನು ಕ್ರಿಯಾಶೀಲಗೊಳಿಸಿದ್ದನ್ನಿಲ್ಲಿ ಸ್ಮರಿಸಬಹುದು.

ಮಾಯಾ ಪ್ರಪಂಚದ ಬಂಧನಗಳ ಕಠಿಣತೆಯನ್ನು, ಘನನಿಬಿಡವಾಗಿದ್ದ ಜಗತ್ತಿನ ಅಜ್ಞಾನ ತಿಮಿರವನ್ನು, ವಿಲಯಾಗ್ನಿಯಂತಿರುವ ಇಂದ್ರಿಯ ಚಾಪಲ್ಯಗಳನ್ನು ಪ್ರಲೋಭನೆಗಳ ಸೆಳೆತವನ್ನು ಈ ಇಬ್ಬರೂ ಚೆನ್ನಾಗಿ ಅರಿತಿದ್ದರು. ಈ ಬಂಧನಗಳ ಸರಪಳಿ ಕತ್ತರಿಸಲು ಅವಿಶ್ರಾಂತ ಸಾಹಸಬೇಕೆಂಬ ನಿಲುವು ಅವರದಾಗಿತ್ತು. ದೃಢ ನಿಶ್ಚಲವಾದ ಏಕಾಗ್ರತೆ, ಎಲ್ಲವನ್ನು ಮೆಟ್ಟಿ ನಿಲ್ಲುವ ಆತ್ಮಶಕ್ತಿ, ಪ್ರತಿಯೊಂದನ್ನೂ ಸೂಕ್ಷ್ಮವಾಗಿ ಅವಲೋಕಿಸುವ ಜ್ಞಾನ ಇವುಗಳು ನಿರಂತರ ಸಾಧನೆಯಿಂದಲ್ಲದೆ ಸಿದ್ಧಿ ಲಭಿಸದು ಎಂಬುದನ್ನು ಬಸವಣ್ಣ-ಸ್ವಾಮಿ ವಿವೇಕಾನಂದರು ತಿಳಿದಿದ್ದರಷ್ಟೇ ಅಲ್ಲ; ಆ ಮಾರ್ಗದಲ್ಲಿಯೇ ನಡೆದು ನುಡಿದರು. ಈ

ಅನುಭವದ ಆಳದಿಂದ ಹೊರಹೊಮ್ಮಿ ನಿಂತಿತು ವಚನ ಸಾಹಿತ್ಯ ಹಾಗೂ ವೇದಾಂತ ದರ್ಶನ. ಈ ಅನುಪಮ ಸಿದ್ಧಿಯನ್ನು ಬಸವಣ್ಣನವರು ಸಂಸಾರಿಯಾಗಿ, ಮಹಾದಂಡಾಧಿಕಾರಿಯಾಗಿ ಸಾಧಿಸಿದರೆ, ನರೇಂದ್ರರು ಸಂನ್ಯಾಸಿಯಾಗಿ, ಆತ್ಮಕಲ್ಯಾಣಾಕಾಂಕ್ಷಿಯಾಗಿ ಸಾಧನೆಗೈದರು. ಈ ಈರ್ವರ ವಿಚಾರಗಳಲ್ಲಿ ದೇವಾಲಯ, ದೇವಸ್ವರೂಪ, ಆತ್ಮಸಂಯಮ, ಶ್ರದ್ಧೆಗಳು ಚಿಂತನಾರ್ಹವಾಗಿದ್ದು, ಒಂದೇ ನಾಣ್ಯದ ಎರಡು ಮುಖಗಳಂತೆ ಗೋಚರಿಸುತ್ತವೆ.

ಪ್ರತಿಯೊಬ್ಬ ಪುರುಷ ಹಾಗೂ ಸ್ತ್ರೀಯನ್ನು ಭಗವಾನನ ಸ್ವರೂಪದಲ್ಲಿ ತಿಳಿಯಬೇಕೆನ್ನುವ ವಿವೇಕಾನಂದರು, ಬೇರೆಯವರಿಗೆ ನೀನು ಮಾಡುವ ಅಥವಾ ನೀಡುವ ಸಹಕಾರ ಅದು ಸಹಾಯವಲ್ಲ; ಅದೊಂದು ಸೇವೆ ಎಂದು ತಿಳಿಯಬೇಕು ಎನ್ನುತ್ತಾರೆ. ಯಾಕೆಂದರೆ ಪ್ರಭುವಿನ ಸಂತಾನವಾಗಿರುವ ಮಾನವರ ಸೇವೆ ಸಾಕ್ಷಾತ್ ಪ್ರಭುವಿನ ಸೇವೆಯಾಗುತ್ತದೆ ಎಂಬುದು ಅವರ ಹೇಳಿಕೆ. ಮಾನವ ದೇಹ ಮಂದಿರದಲ್ಲಿ ಪ್ರತಿಷ್ಠಿತವಾಗಿರುವ ಮಾನವರ ಆತ್ಮವೇ ಪೂಜಾರ್ಹವಾದ ದೇವನೆಂದು ತಿಳಿಸಿ, ಅದು ಸರ್ವಶ್ರೇಷ್ಠವಾದುದೆಂದು ಅಭಿಪ್ರಾಯಪಡುತ್ತಾರೆ. 'ಈ ದೇವನನ್ನು ನಾನು ಅಲ್ಲಿ ಪೂಜಿಸದಿದ್ದರೆ, ಬೇರೆ ಕಟ್ಟಡಗಳ ದೇವಾಲಯಗಳು ಯಾವ ಕೆಲಸಕ್ಕೂ ಬಾರವು' ಎಂದು ಹೇಳುವುದನ್ನು ಬಸವಣ್ಣನವರ ದೃಷ್ಟಿಯಲ್ಲಿಯ ದೇವಾಲಯಕ್ಕೆ ಹೋಲಿಸಿ ನೋಡಬಹುದು. ದೇವಾಲಯವೆಂಬುದು ಬಸವಣ್ಣನ ದೃಷ್ಟಿಯಲ್ಲಿ ಶ್ರೀಮಂತ ಹಾಗೂ ಮತಾಂಧರೂ ಆದ ವ್ಯಕ್ತಿಗಳ ಸಂಸ್ಥೆಯಾಗಿತ್ತು. ಅದಕ್ಕಾಗಿ ಅದನ್ನು ಸ್ಥಾವರವೆನ್ನುವ ಅವರು ಅದರ 'ಜಡತ್ವ'ವನ್ನು ಸೂಚಿಸುತ್ತಾರೆ.

'ಉಳ್ಳವರು ಶಿವಾಲಯ ಮಾಡುವರು;
ನಾನೇನ ಮಾಡುವೆ? ಬಡವನಯ್ಯಾ,
ಎನ್ನ ಕಾಲೇ ಕಂಭ, ದೇಹವೇ ದೇಗುಲ
ಶಿರವೆ ಹೊನ್ನ ಕಳಶವಯ್ಯಾ
ಕೂಡಲ ಸಂಗಮದೇವ ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.'

ಇಲ್ಲಿ ಸ್ಥಾವರವಾದ ದೇವಾಲಯವು ಅಳಿವಿನ ಸೂಚಕ ಹಾಗೂ ಜಡತ್ವದ ಪ್ರತೀಕವಾಗಿದ್ದು, ದೇಹವು ಚಲಿಸುವ ದೇವಾಲಯವೆನಿಸುವುದರಿಂದ ಅದು ಜಂಗಮ ಹಾಗೂ ಚೈತನ್ಯದ ಪ್ರತೀಕ. ಆದ್ದರಿಂದ ಪ್ರತಿಯೊಬ್ಬರಿಗೆ ಬಸವಣ್ಣನವರು ದೇಹವನ್ನೇ ದೇವಾಲಯವನ್ನಾಗಿ ಮಾಡಿಕೊಳ್ಳಲು ಸೂಚಿಸುತ್ತಾರೆ. ಆಚರಣೆಯಲ್ಲಿ ತರಲು ಇದು ತುಂಬಾ ಕಷ್ಟಸಾಧ್ಯವಾದರೂ ಹೊಸದೊಂದು ಚಳವಳಿಯನ್ನು ಈ ರೀತಿಯಾಗಿ ಬಸವಣ್ಣನವರು ತರಲು ಮುಂದಾದರು. ಇದೇ ಅಭಿಪ್ರಾಯವು ವಿವೇಕಾನಂದರರದೂ ಆಗಿತ್ತೆಂಬುದು ಗಮನಾರ್ಹ ಸಂಗತಿಯಾಗುವುದರಿಂದ ಈ ಇಬ್ಬರೂ ಈ ತತ್ವದಲ್ಲಿ ಬಡಜನರ, ಅದರಲ್ಲೂ ಅಸ್ಪೃಶ್ಯರ ಪರವಾಗಿದ್ದರು ಎಂಬುದನ್ನು ಮನಗಾಣಬಹುದು. ಅಸ್ಪೃಶ್ಯರ ಬಗ್ಗೆ ಬಸವಣ್ಣನವರಿಗೆ ಅಪಾರ ಪ್ರೇಮವಿತ್ತು. ಅವರು ನೆಲೆಸಿರುವ ಕೇರಿಯನ್ನು 'ಹಿರಿಯ ಮಾಹೇಶ್ವರರ ಕೇರಿ' ಎಂದು ಕರೆಯುತ್ತಿದ್ದರು. 'ಮಾಹೇಶ್ವರ' ಎಂಬ ಪದ 'ಶಿವನ ಭಕ್ತ' ಅಥವಾ 'ವೀರಶೈವ' ಎಂಬುದನ್ನು ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ ವಿವೇಕಾನಂದರ ಮಾತು 'ಯಾರ ಹೃದಯವು ಬಡಜನತೆಯ ಸಲುವಾಗಿ ರೋದಿಸುವುದೋ ಅವರನ್ನು ನಾನು ಮಹಾತ್ಮ ಎಂದು

ಕರೆಯುತ್ತೇನೆ. ಇಲ್ಲವಾದರೆ ಅವರು ದುರಾತ್ಮರಾಗುತ್ತಾರೆ' ಎಂಬುದನ್ನು ಗಮನಿಸಿದರೆ ಬಸವಣ್ಣ ಹಾಗೂ ವಿವೇಕಾನಂದರೀರ್ವರೂ ಮಹಾತ್ಮರಾಗಿದ್ದುದು ಸ್ಪಷ್ಟವಾಗುತ್ತದೆ.

ವಿವೇಕಾನಂದರು 'ಅದ್ವೈತ' ತತ್ವದ ಅನುಕರ್ತೃವೆನಿಸಿದರೆ, ಬಸವಣ್ಣ ಶಕ್ತಿ ವಿಶಿಷ್ಟಾದ್ವೈತ ಪ್ರತಿಪಾದಕರು. ಒಬ್ಬರು ಈ ದೃಷ್ಟಿಯಲ್ಲಿ ವೇದಾಂತಿ ಎನಿಸಿದರೆ ಇನ್ನೊಬ್ಬರು ಅನುಭಾವಿ ಯಾದರು. ಹೀಗಾಗಿ ವಿವೇಕಾನಂದರು 'ಸ್ವಾಮಿ' ಎನಿಸಿಕೊಂಡರೆ, ಬಸವಣ್ಣನವರನ್ನು ಶರಣರೆಲ್ಲರೂ ಗುರುವೆಂದು ಭಾವಿಸಿದರು. ಮನುಷ್ಯನ ಕರ್ತವ್ಯಕ್ಕೆ ಅತಿ ಮಹತ್ವ ನೀಡಿದರು. 'ಯಾವುದೇ ಪ್ರಕಾರದ ಕರ್ತವ್ಯವನ್ನು ಉಪೇಕ್ಷಿಸಬಾರದು. ಮನುಷ್ಯನ ಅಂತರವನ್ನು ಅವನು ಮಾಡುವ ಕಾರ್ಯಗಳ (ಕೆಲಸ) ಹಿನ್ನೆಲೆಯಲ್ಲಿ ಅಳೆಯಬಾರದು. ಅದರ ಬದಲಾಗಿ ಆತನು ತನ್ನ ಕಾರ್ಯವನ್ನು ಯಾವ ರೀತಿಯಿಂದ ಪೂರೈಸುತ್ತಾನೆ ಎಂಬುದನ್ನು ಗಮನಿಸಬೇಕು. ಮಾಡುವ ಕಾರ್ಯದಲ್ಲಿ (ಕೆಲಸ) ಹೆಚ್ಚು-ಕಡಿಮೆ ಉತ್ಪಾದನೆ ಇರಬಹುದೇ ಹೊರತು, ಅದರಲ್ಲಿ ಒಂದು ಶ್ರೇಷ್ಠ, ಇನ್ನೊಂದು ಕನಿಷ್ಠ ಎಂಬುದಿಲ್ಲ. ಚಪ್ಪಲಿ ಮಾಡುವವನ ಕಾರ್ಯವು, ಅಧ್ಯಾಪಕನು ಮಾಡುವ ಪಾಠ-ಪ್ರವಚನದಷ್ಟೇ ಮಹತ್ವವುಳ್ಳದ್ದು. ಅಂದರೆ ಮಾನವ ಮಾಡುವ ಎಲ್ಲ ಕರ್ಮಗಳು ಪವಿತ್ರವಾದವುಗಳು. ಅವುಗಳಲ್ಲಿ ಕರ್ತವ್ಯನಿಷ್ಠೆ ಮುಖ್ಯ. ಇಂತಹ ನಿಷ್ಠೆ ದೇವಪೂಜೆಗಿಂತ ಶ್ರೇಷ್ಠವೆನ್ನುತ್ತಾರೆ ವಿವೇಕಾನಂದರು. ಸಾಯುವವರೆಗೂ ಮನುಷ್ಯ ಕರ್ತವ್ಯನಿರತನಾಗಿರಬೇಕು. ಹಣ, ಹೆಸರು, ಕೀರ್ತಿ ಹಾಗೂ ಸುಖಭೋಗಗಳು ಕೇವಲ ಕೆಲವೇ ದಿನಗಳತನಕ ಇರುತ್ತವೆ. ಆದರೆ ಸತ್ಯಸಾಧನೆಗೆ ಕರ್ತವ್ಯನಿಷ್ಠೆ ಮುಖ್ಯ. ಈ ಸಾಧನೆಯಲ್ಲಿ ಸಾವು ಬಂದರೂ ಅದು ಶ್ರೇಷ್ಠವೆಂಬುದು ಅವರ ಹೇಳಿಕೆಯಾಗಿದೆ.

ವಿವೇಕಾನಂದರ ಈ ಮೇಲಿನ ವಿಚಾರದ ಹಾಗೂ ಇನ್ನೂ ವಿಶಾಲವಾದ ಅರ್ಥದ ಬಸವಣ್ಣನವರ ನೀತಿಬೋಧೆಯೇ 'ಕಾಯಕ'. ಇದರ ಪದಶಃ ಅರ್ಥವು ಕಾಯಕ್ಕೆ ಸಂಬಂಧಿಸಿದ ಯಾವುದೇ ವೃತ್ತಿಯ ಸೂಚಕವಾಗಿದೆ. ಅಂದರೆ ಅದೊಂದು ವೃತ್ತಿಯಾಗಿದ್ದು, ದೈಹಿಕ ಶ್ರಮವನ್ನೊಳಗೊಂಡಿರುವಂತಹದ್ದು. ಬಸವಣ್ಣನವರ ಅಭಿಪ್ರಾಯದಲ್ಲಿ, ಪ್ರತಿಯೊಬ್ಬನು ತನ್ನ ಆಯ್ಕೆಯ ಯಾವುದಾದರೂ ಒಂದು ವೃತ್ತಿಯನ್ನು ಕೈಗೊಂಡು ಅದನ್ನು ಪ್ರಾಮಾಣಿಕತೆಯಿಂದ ನಡೆಸಿಕೊಂಡು ಹೋಗಬೇಕು. 'ಕಾಯಕ'ವಿಲ್ಲದ ವ್ಯಕ್ತಿ ಸಮಾಜಕ್ಕೆ ಹೊರೆಯಾಗಬಹುದೆಂಬುದು ಅವರ ವಿಚಾರ. ಇನ್ನೊಂದು ಅರ್ಥದಲ್ಲಿ 'ಕಾಯಕ'ವು ವ್ಯಕ್ತಿಯ ಧರ್ಮಾಚರಣೆಗೆ ಸಹಾಯವಾಗಬೇಕು. ಬಸವಣ್ಣನವರ ದೃಷ್ಟಿಯಲ್ಲಿ 'ಕಾಯಕ'ವು ಕೇವಲ 'ವೃತ್ತಿ'ಯಾಗಿರದೆ ಅದು ದೇವನನ್ನು ಅರಿಯುವ ಒಂದು ಸಾಧನವೂ ಆಗಬೇಕು. 'ಮಾಡುವ ಮಾಟದಿಂದಲೇ ಬೇರೊಂದನರಿಯಬೇಕು' ಎಂಬುದು ಶರಣರ ವಿಚಾರ. ಈ ಕಾಯಕದಿಂದ ಬಂದ ಸಂಪಾದನೆಯ ಒಂದು ಭಾಗವನ್ನು ಜಂಗಮ(ಸಮಾಜ)ರಿಗೆ ಹಂಚಲು ಅವರು ತಿಳಿಸುತ್ತಾರೆ. ಇದನ್ನು 'ದಾಸೋಹ' ಎನ್ನಲಾಗಿದೆ. ಇದು ದಾನಕ್ಕಿಂತ ಮಿಗಿಲಾದ ಅರ್ಥಹೊಂದಿದ ಪದ.

ಯಾವುದೇ ವೃತ್ತಿಯು ಇನ್ನೊಂದು ವೃತ್ತಿಗಿಂತ ಉಚ್ಚ ಅಥವಾ ನೀಚವಾಗಿರುವುದಿಲ್ಲ ಎಂಬ ಇನ್ನೊಂದು ಅರ್ಥ 'ಕಾಯಕ' ಶಬ್ದಕ್ಕಿದೆ. ಅಂದರೆ ಯಾವುದೇ ಕೆಲಸ ಮಾಡುವ ಎಲ್ಲ ವ್ಯಕ್ತಿಗಳೂ ಸಮಾನರು. ಈ ವೃತ್ತಿಗಳ ಹಿನ್ನೆಲೆಯಲ್ಲಿ ಜಾತಿಭೇದ ಸಲ್ಲದು ಎಂಬುದನ್ನು ಬಸವಣ್ಣನವರು ಹೇಳುತ್ತಾರೆ. ಅವರ ಅನುಯಾಯಿಗಳು ಮಾಡುತ್ತಿದ್ದ ಕಾಯಕಗಳ ಪಟ್ಟಿ

ತುಂಬಾ ಉದ್ದನೆಯದಾಗಿದೆ. ಉದಾಹರಣೆಗೆ: ಮಾಚಯ್ಯ–ಮಡಿವಾಳ, ಚೌಡಯ್ಯ–ಅಂಬಿಗ, ಕೇತಯ್ಯ–ಮೇದರ, ಸಂಗಣ್ಣ–ವೈದ್ಯ, ರಾಮಣ್ಣ–ದನಗಾಹಿ, ಚಂದಯ್ಯ–ನುಲಿಯ, ಸತ್ಯಕ್ಕ–ಕಸಗುಡಿಸುವವಳು, ಮಾರಯ್ಯ ದಂಪತಿಗಳು–ಮೋಳಿಗೆಯ ಕಾಯಕದವರಾಗಿದ್ದರು. ಇವರಲ್ಲಿ ಹೆಚ್ಚಿನವರು ಬಡವರಾಗಿದ್ದು, ಎಲ್ಲರೂ ಧಾರ್ಮಿಕ ಚರ್ಚೆಗಳಲ್ಲಿ ಭಾಗವಹಿಸಿ ಮುಕ್ತವಾಗಿ ಚರ್ಚಿಸುತ್ತಿದ್ದರು ಎಂಬುದನ್ನು ಗಮನಿಸಬಹುದು.

ವರ್ಗಭೇದ, ವರ್ಣಭೇದ, ಲಿಂಗಭೇದವನ್ನು ದೂರಗೊಳಿಸಲು ಹಗಲಿರುಳು ಶ್ರಮಿಸಿದವರು ಈ ಮಾನವತಾವಾದಿಗಳು. ಪರಮಹಂಸರ ಸಂತತವಾದ ಸಾಹಸದಿಂದ ಕಾಮಿನಿ ಹಾಗೂ ಕಾಂಚನಗಳನ್ನು ಸಂಪೂರ್ಣವಾಗಿ ತ್ಯಜಿಸಿದ್ದ ಶ್ರೀ ವಿವೇಕಾನಂದರು, ಸ್ತ್ರೀ–ಪುರುಷರೆಂಬ ಲಿಂಗಭೇದವನ್ನು ವಿವಿಧ ವಿಚಿತ್ರ ಸಾಧನೆಗಳಿಂದ ಚಿತ್ತದಿಂದ ಕಿತ್ತೊಗೆದಿದ್ದರು. ಸ್ತ್ರೀಯರೆಲ್ಲ ಜಗನ್ಮಾತೆಯ ಪ್ರತಿಬಿಂಬಗಳೆಂಬುದನ್ನು ಅನುಭವದಿಂದ ಅರಿತುಕೊಂಡಿದ್ದರು. ಬಸವಣ್ಣನವರು ಸ್ತ್ರೀ–ಪುರುಷರನ್ನು ಸಮಾನವಾಗಿ ಗೌರವಿಸಿದ್ದು, ಅನುಭಾವಗಳ ಹಂಚಿಕೆಗೆ ಅವರಿಗೆ ಆಸ್ಪದ ಮಾಡಿಕೊಟ್ಟದ್ದನ್ನು 'ಅನುಭಾವ ಮಂಟಪ'ದ ಹಿನ್ನೆಲೆಯಲ್ಲಿ ಗುರುತಿಸಬಹುದು. ಸಾಮಾಜಿಕವಾಗಿ ಸ್ತ್ರೀ ಸಂಕುಲದ ಸ್ಥಾನಮಾನಗಳನ್ನು ಚರ್ಚಿಸಿ, ಅವುಗಳನ್ನು ಎತ್ತಿ ತೋರಿಸಿದ ಬಸವಾದಿ ಶರಣರು ಈ ಮೊದಲು ಹೆಣ್ಣಿನ ಕುರಿತಾಗಿ ಮೂಡಿದ್ದ ಕೀಳುಭಾವನೆಯನ್ನು ತೊಡೆದು ಹಾಕಿದರು. ವಿವೇಕಾನಂದರು ಸಹ ಹಲವಾರು ಸಂದರ್ಭಗಳಲ್ಲಿ ಸ್ತ್ರೀ ಸಂಕುಲದ ಸ್ಥಾನಮಾನಗಳನ್ನು ಎತ್ತಿ ತೋರಿದ್ದು, ಸ್ತ್ರೀ ವಿಮೋಚನೆಗಾಗಿ ದುಡಿದಿದ್ದುದನ್ನು ತಿಳಿಯಬಹುದು. ಒಟ್ಟಿನಲ್ಲಿ ಇವರಿಬ್ಬರು ತಳೆದಿದ್ದ ಸ್ತ್ರೀಪರ ನಿಲುವುಗಳು ಪ್ರಮುಖವಾಗುತ್ತವೆ.

ಜೀವಾತ್ಮನ ವಿಕಾಸಕ್ಕೆ ಬಸವಣ್ಣ–ವಿವೇಕಾನಂದರು ಮುಕ್ತ ಅವಕಾಶಗಳನ್ನು ನೀಡಿದ್ದಾರೆ. ಆತ್ಮನ ಸರ್ವಸ್ವಾಮ್ಯತ್ವ ಮತ್ತು ಸ್ವಾವಲಂಬಿತ್ವವನ್ನು ಬಸವಣ್ಣನವರು ಹಲವು ವಚನಗಳಲ್ಲಿ ಎತ್ತಿ ತೋರಿಸುತ್ತಾರೆ. ಆತ್ಮ ವಿಮರ್ಶೆಯೇ ಅವರ ವಚನಗಳ ಪ್ರಧಾನವಸ್ತು. ಬಸವಣ್ಣನವರ ಈ ಆತ್ಮವಿಮರ್ಶೆಯೇ ಅವರ ವಚನಗಳ ಪ್ರಧಾನ ವಸ್ತು. ಬಸವಣ್ಣನವರು ಈ ಆತ್ಮ ವಿಮರ್ಶೆಯ ಅರಿವನ್ನೇ ಗುರುವಾಗಿಸಿ ಕೊಂಡವರು ಇದು ಅವರ ಅಂತರಂಗ–ಬಹಿರಂಗದ ಬದುಕುಗಳೆರಡನ್ನೂ ನಮ್ಮೆದುರಿಗೆ ಬಿಚ್ಚಿ ತೋರುವ ಕ್ರಿಯೆ. ಹೀಗಾಗಿ ಆತ್ಮನಿರೀಕ್ಷೆಯಲ್ಲಿ ಬಸವಣ್ಣನವರ 'ವ್ಯಕ್ತಿತ್ವದ ಶೋಧ' ಕಾಣುತ್ತದೆ. ವಿವೇಕಾನಂದರು ಒಂದು ಕಡೆ ಸಹಸ್ರ ದ್ವೀಪೋದ್ಯಾನದಲ್ಲಿ ಮಾಡಿದ ಪ್ರವಚನದಲ್ಲಿ 'ಆತ್ಮ'ನ ಕುರಿತು ಹೇಳಿದ ಈ ಮಾತುಗಳು ತುಂಬಾ ಮಹತ್ವದೆನಿಸುತ್ತವೆ. ಅಲ್ಲಿ ಅವರು 'ಆತ್ಮವು ಕಾಲದೇಶಾತೀತವಾದುದು, ಸರ್ವತ್ರವಾದುದು, ಈಶ್ವರ ಕೀರ್ತನೆ ಮಾಡುವ ಪ್ರತಿಯೊಂದು ಮುಖವೂ ನನ್ನ ಮುಖ; ನೋಡುವ ಪ್ರತಿಯೊಂದು ಕಣ್ಣು, ನನ್ನ ಕಣ್ಣು. ನಾನು ಒಂದು ಸ್ಥಳದಲ್ಲಿಲ್ಲ; ನಾವು ಒಂದು ದೇಹವಲ್ಲ; ವಿಶ್ವವೇ ನಮ್ಮ ದೇಹ. ನಾವೆಲ್ಲ ಐಂದ್ರಜಾಲಿಕರು; ಈಗ ನಮ್ಮ ಮನಸ್ಸು ದೇಹಸ್ಥವಾಗಿದೆ. ಆದ್ದರಿಂದ ನಮಗೆ ಒಂದೇ ಶಿರಸ್ಸು. ಸಮಾಧಿಯಲ್ಲಿ ನಮಗೆ ಸಹಸ್ರಾರು ಶಿರಗಳಾಗುತ್ತವೆ' ಎಂದು ಹೇಳಿದ್ದು ಗಮನಾರ್ಹವಾಗುತ್ತದೆ. 'ಆತ್ಮವಚ್ಯುತವೆಂದು ತಿಳಿದರೆ ಮರಣ ತೊಲಗಬೇಕು. 'ನಾನೂ ನನ್ನ ತಂದೆಯೂ ಒಂದೇ' ಎಂದು ಯಾವಾಗಲೂ ಧ್ಯಾನಿಸಿ' ಎನ್ನುತ್ತಾರೆ ಅವರು. 'ಏಕಮೇವಾದ್ವಿತೀಯವಾದ ಕೇವಲ ಸತ್ಯದ ವಿವಿಧ ರೂಪಗಳಂತಿರುವ

'ಆತ್ಮ'ದ ಪರಿಕಲ್ಪನೆಯನ್ನು ಸ್ವತಃ ಸಿದ್ಧಿಯಿಂದ ಅರಿತ ಮಹಾಪುರುಷರಾಗಿದ್ದರು. ದೇವರು ಮತ್ತು ಮಾನವರ ಮಧ್ಯದಲ್ಲಿ ಭಿನ್ನತೆಯಿಲ್ಲ. ಭಿನ್ನತೆಯಿರುವುದು ಪ್ರಮಾಣದಲ್ಲಿ (Degree) ಮಾತ್ರ. ಯಾವ ಸಮಾಜದಲ್ಲಿ ಸತ್ಯಕ್ಕೆ ಸ್ಥಾನವಿದೆಯೋ ಅದುವೇ ಸರ್ವಶ್ರೇಷ್ಠ ಸಮಾಜವಾಗಬಲ್ಲುದು. ಆದ್ದರಿಂದ ಪ್ರತಿಯೊಬ್ಬರು ಸತ್ಯವನ್ನು ಗ್ರಹಿಸಬೇಕು ಹಾಗೂ ಅನುಸರಿಸಬೇಕು' ಎಂದು ಇಬ್ಬರೂ ಪ್ರತಿಪಾದಿಸುತ್ತಾರೆ.

ಉಪಸಂಹಾರ

ಈ ಮೇಲಿನ ಅನೇಕ ಅಂಶಗಳಲ್ಲಲ್ಲದೆ ತ್ಯಾಗ, ಶ್ರದ್ಧೆ, ಆತ್ಮಸಂಯಮ, ಸೇವೆ, ಭಕ್ತಿ ಮೊದಲಾದ ವಿವೇಚನೆಗಳಲ್ಲಿಯೂ ಈರ್ವರ ಅಭಿಪ್ರಾಯಗಳು ಒಂದೇ ತೆರನಾಗಿ ಕಾಣುತ್ತಿರುವುದು ಆಶ್ಚರ್ಯವೆನಿಸುತ್ತದೆ. ಮೇಲುನೋಟದಲ್ಲಿ ಬಸವಣ್ಣ–ವಿವೇಕಾನಂದರು ವಿಭಿನ್ನ ಕಾಲದ, ವಿಭಿನ್ನ ಪರಿಸರದ, ವಿಭಿನ್ನ ಧರ್ಮ ತತ್ವಗಳ ಪ್ರಚಾರಕರಾಗಿ ಕಂಡುಬಂದರೂ ಸಹ, ಆಳವಾದ ಆಂತರಿಕ ನೆಲೆಯಲ್ಲಿ ಅವರ ವಿಚಾರಗಳು ಒಂದೇ ತತ್ವವನ್ನು ತಿಳಿಸುವ ಕವಲುದಾರಿಗಳಂತೆ ಕಾಣುತ್ತಿವೆ. ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ವಿಚಾರಗಳು ಬಿಂಬ–ಪ್ರತಿಬಿಂಬಗಳಂತೆ ವ್ಯಕ್ತವಾಗುತ್ತಿವೆ. ಹೇಳುವ ರೀತಿ ಭಿನ್ನವಾಗಬಹುದು, ಒಮ್ಮೊಮ್ಮೆ ಬಳಸಿರುವ ಪದ ಬೇರೆಯಾಗಬಹುದು. ಆದರೆ ಹೇಳುವ ಉದ್ದೇಶ ಹಾಗೂ ಪರಿಣಾಮ ಒಂದೇ ಆಗಿರುವುದನ್ನು ಸೂಕ್ಷ್ಮ ಸಂವೇದನಾಶೀಲರು ಅರಿತುಕೊಳ್ಳಬಹುದು.

ಒಟ್ಟಿನಲ್ಲಿ ಹೇಳಬೇಕೆಂದರೆ ಎರಡು ಮೇರುಪರ್ವತ ಸದೃಶ್ಯವಾದ ವ್ಯಕ್ತಿಗಳ ಮಹಾವ್ಯಕ್ತಿತ್ವವನ್ನು ಈ ಪುಟ್ಟ ಲೇಖನದಲ್ಲಿ ಹಿಡಿದಿಡಲು ಅಸಾಧ್ಯವಾದ ಸಂಗತಿಯಾಗಿದ್ದು, ಬಸವಣ್ಣ–ಸ್ವಾಮಿ ವಿವೇಕಾನಂದರ ತೌಲನಿಕ ಅಧ್ಯಯನ ಸಮಗ್ರವಾಗಿ ನಡೆದರೆ ಹಲವಾರು ಸಂಗತಿಗಳು ಬೆಳಕು ಕಾಣಬಹುದು ಎಂದು ಹೇಳಬಹುದು.

ಬಸವಣ್ಣ ಹಾಗೂ ಮಹಾತ್ಮ ಜ್ಯೋತಿಬಾಫುಲೆ

●

ಡಾ. ವ್ಹಿ.ಜಿ. ಪೂಜಾರ

ನಮ್ಮ ದೇಶ ಹಲವು ಧರ್ಮಗಳ, ಹಲವು ಸಂಸ್ಕೃತಿಗಳ ಆಡುಂಬೊಲವಾಗಿದೆ. ಇಲ್ಲಿ ಧರ್ಮದ ಒರತೆ ನಿರಂತರವಾಗಿ ಪ್ರವಹಿಸುವಂತೆ ಅನೇಕ ಮಹಾಪುರುಷರು ನೋಡಿಕೊಂಡಿದ್ದಾರೆ. ಬುದ್ಧ ಬಸವಣ್ಣ-ಅಂಬೇಡ್ಕರರಂಥ ಮಹಾತ್ಮರು ಈ ನಾಡಿನಲ್ಲಿ ಜನಿಸಿ ಬೆಳಕು ನೀಡಿದ್ದಾರೆ. ಆ ಸಾಲಿನಲ್ಲಿ ಜ್ಯೋತಿಬಾಫುಲೆಯವರ ಹೆಸರು ಎದ್ದು ಕಾಣುವಂಥದ್ದು. ಹನ್ನೆರಡನೇ ಶತಮಾನದಲ್ಲಿ ಸಮಾನತೆಯ ಹಂದರದ ಮೇಲೆ ನವಸಮಾಜವನ್ನು ನಿರ್ಮಿಸಲು ಅವಿರತ ಶ್ರಮಿಸಿದವರು ಮಹಾತ್ಮಾ ಬಸವೇಶ್ವರರು. ಅಂದು ವರ್ಣಾಶ್ರಮ ಧರ್ಮ ಎಲ್ಲರಲ್ಲೂ ಬೇರು ಬಿಟ್ಟಿತ್ತು. ಮೇಲು-ಕೀಳು, ಉಚ್ಚ-ನೀಚ, ಬಡವ-ಬಲ್ಲಿದ, ಸ್ತ್ರೀ-ಪುರುಷ ಎಂಬ ಭೇದ ಭಾವಗಳು ಜನತೆಯಲ್ಲಿ ರಕ್ತಗತವಾಗಿದ್ದುವು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವಿಂಗಡನೆ ಅಂದಿನ ಸಮಾಜದಲ್ಲಿ ವಿಷಮಯ ವಾತಾವರಣ ಬಿಂಬಿಸಿತ್ತು. ಸಮಾಜ ಅಂದು ಒಡೆದು ಹೋಳು-ಹೋಳಾಗಿತ್ತು. ಬ್ರಾಹ್ಮಣ ಶ್ರೇಷ್ಠ, ಶೂದ್ರ ಕನಿಷ್ಠ ಎಂಬ ಭಾವನೆ ಎಲ್ಲೆಂದರಲ್ಲಿ ಹಬ್ಬಿಹರಡಿತ್ತು. ಇದನ್ನು ಜನತೆಯಿಂದ ಕಿತ್ತೊಗೆಯಲು ಬಸವಣ್ಣನವರು ಕಂಕಣಬದ್ಧರಾದರು. ಜಾತಿ-ಭೇದ, ಸ್ತ್ರೀ-ಪುರುಷ ಭೇದ, ವರ್ಗಭೇದಗಳನ್ನು ಹೋಗಲಾಡಿಸಿ ಎಲ್ಲರೂ ಒಂದೇ, ಎಲ್ಲರೂ ನಮ್ಮವರೇ, ಮೇಲು-ಕೀಳು ಎಂಬುದೇ ಇಲ್ಲವೆಂದು ಸಾರುವುದರ ಮೂಲಕ ಮಾನವತೆಯನ್ನು ಮೆರೆದರು. ಸಮಾನತೆ-ಸೋದರತ್ವ-ಕೋಮುಸಾಮರಸ್ಯ ಭಾವನೆಗಳನ್ನು ಜನಸಮುದಾಯದಲ್ಲಿ ಬಿತ್ತಿಬೆಳೆಯುವುದರ ಮೂಲಕ ಬಸವಣ್ಣನವರು ಜನಮನ್ನಣೆಯನ್ನು ಗಳಿಸುವರು. ಹನ್ನೆರಡನೇ ಶತಮಾನದಲ್ಲಿ ಶರಣಚಳವಳಿಯ ಮುಂದಾಳತ್ವವನ್ನು ವಹಿಸುವುದರ ಮೂಲಕ ಅವರು ಸಮಾಜ ಸುಧಾರಕರಾಗಿ, ಪ್ರಗತಿಶೀಲರಾಗಿ, ವೈಚಾರಿಕವಾಗಿ ಬೆಳೆದದ್ದು ಕನ್ನಡ ನಾಡು ಅಷ್ಟೇ ಏಕೆ? ಇಡೀ ವಿಶ್ವಕಂಡ ಅದ್ಭುತ ವ್ಯಕ್ತಿ ಅವರು.

ಹನ್ನೆರಡನೇ ಶತಮಾನದಲ್ಲಿ ಬಸವಾದಿಶರಣರು ಅಂದಿನ ಸಮಾಜದಲ್ಲಿದ್ದ ಕರ್ಮಠತನವನ್ನು, ಜಾತೀಯತೆಯನ್ನು, ಮೌಢ್ಯ-ಕಂದಾಚಾರಗಳನ್ನು, ಸ್ತ್ರೀ-ಪುರುಷ ಭೇದಭಾವವನ್ನು ಹೋಗಲಾಡಿಸಲು ಬಹುವಾಗಿ ಪ್ರಯತ್ನಿಸಿದರು. ಹೋರಾಟ ನಡೆಸಿದರು. ಬಸವಣ್ಣನವರು

ವಿಶೇಷವಾಗಿ ಮಹಿಳೆಯರ ಅಭ್ಯುದಯಕ್ಕಾಗಿ, ಅವರೂ ಪುರುಷರ ಸಮಾನರೆಂದು ಹೋರಾಟ ನಡೆಸಿದುದು ಅಂದಿನ ಕಾಲದಲ್ಲಿ ಅತ್ಯಂತ ಪ್ರಗತಿಪರ ವಿಚಾರವಾಗಿದೆ. ಮಹಾರಾಷ್ಟ್ರದ ಮಹಾನ್ ಸಂತರೂ, ಪ್ರಗತಿಪರ ವಿಚಾರವಾದಿಗಳೂ ಆದ ಮಹಾತ್ಮಾ ಜ್ಯೋತಿಬಾಪುಲೆಯವರು ಬಸವಣ್ಣನವರು ನಡೆಸಿದ ಹೋರಾಟವನ್ನೇ ಹೆಚ್ಚು ಕಡಿಮೆ ಮುಂದುವರಿಸಿದುದನ್ನು ಅರಿಯುವೆವು. ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮಹಿಳೆಯರೂ ಪುರುಷರಂತೆ ಎಲ್ಲಾ ಕ್ಷೇತ್ರಗಳಲ್ಲೂ ವಿಶೇಷವಾಗಿ ಕೆಳವರ್ಗದವರನ್ನು, ದಲಿತರನ್ನು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದೆ ತರಲು ಅವಿರತ ಶ್ರಮಿಸಿದುದಕ್ಕೆ ಅವರ ವಚನ ಹಾಗೂ ಕೃತಿಗಳೇ ನಮಗಿಂದು ಸಾಕ್ಷ್ಯವನ್ನು ಒದಗಿಸುತ್ತವೆ. ಮನುಷ್ಯ ಯಾವುದೋ ಜಾತಿಯಲ್ಲಿ, ಯಾರಹೊಟ್ಟೆಯಲ್ಲೋ ಹುಟ್ಟುವುದು ಸಹಜ. ಹುಟ್ಟಿದಾಕ್ಷಣಕ್ಕೆ ಅವರನ್ನು ಮೇಲು ಕೀಳು, ಬ್ರಾಹ್ಮಣರ ಹೊಟ್ಟೆಯಲ್ಲಿ ಹುಟ್ಟಿದವರು ಮೇಲು ಎಂದು ಭಾವಿಸುವ ಕಾಲವೊಂದಿತ್ತು. ಆದರೆ ಬಸವಣ್ಣನವರು ಮತ್ತು ಮಹಾತ್ಮಾ ಜ್ಯೋತಿಬಾಪುಲೆಯವರು ಹುಟ್ಟು ಮನುಷ್ಯನ ಶ್ರೇಷ್ಠತ್ವವನ್ನು ಅಳೆಯುವ ಸಾಧನವಲ್ಲ. ಆತ ಹುಟ್ಟಿದ ಮೇಲೆ ಎಂಥೆಂಥಾ ಕಾರ್ಯಗಳನ್ನು ಮಾಡುತ್ತಾನೆ ಆ ಕಾರ್ಯಗಳ ಮೇಲೆ ಅವನ ಶ್ರೇಷ್ಠತ್ವವನ್ನು – ಕನಿಷ್ಠತ್ವವನ್ನು ಅಳೆಯಬೇಕೆಂದುದು ತುಂಬ ಸ್ವಾಗತಾರ್ಹವಾದುದಾಗಿದೆ. ಹುಟ್ಟು ಮನುಷ್ಯನ ಶ್ರೇಷ್ಠತ್ವವನ್ನು ಅಳೆಯುವ ಸಾಧನವಾಗಬಾರದೆಂಬುದಕ್ಕೆ ಎಲ್ಲ ಮಹಾತ್ಮರ ಸಹಮತವಿದೆ. ಅದಕ್ಕೇ ಬಸವಣ್ಣ 'ಇವನಾರವ, ಇವನಾರವ, ಇವನಾರವನೆಂದೆಣಿಸದಿರಯ್ಯ, ಇವ ನಮ್ಮವ ಇವನಮ್ಮವನೆಂದೆಣಿಸಯ್ಯ' ಎಂದುದು ಮಾನವ ಕುಲಕೋಟಿಗೇ ಮಾರ್ಗದರ್ಶಿಯಾಗುವಂಥ ನುಡಿಯಾಗಿದೆ. ಸಕಲ ಜೀವ ಜಂತುಗಳನ್ನು ಸಕಲ ಜೀವಾತ್ಮರನ್ನು ಗೌರವಭಾವನೆಯಿಂದ ಕಾಣಬೇಕೆಂಬುದು ಬಸವಣ್ಣನ ಧ್ಯೇಯವಾಗಿದೆ. ಈ ಧ್ಯೇಯವಾಕ್ಯಕ್ಕೆ ಭಾಷ್ಯ ಬರೆದಂತೆ ಬಸವಣ್ಣನು ಬದುಕಿ ತೋರಿಸಿದುದಕ್ಕೆ ಆತನ ಅನೇಕ ವಚನಗಳು ನಮಗಿಂದು ಸಾಕ್ಷಿಯಾಗಿವೆ. "ಕಾಸಿಕಮ್ಮಾರನಾದ, ಬೀಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗನಾದ ವೇದ ಓದಿ ಹಾರುವನಾದ" ಎಂದು ನುಡಿದ ಬಸವಣ್ಣನ ನುಡಿ ದಿಟವಾದುದಾಗಿದೆ. ಜಾತಿಗಳು ನಾವು ನಾವು ಮಾಡುವ ಉದ್ಯೋಗದಿಂದಲೇ ಬಂದಂಥವು. ಜಾತಿ ಗೋಡೆಗಳನ್ನು ನಿರ್ಮಿಸಿದವರು ಮನುಷ್ಯರೇ. ಈ ಗೋಡೆಗಳನ್ನು ನೆಲಸಮ ಮಾಡಿದಾಗಲೇ ನಿಜವಾದ ಧರ್ಮವನ್ನು ಅರಿತುಕೊಳಲಿಕ್ಕೆ ಸಾಧ್ಯವಾಗುವದು. 'ಮನುಜ ಕುಲ ತಾನೊಂದೇ ವಲಂ' ಎನ್ನುವ ಪಂಪನ ವಾಣಿಯಂತೆ, ಮನುಜರೆಲ್ಲಾ ಒಂದೇ ಕುಲದವರು ಎಂದು ಭಾವಿಸಿದ ಶರಣರ ನುಡಿಗಡಣಗಳಂತೆ, ಸ್ತ್ರೀ–ಪುರುಷರು ಉಚ್ಚ–ನೀಚರೆಂಬ ಭಾವನೆಯನ್ನು ಕಿತ್ತೊಗೆದು ಎಲ್ಲರೂ ಸಮಾನರು ಎಂದು ಸಾರಿದ ಮಹಾತ್ಮಾ ಜ್ಯೋತಿಬಾಪುಲೆಯವರ ಸಾರ್ವತ್ರಿಕ ಸತ್ಯ ನುಡಿಯಂತೆ ನಾವಿಂದು ನಡೆದುಕೊಳ್ಳಬೇಕಿದೆ, ಅವನ್ನು ಆಚರಣೆಯಲ್ಲಿ ತರಬೇಕಿದೆ. ಮಹಾತ್ಮಾ ಜ್ಯೋತಿಬಾಪುಲೆಯವರಂತೂ ಅಂದು ಜಾತಿವ್ಯವಸ್ಥೆಯ ವಿರುದ್ಧ ಹೋರಾಡಿ ಸಮಾಜದಲ್ಲಿ ಸಮಾನತೆಯನ್ನು ತರಬೇಕೆನ್ನುವ ಕನಸು ಕಂಡಿದ್ದರು. ಬಸವಣ್ಣನವರು ಸಮಾನತೆಯ ಹಂದರದ ಮೇಲೆ ನವಸಮಾಜವನ್ನು ನಿರ್ಮಿಸಬೇಕೆಂದು ಕನಸು ಕಂಡಿದ್ದರು. ಇವರೀರ್ವರೂ ತಮ್ಮೀ ಕನಸನ್ನು ನನಸಾಗಿಸಲು ಹಲವು ಹತ್ತಾರು ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ

ಪೂರೈಸಿದುದನ್ನು ನಾವು ಅರಿಯುವೆವು. ಶಿಕ್ಷಣ ಎಲ್ಲರಿಗೂ ದೊರೆಯಬೇಕು. ಶಿಕ್ಷಣ ದೊರೆತಲ್ಲದೆ ಜನತೆಯಲ್ಲಿ ಮನೆಮಾಡಿಕೊಂಡಿದ್ದ ಅಜ್ಞಾನ ತೊಲಗದು ಎಂದು ಈರ್ವರೂ ನಂಬಿದ್ದರು. ಶಿಕ್ಷಣ ಪ್ರಸಾರಕ್ಕಾಗಿ ಈರ್ವರೂ ಹಲವು ಹತ್ತು ದಿಶೆಯಲ್ಲಿ ಶ್ರಮಿಸಿದರು. ಬಸವಣ್ಣ ಅಂದು ನಡೆಸಿದ ದಾಸೋಹ ಮಹಾಮನೆಯಲ್ಲಿನ ಕಾರ್ಯಕ್ರಮದಲ್ಲಿನ ಅನುಭವ ಮಂಟಪದಲ್ಲಿ ನಡೆಸಿದ ಆಧ್ಯಾತ್ಮಿಕ ಚರ್ಚೆಗಳಲ್ಲಿ ಅನೇಕ ಜನ ಶರಣ–ಶರಣೆಯರು ಪಾಲ್ಗೊಂಡು ತಮ್ಮ ಭಾವನೆಗಳನ್ನು ವಿನಿಮಯಮಾಡಿಕೊಂಡರು. ಕೆಲವರು ಆ ಭಾವನೆಗಳಿಗೆ ವಚನಗಳ ರೂಪಕೊಟ್ಟರು. ಅದೇ ಇಂದು ನಮಗೆ ವಚನಗಳಾಗಿ, ಅಮೂಲ್ಯ ನಿಧಿಗಳಾಗಿ ದೊರೆತಿವೆ. ಸಾಕ್ಷರತೆಯ ಪ್ರಮಾಣ ಅತ್ಯಂತ ಕಡಿಮೆಯಿದ್ದ ಅಂದಿನ ದಿನಮಾನಗಳಲ್ಲಿ ಹಲವು ಕಾಯಕಗಳನ್ನು ಕೈಕೊಂಡ ಸಮಾಜದ ವಿವಿಧ ಸ್ತರದ ಶರಣ–ಶರಣೆಯರು ವಚನಗಳನ್ನು ಬರೆದದ್ದು ಅದ್ವಿತೀಯವಾದುದಾಗಿದೆ. ಕಮ್ಮಾರ, ಬಡಿಗ, ಅಗಸ, ನಾಪಿತ, ಅಂಬಿಗ, ವೈದ್ಯ, ದನಗಾಯಿ, ಹೂಗಾರ, ಕೃಷಿಕ, ಕೂಲಿಕಾರ, ಚರ್ಮಕಾರ, ಬೆಸ್ತ ಮುಂತಾದ ವೃತ್ತಿಗಳಲ್ಲಿ ತೊಡಗಿದ ಶರಣ – ಶರಣೆಯರು ಅಂದು ಶಿಕ್ಷಿತರಾಗಿ ವಚನ ರಚನೆಗೆ ತೊಡಗಿದುದು ನಿಜಕ್ಕೂ ಸ್ವಾಗತಾರ್ಹವಾದುದಾಗಿದೆ. ಇದರಂತೆಯೇ ಮಹಾತ್ಮಾ ಜ್ಯೋತಿಬಾಫುಲೆಯವರು ಮಹಾರಾಷ್ಟ್ರ ರಾಜ್ಯದಲ್ಲಿ ಶಿಕ್ಷಣ ಪ್ರಸಾರಕ್ಕಾಗಿ ಹಿಂದುಳಿದವರನ್ನು ಶಿಕ್ಷಿತರನ್ನಾಗಿ ಮಾಡಲು ಶಾಲೆ, ಕಾಲೇಜುಗಳನ್ನು ತೆರೆದು ಅವಿರತ ಶ್ರಮಿಸಿದುದು ಮೆಚ್ಚುವಂಥದಾಗಿದೆ. ವರ್ಣಾಶ್ರಮ ಧರ್ಮದ ಆಧಿಕ್ಯವಿದ್ದ ಅಂದಿನ ಸಮಾಜದಲ್ಲಿ ವಿದ್ಯೆಪಡೆಯುವ ಹಕ್ಕು ಬ್ರಾಹ್ಮಣರಿಗೇ ಮೀಸಲಾಗಿತ್ತು. ಇನ್ನುಳಿದವರು ಹಾಗೂ ದಲಿತರು ವಿದ್ಯೆ ಪಡೆಯುವ ಹಕ್ಕಿನಿಂದ ವಂಚಿತರಾಗಿದ್ದರು. ಅಷ್ಟೇ ಅಲ್ಲ ದಲಿತರು ವೇದ ಮಂತ್ರಗಳನ್ನು ಕೇಳಿಸಿಕೊಂಡರೆ ಅವರ ಕಿವಿಯಲ್ಲಿ ಕಾಸಿದ ಸೀಸವನ್ನು ಹೊಯ್ಯುತ್ತಿದ್ದರು. ಮಂತ್ರ ಪಠನ ಮಾಡಿದರೆ ಅವರನಾಲಿಗೆಯನ್ನು ಕತ್ತರಿಸಲಾಗುತ್ತಿತ್ತು. ಇಂಥ ಹೇಯವಾದ, ತಾರತಮ್ಯದಿಂದ ಕೂಡಿದ ಸಮಾಜದಲ್ಲಿ ಜ್ಯೋತಿಬಾಫುಲೆ ಹಾಗೂ ಅವರ ಪತ್ನಿ ಸಾವಿತ್ರಿಬಾಯಿ ಅವರು ಕೆಳವರ್ಗದವರಿಗಾಗಿ, ದಲಿತರಾಗಿ ಶಾಲೆಗಳನ್ನು ತೆರೆದು ಅವರನ್ನು ಶಿಕ್ಷಿತರಾಗಿಸಲು ತಮ್ಮ ಜೀವಿತದುದ್ದಕ್ಕೂ ಹೋರಾಟ ನಡೆಸಿದರು. ಇವರ ಈ ಕಾಯಕವನ್ನು ಕಂಡು ಹೊಟ್ಟೆಕಿಚ್ಚು ಪಟ್ಟುಕೊಂಡ ಮೇಲ್ವರ್ಗದವರು ಇವರನ್ನು ಪರಿಪರಿಯಾಗಿ ಕಾಡಿದರು. ಶಾಲೆಗಳನ್ನು ಮುಚ್ಚುವಂತೆ ಒತ್ತಡ ತಂದು ಜ್ಯೋತಿಬಾಫುಲೆಯವರನ್ನು ಮೇಲ್ವರ್ಗದವರು ಊರು ಬಿಡಿಸಿದರು. ಸ್ವತಃ ಶಿಕ್ಷಕಿಯಾಗಿ ಕೆಳವರ್ಗದವರಿಗೆ ಶಿಕ್ಷಣ ನೀಡಲು ಪಣತೊಟ್ಟ ಫುಲೆಯವರ ಧರ್ಮಪತ್ನಿ ಸಾವಿತ್ರಿಬಾಯಿ ಅವರ ಮೇಲೆ ಹೊಲಸು ಎಸೆದರು, ಗಾಜಿನ ಚೂರು ಎಸೆದರು. ನಾನಾವಿಧದ ಕಷ್ಟಗಳನ್ನು ಕೊಟ್ಟರು. ಮೇಲ್ವರ್ಗದವರು ಎಷ್ಟೋ ಕಷ್ಟಕೊಟ್ಟರೂ ಸಾವಿತ್ರಿಬಾಯಿಯವರು ತಮ್ಮ ಕರ್ತವ್ಯದಿಂದ ಕಿಂಚಿತ್ತೂ ಕದಲಲಿಲ್ಲ. ತಮ್ಮ ಮೈಮೇಲೆ ಹೊಸಲು ಎರಚಿದರೂ ಅದನ್ನು ಸಹಿಸಿಕೊಂಡು ಬೇರೆ ಉಡಿಗೆ ತೊಟ್ಟು ಶಿಕ್ಷಣ ನೀಡುವ ಪವಿತ್ರಕಾರ್ಯದಲ್ಲಿ ಅವರು ತೊಡಗಿದುದು ನಿಜಕ್ಕೂ ಅನುಕರಣೀಯವಾದುದಾಗಿದೆ. ಬಡವರ, ಕೆಳವರ್ಗದವರ ದೀನದಲಿತರ ಬಾಳಿಗೆ ಶಿಕ್ಷಣದ ಬೆಳಕು ನೀಡಿದರು. ಶಿಕ್ಷಣದ ಮೂಲಕ ಅವರಲ್ಲಿ ಮನೆಮಾಡಿಕೊಂಡಿದ್ದ ಅಜ್ಞಾನವನ್ನು ಹೊಡೆದೋಡಿಸಿದರು. ಕೆಳವರ್ಗದವರು ಮುಂದೆ ಬರಬೇಕಾದರೆ ಅವರು ಶಿಕ್ಷಣ ಪಡೆಯುವುದು ಒಂದೇ ದಾರಿ

ಎಂಬುದನ್ನಿವರು ಮನಗಂಡಿದ್ದರು. ಆದ್ದರಿಂದ ಶಿಕ್ಷಣ ನೀಡುವ ಪವಿತ್ರಕಾರ್ಯದಲ್ಲಿ ಇವರು ತನ್ಮಯರಾಗಿದ್ದರು.

ಡಾ. ಬಿ.ಆರ್.ಅಂಬೇಡ್ಕರ್ ಅವರನ್ನು ನಾವಿಂದು ಶಿಕ್ಷಣ ತಜ್ಞರೆಂದೂ, ಭಾರತ ಸಂವಿಧಾನದ ಜನಕರೆಂದೂ, ದೀನ ದಲಿತರ ಬಂಧುವೆಂದೂ ಕೊಂಡಾಡುವೆವು. ಅವರು ಕೆಸರಿನಲ್ಲಿ ಅರಳಿದ ಕಮಲವಿದ್ದಂತೆ. ಶಿಕ್ಷಣ ಪಡೆಯಲು ಅವರು ನಡೆಸಿದ ಹೋರಾಟ ರೋಮಾಂಚನಕಾರಿಯಾದುದು. ಇತಿಹಾಸದ ಪುಟಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಇಂದು ಅಜರಾಮರರಾಗಿದ್ದಾರೆ. ಅವರನ್ನು ಇಂದು ಜಗತ್ತೇ ಸ್ಮರಿಸುತ್ತದೆ. ಆದರೆ ಇಂಥ ಮಹಾತ್ಮರು ಮಹಾತ್ಮಾ ಜ್ಯೋತಿಬಾಫುಲೆ ಅವರನ್ನು ತಮ್ಮ ಗುರುಗಳೆಂದು ಭಾವಿಸಿದ್ದರು. ಗೌತಮಬುದ್ಧ, ಕಬೀರ ಹಾಗೂ ಮಹಾತ್ಮಾ ಜ್ಯೋತಿಬಾಫುಲೆ ಅವರನ್ನು ಅಂಬೇಡ್ಕರರು ತಮ್ಮ ಗುರುಗಳೆಂದು, ಮಾರ್ಗದರ್ಶಿಗಳೆಂದು ಗೌರವದಿಂದ ಸ್ಮರಿಸಿಕೊಳ್ಳುತ್ತಿದ್ದರು. ಇದರಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಅಂದು ಮಹಾತ್ಮಾ ಜ್ಯೋತಿಬಾಫುಲೆ ಅವರ ಕೆಳವರ್ಗಗಳ ಹಾಗೂ ದೀನ ದಲಿತರ ಏಳ್ಗೆಗಾಗಿ ಎಷ್ಟೊಂದು ಶ್ರಮಿಸಿದರು ಎಂಬುದು ತಿಳಿಯುವುದು. ಅವರು ಸ್ತ್ರೀಯರ, ಹಿಂದುಳಿದವರ ಏಳ್ಗೆಗಾಗಿ 'ಸತ್ಯಶೋಧಕ ಸಮಾಜ'ವನ್ನು ಹುಟ್ಟುಹಾಕಿದರು. ಈ ಸಂಸ್ಥೆಯ ಮೂಲಕ ಅನೇಕ ಪ್ರಗತಿಪರ ವಿಚಾರಗಳನ್ನು ತಿಳಿಸುತ್ತ ಜನತೆಯ ಅಭಿವೃದ್ಧಿಗಾಗಿ ಶ್ರಮಿಸಿದರು. ಶೂದ್ರರಿಗೆ ಶಿಕ್ಷಣ ಕೊಡಿಸುವಲ್ಲಿ ಈ ಸಮಾಜದ ಮೂಲಕ ಬಹುವಾಗಿ ಫುಲೆ ದಂಪತಿಗಳು ಶ್ರಮಿಸಿದರು. ೧೮೪೮ರಲ್ಲಿ ಪುಣೆಯಲ್ಲಿ ಶೂದ್ರರಿಗಾಗಿ ಶಿಕ್ಷಣ ಕೊಡಿಸಲು ಶಾಲೆಯೊಂದನ್ನು ಪ್ರಾರಂಭಿಸಿದರು. ಆಗ ಇನ್ನುಳಿದ ಶಾಲೆ–ಕಾಲೇಜುಗಳಲ್ಲಿ ಬ್ರಾಹ್ಮಣರಿಗೆ ಹಾಗೂ ಇನ್ನುಳಿದ ಮುಂದುವರಿದವರಿಗೆ ಮಾತ್ರ ಶಿಕ್ಷಣ ಲಭ್ಯವಾಗುತ್ತಿತ್ತು. ಶೂದ್ರರಿಗೆ ಅಕ್ಷರದ ಅರಿವು ಮೂಡಿಸಿ ಅವರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ತರಬೇಕೆಂದು ಫುಲೆದಂಪತಿಗಳು ಪಟ್ಟ ಪರಿಶ್ರಮ ಅಷ್ಟಿಷ್ಟಲ್ಲ. ಇವರು ಗೈದ ಶಾಲೆಯನ್ನು ಮುಚ್ಚಬೇಕೆಂದು ವೈದಿಕ ಸಮುದಾಯದವರು ಒತ್ತಡ ತಂದುದಲ್ಲದೆ, ಅವರ ತಾಯಿ ತಂದೆಗಳನ್ನು ಅಗಲಿ ಬೇರೆಡೆ ವಾಸಿಸುವಂತೆ ಮಾಡಿದರು. ಫುಲೆ ದಂಪತಿಗಳಿಗೆ ತಮ್ಮ ಬದುಕಿನುದ್ದಕ್ಕೂ ಸಂಪ್ರದಾಯವಾದಿಗಳಿಂದ ಕರ್ಮಠರಿಂದ ವಿಧ ವಿಧವಾದ ಕಷ್ಟ–ಕೋಟಲೆಗಳು ಉಂಟಾದವು. ಆದರೂ ಅವರು ಈ ಕಷ್ಟಗಳನ್ನೆಲ್ಲ ಮೆಟ್ಟಿ ನಿಂತರು. ಅವರು ಜ್ಞಾನವೆಂಬ ಜ್ಯೋತಿಯನ್ನು ಸರ್ವರ ಹೃದಯದಲ್ಲಿ ಬೆಳಗಿಸಲು ತಾವು ಅಗ್ನಿಕುಂಡದಲ್ಲಿ ನಿಂತರು. ಮೇಣಬತ್ತಿ ತನ್ನನ್ನೇ ಸುಟ್ಟುಕೊಂಡು ಸುತ್ತಣ ಪರಿಸರಕ್ಕೆಲ್ಲ ಬೆಳಕು ನೀಡುವಂತೆ ಬೆಳಕು ನೀಡಿದರು. ಸಕಲರಿಗೂ ಲೇಸಾಗಲಿ ಎಂಬುದೇ ಅವರ ಜೀವನದ ಧ್ಯೇಯವಾಗಿತ್ತು.

ಮಹಾತ್ಮ ಬಸವಣ್ಣನವರು ವಿಶ್ವದ ಎಲ್ಲ ಜನರೂ ನನ್ನವರು, ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂದು ಭಾವಿಸಿದರು ಮತ್ತು ಆ ರೀತಿ ತಮ್ಮ ಬದುಕಿನುದ್ದಕ್ಕೂ ನಡೆದುಕೊಂಡರು. ಅವರು ತಮ್ಮೊಂದು ವಚನದಲ್ಲಿ ಇವನಾರವ, ಇವನಾರವ, ಇವನಾರವನೆಂದೆಣಿಸದಿರಯ್ಯಾ, ಇವ ನಮ್ಮವ ಇವ ನಮ್ಮವನೆಂದಿಣಿಸಯ್ಯ ಎಂದುದು ಅವರ ವಿಶಾಲಹೃದಯಕ್ಕೆ ಸಾಕ್ಷಿಯಾಗಿದೆ. ಜನರೆಲ್ಲರೂ ವಿಚಾರವಂತರಾಗಬೇಕು, ಶಿಕ್ಷಿತರಾಗಬೇಕು, ಮೌಢ್ಯಗಳನ್ನೆಲ್ಲ ಕಿತ್ತೊಗೆಯಬೇಕೆಂದು ವಿಧ ವಿಧವಾದ ರೀತಿಯಲ್ಲಿ ಬಸವಣ್ಣನವರು ಜನಸಾಮಾನ್ಯರಿಗೆ ಬೋಧೆ ಮಾಡಿದ್ದುಂಟು. ಶುಷ್ಕ ಧಾರ್ಮಿಕ ಆಚರಣೆಗಳಲ್ಲಿ

ತೊಡಗಿದ್ದ ಕರ್ಮಠರನ್ನು ಹಿಂದೆ ಮುಂದೆ ನೋಡದೆ ಅವರು ಖಂಡಿಸಿದ್ದುಂಟು. ತಮ್ಮ ಅನೇಕ ವಚನಗಳಲ್ಲಿ ವಿಡಂಬಿಸಿದ್ದುಂಟು. ಮಡಿ–ಮೈಲಿಗೆ, ಮಾಡುವ ಕರ್ಮಠ ಭಕ್ತರನ್ನಂತೂ ಅವರು ತರಾಟೆಗೆ ತೆಗೆದುಕೊಂಡಿದ್ದಾರೆ. ಅಂಥವರು "ಮೀಂಬುಲಿಗನ ಹಕ್ಕಿಯಂತೆ ನೀರತಡಿಯಲ್ಲಿದ್ದು ಮುಳುಮುಳುಗಿ ಏಳುವರಯ್ಯಾ", ಬತ್ತುವ ಜಲ, ಒಣಗುವ ಮರ ದೇವರೆಂದು ತಿಳಿದಿರುವರಯ್ಯ ಎಂದು ವಿಡಂಬಿಸಿದ್ದುಂಟು. ಸಕಲ ಜನರಲ್ಲಿ ವೈಚಾರಿಕ ಭಾವನೆಯನ್ನು ಬಿತ್ತಿ ಬೆಳೆದು ಎಲ್ಲರನ್ನೂ ಶಿಕ್ಷಿತರನ್ನಾಗಿ ಮಾಡುವ ಉದ್ದೇಶ ಬಸವಣ್ಣನವರದಾಗಿತ್ತು. ಅದಕ್ಕೆಂದೇ ಅವರು ಜಾತಿ ಮತ ಪಂಥ ಇವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಮನುಷ್ಯರೆಲ್ಲಾ ಒಂದೇ ಎಂದು ಭಾವಿಸಿದರು ಮತ್ತು ಆ ರೀತಿ ತಮ್ಮ ಅನೇಕ ವಚನಗಳಲ್ಲಿ ನುಡಿದರು. ಎಲ್ಲರ ಮೈಯಲ್ಲಿ ಹರಿವ ರಕ್ತ ಒಂದೇ, ಎಲ್ಲರ ಉಸಿರಾಡಿಸುವ ಗಾಳಿ ಒಂದೇ, ಎಲ್ಲರೂ ನಿಂತ ನೆಲ ಒಂದೇ, ಎಲ್ಲರೂ ಬಳಸುವ ಜಲ ಒಂದೇ ಹೀಗಿರುವಾಗ ಮೇಲು–ಕೀಳು, ಶ್ರೇಷ್ಠ–ಕನಿಷ್ಠ ಎಂಬ ಭೇದ ಭಾವ ಎಲ್ಲಿದೆ? ಎಂದು ಅವರು ಪ್ರಶ್ನಿಸಿದ್ದು ನಿಜಕ್ಕೂ ಅಂದಿನ ದಿನಮಾನಗಳಲ್ಲಿ ತುಂಬ ಪ್ರಗತಿಪರವಾದುದಾಗಿದೆ. ಇಷ್ಟೇ ಅಲ್ಲ ಅವರು ಕಲ್ಲು ಮಣ್ಣುಗಳಿಂದ ಕಟ್ಟಿದ ದೇವಾಲಯ ಬಿದ್ದು ಹೋಗುತ್ತದೆ ಅದಕ್ಕೆ ಚಲನಶೀಲತೆ ಇಲ್ಲ ಮನುಷ್ಯನ ದೇಹವೇ ದೇವಾಲಯ, ಆತನ ಒಳಗಿರುವ ಆತ್ಮವೇ–ಚೈತನ್ಯವೇ ದೇವರೆಂದು ನುಡಿದುದು ತುಂಬ ಸಮಂಜಸವಾದುದಾಗಿದೆ.

ಕಲ್ಲು–ಮಣ್ಣು–ಇಟ್ಟಂಗಿ–ಸಿಮೆಂಟು–ಗಾರೆಗಳಿಂದ ಕಟ್ಟಿದ ದೇವಾಲಯಕ್ಕೆ ನಾಶವೆಂಬುದು ಇದ್ದೇ ಇದೆ. ದೇವಾಲಯ ಬಿದ್ದಮೇಲೆ ದೇವರೆಲ್ಲಿ ಉಳಿಯುತ್ತದೆ. ಮನುಷ್ಯನ ಅಂತರಂಗ ದಲ್ಲಿರುವ ಚೈತನ್ಯವೇ ದೇವರು. ಅದು ಚಲನಶೀಲವಾಗಿರುತ್ತದೆ. ಮನುಷ್ಯನಿಗೆ–ಮನುಷ್ಯತ್ವಕ್ಕೆ ಅವರು ತುಂಬ ಬೆಲೆ ಕೊಟ್ಟಿದುದನ್ನು ಅವರ ವಚನಗಳುದ್ದಕ್ಕೂ ಕಾಣುವೆವು. ಶರಣ ಚಳವಳಿಯ ನೇತೃತ್ವವಹಿಸಿದ ಬಸವಣ್ಣನವರದು ತುಂಬ ಪ್ರಗತಿಪರವಾದ, ಚಿಂತನ ಪರವಾದ, ವೈಜ್ಞಾನಿಕ ಮನೋಭಾವವನ್ನುಳ್ಳ ಮನಸ್ಸು. ಅವರು ಎಂದೂ ಪರಿಸ್ಥಿತಿಯೊಡನೆ ಅಂದಿನ ಸಮಕಾಲೀನ ಸಮಾಜದ ವಿದ್ಯಮಾನಗಳೊಂದಿಗೆ ಸಾಂಪ್ರದಾಯಿಕರೊಂದಿಗೆ ರಾಜಿ ಮಾಡಿಕೊಳ್ಳಲಿಲ್ಲ. ಆನೆ ನಡೆದುದೇ ಮಾರ್ಗ ಎಂಬಂತೆ ಅವರು ಧೀರರಾಗಿ ನಡೆದು ತೋರಿಸಿದರು. ಮಹಿಳೆಯರಿಗೂ ಅವರು ಸ್ವಾತಂತ್ರ್ಯ ನೀಡಿದರು. ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷಗಳಲ್ಲಿ ಮಹಿಳೆಯೂ ಪುರುಷನ ಸಮಭಾವ ಸ್ವೀಕರಿಸಲು ಅರ್ಹಳೆಂಬುದನ್ನು ಇತಿಹಾಸದಲ್ಲಿ ಮೊದಲಬಾರಿಗೆ ತೋರಿಸಿಕೊಟ್ಟುದು ಅವರ ಹೆಚ್ಚುಗಾರಿಕೆಯಾಗಿದೆ.

ಬಸವಣ್ಣನವರ ಪ್ರಗತಿಪರ ಆಲೋಚನೆಗಳನ್ನು ನಾವು ಮಹಾತ್ಮಾ ಜ್ಯೋತಿಬಾಫುಲೆ ಅವರಲ್ಲಿ ದಟ್ಟವಾಗಿ ಕಾಣುವೆವು. ಅವರು ತಮ್ಮ ಮನೆಯನ್ನೇ ಬಡ ಹಾಗೂ ಹಿಂದುಳಿದ ಅಸ್ಪೃಶ್ಯ ಮಕ್ಕಳ ಶಿಕ್ಷಣಕ್ಕಾಗಿ ಬಿಟ್ಟುಕೊಟ್ಟುದು, ಅಸ್ಪೃಶ್ಯರಿಗೆ ಕುಡಿಯಲು ನೀರು ಬೇಕೆಂದು ತಾವು ಬಳಸುವ ತಮ್ಮ ಸ್ವಂತ ಭಾವಿಯನ್ನೇ ನೀಡಿದುದು ಅಂದಿನ ದಿನಗಳಲ್ಲಿ ಇವರಿಗೆ ಜನ ಮಹಾತ್ಮಾ ಎಂದು ಕರೆದಿರುವಂತಿದೆ. ಗಾಂಧೀಜಿಯವರಿಗಿಂತ ಮೊದಲೇ ಇವರಿಗೆ 'ಮಹಾತ್ಮ' ಎನ್ನುವ ಗೌರವ ಸೂಚಕ ವಿಶೇಷಣ ಪ್ರಾಪ್ತವಾದುದು ಇವರ ಹೆಚ್ಚುಗಾರಿಕೆಯಾಗಿದೆ. ವಿಧವೆಯರು ತಮ್ಮ ಬದುಕನ್ನು ಸುಸೂತ್ರವಾಗಿ ಸಾಗಿಸಲಿ ಎಂದು ಅವರಿಗಾಗಿ ವಿಧವಾಶ್ರಮವನ್ನು ಸ್ಥಾಪಿಸಿದರು. 'ಸತ್ಯಶೋಧಕ ಸಂಘ'ವನ್ನು ಕಟ್ಟುವುದರ ಮೂಲಕ

ಜನಕಲ್ಯಾಣ ಕಾರ್ಯಗಳನ್ನು ಮಾಡಿದರು. ಪುಣೆಯ ಮಹಾನಗರ ಪಾಲಿಕೆಯ ಸದಸ್ಯರಾಗಿ ಜನಸೇವೆ ಮಾಡಿದರು. ಕೃಷಿಕರ ಅಭಿವೃದ್ಧಿಗಾಗಿ ಹೋರಾಟ ಮಾಡಿದರು. ಜನತೆಯಲ್ಲಿ ಮನೆ ಮಾಡಿಕೊಂಡಿದ್ದ ಮೌಢ್ಯಗಳನ್ನು ತೊಲಗಿಸಲು ವಿಧವಿಧವಾಗಿ ಶ್ರಮಿಸಿದರು. ಮಹಿಳೆಯರು ವಿಧವೆಯಾದೊಡನೆ ಕೇಶ ಮುಂಡನ ಮಾಡಿಸ್ತಾ ಇದ್ದುದು ಇವರಿಗೆ ಸರಿಕಾಣಲಿಲ್ಲ ಅದನ್ನು ತಡೆಯಲು ಶ್ರಮಿಸಿದರಲ್ಲದೆ, ಹಜಾಮರಿಗೆ ಕೇಶ ಮುಂಡನ ಮಾಡಬಾರದೆಂದು ವಿನಂತಿಸಿಕೊಂಡರು ಮತ್ತು ವಿಧವೆಯರೂ ಹಣೆಗೆ ಕುಂಕುಮ ಹಚ್ಚಿಕೊಳ್ಳಬೇಕೆಂದು ಅವರಿಗೆ ತಿಳಿಸಿ ಹೇಳಿದರು. ಇವರ ಇಂಥ ಕಾರ್ಯಗಳು ಸಂಪ್ರದಾವಾದಿಗಳಿಗೆ ಸರಿಕಾಣಲಿಲ್ಲ. ಆದರೂ ಅವರು ತಮ್ಮ ಈ ಪ್ರಗತಿಪರ ಕಾರ್ಯಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಲು ಹೋರಾಡಿದರು. ಜ್ಯೋತಿಬಾಪುಲೆ ಅವರಿಗೆ ಮಕ್ಕಳಿರಲಿಲ್ಲ. ಮಗುವೊಂದನ್ನು ದತ್ತು ತೆಗೆದುಕೊಂಡರು, ಆತನೇ ಯಶವಂತರಾವ ಫುಲೆ, ಅವರು ತಮ್ಮ ತಂದೆಯ ಪ್ರಗತಿಪರ ವಿಚಾರಗಳನ್ನು ಹೊಂದಿದ್ದರು. ಇವರು ತೀರಿಹೋದನಂತರ ಅಂಬೇಡ್ಕರ್ ಅವರು ತಮ್ಮ ಮಗನಿಗೆ ಯಶವಂತರಾವ್ ಎಂದು ಹೆಸರಿಟ್ಟರು. ಇದರಿಂದ ಡಾ. ಬಿ.ಆರ್. ಅಂಬೇಡ್ಕರ್ ಅವರು ಜ್ಯೋತಿಬಾ ಫುಲೆ ಮನೆತನದ ಮೇಲಿಟ್ಟ ಪ್ರೀತಿ, ವಿಶ್ವಾಸ, ಗೌರವ ಎಷ್ಟೆಂಬುದು ವಿದಿತವಾಗುವುದು. ಜ್ಯೋತಿಬಾಪುಲೆ ಅವರ ಪ್ರಭಾವ ಕೇವಲ ಡಾ. ಅಂಬೇಡ್ಕರ್ ಅವರ ಮೇಲಷ್ಟೇ ಆಗಲಿಲ್ಲ. ಅವರ ಪ್ರಭಾವ ಕೊಲ್ಲಾಪುರದ ಶಾಹು ಮಹಾರಾಜರ ಮೇಲೂ ಆಯ್ತು. ಅವರು ಮಹಾತ್ಮಾ ಫುಲೆ ಅವರ ಸಮಾಜಕಾರ್ಯಗಳನ್ನು, ಸಾಮಾಜಿಕ ನ್ಯಾಯ ಪದ್ಧತಿಯನ್ನು ಅನುಷ್ಠಾನಗೊಳಿಸಲು ಹೆಣಗಿದುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಹೇಗೆ ಕನ್ನಡನಾಡಿನಲ್ಲಿ ಬಸವಾದಿ ಶರಣರ ಪ್ರಭಾವ ಮುಂದಿನ ಕವಿಗಳ, ಶರಣರ, ಸಂತರ, ದಾಸರ, ಅನುಭಾವಿ ಕವಿಗಳ ಮೇಲಾದಂತೆ ಮಹಾತ್ಮಾ ಜ್ಯೋತಿಬಾಪುಲೆ ಅವರ ಪ್ರಭಾವವು ದೇಶದ ನಾನಾ ಕಡೆಗಳಲ್ಲಿದ್ದ ಮಹನೀಯರ ಮೇಲಾಯ್ತು. ಇದರ ಫಲವಾಗಿಯೇ ಅಸ್ಪೃಶ್ಯರು, ಕೆಳವರ್ಗದವರು ಶೋಷಿತರು ಶಿಕ್ಷಣ ಪಡೆದು ಮುಂದೆ ಬರುವಂತಾಯ್ತು. ಭಾರತದ ಇತಿಹಾಸದಲ್ಲಿ ಮಹಾತ್ಮಾ ಜ್ಯೋತಿಬಾಪುಲೆ ಅವರ ಹೆಸರು ಬಸವಣ್ಣನವರಂತೆಯೇ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥದಾಗಿದೆ. ಈರ್ವರೂ ಸಮಾಜ ಸುಧಾರಣೆಗಾಗಿ, ಲೋಕಕಲ್ಯಾಣಕ್ಕಾಗಿ ತಮ್ಮ ಬದುಕಿನುದ್ದಕ್ಕೂ ಶ್ರಮಿಸಿದ ಮಹನೀಯರು. ಕೆಳವರ್ಗದವರ, ಅಸ್ಪೃಶ್ಯರ ಪರವಾಗಿ ನಿಂತುಕೊಂಡು ಹೋರಾಟ ನಡೆಸಿದುದನ್ನು ಈರ್ವರ ಚರಿತ್ರೆಯಲ್ಲೂ ಕಾಣುವೆವು.

❐

ಬುದ್ಧ–ಬಸವ : ಗಾಂಧಿ

●

ಎನ್. ಬಸವರಾಧ್ಯರು

ಭರತಖಂಡವು ಧರ್ಮಪ್ರಧಾನವಾದ ದೇಶ. ಅನಾದಿ ಕಾಲದಿಂದಲೂ ಈ ದೇಶದಲ್ಲಿ ಅನೇಕ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಕರು ಜನ್ಮವೆತ್ತಿ ಈ ದೇಶದ ಜನತೆ ಸನ್ಮಾರ್ಗದಲ್ಲಿ ವರ್ತಿಸಲು ಕಾರಣಕರ್ತರಾಗಿದ್ದಾರೆ. ಇವರು 'ಸವೇಜನಾಃ ಸುಖಿನೋಭವನ್ತು' ಎಂಬ ಅರ್ಯೋಕ್ತಿಯಂತೆ ಮಾನವ ಜನಾಂಗದ ಕಲ್ಯಾಣಕ್ಕಾಗಿ ತಮ್ಮ ತನುಮನಗಳನ್ನು ಧಾರೆಯೆರೆದಿದ್ದಾರೆ. ಇವರಲ್ಲಿ ಗೌತಮಬುದ್ಧ, ವಿಶ್ವಬಂಧು ಬಸವಣ್ಣ ಮತ್ತು ಮಹಾತ್ಮಗಾಂಧಿ ಪ್ರಮುಖರು, ಪ್ರಸಿದ್ಧರು. ಈ ಮೂವರು ಭರತಖಂಡದ ತ್ರಿಮೂರ್ತಿಗಳೆಂದು ಪ್ರಖ್ಯಾತ ರಾಗಿದ್ದಾರೆ. ಲೋಕಹಿತಾರ್ಥವಾಗಿ ಇವರು ಕೈಗೊಂಡ ಕಾರ್ಯಗಳು ಸಾರ್ವತ್ರಿಕವು ಸರ್ವಕಾಲಿಕವೂ ಆದವು. ಈ ವಿಶ್ವಾಚಾರ್ಯರು ತೋರಿದ ಮಾರ್ಗದಲ್ಲಿ ನಡೆದು ಈ ದೇಶದ ಜನತೆ ಸನ್ಮತಿಯನ್ನು ಸದ್ಗತಿಯನ್ನು ಪಡೆದುಕೊಂಡಿತು. ಈ ಮೂವರು ವಿಭೂತಿ ಪುರುಷರ ಆಲೋಚನಾಶಕ್ತಿ ಏಕರೀತಿಯಾದರೂ ಮಾನವ ಜನಾಂಗದ ಉದ್ಧಾರಕ್ಕೂ ಉತ್ಥಾನಕ್ಕೂ ಅವರು ಕೈಗೊಂಡ ಮಾರ್ಗಗಳು ಭಿನ್ನವಾಗಿವೆ.

ಗೌತಮಬುದ್ಧ ಪರಿನಿರ್ವಾಣಹೊಂದಿ ಇಂದಿಗೆ ಸುಮಾರು ಇಪ್ಪತ್ತೈದು ಶತಮಾನಗಳು ಕಳೆದಿದ್ದರೂ ಮಾನವ ಜನಾಂಗದ ಮೇಲೆ ಆತನು ಬೀರಿರುವ ಪ್ರಭಾವ ಇನ್ನು ಮಸುಳಿಸಿಲ್ಲ. ಆತನು ಬೋಧಿಸಿದ ದಿವ್ಯತತ್ವಗಳು ಪ್ರಗತಿಪರವಾಗಿ ಸರ್ವರಿಗೂ ಸರ್ವಕಾಲದಲ್ಲೂ ಆದರ್ಶಪ್ರಾಯವಾಗಿವೆ. ಚಿರವಿನೂತನವಾಗಿವೆ, ಮೇಲ್ಪಂಕ್ತಿಯಾಗಿವೆ ಆಕರ್ಷಣೀಯ್ಯೂಯ ವಾಗಿವೆ.

ಗೌತಮಬುದ್ಧ ಲೋಕಕಲ್ಯಾಣಕ್ಕಾಗಿ ಜನ್ಮವೆತ್ತಿದ ವಿಭೂತಿ ಪುರುಷ. ಆತನು ಜೀವನ ಜಂಜಾಟದಲ್ಲಿ ತೊಳಲುತ್ತಿದ್ದ ಮಾನವ ಕೋಟಿಯ ಕಷ್ಟಕಾರ್ಪಣ್ಯಗಳನ್ನು ಕಂಡು ಮುರುಗಿ, ಅವರ ಆತ್ಮೋದ್ಧಾರಕ್ಕಾಗಿ ತನುಮನಧನಗಳನ್ನು ಧಾರೆಯೆರೆದಿದ್ದಾನೆ. ಅಷ್ಟೇ ಅಲ್ಲ ಅದಕ್ಕಾಗಿ ರಾಜ್ಯವನ್ನು, ಕೈಹಿಡಿವ ಹೆಂಡತಿಯನ್ನು ಪ್ರೀತಿಯ ಮಗನನ್ನೂ, ಬಂಧು ಬಾಂದವರನ್ನು. ಪರಿತ್ಯಜಿಸಿದನು. 'ಅಹಿಂಸಾ ಪರಮೋಧರ್ಮ' ಎಂಬ ವಿಶಿಷ್ಟ ತತ್ವವನ್ನು ಸಾರಿ ತೋರಿದನು. ಬೌದ್ಧ ಧರ್ಮವು ವಿಶ್ವದ ಶ್ರೇಷ್ಟಧರ್ಮಗಳಲ್ಲಿ ಒಂದು ಎಂಬುದನ್ನು ಪಾಶ್ಚಾತ್ಯ ತತ್ವಜ್ಞಾನಿಗಳು ಒಪ್ಪಿಕೊಂಡಿದ್ದಾರೆ.

ಬುದ್ಧನ ದೃಷ್ಟಿಯಲ್ಲಿ ಮಾನವತ್ವದ ಕಲ್ಪನೆ ಜನಾಂಗ ಮತ್ತು ರಾಷ್ಟ್ರಗಳ ಎಲ್ಲೆಯನ್ನು ಮೀರಿದ್ದು. ಕಳಂಕ ರಹಿತವಾಗಿ ಆತ್ಮದೀಪದ ನೆರವಿನಿಂದ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳಬಲ್ಲ ಸ್ವತಂತ್ರ ಪುರುಷನ ಅವಿರ್ಭಾವದ ಗುರಿಯೇ ಬುದ್ಧನ ದೃಷ್ಟಿಯಾಗಿತ್ತು. ಬುದ್ಧ ವೈದಿಕ ಧರ್ಮದಲ್ಲಿ ಅಂದು ಪ್ರಚಾರದಲ್ಲಿದ್ದ ಯಜ್ಞಯಾಗಾದಿಗಳನ್ನು, ಪಶುವಧೆ ನರವಧೆಗಳನ್ನು, ಚಾತುರ್ವರ್ಣ್ಯ ಸಂಕೋಲೆಗಳನ್ನು ಖಂಡಿಸಿದನು. ಅಹಿಂಸೆಯ ಹೊಸಹಾದಿಯನ್ನು ತೆರೆದು ಸಮತಾವಾದದ ಒಂದು ನಿರ್ದಿಷ್ಟ ನೀತಿಯನ್ನು ಪ್ರತಿಪಾದಿಸಿದನು. ಸ್ತ್ರೀಯರ ಧಾರ್ಮಿಕ ಪಾರತಂತ್ರ್ಯವನ್ನು ಕಿತ್ತೊಗೆದು ಒಂದು ಕ್ರಾಂತಿಯನ್ನು ಮಾಡಿದನು. ಈ ಎಲ್ಲ ಶ್ರೇಷ್ಠ ತತ್ವಗಳಿಂದ ಕೂಡಿದ ಬೌದ್ಧಧರ್ಮ ಸರ್ವಾದರಣೀಯವಾಯಿತು. ಅನೇಕ ರಾಜರು ಈ ಧರ್ಮವನ್ನು ಅನುಸರಿಸಿ ಅದಕ್ಕೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟರು. ಇವರಲ್ಲಿ ಅಜಾತಶತ್ರು, ಬಿಂಬಸಾರ, ಅಶೋಕ ಮುಖ್ಯರಾದರು. ಅಶೋಕ ಚಕ್ರವರ್ತಿ ಬೌದ್ಧಧರ್ಮದ ಉದಾತ್ತ ತತ್ವಗಳಿಗೆ ಮಾರುಹೋಗಿ ಸ್ವದೇಶದಲ್ಲಿ ಮಾತ್ರವಲ್ಲದೆ ವಿದೇಶದಲ್ಲಿಯೂ ಇವನ್ನು ಪ್ರಚಾರಪಡಿಸಿದನು. ಆತನ ಪ್ರಯತ್ನ ಫಲವಾಗಿ ಬೌದ್ಧಧರ್ಮವು ಸಿಂಹಳದ್ವೀಪ, ಬರ್ಮಾ, ನೇಪಾಳ, ಕಾಂಬೋಡಿಯಾ, ಚೀನಾ, ಜಪಾನ, ಲಾವೋಸ್, ಕಾಂಬೋಡಿಯಾ, ಜಪಾನ, ಸಿಕ್ಕಿಂ, ಭೂತಾನ, ಇಂಡೋನೇಷ್ಯಗಳಲ್ಲೆಲ್ಲಾ ಹರಡಿ ಈಗಲೂ ಜೀವಂತವಾಗಿದೆ. ಸ್ವಾಮಿ ವಿವೇಕಾನಂದ, ಮಹಾತ್ಮಗಾಂಧಿ, ಪಂಡಿತ ಜವಹಾರಲಾಲ್‌ನೆಹರೂ ಮೊದಲಾದ ಪ್ರತಿಭಾನ್ವಿತರು ಬೌದ್ಧಧರ್ಮದ ಉಚ್ಚನೀತಿಯಿಂದ ಉತ್ತೇಜಿತರಾಗಿ ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನಿಸಿದ್ದಾರೆ.

ಗೌತಮ ಬುದ್ಧ ಅಜ್ಞಾನ, ಮೌಢ್ಯ, ಅಂಧಕಾರಗಳಲ್ಲಿ ಮುಳುಗಿದ ಮಾನವಕೋಟಿಗೆ ತಾನು ತಿಳಿದ ಜ್ಞಾನವನ್ನು ಬೋಧಿಸಿದನು. ಅವರ ಉದ್ಧಾರಕ್ಕಾಗಿ ತನ್ನ ಜೀವಿತದ ಉಳಿದ ಕಾಲವನ್ನೆಲ್ಲಾ ವಿನಿಯೋಗಿಸಿದನು. ಆತನ ಉಪದೇಶದ ಸಾರಾಂಶವಿಷ್ಟೆ, ಜೀವನ ದುಃಖಮಯವಾದುದು; ಹುಟ್ಟು ಸಾವುಗಳು, ರೋಗರುಜಿನಗಳೂ ಅಹಿತ–ಸಮಾಗಮಾ ಹಿತವಿಯೋಗಗಳು ಮನುಷ್ಯರನ್ನು ಸದಾ ಕಾಡುತ್ತವೆ. ದುಃಖಕ್ಕೆ ಮೂಲಕಾರಣ ಆಸೆ. ಈ ಆಸೆಯನ್ನು ತ್ಯಜಿಸುವುದಕ್ಕಾಗಿ ಅಜ್ಞಾನ ಮೌಢ್ಯಗಳನ್ನು ದೂರೀಕರಿಸಿ ಸನ್ಮಾರ್ಗದಲ್ಲಿ ನಡೆಯಬೇಕು. ಸದವಲೋಕನ, ಸದವಧಾನ, ಸಚ್ಚಿಂತನ ಸತ್ಪ್ರಯತ್ನ ಸತ್ಕಾಂಕ್ಷಿ ಸದ್ವರ್ತನೆ ಸಮಕ್ತಿ ಮತ್ತು ಸಜ್ಜೀವನೋಪಾಯಗಳನ್ನು ಅನುಸರಿಸಿ ಅಹಿಂಸಾ ಮಾರ್ಗದಲ್ಲಿ ನಡೆದು ಆಸೆಯನ್ನು ದೂರಮಾಡಬೇಕು. ಸುಳ್ಳು ಹೇಳದೇ ಬೇರೆಯವರ ಮನಸ್ಸನ್ನು ನೋಯಿಸದೆ, ಸತ್ಯದಿಂದಲೂ ಕರುಣೆಯಿಂದಲೂ ಬಾಳಬೇಕು. ಹಿಂಸೆಯನ್ನು ಎಂದಿಗೂ ಮಾಡಬಾರದು. ಮಾಂಸಾಹಾರವನ್ನು, ಮಾದಕಪದಾರ್ಥಗಳನ್ನು ತ್ಯಜಿಸಬೇಕು. ಸೋಮಾರಿತನವನ್ನು, ಹೀನವೃತ್ತಿಯನ್ನು ಬಿಟ್ಟು ಸದ್ಗುಣಗಳಿಂದ ಸನ್ಮಾರ್ಗದಲ್ಲಿ ನಡೆಯುವದನ್ನು ಕಲಿಯಬೇಕು. ಯಾರಿಗೂ ಕೆಟ್ಟದನ್ನು ಬಯಸದೆ ಎಲ್ಲರಿಗೂ ಹಿತಕರವಾಗುವಂತೆ ಸಚ್ಚಾರಿತ್ರದಿಂದ ನಡೆದರೆ ಪೂರ್ಣಸಿದ್ಧಿ ದೊರೆತು ಜೀವನ ಕಷ್ಟ ಪರಂಪರೆಗಳಿಂದ ಬಿಡುಗಡೆಯಾಗುವದು.

ಬುದ್ಧ ತನ್ನ ಜೀವನ ಪರ್ಯಂತ ಧರ್ಮಬೋಧನೆಯನ್ನು ಮಾಡಿ ಮಾನವರ ಕಲ್ಯಾಣವನ್ನು ತೋರಿದ್ದಾನೆ. ಆತನು ಸಾರಿದ ವಿಶ್ವಪ್ರೇಮ, ಸದಾಚಾರ, ಸಮಭಾವನೆಗಳು ಇದೇ ಮಾನವ ಜಗತ್ತಿಗೇ ಮಾನ್ಯವಾಗಿವೆ. ಶೀಲಶುದ್ಧತೆಗಳಿಂದ ಕೂಡಿದ ಪ್ರೇಮದಯೆಗಳ

ಆದರ್ಶ ನೀತಿಯಲ್ಲಿ ವಿಶ್ವನೀತಿಯೆಂದು ಸಾರಿ ಜಗತ್ತಿನ ದೃಷ್ಟಿಯನ್ನೇ ತನ್ನತ್ತ ಕೇಂದ್ರಿಕರಿಸಿಕೊಂಡ ಬುದ್ಧದೇವನು ಧರ್ಮದಾನಿಯಾಗಿ ರಾರಾಜಿಸಿದ್ದಾನೆ.

ಮಾನವ ಕಲ್ಯಾಣಕ್ಕಾಗಿ ಬುದ್ಧನ ತರುವಾಯ ಜನ್ಮತಾಳಿದ ಭಗವಾನ್ ಬಸವೇಶ್ವರರು ನಂದೀಶ್ವರರ ಅಪರಾವತಾರವೆಂದೇ ಖ್ಯಾತರಾಗಿದ್ದಾರೆ. ಅವರು ಮಾನವರ ಉದ್ಧಾರಕ್ಕಾಗಿ ಮರ್ತ್ಯದಲ್ಲಿ ಜನಿಸಿ ತಮ್ಮ ಜೀವಮಾನವನ್ನೆಲ್ಲಾ ಅದಕ್ಕಾಗಿ ಸೇವಿಸಿದ್ದಾರೆ. ಧಾರ್ಮಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಅವರು ಕೈಕೊಂಡ ಕ್ರಾಂತಿಕಾರಕ ಮಾರ್ಗಗಳು ಇತರರಿಗೆ ಮಾರ್ಗದರ್ಶಕವಾಗಿವೆ. ಬುದ್ಧನು ಸತ್ಯ ಅಹಿಂಸೆಗಳ ಆಧಾರದ ಮೇಲೆ ಸಮತಾವಾದದ ಒಂದು ನಿರ್ದಿಷ್ಟನೀತಿಯನ್ನು ಪ್ರತಿಪಾದಿಸಿ ವರ್ಣಾಶ್ರಮ ಪದ್ಧತಿಯನ್ನು ಖಂಡಿಸಿ ಗುಣಶೀಲಗಳ ಮೇಲ್ಮೆಯನ್ನು ಎತ್ತಿ ಹಿಡಿದಿದ್ದಾನೆ. ಆದರೆ ಜ್ಞಾನ ಪ್ರಧಾನವಾದ ಬೌದ್ಧಮತವು ಈ ದೇಶದಲ್ಲಿ ನೆಲೆಯಾಗಿ ನಿಲ್ಲಲಿಲ್ಲ. ವೈದಿಕಧರ್ಮ ಬಲವಾಗಿ ಬೌದ್ಧಜೈನಧರ್ಮಗಳ ಪ್ರಭಾವ ಜನತೆಯಲ್ಲಿ ಕುಗ್ಗುತ್ತಿದ್ದ ಸಮಯದಲ್ಲಿ ವಿಚಾರಪರವಾದ ಬಸವಣ್ಣನವರು ತಮ್ಮ ಪ್ರತಿಭೆಯಿಂದಲೂ ಪ್ರಗತಿಪರ ಮನೋಭಾವನೆಯಿಂದಲೂ ಪ್ರವರ್ಧಮಾನಕ್ಕೆ ಬಂದರು. ವರ್ಣಾಶ್ರಮ ಧರ್ಮಗಳ ಸಂಕೋಲೆಗಳಿಂದ ಸಮಾಜವನ್ನು ಬಿಡಿಸಿ ಪುನರುಜ್ಜೀವನಗೊಳಿಸಿ ಸಮತಾಭಾವದ ಉನ್ನತ ಸಾಮಾಜಿಕ ನೀತಿಯನ್ನು ಪ್ರತಿಪಾದಿಸಿ ಅಂಧಕಾರದಲ್ಲಿ ತೊಳಲುತ್ತಿದ್ದ ಜನತೆಗೆ ಮಾರ್ಗ ತೋರಿಸಿದರು. ಬಸವಣ್ಣನವರು ಮುಖ್ಯವಾಗಿ ಸರ್ವೋದಯ ದೃಷ್ಟಿ ಸಮಾಜದಲ್ಲಿನ ವರ್ಣಭೇದಗಳು ಅಳಿಯಬೇಕು. ಕೀಳು ಮೇಲೆಂಬ ಭಾವನೆ ನಿರ್ಮೂಲವಾಗಬೇಕು. ಕೇವಲ ಹುಟ್ಟಿನಿಂದಲೇ ಮನುಷ್ಯನ ಯೋಗ್ಯತೆಯನ್ನು ಅಳೆಯದೆ ಗುಣದಿಂದ ನಿರ್ಧರಿಸುವುದು ಉತ್ತಮವಾದ ಮಾರ್ಗ. ಧರ್ಮ ತತ್ವಗಳೂ ಸರ್ವರಿಗೂ ಸಮವಾಗಿ ಸೇರಿರುತ್ತವೆ. ಅವು ಕೆಲವಾರು ಪಂಡಿತರ ಅಥವಾ ಮನೆತನಗಳ ಸ್ವತ್ತಲ್ಲ. ಸ್ವಪ್ರತಿಷ್ಠೆಗೂ ಸ್ವಾರ್ಥಕ್ಕೂ ಆಚರಿಸುವ ಯಜ್ಞ ಯಾಗಾದಿಗಳನ್ನು ಹಿಂಸಾತ್ಮಕವಾದ ಪಶುವಧೆಯನ್ನು ನಿಲ್ಲಿಸಬೇಕು. ಜನತೆಯು ಅರ್ಥವಿಲ್ಲದ ಸಂಪ್ರದಾಯಗಳನ್ನು ಆಚಾರಗಳನ್ನು ತ್ಯಜಿಸಬೇಕು. ಬಸವಣ್ಣನವರು ಇಂಥ ಕ್ರಾಂತಿದಾಯಕ ಸಮಾಜೋದ್ಧಾರ ಮಾರ್ಗವನ್ನು ಎತ್ತಿಹಿಡಿದಿದ್ದರಿಂದ ಜನಪ್ರೀಯತೆಯನ್ನು ಗಳಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಸಮಾಜದ ಅವನತಿಗೆ ಕಾರಣವಾಗಿದ್ದ ಜಾತಿಯವಾದ ಮತ್ತು ಅಸ್ಪೃಶ್ಯತೆಯ ಕಳಂಕವನ್ನು ಬಸವಣ್ಣನವರು ಹೋಗಲಾಡಿಸಿ ಅಸಮಾನತೆಯನ್ನು ಅಲ್ಲಗಳೆದು ಸರ್ವಸಮಾನತೆಯ ಬುನಾದಿಯ ಮೇಲೆ ಸಮಾಜವನ್ನು ಸುಧಾರಿಸಿದರು. "ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಭಕ್ತರಾದವರನ್ನೆಲ್ಲ ಒಂದೇ ಎಂಬೆ" ಎಂಬ ಸಮತಾವಾದದ ತತ್ವವನ್ನು ಸಾರಿದರು. ಕಲ್ಯಾಣದಲ್ಲಿ ಇತಿಹಾಸ ಪ್ರಸಿದ್ಧವಾದ 'ಅನುಭವ ಮಂಟಪವೆಂಬ' ವಿದ್ಯಾಪೀಠವನ್ನು ಸ್ಥಾಪಿಸಿ ವೇದೋಪನಿಷತ್ತುಗಳ ರಹಸ್ಯಗಳನ್ನು, ಧರ್ಮಬೋಧನೆಗಳನ್ನು ತಿಳಿಗನ್ನಡದಲ್ಲಿ ಜನಸಾಮಾನ್ಯರಿಗೂ ಅರ್ಥವಾಗುವಂತೆ ಉಪದೇಶಿಸಿದರು. 'ಕಾಯಕವೇ ಕೈಲಾಸ' ಎಂಬ ವೀರಮಂತ್ರವನ್ನು ಉಪದೇಶಿಸಿ ಎಲ್ಲ ಕಾಯಕಗಳಿಗೂ ಸಮಾನವಾದ ಸ್ಥಾನವನ್ನು ಕಲ್ಪಿಸಿಕೊಟ್ಟರು. ಸ್ವಾವಲಂಬನೆ, ಸ್ವತಂತ್ರ ಮನೋಭಾವನೆಗಳನ್ನು ಬೆಳೆಸುವುದಕ್ಕೆ ಪ್ರೇರಕರಾದರು. ಸಮಾಜದಲ್ಲಿ ಸ್ತ್ರೀಯರಿಗಿದ್ದ ಅಡಚಣೆಗಳನ್ನು ತೊಡೆದುಹಾಕಿ ಸಮಾಜದ

ಅರ್ಧ ಅಂಗವಾದ ಮಹಿಳಾ ವರ್ಗಕ್ಕೂ ಸಮಾನ ಸ್ಥಾನವನ್ನು ಕೊಟ್ಟು ಗೌರವಿಸಿದರು. ನಿತ್ಯಜೀವನದಲ್ಲಿ ಸತ್ಯಶೀಲತೆಯ ಮಹತ್ವವನ್ನು ಒತ್ತಿ ಹೇಳಿ ನುಡಿವಂತೆ ನಡೆದು ಧರ್ಮದ ಶ್ರೇಷ್ಠತೆಯನ್ನು ಎತ್ತಿಹಿಡಿದರು. ಸಕಲ ಜೀವಾತ್ಮರಿಗೆ ಲೇಸು ಬಯಸುವವರೆಲ್ಲ ಕುಲಜರು ಎಂಬ ಮಹೋನ್ನತ ಲೋಕನೀತಿಯನ್ನು ಘೋಷಿಸಿ ವಿಶ್ವ ಬಂಧುತ್ವಕ್ಕೆ ಮಾರ್ಗತೋರಿಸಿದರು.

ಸುಮಾರು ಎಂಟುನೂರು ವರ್ಷಗಳ ಹಿಂದೆ ಬಸವಣ್ಣನವರು ಹಮ್ಮಿಕೊಂಡಿದ್ದ ಮಹೋದ್ಧೇಶ ಅವರ ಜೀವಿತ ಕಾಲದಲ್ಲಿ ಪೂರ್ಣ ಫಲಕಾರಿಯಾಗಲಿಲ್ಲ. ಆದರೆ ಅವರು ನೆಟ್ಟ ಸಸಿ ಹೆಮ್ಮರವಾಗಿ ಬೆಳೆದು ನೀರಿಕ್ಷೆಗಿಂತಲೂ ಅಧಿಕವಾದ ಫಲವನ್ನು ಈಗ ಕೊಡುತ್ತಿದೆ. ಅವರು ಸಂದೇಶ ಇಂದಿಗೂ ಜೀವಂತವಾಗಿ ಚಿರನೂತನವಾಗಿ ಪ್ರಜ್ವಲಿಸುತ್ತದೆ. ಸ್ವಪರಿಪೂರ್ಣ ಆದರ್ಶ ಸಮಾಜ ಸುಧಾರಕರಿಗೂ ರಾಷ್ಟ್ರ ನಿರ್ಮಾಪಕರಿಗೂ ಅರಾಧ್ಯಮೂರ್ತಿಗಳಾಗಿದ್ದಾರೆ. ಬಸವಣ್ಣನವರು ಧರ್ಮಪ್ರಚಾರಕರಾಗಿ, ತತ್ವಬೋಧಕರಾಗಿ, ಮೇಲಾದ ಭಕ್ತರಿಗಾಗಿ, ಅಮರಸ್ಥಾನವನ್ನು ಪಡೆದಿದ್ದಾರೆ. ಸಾಮಾಜಿಕ ಧಾರ್ಮಿಕ ಮತ್ತು ಆರ್ಥಿಕ ಸಾಧನೆಗಳಿಂದ ಯುಗ ಪುರುಷರಾಗಿ ಕನ್ನಡನಾಡಿಗಾಗೇ ಅಲ್ಲದೆ ಇಡೀ ಭರತಖಂಡಕ್ಕೇ ಜೀವಜ್ಯೋತಿಯಾಗಿ ಬೆಳಗಿದ್ದಾರೆ.

ಬಸವಣ್ಣನವರಾದ ಮೇಲೆ ಭರತಖಂಡದಲ್ಲಿ ಜನ್ಮ ತಳೆದ ಮಾನವ ಉದ್ಧಾರಕರಲ್ಲಿ ಮಹಾತ್ಮಗಾಂಧಿ ಅವರು ಮುಖ್ಯರು. ಅವರು ಇಪ್ಪತ್ತನೆಯ ಶತಮಾನದ ಯುಗಪುರುಷರು. ಇಡೀ ಜಗತ್ತಿಗೆ ಅವರು ಆದರ್ಶಪ್ರಾಯರಾಗಿ ಒಂದು ಹೊಸ ಯುಗವನ್ನೇ ಪ್ರಾರಂಭಿಸಿದರು. ಸತ್ಯ ಅಹಿಂಸೆಗಳೇ ಗಾಂಧೀಜಿಯ ಮಹಾಸ್ತ್ರಗಳು. ಈ ಶಾಂತಿಯ ಅಸ್ತ್ರಗಳಿಂದಲೇ ಸತ್ಯಾಗ್ರಹಿಗಳ ಸೈನ್ಯವನ್ನು ಸೇರಿಸಿ ಯೋಧರಂತೆ ಹೋರಾಡಿ ಜಗತ್ಕಲ್ಯಾಣದ ಮಾರ್ಗವನ್ನು ತೋರಿಸಿದರು. ವ್ಯಕ್ತಿದೇಶ ರಾಷ್ಟ್ರಕಲ್ಪನೆಯನ್ನು ಮೀರಿ ಮಾನವಕೋಟಿಯ ಸುಖಶಾಂತಿಗಾಗಿ ಶ್ರಮಿಸಿದರು.

ಮಾನವತ್ವವನ್ನು ಮರೆತು ಪಶುಗಳಂತೆ ವರ್ತಿಸುತ್ತಿದ್ದ ಅಂದಿನ ಬಲಿಷ್ಠರ ಹೃದಯವನ್ನು ಗಾಂಧೀಜಿ ಸತ್ಯ ಪ್ರೇಮ ದಯಗಳಿಂದ ಪರಿವರ್ತಿಸಿ ದೈವತ್ವವನ್ನು ತೋರಿಸಿಕೊಟ್ಟ ಹಿರಿಯ ವ್ಯಕ್ತಿ. ಸತ್ಯಮೇವ ಜಯತೇ, ಅಹಿಂಸಾ ಪರಮೋಧರ್ಮ ಎಂಬ ಸೂತ್ರವನ್ನು ಹಿಡಿದು ಜಗತ್ತಿಗೆ ಮಾರ್ಗದರ್ಶಕರಾದರು. ಗಾಂಧೀಜಿಯಂತೆ ತಮ್ಮ ಜೀವಿತ ಕಾಲದಲ್ಲೇ ವಿಶೇಷವಾದ ಪ್ರಖ್ಯಾತಿಯನ್ನು ಪಡೆದ ವ್ಯಕ್ತಿಯನ್ನು ಚರಿತ್ರೆಯಲ್ಲಿ ಸಂದರ್ಶಿಸುವುದು ತೀರಾ ಅಪರೂಪ.

ಸುಮಾರು ಎರಡು ಶತಮಾನಗಳು ಪರದಾಸ್ಯದಲ್ಲಿ ತೊಳಲುತ್ತಿದ್ದ ನಮ್ಮ ಭರತಖಂಡವನ್ನು ಸ್ವತಂತ್ರಗೊಳಿಸವದಕ್ಕಾಗಿ ಸತ್ಯ ಮತ್ತು ಅಹಿಂಸೆಗಳೆಂಬ ದಿವ್ಯಾಸ್ತ್ರಗಳಿಂದ ಒಂದು ಪ್ರಬಲ ಸಾಮ್ರಾಜ್ಯದ ವಿರುದ್ಧವಾಗಿ ಹೋರಾಡಿ ಜಯಗಳಿಸಿದರು. ಈ ರೀತಿಯ ರಕ್ತಪಾತವಿಲ್ಲದ ಕ್ರಾಂತಿ ಹಿಂದೆ ಎಂದೂ ಎಲ್ಲಿಯೂ ನಡೆದಂತೆ ಚರಿತ್ರೆಯಿಂದ ಕಂಡುಬರುವುದಿಲ್ಲ.

ಗಾಂಧೀಜಿಯವರ ಕಾರ್ಯಕ್ಷೇತ್ರ ಬಹುಮುಖವಾದುದು. ಮಾನವ ಉದ್ಧಾರಕ್ಕಾಗಿ ಅವರು ಕೈಕೊಂಡ ಮಾರ್ಗಗಳು ಜಗತ್ತಿಗೇ ಮೇಲ್ಪಂಕ್ತಿಯಾಗಿದೆ. ನಮ್ಮ ಜನರಲ್ಲಿನ ಅಜ್ಞಾನ, ಅಂಧಕಾರ ಮೌಢ್ಯಗಳನ್ನು ತೊಲಗಿಸಿ ಇತರ ಜನಾಂಗಗಳೊಂದಿಗೆ ತಲೆಯೆತ್ತಿ ಬಾಳುವಂತೆ ಮಾಡಲು ತಮ್ಮ ಜೀವನವನ್ನೇ ಮುಡುಪಾಗಿರಿಸಿದರು. ಅವರು ಭಗವದ್ಭಕ್ತರಲ್ಲಿ ಅಗ್ರಗಣ್ಯರಾಗಿ

ಶ್ರೇಷ್ಠಧಾರ್ಮಿಕ ಜೀವನವನ್ನು ನಡೆಸಿ, ನಿಷ್ಠಾವಂತ ದೇಶಸೇವಕರೂ, ಜಗತ್ತಿನ ಶಾಂತಿದೂತರೂ ಆಗಿ ವಿಶ್ವಶಾಂತಿಗಾಗಿ, ಜಗತ್ಕಲ್ಯಾಣಕ್ಕಾಗಿ ಹೋರಾಡಿ ಅಮರರಾದರು.

ವಿಶ್ವದ ಚರಿತ್ರೆಯನ್ನು ಅವಲೋಕಿಸಿದಾಗ ಮಾನವ ಕಲ್ಯಾಣಕ್ಕಾಗಿ, ದೀನದಲಿತರ ಉದ್ಧಾರಕ್ಕಾಗಿ ಹೋರಾಡಿದವರು ಹಲವಾರು ಜನ ಕಂಡುಬರುತ್ತಾರೆ. ಅವರಲ್ಲಿ ಗೌತಮಬುದ್ಧ, ಜಗಜ್ಯೋತಿ ಬಸವೇಶ್ವರ ಮತ್ತು ಮಹಾತ್ಮಾಗಾಂಧಿ ಇವರು ಅಗ್ರೇಸರರು. ಕಾಲದೃಷ್ಟಿಯಿಂದ ಇವರು ಬೇರೆಯಾದರೂ ಅಭಿಪ್ರಾಯದ ದೃಷ್ಟಿಯಿಂದ ಒಂದೇ ಆಗಿದ್ದಾರೆ. ಇವರು ನಿರಂತರ ಮಾನವಹಿತ ಸಾಧಕರಾಗಿದ್ದಾರೆ. ಸಾಮ್ರಾಟನಾಗಿದ್ದ ಬುದ್ಧ ಸಂಸಾರದ ಬವಣೆಯಲ್ಲಿ ತೊಳಲುತ್ತಿದ್ದ ಮಾನವರಿಗೆ ಆತ್ಮಕಲ್ಯಾಣದ ಮಾರ್ಗವನ್ನು ತೋರಿದನು. ಅವನು ಸಾರಿದ ಧರ್ಮನೀತಿಗಳು ದೇಶ–ವಿದೇಶಗಳಲ್ಲೂ ಹರಡಿಕೊಂಡವು.

ಬಸವಣ್ಣನವರು ಜೀವನದ ಹಲವಾರು ಕ್ಷೇತ್ರಗಳಲ್ಲಿ ಕ್ರಾಂತಿಯನ್ನು ಮಾಡಬೇಕಾಯಿತು. ಸ್ವಯಂ ಭಕ್ತಿ ಭಂಡಾರಿಗಳಾದ ಬಸವಣ್ಣನವರು ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಹಿತ್ಯ ಕ್ಷೇತ್ರಗಳಲ್ಲಿ ಕ್ರಾಂತಿಯನ್ನು ಮಾಡಿ ಜನಸಾಮಾನ್ಯರಿಗೆ ಮುಕ್ತಿಮಾರ್ಗವನ್ನು ತೋರಿದ್ದಾರೆ. ಮಾನವರ ಹಿತಸಾಧನೆಗೆ ಗಾಂಧೀಜಿಯವರು ಕೈಕೊಂಡ ಮಾರ್ಗ ಇವರಿಬ್ಬರಿಗಿಂತ ಭಿನ್ನವಾದುದು. ಗಾಂಧೀಜಿಯವರು ಈ ದೇಶಕ್ಕೆ ಸ್ವರಾಜ್ಯವನ್ನು ಒದಗಿಸಿಕೊಡುವುದಕ್ಕೆ ಜೀವಮಾನಪೂರ್ತಿ ಹೆಣಗಬೇಕಾಯಿತು. ಸ್ವಾತಂತ್ರ್ಯದ ಮಹತ್ವವನ್ನು ನಮ್ಮ ಜನತೆಗೆ ಮನದಟ್ಟು ಮಾಡಿಕೊಂಡುವುದರಲ್ಲಿಯೇ ಅವರ ಜೀವನ ಕೊನೆಗೊಂಡು ಗಾಂಧೀಜಿಯವರು ತಮ್ಮ ಗುರಿಯನ್ನು ಸಾಧಿಸಿದರು.

ಬುದ್ಧ, ಬಸವ, ಗಾಂಧೀಜಿ ಅವರು ಮಾನವ ಕಲ್ಯಾಣಕ್ಕಾಗಿ ಜನ್ಮವೆತ್ತಿದ ಮಹಾನುಭಾವರು. ಈ ದೇಶ ಈ ದೇಶದ ಜನರ ಬಾಳು ಹಸನಾಗಲು ಜೀವಮಾನವೆಲ್ಲ ಅಹರ್ನಿಶಿ ದುಡಿದ ವಿಭೂತಿ ಪುರುಷರು. ಜಗತ್ತಿನ ಕಲ್ಯಾಣಕ್ಕಾಗಿ ಜನ್ಮತಾಳಿದ ತ್ರಿಮೂರ್ತಿಗಳು. ಇವರು ನಡೆದ ದಾರಿಯಲ್ಲೇ ನಡೆದು, ಇವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಿದರೆ ಈ ನಾಡಿನ ಜನತೆಯ ಬದುಕು ಬಂಗಾರವಾಗುವುದರಲ್ಲಿ ಸಂಶಯವಿಲ್ಲ. ಆ ಕಾಲ ಸನ್ನಿಹಿತವಾಗಲಿ ಎಂದು ಹಾರೈಸೋಣ.

❐

ಬಸವೇಶ್ವರರು : ಗಾಂಧೀಜಿ

●

ಬಿ.ಆರ್. ಪ್ರಾಣೇಶರಾವ್

ಭಾರತೀಯ ಸಂಸ್ಕೃತಿ ಅವಿಚ್ಛಿನ್ನವಾಹಿನಿ; ಅವಿರತವಾಹಿನಿ. ಅದು ಎಂದೂ ನಿಂತ ನೀರಲ್ಲ. ಪರಂಪರಾನುಗತವಾಗಿ ಬಂದ ಅಮೂಲ್ಯವಾದ ಶಾಶ್ವತ ಮೌಲ್ಯಗಳನ್ನು ಅದು ರಕ್ಷಿಸಿಕೊಂಡು ಬಂದಿದೆ. ಸತ್ಯ, ಧರ್ಮ, ದಯೆ, ಪ್ರೇಮ, ಅಹಿಂಸೆ ಮುಂತಾದುವು ಶಾಶ್ವತಜೀವನ ಮೌಲ್ಯಗಳು. ಪರದೇಶಗಳ ಸಂಸ್ಕೃತಿಗಳೊಡನೆ ಸಂಪರ್ಕ ಬೆಳೆದಾಗ ಆ ಸಂಸ್ಕೃತಿಗಳ ಉತ್ತಮ ಮೌಲ್ಯಗಳನ್ನು ತನ್ನದಾಗಿ ಮಾಡಿಕೊಂಡು ವೈವಿಧ್ಯತೆಯನ್ನು ಮೆರೆದಿರುವುದು ಭಾರತೀಯ ಸಂಸ್ಕೃತಿಯ ಹೆಗ್ಗಳಿಕೆ.

ಭಾರತೀಯ ಸಂಸ್ಕೃತಿಯಲ್ಲಿ ಹಾಗೂ ಸಮಾಜದಲ್ಲಿ ದುಷ್ಟಸಂಪ್ರದಾಯಗಳು ತಲೆದೋರಿದಾಗ, ಹಳೆಯ ಮೌಲ್ಯಗಳು ಸವಕಲಾದಾಗ ಅವುಗಳನ್ನು ತೊಡೆದುಹಾಕುವ ಕೆಲಸ ಕಾಲಕಾಲಕ್ಕೆ ನಡೆದುಬಂದಿದೆ. ಬೇರೆ ದೇಶಗಳಲ್ಲಿ ಸಮಾಜಸುಧಾರಣೆ ಅಥವಾ ಪರಿವರ್ತನೆಗೆ ತೀವ್ರಕ್ರಾಂತಿಗಳು, ಹಿಂಸಾತ್ಮಕ ಆಂದೋಳನಗಳು ಅಗತ್ಯವಾಗಿ ಕಂಡುಬಂದಿವೆ. ಆದರೆ ಭಾರತದಲ್ಲಿ ಸಾಮಾಜಿಕ, ರಾಜಕೀಯ ಪರಿವರ್ತನೆಗಳು ಶಾಂತಿಯುತವಾಗಿ ನಡೆದಿರುವುದು ಒಂದು ವೈಶಿಷ್ಟ್ಯ. ಹೀಗೆ ಸುಧಾರಣೆ ಅಥವಾ ಪರಿವರ್ತನೆಗಳನ್ನು ತರುವುದರಲ್ಲಿ ಮೊದಲಿನಿಂದಲೂ ಪ್ರವಾದಿಗಳು, ಸಂತರು, ಸುಧಾರಕರು ಅಪ್ರತಿಮ ಪಾತ್ರ ವಹಿಸಿದ್ದಾರೆ. ಹಳಸಿಹೋದ ಮೌಲ್ಯಗಳನ್ನು, ಕುರುಡು ಸಂಪ್ರದಾಯಗಳನ್ನು, ದುಷ್ಟ ಕಟ್ಟಳೆಗಳನ್ನು ಗುರುತಿಸಿ ಅವುಗಳನ್ನು ತೊಡೆದುಹಾಕಲು ಬದ್ಧ ಕಂಕಣರಾದವರು ಮಹಾತ್ಮರು; ಸಂತರು ಮತ್ತು ಸುಧಾರಕರು. ತಾವು ಕಂಡ ಸತ್ಯವನ್ನು, ತಾವು ಒಪ್ಪಿದ ಹೊಸ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ತಾವು ಮೊದಲು ಪರಿವರ್ತಿತವಾಗಿ ಇಡೀ ಜನತೆಯನ್ನು ಪರಿವರ್ತನೆಯ ಹಾದಿಗೆ ಎಳೆಯುವುದು ಮಹಾತ್ಮರ ಮಾರ್ಗ. ಇದು ಒಮ್ಮೊಮ್ಮೆ ನಿಧಾನದ ಮಾರ್ಗವೆಂದು ಕಂಡರೂ ಇದರ ಫಲ ಶಾಶ್ವತ. ಇವರಿಂದ ಸಮಾಜಕ್ಕೆ ಆಗುವ ಪ್ರಯೋಜನ ಅಮಿತ.

ಈ ರೀತಿಯ ಪರಿವರ್ತನೆಯ ಪ್ರಕ್ರಿಯೆಯಲ್ಲಿ ವ್ಯಕ್ತಿಗೆ ಪಾರಮ್ಯ. ವ್ಯಕ್ತಿಯ ಸುಧಾರಣೆಯಿಂದ ಸಮಾಜದ ಸುಧಾರಣೆ; ಸಾಮಾಜಿಕ ಪರಿವರ್ತನೆ. ಪರಿವರ್ತನೆಯ

ಅಗತ್ಯವನ್ನು ಕಂಡ ಮಹಾತ್ಮರು ಹೊಸ ಮೌಲ್ಯಗಳ ಅನುಷ್ಠಾನದಿಂದ ಮೇಲ್ಪಂಕ್ತಿ ಹಾಕುತ್ತಾರೆ; ಕ್ರಾಂತಿದರ್ಶಿಗಳಾಗುತ್ತಾರೆ. ಸಮಾಜದಲ್ಲಿ ವ್ಯಕ್ತಿಗಳು ಹೆಚ್ಚುಹೆಚ್ಚಾಗಿ ನೂತನ ಮೌಲ್ಯಗಳನ್ನು ಒಪ್ಪಿಕೊಂಡು ಅನುಸರಿಸಿದಾಗ ಅವರ ಜೀವನಕ್ರಮದಲ್ಲಿ, ಜೀವನ ವಿಧಾನದಲ್ಲಿ ಬದಲಾವಣೆಯಾಗುತ್ತದೆ. ಕಡೆಗೆ ಇಡೀ ಸಮಾಜ ಪರಿವರ್ತಿತವಾಗುತ್ತದೆ. ಸದ್ದಿಲ್ಲದೆ ಕ್ರಾಂತಿ ನಡೆದು ಹೋಗುತ್ತದೆ. ಇಂತಹ ಶಾಂತಿಯುತ ಕ್ರಾಂತಿಪಥದ ನಿರ್ಮಾತೃಗಳು ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ವಿಜೃಂಭಿಸಿದ ಶ್ರೀ ಬಸವೇಶ್ವರರು ಒಬ್ಬರಾದರೆ ಇಪ್ಪತ್ತನೇ ಶತಮಾನದಲ್ಲಿ ರಾರಾಜಿಸಿದ ಮಹಾತ್ಮಗಾಂಧಿ ಮತ್ತೊಬ್ಬರು.

ಶ್ರೀ ಬಸವೇಶ್ವರರು ಹುಟ್ಟು ಬಂಡಾಯಗಾರರು. ಹನ್ನೆರಡನೆಯ ಶತಮಾನದಲ್ಲಿ ಪ್ರಚಲಿತವಾಗಿದ್ದ ಧಾರ್ಮಿಕ ಅನಾಚಾರ, ಸಾಮಾಜಿಕ ಅನ್ಯಾಯ, ಕುರುಡು ಸಂಪ್ರದಾಯ, ಹಾಗೂ ಜಾತೀಯ ಯಜಮಾನಿಕೆ ವಿರುದ್ಧ ಬಂಡಾಯ ಹೂಡಿದರು. ಹುಟ್ಟು ನಾಡಾದ ಕರ್ನಾಟಕ ಅವರ ಕಾಯಕದ ಕ್ಷೇತ್ರ, ಬಿಜ್ಜಳನ ಮಂತ್ರಿಯಾಗಿದ್ದ ಅವರು ಸಾಮಾಜಿಕ ಸ್ಥಿತಿಗತಿಗಳನ್ನು ಕ್ಷ–ಕಿರಣದಿಂದ ನೋಡಿ ಸಮಾಜದ ಸಮಗ್ರ ಸುಧಾರಣೆಗೆ ಹಾಗೂ ಪರಿವರ್ತನೆಗೆ ಅವಿರತವಾಗಿ ದುಡಿದರು.

ಹಲವು ಹತ್ತು ದೇವರು ದಿಂಡರುಗಳ ಆರಾಧನೆ ಹಾಗೂ ಮೂಢನಂಬಿಕೆಗಳಿಂದ ಗೋಜಲುಮಯವಾಗಿದ್ದ ಧಾರ್ಮಿಕ ಜೀವನದ ಪುನರುತ್ಥಾನಕ್ಕೆ ಕೈಹಾಕಿದರು ಬಸವಣ್ಣನವರು. ಭಗವಂತ ಏಕಮೇವಾದ್ವಿತೀಯ; ಜನರೆಲ್ಲರೂ ಆತನ ಮಕ್ಕಳು. ಆದುದರಿಂದ ಎಲ್ಲರೂ ಸಹೋದರರು ಎಂಬ ಭಾವನೆಯನ್ನು ಬಿತ್ತರಿಸಿದರು. ಭಗವಂತನಲ್ಲಿ ಸಮರ್ಪಣಭಾವದ ಭಕ್ತಿಯೇ ಮುಕ್ತಿಗೆ ಮಾರ್ಗ; ಮಾನವಸೇವೆ ಭಗವಂತನ ಸಾಕ್ಷಾತ್ಕಾರದ ಸಾಧನ ಎಂದು ಸಾರಿದರು. ಆ ದಿಸೆಯಲ್ಲಿ ಕಾಯಕ ಮಾಡಿದರು. ಜಾತಿ, ವರ್ಗ, ಲಿಂಗಭೇದವಿಲ್ಲದೆ ಎಲ್ಲರೂ ಒಂದೇ ಎಂಬ ತತ್ವವನ್ನು ಪ್ರತಿಪಾದಿಸಿದರು. ಅವರು ನಡೆಸುತ್ತಿದ್ದ 'ಅನುಭವ ಮಂಟಪ' ಅವರ ವಿಚಾರಗಳು ಮೂರ್ತಿವೆತ್ತ ವೇದಿಕೆಯಾಗಿತ್ತು.

ಬಸವಣ್ಣನವರಂತೆ ಗಾಂಧಿಯವರೂ ಭಗವಂತನ ಏಕತೆಯ ತತ್ವವನ್ನು ಪ್ರತಿಪಾದಿಸಿದರು. ಗಾಂಧಿಯವರಿಗೆ ಸತ್ಯವೇ ದೇವರು. ದೇವರ ಸೃಷ್ಟಿಗೆ ಒಳಗಾದ ಜೀವರಾಶಿಗಳೆಲ್ಲಾ ವಂದ್ಯ. ಪ್ರತಿಯೊಂದು ಜೀವವೂ ಪವಿತ್ರವಾದುದು. ಆದುದರಿಂದ ಕಾಯೇನ ವಾಚಾ ಮನಸಾ ಯಾವ ಜೀವಕ್ಕೂ ಹಿಂಸೆ ಮಾಡಬಾರದು. ಹಿಂಸೆ ಮಾಡಿದರೆ ಭಗವಂತನಿಗೆ ಅಪಚಾರ ಮಾಡಿದಂತೆ ಎಂದರು ಗಾಂಧಿ.

ಬಸವಣ್ಣನವರು ದಯೆಯು ಧರ್ಮದ ಮೂಲವೆಂದರೆ ಗಾಂಧಿ 'ಪ್ರೇಮ' ಜೀವನದ ಸೂತ್ರ ಎಂದರು. ಸತ್ಯ, ಅಹಿಂಸೆ, ಅಸಂಗ್ರಹ, ಅಭಯ, ಸಮಾನತೆ, ನೀತಿ–ಇಬ್ಬರು ಮಹಾತ್ಮರುಗಳೂ ಒಪ್ಪಿಕೊಂಡು ಅನುಷ್ಠಾನ ಮಾಡಿದ ಮೌಲ್ಯಗಳು.

ವರ್ಣ ಮತ್ತು ಜಾತಿಪದ್ಧತಿಯ ಉಗ್ರವಿರೋಧಿಗಳು ಬಸವೇಶ್ವರರು. 'ದುಡಿಮೆಯ ವಿಭಜನೆ'ಯ 'ವೈಜ್ಞಾನಿಕ ಬುನಾದಿ'ಯ ಮೇಲೆ ಆರಂಭವಾದ ವರ್ಣವ್ಯವಸ್ಥೆಯನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ಗಾಂಧೀಜಿ ಸಮರ್ಥಿಸಿದ್ದುಂಟು. ಆದರೆ ಪ್ರಸ್ತುತ ಜಾತಿವ್ಯವಸ್ಥೆಗೂ ಹಿಂದಿನ ವರ್ಣವ್ಯವಸ್ಥೆಯ ಕಲ್ಪನೆಗೂ ಅಜಗಜಾಂತರ ಎಂದು ಗಾಂಧಿ ಹೇಳಿದರು. ಇಂದಿನ ಜಾತಿವ್ಯವಸ್ಥೆ ವರ್ಣವ್ಯವಸ್ಥೆಯ ವಿಕೃತಸ್ವರೂಪ. ಆದುದರಿಂದ ಜಾತಿಪದ್ಧತಿ

ನಿರ್ಮೂಲವಾಗಬೇಕು ಎಂದು ಗಾಂಧಿ ಹೇಳಿದರು. ಜಾತಿರಹಿತ, ವರ್ಗರಹಿತ ಸಮಾಜದ ಕಲ್ಪನೆಯನ್ನು ಬಾಪೂ ಮುಂದಿಟ್ಟರು.

ಬಸವಣ್ಣನವರು ಹಾಗೂ ಗಾಂಧಿಯವರು ಪ್ರತಿಪಾದಿಸಿದ ಕ್ರಾಂತಿಕಾರಿ ಮೌಲ್ಯ ಕಾಯಕದ ಮೌಲ್ಯ (Work ethics). 'ಕಾಯಕವೇ ಕೈಲಾಸ' ಎಂದರು ಬಸವೇಶ್ವರರು. 'ಅನ್ನದ ಕಾಯಕ'ದ ಮಹತ್ವವನ್ನು ಎತ್ತಿ ಹಿಡಿದರು. ಗಾಂಧಿ. ಬದುಕಿನಲ್ಲಿ ದೇಹದ ಪರಿಶ್ರಮಕ್ಕೆ ನೀಡಬೇಕಾದ ಪ್ರಾಮುಖ್ಯತೆಯನ್ನು ಇಬ್ಬರೂ ಒತ್ತಿ ಹೇಳಿದರು. ಬಸವೇಶ್ವರರ ಸಮಕಾಲೀನ ಸಮಾಜದಲ್ಲಿ ಮೇಲುಕೀಳು ಭಾವನೆಗಳು ತುಂಬಿ ತುಳುಕಾಡುತ್ತಿದ್ದುವು. ವ್ಯಕ್ತಿಯು ಮಾಡುತ್ತಿದ್ದ ಉದ್ಯೋಗಕ್ಕೆ ಅನುಗುಣವಾಗಿ ಅವನ ಸಾಮಾಜಿಕ ಸ್ಥಾನ ನಿರ್ಣಯವಾಗುತ್ತಿತ್ತು. ಗಾಂಧಿಯವರ ಕಾಲದಲ್ಲೂ ಅಷ್ಟೆ. ಜಾತಿ ಮತ್ತು ವರ್ಗನಿಬಿಡವಾದ ಭಾರತದಲ್ಲಷ್ಟೇ ಅಲ್ಲ, ಮುಂದುವರೆದವುಗಳೆಂದು ಹೇಳಿಕೊಳ್ಳುವ ರಾಷ್ಟ್ರಗಳ ಸಮಾಜ ರಚನೆಯಲ್ಲೂ ವರ್ಗಗಳನ್ನಾಧರಿಸಿ ಮೇಲುಕೀಳು ಭಾವನೆಗಳು ತಾಂಡವವಾಡುತ್ತಿವೆ. ಈ ಮೇಲು ಕೀಳು ಭಾವನೆಗಳು ತೊಲಗಿ ಸಾಮಾಜಿಕ ಸಮಾನತೆ ಮೂಡಬೇಕಾದರೆ ಎಲ್ಲ ವೃತ್ತಿ ಉದ್ಯೋಗಗಳಿಗೂ ಸಮಾನ ಗೌರವ ಕೊಡುವ ಪ್ರವೃತ್ತಿ ಬರಬೇಕು. ದುಡಿಮೆಯ ಘನತೆಯ ಮೌಲ್ಯ ರಕ್ತಗತವಾಗಬೇಕು. ಎಲ್ಲಿಯವರೆಗೆ ಈ ಮೌಲ್ಯದ ಅಂಗೀಕಾರವಿರುವುದಿಲ್ಲವೋ ಅಲ್ಲಿಯವರೆಗೆ ಸಾಮಾಜಿಕ ಅಸಮಾನತೆ, ಅನ್ಯಾಯ, ಶೋಷಣೆ ಇದ್ದೇ ಇರುತ್ತವೆ. ದುಡಿಮೆಯ ಘನತೆಯ ಮೌಲ್ಯ ರಾಷ್ಟ್ರಜೀವನದ ಪ್ರಧಾನ ಮೌಲ್ಯವಾಗಬೇಕು, ವಿಶ್ವಮಾನವ ತತ್ವವಾಗಬೇಕು.

ಅನ್ನದ ಕಾಯಕ ಎಂದರೆ ಪ್ರತಿಯೊಬ್ಬನೂ ತನ್ನ ಅಗತ್ಯ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕೈಲಾದ ಮಟ್ಟಿಗೂ ದೇಹಶ್ರಮಪಡಬೇಕು. ಶರೀರಶ್ರಮದ ವ್ರತವನ್ನು ಸಾರ್ವತ್ರಿಕವಾಗಿ ಸ್ವೀಕರಿಸಿದರೆ ಸಮಾಜದಲ್ಲಿ ಎಲ್ಲ ರೀತಿಯ ದುಡಿಮೆಗೂ ಸಮಾನ ಗೌರವ ದೊರೆಯುತ್ತದೆ. ಬಸವಣ್ಣನವರು ಅನ್ನಕಾಯಕ ತತ್ವವನ್ನು ಆಧ್ಯಾತ್ಮಕ ತತ್ವವನ್ನಾಗಿಯೇ ಕಂಡರು. ಪ್ರತಿಯೊಬ್ಬನೂ ತನ್ನ ಜೀವಿಕೆಗಾಗಿ ಶ್ರಮಪಟ್ಟು ದುಡಿಯಲೇಬೇಕು. ದುಡಿದು ಉತ್ಪನ್ನ ಮಾಡಿದುದನ್ನು 'ದಾಸೋಹ' ಮಾಡಬೇಕು. ಜಂಗಮರಿಗೆ ಕೊಟ್ಟು ತಾನೂ ಭುಂಜಿಸಬೇಕು; ಎಂದರು.

ಶರೀರಶ್ರಮ ಸಾಮಾಜಿಕ ಸಮಾನತೆಯನ್ನು ಬೆಸೆಯುವ ಸಾಧನ. ಅಂದಿನ ಸಮಾಜಿಕ ಪರಿಸರದಲ್ಲಿ ಸಮಾನತೆಯ ಸಿದ್ಧಿಯನ್ನು ಬಸವಣ್ಣನವರು ತೋರಿಸಿಕೊಟ್ಟರು. ಅನುಭವಮಂಟಪದಲ್ಲಿ ತೋಟಿ, ಮಡಿವಾಳ, ಬಡಗಿ, ಕುಂಬಾರ ಮತ್ತೆಲ್ಲ ರೀತಿಯ ಉದ್ಯೋಗಗಳನ್ನು ಅವಲಂಬಿಸಿದವರೂ ಉದ್ಯೋಗಭೇದ ಅಥವಾ ಲಿಂಗಭೇದವಿಲ್ಲದೆ ಸಮಾನವಾಗಿ ಕುಳಿತು ಉನ್ನತ ಆಧ್ಯಾತ್ಮಿಕ ವಿಚಾರಗಳನ್ನು ಚರ್ಚಿಸುವಷ್ಟರ ಮಟ್ಟಿಗೆ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಔನ್ನತ್ಯವನ್ನು ಸಾಧಿಸಿದ್ದರು. ಅನ್ನಕಾಯಕದ ಅನುಷ್ಠಾನದ ಪರಮೋಚ್ಚಸಾಧನೆ ಅದಾಗಿತ್ತು.

ಗಾಂಧಿಯವರು ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ಸಂಜಾತರ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುತ್ತಿದ್ದ ಕಾಲದಲ್ಲೇ ಅನ್ನಕಾಯಕದ ಮಹತ್ವವನ್ನು ಅರಿತುಕೊಂಡರು. ಟಾಲ್‌ಸ್ಟಾಯ್ ಕೃತಿಗಳಿಂದ ಈ ತತ್ವದ ಮಹತ್ವ ಅವರಿಗೆ ತಿಳಿಯಿತು. ನಂತರ ರಸ್ಕಿನ್‌ನ 'ಅನ್‌ಟು ದಿಸ್‌ಲಾಸ್ಟ್' ಗ್ರಂಥ ಓದಿದ ಮೇಲೆ ಗಾಂಧಿಯವರ ಜೀವನ ಮಾರ್ಗವೇ

ಬದಲಾಯಿತು. ಗಾಂಧಿಯವರ ಅಂತರಾಳದಲ್ಲಿ ಹುದುಗಿದ್ದ ಮುಖ್ಯ ಅನಿಸಿಕೆಗಳೆಲ್ಲಾ ರಸ್ಕಿನ್ನನ ಗ್ರಂಥದಲ್ಲಿ ಪ್ರತಿಬಿಂಬಿತವಾಗಿದ್ದುವು. ರಸ್ಕಿನ್ನನು ಪ್ರತಿಪಾದಿಸಿದ ಈ ಮೂರು ಮೂಲ ಸೂತ್ರಗಳು ಗಾಂಧಿಯವರ ಜೀವನ ಸೂತ್ರಗಳಾದುವು.

೧. ಎಲ್ಲರ ಒಳಿತಿನಲ್ಲಿ ಪ್ರತಿಯೊಬ್ಬನ ಒಳಿತೂ ಒಳಗೊಂಡಿದೆ.

೨. ವಕೀಲನ ವೃತ್ತಿಯಾಗಲೀ, ಹಜಾಮನ ವೃತ್ತಿಯಾಗಲೀ ಎರಡೂ ಸಮಾನ ಬೆಲೆ ಉಳ್ಳದ್ದು. ಏಕೆಂದರೆ ಸಮಾಜಕ್ಕೆ ಎಲ್ಲರ ಸೇವೆಯೂ ಅಗತ್ಯ.

೩. ಕೃಷಿಕನ ಹಾಗೂ ಕುಶಲಕರ್ಮಿಯ ದುಡಿಮೆಯೇ ಸಾರ್ಥಕ ದುಡಿಮೆ.

ಈ ಸೂತ್ರತ್ರಯವೇ ಸರ್ವೋದಯ ಸಿದ್ಧಾಂತದ ತಿರುಳಾಯಿತು. ರಸ್ಕಿನ್ನನ ಪುಸ್ತಕವನ್ನು ಗಾಂಧಿ ಗುಜರಾತೀ ಭಾಷೆಗೆ ಅನುವಾದ ಮಾಡಿ ಅದಕ್ಕೆ ಸರ್ವೋದಯ ಎಂದು ಹೆಸರು ಕೊಟ್ಟರು. ಪುಸ್ತಕವನ್ನು ಭಾಷಾಂತರ ಮಾಡಿದ್ದಷ್ಟೇ ಅಲ್ಲ; ಈ ತತ್ವಗಳಿಗನುಗುಣವಾಗಿ ತಮ್ಮ ಜೀವನವನ್ನು ಪರಿವರ್ತನೆ ಮಾಡಿಕೊಂಡರು ಗಾಂಧಿ. ಆಗ ದಕ್ಷಿಣ ಆಫ್ರಿಕಾದಲ್ಲಿ ಗಾಂಧಿಯವರಿಗೆ ಭರಾಟೆಯ ವಕೀಲ ವೃತ್ತಿ ಇತ್ತು. ತಿಂಗಳಿಗೆ ನಾಲ್ಕಾರು ಸಾವಿರ ರೂಪಾಯಿ ಸಂಪಾದನೆಯಿತ್ತು. ವಕೀಲ ವೃತ್ತಿಯನ್ನು ಕೈಬಿಟ್ಟರು. ಫೀನಿಕ್ಸ್ ಆಶ್ರಮ ಆರಂಭಿಸಿದರು. ದೇಹಶ್ರಮದ ಆಧಾರದ ಮೇಲೆ ಆಶ್ರಮವಾಸಿಗಳು ಜೀವನ ನಡೆಸುವ ಹಾಗೂ ಸಾರ್ವಜನಿಕ ಕಾರ್ಯಗಳಿಗೆ ಜೀವನವನ್ನು ಮುಡುಪಾಗಿಡುವ ಪರಿಪಾಠ ಮೊದಲಾಯಿತು.

ಭಾರತಕ್ಕೆ ವಾಪಸಾದ ಮೇಲೆ ಸಹ ಗಾಂಧಿಯವರು ಸ್ಥಾಪಿಸಿದ ಆಶ್ರಮಗಳಲ್ಲಿ ದೇಹಶ್ರಮಕ್ಕೆ ಅರ್ಥಾತ್ ಅನ್ನಕಾಯಕ ತತ್ವಕ್ಕೆ ಪೂರ್ಣ ಮಾನ್ಯತೆ ಕೊಡಲಾಗಿತ್ತು. ಆಶ್ರಮದ ಎಲ್ಲ ಕೆಲಸಕಾರ್ಯಗಳಲ್ಲೂ ಪ್ರತಿಯೊಬ್ಬರೂ ಭಾಗವಹಿಸಬೇಕಾಗಿತ್ತು. ಶೌಚಾಲಯವನ್ನು ಶುಚಿ ಮಾಡುವುದರಿಂದ ಹಿಡಿದು ಅಡಿಗೆ ಮನೆಯ ಕೆಲಸದವರೆಗೆ ಎಲ್ಲರಿಗೂ ಸಮಾನವಾದ ಕೆಲಸದ ಹಂಚಿಕೆ ಇರುತ್ತಿತ್ತು. ಹೀಗಾಗಿ ಎಲ್ಲ ಕೆಲಸ ಕಾರ್ಯಗಳಿಗೂ ಸಮಾಜ ಗೌರವವಿತ್ತು. ಶರೀರ ಶ್ರಮವು ಆಶ್ರಮ ಜೀವನದ ಏಕಾದಶ ಸೂತ್ರಗಳಲ್ಲಿ ಒಂದಾಗಿತ್ತು. ಬ್ರಿಟಿಷ್ ಪ್ರಭುತ್ವದ ಕಾನೂನನ್ನು ಉಲ್ಲಂಘಿಸಿ ವಿಚಾರಣೆಗೊಳಗಾಗಿದ್ದ ಒಂದು ಸಂದರ್ಭದಲ್ಲಿ "ನಿಮ್ಮ ವೃತ್ತಿ ಏನು?" ಎಂದು ಗಾಂಧಿಯವರನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದರು. "ನಾನೊಬ್ಬ ಕೃಷಿಕ ಮತ್ತು ನೇಯ್ಗೆಯವ" ಎಂದು ಗಾಂಧಿ ಉತ್ತರ ಕೊಟ್ಟರು!

'ದುಡಿಯದೇ ತಿನ್ನುವವ ಕಳ್ಳ' ಎಂದರು ಗಾಂಧಿ, ನ್ಯಾಯವಾದಿಯಾಗಲೀ, ವೈದ್ಯನಾಗಲೀ, ಬರಹಗಾರನಾಗಲೀ ಪ್ರತಿಯೊಬ್ಬನೂ ತನ್ನ ಜೀವನ ನಿರ್ವಹಣೆಗೆ ಸಾಧ್ಯವಾದಷ್ಟು ಮಟ್ಟಿಗೂ ಶರೀರಶ್ರಮ ಪಡಬೇಕು ಎಂದು ಗಾಂಧಿ ಒತ್ತಿ ಹೇಳಿದರು. ಶರೀರಶ್ರಮದಿಂದಲೇ ಮಾನವರೆಲ್ಲರೂ ಪರಸ್ಪರ ಸಾಂಗತ್ಯ ಮತ್ತು ತಾದಾತ್ಮ್ಯ ಭಾವನೆಯನ್ನು ಮೂಡಿಸಿಕೊಳ್ಳಲು ಸಾಧ್ಯ ಎಂದು ಗಾಂಧಿ ಭಾವಿಸಿದ್ದರು. ರವೀಂದ್ರನಾಥ್ ಠಾಗೂರ್ ಮತ್ತು ಸಿ.ವಿ.ರಾಮನ್ ಅಂತಹವರು ಶರೀರಶ್ರಮ ಮಾಡಿ ಸಮಯವನ್ನು ಏಕೆ ವ್ಯರ್ಥ ಗೊಳಿಸಬೇಕು? ಬೌದ್ಧಿಕ ಕಾರ್ಯಕ್ಕೆ ಎಲ್ಲ ಸಮಯವನ್ನೂ ಅವರು ಮೀಸಲಾಗಿಡುವುದು ಒಳ್ಳೆಯದಲ್ಲವೇ?' ಎಂದು ಗಾಂಧಿಯವರನ್ನು ಪ್ರಶ್ನಿಸಿದ್ದುಂಟು. ಶರೀರಶ್ರಮದಿಂದ ಈ ಮಹಾನ್ ವ್ಯಕ್ತಿಗಳ ಬೌದ್ಧಿಕ ಕೃತಿಗಳಿಗೆ ಇನ್ನೂ ಹೆಚ್ಚು ಮೆರುಗು ಮತ್ತು ಮೌಲ್ಯ ಬರುತ್ತದೆ ಎಂದು ಗಾಂಧಿ ಉತ್ತರ ಕೊಟ್ಟಿದ್ದರು.

ಆಧ್ಯಾತ್ಮಿಕ ಉನ್ನತಿ ಹಾಗೂ ಸಾಮಾಜಿಕ ಸಮಾನತೆಯನ್ನು ಉಂಟುಮಾಡುವ ಅನ್ನಕಾಯಕದ ಆರ್ಥಿಕ ಮೌಲ್ಯವೂ ಹಿರಿದಾದದ್ದು. ಸಮಾಜದಲ್ಲಿನ ಎಲ್ಲ ಜನರೂ ತಮಗೆ ಅಗತ್ಯವಾದ ಆಹಾರ, ಬಟ್ಟೆ, ವಸತಿ ಮತ್ತೆಲ್ಲ ವಸ್ತುಗಳನ್ನು ಹಾಗೂ ಸೇವೆಗಳನ್ನು ಪಡೆಯಲು ಶರೀರಶ್ರಮಪಟ್ಟು, ಉತ್ಪನ್ನ ಮಾಡಿಕೊಳ್ಳುವುದಾದರೆ ಈ ಎಲ್ಲ ವಸ್ತು–ಸೇವೆಗಳು ಸಮೃದ್ಧರಾಗಿ ದೊರೆತು ಬಡತನ ಕೊನೆಗೊಳ್ಳುತ್ತದೆ. ಜೀವನ ಶ್ರೀಮಂತವಾಗುತ್ತದೆ. ಸ್ವಾತಂತ್ರ, ಸ್ವಾವಲಂಬನೆ ಮತ್ತು ಸ್ವದೇಶಿ ತತ್ವಗಳು ವಿಜೃಂಭಿಸುತ್ತವೆ. ಪರಸ್ಪರ ಶೋಷಣೆ ತಪ್ಪುತ್ತದೆ. ಶುದ್ಧವಾದ ಸಮಾಜವಾದ ಅಥವಾ ಸರ್ವೋದಯ ಕರಗತವಾಗುತ್ತದೆ.

ಇನ್ನೊಂದು ಸಾಮಾಜಿಕ ಪಿಡುಗು ಅಸ್ಪೃಶ್ಯತೆ. ಇದರ ನಿರ್ಮೂಲನಕ್ಕೆ ಬಸವಣ್ಣನವರು ಸಲ್ಲಿಸಿದ ಸೇವೆ ಅಸದೃಶ. ಅಸ್ಪೃಶ್ಯರೆನಿಸಿದ್ದ ಅನೇಕರು ಬಸವಣ್ಣನವರ ಪ್ರಭಾವದಿಂದ ಸಾಮಾಜಿಕ ಮೇಲ್ಮೆ ಸಾಧಿಸಿದ್ದರು. ಅನುಭವ ಮಂಟಪದಲ್ಲಿ ಸಮಾನರಾಗಿ ಕಂಗೊಳಿಸುತ್ತಿದ್ದರು. ಗಾಂಧೀಜಿ ಬಸವಣ್ಣನವರ ಕೆಲಸವನ್ನೇ ವ್ಯಾಪಕವಾಗಿ ಮುಂದುವರೆಸಿದರು. ಅಸ್ಪೃಶ್ಯರೆನಿಸಿದವರನ್ನು ಹರಿಜನರೆಂದು ಕರೆದರು. ಹರಿಜನ ಹೆಣ್ಣುಮಗಳನ್ನು ದತ್ತು ತೆಗೆದುಕೊಂಡು ಪಿತೃವಾತ್ಸಲ್ಯವನ್ನೆರೆದರು. ಹರಿಜನರನ್ನು ಮಂದಿರಗಳಿಗೆ ಪ್ರವೇಶ ಮಾಡಿಸಿದರು. ಇದಕ್ಕಾಗಿ ಸತ್ಯಾಗ್ರಹಗಳನ್ನು ನಿರ್ದೇಶಿಸಿದರು. ಹರಿಜನ ಕೇರಿಗಳಲ್ಲಿ ಬಿಡಾರ ಮಾಡಿದರು. ಅಸ್ಪೃಶ್ಯರ ಕಷ್ಟಗಳನ್ನರಿತಿದ್ದು ಅವರೊಡನೆ ತಾದಾತ್ಮ್ಯಭಾವನೆ ಮೂಡಿಸಿಕೊಳ್ಳಲು 'ತಾವೊಬ್ಬ ಭಂಗಿ' ಎಂದು ಕರೆದುಕೊಂಡರು ಮಹಾತ್ಮರು. 'ಎನಗಿಂತ ಕಿರಿಯರಿಲ್ಲ' ಎಂದು ಬಸವಣ್ಣನವರು ಹೇಳಿದ್ದರಲ್ಲಿ ಯಾವ ನಮ್ರಭಾವವಿತ್ತೋ ಅದೇ ದಿವ್ಯ ನಮ್ರತೆ ಗಾಂಧಿಯವರು 'ನಾನೊಬ್ಬ ಭಂಗಿ' ಎಂದು ಹೇಳಿದಾಗ ಇತ್ತು.

ಶ್ರೀ ಬಸವೇಶ್ವರರಿಗೂ ಮಹಾತ್ಮಗಾಂಧಿ ಅವರಿಗೂ ಎಂಟು ಶತಮಾನಗಳ ಅಂತರವಿದ್ದರೂ ವಿಚಾರಗಳಲ್ಲಿ ವಿಶೇಷವಾದ ಸಾಮ್ಯವಿರುವುದನ್ನು ಕಾಣುತ್ತೇವೆ. ಇವರುಗಳು ಬೋಧಿಸಿದ ತತ್ವಗಳೂ ಅನುಷ್ಠಾನ ಮಾಡಿದ ಸೂತ್ರಗಳೂ ಕಾಲ ಮತ್ತು ದೇಶಗಳ ಎಲ್ಲೆಗಳನ್ನು ಮೀರಿದ ಅಮರತತ್ವಗಳು. ಅಂತೆಯೇ ಅವರುಗಳು ಮಾನವ ಇತಿಹಾಸದಲ್ಲಿ ಸದಾ ಮಿಂಚುತ್ತಿರುವ ಮಹಾತ್ಮರು.

❐

ಬಸವ : ಗಾಂಧಿ

●

ಎಸ್.ಎಸ್. ಕೋತಿನ

ಬಸವ ಮತ್ತು ಗಾಂಧಿ–ಇಬ್ಬರೂ ತಮ್ಮ ಕಾಲದ ಕರಾಳ ವ್ಯವಸ್ಥೆಯ ಭೀಕರ ಸವಾಲುಗಳನ್ನು ಮಾನವೀಯ ಅಂತಃಕರಣದ ನೆಲೆಯಲ್ಲಿಯೇ ಸ್ವೀಕರಿಸುವದರೊಂದಿಗೆ, ಒಟ್ಟು ಸಾಮಾಜಿಕ ಪರಿವರ್ತನೆಗಾಗಿ ಒಂದು ಸೈದ್ಧಾಂತಿಕ ಹೋರಾಟಕ್ಕೆ ತಮ್ಮನ್ನು ತೊಡಗಿಸಿಕೊಂಡ ವಿಭೂತಿಪುರುಷರು. ಮಹಾಪ್ರವಾದಿಗಳಾಗಿದ್ದ ಅವರ ಹೋರಾಟ, ಅಂದಿನ ಸಮಸ್ಯೆಯ ಒತ್ತಡಗಳಿಗೆ ಅನಿವಾರ್ಯವಾದ ತಾತ್ಕಾಲಿಕ ಪರಿಹಾರವನ್ನು ಒದಗಿಸಿ, ಸಮಾಧಾನ ಪಟ್ಟುಕೊಳ್ಳುವದಾಗಿರದೆ, ಒಂದು ಹೊಸ ಸಮಾಜದ ರಚನೆಯ ಮೂಲಕ ಮಾನವ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳುವದಾಗಿತ್ತು. ಅದಕ್ಕಾಗಿ ಭೂತ–ವರ್ತಮಾನಗಳ ವಿಶ್ಲೇಷಣೆಯ ನೆಲೆಯಲ್ಲಿ ಸಮಸ್ಯೆಗಳನ್ನು ಶೋಧಿಸಿ ಸಾರ್ವಕಾಲಿಕವಾದ, ಸಾರ್ವತ್ರಿಕವಾದ ಮೌಲ್ಯಗಳ ಅನ್ವೇಷಣೆಗೆ ತೊಡಗುವುದಕ್ಕೆ ಮತ್ತು ಅವುಗಳಿಗೆ ಒಂದು ಸೈದ್ಧಾಂತಿಕ ಹಾಗೂ ವೈಜ್ಞಾನಿಕ ನೆಲೆಗಟ್ಟನ್ನು ಒದಗಿಸುವುದಕ್ಕೆ ಅವರಿಬ್ಬರೂ ಮುಂದಾದರು. ಹೀಗೆ ರೂಪಿಸಿಕೊಂಡ ತತ್ವ–ಸಿದ್ಧಾಂತಗಳಲ್ಲಿ ಕಂಡುಬರುವ ಅವರ ಸ್ವಂತಿಕೆ ಮತ್ತು ವೈಯಕ್ತಿಕತೆ ಇಲ್ಲಿ ಮುಖ್ಯವೆನಿಸುವುದಿಲ್ಲ; ಅಲ್ಲದೆ ಆ ಸ್ವಂತಿಕೆ ಮತ್ತು ವೈಯಕ್ತಿಕತೆಗಳೇ ಆಯಾ ವ್ಯಕ್ತಿಗಳ ಹಾಗೂ ಸಿದ್ಧಾಂತಗಳ ಮಾನದಂಡಗಳೂ ಎನಿಸಬೇಕಾಗಿಲ್ಲ. ಅಂದರೆ ಗಾಂಧಿಯವರ 'ಸತ್ಯಾಗ್ರಹ'ದಂಥ ತತ್ವಗಳನ್ನು ವಿಶ್ಲೇಷಣೆಗೆ ಒಳಪಡಿಸಿ, ಅವುಗಳ ಒಳಸಾಮಾಗ್ರಿಗಳೆಲ್ಲ ಪರಂಪರೆಯಿಂದಲೋ ಅಥವಾ ಬೇರೆ ಮೂಲಗಳಿಂದಲೋ ಆಮದು ಮಾಡಿಕೊಂಡವುಗಳು ಎಂಬ ಕಾರಣಕ್ಕಾಗಿ ಆ ತತ್ವಗಳಲ್ಲಿಯ ಗಾಂಧಿಯವರ ಸ್ವಂತಿಕೆ ಸುಳ್ಳಾಗುವುದಿಲ್ಲ. ಹಳೆಯ ಅಥವಾ ಆಮದುಮಾಡಿಕೊಂಡ ದ್ರವ್ಯ–ಸಾಮಗ್ರಿಗಳ ಸಮರ್ಪಕ ಸಂಯೋಜನೆಯಿಂದ ಒಂದು ಘನವಾದ ಉದ್ದೇಶಕ್ಕೆ ಒಂದು ಹೊಸ ದಿವ್ಯಾಸ್ತ್ರವನ್ನಾಗಿ ರೂಪಿಸಿಕೊಳ್ಳುವುದು ಮಹತ್ವದ್ದಾಗುತ್ತದೆ. ಮೇಲಾಗಿ ಆ ಅಸ್ತ್ರವನ್ನು ಪ್ರಯೋಗಿಸುವ ಸಾಮರ್ಥ್ಯ ಮತ್ತು ನೈಪುಣ್ಯವಂತೂ ಇನ್ನೂ ಹೆಚ್ಚು ಮಹತ್ವದ್ದಾಗುತ್ತದೆ. ಇನ್ನೂ ವಿಶೇಷವೆಂದರೆ ಅಂಥ ಅಸ್ತ್ರಗಳ ನಿರ್ಮಾಣ ಸಾಮಗ್ರಿಗಳ ಆಯ್ಕೆಯ ಮತ್ತು ಅವುಗಳ ಪರಿಮಿತಿ–ಪ್ರಮಾಣಗಳ ಔಚಿತ್ಯದಲ್ಲಿ ತೋರುವ ಪರಿಣತಿ. ಅದರ ಹಿಂದಿನ ಶ್ರದ್ಧೆ–ಸಾಧನೆ

ಇನ್ನೂ ಹೆಚ್ಚು ಗಮನಾರ್ಹವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ, ಬಸವ ಹಾಗೂ ಗಾಂಧಿ–ಇಬ್ಬರೂ ಇಟ್ಟುಕೊಂಡ ಆದರ್ಶ ಸಮಾಜನಿರ್ಮಾಣದ ಗುರಿ, ಆ ಗುರಿಗಾಗಿ ನಡೆಸಿದ ಕಳಕಳಿಯ ಹೋರಾಟ, ಆ ಹೋರಾಟಕ್ಕಾಗಿ ಬಳಸಿಕೊಂಡ ಅಸ್ತ್ರ, ಆ ಅಸ್ತ್ರದ ಪ್ರಯೋಗಕ್ಕಾಗಿ ಅನುಸರಿಸಿದ ರೀತಿ ಅಥವಾ ಮಾರ್ಗ ಮತ್ತು ಅವೆಲ್ಲವುಗಳ ಒಟ್ಟು ಪ್ರತಿಫಲಗಳಲ್ಲಿ ಕಂಡುಬರುವ ಸಾಮ್ಯ ವಿಸ್ಮಯಕಾರಿಯಾದ ಒಂದು ಸಾಂಸ್ಕೃತಿಕ ದಾಖಲೆ ಎನಿಸುತ್ತದೆ. ನಿಶ್ಚೇಷ್ಟಿತವಾದ ಮತ್ತು ಅಪಮೌಲ್ಯಗೊಂಡ ಒಂದು ಶ್ರೀಮಂತ ಸಂಸ್ಕೃತಿಯ ಮೌಲ್ಯಗಳನ್ನು ಶೋಧಿಸಿ, ಅವುಗಳನ್ನು ಪರಿಷ್ಕರಿಸಿ, ಸಚೇತನಗೊಳಿಸಿ ಚಲಾವಣೆಗೆ ತರುವ ಮೂಲಕ ಪ್ರಸ್ತುತಗೊಳಿಸಿಕೊಂಡದ್ದು, ಆ ಮೂಲಕವಾಗಿ ಅಭೂತಪೂರ್ವವಾದದ್ದನ್ನು, ಮಾನವ ಇತಿಹಾಸದಲ್ಲಿಯೇ ಆಶ್ಚರ್ಯಕರವಾದದ್ದನ್ನು ಆವಿಷ್ಕರಿಸಿಕೊಟ್ಟದ್ದು–ಈ ಪ್ರವಾದಿದ್ವಯರ ಶ್ರೇಯಸ್ಸು; ಒಂದು ಅರ್ಥದಲ್ಲಿ ಅದು ಭಾರತೀಯ ಸಂಸ್ಕೃತಿಯ ಪರಂಪರೆಗೆ ಸಲ್ಲಬೇಕಾದ ಶ್ರೇಯಸ್ಸೂ ಹೌದು. ಇವರಿಬ್ಬರ ತತ್ತ್ವ ಹೋರಾಟಗಳಿಗೆ ಭಾರತೀಯ ದಾರ್ಶನಿಕ ಪರಂಪರೆಯ ಗಟ್ಟಿ ನೆಲಗಟ್ಟು ಇದ್ದುದರಿಂದಲೇ ಅವು ಕಾಲ–ದೇಶಗಳ ಪರಿಧಿಯನ್ನು ಮೀರಿ ಸಂವಾದಿಗಳಾಗಿ ಕಾಣಿಸಿಕೊಳ್ಳುತ್ತವೆ. ಗಾಂಧಿಯವರು ತಮ್ಮ ಸತ್ಯಾಗ್ರಹ, ಸರ್ವೋದಯ ಸಿದ್ಧಾಂತಗಳಿಗೆ ತಮ್ಮ ಸಮಕಾಲೀನ ಪಾಶ್ಚಾತ್ಯ ತತ್ವಜ್ಞಾನಿಗಳ, ಚಿಂತನಶೀಲರ ಆಲೋಚನೆಗಳಿಂದಲೂ ಪ್ರೇರಣೆ–ಪ್ರಚೋದನೆಗಳನ್ನು ಪಡೆದು ಕೊಂಡಿದ್ದರೂ ಅವರ ವ್ಯಕ್ತಿತ್ವದ ಕೇಂದ್ರಸತ್ವ ಹಾಗೂ ಅವರ ಸಿದ್ಧಾಂತಗಳ ಜೀವದ್ರವ್ಯಗಳಲ್ಲಿ ಬಸವಣ್ಣ ಹಾಗೂ ಅವರ ಸಿದ್ಧಾಂತದ ಹೋಲಿಕೆ ಕಂಡುಬರುವಷ್ಟು ಉಳಿದವರಲ್ಲಿ ಕಂಡು ಬರುವುದಿಲ್ಲ. ಸಹಜವಾಗಿಯೇ ಬೇರೂರಿದ್ದ ಭಾರತೀಯ ದಾರ್ಶನಿಕತೆಯೇ ಎನ್ನಬೇಕು.

ಅಂದಂದಿನ ಶೋಷಣೆ ಮತ್ತು ಸಮಸ್ಯೆಗಳಿಗೆ ಉತ್ತರವಾಗಿ ಉದ್ಭವಿಸಿದ ಈ ಎರಡೂ ಸತ್ವಗಳ ಹೋರಾಟದ ಅಂತಿಮ ಗುರಿ ಒಂದೇ ಎನಿಸಿದರೂ ಆ ಹೋರಾಟಕ್ಕೆ ಅವರಿಬ್ಬರೂ ಆಯ್ಕೆ ಮಾಡಿಕೊಂಡ ಕ್ಷೇತ್ರ ಅನಿವಾರ್ಯವಾಗಿಯೇ ಬೇರೆ ಬೇರೆಯಾಗಿದ್ದವು. ಕಾರಣ, ಆಯಾ ಸಾಮಾಜಿಕ ಶೋಷಣೆ ಹಾಗೂ ಸಮಸ್ಯೆಗಳೇ ಬೇರೆ ಬೇರೆ ಮೂಲದವುಗಳಾಗಿದ್ದವು. ಅಂದರೆ ಬಸವಣ್ಣನವರ ಕಾಲದ ಶೋಷಣೆ ಧರ್ಮಮೂಲವಾದ ಶೋಷಣೆಯಾಗಿದ್ದರೆ, ಗಾಂಧಿಯವರ ಕಾಲದ್ದು ರಾಜಕೀಯ ಪ್ರೇರಿತ ಶೋಷಣೆಯಾಗಿತ್ತು. ವಸಾಹತುಶಾಹಿತ್ವ, ಸಾಮ್ರಾಜ್ಯಶಾಹಿತ್ವ, ಬಂಡವಾಳಶಾಹಿತ್ವ, ಔದ್ಯೋಗಿಕರಣ ಇತ್ಯಾದಿಗಳಿಂದಾಗಿ ಗಾಂಧಿಯವರ ಕಾಲದ ಪರಿಸರ ಬಸವಯುಗದ ಪರಿಸರಕ್ಕಿಂತ ಕಲ್ಪನೆಗೆ ಮೀರಿ ಬೇರೆಯಾಗಿತ್ತಲ್ಲದೆ ಎಲ್ಲ ಸಮಸ್ಯೆಗಳ ಕೇಂದ್ರನೆಲೆ ರಾಜಕೀಯವಾಗಿತ್ತು. ಆದರೆ ಬಸವಯುಗದಲ್ಲಿ ಕಲುಷಿತಗೊಂಡ ಧಾರ್ಮಿಕಪರಿಸರ, ಪುರೋಹಿತಶಾಹಿತ್ವ ಅಂದಿನ ಶೋಷಣೆಯ ಎಲ್ಲ ನೆಲೆಗಳಿಗೂ ನೇರ ಜವಾಬ್ದಾರಿಯಾಗಿತ್ತು. ಬಸವಣ್ಣನವರ ಕಾಲದ ರಾಜಕೀಯ ಅದು ಆಂತರಿಕವಾಗಿದ್ದು, ವಸಾಹತುಶಾಹಿತ್ವದಿಂದ ಕೂಡಿರಲಿಲ್ಲ. ಆದ್ದರಿಂದ ಅದು ಅಂಥ ತಲೆಕೆಡಿಸಿಕೊಳ್ಳಲುವ ಸಮಸ್ಯೆಯೂ ಆಗಿರಲಿಲ್ಲ. ಅದರಂತೆ ಆಧುನಿಕಯುಗದ ಗಾಂಧಿಯವರಿಗೆ ಸಾಮಾಜಿಕ ಹಾಗೂ ಜನಾಂಗಿಕ ಸಂಕೀರ್ಣತೆಯಿಂದಾಗಿ ಧರ್ಮ ಅತಿಮುಖ್ಯವಾದ ಗಂಭೀರ ಸಮಸ್ಯೆಯಾಗಿರಲಿಲ್ಲ. ಬಸವಣ್ಣನವರ ಕಾಲದ ಅನಾಹುತಗಳಿಗೆ ರಾಜಕೀಯ ಪೂರಕಶಕ್ತಿ ಯಾಗಿದ್ದರೆ, ಗಾಂಧೀಜಿಯವರ ಕಾಲದ ಅನಾಹುತಗಳಿಗೆ ಧರ್ಮಪ್ರಚೋದಕಶಕ್ತಿಯಾಗಿತ್ತು.

ಒಟ್ಟಿನಲ್ಲಿ ಬಸವಣ್ಣನವರ ಕಾಲದ ಶೋಷಣೆ ಧರ್ಮಮೂಲವಾದ್ದರಿಂದ ಅನಿವಾರ್ಯವಾಗಿ ಅವರ ಹೋರಾಟವೂ ಧರ್ಮಮೂಲ ಹೋರಾಟವಾಯಿತು; ಗಾಂಧಿಯುಗದ ಶೋಷಣೆ ರಾಜಕೀಯ ಮೂಲದ್ದಾದ್ದರಿಂದ ಅವರ ಹೋರಾಟ ರಾಜಕೀಯ ಮೂಲದ್ದಾಗ ಬೇಕಾಯಿತು.

ಹೀಗೆ ಹೋರಾಟದ ಕ್ಷೇತ್ರಗಳು ಬೇರೆಯಾದರೂ ಅವರಿಬ್ಬರ ವ್ಯಕ್ತಿತ್ವದ, ಬದುಕಿನ ಜೀವಧಾತು ಆಧ್ಯಾತ್ಮವಾಗಿತ್ತು. ಅಂತಾಗಿ ಅವರಿಬ್ಬರೂ ವ್ಯಷ್ಟಿ ಹಾಗೂ ಸಮಷ್ಟಿಯ ಬದುಕಿನ ಅಸ್ವಸ್ಥತೆಯನ್ನು ಆಧ್ಯಾತ್ಮಿಕ ನೆಲೆಯಲ್ಲಿ ಗುರುತಿಸಿ, ಅದರ ಪರಿಹಾರವನ್ನು ಆಧ್ಯಾತ್ಮಿಕ ನೆಲೆಯಲ್ಲಿಯೇ ಕಂಡುಕೊಂಡರು. ಆಧ್ಯಾತ್ಮಿಕ ನೆಲೆಯಲ್ಲಿಯೇ ವ್ಯಷ್ಟಿ–ಸಮಷ್ಟಿಗಳ, ಲೌಕಿಕ–ಆಮುಷ್ಮಿಕಗಳ ಸಾಮರಸ್ಯವನ್ನು ಸಾಧಿಸಿಕೊಡುತ್ತಲೇ ಒಟ್ಟು ಬದುಕಿನ, ಬದುಕಿನ ಸೌಂದರ್ಯದ ಅಖಂಡತೆಯನ್ನು ಸಾಕ್ಷಾತ್ಕರಿಸಿಕೊಟ್ಟರು. ವಸ್ತುಸೌಂದರ್ಯದ ಮೂಲವನ್ನು ಆತ್ಮಸೌಂದರ್ಯದ ನೆಲೆಯಲ್ಲಿ ಗುರುತಿಸಿಕೊಟ್ಟರು. ಭೌತಿಕ–ಆಧ್ಯಾತ್ಮಿಕತೆಗಳ ಸಾಮರಸ್ಯದಿಂದ ಎರಡರ ಸಾರ್ಥಕತೆಯನ್ನು ಹೆಚ್ಚಿಸಿ ಒಟ್ಟು ಮಾನವ ಬದುಕಿನ ಪರಮಸಾರ್ಥಕತೆಯನ್ನು ಸಾಧಿಸಿಕೊಟ್ಟರು. ಅಂತೆಯೇ ಗಾಂಧಿಯವರಿಗೆ ಧರ್ಮ ಹಾಗೂ ರಾಜಕೀಯ ಬೇರೆಬೇರೆಯಾಗಿ ಕಾಣಲೇ ಇಲ್ಲ. "ಆಧ್ಯಾತ್ಮಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲ ಎನ್ನುವವರಿಗೆ ಆಧ್ಯಾತ್ಮ ವೆಂದರೇನೆಂಬುದೇ ತಿಳಿಯದು ಎಂದು ಅಳುಕಿಲ್ಲದೇ ವಿನೀತವಾಗಿ ಹೇಳುತ್ತೇನೆ"[೧] ಎಂದು ಸ್ಪಷ್ಟಪಡಿಸಿದ ಅವರೇ ಇನ್ನೊಂದೆಡೆಯಲ್ಲಿ "ನಾನು ಭೇಟಿಮಾಡಿದ ಧಾರ್ಮಿಕ ವ್ಯಕ್ತಿಗಳಲ್ಲಿ ಹೆಚ್ಚು ಮಂದಿ ಪ್ರಚ್ಛನ್ನ ರಾಜಕಾರಣಿಗಳು. ಆದರೆ ರಾಜಕಾರಣದ ವೇಷದಲ್ಲಿರುವ ನಾನು ಹೃದಯದಲ್ಲಿ ಧಾರ್ಮಿಕನಾಗಿದ್ದೇನೆ."[೨] ಎಂದು ತಮ್ಮ ನಿಲುವನ್ನು ಮಾರ್ಮಿಕವಾಗಿ ಸಮರ್ಥಿಸಿಕೊಂಡಿರುವುದೂ ಉಂಟು. "ರಾಜಕೀಯ ಸಂಪರ್ಕವಿಲ್ಲದೆ ಸಮಾಜಸೇವೆಯಂಥ ಕೆಲಸ ನಡೆಸುವದು ಸಾಧ್ಯವಿಲ್ಲ; ಆದ್ದರಿಂದ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸುವದು ಅನಿವಾರ್ಯವಾಯಿತು, ಮತ್ತು ನೈತಿಕದೃಷ್ಟಿಯಿಂದ ರಾಜಕೀಯ ಕಾರ್ಯಪರಿ ಗಣಿತ ವಾಗಬೇಕು"[೩] ಎಂಬ ಅವರ ಹೇಳಿಕೆಯೂ ಈ ಸಂದರ್ಭದಲ್ಲಿ ಗಮನಾರ್ಹವಾದದ್ದು. ಒಟ್ಟಿನಲ್ಲಿ ಸಾಮಾಜಿಕ ಪರಿವರ್ತನೆಯನ್ನೇ ಮುಖ್ಯಗುರಿಯನ್ನಾಗಿಟ್ಟುಕೊಂಡು ರಾಜಕೀಯಕ್ಕೆ ಆಧ್ಯಾತ್ಮಿಕ ತೇಜಸ್ಸನ್ನು ತಂದುಕೊಟ್ಟದ್ದು, ಆ ಮೂಲಕ ಇತಿಹಾಸವೇ ಕಂಡರಿಯದ ಸೋಜಿಗವನ್ನು ಸಾಧಿಸಿ ತೋರಿಸಿದ ಶ್ರೇಯಸ್ಸು ಗಾಂಧಿಯವರದು.

ಹೀಗೆ ಬಸವ ಮತ್ತು ಗಾಂಧಿ–ಇಬ್ಬರದೂ ಧರ್ಮಮೂಲಪ್ರವೃತ್ತಿಯೇ ಆದರೂ ಸನಾತನ ಹಿಂದೂಧರ್ಮವನ್ನು ಕುರಿತ–ಈ ಸಂದರ್ಭದಲ್ಲಿ ಅದನ್ನು ವೈದಿಕಧರ್ಮವೆಂದು ಕರೆದರೂ ಸರಿಯೆ–ಅವರಿಬ್ಬರ ದೃಷ್ಟಿ–ಧೋರಣೆಯಲ್ಲಿ ತುಂಬ ವ್ಯತ್ಯಾಸವಿರುವುದನ್ನು ಮರೆಯುವಂತಿಲ್ಲ.

ಧಾರ್ಮಿಕವಾಗಿ ಅತ್ಯಂತ ಸಂಕೀರ್ಣ ಸಂದರ್ಭದಲ್ಲಿದ್ದು ರಾಜಕೀಯ ಹೋರಾಟಕ್ಕೆ ತೊಡಗಿದ್ದರೂ ಗಾಂಧಿಯವರು ತಮ್ಮನ್ನು "ಸನಾತನ ಹಿಂದೂ" 'ಸಂಪ್ರದಾಯಶರಣ ಹಿಂದೂಮತಸ್ಥ"[೪] ಎಂದೂ ಕರೆದುಕೊಂಡಿರುವದಲ್ಲದೆ "ಹಿಂದೂ ಧರ್ಮದ ಮೂಲಕ ಅನಂದವನ್ನು, ಶಾಂತಿಯನ್ನು ಕಾಣುವ ಹೊರತು ಈ ಜಗತ್ತಿನಲ್ಲಿ ನನಗೆ ಬೇರಾವ ಆಸೆಯೂ ಇಲ್ಲ",[೫] "ನನ್ನ ಹಿಂದೂನಿಷ್ಠೆ ಅತ್ಯಂತ ವಿಶಾಲಸಹನೆಯಿಂದ ಕೂಡಿದೆ", "ಹಿಂದೂಧರ್ಮ ನನಗೆ ಗೊತ್ತಿರುವ ಧರ್ಮಗಳಲ್ಲೆಲ್ಲ ಅತ್ಯಂತ ಸಹಿಷ್ಣುತೆಯಿಂದ ಕೂಡಿದೆ".[೬] ಎಂದು

ಮುಕ್ತಕಂಠದಿಂದ ಘೋಷಿಸಿದ್ದಾರೆ; ಇಂಥ ಉತ್ಕಟತೆಯಿಂದಾಗಿಯೇ ಗಾಂಧಿ ತಮ್ಮ ಹೋರಾಟದ ಸಂದರ್ಭದಲ್ಲಿಯೇ, ಹಲವಾರು ಧೋರಣೆಗಳಲ್ಲಿಯೇ ದ್ವಂದ್ವವನ್ನು ಎದುರಿಸ ಬೇಕಾಯಿತೆಂಬುದನ್ನೂ ಮರೆಯುವಂತಿಲ್ಲ. ಒಂದು ಸಣ್ಣ ಉದಾಹರಣೆಯೆಂದು ಹೇಳುವುದಾದರೆ, ವರ್ಣಾಶ್ರಮವನ್ನು ಎತ್ತಿಹಿಡಿದ ಗಾಂಧಿಯವರು ಹರಿಜನರನ್ನು ಮಾನವೀಯ ಅನುಕಂಪದ ದೃಷ್ಟಿಯಿಂದ ಕಂಡರೇ ಹೊರತು ಅದ್ವೈತ ಅಥವಾ ಸಾಮರಸ್ಯ ದೃಷ್ಟಿಯಿಂದ ಕಾಣಲಿಲ್ಲ; ಹರಿಜನರೊಂದಿಗಿದ್ದ ಅವರ ಸಂಬಂಧ ಬಸವಣ್ಣನವರು ಇಟ್ಟುಕೊಂಡ ಸಂಬಂಧದಂತೆ ರಾಸಾಯನಿಕ ಸಂಬಂಧವಾಗಿರದೆ ಅದು ಭೌತಮಿಶ್ರಣದಂತೆ ಮಾತ್ರವಾಗಿತ್ತು. ಬೇರೆಬೇರೆ ಜಾತಿ–ಮತ–ಧರ್ಮಗಳಿಂದ ಕೂಡಿದ ರಾಜಕೀಯ ಹೋರಾಟಕ್ಕಿಳಿದ ಸಮುದಾಯದಲ್ಲಿ ಒಂದು ಮಿತಿಯಲ್ಲಿ ಭಾವೈಕ್ಯತೆಯನ್ನು ತರುವದು ಸಾಧ್ಯವಾಯಿತೇ ಹೊರತು ಸಾಮರಸ್ಯವನ್ನು ತರುವದು ಸಾಧ್ಯವಾಗಲಿಲ್ಲವೆಂದೇ ಹೇಳಬೇಕು. ಇದರಿಂದಾಗಿಯೇ ಗಾಂಧಿಯವರ ಸಿದ್ಧಾಂತ ಮತ್ತು ವಾದಗಳಲ್ಲಿ ಅವರ ಅನುಯಾಯಿ ಗಳಿಗೇ ಅಪನಂಬಿಕೆಯುಂಟಾಗುವಂತಾಯಿತು.

ಧರ್ಮಮೂಲ ಹೋರಾಟಕ್ಕಿಳಿದ ಬಸವಣ್ಣನವರು ಸಂಪೂರ್ಣ ದ್ವಂದ್ವಾತೀತರೆಂದೇ ಹೇಳಬೇಕಿಲ್ಲ. ಆದರೂ ತಮ್ಮ ಧಾರ್ಮಿಕಧೋರಣೆಗಳಲ್ಲಿ ಸ್ಪಷ್ಟ ಹಾಗೂ ಖಚಿತ ನಿಲುವನ್ನು ತಾಳಿದವರಾಗಿದ್ದರು; ಅವುಗಳ ಅನುಷ್ಠಾನದಲ್ಲಿ ಪ್ರಜ್ಞಾಪೂರ್ವಕವಾಗಿಯೇ ಅವರು ಹೆಚ್ಚಿನ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಿತ್ತು. ಬಸವಣ್ಣನವರು ಅಂದಿನ ಶೋಷಣೆಯ ಮೂಲವನ್ನು ಅಂದಿನ ವೈದಿಕಧರ್ಮದ ಅಪಮೌಲ್ಯಗಳಲ್ಲಿ, ಅದರ ಪುರೋಹಿತಶಾಹಿತ್ವದ ಪೋಷಣೆಯಲ್ಲಿ, ಅದರ ಒಟ್ಟು ವ್ಯವಸ್ಥೆಯಲ್ಲಿ ಕಂಡುಕೊಂಡವರಾಗಿದ್ದರು. ಆದ್ದರಿಂದ ಒಟ್ಟು ಧಾರ್ಮಿಕ ಪರಿಸರವನ್ನು ನಿಷ್ಠುರ ಶೋಧನೆಗೆ, ನಿರ್ದಾಕ್ಷಿಣ್ಯ ವಿಶ್ಲೇಷಣೆಗೆ ಒಳಪಡಿಸಬೇಕಾದದ್ದು, ಸನಾತನ ಕೆಲವು ಮೌಲ್ಯಗಳನ್ನೂ ಪರಿಷ್ಕರಣದೊಂದಿಗೆ ಬಳಸಿಕೊಳ್ಳಬೇಕಾದದ್ದು ಅನಿವಾರ್ಯ ವಾಗಿತ್ತು. ಅಂತೆಯೇ;

> **"ವೇದ ನಡನಡ ನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯ"**
> **"ವೇದಕ್ಕೆ ಒರೆಯ ಕಟ್ಟುವೆ,**
> **ಶಾಸ್ತ್ರಕ್ಕೆ ನಿಗಳವನ್ನಿಕ್ಕುವೆ**
> **ತರ್ಕದ ಬೆನ್ನಬಾರನೆತ್ತುವೆ**
> **ಆಗಮದ ಮೂಗ ಕೊಯ್ವೆ**
> **ನೋಡಯ್ಯ ಮಹಾದಾನಿ ಕೂಡಲಸಂಗಮದೇವ**
> **ಮಾದರ ಚೆನ್ನಯ್ಯನ ಮಗ ನಾನಯ್ಯ"**

ಎಂದು ಸಾತ್ವಿಕ ರೋಷವನ್ನು ಪ್ರದರ್ಶಿಸಬೇಕಾಯಿತು; ಇಂಥ ಸಂದರ್ಭದಲ್ಲಿ ಬಸವಣ್ಣನವರಿಗಿದ್ದ ಅಂದಿನ ವ್ಯವಸ್ಥೆಯ ಬಗೆಗಿನ ಅಸಮಾಧಾನ, ಅವರ ಆ ಬಿರುನುಡಿಗಳ ಹಿಂದಿನ ಕಳಕಳಿಯ ಅನನ್ಯತೆ ಇಲ್ಲಿ ಗಮನಾರ್ಹವಾದದ್ದು.

ಬಸವ ಹಾಗೂ ಗಾಂಧಿಯವರ ಕಾಲಕ್ಕಾಗಲೇ ಶೋಷಿತಜನಾಂಗದ ಜಾಗೃತ ಪ್ರಜ್ಞೆಯ ಪ್ರಖರತೆಯಿಂದ ಅದರ ಎದೆಯ ಆಳದ ಲಾವಾರಸ ಹೊರಹೊಮ್ಮಿದ ಪರಿಣಾಮವಾಗಿ ಆಗಲೆ ಒಂದು ಬಗೆಯ ಹೋರಾಟ ರೂಪಗೊಂಡದ್ದನ್ನು ಮರೆಯುವಂತಿಲ್ಲ. ಆದರೆ ಹಾಗೆ

ರೂಪಗೊಳ್ಳುತ್ತ ಬೆಳೆದು ಒಂದು ಹಂತವನ್ನು ತಲುಪಿದ್ದ ಹೋರಾಟದ ಪ್ರವಾಹವನ್ನು ಒಂದು ವ್ಯವಸ್ಥೆಯ ಚೌಕಟ್ಟಿಗೆ, ಸಂಯಮತೆಗೆ ಒಳಪಡಿಸಿ, ಅದಕ್ಕೊಂದು ಸೈದ್ಧಾಂತಿಕ ನೆಲೆಗಟ್ಟನ್ನೂ ಒದಗಿಸಿ ವಿಧ್ವಂಸಕಾರಿಯಾಗಬಹುದಾಗಿದ್ದ ಅದರ ಕ್ರಿಯಾಶೀಲತೆಯನ್ನು ಒಂದು ವಿಧಾಯಕ ಮತ್ತು ರಚನಾತ್ಮಕ ಗುರಿಯತ್ತ ಮುನ್ನಡೆಸಿದ್ದು, ಗಾಂಧಿ-ಬಸವರ ಶ್ರೇಯಸ್ಸು; ಅದರ ಮುಂಚೂಣಿಯನ್ನು ಹಿಡಿದು ಪ್ರಕ್ಷುಬ್ಧಗೊಂಡ ವಾತಾವರಣವನ್ನು ನಿಯಂತ್ರಿಸಿದುದೇ ಒಂದು ದೊಡ್ಡ ಸಾಹಸ; ಅಹಿಂಸೆಯ ಮಾರ್ಗವಾಗಿ ಸತ್ಯದ ಗುರಿಯತ್ತ ಅದನ್ನು ನಡೆಸಿ ದಡಗಾಣಿಸಿದುದೇ ಒಂದು ಮಹಾಪವಾಡ.

ಒಂದು ಘನವಾದ ಉದ್ದೇಶಕ್ಕಾಗಿ ಗಾಂಧಿ 'ಸತ್ಯಾಗ್ರಹ'ವೆಂಬ ಪರಿಣಾಮಕಾರಿಯಾದ ತತ್ವವನ್ನು ರೂಪಿಸಿಕೊಂಡು ಅದನ್ನು ಆತ್ಮಸಾಕ್ಷಿಯಾಗಿ ಅನುಸರಿಸಿದರು. ಅವರೇ ಹೇಳಿಕೊಂಡಂತೆ ಮತ್ತು ಅವರ ಅನುಯಾಯಿಗಳು, ವಿಮರ್ಶಕರು, ಅಂದಿನ ಚಿಂತನಶೀಲರೂ ಒಪ್ಪಿಕೊಂಡಂತೆ ಅದು ಅವರ ಸ್ವಂತ ದರ್ಶನವಾಗಿತ್ತು; ಅವರ ಸ್ವಂತದ್ದಾದ ಉಪನಿಷತ್ತಾಗಿತ್ತು. ಆದರೆ ಬಸವಣ್ಣನವರು ತಮ್ಮದೇ ಎಂದು ಹೇಳಿಕೊಳ್ಳದ, ಆದರೆ 'ಸತ್ಯಾಗ್ರಹ'ದ ಬಿಂಬಮೂಲ ವೆಂಬಂತೆಯೇ ಇದ್ದ ಮತ್ತು ಸಮಷ್ಟಿಪ್ರಜ್ಞೆಯ ಕ್ರಿಯಾಶೀಲತೆಯಿಂದ ರೂಪಗೊಂಡ 'ಶರಣಧರ್ಮ'ವನ್ನು ತಮ್ಮ ಹೋರಾಟಕ್ಕೆ ಲಿಂಗಸಾಕ್ಷಿಯಾಗಿ ಅನುಸರಿಸಿದರು.

ಈ 'ಸತ್ಯಾಗ್ರಹ'ವಾಗಲಿ, 'ಶರಣಧರ್ಮ'ವಾಗಲಿ ಇದ್ದಕ್ಕಿದ್ದಂತೆಯೇ ಧುತ್ತನೇ ಹುಟ್ಟಿಕೊಂಡ ಚಮತ್ಕಾರವಾಗಿರಲಿಲ್ಲ. ಆಗಲೇ ಹೇಳಿದಂತೆ ಅವು ಭಾರತೀಯ ದರ್ಶನಪರಂಪರೆಯ ಹಿನ್ನೆಲೆಯಲ್ಲಿ ಸುದೀರ್ಘಕಾಲದ ಪ್ರಯೋಗಶೀಲತೆಯ ಪರಿಣಾಮವಾಗಿ ಪ್ರಜ್ವಲಿಸಿದವುಗಳು. ಆದರೆ ಒಂದು, ವ್ಯಷ್ಟಿಯ ಅಂದರೆ ಗಾಂಧಿಯವರ ಅನುಭವ-ಚಿಂತನೆ-ಪ್ರಯೋಗಶೀಲತೆಯ ಪ್ರತಿಫಲನವಾದರೆ ಇನ್ನೊಂದು, ಸಮಷ್ಟಿಯ ಅಂದರೆ ಶರಣಸಮುದಾಯದ ಅನುಭವ-ಚಿಂತನೆ-ಪ್ರಯೋಗಗಳ ಪ್ರತಿಫಲನ. ಆದ್ದರಿಂದ ಒಂದರ ಆಗುಹೋಗುಗಳ ಜವಾಬ್ದಾರಿ ಮುಖ್ಯವಾಗಿ ಗಾಂಧಿಯವರದಾದರೆ ಇನ್ನೊಂದರ ಜವಾಬ್ದಾರಿ ಅಂದಿನ ಶರಣಪ್ರಭುತ್ವದ್ದಾಗುತ್ತದೆ; ಸಮಷ್ಟಿಶಕ್ತಿ ಪರಿಸರದ ಪಕ್ವತೆ ಒಂದರ ಸಾಫಲ್ಯದ ಪೂರಕಶಕ್ತಿಯಾದರೆ ವ್ಯಷ್ಟಿಶಕ್ತಿ ಅಥವಾ ಬಸವಶಕ್ತಿ ಅಂದಿನ ಶರಣರ ಆಂದೋಲನಕ್ಕೆ ಪೂರಕ ಮತ್ತು ಪೋಷಕ ಶಕ್ತಿಯಾಗಿ ಕಾಣಿಸಿಕೊಳ್ಳುತ್ತದೆ.

ಬಸವ-ಗಾಂಧಿ ತಮ್ಮ ಯುಗದ ಹಂಬಲಕ್ಕೆ, ಅದರ ಮನೋಧರ್ಮಕ್ಕೆ ಒಂದು ದಾರ್ಶನಿಕ-ಸೈದ್ಧಾಂತಿಕ ಧ್ವನಿಯಾಗಿ ಅಭಿವ್ಯಕ್ತಿಯನ್ನು ಒದಗಿಸಿದರೂ ಅವರಿಬ್ಬರ ರೀತಿ ಮತ್ತು ಮನೋಧರ್ಮದಲ್ಲಿಯ ವ್ಯತ್ಯಾಸ ಸ್ಪಷ್ಟವಾಗಿ ಗೋಚರಿಸುವಂತಹದು. ಬಸವಣ್ಣನವರದು ಮುಖ್ಯವಾಗಿ ಅಂದಿನ ಕಾಲದ ಶೋಷಿತ ಸಮುದಾಯದ ಒಡಲಾಳದ ಪ್ರಾತಿನಿಧಿಕ ಭಾಷೆ; ದಾರ್ಶನಿಕ ಹಾಗೂ ಪ್ರವಾದಿಯಾದ ಕವಿಯೊಬ್ಬನ ಎದೆಯ ಕುಲುಮೆಯಿಂದ ಹೊರಹೊಮ್ಮಿ ವಿನ್ಯಾಸಕ್ಕೆ ಒಳಪಟ್ಟ ಭಾಷೆ. ಆದರೆ ಬಸವಣ್ಣನವರಂತೆಯೇ ದಾರ್ಶನಿಕ ಹಾಗೂ ತೀವ್ರ ಸಂವೇದನಾಶೀಲನಾಗಿಯೂ ಗಾಂಧೀಜಿಯವರದು ನೇರವಾದ ಸರಳವಾದ, ಮೃದುವಾದ, ನಮ್ರ-ವಿನಮ್ರವಾದ ಭಾಷೆ; ಪ್ರಜ್ಞಾಪೂರ್ವಕವಾಗಿಯೇ ನಾಗರಿಕಪ್ರಜ್ಞೆಯಿಂದ ನಿಯಂತ್ರಿತವಾದ ಪರಿಷ್ಕೃತ ಭಾಷೆ. ಹಾಗೆಂದೇ ಬಸವಣ್ಣನವರು ಅಂದಿನ ಶರಣಸಮುದಾಯದಲ್ಲಿ ಒಬ್ಬರಾಗಿ, ಅದರ ಒಂದು ಅವಿಭಾಜ್ಯ ಘಟಕವಾಗಿ, ಅದರ ಪ್ರಾತಿನಿಧಿಕ ಸತ್ವವಾಗಿ ಕಾಣಿಸಿಕೊಂಡರೆ,

ಗಾಂಧಿಯವರು ತಮ್ಮ ಸಮಕಾಲೀನ ನೆರೆಹೊರೆಯವರಲ್ಲಿಯೇ, ತಮ್ಮ ಅನುಯಾಯಿಗಳಲ್ಲಿಯೇ ಪ್ರಜ್ಞಾಪೂರ್ವಕವಾಗಿ ಪ್ರತ್ಯೇಕವಾಗಿ ಕಾಣಿಸಿಕೊಳ್ಳುತ್ತಾರೆ. ಬಸವಣ್ಣನವರು ಒಬ್ಬ ದಾರ್ಶನಿಕರಾಗಿ, ತತ್ವಜ್ಞಾನಿಗಳಾಗಿ ಕ್ರಿಯಾಶೀಲರಾದಾಗ ಅವರ ಭಾಷೆ ತತ್ವಜಿಜ್ಞಾಸಕನ ಭಾಷೆಯಾಗುತ್ತದೆ; ಅದೇ ಅಂದಿನ ದೌರ್ಜನ್ಯ, ಹಿಂಸೆ, ಶೋಷಣೆ ಒಟ್ಟು ವ್ಯವಸ್ಥೆಯ ವಿರುದ್ಧ ಕ್ರಾಂತಿಪುರುಷರಾಗಿ ಹೋರಾಟಕ್ಕಿಳಿದಾಗ ಅವರ ಭಾಷೆ ಬೆಂಗುಡಿಗನ ಭಾಷೆಯಾಗಿ, ಗುಡುಗು ಸಿಡಿಲಾಗಿ ಕೇಳಿಬರುತ್ತದೆ. ಆದರೆ ಗಾಂಧಿಯವರ ಭಾಷೆಯಲ್ಲಿ ಎಂಥ ಸಂದರ್ಭದಲ್ಲೂ ಇಂಥ ಬಿರುಸುತನ ಕಾಣಿಸಿಕೊಳ್ಳುವುದು ಕಷ್ಟ. ಹೀಗಾಗಿ ಗಾಂಧಿಯವರ ಬರಹ ಹಿತಚಿಂತಕನೊಬ್ಬನ ತತ್ವೋಪದೇಶವನ್ನು, ಆತ್ಮಕಥೆಯನ್ನು ಕೇಳಿದ ಅನುಭವವನ್ನು ಒದಗಿಸಿದರೆ ಬಸವಣ್ಣನವರ ಸಾಹಿತ್ಯ–ಅದು ಒಟ್ಟು ಶರಣಸಾಹಿತ್ಯದ ಒಂದು ಪ್ರಾತಿನಿಧಿಕ ಸಾಹಿತ್ಯವೂ ಹೌದು–ಸಾಮಾಜಿಕ ಕಳಕಳಿಯುಳ್ಳ ಕ್ರಾಂತಿಕಾರ ಕವಿಯೊಬ್ಬನ ಪ್ರತಿಭೆಯಿಂದ ಹೊರಹೊಮ್ಮಿದ ಶಕ್ತಿಯುತವಾದ ಕಾವ್ಯಾನುಭವವನ್ನು ಒದಗಿಸುತ್ತದೆ. ಇದಕ್ಕೆ ಕಾರಣ ಒಂದು ಗದ್ಯವೆಂದಾಗಲಿ, ಇನ್ನೊಂದು ಪದ್ಯವೆಂದಾಗಲೀ ಅಲ್ಲ. ಅವರಿಬ್ಬರ ಮೂಲ ಮನೋಧರ್ಮ ಹಾಗೂ ಅವರು ನಡೆಸಿದ ಚಳವಳಿ–ಹೋರಾಟದ ನೆಲೆಯಲ್ಲಿಯೇ ಅದರ ಮೂಲಭೂತ ಕಾರಣವನ್ನು ಕಂಡುಕೊಳ್ಳಬಹುದಾಗಿದೆ.

ಧರ್ಮದ ಹೆಸರಿನಲ್ಲಿಯೇ ಆಗಲೊಲ್ಲದೇಕೆ ಶರಣರ ಜೀವನಮೌಲ್ಯಗಳು ಇಂದಿಗೂ ಜೀವಂತವಾಗಿ, ಹೆಚ್ಚು ಪ್ರಸ್ತುತವಾಗಿ ಉಳಿದುಕೊಂಡಿದ್ದರೂ ಆಧುನಿಕ ಯುಗದಲ್ಲಿ ಆ ಮೌಲ್ಯಗಳಿಗೆ ರಾಷ್ಟ್ರವ್ಯಾಪಿ ಪ್ರಚಾರವಾದರೂ ದಕ್ಕಲಿಲ್ಲ. ಅಂತೆಯೇ ಗಾಂಧಿಯವರು ನಡೆಸಿದ ಪ್ರಯೋಗ ಮತ್ತು ಹೋರಾಟಗಳ ಸಂದರ್ಭದಲ್ಲಿ ಅವರಿಗೆ ಶರಣರ ಅಂದೋಲನದಿಂದ, ಅದರ ತತ್ವ–ಸಿದ್ಧಾಂತಗಳಿಂದ ಹೆಚ್ಚಿನ ಪ್ರೇರಣೆ ಪ್ರಚೋದನೆ ಮತ್ತು ಮಾರ್ಗದರ್ಶನ ದೊರೆಯದೇಹೋಯಿತು; ಆದರೂ ಗಾಂಧಿಯವರ 'ಸತ್ಯಾಗ್ರಹ' ಹೋರಾಟ ಒಂದು ಹಂತಕ್ಕೆ ಬರುತ್ತಿದ್ದಂತೆಯೇ ಹರ್ಡೇಕರ ಮಂಜಪ್ಪನವರ ಹಾಗೂ ಪಾವಟೆ ಸಿದ್ದರಾಮಪ್ಪನವರ ಕಳಕಳಿಯ ಪ್ರಯತ್ನದಿಂದಾಗಿ ಬಸವಣ್ಣನವರ ವ್ಯಕ್ತಿತ್ವದ, ಅವರ ಆಂದೋಲನದ ಮತ್ತು ಅವರ ತತ್ವ–ಸಿದ್ಧಾಂತಗಳ ಪರಿಚಯ ಗಾಂಧಿಯವರಿಗಾಯಿತು. ಅದು ಗಾಂಧಿಯವರ ಮೇಲೆ ಆಶ್ಚರ್ಯಕರವಾದ ಪರಿಣಾಮವನ್ನು ಬೀರುವದರೊಂದಿಗೆ ಅಗಾದ ಸ್ಫೂರ್ತಿಯನ್ನೂ ಒದಗಿಸಿತು. ಆದರೆ ಬಸವಣ್ಣನವರ ವ್ಯಕ್ತಿತ್ವ ಹಾಗೂ ಆಂದೋಲನದ ಆಳ ಪರಿಚಯ ಮತ್ತು ಅವರ ತತ್ವ–ಸಿದ್ಧಾಂತಗಳ ಗಹನ ಅಧ್ಯಯನಕ್ಕೆ ಅಂದಿನ ರಾಜಕೀಯ ಹೋರಾಟದ ಒತ್ತಡ ಹಾಗೂ ಭಾಷಾ ಸಮಸ್ಯೆಯಿಂದಾಗಿ ಗಾಂಧಿಯವರಿಗೆ ಸಾಧ್ಯವಾಗಿರಲಿಲ್ಲ. ಒಂದುವೇಳೆ ಅದು ಸಾಧ್ಯವಾಗಿದ್ದರೆ ಗಾಂಧಿಯವರು ತಮ್ಮ 'ಸತ್ಯಾಗ್ರಹ'ದಂಥ ತತ್ವಗಳನ್ನು ಬಸವಸಿದ್ಧಾಂತಗಳ ನೆಲೆಯಲ್ಲಿ ಇನ್ನೂ ಪರಿಸ್ಕರಿಸಿಕೊಳ್ಳಬಹುದಿತ್ತೇನೊ ಎನಿಸುತ್ತದೆ.

ಗಾಂಧಿಯವರಿಗೆ ಬಸವಣ್ಣನವರ ನೇರ ಪರಿಚಯವಿರದಿದ್ದರೂ ಅವರಿಬ್ಬರ ಮನೋಧರ್ಮ, ತತ್ವ–ಸಿದ್ಧಾಂತ, ಗುರಿ–ಸಾಧನೆಗಳಲ್ಲಿ ಆಕಸ್ಮಿಕವೆನ್ನಬಹುದಾದರೂ ಆಶ್ಚರ್ಯಕರವಾದ, ಅತ್ಯಂತ ಸಹಜವೆನ್ನಬಹುದಾದ ಹೋಲಿಕೆ ಇರುವುದನ್ನು ಮರೆಯಲಾಗುವುದಿಲ್ಲ; ಅಷ್ಟು ಮಾತ್ರವಲ್ಲ ಗಾಂಧಿಯವರೇ ಹಲವು ಸಂದರ್ಭಗಳಲ್ಲಿ ಒಪ್ಪಿಕೊಂಡಿರುವಂತೆ ಅವರ ಮೇಲಾದ ಬಸವಣ್ಣನವರ ಪ್ರಭಾವವನ್ನು ಅಲ್ಲಗಳೆಯುವಂತಿಲ್ಲ.

ನಿದರ್ಶನವಾಗಿ ೧೯೨೪ರಲ್ಲಿ ಬೆಳಗಾವಿಯಲ್ಲಿ ಸೇರಿದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ ವೀರಶೈವ ಪರಿಷತ್ತನ್ನು ಸಂಘಟಿಸಿದ ಸಂದರ್ಭದಲ್ಲಿ ಹರ್ಡೇಕರ ಮಂಜಪ್ಪನವರು ಲಕ್ಷ್ಮಣರಾವ್ ಭಿಡೆ ಅವರಿಂದ ಹಿಂದಿ ಮತ್ತು ಮರಾಠಿ ಭಾಷೆಯಳಲ್ಲಿ 'ಸತ್ಯಾಗ್ರಹಿ ಬಸವೇಶ್ವರ' ಎಂಬ ಹೆಸರಿನಲ್ಲಿಯೇ ಚಿಕ್ಕ ಕೃತಿಯೊಂದನ್ನು ಪ್ರಕಟಿಸಿ ಗಾಂಧಿಯವರನ್ನು ಮೊದಲುಗೊಂಡು ಇತರ ಮಹತ್ವದ ರಾಷ್ಟ್ರೀಯ ಮುಖಂಡರಿಗೂ ಹಂಚಿದುದನ್ನು ಇಲ್ಲಿ ಸ್ಮರಿಸಬೇಕು. ಬಸವಣ್ಣನವರ ಬಗ್ಗೆ ಆಗತಾನೆ ಓದಿ–ಕೇಳಿ ತಿಳಿದುಕೊಂಡ ಗಾಂಧಿಯವರು ಅಂದಿನ ತಮ್ಮ ಭಾಷಣದಲ್ಲಿ "ನಾನು ಬಸವಣ್ಣನವರ ತತ್ವಗಳಲ್ಲಿ ಒಂಭತ್ತನ್ನು ಮಾತ್ರ ಈಗ ಆಚರಿಸಲಿಕ್ಕೆ ಆರಿಸಿಕೊಂಡಿದ್ದೇನೆ; ಅವುಗಳನ್ನೇ ಈಗ ನಾನು ಕಾರ್ಯರೂಪಕ್ಕೆ ತರುತ್ತಲಿದ್ದೇನೆ."[೭] ಎಂದು ಪ್ರಾಂಜಲಮನಸ್ಸಿನಿಂದ ಹೇಳಿದ್ದು, ಈ ಸಂದರ್ಭದಲ್ಲಿ ಅತ್ಯಂತ ಗಮನಾರ್ಹ; ಅದರೊಂದಿಗೆ ಉಳಿದ ಸಭಿಕರಲ್ಲಿ ಕೆಲವರು "ಭಾರತದ ಸ್ವಾತಂತ್ರ್ಯಕ್ಕಾಗಿ ಮಹಾತ್ಮಾಜಿಯವರು ಯಾವ ತತ್ವವನ್ನು ಅಂಗೀಕರಿಸಿರುವರೊ ಆ ತತ್ವಗಳ ಜನಕರಾದ ಬಸವಣ್ಣನವರ ಅನುಯಾಯಿಗಳೇ ಈ ಕರ್ನಾಟಕದಲ್ಲಿ ತುಂಬಿರುವಂತೆ ಕಾಣುತ್ತದೆ"[೮] ಎಂದು ಹೇಳಿ, ಆ ಮೂಲಕ ಗಾಂಧೀಪ್ರಣೀತ ತತ್ವಗಳು ಬಸವತತ್ವಗಳ ಪ್ರತಿಧ್ವನಿ ಎಂದು ಮನಗಾಣಿಸಿಕೊಟ್ಟುದುದನ್ನೂ ಸ್ಮರಿಸಿಕೊಳ್ಳಬೇಕು; ಹಾಗೆಯೇ ಗಾಂಧಿಯವರ ರಾಷ್ಟ್ರೀಯ ಚಳವಳಿಯನ್ನು ಕರ್ನಾಟಕದ ಬ್ರಾಹ್ಮಣೇತರ ಜನಾಂಗ ಸಂಶಯ ಹಾಗೂ ಆತಂಕಗಳಿಂದ ಕಾಣುತ್ತಿದ್ದ ಸಂದರ್ಭದಲ್ಲಿ ಹರ್ಡೇಕರ ಮಂಜಪ್ಪನಂಥವರು, ರಾಷ್ಟ್ರೀಯ ಚಳವಳಿಯ ಸ್ವರೂಪ, ಸತ್ಯಾಗ್ರಹ ಸಿದ್ಧಾಂತಗಳು, ಶರಣರ ಆಂದೋಲನ ಹಾಗೂ ಸಿದ್ಧಾಂತಗಳ ಆಂತರಿಕ ಸಂಬಂಧವನ್ನು ತೋರಿಸಿಕೊಡುವ ಮೂಲಕ ಕರ್ನಾಟಕದಲ್ಲಿ ರಾಷ್ಟ್ರೀಯ ಚಳವಳಿಗೆ ಉತ್ತೇಜನವನ್ನು ತಂದುಕೊಟ್ಟಿದ್ದೂ ಅಷ್ಟೇ ಸ್ಮರಣಾರ್ಹವಾಗಿದೆ.

ಇನ್ನೂ ಹೇಳಬೇಕೆಂದರೆ, ೧೯೩೩ರಲ್ಲಿ ಗಾಂಧಿಯವರು ಹಿಂಡಲಗಿ ಜೈಲಿನಲ್ಲಿದ್ದಾಗ ರಂಗನಾಥ ದಿವಾಕರ ಅವರು ರಚಿಸುತ್ತಿದ್ದ 'ವಚನಶಾಸ್ತ್ರ ರಹಸ್ಯ' ಗ್ರಂಥವನ್ನು ಕುರಿತೂ ತಿಳಿದುಕೊಂಡಿದ್ದರು; ಎಂ.ಪಿ. ಪಾಟೀಲರು ಬಸವಣ್ಣನವರ ಕೆಲವು ವಚನಗಳನ್ನು ಇಂಗ್ಲಿಷಿನಲ್ಲಿ ಅನುವಾದಿಸಿಯೂ ತೋರಿಸಿದ್ದರು; ಅಲ್ಲದೆ ಸ್ವತಃ ಗಾಂಧಿಯವರೇ ಕರ್ನಾಟಕ ಮುಂದಾಳುಗಳಾಗಿದ್ದ ಗಂಗಾಧರರಾಯರಿಗೆ "ಬಸವಣ್ಣನವರು ನಿಜವಾದ ಅಂಹಿಸಾವಾದಿಗಳು ಮತ್ತು ಸತ್ಯನಿಷ್ಠರು; ಅವರು ಮಾಡಿದ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣಾಕಾರ್ಯವು ಅಪೂರ್ವವಾಗಿದೆ. ಆದ್ದರಿಂದ ನೀವು ಅವರ ಚರಿತ್ರೆಯ ಮತ್ತು ಅವರ ಕಾರ್ಯದ ಪರಿಚಯ ಮಾಡಿಕೊಳ್ಳಿರಿ."[೯] ಎಂದು ಮೌಲಿಕ ಸಲಹೆಯನ್ನೂ ಇತ್ತಿದ್ದರು.

ಈ ಹಿನ್ನೆಲೆಯಲ್ಲಿ ಗಾಂಧಿಯವರ ಸತ್ಯಾಗ್ರಹದಂಥ ತತ್ವಗಳನ್ನು ಮತ್ತು ಶರಣತತ್ವಗಳನ್ನು ಮುಖಾಮುಖಿಯಾಗಿ ನಿಲ್ಲಿಸಿ ನೋಡಿದಾಗ ಅವೆಲ್ಲ ಒಂದೇ ಬೇರಿನ ಕುಡಿಗಳಾಗಿ, ಬಿಂಬಪ್ರತಿಬಿಂಬಗಳಾಗಿ ಕಾಣಿಸಿಕೊಂಡರೆ ಅಚ್ಚರಿಯಲ್ಲ. ಅವೆಲ್ಲ ಕಾಲಮಾನ ಪರಿಸರವನ್ನು ಮೀರಿ ಸಂವಾದಿಗಳಾಗಿ ಕಾಣಿಸಿಕೊಳ್ಳುವಂಥವುಗಳು. ಹೀಗಾಗಿ ವ್ಯಕ್ತಿ–ಸಮಾಜ, ರಾಷ್ಟ್ರ–ವಿಶ್ವಗಳ ಯೋಗಕ್ಷೇಮಕ್ಕೆ, ಉದ್ಧಾರಕ್ಕೆ ಸಂಬಂಧಿಸಿದ ಎಲ್ಲ ತತ್ವಗಳನ್ನು ಗರ್ಭೀಕರಿಸಿಕೊಂಡ ಸತ್ಯಾಗ್ರಹ ಮತ್ತು ಅದರ ಪ್ರಯೋಗ–ಅನುಷ್ಠಾನ ಶರಣತತ್ವ ಹಾಗೂ ಚಳವಳಿಯ ಮುಂದುವರಿಕೆಯಾಗಿ ಕಂಡರೆ ಆಶ್ಚರ್ಯವಿಲ್ಲ.

'ಸತ್ಯಾಗ್ರಹ'ವೆನ್ನುವುದು ಆಧುನಿಕ ಕಾಲದ ರಾಜಕೀಯ ಹೋರಾಟದ ವಿಶಿಷ್ಟ ಸಂದರ್ಭದಲ್ಲಿ ಅಂದರೆ ಗಾಂಧಿಯವರ ನೇತೃತ್ವದಲ್ಲಿ ದಕ್ಷಿಣ ಆಫ್ರಿಕಾದ ಭಾರತೀಯರೆಲ್ಲ ನಡೆಸಿದ ರಾಜಕೀಯ ಹೋರಾಟದ ಸಂದರ್ಭದಲ್ಲಿ ಆಕಸ್ಮಿಕವೆನ್ನುವಂತೆ ಅಸ್ಪಷ್ಟವಾಗಿ ಸುಳುಹುದೋರಿ, ಅನಂತರ ಉನ್ಮೀಲನಗೊಳ್ಳುತ್ತ, ಸ್ಪಷ್ಟವಾದ ಆಕಾರವನ್ನು ತಾಳುತ್ತ ಒಂದು ಖಚಿತ ಸಿದ್ಧಾಂತವಾಗಿ ರೂಪಗೊಂಡದ್ದು. ಹೀಗೆ ಒಂದು ಕಾಲದ ರಾಜಕೀಯ ಸಂದರ್ಭದಲ್ಲಿ ಕಾಣಿಸಿಕೊಂಡ ಒಂದು ಆಧುನಿಕ ಯುಗದ ಸಿದ್ಧಾಂತಕ್ಕೂ ಮತ್ತು ಒಂದು ಧಾರ್ಮಿಕ ನೆಲೆಯಲ್ಲಿ, ಅದು ಕೂಡ ನೂರಾರು ವರ್ಷಗಳ ಹಿಂದೆ ನಡೆದ ಆಂದೋಲನದ ಸಂದರ್ಭದಲ್ಲಿಯ ಸಿದ್ಧಾಂತಗಳಿಗೂ ಸಂಬಂಧವನ್ನು ಕಲ್ಪಿಸುವದು ಒಂದು ಯಾಂತ್ರಿಕ ಪ್ರಯತ್ನ, ಇಲ್ಲವೆ ಭ್ರಮೆಯನ್ನುವದಾದರೆ ಆಯಾ ಸಿದ್ಧಾಂತಗಳ ವ್ಯಾಪ್ತಿಯನ್ನು, ಅವುಗಳ ಆಂತರ್ಯವನ್ನು ಅರ್ಥಮಾಡಿಕೊಳ್ಳದೆ ಅವೆರಡಕ್ಕೂ ಮಾಡುವ ಕೆಟ್ಟ ಅಪಚಾರ.

'ಸತ್ಯಾಗ್ರಹ' ಎಂಬುದು ಗಾಂಧಿಯವರಿಂದ ಮಾನವ ಇತಿಹಾಸಕ್ಕೆ ಸಂದ ಒಂದು ಉಜ್ವಲವಾದ ಅಪೂರ್ವ ಕೊಡುಗೆ. ಸಾಮಾಜಿಕ, ಧಾರ್ಮಿಕ, ರಾಜಕೀಯ ಬದುಕಿನಲ್ಲಿಯ ಎಲ್ಲ ಅಂತರಗಳನ್ನೂ ಅಳಿಸಿಹಾಕಿ ಆತ್ಮಕಲ್ಯಾಣದಲ್ಲಿಯೇ ಲೋಕಕಲ್ಯಾಣವನ್ನು ಲೋಕ ಕಲ್ಯಾಣದಲ್ಲಿಯೇ ಆತ್ಮಕಲ್ಯಾಣವನ್ನು ಸಾಧಿಸುವ ದಿವ್ಯ ರಹಸ್ಯವನ್ನು ಸ್ಫೋಟಗೊಳಿಸುವ, ಆ ಮೂಲಕ ಪುರುಷಾರ್ಥಗಳಿಗೆ ಸಾಧಕವಾದ ಗಾಂಧೀಪ್ರಣೀತ ದಾರ್ಶನಿಕಸಿದ್ಧಾಂತ. 'ಸತ್ಯಾಗ್ರಹ'ದಲ್ಲಿಯ 'ಸತ್ಯ' ಎಂಬ ಪರಿಕಲ್ಪನೆಯಾಗಲಿ, ಅದು ಒಳಗೊಳ್ಳುವ ಅಹಿಂಸೆ. ಬ್ರಹ್ಮಚರ್ಯ, ನಿರ್ಭಯತೆ, ಆಸ್ತೇಯ, ಅಸ್ವಾಮ್ಯ, ತ್ಯಾಗ ಇತ್ಯಾದಿ ತತ್ವಗಳಿಗಾಗಲಿ ಭಾರತೀಯ ದಾರ್ಶನಿಕ ಸಂದರ್ಭದಲ್ಲಿ ಹೊಸದೇನೂ ಅಲ್ಲ; ಹಾಗೆ ನೋಡಿದರೆ ಅದು ಭಾರತೀಯ ದಾರ್ಶನಿಕ ಪರಂಪರೆಯಷ್ಟೇ ಪ್ರಾಚೀನವಾದದ್ದು. ಸತ್ಯಕಾಮ, ಸತ್ಯಧರ್ಮ, ಸತ್ಯಾನ್ವೇಷಿ, ಸತ್ಯಧೃತಿ, ಸತ್ಯವಂತ ಇತ್ಯಾದಿ ಶಬ್ದಗಳಂತೆ "ಸತ್ಯನ್ನಾಸ್ತಿ ಪರೋಧರ್ಮಃ" (ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ), 'ಸತ್ಯಮಾಯತನಮ್' (ಸತ್ಯವೇ ಆಶ್ರಯಸ್ಥಾನ), "ಅಸತೋಮಾ ಸದ್ಗಮಯ" "ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖತತ್ವಂ ಪೂಷನ್ ಅಪಾವೃಣು ಸತ್ಯಧರ್ಮಾಯ ದೃಷ್ಟಯೇ" (ಸತ್ಯದ ಮುಖವು ಚಿನ್ನದ ಮುಚ್ಚಳದಿಂದ ಮುಚ್ಚಲ್ಪಟ್ಟಿರುವದು; ಹೇ, ಸರ್ವಪೋಷಕನೆ ಸತ್ಯಧರ್ಮಕ್ಕಾಗಿ, ಸತ್ಯದ ದರ್ಶನಕ್ಕಾಗಿ ಆ ಮುಚ್ಚಳವನ್ನು ತೆಗೆ) ಎಂಬಂಥ ಉಕ್ತಿಗಳನ್ನು ನಮ್ಮ ದರ್ಶನಪರಂಪರೆಯ ಉದ್ದಕ್ಕೂ ಗುರುತಿಸಬಹುದು. ಆದರೆ ಈ ಸನಾತನಧರ್ಮಪರಂಪರೆಯ ಜೀವದ್ರವ್ಯವನ್ನು ಹರಳುಗೊಳಿಸಿ, ಅದನ್ನು 'ಸತ್ಯಾಗ್ರಹ' ಎಂಬ ವಿನೂತನ ಪರಿಕಲ್ಪನೆಯನ್ನಾಗಿ ಗುರುತಿಸಿ ಒಂದು ಅಸ್ತ್ರವನ್ನಾಗಿ ಒಂದು ಯುಗಧರ್ಮವನ್ನಾಗಿ ಆವಿಷ್ಕರಿಸಿಕೊಟ್ಟ ಶ್ರೇಯಸ್ಸು ಗಾಂಧಿಯವರದು. "ಯಾವ ನೂತನ ಸಿದ್ಧಾಂತಗಳನ್ನು ನಾನು ಮಂಡಿಸಿಲ್ಲ. ಅದರ ಬದಲು ಸಿದ್ಧಾಂತಗಳ ಪುನರ್ ನಿರೂಪಣೆಯ ಪ್ರಯತ್ನ ನನ್ನದು."[೧೦] "ನೂತನ ಸಿದ್ಧಾಂತದ ಮೂಲಪುರುಷ ನಾನಲ್ಲ. ಸತ್ಯ ಅಹಿಂಸೆಗಳು ಪರ್ವತದಂತೆ ಪುರಾತನ, ಅವೆರಡರಲ್ಲೂ ಪ್ರಯೋಗ ನಡೆಸುವದಷ್ಟೇ ನನ್ನ ಕೆಲಸ"[೧೧] ಎಂಬಂಥ ಅವರ ಹೇಳಿಕೆಗಳನ್ನು ಈ ಹಿನ್ನೆಲೆಯಲ್ಲಿ ಗ್ರಹಿಸಬೇಕು.

ಗಾಂಧಿಯವರ ಭಗವದ್ಭಕ್ತಿ ಹಾಗೂ ಅದ್ವೈತದರ್ಶನದ ಮೇಲಿನ ಅವರ ಅಚಲ ಶ್ರದ್ಧೆಯ ನೆಲೆಯಲ್ಲಿ 'ಸತ್ಯಾಗ್ರಹ' ಸಿದ್ಧಾಂತ ಮೂರ್ತಗೊಂಡದ್ದು. ಈ ಎರಡೂ ಶಕ್ತಿಗಳು ಅದಕ್ಕೆ

ಭಾವನಾತ್ಮಕ ಹಾಗೂ ವೈಜ್ಞಾನಿಕ ಸಮರ್ಥನೆಯನ್ನು ಒದಗಿಸಿವೆ. "ಅದ್ವೈತದಲ್ಲಿ ನನಗೆ ಶ್ರದ್ಧೆ ಇದೆ. ಜೀವ ಸಮಸ್ತದ ಅಖಂಡತೆಯಲ್ಲಿ ನನಗೆ ವಿಶ್ವಾಸವಿದೆ."[೧೨] "ಎಲ್ಲವೂ ದೇವಾಂಶಸಂಭೂತ, ಭಗವಂತನ ಅಖಂಡತೆಯನ್ನು ನಂಬುವುದರೊಂದಿಗೆ ಜನತೆಯ ಅಖಂಡತೆಯನ್ನೂ ನಂಬಬೇಕು."[೧೩] "ರಾಜಕೀಯ, ಧಾರ್ಮಿಕ, ಸಾಮಾಜಿಕ ಎಲ್ಲವೂ ಈಶ್ವರನ ಸಾಕ್ಷಾತ್ಕಾರದ ಪರಮೋದ್ದೇಶದಿಂದಲೇ ನಿಯಂತ್ರಿತವಾಗಬೇಕು.... ಈಶ್ವರ ಸೃಷ್ಟಿಯಲ್ಲಿ ಆತನನ್ನು ಕಂಡು ಅದರಲ್ಲಿಯೇ ಒಂದಾಗುವದು ಈಶ್ವರದರ್ಶನದ ಏಕೈಕ ಮಾರ್ಗ. ಸರ್ವರ ಸೇವೆಯೊಂದೇ ಇದಕ್ಕೆ ಸಾಧನ, ನಾನು ಸರ್ವದ ಒಂದು ಅಂಶ, ಇತರರನ್ನು ಬಿಟ್ಟು ನಾನೊಬ್ಬನೇ ಆತನನ್ನು ಪಡೆಯಲಾರೆ"[೧೪] ಎಂಬ ಅವರ ಮಾತುಗಳು ಇದಕ್ಕೆ ಸ್ಪಷ್ಟವಾದ ಸಮರ್ಥನೆಯನ್ನು ಒದಗಿಸುತ್ತವೆ.

'ಸತ್ಯಾಗ್ರಹ' ಎನ್ನುವದು ಸತ್ಯ ಮತ್ತು ಆಗ್ರಹ ಎಂಬ ಶಬ್ದಗಳ ಸಮಾಸದಿಂದ ನಿಷ್ಪನ್ನಗೊಂಡ ಒಂದುಪರಿಕಲ್ಪನೆಯೂ ಹೌದು: ಒಂದು ಪ್ರಕ್ರಿಯೆಯೂ ಹೌದು. ಇಲ್ಲಿ 'ಸತ್ಯ'ವೆಂಬುದು ದೇವರು. ಆತ್ಮದ ಮೂಲಸ್ವರೂಪ. ಪರಬ್ರಹ್ಮವೇ ಹೊರತು ಬೇರೆಯಲ್ಲ. ಅಹಿಂಸೆ–ಪ್ರೇಮ ಅದರ ಇನ್ನೊಂದು ರೂಪ; ನಿತ್ಯ–ಶಾಶ್ವತ, ನಿರ್ವಿಕಾರವೆಂಬುದು ಅದರ ಮೂಲಗುಣ. ಹಾಗಾಗಿ ಭಗವಂತನೇ ಪ್ರಾಣಶಕ್ತಿ, ಅವನೇ ಸತ್ಯ, ಜ್ಯೋತಿ ಎಂದು ನಂಬಿದ ಗಾಂಧಿಯವರ ಮೇರೆಗೆ 'ಸತ್ಯಾಗ್ರಹ' ಎನ್ನುವದು ಇಂಥ ಭಗವದ್ರೂಪಿ ಸತ್ಯದ ಸಾಕ್ಷಾತ್ಕಾರದ ಆಗ್ರಹ; ಸತ್ಯದ ಸಾಕ್ಷಾತ್ಕಾರಕ್ಕಾಗಿ ಮಾಡುವ ಆಗ್ರಹ. ಇಲ್ಲಿ ಆಗ್ರಹವೆಂದರೆ ಒತ್ತಾಯ ಬಲವಂತಿಕೆ, ಹಟ. ಚಲ, ಶ್ರದ್ಧೆ, ವಿಶ್ವಾಸ, ಸಾಮರ್ಥ್ಯ, ಶಕ್ತಿ ಎಂದು ಇತ್ಯಾದಿ ಅರ್ಥ. ಸತ್ಯಕ್ಕೆ, ಆತ್ಮಸಾಕ್ಷಿಗೆ ವಿರುದ್ಧವಾದದ್ದನ್ನು, ಪ್ರತಿಕೂಲವಾದದ್ದನ್ನು, ಅಪಚಾರವಾದದ್ದನ್ನು ಅಂದರೆ ಹಿಂಸೆ, ಕ್ರೌರ್ಯ, ದ್ವೇಷ, ದ್ವಂದ್ವ, ಮೋಹ, ಮಮತ್ವಾದಿ ಅಮಾನವೀಯ ಗುಣಗಳನ್ನು ಅಹಿಂಸೆ ಹಾಗೂ ಪ್ರೇಮದ ಮೂಲಕ ಎದುರಿಸಿ ವ್ಯಕ್ತಿ–ಸಮಾಜದಲ್ಲಿ ಪರಿವರ್ತನೆಯನ್ನು ತರುವದು. ಅದಕ್ಕಾಗಿ ಸರ್ವಾರ್ಪಣ ಭಾವದಿಂದ ಹೋರಾಡುವದು ಸತ್ಯಾಗ್ರಹ. ಜೀವಗುಣವನ್ನು ಆತ್ಮಗುಣವನ್ನಾಗಿ ಪರಿವರ್ತಿಸುವದು ಸತ್ಯಾಗ್ರಹವೇ ಹೊರತು ಕೇವಲ ರಾಜಕೀಯ ಪ್ರತಿಭಟನೆ, ರೋಷಭರಿತ ಅಸಮಾಧಾನದ ಹೋರಾಟವಲ್ಲ. ಒಟ್ಟಿನಲ್ಲಿ ವ್ಯಕ್ತಿಯ ಸಮಾಜದ, ಒಟ್ಟು ಲೋಕದ ಪರಿವರ್ತನೆಗಾಗಿ, ಉದ್ಧಾರಕ್ಕಾಗಿ ಆತ್ಮಸಾಕ್ಷಿಯಾಗಿ ಆತ್ಮಶಕ್ತಿಯಿಂದ ಅಹಿಂಸಾಮೂಲಕವಾಗಿ ತನ್ನನ್ನು ಸಮರ್ಪಿಸಿಕೊಳ್ಳುವದು, ಆ ಮೂಲಕವಾಗಿ ಆತ್ಮಸಾಕ್ಷಾತ್ಕಾರವನ್ನು ಪಡೆಯುವದು ಸತ್ಯಾಗ್ರಹ. ಅಂದರೆ ಅದುವೇ ಶರಣಧರ್ಮ. ಹಾಗೆ ತನ್ನನ್ನು ಆತ್ಮಸಾಕ್ಷಿಯಾಗಿ ಸಮರ್ಪಿಸಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯೂ ಸತ್ಯಾಗ್ರಹಿ, ಅವನೇ ಶರಣ.

ಬಸವತತ್ವ ಮತ್ತು ಗಾಂಧಿತತ್ವಗಳನ್ನೆರಡನ್ನೂ ಅವುಗಳ ಸ್ವರೂಪ ಆಶಯಗಳ ಹಿನ್ನೆಲೆಯಲ್ಲಿ ಪಥಕ್ಕರಿಸಿ ನೋಡಿದಾಗ, ಅದೆಷ್ಟೋ ಹಂತಗಳಲ್ಲಿ, ಅವೆರಡೂ ಸಮೀಕರಣಗೊಳ್ಳುವುದನ್ನು ಕಾಣಬಹುದಾಗಿದೆ; ಅಂಥ ಸಂದರ್ಭಗಳಲ್ಲಿ ಸತ್ಯಾಗ್ರಹ ಬೇರೆಯಲ್ಲ, ಶರಣಧರ್ಮ ಬೇರೆಯಲ್ಲ; ಶರಣ ಬೇರೆಯಲ್ಲ, ಸತ್ಯಾಗ್ರಹಿ ಬೇರೆಯಲ್ಲ ಎನಿಸಿಬಿಡುತ್ತದೆ. ಶಕ್ತಿವಿಶಿಷ್ಟಾದ್ವೈತದ ನೆಲೆಗಟ್ಟಿನ ಮೇಲೆ ಹೆಚ್ಚು ವೈಜ್ಞಾನಿಕವಾಗಿ ಪ್ರತಿಪಾದಿತವಾದ ಶರಣಧರ್ಮವೇ

ಅದ್ವೈತದರ್ಶನದ ನೆಲೆಯಲ್ಲಿ ಮೂರ್ತಗೊಂಡ ಗಾಂಧಿಪ್ರಣೀತ ಸತ್ಯಾಗ್ರಹದಲ್ಲಿ ಪ್ರತಿಬಿಂಬಿತವಾಗಿರುವದು ಕಂಡು ಬರುತ್ತದೆ.

ಶರಣಧರ್ಮ ಅಥವಾ ವೀರಶೈವದ ಮೇರೆಗೆ ಶಕ್ತಿವಿಶಿಷ್ಟವಾದ ಪರಬ್ರಹ್ಮ ಪ್ರಕಾಶವೇ ತನ್ನ ಲೀಲೆಗಾಗಿ ತಾನೇ ಲಿಂಗವಾಗಿ ಉಪಾಸ್ಯವಾದಂತೆ, ಅಂಗವಾಗಿ ಉಪಾಸಕವೂ ಆಯಿತು. ಆ ಅಂಗ–ಲಿಂಗಗಳೆರಡೂ ಶಕ್ತಿವಿಶಿಷ್ಟವಾದವುಗಳೆ, ಇನ್ನು 'ಪರಶಿವನಲ್ಲಿ ಅವಿನಾಭಾವ ಸಂಬಂಧದಿಂದಿರುವ ವಿಮರ್ಶನ ಪ್ರವೃತ್ತಿಯ ಪರಿಣಾಮವೇ ಜಗತ್ತು' ಅದು ಕೂಡ ಶಕ್ತಿವಿಶಿಷ್ಟವಾದದ್ದು. ಆದ್ದರಿಂದ ಶಕ್ತಿವಿಶಿಷ್ಟವಾದ ಜೀವಿಯು ತನ್ನ ಶಕ್ತಿಯನ್ನು ವಿಕಾಸಗೊಳಿಸಿಕೊಂಡು ಇತರ ಜೀವಿಗಳೊಡನೆ ಪಡೆಯುವ ಸಾಮರಸ್ಯದೊಂದಿಗೆ ಅಖಂಡ ಜೀವವಾಗಿ ಅಖಂಡ ಸ್ಥಲದಲ್ಲಿ ಸಾಮರಸ್ಯಗೊಳ್ಳುವದು ಮುಕ್ತಿ. ಇಲ್ಲಿ ವ್ಯಷ್ಟಿ–ಸಮಷ್ಟಿಗಳ ಶಕ್ತಿವಿಕಾಸದ ಮೂಲಕ ಪಡೆಯುವ ಸಾಮರಸ್ಯವೇ ಲಿಂಗಾಂಗಸಾಮರಸ್ಯ. ಈ ವ್ಯಷ್ಟಿ–ಸಮಷ್ಟಿಗಳ ಸಾಮರಸ್ಯಕ್ಕಾಗಿ ಶರಣನು ನಡೆಸುವ ಸಾಧನೆ ಮತ್ತು ಹೋರಾಟವೆ ಶರಣಧರ್ಮ, ಇನ್ನೊಂದು ಅರ್ಥದಲ್ಲಿ ಅದುವೇ ಸತ್ಯಾಗ್ರಹ. ಈ 'ಸತ್ಯಾಗ್ರಹಿ'ಯ ಏಕೋದಶ ವ್ರತಗಳನ್ನು ಶರಣಧರ್ಮದ ಷಟಸ್ಥಲ, ಅಷ್ಟಾವರಣಗಳ, ಅದಕ್ಕೂ ಹೆಚ್ಚಾಗಿ 'ಪಂಚಾಚಾರ'ದ ಪ್ರಕ್ರಿಯೆಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರವೆಂದು ಐದು ಪ್ರಮುಖ ಆಚರಣೆಗಳಿದ್ದು ಅವುಗಳಲ್ಲಿ ಲಿಂಗಧ್ಯಾನಾಧಿಗಳೇ ಪ್ರಮುಖವಾಗಿರುವ ಲಿಂಗಾಚಾರವು ವ್ಯಷ್ಟಿಯ ವಿಕಾಸಕ್ಕೆ ನೆರವಾಗುವಂತಹದು; ಅದರಂತೆ ಸಮಸ್ತ ಪ್ರಾಣಿಗಳಲ್ಲಿ ಪಾತ್ರಾಪಾತ್ರವ ತಿಳಿದು ಪರಹಿತಾರ್ಥಿಯಾಗುವದು ಮತ್ತು ಜೀವಿಗಳ ಉದ್ಧಾರ ಬಯಸುವದು ಸದಾಚಾರ; ಈ ಸದಾಚಾರವು ಸತ್ಯಶುದ್ಧ ಕಾಯಕವನ್ನೂ ಒಳಗೊಳ್ಳುವಂತಹದು.

ಇನ್ನು ಲಿಂಗಾಚಾರದಿಂದ ತಾನೊಬ್ಬನೇ ಶಿವಸ್ವರೂಪಿಯೆಂದು ಭಾವಿಸದೆ ಇತರ ಶಿವಭಕ್ತರನ್ನು ಶಿವಸ್ವರೂಪಿಗಳೆಂದು ತಿಳಿದು ಅವರೊಡನೆ ಅಭೇದಬುದ್ಧಿಯಿಂದ ವರ್ತಿಸುವದು, ಮುಂದುವರೆದು 'ಸರ್ವಂ ಶಿವಮಯಂ ಜಗತ್' ಎಂಬ ವಿಶ್ವವಿಶಾಲ ಮನೋಭಾವನೆಯನ್ನು ಬಳಸಿಕೊಳ್ಳುವದು ಮತ್ತು ಭಕ್ತಸಮಾಜಕ್ಕೆ ಅರ್ಥಪ್ರಾಣಾಭಿಮಾನವನ್ನು ಅರ್ಪಿಸುವದು ಶಿವಾಚಾರದ ಗುರಿ.

ಅಷ್ಟಾವರಣಗಳ ಮೇಲೆ ಅನ್ಯರಿಂದ ಕುಂದುನಿಂದೆಗಳು ಬಂದು ತಟ್ಟಿದಲ್ಲಿ ಗಣಸಮೂಹವನ್ನೊಡಗೂಡಿ ಸ್ಥಳವನ್ನು ತ್ಯಜಿಸುವದು, ಶಿವಧರ್ಮಕ್ಕಾಗಿ ಅಂದರೆ ಶರಣಧರ್ಮಕ್ಕಾಗಿ ಕಷ್ಟಕೋಟಲೆಗಳನ್ನು ಎದುರಿಸುವದು. ಆತ್ಮತ್ಯಾಗಕ್ಕೆ ಸಿದ್ಧನಾಗುವದು, ಪ್ರಾಣಾರ್ಪಣೆಯನ್ನು ಮಾಡುವದು ಗಣಾಚಾರದ ಗುಣ. ಅದರಂತೆ ಸಮಾಜಕ್ಕೆ ದೇಶಕ್ಕೆ, ವಿಶ್ವಕಲ್ಯಾಣಕ್ಕೆ ತನ್ನನ್ನು ಸಮರ್ಪಿಸಿಕೊಳ್ಳುವದು ಭೃತ್ಯಾಚಾರ.[೧೫]

ಹೀಗೆ ಒಟ್ಟಿನಲ್ಲಿ ವ್ಯಷ್ಟಿ–ಸಮಷ್ಟಿಯ ಭವಿತ್ವವನ್ನು ಕಳೆದು ಎಲ್ಲೆಡೆಯಲ್ಲೂ ಶಿವಭಕ್ತಿಯ ಶಕ್ತಿಯನ್ನು ಬೆಳಗುವದು ಶರಣಧರ್ಮದ ಮೂಲಭೂತ ಕಾಳಜಿ. ಭಕ್ತಿಯ ಅಂದರೆ ಶಕ್ತಿಯ ವಿಕಾಸವೆನ್ನುವುದೇ ಇನ್ನೊಂದು ಅರ್ಥದಲ್ಲಿ ಸತ್ಯಾಗ್ರಹ; ಭವಿತನವೇ ಇನ್ನೊಂದು ಅರ್ಥದಲ್ಲಿ ದುರಾಗ್ರಹ.

ಆಗಲೆ ಹೇಳಿದಂತೆ 'ಸತ್ಯಾಗ್ರಹ' ಎನ್ನುವುದು ಅಹಿಂಸಾಪೂರ್ವಕವಾದ ಅತ್ಯಂತ

ಸಾತ್ವಿಕವಾದ ಪ್ರತಿಭಟನೆ. ಅದರ ಉದ್ದೇಶ ಶೋಷಣೆಯ ನಿರ್ಮೂಲನವೇ ಹೊರತು ಶೋಷಕರ ನಿರ್ಮೂಲನೆಯಲ್ಲ. ಮುಖ್ಯವಾಗಿ ಅಲ್ಲಿ ನಡೆಯಬೇಕಾದದ್ದು ಹೃದಯ ಪರಿವರ್ತನೆ. ಅಂತೆಯೇ ಗಾಂಧಿಯವರು ತಮ್ಮ ಎಷ್ಟೋ ವಿರೋಧಿಗಳ ಮನಸ್ಸನ್ನು ಪರಿವರ್ತಿಸಿ ಒಲಿಸಿಕೊಂಡಂತೆ ಬಸವಣ್ಣನವರೂ ಭವಿಗಳನ್ನು ಭಕ್ತರನ್ನಾಗಿ ಪರಿವರ್ತಿಸಿರುವುದನ್ನು, ಮಹಿಳೆಯರೂ ಸೇರಿದಂತೆ ಅದೆಷ್ಟೋ ಜನ ತಮ್ಮ ಪೂರ್ವದ ದುಷ್ಕರ್ಮವನ್ನು ಬಿಟ್ಟು ಅನಾಚಾರವನ್ನು ತ್ಯಜಿಸಿ, ಅರಸೊತ್ತಿಗೆಯನ್ನು ಉಳಿದು ಶರಣರಾದ ಉದಾಹರಣೆಗಳಿಗೆ ಕೊರತೆ ಇಲ್ಲ. ಮಧುವರಸ ಶಿವಭಕ್ತನಾದದ್ದು, ಕಳ್ಳರು ಶರಣರಾದದ್ದು ಇತ್ಯಾದಿ ಸಂಗತಿಗಳನ್ನು ಉದಾಹರಣೆಗಾಗಿ ಸ್ಮರಿಸಬಹುದು.

ಅದರಂತೆ ಸತ್ಯಾಗ್ರಹದ ಮುಖ್ಯ ಮಾರ್ಗಗಳಾದ ಅಹಿಂಸಾತ್ಮಕ ಪ್ರತಿಭಟನೆ, ಕಷ್ಟಸಹಿಷ್ಣುತೆ, ಅಸಹಕಾರ, ಸವಿನಯ ಶಾಸನಭಂಗ ಮತ್ತು ದೇಶತ್ಯಾಗದಂಥ ಮಾರ್ಗಗಳನ್ನು ಅನುಸರಿಸಿದ ಉದಾಹರಣೆಗಳನ್ನು ಶರಣರಲ್ಲಿಯೇ ಸಾಕಷ್ಟು ಕಾಣಬಹುದು. ಹಾಗೆ ನೋಡಿದರೆ ವೀರಶೈವ ಪುರಾಣಗಳ ಪ್ರಮುಖ ಉದ್ದೇಶವೇ ಸತ್ಯಾಗ್ರಹದ ಅಂದರೆ ಶರಣಧರ್ಮದ ಮಾರ್ಗಗಳನ್ನು ಪ್ರತಿಬಿಂಬಿಸುವ, ಪ್ರತಿಪಾದಿಸುವ ಉದ್ದೇಶದಿಂದಲೇ ಕೂಡಿದಂತೆ ಕಂಡುಬರುತ್ತದೆ.

ಇವೆಲ್ಲವುಗಳೊಂದಿಗೆ ಇನ್ನೊಂದು ಉಲ್ಲೇಖನೀಯ ವಿಷಯವೆಂದರೆ, ಸಮಾಜದಲ್ಲಿಯ ಅನ್ಯಾಯಗಳನ್ನು ಎದುರಿಸುವುದಕ್ಕಾಗಿಯೇ ತಮ್ಮನ್ನು ಸಮರ್ಪಿಸಿಕೊಂಡ ಮುಳ್ಳಾವಿಗೆಯ ಕಾಯಕ ಅಯ್ಯಗಳ ಒಂದು ವರ್ಗವೇ ಶರಣರ ಕಾಲದಲ್ಲಿ ನಿರ್ಮಾಣಗೊಂಡಿದ್ದಂತೆ ತಿಳಿದುಬರುತ್ತದೆ. ಸಮಾಜಕ್ಕೆ ಯಾರಾದರೂ ಅನ್ಯಾಯವೆಸಗಿದರೆ ಈ ಅಯ್ಯಗಳು ಅವರ ಓಣಿ–ಕೇರಿಗಳಲ್ಲಿ ಇಲ್ಲವೆ ಅವರ ಮನೆಯ ಮುಂದೆ ಮುಳ್ಳಾವಿಗೆಯ ಮೇಲೆ ನಿಂತು ಉಪವಾಸವನ್ನು ಆಚರಿಸುತ್ತಿದ್ದರು; ಅಪರಾಧಿಗಳು ಪಶ್ಚಾತ್ತಾಪದಿಂದ ಶರಣುಬಂದಾಗ, ಅಂದರೆ ಪತಿವರ್ತಿತರಾದಾಗ ಮಾತ್ರ ತಮ್ಮ ಶರಣಪ್ರತಿಭಟನೆಯನ್ನು ನಿಲ್ಲಿಸುತ್ತಿದ್ದರು. ಇದು ಗಾಂಧೀಪ್ರಣೀತ ಸತ್ಯಾಗ್ರಹದಲ್ಲಿ ಕಾಣಿಸಿಕೊಳ್ಳುವ ಉಪವಾಸ, ಮತ್ತು ಆತ್ಮಕ್ಲೇಶಾನುಭವಕ್ಕೆ ಒಂದು ಸಂವಾದಿಯಾಗಬಲ್ಲ ಸಂಗತಿ.

ಇನ್ನು ಅಸಹಕಾರವೆಂದರೆ, ಅದು ರಾಜಕೀಯ ಅಸಹಕಾರವೇ ಆಗಬೇಕಿಲ್ಲ. ಶರಣರು ರಾಜಕೀಯವಾಗಿ ಮಾತ್ರವಲ್ಲ ಧಾರ್ಮಿಕವಾಗಿಯೂ, ಸಾಮಾಜಿಕ ಹಾಗೂ ಕೌಟುಂಬಿಕ ವಾಗಿಯೂ ಅಸಹಕಾರವನ್ನು ಪ್ರದರ್ಶಿಸಿರುವುದಕ್ಕೆ ಗಾಂಧಿ ಹಾಗೂ ಶರಣರ ಬದುಕಿನಲ್ಲಿಯೇ ಸಾಕಷ್ಟು ಉದಾಹರಣೆಗಳನ್ನು ನೋಡಬಹುದು. ಬಸವಾದಿ ಶರಣರು ವರ್ಣಾಶ್ರಮ ವ್ಯವಸ್ಥೆಗೆ ಅಸಹಕಾರವನ್ನು ಪ್ರದರ್ಶಿಸಿದ್ದು, ವರ್ಣಸಂಕರಗೈದು ಭೀಕರ ಆಪತ್ತನ್ನು ಮೈಮೇಲೆ ಹಾಕಿಕೊಂಡದ್ದು ಇವೇ ಮೊದಲಾದವುಗಳು ಅಸಹಕಾರಕ್ಕೆ ಅವಿಸ್ಮರಣೀಯ ಉದಾಹರಣೆಗಳು. ಎಲ್ಲಕ್ಕೂ ಮುಖ್ಯವಾಗಿ ಬಿಜ್ಜಳನಿಂದ ಮತ್ತು ಪುರೋಹಿತವರ್ಗದಿಂದ ಉಲ್ಬಣಿಸಿದ ಅನ್ಯಾಯವನ್ನು, ಹಿಂಸೆಯನ್ನು ಪ್ರತಿಭಟಿಸಲು ಬಸವಣ್ಣನವರೂ ದೇಶತ್ಯಾಗ ಮಾಡಿದುದು ಈ ಸಂದರ್ಭದಲ್ಲಿ ಮತ್ತೂ ಗಮನಾರ್ಹವಾದದ್ದು.

ಇನ್ನೊಂದು ಮುಖ್ಯವಿಷಯ : ಈ ಸಂದರ್ಭದಲ್ಲಿ ಸತ್ಯಾಗ್ರಹಕ್ಕೂ ಆಗಲೇ ಪಾಶ್ಚಾತ್ಯರಲ್ಲಿ ಆಚರಣೆಯಲ್ಲಿದ್ದ ಸಾತ್ವಿಕ ಪ್ರತಿಭಟನೆ (Passive Resistance)ಗೂ ಮತ್ತು ಶರಣಧರ್ಮಕ್ಕೂ

ಇರುವ ಆಂತರಿಕ ಸಂಬಂಧ–ವ್ಯತ್ಯಾಸಗಳನ್ನು ಸ್ಥೂಲವಾಗಿಯಾದರೂ ಗಮನಿಸಬೇಕಾದದ್ದು ಅತ್ಯನಿವಾರ್ಯ.

ವ್ಯಕ್ತಿ–ಸಮಾಜ–ಧರ್ಮವನ್ನು ಕುರಿತ ಎಲ್ಲ ಕಾಲಪರಿಸರಕ್ಕೂ ಅನ್ವಯಿಸಬಹುದಾದ ಈ ಸತ್ಯಾಗ್ರಹತತ್ವ ಗಾಂಧಿಯವರಲ್ಲಿ ಸುಳುಹುದೋರಿ ಒಂದು ತತ್ವವಾಗಿ ರೂಪಗೊಂಡದ್ದು ರಾಜಕೀಯ ಹೋರಾಟದ ಸಂದರ್ಭದಲ್ಲಿ. ಅನಿರೀಕ್ಷಿತ ದೈವೀಪ್ರಕಾಶದಂತೆ ಪ್ರಕಟಗೊಳ್ಳುತ್ತ ಹೊರಟ ಈ ದರ್ಶನವನ್ನು ಗಾಂಧಿಯವರು ಪಾಶ್ಚಾತ್ಯರಲ್ಲಿ ಆಗಲೆ ರೂಢಿಯಲ್ಲಿದ್ದ, 'ಪ್ಯಾಸಿವ್ ರೆಸಿಸ್ಟನ್ಸ್' ಎಂಬ ಹೆಸರಿನಿಂದಲೇ ಗುರುತಿಸಿದ್ದರು; ತಮ್ಮ ಆದರ್ಶ ಹೋರಾಟಕ್ಕೆ ಅದೇ ಹೆಸರನ್ನು ಕೊಟ್ಟಿದ್ದರು. ಆದರೆ ಆ ವಿದೇಶಿ ಹೆಸರು ನಮ್ಮ ದೇಶದ ಜನರಲ್ಲಿ, ವಿಶೇಷವಾಗಿ ಜನಸಾಮಾನ್ಯರಲ್ಲಿ, ಅದರ ಉಚ್ಚಾರದ ಕ್ಲಿಷ್ಟತೆಯಿಂದಾಗಿ ಬಳಕೆಗೆ ಬರುವದೂ ಕಷ್ಟವೆಂದು ತೋರಿತು; ಮೇಲಾಗಿ ಈ ಹಿರಿಯ ಸೈದ್ಧಾಂತಿಕ ಹೋರಾಟವನ್ನು, ತತ್ವವನ್ನು ಇಂಗ್ಲಿಷ ಹೆಸರಿನಿಂದ ಕರೆಯುವದು ಅವರಿಗೆ ನಾಚಿಕೆಗೇಡಾಗಿ ತೋರಿತು. ಆದ್ದರಿಂದ ಅದಕ್ಕೆ ಸಮರ್ಪಕವಾದ ಹೆಸರನ್ನು ಸೂಚಿಸಲು ಒಂದು ಪ್ರಕಟಣೆಯನ್ನೇ ಹೊರಡಿಸಬೇಕಾಯಿತು. ಅಂಥ ಸಂದರ್ಭದಲ್ಲಿ ಅವರ ಸಂಬಂಧಿಯೇ ಆಗಿದ್ದ ಮಗನಲಾಲ ಗಾಂಧಿಯವರು "ಸತ್ಕಾರಣದಲ್ಲಿ ಶ್ರದ್ಧೆ" ಎಂಬ ತಾತ್ಪರ್ಯದ ಹಿನ್ನೆಲೆಯಲ್ಲಿ 'ಸದಾಗ್ರಹ' ಎಂಬ ಹೆಸರನ್ನು ಸೂಚಿಸಿದರು. ಗಾಂಧಿಯವರಿಗೆ ಆ ಹೆಸರು ಹೆಚ್ಚು ಉಚಿತವೆನಿಸಿದರೂ ಸಂಪೂರ್ಣ ತೃಪ್ತಿಯನ್ನು ಕೊಡಲಿಲ್ಲ. ಆದ್ದರಿಂದ ಅದನ್ನೇ ಪರಿಷ್ಕರಿಸಿ 'ಸತ್ಯಾಗ್ರಹ' ಎಂದು ತಿದ್ದುಪಡಿಯೊಂದಿಗೆ ಬಳಕೆಗೆ ತಂದರು. 'ಪ್ಯಾಸಿವ್ ರೆಸಿಸ್ಟನ್ಸ' ಎಂಬ ಹೆಸರನ್ನೂ ತ್ಯಜಿಸಿದರು,[೧೬]

ಆದರೂ ಸತ್ಯಾಗ್ರಹವೆಂಬುದು ಪ್ಯಾಸಿವ್ ರೆಸಿಸ್ಟನ್ಸ್‌ದ ಪರ್ಯಾಯ ಪದವೆಂದೇ ಬಹುಜನರ ಗ್ರಹಿಕೆಯಾಗಿ, ನಂಬಿಕೆಯಾಗಿ ಮುಂದುವರೆಯಿತು. ಆಗಿನ ಸಂದರ್ಭದಲ್ಲಿ ಅದು ಸಹಜವೂ ಆಗಿತ್ತು. ಇಂಗ್ಲಿಷ ಶಬ್ದಕ್ಕೆ ಸಂವಾದಿಶಬ್ದದ ಹುಡುಕಾಟದ ಫಲವಾಗಿಯೇ 'ಸತ್ಯಾಗ್ರಹ' ಶಬ್ದ ಹುಟ್ಟಿಕೊಂಡಂತೆ ಎಲ್ಲರ ತಿಳುವಳಿಕೆಯಾಗಿತ್ತು. ಗಾಂಧಿಯವರ ಕೇವಲ ಅಭಿಮಾನಿಗಳಾಗಿದ್ದ ಹಾಸ್ಕೆನ್ ಅವರೇ ಒಂದು ಸಭೆಯಲ್ಲಿ ಗಾಂಧಿ ಚಳವಳಿಯನ್ನು, ಅದರ ಸ್ವರೂಪ–ಉದ್ದೇಶವನ್ನು ಪರಿಚಯಮಾಡಿಕೊಡುತ್ತ ಅದನ್ನು ಪ್ಯಾಸಿವ್ ರೆಸಿಸ್ಟನ್ಸ್‌ದೊಡನೆ ಅಭೇದಗೊಳಿಸಿ ಮಾತಾಡಿದರು. ಅಲ್ಲದೆ ಭಾರತೀಯರಿಗೆ ವೋಟಿನ ಅಧಿಕಾರ ಇಲ್ಲದಿರುವದು, ಅವರೆಲ್ಲ ಅಲ್ಪಸಂಖ್ಯಾತರಾಗಿರುವದು ಮತ್ತು ಅವರೆಲ್ಲ ಶಸ್ತ್ರಾಸ್ತ್ರವಿಲ್ಲದ ದುರ್ಬಲರೂ ಆಗಿರುವುದನ್ನು ಎತ್ತಿ ಹೇಳಿ, ತಮ್ಮ ಅಭಿಪ್ರಾಯಕ್ಕೆ ಪರ್ಯಾಯವಾಗಿ ಸಮರ್ಥನೆಯನ್ನು ಒದಗಿಸಿ ಕೊಂಡಿದ್ದರು. ಹೀಗೆ ಪ್ಯಾಸಿವ್ ರೆಸಿಸ್ಟನ್ಸ್‌ನ್ನು ತಮ್ಮ ಇಂಥ ಸತ್ಯಾಗ್ರಹ ಚಳವಳಿಗೆ ಸಂವಾದಿಯನ್ನುಂತೆ ಬಳಸಿಕೊಂಡದ್ದು, ಮೇಲಾಗಿ ಅದನ್ನು ದುರ್ಬಲರ ದಾರಿಯೆಂದು ಅರ್ಥೈಸಿದ ರೀತಿ ಗಾಂಧೀಯವರ ದೊಡ್ಡ ಅಸಮಾಧಾನಕ್ಕೆ ಕಾರಣವಾಯಿತು.

ಗಾಂಧಿಯವರೇ ಹೇಳುವಂತೆ 'ಪ್ಯಾಸಿವ್ ರೆಸಿಸ್ಟನ್ಸ' ಎಂಬುದನ್ನು ಯಾರು ಯಾವಾಗ ಬಳಸಿದರೆಂಬುದು ಮತ್ತು ಪ್ರಯೋಗಕ್ಕೆ ತಂದರೆಂಬುದು ತಿಳಿಯದು; ಅದನ್ನು ಕುರಿತು ನಿಶ್ಚಿತ ವ್ಯಾಖ್ಯಾನವೂ ಕಂಡುಬರುವುದಿಲ್ಲ. ಆದರೂ ಇಂಗ್ಲಿಷರಲ್ಲಿ ಯಾವುದೇ ಅಲ್ಪಸಂಖ್ಯಾತ ಪಂಗಡದವರಿಗೆ ಒಂದು ಶಾಸನ ಅಸಹನೀಯವೆಂದು ತೋರಿದರೆ ಅದರ ವಿರುದ್ಧ ದಂಗೆ

ಏಳದೆ ಶಾಸನಭಂಗ ಮಾಡಲಾಗುತ್ತಿತ್ತು. ಒಂದು ಅರ್ಥದಲ್ಲಿ ಅದನ್ನು ನಿಷ್ಕ್ರಿಯ ಹೋರಾಟವೆಂದೂ ಹೇಳಲಾಗುತ್ತಿತ್ತು. ಆಗ ಇಂಗ್ಲಿಷ ಮಹಿಳೆಯರು ವೋಟಿನ ಹಕ್ಕಿಗಾಗಿ ನಡೆಸಿದ ಹೋರಾಟವನ್ನೂ ಪ್ಯಾಸಿವ್ ರೆಸಿಸ್ಟನ್ಸ ಎಂಬ ಹೆಸರಿನಿಂದಲೇ ಕರೆಯಲಾಗುತ್ತಿತ್ತು.

ಆದರೆ ಗಾಂಧಿಯವರ ಸತ್ಯಾಗ್ರಹ ಚಳವಳಿ ಕೇವಲ ಓಟಿಗಾಗಿ ನಡೆಸಿದ ಹೋರಾಟವಾಗಿರಲಿಲ್ಲ; ಅದು ಮುಖ್ಯವಾಗಿ ಅಸಹಾಯಕತೆಯ ಸಂಕೇತವೂ ಆಗಿರಲಿಲ್ಲ. ಅವಕಾಶ ಸಿಕ್ಕಿದರೂ ಹಿಂಸೆಗೆ ಇಳಿಯುವ ಪ್ರವೃತ್ತಿಯೂ ಸತ್ಯಾಗ್ರಹದ್ದಾಗಿರಲಿಲ್ಲ. ಅಂತೆಯೇ ಗಾಂಧಿಯವರಿಗೆ ತಮ್ಮ ಅಭಿಮಾನಿಗಳಲ್ಲಿಯೇ ಈ ಎರಡೂ ಕುರಿತು ಇದ್ದ ಸಂವಾದಿಭಾವನೆ ಒಂದು ಸವಾಲಾಗಿ ಕಂಡಿದ್ದರೆ ಆಶ್ಚರ್ಯವಲ್ಲ. 'ಸತ್ಯಾಗ್ರಹ' ಪ್ಯಾಸಿವ್ ರೆಸಿಸ್ಟನ್ಸಗಿಂತ ಪ್ರತ್ಯೇಕವಾದ ಸೈದ್ಧಾಂತಿಕ ಹೋರಾಟವೆಂದೂ, ಅದಕ್ಕಿಂತಲೂ ಹೆಚ್ಚು ಪವಿತ್ರವಾದ ಮನೋಧರ್ಮವೆಂದೂ ಸಾಧಿಸಲು, ಹಾಗೆಂದು ಅರ್ಥೈಸಿಕೊಡಲು ಹಲವಾರು ಸಂದರ್ಭಗಳಲ್ಲಿ ಬರಹ-ಭಾಷಣಗಳ ಮೂಲಕ ಯತ್ನಿಸಿದರು.

ಗಾಂಧಿಯವರು ಪ್ಯಾಸಿವ್ ರೆಸಿಸ್ಟನ್ಸ ಹಾಗೂ ಸತ್ಯಾಗ್ರಹದಲ್ಲಿ ಸಾಕಷ್ಟು ವ್ಯತ್ಯಾಸವನ್ನು ಗುರುತಿಸುವದಲ್ಲದೆ ಎಷ್ಟೋ ಅಂಶಗಳಲ್ಲಿ ವಿರೋಧವನ್ನು ಎತ್ತಿ ಹೇಳಿದ್ದಾರೆ. "ಪ್ಯಾಸಿವ್ ರೆಸಿಸ್ಟರ್ಸ್" ಮತ್ತು ಸತ್ಯಾಗ್ರಹಿಗಳು ಎಂದು ಕರೆದುಕೊಳ್ಳುವವರು ಇಬ್ಬರೂ ಒಂದೇ ಎಂದು ಭಾವಿಸಿದರೆ, ಇಬ್ಬರಿಗೂ ಪರಸ್ಪರ ಅನ್ಯಾಯಮಾಡಿ ದುಷ್ಪರಿಣಾಮಕ್ಕೆ ಎಡೆಮಾಡಿದಂತಾಗುತ್ತದೆ[೧೨] ಎಂಬದು ಅವರ ಸ್ಪಷ್ಟವಾದ ನಿಲುವಾಗಿತ್ತು. ಗಾಂಧಿಯವರ ಅಭಿಪ್ರಾಯದಲ್ಲಿ ಪ್ಯಾಸಿವ್ ರೆಸಿಸ್ಟನ್ಸ ಸಂಪೂರ್ಣ ಅಹಿಂಸಾವಾದಿಯಾದದ್ದೂ ಅಲ್ಲ; ಎಲ್ಲಿಯವರೆಗೆ ಅಸಹಾಯಕತೆ, ದೌರ್ಬಲ್ಯ, ಕಾಣಿಸಿಕೊಳ್ಳುತ್ತಿದೆಯೊ, ಎಲ್ಲಿಯವರೆಗೆ ಬೇರೆ ದಾರಿ ಉಪಾಯಗಳಾಗಲಿ, ಶಸ್ತ್ರಸೌಕರ್ಯ ಇರುವದಿಲ್ಲವೊ ಅಲ್ಲಿಯವರೆಗೆ ಮಾತ್ರ ಪ್ಯಾಸಿವ್ ರೆಸಿಸ್ಟರ್ಸಗಳದು ಸೌಮ್ಯ ಹಾಗೂ ಸಾತ್ವಿಕ ಹೋರಾಟ; ಅವಕಾಶ ಸಿಕ್ಕರೆ ಹಿಂಸಾಚಾರಕ್ಕೂ ಇಳಿಯುವದು ಅವರಿಗೆ ಅನೀತಿಯಲ್ಲ. ಮೇಲಾಗಿ ಅಲ್ಪಕಾಲಿಕವಾಗಿ, ಅದೂ ಬಾಹ್ಯ ಒತ್ತಡದಿಂದ ಕಾಣಿಸಿಕೊಳ್ಳುವ ಅಹಿಂಸೆ ಅವರ ಅಸಹಾಯಕತೆಯ, ದೌರ್ಬಲ್ಯದ ಒಂದು ಪ್ರತೀಕವೇ ಹೊರತು ಅವರ ಸಹಜ ಮನೋಧರ್ಮವಲ್ಲ.

ಇನ್ನು ಸತ್ಯಾಗ್ರಹವೆನ್ನುವುದು ಇದಕ್ಕೆ ತದ್ವಿರುದ್ಧವೆನ್ನಬಹುದಾದ ಹೋರಾಟ, ಒಂದು ತತ್ವ, ಒಂದು ಮನೋಧರ್ಮ. ಅಲ್ಲಿ ಹಿಂಸೆಗೆ, ಮೋಸಕ್ಕೆ, ಬಲಪ್ರಯೋಗಕ್ಕೆ, ದ್ವಂದ್ವಕ್ಕೆ ಎಂಥ ಸಂದರ್ಭದಲ್ಲೂ ಎಳ್ಳಷ್ಟೂ ಅವಕಾಶವಿರುವುದಿಲ್ಲ; ವಿರೋಧಿಗಳಿಂದ ಒದಗಿ ಬರುವ ಆಕ್ರಮಣವನ್ನು ಅತ್ಯಂತ ಸಂಯಮತೆಯಿಂದ, ಶಾಂತಿಯಿಂದ, ಪ್ರೀತಿಯಿಂದ ಆತ್ಮವಿಶ್ವಾಸ ದೊಂದಿಗೇನೇ, ಆತ್ಮಕ್ಲೇಶಾನುಭವದೊಂದಿಗೇನೇ ಎದುರಿಸಬೇಕಾಗುತ್ತದೆ; ಆ ಮೂಲಕ ವಿರೋಧಿಗಳ ಸ್ವಭಾವ ಪರಿವರ್ತನೆಯನ್ನು ಸಾಧಿಸಬೇಕಾಗುತ್ತದೆ. ತನ್ನನ್ನು ಮಾತ್ರವಲ್ಲ ಹಿಂಸೆಗೆ ಒಳಗಾದ ಯಾವುದೇ ಜೀವಿಯ ರಕ್ಷಣೆಗಾಗಿಯೂ ಮುಂದಾಗುವದು ಅಹಿಂಸೆ ಎನಿಸಿಕೊಳ್ಳುತ್ತದೆ; ಅಂಥ ಅಹಿಂಸೆಯೇ ಸತ್ಯಾಗ್ರಹವೆನಿಸಿಕೊಳ್ಳುತ್ತದೆ. ಆದ್ದರಿಂದ ಸತ್ಯಾಗ್ರಹವೆಂಬುದು ಸ್ವಾರ್ಥದ, ದೌರ್ಬಲ್ಯದ, ಅಸಹಾಯಕತೆಯ ಹೇಡಿತನದ ಸಂಕೇತವಲ್ಲ. ಅದು ತಾತ್ಕಾಲಿಕವೂ ಅಲ್ಲ; ಸೀಮಿತ ಕಾಲ-ಪರಿಸರ-ಸಮಸ್ಯೆಗಳಿಗೂ ಅನ್ವಯಿಸುವಂತಹದಲ್ಲ. ಶಸ್ತ್ರಾಸ್ತ್ರಗಳ ಸೌಕರ್ಯದ ಸಂದರ್ಭದಲ್ಲಿಯೂ ಸತ್ಯಾಗ್ರಹಿ ಅವುಗಳನ್ನು ಆಪದ್ಧರ್ಮವೆಂದು

ಕೂಡ ಬಳಸಲಾರ. ಕಾಡನ್ನು ಸುಟ್ಟ ಬೆಂಕಿ ಕೊನೆಗೆ ತಾನೂ ನಂದಿಹೋಗುವುದು ಅನಿವಾರ್ಯವಾದಂತೆ, ವೈರಿಗಳನ್ನು ನಾಶಪಡಿಸುವ ವ್ಯಕ್ತಿ ಕೊನೆಗೆ ತಾನೂ ಧ್ವಂಸಗೊಳ್ಳುವದು ನಿಶ್ಚಯ. ದೈಹಿಕಶಕ್ತಿಗೆ ಮಿತಿಯುಂಟು, ಆತ್ಮಶಕ್ತಿಗೆ ಮಿತಿಯಿಲ್ಲ. ಮೇಲಾಗಿ ಸತ್ಯಾಗ್ರಹವೆನ್ನುವುದು ಕೇವಲ ರಾಜಕೀಯ, ಸಾಮಾಜಿಕ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ನಡೆಸುವ ಚಳವಳಿಯೂ ಅಲ್ಲ. ಅದು ವ್ಯಷ್ಟಿ-ಸಮಷ್ಟಿಯ ಎಲ್ಲ ಸಂದರ್ಭದಲ್ಲೂ ನಡೆಯಬೇಕಾದ ಹೋರಾಟ; ತನ್ನ ಮನಸ್ಸಿನ ವಿರುದ್ಧವಾಗಿ ತಾನೇ ನಡೆಸಬೇಕಾಗಿ ಬರಬಹುದಾದ ಹೋರಾಟವೂ ಕೂಡ. ಇನ್ನೂ ಹೇಳುವದಾದರೆ, ಗಾಂಧಿಯವರ ಅಭಿಪ್ರಾಯದಲ್ಲಿ ಹೇಡಿತನ ದೊಡ್ಡ ಹಿಂಸೆ; ಅದು ಭಗವಂತನಲ್ಲಿರುವ ನಮ್ಮ ನಂಬಿಕೆಯ ಅಭಾವದ ಸಂಕೇತ. ಹಿಂಸಾಚಾರಿ ಅಹಿಂಸಾತ್ಮಕನಾಗುವದು ಸಾಧ್ಯ; ಆದರೆ ಹೇಡಿ ಎಂದೂ ಅಹಿಂಸಾವಾದಿಯಾಗಲಾರ. ಹಾಗೆಂದೇ ನಮ್ಮ ಮೇಲೆ, ನಮ್ಮ ಬಂಧುಗಳ ಮೇಲೆ ಸತ್ಯಾಗ್ರಹವನ್ನು ಪ್ರಯೋಗಿಸುವದು ಸಾಧ್ಯವಾದಂತೆ ಪ್ಯಾಸಿವ್ ರೆಸಿಸ್ಟನ್ಸ ಬಳಸಲು ಸಾಧ್ಯವಾಗುವುದಿಲ್ಲ. ಶತ್ರುಗಳ ವಿರುದ್ಧ ನಡೆಸುವ ಹೋರಾಟ "ಪ್ಯಾಸಿವ್ ರೆಸಿಸ್ಟನ್ಸ" ಹೋರಾಟ : ಅಸತ್ಯದ ವಿರುದ್ಧ-ಅದು ಎಲ್ಲಿಯೇ ಇರಲಿ ಯಾರಲ್ಲಿಯೇ ಇರಲಿ ನಡೆಸುವ ಹೋರಾಟ ಸತ್ಯಾಗ್ರಹ ಹೋರಾಟ.

ಹೀಗೆ ಗಾಂಧಿ ಸತ್ಯಾಗ್ರಹ ಮತ್ತು ಪ್ಯಾಸಿವ್ ರೆಸಿಸ್ಟನ್ಸಗಳ ನಡುವಿನ ಕಂದರವನ್ನು ಹಲವಾರು ನೆಲೆಗಳಲ್ಲಿ ಸಮರ್ಥಿಸಿಕೊಳ್ಳುತ್ತಾರೆ. ತಮ್ಮ ಸಮರ್ಥನೆಗಾಗಿ ಆ ಕಾಲದಲ್ಲಿ ಇಂಗ್ಲಿಷ ಮಹಿಳೆಯರು ನಡೆಸಿದ ಅಂಥ ಚಳವಳಿಯನ್ನು ಪರಿಣಾಮಕಾರಿಯಾದ ಉದಾಹರಣೆ ಯನ್ನಾಗಿ, ನಿದರ್ಶನವನ್ನಾಗಿ ಬಳಸಿಕೊಳ್ಳುತ್ತಾರೆ. ಆ ಚಳವಳಿಯಲ್ಲಿ ಭಾಗವಹಿಸಿದ ಮಹಿಳೆಯರು ಧೈರ್ಯಶಾಲಿಗಳಾಗಿದ್ದರೂ, ನಿಸ್ವಾರ್ಥಿಗಳಾಗಿದರೂ ಮನೆಗಳಿಗೆ ಬೆಂಕಿಹಚ್ಚಿ, ಗಂಡಸರ ಮೇಲೆ ಕೈಮಾಡಿದುದನ್ನು ಎತ್ತಿ ಹೇಳುತ್ತಾರೆ. ಉಗ್ರಪರಿಸ್ಥಿತಿಯನ್ನು ಉಂಟುಮಾಡುವ ಉದ್ದೇಶವೂ ಆ ಮಹಿಳಾ ಪ್ಯಾಸಿವ್ ರೆಸಿಸ್ಟರುಗಳದ್ದಾಗಿತ್ತೆಂದೂ ಗಾಂಧಿ ಸಾಧಿಸುತ್ತಾರೆ.

ಮೂಲತಃ ಗಾಂಧಿಯವರಿಂದಲೂ ಮೊದಲುಗೊಂಡು, ಸಾತ್ವಿಕ ಪ್ರತಿಭಟನೆಯೆಂದೇ ಅರ್ಥೈಸಿಕೊಳ್ಳುತ್ತ ಬಂದಿದ್ದ ಪ್ಯಾಸಿವ್ ರೆಸಿಸ್ಟನ್ಸದ ಮೂಲಪ್ರಣಾಳಿಕೆಯಲ್ಲಿ ಈ ಹಿಂಸೆಗೆ ಅವಕಾಶವಿತ್ತೆಂದು ನಂಬುವದು ಕಷ್ಟ. ಹಾಗೇನಾದರೂ ಇದ್ದದ್ದೇ ಆಗಿದ್ದರೆ, ಗಾಂಧಿಯವರು ಆರಂಭದಲ್ಲಿ ತಮ್ಮ ಆ ಹೋರಾಟಕ್ಕೆ 'ಪ್ಯಾಸಿವ್ ರೆಸಿಸ್ಟನ್ಸ' ಎಂದು ಕರೆದುಕೊಳ್ಳುವ ಸಾಹಸಮಾಡುತ್ತಿರಲಿಲ್ಲ. ಮೇಲಾಗಿ ಆ ಹೆಸರಿನ ಬದಲಾವಣೆಯ ಹಿಂದಿದ್ದ ಕಾರಣ ಅದು ತಮ್ಮ ಹೋರಾಟದ ಸ್ವರೂಪಕ್ಕಿಂತ, ಧೋರಣೆಗಿಂತ ಭಿನ್ನವಾದದ್ದು ಎಂಬುದಾಗಿರಲಿಲ್ಲ. ತಮ್ಮ ಸತ್ಯಾಗ್ರಹವನ್ನು ಆತ್ಮಶಕ್ತಿ ಎಂದು ಗುರುತಿಸಿದ, ಗೌರವಿಸಿದ ಗಾಂಧಿಯವರೇ ಸ್ವತಃ ಪ್ಯಾಸಿವ್ ರೆಸಿಸ್ಟನ್ಸನ್ನು ಕೂಡ ಆತ್ಮಶಕ್ತಿಯೆಂದು ಗುರುತಿಸಿ ಗೌರವಿಸಿದ್ದೂ ಉಂಟು.

ಪ್ಯಾಸಿವ್ ರೆಸಿಸ್ಟನ್ಸ್ ಕೂಡ ಅಹಿಂಸೆಯಿಂದ ಕೂಡಿದ ಆಧ್ಯಾತ್ಮಿಕಶಕ್ತಿ ಎಂದೂ ಬೇರೊಂದು ಸಂದರ್ಭದಲ್ಲಿ ಗಾಂಧಿಯವರೇ ಹೇಳಿರುವುದುಂಟು; "ಈ ಶಕ್ತಿ ಕೇವಲ ಬಲಹೀನರು ಎಲ್ಲಿಯತನಕ ಹಿಂಸೆಯನ್ನು ಹಿಂಸೆಯಿಂದಲೇ ಎದುರಿಸಲು ಶಕ್ತರಾಗುವದಿಲ್ಲವೋ ಅಲ್ಲಿಯತನಕ ಉಪಯೋಗಿಸುವ ಶಕ್ತಿಯೆಂದು ಹೇಳುವದು ಶುದ್ಧಾಂಗ ಅಸತ್ಯ. ಈ

ಮೂಢನಂಬಿಕೆ ಇಂಗ್ಲಿಷ ಶಬ್ದದ ಅಪೂರ್ಣತೆಯಿಂದ ಹುಟ್ಟಿರುತ್ತದೆ"[೧೮] ಎಂದು ಹೇಳಿರುವುದನ್ನೂ ಪ್ರಸ್ತುತ ಸಂದರ್ಭದಲ್ಲಿ ಮರೆಯಲಾಗದು. ಅಲ್ಲದೆ ಗಾಂಧಿಯವರೆ ಹೇಳುವಂತೆ ಸ್ವತಃ ಟಾಲಸ್ಟಾಯ್ ಅವರೂ ಈ ತತ್ವವನ್ನು ಆತ್ಮಬಲ ಅಥವಾ ಪ್ರೇಮಬಲ ಎಂದೂ ಕರೆದಿದ್ದರು. ಮೇಲಾಗಿ ಏಸುಕ್ರಿಸ್ತನನ್ನು ಇಂಗ್ಲಿಷರು ಪ್ಯಾಸಿವ್‌ರೆಸಿಸ್ಟರಗಳಿಗೆ ಕಿರೀಟಪ್ರಾಯನೆಂದು ಕೀರ್ತಿಸಿರುವದನ್ನು ನೋಡಿದರೆ, ಖಂಡಿತವಾಗಿಯೂ ಅದು ಹಿಂಸಾತ್ಮಕವಾಗಿರಲಿಲ್ಲವಷ್ಟೇ ಅಲ್ಲ, ಸತ್ಯಾಗ್ರಹದಂತೆ ಅದು ಕೂಡ ಆತ್ಮಕ್ಲೇಶಾನುಭವವನ್ನೇ ಒಳಗೊಂಡಿತ್ತೆಂಬುದು ಸ್ಪಷ್ಟ. ಅಂದಿನ ಮಹಿಳಾಚಳವಳಿಯು ಹಿಂಸಾಕೃತ್ಯಕ್ಕೆ ತೊಡಗಿದ್ದರೆ ದೋಷ ಆ ಮಹಿಳಾ ಅನುಯಾಯಿಗಳದೇ ಹೊರತು ಆ ಮೂಲತತ್ವದ್ದಲ್ಲ. ಈ ಮಾತು ಸತ್ಯಾಗ್ರಹದ ಬಹಳಷ್ಟು ಅನುಯಾಯಿಗಳಿಗೂ ಮತ್ತು ಸತ್ಯಾಗ್ರಹ ಚಳವಳಿಯ ಬಹಳಷ್ಟು ಸಂದರ್ಭಗಳಿಗೂ ಅನ್ವಯಿಸುವಂತಹದು. ಆದ್ದರಿಂದ ಮೂಲಭೂತ ಲಕ್ಷಣ ಸ್ವರೂಪ, ಆಶಯಗಳ ದೃಷ್ಟಿಯಿಂದ ಅವೆರಡು ಒಂದೇಯಾಗಿ ಕಾಣಿಸಿಕೊಳ್ಳುತ್ತವೆ. ಆದರೆ ತಮ್ಮ ಹೋರಾಟಕ್ಕೆ ಪ್ರತ್ಯೇಕವಾದ ಒಂದು ಹೆಸರಿನಿಂದಲೇ ಗುರುತಿಸಿ ಅದನ್ನು ಪ್ರತ್ಯೇಕವಾದ ಒಂದು ಸಿದ್ಧಾಂತವನ್ನಾಗಿ ರೂಪಿಸುವ ಹಂಬಲವನ್ನು ಹೊಂದಿದ್ದ ಗಾಂಧಿಯವರು ಅದಕ್ಕೆ ಒಂದು ಪ್ರತ್ಯೇಕವಾದ ಅಸ್ತಿತ್ವವನ್ನು ಒದಗಿಸಿಕೊಡುವ ಉತ್ಕಟತೆಯಿಂದಾಗಿ ಪ್ಯಾಸಿವ್‌ರೆಸಿಸ್ಟನ್ನು ಅರ್ಥೈಸ ಹೊರಟಂತೆ ಕಂಡುಬರುತ್ತದೆ. ಅದೇ ಕಾರಣಕ್ಕಾಗಿ ಉದ್ದೇಶಪೂರ್ವಕವಾಗಿಯೇ ಅದರ ಉದಾತ್ತತೆಗೆ ಒಂದು ಸೀಮಿತ ಅರ್ಥವನ್ನು ಒದಗಿಸಿದಂತೆಯೂ ಕಂಡುಬರುತ್ತದೆ. ಇದರಿಂದಾಗಿಯೇ ಬಹಳಷ್ಟು ಸಲ ಪ್ಯಾಸಿವ್‌ರೆಸಿಸ್ಟನ್ಸ ಕುರಿತು ಗಾಂಧಿಯವರಲ್ಲಿ ದ್ವಂದ್ವಧೋರಣೆಯೂ ಕಂಡುಬರುತ್ತದೆ. ಇದರ ಅರ್ಥ ಅವೆರಡುಗಳಲ್ಲಿ ಮೂಲಭೂತ ವ್ಯತ್ಯಾಸವೇ ಇಲ್ಲವೆಂದಲ್ಲ. ಅಂಥ ವ್ಯತ್ಯಾಸ ಇರುವದಾದರೆ ಅದನ್ನು ಅವೆರಡುಗಳಿಗೆ ಹಿನ್ನೆಲೆಯಾದ ವಿಭಿನ್ನ ಸಾಂಸ್ಕೃತಿಕ, ಸಾಮಾಜಿಕ ಹಾಗೂ ದಾರ್ಶನಿಕ ಪರಂಪರೆಯಲ್ಲಿ ಗುರುತಿಸಬಹುದಾಗಿದೆ. ಸತ್ಯಾಗ್ರಹಕ್ಕೆ ಇರುವ ಭಾರತೀಯ ಆಧ್ಯಾತ್ಮಿಕ ತೇಜಸ್ಸಿನಿಂದಾಗಿ, ದಾರ್ಶನಿಕ ಪರಂಪರೆಯ ಸತ್ವದಿಂದಾಗಿ ಮತ್ತು ಲೌಕಿಕ–ಆಮುಷ್ಮಿಕಗಳೆರಡನ್ನೂ ಸಮರಸಗೊಳಿಸಿಕೊಡುವಲ್ಲಿ, ಸತ್ಯದ ಅನ್ವೇಷಣೆ ಹಾಗೂ ಅದರ ಸಾಕ್ಷಾತ್ಕಾರದ ಹಿನ್ನೆಲೆಯಲ್ಲಿ ಅದರ ವೈಶಿಷ್ಟ್ಯವನ್ನು, ಪ್ರತ್ಯೇಕತೆಯನ್ನು ಕಂಡುಕೊಳ್ಳಬಹುದಾಗಿದೆ. ಈ ಸತ್ಯಾಗ್ರಹ ಶರಣಧರ್ಮದ ಪುನಃ ಸೃಷ್ಟಿಯಂತೆ ಇಲ್ಲವೆ ಪುನರಾವತಾರದಂತೆ ಕಾಣಿಸಿಕೊಳ್ಳುವದಕ್ಕೂ ಅದರ ಭಾರತೀಯ ಆಧ್ಯಾತ್ಮಿಕ ಪರಂಪರೆಯ ತೇಜಸ್ಸನ್ನೇ ಪ್ರಮುಖ ಕಾರಣವನ್ನಾಗಿ ಗುರುತಿಸಬಹುದು. ಹಾಗೆ ನೋಡಿದರೆ ಭಾರತೀಯ ದಾರ್ಶನಿಕ ಪರಂಪರೆಯ ಮೂಲ ಸತ್ವವೇ ಲೋಕಕಲ್ಯಾಣಕ್ಕಾಗಿ ಬೇರೆಬೇರೆ ಕಾಲದಲ್ಲಿ ಬೇರೆಬೇರೆ ಪರಿಕಲ್ಪನೆಗಳ ಮೂಲಕ ಮರುಹುಟ್ಟನ್ನು ಪಡೆಯುತ್ತ ಬಂದಿದೆ. ಹೀಗೆ ಬೇರೆಬೇರೆ ಯುಗದಲ್ಲಿ, ಬೇರೆಬೇರೆ ರೂಪದಲ್ಲಿ ಕಾಣಿಸಿಕೊಳ್ಳುವ ಪರಿಕಲ್ಪನೆಗಳ, ಸಿದ್ಧಾಂತಗಳ ಒಳಸತ್ವದ ಮೂಲ ಸ್ರೋತ ಮಾತ್ರ ಒಂದೇಯಾಗಿ ಗೋಚರಿಸುವವರೂ ಈ ಕಾರಣಕ್ಕಾಗಿಯೇ.

ಸತ್ಯಾಗ್ರಹ ಮತ್ತು ಶರಣಧರ್ಮಗಳು ಬೇರೆಬೇರೆ ಕಾಲಮಾನಗಳಲ್ಲಿ ರೂಪಗೊಂಡದ್ದರಿಂದ ಅವುಗಳ ಧಾರ್ಮಿಕ ಪರಿಭಾಷೆ, ಪರಿಕಲ್ಪನೆ, ಪ್ರಕ್ರಿಯೆಗಳಲ್ಲಿ ಆನುಷಂಗಿಕವಾದ ವ್ಯತ್ಯಾಸ ತೀರ

ಸಹಜ; ಆದರೆ ಹಿಂಸೆ ಮತ್ತು ಅಹಿಂಸೆಯನ್ನು ಕುರಿತ ಅವೆರಡುಗಳ ನಿಲುವು ಈ ಸಂದರ್ಭದಲ್ಲಿ ಒಂದು ಮಹತ್ವದ ಸಮಸ್ಯೆ.

"ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯ
ತನಗಾದ ಆಗೇನು ಅವರಿಗಾದ ಚೇಗೇನು"
"ದಯವಿಲ್ಲದ ಧರ್ಮವದೇವುದಯ್ಯಾ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯಾ"
"ಸಕಲ ಪ್ರಾಣಿಗಳ ತನ್ನಂತೆ ಭಾವಿಸಬೇಕು'
"ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ..."

ಎಂದೆಲ್ಲ ಹೇಳಿದ ಶರಣರಲ್ಲಿಯೇ ಸಾಕಷ್ಟು ಸಿಟ್ಟಿನ, ರೋಷದ, ಅಸಹನೆಯ ಮತ್ತು ತಾಳ್ಮೆಗೆಟ್ಟ ಮಾತುಗಳು, ಕೆಲವು ಸಲವಂತೂ ಹೀನಾಯ ಬೈಗುಳದ ರೂಪದಲ್ಲಿ, ಕೇಳಿಬರುತ್ತವೆ; ಬೇಕಾದಷ್ಟು ಸಲ ಹೀನೋಪಮೇಯಗಳೂ ಹರಿದಾಡುತ್ತವೆ. ಗಣಾಚಾರದಂಥ ಆಚರಣೆಯಲ್ಲಿ ಹಿಂಸಾರೂಪದ ದಂಡನೆಯ ಜಳವೂ ತಾಗಿಬರುತ್ತದೆ. ಆದರೆ ಗಾಂಧಿಯವರ ಬದುಕಿನಲ್ಲಾಗಲಿ, ಬರಹದಲ್ಲಾಗಲಿ, ದಂಡನೆಯ ಮಾತೊತ್ತಟ್ಟಿಗಿರಲಿ ಬಿರುಸುತನವೂ ಕಾಣಿಸಿಕೊಳ್ಳುವುದಿಲ್ಲ. ಅಷ್ಟೇ ಅಲ್ಲ 'ಧರಣಿ'ಯೂ ಕೂಡ ಅವರ ದೃಷ್ಟಿಯಲ್ಲಿ ಸತ್ಯಾಗ್ರಹವಾಗದೆ ದುರಾಗ್ರಹವಾಗಿ ಕಾಣಿಸಿಕೊಳ್ಳುತ್ತದೆ. ಇದನ್ನು ನೋಡಿದರೆ ಹಿಂಸೆ ಮತ್ತು ಅಹಿಂಸೆಯ ಬಗೆಗಿನ ಶರಣರ ಹಾಗೂ ಗಾಂಧಿಯವರ ಕಲ್ಪನೆ ವಿಶಿಷ್ಟ ಹಾಗೂ ವಿಭಿನ್ನವಾಗಿರುವಂತೆ ಕಂಡುಬರುತ್ತದೆ.

ಹಿಂಸೆ–ಅಹಿಂಸೆಯ ವಿಷಯ ಅತ್ಯಂತ ಸೂಕ್ಷ್ಮವಾದದ್ದು. ಅದು ಬಳಕೆಯಾಗುವ ರೀತಿ, ಉದ್ದೇಶ, ಆಶಯವನ್ನು ಸಮಯ–ಸಂದರ್ಭ ಅದರ ಪರಿಮಿತಿಯನ್ನು ಅವಲಂಬಿಸಿರುವಂತಹದು. ಬೆಂಕಿ ಉರಿಯಾಗಿ ಸುಟ್ಟು ಹಾಕಬಲ್ಲಂತೆ ಜ್ಯೋತಿಯಾಗಿ ಬೆಳಗಲೂ ಬಲ್ಲದು. ಒಂದು ಲೋಹ ಮಾರಕಾಸ್ತ್ರವಾಗಬಲ್ಲಂತೆ, ಜೀವನೋಪಯೋಗಿ ಸಾಧನವೂ ಆಗಬಲ್ಲದು. ಎಲ್ಲ ಉಪಾಯಗಳು ಸಲ್ಲದೆ ಹೋದಾಗ ಒಂದು ಮಿತಿಯಲ್ಲಿ ನಿರ್ದಯತೆಗೂ ದಯೆಯಷ್ಟೇ ಬೆಲೆ ಬರಬಲ್ಲುದು; ಹಿಂಸೆಯೂ ಅಹಿಂಸೆಯಷ್ಟೇ ಪರಿಣಾಮಕಾರಿಯಾಗಬಲ್ಲದು. ಎಲ್ಲಿ ಸಂಸ್ಕರಣ ಪರಿಷ್ಕರಣವಿದೆಯೋ ಅಲ್ಲೆಲ್ಲ ಒಂದು ರೀತಿಯಲ್ಲಿ, ಒಂದು ಹಂತದಲ್ಲಿ ಸೌಮ್ಯವಾದ ಶಿಕ್ಷೆಯ, ದಂಡನೆಯ ರೂಪದ ಹಿಂಸೆ ಅನಿವಾರ್ಯವಾಗುತ್ತದೆ. ಆದರೆ ಅದು ಹಿಂಸಾರೂಪದ ಅಹಿಂಸೆ. ಲೋಕಕಲ್ಯಾಣಕ್ಕಾಗಿ ನಡೆಯುವ ಅಹಿಂಸೆಯ ರೂಪಾಂತರ; ಅವತಾರ. ವ್ಯಕ್ತಿ–ಸಮಾಜ ಹಾಗೂ ಲೋಕದ ಸಂಸ್ಕರಣಕ್ಕಾಗಿ ಶರಣರಲ್ಲಿ ಅನುಷಂಗಿಕವಾಗಿ ಅನಿವಾರ್ಯವಾಗಿ ಕಾಣಿಸಿಕೊಳ್ಳುತ್ತಿದ್ದ ನಿರ್ದಾಕ್ಷಿಣ್ಯ ರೂಪದ ಹಿಂಸೆ ಈ ಸ್ವರೂಪದ್ದು; ತೀರ ವ್ಯವಹಾರಿಕವಾದದ್ದು. ಗಾಂಧಿಯವರಲ್ಲಿ 'ಉಪವಾಸ' ಕೊನೆಯ ಅಸ್ತ್ರವಾದಂತೆ, ಶರಣರಲ್ಲಿ ಲಿಂಗಸಾಕ್ಷಿಯಾದ ಶಿಕ್ಷೆ–ದಂಡನೆಯೂ ಒಂದು ಅನಿವಾರ್ಯವಾದ ಅಷ್ಟೇ ಸಾತ್ವಿಕವಾದ ಕೊನೆಯ ಅಸ್ತ್ರ. ಶರಣರದು ಲೌಕಿಕ ಸಂಬಂಧಿಯಾದ ವಾಸ್ತವಪ್ರಪಂಚಕ್ಕೆ ಸಂಬಂಧಿಸಿದ್ದು; ಗಾಂಧಿಯವರದು ಸ್ವಪ್ನಸದೃಶವಾದ ಆದರ್ಶಲೋಕಕ್ಕೆ ಸಂಬಂಧಿಸಿದ್ದು.

ಗಾಂಧಿಯವರು ಅಹಿಂಸೆ ಹಾಗೂ ಸನಾತನ ಹಿಂದೂಧರ್ಮದ ಬಗೆಗಿನ ಅವಾಸ್ತವ

ಹಾಗೂ ಅತಿರೇಕದ ಕಲ್ಪನೆಗಳಿಂದ ಎಷ್ಟೋ ಸಂದರ್ಭದಲ್ಲಿ ಸಂದಿಗ್ಧತೆಯನ್ನು, ದ್ವಂದ್ವವನ್ನು ಎದುರಿಸಬೇಕಾಯಿತು. ವಾದಕ್ಕಾಗಿಯೇ ಒಂದು ಉದಾಹರಣೆಯನ್ನು ಎತ್ತಿಹೇಳುವುದಾದರೆ– ಮಾನಭಂಗಕ್ಕೆ ಒಳಗಾಗುತ್ತಿರುವ ಸ್ತ್ರೀಯು ಕೂಡ ತನ್ನ ಮಾನರಕ್ಷಣೆಗಾಗಿಯೂ ಹಿಂಸಾಮಾರ್ಗವನ್ನು ಅನುಸರಿಸಕೂಡದು; "ಅಂಥ ಮಹಿಳೆಗೆ ಹಿಂಸೆಯ ಅಪಾಯಕ್ಕೊಳಗಾಗುವ ಸ್ಥಿತಿಯೇ ಪ್ರಾಪ್ತವಾಗುವದಿಲ್ಲ. ಒಂದು ವೇಳೆ ಬಂದರೂ ಅಂಥವಳು ದುರುಳರಿಗೆ ಯಾವ ಬಗೆಯ ಹಿಂಸೆಯನ್ನೂ ಎಸಗದೆ ತನ್ನ ಮಾನವನ್ನು ಪೂರ್ಣವಾಗಿ ರಕ್ಷಿಸಿಕೊಳ್ಳಲು ಶಕ್ತಳಾಗುವಳು. ಪೂರ್ಣಪಾವಿತ್ರ್ಯತೆ ತನ್ನನ್ನು ತಾನೇ ರಕ್ಷಿಸಿಕೊಳ್ಳಬಲ್ಲದು ಎಂಬ ಮಾತನ್ನು ಯಾವ ಸಂಶಯವೂ ಇಲ್ಲದೆ ಒಪ್ಪುತ್ತೇನೆ" ಎಂಬುದು ಗಾಂಧಿಯವರ ವಾದ; ನೆಲದ, ಬದುಕಿನ ವಾಸ್ತವ ಸಂಬಂಧದ ಪರಲನ್ನು ಹರಿದುಕೊಂಡು ವಿಶ್ವಾಸವನ್ನು ಕಳೆದುಕೊಳ್ಳುವಂತಹದು.

ಗಾಂಧಿಯವರು ತಮ್ಮ 'ಸತ್ಯಾಗ್ರಹ'ದ ಈ ಅಸ್ತ್ರವನ್ನು ರಾಜಕೀಯ ಸಂದರ್ಭದಲ್ಲಿ ಪರಕೀಯವಾದ ಬ್ರಿಟಿಷರೊಂದಿಗೆ ಮಾತ್ರವಲ್ಲ ತಮ್ಮ ತತ್ವ ನಂಬಿಕೆ, ವಾದದ ಕಾರ್ಯಾಚರಣೆಗಾಗಿ ತಮ್ಮ ಅನುಯಾಯಿಗಳ ಮೇಲೆಯೇ ಪ್ರಯೋಗಿಸುವ ಮೂಲಕ ತಮ್ಮ ಸಮಕಾಲೀನ ಒಟ್ಟು ಪರಿಸರದ ಮೇಲೆ ನುಣ್ಣಗಿನ ಒತ್ತಡ ಹಾಗೂ ಶೀತಲ ಆಕ್ರಮಣ ನಡೆಸಿದರೆಂಬ ಆಪಾದನೆಗೂ ಗುರಿಯಾದರು. 'ಸತ್ಯ'ವೆದರೆ ತಾವು ಹೇಳಿದುದು' ಎಂಬ ಅತಿರೇಕವೂ ಕಾಣಿಸಿಕೊಂಡಿತು. ಅಂದರೆ, ಎಷ್ಟೋ ಸಲ, ಯಾವ ಮಾರ್ಗ–ಅಭಿಪ್ರಾಯವನ್ನು ಗಾಂಧಿಯವರು ಅನುಸರಿಸಿದರೆ ಸತ್ಯಾಗ್ರಹವಾಗುತ್ತಿತ್ತೊ ಅದನ್ನೇ ಅನ್ಯರು ಅನುಸರಿಸಿದರೆ ದುರಾಗ್ರಹವೆನಿಸುವಂತಾಯಿತು. 'ಸತ್ಯ'ದ ಸಾಕ್ಷತ್ಕಾರ, ಮತ್ತು ಸತ್ಯಾಗ್ರಹದ ವ್ರತಗಳೆಲ್ಲ ಸಾಮಾನ್ಯರಿಗೆ ಸಾಧ್ಯವಾಗದೇ ಹೋಗುವ ಸಂಭವವೇ ಹೆಚ್ಚಾಗಿ, ಅದು ಗಾಂಧಿಯಂಥ "ಒಬ್ಬ ವ್ಯಕ್ತಿಯ ನಿರ್ಣಯವನ್ನು ಕಮ್ಮಿ ದರ್ಜೆಯ ಬೌದ್ಧಿಕ ಮತ್ತು ನೈತಿಕಶಕ್ತಿ ಹೊಂದಿದವರು ಕುರುಡರಂತೆ ಅನುಸರಿಸಬೇಕು" ಎನ್ನುವ ಅತಿಪ್ರಸಂಗ ಒದಗಿದೊಂದು 'ಗಾಂಧೀಪ್ರಭುತ್ವ' ಎಂದೂ ಕರೆಯಿಸಿಕೊಳ್ಳುವ ಹಂತಕ್ಕೂ ಬಂದಿತು. ಅದರಿಂದ ಸತ್ಯಾಗ್ರಹವೆನ್ನುವುದು ಒಂದು ವಿಶಿಷ್ಟ ದರ್ಜೆಯ, ವಿಶಿಷ್ಟ ವರ್ಗದ ಸೊತ್ತಾಗಿ ನಿಲ್ಲುವಂತಹ ಸ್ಥಿತಿ ಸತ್ಯಾಗ್ರಹಕ್ಕೂ ತಪ್ಪಲಿಲ್ಲ. ಆದರೆ ಸಮುದಾಯಪ್ರಜ್ಞೆಯಿಂದ ಕೂಡಿದ ಮತ್ತು ಶರಣ ಸಮುದಾಯದ ಸೊತ್ತಾಗಿಯೇ ರೂಪಗೊಂಡ 'ಅನುಭವ ಮಂಟಪ'ದ ಪರಿಕಲ್ಪನೆ ಶರಣಪ್ರಭುತ್ವವನ್ನು ಸ್ಥಾಪಿಸಿತು. ಅಂತೆಯೇ ಕಲ್ಯಾಣದ ಅನುಭವಮಂಟಪ ಜನಸಂಪರ್ಕದಿಂದ ದೂರವಾದ ಆಶ್ರಯವಾಗದೆ, ಜನಸಮುದಾಯದಲ್ಲಿಯ ಮಹಾಮನೆಯಾಯಿತು; ಅನುಭವ ಮಂಟಪವಾಯಿತು; ಶರಣಪ್ರಭುತ್ವದ ಸಂಕೇತವಾಯಿತು; ಪ್ರಜಾಪ್ರಭುತ್ವದ ಪೂರ್ವಮಾದರಿ ಯಾಯಿತು. ಈ ಶರಣಧರ್ಮದ ಸಿದ್ಧಾಂತಗಳು ಸಮಷ್ಟಿಪ್ರಜ್ಞೆಯಿಂದ ರೂಪಗೊಂಡವು ಗಳಾಗಿದ್ದರಿಂದ ನೂರಾರು ವರುಷಗಳವರೆಗೆ ಚಲಾವಣೆಯಲ್ಲಿ ಉಳಿಯಬಲ್ಲವುಗಳಾದವು. ಆದರೆ 'ಸತ್ಯಾಗ್ರಹ'ದ ಮೌಲ್ಯಗಳು ಗಾಂಧಿಯವರ ಎದುರಿನಲ್ಲಿಯೇ ಚಲಾವಣೆಯನ್ನು ಕಳೆದುಕೊಂಡವು. ಅವರ ಸರ್ವೋದಯತತ್ವಗಳಲ್ಲಿಯ ಆರ್ಥಿಕ–ಸಾಮಾಜಿಕ ಚಿಂತನೆಗಳು ಆದರ್ಶಮಂತ್ರಗಳಾಗಿ ಉಳಿದುಕೊಂಡವು. ಅಂತೆಯೇ ಮಹಾತ್ಮಾಗಾಂಧಿಯವರು ತೆಗೆದ ಹತಾಶಯ ಉದ್ಗಾರವಿದು: "who listens to me today? Everybody is egar to grand

photoes and statues. Nobody really wants to follow my advice, neither the people not those in power have any use for me."

ಇಷ್ಟೆಲ್ಲ ಹೇಳಿದುದರ ಮುಖ್ಯ ಉದ್ದೇಶ 'ಶರಣಧರ್ಮ' ಅಥವಾ ಬಸವಣ್ಣನವರ ಬದುಕು ದ್ವಂದ್ವಾತೀತವೆಂದಾಗಲಿ, ಬಸವಣ್ಣನವರ ಸಾಧನೆಯ ಎದುರಿಗೆ ಗಾಂಧಿಯವರ ವ್ಯಕ್ತಿತ್ವ, ಸಾಧನೆ–ತತ್ವ ಕ್ಷೀಣಗೊಳ್ಳುವುದನ್ನು ಪ್ರತಿಪಾದಿಸುವದಾಗಲಿ ಅಲ್ಲ; ಅವರಿಬ್ಬರೂ ಯುಗಪುರುಷರಾಗಿ ಲೋಕವನ್ನು ಪರಿಪೂರ್ಣತೆಯತ್ತ ನಡೆಸಿಕೊಂಡು ಹೋಗಲು ಆತ್ಮಸಾಕ್ಷಿಯಾಗಿ ತಮ್ಮನ್ನು ಸಮರ್ಪಿಸಿಕೊಂಡ ಮಹಾಚೇತನಗಳು. ಮೂಲತಃ ಅವರಿಬ್ಬರೂ ಒಂದು ಹಂತದಲ್ಲಿ ಸಾಧಕರೆ ಆದುದರಿಂದ ದ್ವಂದ್ವ ತೀರ ಅನಿವಾರ್ಯವೂ ಹೌದು, ಸಹಜವೂ ಹೌದು. ಆದರೂ ಬಸವಣ್ಣನವರ ಮನೋಧರ್ಮ ಹಾಗೂ ಸಿದ್ಧಾಂತಗಳು ತಮ್ಮ ಸಮಕಾಲೀನದಲ್ಲಿಯಾದರೂ ಹೆಚ್ಚು ಪ್ರಸ್ತುತವೆನಿಸಿದ್ದುವು: ಆದರೆ ಗಾಂಧಿಯವರ ಮನೋಧರ್ಮ, ತತ್ವಗಳೂ ಸಮಕಾಲೀನದಲ್ಲಿಯೇ ಬಹಳಷ್ಟು ಹಂತದಲ್ಲಿ ಅಪ್ರಸ್ತುತವಾಗಿ ಕಾಣಿಸಿಕೊಂಡದ್ದು ಸುಳ್ಳಲ್ಲ. ಒಟ್ಟಿನಲ್ಲಿ ಬಸವಣ್ಣನವರ ವ್ಯಕ್ತಿತ್ವ ಗಾಂಧಿಯವರ ವ್ಯಕ್ತಿತ್ವಕ್ಕಿಂತಲೂ ವ್ಯಾಪಕವಾದುದೆಂದು ಹೇಳುವ ಮೂಲಕ ನಮ್ಮ ಆತ್ಮಸಾಕ್ಷಿತ್ವವನ್ನು ಕಾಪಾಡಿಕೊಳ್ಳ ಬೇಕಾಗುತ್ತದೆ.

ಅಡಿಟಿಪ್ಪಣಿಗಳು

೧. 'ಸತ್ಯಾಗ್ರಹ' – ಮೋ.ಕ. ಗಾಂಧಿ;(೧೯೫೯) 'ನಿವೇದನ' ಅನು: ಕುವೆಂಪು, ಪುಟ–IX
೨. ನೋಡಿ: 'ಮಾರ್ಕ್ಸ್ ಮತ್ತು ಗಾಂಧಿ' – ಮಧು ದಂಡವತೆ; ಅನು: ಕೆ.ವಿ. ಸುಬ್ಬಣ್ಣ ಮತ್ತು ಅಕ್ಷರ; (೧೯೮೩), ಪು: ೧೦೫.
೩. 'ಸತ್ಯಾಗ್ರಹ' ಮೋ.ಕ. ಗಾಂಧಿ, 'ನಿವೇದನ' ಪು : X
೪. ನೋಡಿ : 'ಹಿಂದೂಧರ್ಮ–ಗಾಂಧೀಜಿ' – ಜಿ.ವಿ. ನಾರಾಯಣಮೂರ್ತಿ, ಪ್ರ.ಕ. ೫೧–೪, ಪು–೬೭.
೫. ನೋಡಿ : ಅದೇ ಪು : ೬೮
೬. ನೋಡಿ : ಅದೇ ಪು–೭೦.
೭. 'ಬಸವತತ್ವ ಪರಿಮಳ' – ಸಂ : ಮಲ್ಲಾಬಾದಿ ವೀರಭದ್ರಪ್ಪ, (೧೯೫೪) ಪ್ರಸ್ತಾವನೆ. ಪು. XVI
೮. ಪು. ಪು : XVII
೯. 'ಮಹಾತ್ಮಾಗಾಂಧೀಜಿ ಮತ್ತು ಬಸವಣ್ಣನವರು' ಎಂ.ಪಿ. ಪಾಟೀಲ "ಯುಗಪುರುಷ ಗಾಂಧಿ" (೧೯೭೦)
೧೦. 'ಸತ್ಯಾಗ್ರಹ' ಮೋ.ಕ. ಗಾಂಧಿ (೧೯೫೯) ನಿವೇದನ : ಪು–XI
೧೧. ಅದೇ ಪು: XII
೧೨. ಅದೇ ಪು: XI
೧೩. ಅದೇ ಪು: XI
೧೪. ಅದೇ ಪು: X
೧೫. ನೋಡಿ : 'ವೀರಶೈವ ತತ್ವಾರ್ಥ ವಿವೇಚನೆ' ಡಾ. ಬಿ.ವ್ಹಿ. ಮಲ್ಲಾಪುರ (೧೯೮೭). ಪು. ೭೦–೭೪
೧೬. ನೋಡಿ : 'ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ' –ಮೋ.ಕ.ಗಾಂಧಿ (೧೯೫೮), ಪು : ೧೧೯
೧೭. ಅದೇ ಪು: ೧೨೩
೧೮. 'ಸತ್ಯಾಗ್ರಹ' ಮೋ.ಕ. ಗಾಂಧಿ, (೧೯೫೯), ಪು: ೭೨, ಇವಲ್ಲದೆ ಈ ಮುಂದಿನ ಗ್ರಂಥಗಳ ನೆರವನ್ನೂ ಪಡೆದುಕೊಳ್ಳಲಾಗಿದೆ.
–ಸರ್ವೋದಯ–ಮೋ.ಕ.ಗಾಂಧಿ, ಪ್ರ. ಗಾಂಧಿಸ್ಮಾರಕ ನಿಧಿ, ಮೈಸೂರು.

–ಮಾನವನಿಷ್ಠೆ ಸರ್ವೋದಯ ಕ್ರಾಂತಿ–ದಾದಾ ಧರ್ಮಾಧಿಕಾರಿ, ಅನು. ಸಿದ್ದವ್ವನಹಳ್ಳಿ ಕೃಷ್ಣಶರ್ಮ, ಪ್ರ: ಗಾಂಧಿಸ್ಮಾರಕ ನಿಧಿ, ಬೆಂಗಳೂರು (೧೯೬೩).
–ಬಸವೇಶ್ವರ ಗಾಂಧೀಜಿ–ಡಾ. ಎಚ್.ತಿಪ್ಪೇರುದ್ರಸ್ವಾಮಿ, ಪ್ರ. ಬಸವೇಶ್ವರಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (೧೯೮೩).
–ಬಸವೇಶ್ವರ–ಡಾ. ಬಿ.ಬಿ.ಹೆಂಡಿ, ಪ್ರ. ಬಸವೇಶ್ವರಪೀಠ, ಕ.ವಿ.ವಿ. ಧಾರವಾಡ (೧೯೮).

❐

ಬಸವ : ಗಾಂಧೀ

●

ನೀಲತ್ತಹಳ್ಳಿ ಕಸ್ತೂರಿ

ಜಗತ್ತಿನಲ್ಲಿ ಸಂಕಟದ ಸ್ಥಿತಿ ಉಂಟಾಗಿ, ಎಲ್ಲೆಲ್ಲು, ಕತ್ತಲೆ ಕವಿದಿರುವಾಗ, ಯಾವುದೋ ಮೂಲೆಯಿಂದ, ಯಾವುದೋ ರೂಪದಲ್ಲಿ ಒಂದು ಬೆಳಕಿನ ಎಳೆ ಮೂಡಿ ಬರುವುದು, ಒಂದು ಭರವಸೆಯ ಕುಡಿ ಮಿಂಚುವುದು, ಜಗತ್ತನ್ನು ಪತನದ ಅಂಚಿನಿಂದ ಹಿಂದಕ್ಕೆ ಎಳೆದುಕೊಂಡು ಕಾಪಾಡುವುದು ಇತಿಹಾಸದ ಅನೇಕ ಘಟ್ಟಗಳಲ್ಲಿ ಕಾಣಸಿಗುವ ಸಂಗತಿ. ವಿಚಾರದ ರೂಪದಲ್ಲಿಯೋ ವ್ಯಕ್ತಿಯ ರೂಪದಲ್ಲಿಯೋ, ಶಕ್ತಿಯ ಆವಿರ್ಭಾವವಾಗಿ ಜಗತ್ತು ನಾಶದಿಂದ ಪಾರಾಗುವುದು ಕಾಣಸಿಗುತ್ತದೆ. ಆಯಾ ಯುಗಕ್ಕೆ ಆಯಾ ಪರಿಸ್ಥಿತಿಗೆ ಅಗತ್ಯಕ್ಕೆ ತಕ್ಕಂತೆ ನಾನಾ ರೂಪಗಳಲ್ಲಿ ಲೋಕಕಾರಕಶಕ್ತಿ ಮೂಡಿಬಂದು ತನ್ನ ಕೆಲಸ ಮಾಡಿದೆ. ಕೆಡುಕನ್ನು ಹಿಂದಕ್ಕೆ ಸರಿಸಿ, ಒಳಿತನ್ನು ಮತ್ತೆ ಎತ್ತಿ ಹಿಡಿದಿದೆ. ಅವತಾರ ಕಲ್ಪನೆಯ ತತ್ತ್ವವೇ ಇದು.

ವಿಶ್ವದ ಮಹಾವ್ಯಕ್ತಿಗಳು ಅಂಥ ಧರ್ಮ ಸಂಗೋಪನಾಕಾರ್ಯವನ್ನು ಆಗಿಂದಾಗ್ಗೆ ಮಾಡಿದ್ದಾರೆ. ಅವರದೊಂದು ಅವಿಚ್ಛಿನ್ನ ಪರಂಪರೆ, ವಿಚಾರಪರಂಪರೆ, ವ್ಯಕ್ತಿ ಪರಂಪರೆ. ವೇದಕಾಲದ ತತ್ವಗಳು ಕಾಲಕ್ರಮೇಣ ಜಡ್ಡುಹಿಡಿದು ಯಜ್ಞ ಯಾಗಾದಿಗಳ ಕರ್ಮಠತನ ಮಿತಿಮೀರಿ ಪ್ರಾಣಬಲಿ, ಇತ್ಯಾದಿಗಳೇ ಧರ್ಮದ ಸೋಗಿನಲ್ಲಿ ಮೆರೆಯಲಾರಂಭಿಸಿದಾಗ ಬುದ್ಧಮಹಾವೀರರು ಬಂದರು. ಹಿಂಸೆ ಅಸಮತೆಗಳ ದುರ್ನಾತವನ್ನು ದೂರಮಾಡಿದರು. ಅದೇ ಬೌದ್ಧಾದಿ ವಿಚಾರಗಳೇ ಮತ್ತೆ ಜಡ್ಡುಗಟ್ಟಿ ವಿಕಾರಗೊಂಡು, ಅಪಸ್ವರ ಎದ್ದಾಗ, ವೇದಾಂತದ ಸುಸ್ವರ ನಿನಾದವನ್ನು ಶಂಕರಾ ಚಾರ್ಯರು ಮೊಳಗಿಸಿದರು. ಅದ್ವೈತವೂ ಎತ್ತೆತ್ತಲೋ ಸಾಗಿ, ನಾನೇ ಬ್ರಹ್ಮ ಎಂಬ ಮಾತು ಅಹಂಭಾವನ್ನು ಅತಿಯಾಗಿಸಿದಾಗ, ದೇವರ ಹಿರಿಮೆಯನ್ನೂ ಎತ್ತಿತೋರಿ, ಭಕ್ತಿ–ಶರಣಾಗತಿಗಳ ನಮ್ರತೆಯನ್ನು ನೆಲೆಗೊಳಿಸುವ ರಾಮಾನುಜ–ಮಧ್ವರು ಬಂದರು, ಹೀಗೆಯೇ ಮುಂದೆ ಭಕ್ತಿಪಂಥ ಬಂತು. ಸಮಾಜದ ಸುಸ್ಥಿತಿಯನ್ನು ಸಾಧಿಸಿತು. ಕರ್ನಾಟಕದಲ್ಲಿ ಶರಣಪರಂಪರೆ ಹುಟ್ಟಿ ವಿಶಿಷ್ಟವಾದ ತತ್ವಪ್ರಣಾಲಿಯನ್ನು, ಜೀವನಸಿದ್ಧಾಂತವನ್ನು ಬೆಳಗಿ ತೋರಿತು. ೧೯ನೆಯ ಶತಮಾನದಲ್ಲಿ ಅಗತ್ಯವಾಗಿದ್ದ ಧರ್ಮಸಮನ್ವಯವನ್ನು ಸಾಧಿಸಿ ತೋರಿಸಿದವರು ಶ್ರೀ ರಾಮಕೃಷ್ಣ ಪರಮಹಂಸರು ಅನಂತರ ಶ್ರೀ ಅರವಿಂದರು.

ಹೀಗೆ ಮಹಾವ್ಯಕ್ತಿ ಅಥವಾ ಮಹಾಸತ್ವರದು ಒಂದು ಸರಪಳಿ, ಒಂದು ಪರಂಪರೆ, ಗಂಗಾಪ್ರವಾಹ, ಅವರುಗಳಲ್ಲಿ ತೋರಿಕೆಗೆ ಕೆಲವು ವ್ಯತ್ಯಾಸ ಕಾಣಿಸಬಹುದು. ವಿಚಾರದಲ್ಲಿ ಹಾಗೂ ಆಚಾರಕ್ರಮಗಳಲ್ಲಿ ಭೇದ ಕಾಣಿಸಬಹುದು. ಆದರೆ ಆ ಭಿನ್ನತೆ ಕಾಲ ದೇಶ ವರ್ತಮಾನ ಪರಿಸ್ಥಿತಿಗಳ ಹಿನ್ನೆಲೆಯ ನಿಮಿತ್ತವೇ ವಿನಾ ಮೂಲಭೂತ ಉದ್ದೇಶದಲ್ಲಿ ಅಲ್ಲ ಎನಿಸುತ್ತದೆ. ಎಲ್ಲ ಮಹಾಸತ್ವರ ಗುರಿಯೂ ಒಂದೇ ಲೋಕಕಲ್ಯಾಣ. ಅವರವರು ಅವರವರ ದೃಷ್ಟಿಯಂತೆ, ಕಾಲ ದೇಶಗಳ ಹಿನ್ನೆಲೆಯಂತೆ, ಭಿನ್ನ ಭಿನ್ನ ವಿಚಾರಗಳನ್ನೊ ಆಚಾರಗಳನ್ನೊ ಪ್ರತಿಪಾದಿಸಿರಬಹುದಷ್ಟೆ.

ಮಹಾವ್ಯಕ್ತಿಗಳನ್ನು ಹೋಲಿಸುವಾಗ ಈ ಹಿನ್ನೆಲೆ ಅಗತ್ಯ. ಬಸವಣ್ಣನವರು ಎಂಟುನೂರು ವರ್ಷಗಳ ಹಿಂದೆ ಇದ್ದವರು. ಸಾಮಾಜಿಕ, ಧಾರ್ಮಿಕ, ರಾಜಕೀಯ ಪರಿಸ್ಥಿತಿ ಬೇರೆ ಆ ಹಿನ್ನೆಲೆಯಲ್ಲಿ ಅಣ್ಣನವರ ಸಾಧನೆಯನ್ನು ಪರಿಶೀಲಿಸಬೇಕು. ಗಾಂಧೀಜಿ ನಮ್ಮ ಕಾಲದವರು. ಇಂದಿನ ಹಿನ್ನೆಲೆ ಬೇರೆ. ಸಾಮಾಜಿಕ ಸ್ಥಿತಿ ಬೇರೆ ಅಗತ್ಯಗಳು ಬೇರೆ. ಈ ಹಿನ್ನೆಲೆಯಲ್ಲಿ ಗಾಂಧಿಯವರ ಮಾರ್ಗ, ಅವರ ಸಾಧನೆ ತುಸು ಬೇರೆಯಾಗಿ ಕಂಡರೆ ಸಹಜವೇ. ಆದರೆ ಈ ಇಬ್ಬರ ಜೀವನ ಸಿದ್ಧಾಂತಗಳಲ್ಲೂ ಸಾಧನೆಗಳಲ್ಲೂ ಅನೇಕ ಸಾಮ್ಯಗಳು ಇರುವದು ಬೆರಗುಗೊಳಿಸುವ ವಾಸ್ತವ ಸಂಗತಿ. ಎಂಟನೂರು ವರ್ಷಗಳ ಅಂತರವನ್ನು ಮೀರುವಂಥದು. ಇದಕ್ಕೆ ಕಾರಣ ಇಬ್ಬರೂ ಒಂದೇ ವಿಚಾರದಿಂದ ಪ್ರಚೋದಿತರಾದರು. ಇಬ್ಬರ ಬಾಳಗುರಿ ಒಂದೇ ಲೋಕಕಲ್ಯಾಣ. ಪ್ರತಿಯೊಬ್ಬರ ಕಣ್ಣೀರನ್ನು ಒರೆಸುವುದು (To wipe out every tear from every eye Gandhiji) ಹಾಗೂ ತನ್ಮೂಲಕ ದೈವದ ಸಾಕ್ಷಾತ್ಕಾರ.

ಹುಟ್ಟು-ಸಾವು ನಮ್ಮ ಕೈಯಲಿಲ್ಲ, ಅದನ್ನು ಕೈವಶ ಮಾಡಿಕೊಳ್ಳಲು ವಿಜ್ಞಾನ ಬೇಕಾದಷ್ಟು ಹವಣಿಸಿದೆ ನಿಜ. ಆದರೆ ಅದು ಇನ್ನು ಕರಗತ ಆಗಿಲ್ಲ. ಆದರೆ ಬದುಕು ಇರುವದು ನಮ್ಮ ಕೈಯಲ್ಲಿದೆ. ಈ ಬದುಕು ಹೇಗಿರಬೇಕು? ಇದು ಲೋಕದ ಮುಂದೆ ಇರುವ ಚಿರಂತನ ಪ್ರಶ್ನೆ. ಇಲ್ಲಿ ಮಹಾವ್ಯಕ್ತಿಗಳನ್ನು ಕೆಣಕಿರುವ ಪ್ರಶ್ನೆ. ಅವರವರು ತಮ್ಮ ತಮ್ಮ ದೃಷ್ಟಿಗೆ ಕಂಡಂತೆ ಉತ್ತರಗಳನ್ನು ಪಡೆದುಕೊಳ್ಳಲು ಹೆಣಗಿದ್ದಾರೆ. ತಾವು ಕಂಡುಕೊಂಡ ಉತ್ತರಗಳನ್ನು ನಮಗೆ ತಿಳಿಸಿ ಹೋಗಿದ್ದಾರೆ.

ಬಸವಣ್ಣನವರು ಹಾಗೆ ಬದುಕಿನ ಪ್ರಶ್ನೆಗೆ ತಾವು ಕಂಡುಕೊಂಡ ಉತ್ತರವನ್ನು ತಮ್ಮ ವಚನಗಳಲ್ಲಿ ಹೇಳಿದ್ದಾರೆ. ತಮ್ಮ ಬದುಕಿನಲ್ಲಿ ಅದರಂತೆ ಬಾಳಿದ್ದಾರೆ. ಎಂಟುನೂರು ವರ್ಷಗಳ ನಂತರ ಇದ್ದ ಗಾಂಧೀಜಿ ತಾವು ಕಂಡುಕೊಂಡ ಉತ್ತರವನ್ನು ನಮಗೆ ತಿಳಿಸಿದ್ದಾರೆ. ತಮ್ಮ ಬಾಳನ್ನೇ ಪ್ರಯೋಗಶಾಲೆ ಮಾಡಿಕೊಂಡು ನಮ್ಮೆಲ್ಲರಿಗೂ ಅದರಲ್ಲಿ ಪ್ರವೇಶವನ್ನು ಕಲ್ಪಿಸಿಕೊಟ್ಟಿದ್ದಾರೆ.

ಹೀಗಾಗಿ ಬಸವಣ್ಣ-ಗಾಂಧೀಜಿಯವರ ಜೀವಿತಗಳಲ್ಲಿ ಎದ್ದು ಕಾಣುವ ಸಾದೃಶ್ಯಗಳನ್ನು ಕಂಡು ಸಮನ್ವಯವನ್ನು ಸಾಧಿಸುವುದು ಸಾರ್ಥಕಕಾರ್ಯ ಎಂದು ಬಗೆಯುತ್ತೇನೆ. ಇಬ್ಬರು ಮಹಾವ್ಯಕ್ತಿಗಳನ್ನು ತೂಗಿ ಅಳೆದು, ಇವನು ಒಂದು ಗುಂಜಿ ಹೆಚ್ಚು, ಇವನು ಕಡಿಮೆ ಎಂದೆಂಬ ಧೋರಣೆ ನನ್ನದಲ್ಲ. ವ್ಯತ್ಯಾಸ ಅಂತರವಿರಬಹುದು. ಬಾಧೆಯಿಲ್ಲ. ಅವರವರ ಉದ್ದೇಶ ಏನು, ಆ ಉದ್ದೇಶ ಸಾಧನೆಗೆ ಅವರು ಹಿಡಿದ ದಾರಿ ಎಂಥದು, ಆ ದಾರಿಯಲ್ಲಿ ಎಷ್ಟೆಷ್ಟು ಸಾಗಿದರು ಹೇಗೆ ಸಾಗಿದರು ಎನ್ನುವುದು ಮಾತ್ರ ನನಗೆ ಮುಖ್ಯ ಸಂಗತಿ ಎಂದರೆ ತಪ್ಪಾಗಲಾರದು.

ಈ ಹಿನ್ನೆಲೆಯಲ್ಲಿ ಬಸವಣ್ಣ ಹಾಗೂ ಗಾಂಧೀಜಿ ಅವರುಗಳ ಬಗ್ಗೆ ಕೊಂಚ ವಿಚಾರ ಮಾಡಬಹುದು.

ಬಸವಣ್ಣ ಇದ್ದದ್ದು ೧೨ನೆಯ ಶತಮಾನದಲ್ಲಿ. ಅಂದಿನ ಭಾರತ ಇಂದಿನ ಹಾಗೆ ಇರಲಿಲ್ಲ. ಅದು ವಿದೇಶೀ ಆಡಳಿತದಲ್ಲಿ ಇರಲಿಲ್ಲ. ಇಲ್ಲಿನವರೇ ಆಳುತ್ತಿದ್ದರು. ಇಂದು ಭೌಗೋಳಿಕವಾಗಿ ಒಂದು ಎಂದು ಚಿತ್ರಿಸಲಾಗಿರುವ ಭಾರತ ಅಂದು ಸ್ವಲ್ಪ ಬೇರೆ ಆಗಿತ್ತು. ಹಿಮಾಲಯದಿಂದ ದಕ್ಷಿಣ ಸಮುದ್ರದವರೆಗಿನ ನಾಡು ಭಾರತ ಎನಿಸಿಕೊಂಡಿತ್ತಾದರೂ ಆ ವಿಶಾಲ ಪ್ರದೇಶ ಭೂಖಂಡ ಒಂದೇ ರಾಜಕೀಯ ಘಟಕ ಆಗಿರಲಿಲ್ಲ. ಹಲವು ರಾಜ್ಯಗಳಲ್ಲಿ ಹರಡಿತ್ತು. ಹಿಂದೆ ಎಂದೋ ಗ್ರೀಕರೊ ಹೂಣರೊ ಶಕರೊ ಅನಂತರ ಮಹಮದೀಯರೋ ಇಲ್ಲಿಗೆ ದಂಡಯಾತ್ರೆ ಬಂದಿದ್ದರಾದರೂ ಅವರೇನು ಇಲ್ಲಿನ ವ್ಯವಸ್ಥೆಯನ್ನು, ಸಮಾಜವನ್ನು ಛಿದ್ರಗೊಳಿಸಿರಲಿಲ್ಲ. ಅಲ್ಪಸ್ವಲ್ಪ ಪ್ರಭಾವದ ಹೊರತಾಗಿ ಭಾರತದ ಬದುಕು ಹಿಂದಿನಿಂತೆಯೆ ಸಾಗಿತ್ತು. ಇಲ್ಲಿನ ಗ್ರಾಮಜೀವನ, ನ್ಯಾಯವ್ಯವಸ್ಥೆ, ಅರಸೊತ್ತಿಗೆ, ಸೀಮಿತ ಗುರುಕುಲ ಪದ್ಧತಿಯ ಶಿಕ್ಷಣ, ವರ್ಣಾಶ್ರಮ ವ್ಯವಸ್ಥೆ, ಇಲ್ಲಿನ ಚಿಂತನೆ, ವಿಚಾರ, ನಂಬಿಕೆ, ಮೌಢ್ಯರಾಗಾದಿ ಪ್ರವೃತ್ತಿಗಳು ಇಲ್ಲಿನ ಆಧ್ಯಾತ್ಮಪರತೆ ಎಲ್ಲ ಹೆಚ್ಚುಕಡಿಮೆ ಧಾರೆಯಾಗಿ ಹರಿದು ಬರುತ್ತಿದ್ದ ಕಾಲ.

ಬಸವಣ್ಣನವರ ಕಾರ್ಯಕ್ಷೇತ್ರ ಕರ್ನಾಟಕಕ್ಕೆ ಸೀಮಿತ. ಪ್ರಾಯಶಃ ಅಂದಿನ ಸಂಪರ್ಕದ ಅಭಾರ ಇರಬಹುದು. ಆದರೂ ಬುದ್ಧ ಮಹಾವೀರರಂತೆ ಅಥವಾ ಶಂಕರಾಚಾರ್ಯರಂತೆ ಬಸವಣ್ಣನವರು ದೂರದೂರ ಓಡಾಡಿದ ಪ್ರಸ್ತಾಪ ಇಲ್ಲ. ಅವರು ಚಾಲುಕ್ಯರಾಜರಲ್ಲಿ ನೌಕರಿಗೆ ಇರಬೇಕಾದುದೂ ಕಾರಣ ಇರಬಹುದು. ಆದರೇನು? ಅವರ ವಿಚಾರಗಳು ಭಾರತದಲ್ಲಿ ದೂರದೂರಕ್ಕೆ ಹಬ್ಬಿದ್ದುದು ಸ್ಪಷ್ಟ. ಕಳಿಂಗದಿಂದ ಕಾಶ್ಮೀರದಿಂದ, ಗುಜರಾತಿನಿಂದ ಬಂದವರು ಅಣ್ಣನವರ ಅನುಭವ ಮಂಟಪದಲ್ಲಿ ಇದ್ದುದೇ ಇದಕ್ಕೆ ಸಾಕ್ಷಿ. ಉದಾಹರಣೆಗೆ ಸೌರಾಷ್ಟ್ರದ ಆದಯ್ಯ, ಕಾಶ್ಮೀರದ ಮೋಳಿಗೆ ಮಾರಯ್ಯ ಇತ್ಯಾದಿ.

ಹೀಗೆ ರಾಜಕೀಯವಾಗಿ ಐಕ್ಯತೆ ಇಲ್ಲದಿದ್ದರೂ ವೈಚಾರಿಕವಾಗಿ, ಸಾಂಸ್ಕೃತಿಕವಾಗಿ ಮೇಲಾಗಿ ಆಧ್ಯಾತ್ಮಿಕವಾಗಿ ಒಂದುತನದ ಎಳೆ ಇಡೀ ಭಾರತದ ಭೂಖಂಡದಲ್ಲಿ ಕಂಡೂ ಕಾಣದಂತೆ ಇತ್ತು. ಇಂದಿಗೂ ಇದೆ.

ಇನ್ನೊಂದು ಅಂದಿನ ಸ್ಥಿತಿ ಎಂದರೆ ಆರ್ಥಿಕವಾಗಿ. ಆಗ ಸಾಮಾನ್ಯವಾಗಿ ಇದ್ದದ್ದು ಗ್ರಾಮ ಕೈಗಾರಿಕಾ ವ್ಯವಸ್ಥೆ. ಪಶ್ಚಿಮ ಜಗತ್ತಿನಲ್ಲಿ ಕೈಗಾರಿಕಾಕ್ರಾಂತಿ ಇನ್ನೂ ಆಗಿರಲಿಲ್ಲ. ಅಭಿವೃದ್ಧಿಯ ಮುಂಚೂಣಿಯಲ್ಲಿರುವ ಎಷ್ಟೋ ಪಾಶ್ಚಿಮಾತ್ಯ ರಾಷ್ಟ್ರಗಳು ಅಂದು ನಾಗರಿಕ ಸ್ಥಿತಿಯಲ್ಲೊ ಮೌಢ್ಯದಲ್ಲೊ ಗುಲಾಮಗಿರಿಯಲ್ಲೊ ಗುಟುಕು ಜೀವ ಹಿಡಿದುಕೊಂಡಿದ್ದವು. ಭಾರತ ವಾದರೂ ಕೃಷಿ ವಾಣಿಜ್ಯಗಳಲ್ಲಿ ಲೋಹ ಜವಳಿ ಉದ್ಯಮಗಳಲ್ಲಿ ಕರಕುಶಲ ಉದ್ಯಮಗಳಲ್ಲಿ ಶ್ರೇಷ್ಠಮಟ್ಟವನ್ನು ಸಾಧಿಸಿತ್ತು. ಇಂದು ವಿಶೇಷವಾಗಿ ಬೆಳೆದು; ಸಾಮ್ರಾಜ್ಯವಾದ ಬಂಡವಾಳಶಾಹಿ ಕೇಂದ್ರಿಕೃತ ಸತ್ತೆ ಸೊತ್ತುಗಳ ವ್ಯವಸ್ಥೆಗಳಿಗೆಲ್ಲ ಅಪಾರವಾದ ಇಂಬುಕೊಟ್ಟ ಕೇಡಿನ ಕೈಯನ್ನು ಬಲಪಡಿಸಲು ಜೋಡಣೆಯಾಗಿರುವ ವಿಜ್ಞಾನ–ತಂತ್ರಜ್ಞಾನ ಅಂದು ಈ ರೀತಿ ಇರಲಿಲ್ಲ. ಹಾಗಾಗಿ ಅಂದು ಬಸವಣ್ಣನವರ ಮುಂದೆ ಸವಾಲುಗಳು ಗಾಂಧೀಜಿ ಎದುರಿಸಿದ ಸವಾಲುಗಳಷ್ಟು ವ್ಯಾಪಕವಾಗಿರಲಿಲ್ಲ. ವಿವಿಧ ಬಗೆಯದೂ ಆಗಿರಲಿಲ್ಲ.

ಪ್ರಧಾನವಾಗಿ ಅಂದು ಅಣ್ಣನವರು ಎದುರಿಸಬೇಕಾಗಿದ್ದ ಪ್ರಶ್ನೆಗಳು ಧಾರ್ಮಿಕ ಹಾಗೂ

ಸಾಮಾಜಿಕ. ಧಾರ್ಮಿಕದಲ್ಲಿ ಒಂದು ಬಗೆ ವೈಯಕ್ತಿಕ ಜೀವಾತ್ಮಕ್ಕೆ ಸಂಬಂಧಿಸಿದ್ದು ವ್ಯಕ್ತಿಯ ಆತ್ಮೋನ್ನತಿ ಮೋಕ್ಷಗಳಿಗೆ ಸಂಬಂಧಿಸಿದ್ದು. ಅದರ ಸಾಧನೆಗೆ ಅಡ್ಡಬರುವ ರಾಗದ್ವೇಷಾದಿ ಷಡ್ವರ್ಗಗಳ ಸವಾಲೇ ಪ್ರಧಾನ. ಅದು ಮನುಕುಲದ ಆದಿಯಿಂದ ಬಂದದು. ಇಂದಿಗೂ ಉಳಿದೇ ಇದೆ. ರಾಗದ್ವೇಷಾಧಿಗಳ ನಿಯಂತ್ರಣದ ಮಹಾಪ್ರಯತ್ನವೇ ಮನುಜನ ಅಖಂಡ ಇತಿಹಾಸವಾಗಿದೆ.

ಎರಡನೆಯ ಬಗೆ ಸಮಾಜದಲ್ಲಿ ಧರ್ಮ–ಅಧ್ಯಾತ್ಮದ ಸ್ಥಾನ ಕುರಿತದ್ದು, ವ್ಯಕ್ತಿಯ ಉನ್ನತಿ ಮೋಕ್ಷ ಅಷ್ಟೇ ಸಾಲದು ಸಮಾಜ ಅಥವಾ ಸಮೂಹದ ಸ್ಥಿತಿಯೂ ಉತ್ತಮವಾಗಬೇಕು ಎನ್ನುವುದೂ, ಮನುಕುಲದ ಇತಿಹಾಸವೇ ಸಮಾಜಕ್ಕೆ ತಕ್ಕುದಾದ ಧಾರ್ಮಿಕ ವ್ಯವಸ್ಥೆ ಏನು, ರೂಪರೇಷೆ ಏನು? ಹಿಂದಿನಿಂದ ಬಂದದ್ದು ವರ್ಣಾಶ್ರಮ ವ್ಯವಸ್ಥೆ, ಮೂಲದಲ್ಲಿ ವರ್ಣ ವ್ಯವಸ್ಥೆ 'ಗುಣಕರ್ಮ ವಿಭಾಗಶಃ' ಆಗಿದ್ದಿರಬಹುದು. ಕರ್ಮ ವಿಭಜನೆಯ ಉದ್ದೇಶದಿಂದ ಮೊದಲಾಗಿದ್ದಿರಬಹುದು. ಸಂಘರ್ಷರಹಿತ ಸಮನ್ವಯಪೂರ್ಣ ಸಮಾಜದ ಸುಸ್ಥಿತಿಗೆ ಸಾಧುವಾದ ವ್ಯವಸ್ಥೆಯಾಗಿ 'ವರ್ಣ' ರೂಪಿತವಾಗಿದ್ದರಬಹುದು. ಆದರೆ ಬರಬರುತ್ತ ಮೂಲಕಲ್ಪನೆ ಮಂಕು ಹಿಡಿದು ಮೇಲುಕೀಳು ಭಾವನೆ ಬೆಳೆದು, ಒಂದು ಕಾಲಕ್ಕೆ ಒಳ್ಳೆಯದೇ ಎನಿಸಿಕೊಂಡಿದ್ದ ವ್ಯವಸ್ಥೆ ಕ್ರಮವಾಗಿ ಒಂದು ಸಾಮಾಜಿಕ ಪಿಡುಗೇ ಆದದ್ದನ್ನು ನಮ್ಮ ಇತಿಹಾಸ ತೋರಿಸುತ್ತದೆ. ಜಾತಿ ಉಪಜಾತಿಗಳ ಗೊಂದಲ ಭೇದಗಳಿಂದ ಮಾಡಿದ ಅನೈಕ್ಯತೆ, ಬಹುಸಂಖ್ಯಾ ಜನತೆಯ ಹಿನ್ನಡೆ, ಕೆಲವೇ ಜನರ ಪ್ರಾಧಾನ್ಯದಿಂದಾದ ಸಮಾಜಿಕ ಅಸಮತೆ, ಹೆಪ್ಪುಗಟ್ಟಿದ ವ್ಯತ್ಯಾಸಗಳು, ಮೌಢ್ಯಗಳು ದಾಸ್ಯ ಶೋಷಣೆ ಇವೆಲ್ಲದರಿಂದ ಸಮಾಜ ಅಸ್ವಸ್ಥವಾಗಿತ್ತು. ಬಸವಣ್ಣನವರ ಕ್ರಾಂತಿಚೇತನ ಇದೆಲ್ಲಕ್ಕೂ ಪ್ರತಿಸ್ಪಂಧಿಸಿತು.

ವೈಯಕ್ತಿಕ ಶುದ್ಧಿಗಾಗಿ, ವ್ಯಕ್ತಿಗತ ಮುನ್ನಡೆಯಾಗಿ, ಆತ್ಮದ ಅನಿರ್ಬಂಧಿತ ಉತ್ಥಾನಕ್ಕಾಗಿ ಅಣ್ಣನವರು ಏನೇನು ಸಾಧನೆ ನಡೆಸಿದರು, ಏನೇನು ಅನುಭವಗಳನ್ನು ಚಿಂತನೆಗಳನ್ನು ತಮ್ಮ ವಚನಗಳಲ್ಲಿ ಬಣ್ಣಿಸಿದರು ಎನ್ನುವುದು ನಿಚ್ಚಳವಾಗಿ ಕಾಣ ಬರುವಂತದು, ಜೊತೆ ಜೊತೆಗೇ ಅವರು ಮೇಲೆ ಹೇಳಿದಂಥ ಸಾಮಾಜಿಕ ಅನಾಚಾರಗಳ ವಿರುದ್ಧ ಎಂಥ ಹೋರಾಟ ನಡೆಸಿದರು ಎನ್ನುವುದು ಅವರ ವಚನಗಳಲ್ಲಿ ಒಡೆದು ಮೂಡಿದೆ.

ಈ ಮೂಲಭೂತ ನೈತಿಕ–ಆಧ್ಯಾತ್ಮಿಕ ಸಮಸ್ಯೆಗಳು ಗಾಂಧೀಜಿಯ ಕಾಲದಲ್ಲೂ ಇದ್ದೇ ಇದ್ದವು, ಈಗಲೂ ಇವೆ. ವೈಯಕ್ತಿಕವಾಗಿ ಗಾಂಧೀಜಿ ಕ್ಷಣಕ್ಷಣಕ್ಕೂ ಅಸತ್ಯದ ವಿರುದ್ಧ ಸೆಣಸಿದರು. ಸತ್ಯವನ್ನೇ ದೇವರು ಎಂದು ಭಾವಿಸಿ, ಆ ಸತ್ಯದ ಸಾಕ್ಷಾತ್ಕಾರಕ್ಕಾಗಿ ಅನವರತ ಶ್ರಮಿಸಿದರು. I want to see good face to face ಎನ್ನುವುದು ಅವರದೊಂದು ಹಿರಿಯಾಸೆ. ತಮ್ಮ ಬದುಕಿನಲ್ಲೇ ಅಸತ್ಯ ರಾಗದ್ವೇಷಗಳು ಕಾಮ ಕ್ರೋದಾಧಿಗಳು ಮುಂತಾದ ಕೊಳೆಗಳನ್ನು ತೆಗೆದು ಹಾಕಿ, ಚೈತನ್ಯವನ್ನು ಬೆಳಗಿಸಿಕೊಳ್ಳಲು ನಿರಂತರ ಸಾಧನೆ ಮಾಡಿದರು. ಅವರ ಆಶ್ರಮ ದಿನದಿನದ ಪ್ರಾರ್ಥನೆ;

> **"ಅಹಿಂಸಾ ಸತ್ಯ ಅಸ್ತೇಯ ಬ್ರಹ್ಮಚರ್ಯ**
> **ಅಸಂಗ್ರಹ ಶರೀರಶ್ರಮ ಅಸ್ವಾದ ಸರ್ವತ್ರ ಭಯವರ್ಜನ**
> **ಸರ್ವಧರ್ಮೀ ಸಮಾನತ್ವ ಸ್ವದೇಶೀ ಸ್ಪರ್ಶಭಾವನಾ**
> **ಹೀ ಏಕಾದಶ ಸೇವಾವಿ ನಮ್ರತ್ವೇ ವ್ರತನಿಶ್ಚಯೇ"**

ಇದರಲ್ಲಿ ಮೊದಲು ಐದು ಅಹಿಂಸಾ, ಸತ್ಯ, ಅಸ್ತೇಯ (ಕದಿಯದಿರುವುದು), ಬ್ರಹ್ಮಚರ್ಯ, ಅಸಂಗ್ರಹ ಇವು 'ನಮ್ಮ ನಾಡಿನಲ್ಲಿ ಹಿಂದಿನಿಂದ ಬಂದವೇ, ಹಿಂದೂ ಜೈನ, ಬೌದ್ಧ ಎಲ್ಲದರಲ್ಲೂ ಇದ್ದವೇ. ಉಳಿದ ಆರು ಶರೀರ ಶ್ರಮ, ಅಸ್ವಾದ, ಸರ್ವತ್ರ ಭಯವರ್ಜನ, ಸವಾ–ಶಮಾ–ಸಮಾನತೆ, ಸ್ವದೇಶಿ ಹಾಗೂ ಸ್ಪರ್ಶಭಾವನೆ ಈ ಯುಗದ ಅಗತ್ಯವನ್ನು ಬಿಂಬಿಸುವಂಥವು. ಇವು ವ್ಯಕ್ತಿಗೆ ಹೇಗೊ ಸಮಾಜಕ್ಕೂ ಅನ್ವಯಿಸುವಂಥವು. ವಾಸ್ತವವಾಗಿ ವ್ಯಕ್ತಿ–ಸಮಾಜಗಳಲ್ಲಿ ಅಡ್ಡಗೋಡೆ ಕಟ್ಟಲಿಲ್ಲ. ಗಾಂಧೀಜಿ ವ್ಯಕ್ತಿಗತ ಮೌಲ್ಯಗಳು ಅಹಿಂಸೆ ಸತ್ಯ, ಬ್ರಹ್ಮಚರ್ಯ ಇವುಗಳೂ ಸಾಮೂಹಿಕವಾಗಿ ಸಮಾಜಕ್ಕೂ ಸಂಗತ ಎಂದೇ ನಂಬಿದ್ದರು. ಇದಕ್ಕೆ ಬಲವಾದ ಸಮರ್ಥನೆ ಅವರಿಗೆ ದೊರೆತದ್ದು ರಸ್ಕಿನ್ನನ Unto this Last ಕೃತಿಯಿಂದ ವ್ಯಕ್ತಿಯ ಹಿತ ಸಮಾಜದ ಹಿತದಲ್ಲಿ ಎಂಬ ಮಾತಿನಿಂದ ವೈಯಕ್ತಿಕವಾಗಿ ಪ್ರಸ್ತಾಪಿತವಾಗಿದ್ದ ಅಹಿಂಸೆಯನ್ನು ಸಮಾಜಕ್ಕೂ ವಿಸ್ತರಿಸುವ ಪ್ರಯತ್ನ ಅಶೋಕನ ಕಾಲದಲ್ಲೂ ನಡೆದಿತ್ತು. ಅದನ್ನೇ ಮುಂದುವರಿಸಿ ಇಡೀ ಜನಾಂಗವೇ ಇನ್ನೊಂದು ಜನಾಂಗದ ದಾಸ್ಯದಿಂದ ಬಿಡಿಸಿಕೊಳ್ಳಲು, ಸಾಮೂಹಿಕ ಚಳವಳಿಗೆ ಸಾಧನ ಮಾರ್ಗವಾಗಿ ಅಹಿಂಸೆಯನ್ನು ಆಚರಿಸುವಂಥ ವಿಸ್ಮಯಕರ ಬೆಳವಣಿಗೆ ಕಂಡದ್ದು ಗಾಂಧೀ ಯುಗದಲ್ಲಿ.

ಈ ಹನ್ನೊಂದು ಮೌಲ್ಯಗಳಲ್ಲಿ ಬಹುಪಾಲು ಬಸವಣ್ಣನವರಿಗೂ ದಾರಿ ದೀಪ ವಾಗಿದ್ದವೇ. 'ದಯೆಯಿಲ್ಲದ ಧರ್ಮ ಯಾವುದಯ್ಯಾ, ದಯಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ, 'ಕಳಬೇಡ ಕೊಲಬೇಡ' ಎನ್ನುವುದು ಅಹಿಂಸೆಯಲ್ಲದೆ ಮತ್ತೇನು? ಸತ್ಯಂ ಶಿವಂ ಸುಂದರಂ ಎನ್ನುವುದು ಭಾರತದಲ್ಲಿ ಅನೂಚಾನವಾಗಿ ಬೆಳೆದು ಬಂದ ಆದರ್ಶ. ಇದರಲ್ಲಿ ಬಸವಣ್ಣನವರು 'ಶಿವ'ನನ್ನು ಭದ್ರವಾಗಿ ಹಿಡಿದುಕೊಂಡರು. ಗಾಂಧೀಜಿಯಾದರೋ 'ಸತ್ಯ'ವನ್ನು ದೇವರಾಗಿ ಭಾವಿಸಿದರು. ಸತ್ಯ–ಶಿವ ಕೂಡಿ ಬಂದ ಬಾಳುವೆ ಸುಂದರ ಆಗದೆ ಇರುವುದು ಹೇಗೆ?

ಅಂತರಂಗ–ಬಹಿರಂಗ ಶುದ್ಧಿಯ ಸಪ್ತಸೂತ್ರಗಳಲ್ಲಿ ಬಸವಣ್ಣನವರು ಅಸ್ತೇಯ, ಅಹಿಂಸೆ, ಸತ್ಯಗಳನ್ನೇ ಹೇಳಿರುವುದು!

ನಾನು ಆರಂಭವ ಮಾಡುವೆನಯ್ಯಾ–ಗುರುಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯಾ–ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯಾ–ಜಂಗಮ ದಾಸೋಹದೆಂದು
ನಾನಾವ ಕರ್ಮಗಳ ಮಾಡಿದರೆಯೂ
ನೀಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರಿಯೆ ಮಾಡೇನು
ನಿಮ್ಮ ಸೊಮ್ಮಿಂಗೆ ಸಲಿಸುವೆನು, ನಿಮ್ಮಾಣೆ, ಕೂಡಲಸಂಗಮದೇವ

ಈ ವಚನ ಅಸಂಗ್ರಹತತ್ತ್ವಕ್ಕೂ 'ಈಶಾವಾಸ್ಯ'ದ 'ತೇನತ್ಯಕ್ತೇನ ಭಂಜೀಥಾಃ' ತತ್ತ್ವಕ್ಕೂ ಎಷ್ಟು ಹತ್ತಿರ! "ಹಿಂದೂ ಧರ್ಮದ ಎಲ್ಲ ಗ್ರಂಥ ನಷ್ಟವಾದರೂ ಆಗಲಿ, ಈಶಾವಾಸ್ಯದ ಮೊದಲ ಶ್ಲೋಕ ಒಂದು ಉಳಿದರೆ ಸಾಕು" ಎಂದಿದ್ದರು. ಗಾಂಧೀಜಿ.

ಈಶಾವಾಸ್ಯಮಿಂದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್
ತೇನತ್ಯಕ್ತೇನ ಭಂಜೀಥಾಃ ಮಾಗೃಧಃ ಕಸ್ಯಸ್ವಿದ್ಧನಮ್

ಎಂಬ ಈ ಶ್ಲೋಕ ಗಾಂಧೀ ಆಶ್ರಮದ ದಿನದಿನದ ಪ್ರಾರ್ಥನೆಯಾಗಿತ್ತು.

'ಶರೀರಶ್ರಮ' ವ್ರತಕ್ಕೆ ಗಾಂಧೀಜಿಗೆ ಸ್ಫೂರ್ತಿ ಬಂದದ್ದು ಟಾಲ್ಸ್‌ಟಾಯಿ ಅವರ 'Bred labour' ಎಂಬ ವಿಚಾರದಿಂದ ಯೋಚನೆ ಮಾಡುವ ಕಲೆ, ಕೆಲಸಮಾಡುವ ಕೈಕಾಲು, ಎಲ್ಲಾ ಸೇರಿಯೇ ನಮ್ಮ ದೇಹ. ಅಂತೆಯೇ ಬುದ್ಧಿಜೀವಿ ಶ್ರಮಜೀವಿ. ಎಲ್ಲಾ ಸೇರಿಯೆ ಸಮಾಜ. ಶ್ರಮಜೀವಿಗಳನ್ನು ಹೀನಾಯವಾಗಿ ಕಾಣುವರು ನಮ್ಮ ಕ್ರಿಯಾಂಗಗಳನ್ನೇ ಹಳಿದಂತೆ ಕರ್ಮವೇ ಯೋಗ. ಎಲ್ಲ ಕರ್ಮವು ಜ್ಞಾನದಲ್ಲೇ ಪರಿಸಮಾಪ್ತಿ ಎನ್ನುತ್ತದೆ ಗೀತೆ ಕರ್ಮವಿಲ್ಲದ ಜ್ಞಾನ ಹೇಳುವ ಜನ್ಮ ಜ್ಞಾನ ರಹಿತ ಕರ್ಮಕುರುಡು ಒಂದನ್ನು ಬಿಟ್ಟು ಇನ್ನೊಂದಕ್ಕೆ ಅಸ್ತಿತ್ವವೇ ಇಲ್ಲ. ಜ್ಞಾನ ಯಜ್ಞದ ಜೊತೆಗೆ ಕ್ರಿಯಾ ಯಜ್ಞವೂ ನಡೆಯಬೇಕು. ಎಲ್ಲರು ಎಲ್ಲ ಕೆಲಸವನ್ನು ತಾವೇ ಮಾಡಲು ಸಾಧ್ಯವಿಲ್ಲ ದಿಟ. ಹಾಗೆಂದು ಕೆಲಸದಿಂದ ವಿಮುಖತೆ ಸಲ್ಲದು. ಯಾರಿಗೆ ಯಾವ ಕೈಕೆಲಸ ಸಾಧ್ಯವೊ ಅದನ್ನು ಮಾಡಲೇಬೇಕು. ಅದಕ್ಕಾಗಿ ಗಾಂಧೀಜಿ ಶರೀರಶ್ರಮವನ್ನು ವ್ರತವಾಗಿ ಸೇರಿಸಿದವರು. ಈ ದೇಹದ ರಕ್ಷಣೆಗಾಗಿ ನಾವು ದೈಹಿಕವಾಗಿ ದುಡಿಯಲೇಬೇಕು ಎಂದರು. ಸಮಾಜಕ್ಕೆ ಅಗತ್ಯವಾದ ಉತ್ಪಾದಕ ಕರ್ಮವೇ ಒಂದು ಯೋಗ ಎಂದರು. "ರಸ್ಕಿನ್ನನ Unto this Last"ನಿಂದ ಅವರು ಕಲಿತ ಪಾಠಗಳಲ್ಲಿ ಎರಡು ಇದಕ್ಕೆ ಸಂಬಂಧಿಸಿದವೇ. 'ಕೃಷಿಕನ ಬಾಳೇ ಶ್ರೇಷ್ಠ' ಹಾಗೂ 'ನ್ಯಾಯವಾದಿಯ ವೃತ್ತಿಯ ಬೆಲೆ ಮತ್ತು ನಾಪಿತನ ವೃತ್ತಿಯ ಬೆಲೆ ಎರಡು ಸಮ ಎಂದು ಸ್ವತಃ ಗಾಂಧೀಜಿ ಮಾಡದ ಕೆಲಸವಿಲ್ಲ. ಸಪಾಯಿ, ಅಡುಗೆ, ಪಾತ್ರೆ ತೊಳೆಯುವಿಕೆ, ತೋಟಗಾರಿಕೆ, ಪಶುಸೇವೆ, ನೂಲುವದು, ನೇಯ್ಗೆ ರೋಗಿಗಳ ಸೇವೆ, ಚರ್ಮಗಾರಿಕೆ, ಮುದ್ರಣಕಾರ್ಯ ಸಮಸ್ತವನ್ನು ಮಾಡಿದರು. ಜೊತೆಜೊತೆಗೆ ಸಾವಿರಾರು ಪುಟ ವಿಚಾರ ಸಾಹಿತ್ಯವನ್ನು ಬರೆದರು. ಯಾವುದು ಹೆಚ್ಚಲ್ಲ ಯಾವುದು ಕಿರಿದಲ್ಲ. ಪ್ರತಿಯೊಬ್ಬ ಭಾರತೀಯನು ಎಲ್ಲಿಯೇ ಹೇಗೆ ಇರಲಿ ದಿನಕ್ಕೆ ಸ್ವಲ್ಪಹೊತ್ತಾದರೂ ನೂಲಬೇಕು. ಆದ್ದರಿಂದ ಉತ್ಪಾದಕ ಶ್ರಮಜೀವಿಗಳ ಜೊತೆಗೆ ತಾದಾತ್ಮ್ಯವನ್ನು ಹೊಂದಬೇಕು ಎಂದು ಹೇಳಿದರು. ನೂಲುವುದು ಅವರ ಪಾಲಿಗೆ ಸೂತ್ರ ಯಜ್ಞವಾಗಿತು.

ಎಂಟುನೂರು ವರ್ಷಗಳ ಹಿಂದೆಯೇ ಕನ್ನಡದ ಅಣ್ಣ ಇದನ್ನೇ ಹೇಳಿದ್ದು ಇದನ್ನೇ ಮಾಡಿದ್ದು. ಅಂದೇ ಅವರು ಸಾರಿ ಹೇಳಿದರು, "ಕಾಯಕವೇ ಕೈಲಾಸ" ಎಂದು.

"ಕೃಷಿ ಕೃತ್ಯ ಕಾಯಕವಾದೊಡೇನು? ತನುಮನ ಬಳಲಿಸಿ ತಂದು ದಾಸೋಹವ ಮಾಡುವ ಪರಮ ಸದ್‌ಭಕ್ತನ ಪಾದವ ತೋರಯ್ಯ" ಎಂದರು. ಅಣ್ಣನವರ ಅನುಭವ ಮಂಟಪ ಗಾಂಧೀಜಿಯವರ ಆಶ್ರಮದ ಹಾಗೆಯೇ ಎಲ್ಲ ಕಾಯಕದವರಿಗೂ ಸ್ಥಾನಕೊಟ್ಟಿತ್ತು. ಮಡಿವಾಳ, ಹಡಪದವ, ಅಂಬಿಗ, ಮೋಳಿಗೆಯವ, ಮೇದ, ಬೇಡ, ತುರುಗಾಹಿ, ಡೋಹರ, ತಳವಾರ, ಗಾಣದವ, ಸಪ್ಪಿಗೆಯವ, ಸಿಂಪಿಗ, ಅಕ್ಕಸಾಲಿ, ಕೊಟ್ಟಣದಾಕೆ ಇತ್ಯಾದಿ ಎಲ್ಲ ಕಾಯಕದವರು ಶರಣ ಸಂದೋಹದಲ್ಲಿದ್ದವರು. ಉಚ್ಚ ನೀಚ ಏನೂ ಭೇದಭಾವವಿಲ್ಲ. ಎಲ್ಲ ಬಗೆಯ ಶ್ರಮಕ್ಕೂ ಒಂದೇ ಬೆಲೆ. ಬಸವಣ್ಣನವರ ಕಾಲದಲ್ಲಿ ಈ ಉದ್ಯೋಗಗಳು, ಕಸುಬುಗಳು ಸತ್ತಿರಲಿಲ್ಲ. ಜೀವಂತವಾಗಿದ್ದವು. ಅವುಗಳಲ್ಲಿ ಕೀಳು-ಮೇಲು ಎಂಬ ಭಾವನೆ ಇದ್ದಿರಬಹುದು. ವರ್ಣವ್ಯವಸ್ಥೆಗೆ ಕಾಲಕ್ರಮೇಣ ಹಿಡಿದ ಕೀಟ ಅದು. ಆದರೆ ಉದ್ಯೋಗ ಇನ್ನು ಉಳಿದಿತ್ತು.

"ಭಕ್ತಿ ವಿಶೇಷವ ಮಾಡುವರೆ ಹತ್ತು ಬೆರಳುಗಳುಂಟು
ಹಾಸಿ ನುಡಿದರೆ ತನಗುಂಟು, ತನ್ನ ಪ್ರಮಥಗುಂಟು"

ಕೆಲಸದ ಮಹತ್ವವನ್ನು ಹೇಳುವ ಈ ವಚನ "ಕರಾಗ್ರೇವಸತೇ ಲಕ್ಷ್ಮಿ ಕರಮಧ್ಯೇ ಸರಸ್ವತಿ ಕರಮೂಲೇ ಸದಾಗೌರಿ, ಪ್ರಬಾತೇ ಕರದರ್ಶನಂ ಎಂಬ ಆರ್ಯೋಕ್ತಿಗೆ ಸಮೀಪವಲ್ಲವೇ!

"ಕದ್ದು ತಿಂದರೆ ಕೈಹಿಡಿದೊಮ್ಮೆ ಬಡಿದು ತುಡುಗುಣಿತನವ ಬಿಡಿಸಯ್ಯ"
ಎನ್ನುವ ವಚನ ಅಸ್ತೇಯ ವ್ರತವನ್ನೇ ಹೇಳುತ್ತದೆ.
"ಕಳ್ಳನ ಮನೆಗೊಬ್ಬ ಬಲು ಕಳ್ಳ ಬಂದಡೆ
ಕೂಡಲ ಸಂಗಯ್ಯನಲ್ಲದೆ ಮತ್ತಾರೂ ಅಲ್ಲ"

ಎಂಬ ವಚನ ಮೂಡಿದ್ದು ಬಸವಣ್ಣನವರ ಮನೆಯಲ್ಲಿ ಕಳ್ಳತನ ಆದಾಗಲಂತೆ. ತನ್ನನ್ನೇ ಕಳ್ಳ ಎಂದುಕೊಂಡಿದ್ದಾರೆ, ಅಣ್ಣ. ತಾನು ಕಷ್ಟ ಪಟ್ಟು ದುಡಿಯದೆ ಹೇಗೂ ಹೊಂದುವ ಸುಖಸಾಧನ ಸಂಪತ್ತು ತನ್ನ ಅಗತ್ಯಕ್ಕೆ ಮೀರಿದ ವಸ್ತು ಸಂಗ್ರಹ ನಾಳೆಗೆ ಎಂದು ಕೂಡಿಟ್ಟದ್ದು ಎಲ್ಲವು ಕಳ್ಳಮಾಲೇ ಎನ್ನುವುದು ಅಣ್ಣನವರ ಭಾವನೆ.

"We one all thieves in a way if we possess anything that we don't require for immediate use thieve if from other'' ಎಂದರು ಗಾಂಧೀಜಿ. ಬದಲಾಯಿಸಲು ಹರಕು ಸೀರೆಗೂ ಗತಿ ಇಲ್ಲದಿದ್ದ ದಲಿತ ಹೆಣ್ಣನ್ನು ಕಂಡ ಗಾಂಧೀಜಿಗೆ ತಮ್ಮ ತಲೆಯಮೇಲಿದ್ದ ೭-೮ ಮೊಳದ ಬಟ್ಟೆಯ ಪಗಡಿ ಹೇಸಿಗೆ ಎನಿಸಿತು. ಕಳ್ಳತನ ಎನಿಸಿತು. ಆ ಕ್ಷಣವೆ ಪಗಡಿಯನ್ನು ಬಿಟ್ಟರು ತುಂಡು ಮುಂಡು ವಸ್ತ್ರಗಳನ್ನು ಮಾತ್ರ ಬಳಸಲು ಆರಂಭಿಸಿದರು.

ಗಾಂಧೀಜಿಯವರ ಕಾಲಕ್ಕೆ ಜನೋಪಯೋಗಿ ಉದ್ಯೋಗಗಳು, ಕುಶಲ ಕರ್ಮಗಳು ಕಣ್ಮರೆಯಾಗುತ್ತಿದ್ದವು. ಇಲ್ಲಿದೆ ಗಾಂಧೀಜಿ ಎದುರಿಸಬೇಕಾದ ಹೊಸ ಸವಾಲು; ಪಶ್ಚಾತ್ಯ ಪ್ರಪಂಚದಲ್ಲಿ ಕೈಗಾರಿಕಾ ಕ್ರಾಂತಿಯಾಗಿತ್ತು. ವೈಜ್ಞಾನಿಕ ಸಂಶೋಧನೆಗಳು ತಂತ್ರಾವಿಷ್ಕಾರಗಳು, ಆ ಕ್ರಾಂತಿಗೆ ಬೆನ್ನೆಲುಬು. ಕ್ರಾಂತಿಯ ಫಲ ವಿಕೇಂದ್ರೀಕೃತ ಗ್ರಾಮೋದ್ಯೋಗ ಗೃಹೋದ್ಯೋಗವ್ಯವಸ್ಥೆಯ ನಾಶ ಹಾಗೂ ಕೇಂದ್ರೀಕೃತ ಬಂಡವಾಳ ಪ್ರಧಾನ ಉದ್ಯಮಗಳ ಹೆಚ್ಚಳ, ಮಾಲಿಕ ವರ್ಗ ಶ್ರಮಿಕವರ್ಗಗಳ ಹುಟ್ಟು ಪರಸ್ಪರ ಸಂಘರ್ಷ ತಲೆದೋರಿತು. ಕೇಂದ್ರೀಕೃತ ಉತ್ಪಾದನೆ, ನಿಯೋಗ ವ್ಯವಸ್ಥೆ ಶೋಷಣೆಗೆ ಪೋಷಣೆಯಿತ್ತಿತ್ತು. ಒಂದು ಕಾಲಕ್ಕೆ ಧರ್ಮದ ಹೆಸರಿನಲ್ಲಿ ಶೋಷಣೆ ಇತ್ತು. ಈ ಕೈಗಾರಿಕಾ ಕ್ರಾಂತಿ ಫಲಸ್ವರೂಪವಾಗಿ ಆರ್ಥಿಕ ಶೋಷಣೆ ವ್ಯಾಪಕವಾಯಿತು. ಲೌಕಿಕ ಭೋಗಲೋಲುಪತೆಯನ್ನು ಮರೆಯಿಸುವ ಪಾಶ್ಚಾತ್ಯ ಸಂಸ್ಕೃತಿಯೊಂದು ರೂಪಗೊಂಡು ಬೆಳೆದು ಗರಿಗಟ್ಟಿ ಜಗತ್ತನ್ನೇ ಆವರಿಸುತ್ತಿತ್ತು. ಮಾನವೀಯ ಮೌಲ್ಯಗಳನ್ನು ಮುರಿದು ಹಾಕುತ್ತಿತ್ತು. ಮನುಷ್ಯನಿಗಿಂತ ಹಣಕ್ಕೆ ಬಲೆ ಎನ್ನುವಂತೆ ಆಗಿತ್ತು. ಲಾಭಕೋರತನವೇ ಅರ್ಥವ್ಯವಸ್ಥೆ ರಾಜ್ಯ ವ್ಯವಸ್ಥೆಗಳ ಪರಮ ಲಕ್ಷ್ಯವಾಗಿತ್ತು. ಇಂಥ ಸಂಸ್ಕೃತಿಯ ವಿರುದ್ಧ ಗಾಂಧೀಜಿ ಸೆಡ್ಡು ಹೊಡೆದು ನಿಲ್ಲಬೇಕಾಯಿತು. 'ಹಿಂದ್ ಸ್ವರಾಜ' ಎಂಬ ಕೈವತ್ತಿಗೆ ೧೯೦೩ರಲ್ಲಿ ಬಂದಿದ್ದು, ಅದು ಪಾಶ್ಚಾತ್ಯ ಭೋಗಲೋಲುಪತೆ, ಶೋಷಣೆಗಳ ಸಂಸ್ಕೃತಿಗೆ ಎಸೆದ ಸವಾಲು. ಇಂದಿಗೂ ಅಷ್ಟೆ.

ವಿದೇಶೀ ಆಳ್ವಿಕೆಯ ಫಲವಾಗಿ ಭಾರತದ ಹಳ್ಳಿಗಳು ನಾಶವಾಗಿದ್ದವು. ಉದ್ಯೋಗ ಜಾಲ ನುಚ್ಚನೂರಾಗಿತ್ತು. ಸರಳವು ನಿರಾಳವೂ ಸ್ವಾವಲಂಬಿಯೂ ಆದ ಗ್ರಾಮ ಸಂಸ್ಕೃತಿ

ಕೊನೆಯುಸಿರು ಎಳೆಯುತಿತ್ತು. ಸ್ವಂತಿಕೆ ಹಾಳಾಗಿತ್ತು. ಎಲ್ಲೆಲ್ಲೂ ದಾಸ್ಯಭಾವ, ಬಡತನ, ಪರಾವಲಂಬನ, ಹತಾಶೆ, ಕೆಲವೊಮ್ಮೆ ಹಿಂಸಾತ್ಮಕತೆ, ನಿರ್ವೀರ್ಯತೆ ದಟ್ಟವಾಗಿ ಕವಿದಿದ್ದವು. ಭಾರತೀಯತೆ ಮಾಯವಾಗಿತ್ತು. ಇದಕ್ಕೆಲ್ಲ ಪರಿಹಾರವಾಗಿ ಗಾಂಧೀಜಿ ಶ್ರಮಪೂರ್ಣ ಗ್ರಾಮ ಆಧಾರಿತವು, ವಿಕೇಂದ್ರೀಕೃತವೂ ಆದ ಸರ್ವೋದಯ ಸಮಾಜದ ಕಲ್ಪನೆ ಅಂದರೆ ಗ್ರಾಮ ಸ್ವರಾಜ್ಯದ ತಮ್ಮ ಕನಸನ್ನು ಜನತೆಯ ಮುಂದಿಟ್ಟರು. ತಾತ್ವಿಕ ವ್ಯವಹಾರಿಕ ದೃಷ್ಟಿಯಿಂದಲೂ ಗಾಂಧೀಜಿ ಈ ಹೊಸ ಸಮಸ್ಯೆಗೆ ತಮ್ಮದೇ ಆದ ಪರಿಹಾರವನ್ನು ಸೂಚಿಸಿದರು.

ಆಸ್ತಿ ಕಲ್ಪನೆಗೆ ಬಸವ, ಗಾಂಧೀ ಇಬ್ಬರೂ ವಿರೋಧಿಗಳೇ. ನ್ಯಾಯವಾದ ಕಾಯಕದಿಂದ ಬಂದ ಸಂಪಾದನೆಯಲ್ಲಿ ತಮ್ಮ ಬದುಕಿನ ಅಗತ್ಯಕ್ಕೆ ಎಷ್ಟು ಬೇಕು ಅಷ್ಟನ್ನು ಮಾತ್ರ ಬಳಸಿಕೊಳ್ಳಬೇಕು. ಉಳಿಕೆಯೆಲ್ಲ ಶಿವನ ಸೊಮ್ಮಿಗೆ ಎಂದರೆ ಜನತೆಗೆ ಸಲ್ಲಬೇಕು ಎನ್ನುವುದು ಬಸವಣ್ಣನವರ ಆಚಾರ.

'ಹೊನ್ನಿನೊಳಗೊಂದೊರೆಯ ಸೀರೆಯೊಳಗೊಂದೆಳೆಯ
ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ ನಿಮ್ಮಾಣೆ,
ನಿಮ್ಮ ಪುರಾತನರಾಣೆ....'

ಎನ್ನುವ ವಚನಕ್ಕೆ ತಾರ್ಕಣೆಯಾಗುವ ಪ್ರಸಂಗವನ್ನು ಗಾಂಧಿಯವರಲ್ಲಿ ಕಾಣುತ್ತೇವೆ. ಅವರು ದ. ಆಫ್ರಿಕಾದಲ್ಲಿದ್ದಾಗ ಮಿತ್ರ ಪೋಲಕ್ ಕೊಟ್ಟ ರಸ್ಕಿನ್ನನ ಪುಟ್ಟಪುಸ್ತಕ "Unto this Lost" ಅವರ ಬದುಕಿನ ದಿಕ್ಕನ್ನೇ ಬದಲು ಮಾಡಿತು ಅಷ್ಟೆ. ಆ ಪುಸ್ತಕದಿಂದ ಗಾಂಧೀಜಿ ಕಲಿತಪಾಠ ಒಂದು: "ನಾಳೆಗಾಗಿ ಕೂಡಿಡಬಾರದು" ಎಂಬುದು. ಮರುದಿನವೇ ಅವರು ಮುಂಬೈನ ವಿಮಾ ಕಚೇರಿಗೆ ತಂತಿ ಕಳಿಸಿ, ತಮ್ಮ ವಿಮಾ ಪಾಲಿಸಿಯನ್ನು ರದ್ದು ಮಾಡಿದರು.

"ಧನೇಶ್ವರ ಪೂಜೆಯನ್ನು ಪ್ರತಿಪಾದಿಸಿ ದುರ್ಬಲರನ್ನು ಬಲಿಗೊಟ್ಟು, ಬಲಿಷ್ಠರಿಗೆ ಸಂಪತ್ತನ್ನೆಲ್ಲ ಸಂಗ್ರಹಿಸಿಕೊಡುವಂಥ ಅರ್ಥಶಾಸ್ತ್ರ ಸುಳ್ಳು ಹಾಗೂ ದಾರುಣಶಾಸ್ತ್ರ, ಅದು ಮಾರಕ ಎಂದರು ಗಾಂಧೀಜಿ, ಅವರ ಸರ್ವೋದಯ ಸಿದ್ಧಾಂತದಲ್ಲಿ ಈಶಾವಾಸ್ಯದಲ್ಲಿ ಹೇಳಿದಂತೆ "ಸಂಪತ್ತೆಲ್ಲ ಶ್ರೀರಾಮನದು" ಎನ್ನುವುದೇ ಮುಖ್ಯತತ್ವ. ಅದರಿಂದಲೇ ಅವರು ಟ್ರಸ್ಟಿಷಿಪ್ (ಧರ್ಮದರ್ಶಿತ್ವ)ವನ್ನು ಪ್ರತಿಪಾದಿಸಿದವರು. ಚರಾಚರ ದೃಷ್ಟಿಯೆಲ್ಲಕ್ಕೂ ನಾವು ಒಡೆಯರಲ್ಲಿ ಹಕ್ಕುದಾರರಲ್ಲಿ ಸೃಷ್ಟಿಯಿಂದ ನಮಗೆ ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ಪಡೆದುಕೊಂಡು ಉಳಿದ ಎಲ್ಲವನ್ನು ಧರ್ಮದರ್ಶಿಗಳಂತೆ ಜತನವಾಗಿ ಇಟ್ಟು ಮುಂದಿನ ಪೀಳಿಗೆಗೆ ಬಿಟ್ಟುಕೊಡಬೇಕು. ಇದಕ್ಕಾಗಿ ನಾವು ಭೋಗವಿಲಾಸದ ಬೆನ್ನು ಹತ್ತುವುದನ್ನು ಬಿಟ್ಟು ಸರಳಜೀವನವನ್ನು ನಡೆಸಬೇಕು. ಇದು ಆಧ್ಯಾತ್ಮಿಕ ದೃಷ್ಟಿಯಿಂದ ಮಾತ್ರವಲ್ಲ ಅರ್ಥವ್ಯವಹಾರ ದೃಷ್ಟಿಯಿಂದಲೂ ಅತ್ಯಗತ್ಯ; ಇದು ಗಾಂಧೀಜಿಯ ವಿಚಾರ. ಇಂದಿನ ಪರಿಸರನಾಶದ ಅಪಾಯದ ಹಿನ್ನೆಲೆಯಲ್ಲಿ ಈ ಸರಳ ಜೀವನದ ಅಗತ್ಯವನ್ನು ಒತ್ತಿ ಹೇಳಬೇಕಾಗಿದೆ. ಸರಳ ಜೀವನ ಇಲ್ಲದೆ ನಮ್ಮ ಆಸೆಗಳಿಗೆ ಕಡಿವಾಣ ಹಾಕದೆ ಇದ್ದರೆ, ಪರಿಸರ ರಕ್ಷಣೆ ಬರೀ ಗಾಳೀ ಮಾತು. ಲೋಕದಲ್ಲೆಲ್ಲ ಇಂದು ಈ ವಿಚಾರದ ಅಲೆಗಳು ಏಳುತ್ತಿರುವುದನ್ನು ನೋಡುತ್ತಿದ್ದೇವೆ.

ಸರಳ ಜೀವನಕ್ಕಾಗಿ ಗಾಂಧೀಜಿ 'ಸ್ವಇಚ್ಛೆಯ ಬಡತನ' ಅರ್ಥಾತ್ voluontery poverty ಎಂದೇ ತಮ್ಮ ಬಾಳಿನ ಆಚಾರವನ್ನಾಗಿ ಮಾಡಿಕೊಂಡರು.

"ಸಿರಿಯಾದರೇನು ಶಿವಭಕ್ತಿಯಿಲ್ಲದನ್ನಕ್ಕ;
ಸಲ್ಲದ ಹೊನ್ನು ಮತ್ತೆಲ್ಲಿದ್ದರೇನು?
ಧನವನಿರಿಸದಿರಾ, ಇರಿಸಿದರೆ ಭವತಪ್ಪದು, ತಪ್ಪದು....."

ಈ ವಚನದಲ್ಲಿ ಬಸವಣ್ಣ ಇದೇ ಅಸಂಗ್ರಹ ತತ್ವವನ್ನೇ ಪ್ರತಿಪಾದಿಸಿದರು.

ಬಡವರ ಬಗ್ಗೆ ದೀನದಲಿತರ ಬಗ್ಗೆ ಗಾಂಧೀಜಿಗೆ ಇದ್ದ ಅನುಕಂಪ ಲೋಕ ಪ್ರಸಿದ್ಧ. "ಬಡವರ ಆಳ್ವಿಕೆಯ ದಿನ ಬರುತ್ತಿರುವುದನ್ನು ನಾನು ನೋಡುತ್ತಿದ್ದೇನೆ" ಎಂಬುದು ಅವರ ಕನಸು. "To wipeout every tear from every eye" ಇದು ಅವರ ಹಂಬಲ, 'ದರಿದ್ರ ನಾರಾಯಣ' ಶಬ್ದವನ್ನು ಸ್ವಾಮಿ ವಿವೇಕಾನಂದರು ಹಿಂದೆಯೆ ಉಪಯೋಗಿಸಿದ್ದರು. ಆ ನಾರಾಯಣನೇ ಗಾಂಧಿಯವರ ಉಪಾಸ್ಯದೈವ 'ದರಿದ್ರ ದೇವೋಭವ' ಎಂದರು.

ಒಮ್ಮೆ ಗಾಂಧಿಯವರ ಅಸಹಕಾರ ಆಂದೋಳನ ಹಾಗೂ ವಿದೇಶೀ ವಸ್ತ್ರದಹನ ಕುರಿತು ಕವಿ ರವೀಂದ್ರರು ಆಕ್ಷೇಪ ಎತ್ತಿದರು. ಮಾಡೆರ್ನ್ ರಿವ್ಯೂ ಪತ್ರಿಕೆಯಲ್ಲಿ ಮೂರು ಲೇಖನ ಬರೆದು ತಮ್ಮ ಅಸಮಾಧಾನವನ್ನು, ನೋವನ್ನು ತೋಡಿಕೊಂಡವರು. ಅದಕ್ಕೆ ಗಾಂಧೀಜಿ ಕೊಟ್ಟ ಉತ್ತರ ಮರ್ಮಸ್ಪರ್ಶಿಯಾದುದು.

"ಹಿಂದೂಸ್ತಾನದ ಮಾನವ ಪಕ್ಷಿಗೆ ನಿದ್ದೆ ವಿಶ್ರಾಂತಿ ಎಲ್ಲಿಯದು?

ಅದೊಂದು ಸೋಗು, ಸುಳ್ಳು ನಾಟಕ.... ಕೋಟ್ಯಾನುಕೋಟಿ ಜನಕ್ಕೆ ಬಾಳು ನಿತ್ಯ ಜಾಗರಣೆ ಅಥವಾ ಶಾಶ್ವತ ಸಮಾಧಿ, ಹಸಿವಿನಿಂದ ತಲ್ಲಣಿಸುತ್ತಿರುವ ಈ ಜನ ಬೇಡುವ ಕಾವ್ಯ ಒಂದೇ ಪುಷ್ಟಿಕರ ಅನ್ನ, ಅದನ್ನ ಅವರಿಗೆ ನೀಡಲು ಸಾಧ್ಯವಿಲ್ಲ ಅವರೇ ಅದನ್ನು ಗಳಿಸಬೇಕು. ಮೈಬೆವರು ಸುರಿಸಿಗಳಿಸಬೇಕು." ಎಂದರು.

"I recognize no God except. That God that is I beo found in the hearts of dumb millions... I worship the God that is truth on Truth which is God through the service of these millions." ಎಂದರು.

"ಉಳ್ಳವರು ಶಿವಾಲಯವ ಮಾಡುವರು",
ಶಿವಭಕ್ತರ ನೋವೇ ಲಿಂಗದ ನೋವೆಂದು ನಂಬಿದ್ದೆ.
ಅವರು ನೊಂದರೆ ಅನುನೊಂದೆನಯ್ಯ".
"ಕಲ್ಲು ನಾಗರ ಕಂಡರೆ ಹಾಲನೆರೆ ಎಂಬರಯ್ಯ,
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ,
ಉಂಬ ಜಂಗಮ ಬಂದರೆ ನಡೆ ಎಂಬರಯ್ಯ
ಉಣ್ಣದ ಲಿಂಗಕ್ಕೆ ಬೋನವಿಕ್ಕುವರಯ್ಯ"

ಇತ್ಯಾದಿ ವಚನಗಳಲ್ಲಿ ಹಾಗೂ ಗುರು-ಲಿಂಗ-ಜಂಗಮ ದಾಸೋಹ ಕಲ್ಪನೆಯಲ್ಲಿ ಬಸವಣ್ಣನವರು ಪ್ರತಿಪಾದಿಸಿದ್ದು ಇದೆ ತೆರನ ದೀನಾನುಕಂಪ, ಲೋಕಕಾರುಣ್ಯ, ಶ್ರೀಸಿದ್ದಯ್ಯ ಪುರಾಣಿಕರ ಮಾತಿನಂತೆ, "ಅಣ್ಣನವರ ಧರ್ಮ ಬಡವರ ಧರ್ಮ, ದಯೆಯ ಧರ್ಮ, ಸರಳತೆ ಪಶ್ಚಾತ್ತಾಪಗಳು ಧರ್ಮ, ಕಾಯಕದ ಧರ್ಮ, ಭಕ್ತಿಯಧರ್ಮ, ಮಾನವೀಯತೆಯ ಧರ್ಮ".

ಮೌಢ್ಯ ಕುರುಡು ನಂಬಿಕೆಗಳು ಕಾಡದ ಸಮಾಜವಿಲ್ಲ, ಕಾಡದ ಕಾಲ ಇಲ್ಲ. ಅವುಗಳ ವಿರುದ್ಧ ನಡೆದ ವೈಚಾರಿಕ ಜಾಗೃತಿಯ ಪ್ರಯತ್ನಗಳೂ ಅನೇಕ. ಬಸವಣ್ಣನವರು ತಮ್ಮ

ಕಾಲದಲ್ಲಿ ತಾಂಡವವಾಡುತ್ತಿದ್ದ ಇಂಥ ಸಾಮಾಜಿಕ ಕೆಡುಕುಗಳ ಎದುರು ಬಲವಾದ ದನಿಯೆತ್ತಿದರು. ಹೋಮ, ಹವನ, ಯಜ್ಞ, ಬಲಿ, ತಿಥಿ, ವಾರ, ನಕ್ಷತ್ರ, ಶಕುನ, ಸೂತಕ ಇತ್ಯಾದಿಗಳನ್ನು ಉಗ್ರವಾಗಿ ಖಂಡಿಸಿದರು.

"ಅಶ್ವಮೇಧಯಾಗವಂತಿರಲಿ ಅಜಪೇಯಉಪದೇಶ ಸಮಾಧಿಯಂತಿರಲಿ ಹೋ ಹೋಮ ನೇಮ ಗಾಯಿತ್ರಿಯ ಜಪವಂತಿರಲಿ ಹೋ

ಜನಮೋಹನ ಮಂತ್ರವಂತಿರಲಿ ಹೋ
ಕೂಡಲ ಸಂಗನ ಶರಣರ ನುಡಿಗಡಣವೆ ಎಲ್ಲಕ್ಕೂ ಅಧಿಕ ನೋಡಾ।
ಮಾರಿ ಮಸಣೆಯೆಂಬವು ಬೇರಿಲ್ಲಿ ಕಾಣಿರೊ! ಮಾರಿಯೆಂಬುದೇನು?
ಕಂಗಳು ತಪ್ಪಿ ನೋಡಿದರೆ ಮಾರಿ,
ನಾಲಗೆ ತಪ್ಪಿ ನುಡಿದರೆ ಮಾರಿs
ನಮ್ಮ ಕೂಡಲಸಂಗಮದೇವರ ನೆನಹ ಮರೆತರೆ ಮಾರಿ!
ಕಿವಿಯ ಸೂತಕ ಹೋಯಿತ್ತು–ಸತ್‌ಗುರುವಚನದಿಂದೆ
ಕಣ್ಗಳ ಸೂತಕ ಹೋಯಿತ್ತು–ಸದ್ಭಕ್ತರ ಕಂಡೆನಾಗಿ
ಕಾಯದ ಸೂತಕ ಹೋಯಿತ್ತು–ನಿಮ್ಮ
ಚರಣವ ಮುಟ್ಟಿದೆನಾಗಿ,
ಬಾಯ ಸೂತಕ ಹೋಯಿತ್ತು ನಿಮ್ಮೊಕ್ಕುದ ಕಂಡೆನಾಗಿ,
ನಾನಾ ಸೂತಕ ಹೋಯಿತ್ತು–ನಿಮ್ಮ ಶರಣರಾನುಭವಿಯಾಗಿ,
ಶಕುನವೆಂದೆಂಬೆ ಅಪಶಕುನವೆಂದೆಂಬೆ
ನೀ ಹೋಹಾಗಳಕ್ಕೆ, ನೀ ಬಾಹಾಗಳಕ್ಕೆ
ಅಕ್ಕೆ ಬಾರದ ಮುನ್ನ ಪೂಜಿಸು ಕೂಡಲ ಸಂಗಮದೇವನ।

ಇತ್ಯಾದಿ ವಚನಗಳು ಬಸವಣ್ಣನವರು ಮೌಢ್ಯರಾಕ್ಷಸನ ಮೇಲೆ ಪ್ರಯೋಗಿಸಿದ ವಾಗಸ್ತ್ರಗಳು. ಗಾಂಧೀಜಿ ಮೌಢ್ಯ ಶಕುನ ಯಾವುದನ್ನು ನಂಬುತ್ತಿರಲಿಲ್ಲ. ತಿಥಿ, ವಾರ ಎಲ್ಲ ಅವರಿಗೆ ಗೌಣ. ಅವರ ಆಶ್ರಯದಲ್ಲಿ ಇವು ಯಾವುದಕ್ಕೂ ಸ್ಥಾನ ಇರಲಿಲ್ಲ. ನಿಶ್ಚಲವಾದ ನಿರಾಳವಾದ ಸರಳವಾದ ಭಕ್ತಿ, ನಿಷ್ಠೆಯ ಕಾಯಕ ಯಜ್ಞ, ತ್ರಿಕರಣ ಶುದ್ಧಿ, ಸಾಧನ ಶುದ್ಧಿ ಇವೇ ಅವರಿಗೆ ಮುಖ್ಯ, ಬಸವಣ್ಣನವರಂತೆ ಗಾಂಧೀಜಿ ಈ ಬಗ್ಗೆ ಹೆಚ್ಚು ಹೇಳಿಲ್ಲ ನಿಜ, ಆದರೆ ಅವರ ಬದುಕೇ ಮೌಢ್ಯರಹಿತವಾಗಿತ್ತು. ಪಾಪ–ಪುಣ್ಯಗಳಲ್ಲಿ ಅವರು ನಂಬಿದ್ದರು. ಕರ್ಮ ಸಿದ್ಧಾಂತದಲ್ಲಿ ಅಷ್ಟೇ ದಿಟ. ಆದರೆ ಎಲ್ಲವನ್ನು ವಿಚಾರದ ಹಿನ್ನೆಲೆಯಲ್ಲೆ ನೋಡುತ್ತಿದ್ದರು. ತಮ್ಮ ಬಗ್ಗೆ ಅರಿಯದ ಮೂಢ ಜನ ಕಟ್ಟಿಕೊಂಡಿದ್ದ ಗೌರವಪೂರ್ಣವೇ ಆದ ನಂಬಿಕೆಗಳನ್ನು ಅವರು ಖಂಡಿಸುತ್ತಿದ್ದರು. ನವಖಾಲಿಯಾತ್ರೆಯ ನಡುವೆ ಒಮ್ಮೆ ಪಶಿವಾ ಎಂಬ ಮುದುಕಿ ಅಸ್ತಮಾದಿಂದ ನರಳಿತ್ತಿದ್ದಾಕೆ "ಗಾಂಧೀಜಿ ಈ ನೀರನ್ನು ಮುಟ್ಟಿಕೊಡಿ, ಕುಡಿಯುತ್ತೇನೆ. ನನ್ನ ರೋಗ ವಾಸಿಯಾಗುತ್ತದೆ" ಎಂದಳು, ಆಗ ಗಾಂಧೀಜಿ "ಕೂಡದು, ಅದು ಮೌಢ್ಯ ಬಿಸಿನೀರು ಕುಡಿ, ಮೇಲಾದೀತು" ಎಂದರು.

ಬಸವಣ್ಣನವರು ಮೌಢ್ಯ ಕಂದಾಚಾರಗಳನ್ನು ಎಷ್ಟೇ ಖಂಡಿಸಿದರೂ ಬಸವ ಪಂಥ ಅವುಗಳಿಂದ ಮುಕ್ತವಾಗದೆಯೆ ಇತರರಂತೆಯೆ ಉಳಿದುಕೊಂಡುದು ಒಂದು ವಿಪರ್ಯಾಸ. ಜಗತ್ತಿನ ಅನೇಕ ಹೊಸ ವಿಚಾರಗಳ ಗತಿ ಇದೇ ತಾನೇ!

ಬಸವಣ್ಣನವರ ಹಾಗೂ ಗಾಂಧೀಜಿಯವರ ಜೀವಿತದ ಮಹತ್ಕಾರ್ಯಗಳಲ್ಲಿ ಮುಖ್ಯವಾದದ್ದು ಅವರಿಬ್ಬರೂ ಅಸ್ಪೃಶ್ಯತೆಯ ವಿರುದ್ಧ ನಡೆಸಿದ ಹೋರಾಟ, ವರ್ಣವ್ಯವಸ್ಥೆಯೇ ದುಸ್ಸಂತಾನವಾದ ಜಾತಿಪದ್ಧತಿಯ ಪರಿಣಾಮವಾಗಿ ಹಿಂದೂ ಸಮಾಜಕ್ಕೆ ಅಂಟಿಬಂದ ಅಭಿಶಾಪ ಅಸ್ಪೃಶ್ಯತೆ. ಅಣ್ಣನವರಿಗೂ ಹಿಂದೆ ಶ್ರೀರಾಮಾನುಜರು ಈ ಕುರಿತು ಕೊಂಚ ಯೋಚಿಸಿದ್ದರು, ಮಾನವೀಯ ಭಾವನೆಯಿಂದ ಪ್ರೇರಿತರಾಗಿ, 'ಅಂತ್ಯಜ' ಎನಿಸಿಕೊಂಡಿದ್ದವರ ಮೇಲ್ಮೆಗಾಗಿ ಕೆಲವು ಹೆಜ್ಜೆ ಇಟ್ಟದ್ದು ಉಂಟು, ಆಚಾರ್ಯರು ಅವರನ್ನು 'ತಿರುಕ್ಕುಲತ್ತಾರ್" ದೇವರ ಮಕ್ಕಳು ಎಂದು ಕರೆದರು. ಸಿಮೀತವಾಗಿ ಆದರೂ ಅವರಿಗಾದರೂ ಅವರಿಗೆ ದೇವಾಲಯ ಪ್ರವೇಶದ ಅವಕಾಶ ಕಲ್ಪಿಸಿದ್ದು ಆ ಕಾಲಕ್ಕೆ ಕ್ರಾಂತಿಕಾರಿ ಹೆಜ್ಜೆಯು, ಮಾತ್ರವಲ್ಲ ದ್ರಾವಿಡ ದೇಶದ ನಮ್ಮಾಳ್ವಾರ್, ತಿರುಮಂಗೈ, ತಿರುಪಾಣಿ ಮುಂತಾದವರು ಗಿರಿಜನರೂ ಅಂತ್ಯಜನರೂ ಆದರೂ, ಅವರಿಗೆ ಭಕ್ತ ಶ್ರೇಣಿಯಲ್ಲಿ ಆಳ್ವಾರ ಪಂಕ್ತಿಯಲ್ಲಿ ಸ್ಥಾನ ದೊರೆತದ್ದು, ಅವರ ವಾಣಿ 'ದ್ರಾವೀಡವೇದ' ಎನಿಸಿಕೊಂಡದ್ದು ಗಮನಾರ್ಹ. ಅಂಥ ಭಕ್ತಿವಾಣಿಯನ್ನು ದೇವರ ನಿತ್ಯೋಪಾಸನೆಗೆ ಜೋಡಿಸಿದ್ದೂ ರಾಮಾನುಜರ ಸಾಧನೆಯೆ. ಅದಕ್ಕೂ ಹಿಂದೆ ಭಗವಾನ್ ಬುದ್ಧನ ಕಾಲದಲ್ಲಿ ಅಸ್ಪೃಶ್ಯತೆಯ ನಿವಾರಣೆಗೆ ಪ್ರಯತ್ನ ನಡೆದುದುಂಟು. ಆದರೆ ಬಸವಣ್ಣನವರ ಯತ್ನ ಇವೆಲ್ಲಕ್ಕು ಶಿಖರಪ್ರಾಯವಾದದ್ದು.

ಬಸವಣ್ಣನವರು ವರ್ಣವ್ಯವಸ್ಥೆ–ಜಾತಿಪದ್ಧತಿಗಳನ್ನೇ ಖಂಡಿಸಿದರು. ಅದೇ ಈ ಅವಸ್ಥೆಗೆ ಮೂಲಕಾರಣ ಎಂದರು. ಅದರ ಕಪಿಮುಷ್ಠಿಯಿಂದ ಮುಕ್ತವಾಗಿ, ಭೇದರಹಿತವೂ ಮಾನವೀಯವೂ ಸರಳ ಭಕ್ತಿ ಪ್ರಧಾನವೂ ಆದ ಹೊಸ ಸಮಾಜವನ್ನು ಕಟ್ಟಲು ಯತ್ನಿಸಿದರು. "ಹೊಲೆತನ ಹುಟ್ಟಿನಿಂದ ಅಲ್ಲ, ಕರ್ಮದಿಂದ ಬರುವುದು" ಎಂದರು.

> **"ಕೊಲ್ಲುವನೇ ಮಾದಿಗ, ಹೊಲಸು ತಿಂಬುವನೆ ಹೊಲೆಯ.**
> **ಕುಲವೇನೊ ಅವಂದಿರ ಕುಲವೇನೋ"**

ಎಂದು ಪ್ರಶ್ನಿಸಿದರು. ಅವರ ಅನುಭವ ಮಂಟಪದಲ್ಲಿ ನೆರೆದಿದ್ದ ಶರಣರು ಹಲವರು ಅಂತ್ಯಜರು. ಶಿವನಾಗಮಯ್ಯ, ಡೋಹರ ಕಕ್ಕಯ್ಯ ಮಾದಾರಚೆನ್ನಯ್ಯ, ಶ್ವಪಚಯ್ಯ, ಮೇದಾರ ಕೇತಯ್ಯ ಇತ್ಯಾದಿ. ಇವರನ್ನೆಲ್ಲ ಬಸವಣ್ಣ ಸಮಾನತೆಯಿಂದ ಮಾತ್ರವಲ್ಲ ಅತ್ಯಂತ ಗೌರವದಿಂದ ಕಂಡರು, "ಭಕ್ತ ಶಿಖಾಮಣಿ" "ಶ್ವಪಚಯ್ಯನ ಸನ್ನಿಧಿ" ಎಂಬ ವಿಶೇಷಣಗಳು ಗಮನಾರ್ಹ.

> **ದೇವದೇವಾ, ಭಿನ್ನ ಪವನವಧಾರು**
> **ವಿಪ್ರ ಮೊದಲಾಗಿ ಅಂತ್ಯಜ ಕಡೆಯಾಗಿ**
> **ಶಿವಭಕ್ತರಾದವರನ್ನೆಲ್ಲರನೊಂದೇ ಎಂಬೇ**
> **ಹಾರುವ ಮೊದಲು ಶ್ವಪಚ ಕಡೆಯಾಗಿ**
> **ಭವಿಯಾದವರನೊಂದೇ ಎಂಬೆ,**
> **ಹೀಗೆಂದು ನಂಬುವುದನ್ನೆ ಮನವು**
> **ಈ ನುಡಿದ ನುಡಿಯೊಳಗೆ ಎಳ್ಳಮೊನೆಯಷ್ಟು ಸಂದೇಹವುಳ್ಳರೆ**
> **ಹುಲುದೊರೆ ಮೂಗಕೊಯಿ, ಕೂಡಲಸಂಗಮದೇವಾ,**
> **ವೇದಕ್ಕೆ ಬರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ**

ತರ್ಕದ ಬೆನ್ನಬಾರನೆತ್ತುವೆ ಆಗಮದ ಮೂಗ ಕೊಯ್ಯುವೆ ನೋಡಯ್ಯ
ಮಹಾದಾನಿ ಕೂಡಲಸಂಗಮದೇವ.
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ

ಹೀಗೆ ಶಾಸ್ತ್ರಗಳಿಗೇ ಸವಾಲು ಹಾಕಿದರು ಬಸವಣ್ಣ. ಅವರು ಅಂತ್ಯಜರ ಬಗ್ಗೆ ಎಷ್ಟು ತಾದಾತ್ಮ್ಯ ಹೊಂದಿದ್ದರು ಎನ್ನುವುದಕ್ಕೆ, ಅವರು ತಮ್ಮನ್ನು ಅಂತ್ಯಜರ ಮಗನೇ ಎಂದುಕೊಂಡುದೆ ಸಾಕ್ಷಿ. "ಶುನಿಚೈವ ಶ್ವಪಾಕೇನ ಪಂಡಿತಾಃ ಸಮದರ್ಶಿನಃ" ಎಂಬ ಗೀತಾವಾಕ್ಯದ ತಾರ್ಕಣೆ ಬಸವಣ್ಣನವರ ಬಾಳಿನಲ್ಲಿ ಆಗಿದೆ.

ಅಸ್ಪೃಶ್ಯತಾ ನಿವಾರಣೆಯ ಮಹಾಕ್ರಾಂತಿಯತ್ನದ ತುಟ್ಟ ತುದಿ ಹರಳಯ್ಯ ಮಧುವರಸರ ಪ್ರಸಂಗ. ಅಂತ್ಯಜ ಆಗಿದ್ದ ಹರಳಯ್ಯನ ಮಗನಿಗೆ ವಿಪ್ರನಾಗಿದ್ದ ಮಧುವರಸನ ಮಗಳನ್ನು ಕೊಟ್ಟು ಮದುವೆ ಆಯಿತು. ಹರಳಯ್ಯ ಮಧುವರಸರ ಜನ್ಮಜಾತಿ ಏನೇ ಇರಲಿ, ಸ್ಪೃಶ್ಯ-ಅಸ್ಪೃಶ್ಯಭಾವನೆ ಏನೂ ಇರಲಿಲ್ಲ. ಮದುವೆ ಬಸವ ತತ್ವಕ್ಕೆ ಹೊಂದುವಂಥದೇ, ಆದರೆ ಇದೇ ಪ್ರಸಂಗ ದೊರೆ ಬಿಜ್ಜಳ ಹಾಗೂ ಭಂಡಾರಿ ಬಸವಣ್ಣನವರ ಸಂಬಂಧ ಮುರಿಯಲು ಕಾರಣವಾಯಿತು. ಅಣ್ಣನವರ ಸುಧಾರಣಾಕ್ರಮವನ್ನು ಒಪ್ಪದ ಹಾಗೂ ಯಥಾಸ್ಥಿತಿವಾದಿಗಳಾದ ಪ್ರತಿಗಾಮಿ ಶಕ್ತಿಗಳ ಪ್ರಾಬಲ್ಯ ಬಿರುಸುಗೊಂಡು ಬಿಜ್ಜಳನನ್ನು ಕೈವಶಮಾಡಿಕೊಳ್ಳುವದು. ಪರಿಣಾಮವಾಗಿ ಹರಳಯ್ಯ ಮಧುವರಸರ ವರ್ಣಸಂಕರದ ಆಪಾದನೆಗೆ ತುತ್ತಾಗಿ ಘೋರಶಿಕ್ಷೆಗೆ ಬಲಿಯಾಗುವುದು, ಕಲ್ಯಾಣದಲ್ಲಿ ರಕ್ತಕ್ರಾಂತಿ, ಬಸವಣ್ಣನವರ ಪದತ್ಯಾಗ, ಬಿಜ್ಜಳನ ಕೊಲೆ, ಕೂಡಲಸಂಗಮದಲ್ಲಿ ಬಸವಣ್ಣನವರ ನಿರ್ವಾಣ ಎಲ್ಲ ಘಟನೆಗಳಳು ನಡೆಯುತ್ತವೆ. ಸಮಾಜ ಸುಧಾರಣೆಯ ಮಾನವೀಯ ಕಾರ್ಯ ಘೋರ ರಾಜ್ಯಕ್ರಾಂತಿಗೆ ಕಾರಣ ಆಗುತ್ತದೆ. ಬಸವಣ್ಣನವರ ಮೇಲೆ ಬಿಜ್ಜಳನ ಕೊಲೆಯ ಅಪವಾದವೂ ಬಾರದಿರಲಿಲ್ಲ. "ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುತ್ತ" ಸರ್ವೋದಯವನ್ನು ಸಾಧಿಸ ಹೊರಟ ಶರಣ ಬಸವಣ್ಣ ಹೀಗೆ ದುರಂತವನ್ನು ಕಾಣಬೇಕಾಗುತ್ತದೆ. ಸಮಾಜ ಸಮುದ್ರಮಂಥನದಲ್ಲಿ ಹುಟ್ಟಿದ ಕಾಲ ಕೂಟ ವಿಷವನ್ನು ಕುಡಿಯಬೇಕಾಗುತ್ತದೆ. ಮಹಾಪುರುಷರು ತಮ್ಮ ಕಾಲದ ಪರಿಧಿಯನ್ನು ಮೀರಿ ದೂರ ಬಹುದೂರ ನೋಡುವವರು. ಎಷ್ಟೋ ಸಲ ಅವರ ದರ್ಶನ ಅವರ ಕಾರ್ಯ ಆ ಕಾಲಕ್ಕೆ ತುಂಬ ಅತೀತವಾದದ್ದು. ಆಗ ಅವರ ಕಾಲ ಅವರ ಯುಗ ಅವರನ್ನು ಸಹಿಸಿಕೊಳ್ಳುವುದಿಲ್ಲ. ಸಾಕ್ರಟೀಸ್ ಇರಬಹುದು, ಏಸುಸ್ವಾಮಿ ಇರಬಹುದು, ಲಿಂಕನ್ ಇರಬಹುದು, ಬಸವಣ್ಣ ಇರಬಹುದು.

ಅಸ್ಪೃಶ್ಯತೆಯ ಮುಖಾಮುಖಿ ಗಾಂಧೀಜಿಗೆ ಬಾಲ್ಯದಲ್ಲೆ ಆಗುತ್ತದೆ. ಮನೆಯ ಪಾಯಿಖಾನೆ ಶುಚಿ ಮಾಡುತ್ತಿದ್ದ 'ಯೂಕ' ಎಂಬಾತನನ್ನು ಮುಟ್ಟಿಸಿಕೊಳ್ಳುವಂತಿಲ್ಲ. ಆತ ಅಸ್ಪೃಶ್ಯ. ಏಕೆ ಮುಟ್ಟಿಸಿಕೊಳ್ಳಬಾರದು ಅವನು ಮಾಡಿದ ಪಾಪವೇನು? ಅವನು ಮನುಷ್ಯನಲ್ಲವೇ? ಸರ್ವಾಂತರ್ಯಾಮಿ ಭಗವಂತ ಮೂಕನಲ್ಲಿ ಇಲ್ಲವೇ? ಇತ್ಯಾದಿ ಪ್ರಶ್ನೆಗಳು ಏಳುತ್ತಿದ್ದವು. ಮುಗ್ಧ ಮೋಹನನಲ್ಲಿ.

ಮುಂದೆ ಆತ ಬೆಳೆದಂತೆಲ್ಲ, ದೃಷ್ಟಿ ಹರಡಿದಂತೆಲ್ಲ ಅಸ್ಪೃಶ್ಯತೆ ಒಂದು ಅಮಾನವೀಯ, ಅಸಮರ್ಥನೀಯ ಅಭಿಶಾಪವೆಂದೇ ದೃಢವಾಯಿತು. ಒಡನೆಯು ಅವರ ಅಸ್ಪೃಶ್ಯತಾ ನಿವಾರಣೆಯ ವ್ರತತೊಟ್ಟರು. ಹಿಂದೆಯೆ ನೋಡಿದಂತೆ 'ಸ್ಪರ್ಶಭಾವನಾ' ಆಶ್ರಮದ ಏಕಾದಶ

ವ್ರತಗಳಲ್ಲಿ ಸೇರಿತು. ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ಇದ್ದಕಾಲ, ಅವರ ಬೆಳವಣಿಗೆಯ ಕಾಲ, ಎಂ.ಕೆ.ಗಾಂಧೀ ಎಂಬ ವಕೀಲ ಮಹಾತ್ಮ ಆಗಲು ಪೂರ್ವಸಿದ್ಧತೆ ನಡೆದದ್ದು ಅಲ್ಲೆ. ಗಾಂಧೀಜಿ ವ್ಯಕ್ತಿತ್ವ ರೂಪುಗೊಂಡದ್ದು ಅಲ್ಲೆ. ಆಗಲೇ ಅವರಿಗೆ ಅಸ್ಪೃಶ್ಯತೆಯೆ ಬಗ್ಗೆ ಸ್ಪಷ್ಟ ಅಭಿಪ್ರಾಯ ಮೂಡಿತ್ತು. ತಮ್ಮ ಮನಸ್ಸಿನಿಂದ, ತಮ್ಮ ಆಚಾರದಿಂದ, ತಮ್ಮ ಮನೆಯಿಂದ, ತಮ್ಮ ಆಶ್ರಮದಿಂದ, ಅಸ್ಪೃಶ್ಯತೆಯನ್ನು ತೊಲಗಿಸಿದ್ದರು. ಭಾರತಕ್ಕೆ ಬಂದಮೇಲಂತೂ, ಇಲ್ಲಿ ಉಗ್ರರೂಪದಲ್ಲಿದ್ದ ಈ ಪಿಡುಗನ್ನು ಕಂಡು ಅಳಲಿದರು. ಆಗ್ರಹಮಾಡಿದರು. ಸ್ವಾತಂತ್ರ್ಯ ಪಡೆಯಲು ನಾವು ಅರ್ಹರಾಗಬೇಕಾದರೆ ಅಸ್ಪೃಶ್ಯತೆಯನ್ನು ತೊಡೆದು ಹಾಕಬೇಕು ಎಂದರು. ಖಾದಿಗ್ರಾಮೋದ್ಯೋಗ, ಅಸ್ಪೃಶ್ಯತಾ ನಿವಾರಣೆ, ಹಿಂದೂ–ಮುಸ್ಲಿಮ್ ಒಗ್ಗಟ್ಟು ಈ ಮೂರನ್ನು ಅತಿ ಮುಖ್ಯ ಕಾರ್ಯಕ್ರಮಗಳನ್ನಾಗಿ ದೇಶದ ಮುಂದೆ ಇಟ್ಟರು. ಅಂತ್ಯಜರು ದೇವರ ಮಕ್ಕಳು, ಹರಿಜನರು ಎಂದು "ಹರಿಜನ" ಹರಿಜನ ಬಂಧು, ಹರಿಜನ ಸೇವಕ ಎಂಬ ಪತ್ರಿಕೆಗಳನ್ನು ನಡೆಸಿದರು. ಅಸ್ಪೃಶ್ಯತೆಗೆ ಶಾಸ್ತ್ರಾಧಾರ ಇಲ್ಲ ಎಂದು ವಾದಿಸಿದರು. ಸನಾತನಿಗಳೊಂದಿಗೆ ವಿಪುಲ ಚರ್ಚೆ ಮಾಡಿದರು. ಅಸ್ಪೃಶ್ಯತೆ ಹಿಂದೂಧರ್ಮಕ್ಕೆ ಅಂಟಿದ ಶಾಪ, ಅದು ಅಳಿದಲ್ಲದೆ ಹಿಂದೂ ಧರ್ಮ ಉಳಿಯದು ಎಂದರು. ಹರಿಜನ ಸೇವಕ ಸಂಘವನ್ನು ಸ್ಥಾಪಿಸಿದರು. ಹರಿಜನರ ಬದುಕು ಹಸನಾಗಿ, ಅವರೂ ಸಮಾಜದಲ್ಲಿ ಸರಿಸಮ ಸ್ಥಾನ ಪಡೆಯಬೇಕು. ಅದಕ್ಕಾಗಿ ಮದ್ಯಪಾನ, ದುರ್ಮಾಂಸ ಸೇವನೆ ಇತ್ಯಾದಿಗಳನ್ನು ಬಿಡಬೇಕು, ಶುಚಿತ್ವ ಅರಿಯಬೇಕು. ಶಿಕ್ಷಣ ಪಡೆಯಬೇಕು ಎಂದು ಪ್ರಚಾರ ಮಾಡಿದರು, ಅದಕ್ಕಾಗಿ ಶ್ರಮಿಸಿದರು.

ಸಮಾಜಕ್ಕೆ ಅಗತ್ಯವಾದರೂ ಕೊಳಕು ಕೀಳು ಎನಿಸಿಕೊಂಡ ಕೆಲವು ಕಸುಬು ಇವೆ. ಪಾಯಿಖಾನೆ ಎತ್ತುವುದು, ಸತ್ತಪ್ರಾಣಿಗಳ ವಿಲೇವಾರಿ, ಚರ್ಮದ ಕೆಲಸ ಇತ್ಯಾದಿ. ಅಂಥ ಕಸುಬು ಮಾಡುವವರಿಗೆ ಅಂಟಿದ್ದ ಕಳಂಕ ಹೋಗಬೇಕಾದರೆ ಸಮಾಜದ ಇತರ ವರ್ಗಗಳವರೂ ಆ ಕೆಲಸಗಳನ್ನು ಮಾಡಬೇಕು. ಕೆಲಸದ ಘನತೆಯನ್ನು ಹೆಚ್ಚಿಸಬೇಕು. ಎನ್ನುವುದು ಗಾಂಧೀಜಿಯ ವಿಚಾರ. ಅದನ್ನು ಆಚರಿಸಲು ತಾವೇ ಮುಂದಾದರು. ತಮ್ಮ ಆಶ್ರಮದಲ್ಲಿ ಅದನ್ನೇ ಜಾರಿಗೆ ತಂದರು, ಸವರ್ಣೀಯರೇ ಭಂಗಿ ಕೆಲಸ ಮಾಡಿ ಆ ಕೆಲಸದ ಹೀನಾಯವನ್ನು ಹೋಗಲಾಡಿಸುವ ಪ್ರಯತ್ನ ಮಾಡಿದರು. ಆಶ್ರಮದಲ್ಲಿ ಹರಿಜನ ಕುಟುಂಬಕ್ಕೆ ಆಶ್ರಯವಿತ್ತರು. ಅದರಿಂದ ಆಶ್ರಮಕ್ಕೆ ಬರುತ್ತಿದ್ದ ಧನ ಸಹಾಯ ನಿಂತು, ಆಶ್ರಮ ಮುಚ್ಚುವ ಸ್ಥಿತಿ ಒದಗಿದರೂ, ಗಾಂಧೀಜಿ ತಮ್ಮ ಆದರ್ಶವನ್ನು ಬಿಡಲಿಲ್ಲ. ಅಷ್ಟರಲ್ಲಿ ಒಬ್ಬ ಸಹಾನುಭೂತಿಪರ ಶ್ರೀಮಂತ ತಾನೇ ಬಂದು ದಾನವಿತ್ತದು ಪವಾಡ ಸದೃಶ್ಯ ಘಟನೆ, ಹರಿಜನ ಹುಡುಗಿ ಲಕ್ಷ್ಮಿಯನ್ನು ಸಾಕು ಮಗಳೆಂದೇ ಬೆಳೆಸಿದರು. ಹರಿಜನರಿಗೆ ಪ್ರವೇಶವಿಲ್ಲದ ದೇವಾಲಯಗಳಿಗೆ ತಾವಾಗಲೀ ತಮ್ಮ ಪರಿವಾರವಾಗಲಿ ಹೋಗುತ್ತಿರಲಿಲ್ಲ. ಹೆಂಡತಿ ಕಸ್ತೂರಿಬಾ ಹಾಗೂ ಆಪ್ತ ಶಿಷ್ಯ ಮಹದೇವ ದೇಸಾಯಿ ಆಸೆ ತಡೆಯಲಾರದೆ ಆ ನಿಯಮ ಮೀರಿ ಪುರಿಜಗನ್ನಾಥ ದೇವಾಲಯಕ್ಕೆ ಹೋದುದಕ್ಕಾಗಿ ಗಾಂಧೀಜಿಯ ಆಗ್ರಹಕ್ಕೆ ಗುರಿಯಾಗಬೇಕಾಯಿತು. ಹರಿಜನರಿಗೆ ಕ್ಷೌರಮಾಡಲು ಒಪ್ಪದ ಕ್ಷೌರಿಕನಿಂದ ಕ್ಷೌರಮಾಡಿಸಿಕೊಳ್ಳಲು ಒಪ್ಪುತ್ತಿರಲಿಲ್ಲ. ಗಾಂಧೀಜಿ, ಸಹಪಂಕ್ತಿ ಭೋಜನ, ದೇವಾಲಯ ಪ್ರವೇಶ ಉದ್ಯೋಗಾವಕಾಶ, ಶಿಕ್ಷಣ, ಅಂತರ್ಜಾತೀಯ ವಿವಾಹ ಹೀಗೆ ನಾನಾ ಬಗೆಯ ಸಮಾಜ ಸುಧಾರಣಾಕಾರ್ಯಗಳ ಮೂಲಕ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಹೆಣಗಿದರು,

ಅದಕ್ಕಾಗಿ ಪ್ರವಾಸ, ಹಣ ಸಂಗ್ರಹಣೆ ಉಪವಾಸಗಳನ್ನು ಮಾಡಿದರು, ಭಂಗಿಕಾಲೋನಿಯಲ್ಲೇ ಬಿಡಾರ ಹೂಡಿದರು. ಸನಾತನಿಗಳ ವಿರೋಧಕ್ಕೆ ಆಕ್ರೋಶಕ್ಕೂ ತಲೆಕೊಟ್ಟರು. ಬಿಹಾರದಲ್ಲಿ ಸಂಭವಿಸಿದ ಭೂಕಂಪ ಅಸ್ಪೃಶ್ಯತೆಯ ಶಾಪದ ಫಲ ಎನ್ನುವವರೆಗೂ ಹೋದರು, ಇದನ್ನು ಮೌಢ್ಯ ಎಂದು ಅನೇಕರು ಹೇಳಿದುದುಂಟು. ಅದರೇನು, ಗಾಂಧೀಜಿಯ ಹೃದಯದ ವೇದನೆ ಆ ಮಾತಿನಲ್ಲಿ ಒಡಮೂಡಿತ್ತು.

ಬಸವಣ್ಣನವರಂತೆ ಗಾಂಧೀಜಿ ಅಂತರ್ಜಾತೀಯ ಮದುವೆ ಮಾಡಿಸಿದ್ದು ಉಂಟು, ಆದರೆ ಕಾಲವ್ಯತ್ಯಾಸದ ಫಲ, ಎಂಟುನೂರು ವರ್ಷದ ಹಿಂದೆ ಆದಂಥ ದುರಂತ ಪರಿಣಾಮ ಆಗಲಿಲ್ಲ. ಒಂದೇ ಜಾತಿಯಲ್ಲಿ ನಡೆದ ಮದುವೆಗಳಿಗೆ ಹೋಗುವುದನ್ನು ಬಿಟ್ಟರು. ಗಾಂಧೀಜಿ, ಮಹದೇವದೇಸಾಯಿ ಮಗನ ಮದುವೆಗೂ ಹೋಗಲಿಲ್ಲ, ಭಿನ್ನ ಉಪಜಾತಿಯ ಮದುವೆ ಎಂದು ಒಂದು ಆಶೀರ್ವಾದ ಕಳಿಸಿದರಷ್ಟೆ.

ಗಾಂಧೀಜಿ ಕರ್ನಾಟಕದಲ್ಲಿ ಹಲವುಬಾರಿ ಪ್ರವಾಸ ಮಾಡಿದರು. ೧೯೨೭ರಲ್ಲಿ ಬಂದಿದ್ದಾಗ ಗುಲಬರ್ಗಾದ ಶ್ರೀಶರಣಬಸವೇಶ್ವರ ಗುಡಿಗೆ ಹೋಗಿದ್ದರು. ಕೆಲವೇ ದಿನದ ಹಿಂದೆ ಅಲ್ಲಿ ಅನ್ಯಮತೀಯರಿಂದ ಹಲ್ಲೆ ಆಗಿತ್ತು. "ದೊಂಬಿ ಆದಾಗ ಎಲ್ಲಿದ್ದೀರಿ"? ಎಂದು ಗಾಂಧೀಜಿ ಪೂಜಾರಿಯನ್ನು ಕೇಳಿದರು. ಆತ "ಓಡಿಹೋಗಿದ್ದೆ" ಎಂದು ಉತ್ತರಿಸಿದರು, "ಹಾಗೆ ಮಾಡಬಾರದಾಗಿತ್ತು. ಇಲ್ಲೇ ಮಲಗಿ ಪ್ರಾಣ ಕೊಡಬೇಕಾಗಿತ್ತು" ಎಂದರು ಗಾಂಧೀಜಿ, ಶ್ರೀ ಹರ್ಡೇಕರ ಮಂಜಪ್ಪನವರು ಈ ನೆನಪನ್ನು ದಾಖಲು ಮಾಡಿದ್ದಾರೆ.

೧೯೩೧-೩೨ರಲ್ಲಿ ಗಾಂಧೀಜಿ ಯರವಾಡಾ ಜೈಲಿನಲ್ಲಿ ಇದ್ದಾಗ ಕರ್ನಾಟಕದ ಶ್ರೀ ಅಂದಾನೆಪ್ಪ ದೊಡ್ಡಮೇಟಿ ಅಲ್ಲಿಗೆ ಹೋಗಿ ಭೇಟಿಮಾಡಿದರು. ಹರಿಜನ ಸಮಸ್ಯೆಯ ಮಾತು ಬಂತು, "ಕರ್ನಾಟಕದವರಿಗೆ ಹೊಸದಾಗಿ ಏನೋ ಹೇಳಬೇಕಾಗಿಲ್ಲ. ಎಂಟುನೂರು ವರ್ಷಗಳ ಹಿಂದೆಯೇ ಶ್ರೀ ಬಸವೇಶ್ವರರು. ಏನು ಮಾಡಿದರೊ ಅದನ್ನೇ ನಾನು ಮುಂದುವರಿಸುತ್ತಿದ್ದೇನೆ" ಎಂದರು ಗಾಂಧೀಜಿ. ಬಸವ-ಗಾಂಧಿ ಸಂಬಂಧ ಇದು!

೧೯೩೪ರಲ್ಲಿ ಹಾವೇರಿಯಲ್ಲಿ ಒಂದು ಸಭೆ. ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳೂ ಇದ್ದರಂತೆ, ಅವರು "ವೀರಶೈವರಲ್ಲಿ ಹರಿಜನರಿದ್ದಾರೆ. ಅವರಿಗೆ ಈ ಶಬ್ದ ಸರಿಬರದು" ಎಂದರಂತೆ. ಆಗ ಗಾಂಧೀಜಿ "ಹರಿ-ಹರರಲ್ಲಿ ಭೇದವಿಲ್ಲ, ದೇವನೊಬ್ಬ ನಾಮಹಲವು, ಎಲ್ಲವೂ ಒಬ್ಬನೇ, ದೇವರಿಗೆ ಬೇರೆಬೇರೆ ಹೆಸರು, ಲಿಂಗಾಯುತರು ಶಿವಭಕ್ತರು, 'ಹರಿಜನ' ಶಬ್ದ ರುಚಿಸದೆ ಇರಬಹುದು. ಆದರೆ ಈ ಬಗ್ಗೆ ವಿವಾದ ಅನಗತ್ಯ" ಎಂದರು.

ಇಂದಿನ ಅವಸ್ಥಾರೂಪದ ವರ್ಣ ವ್ಯವಸ್ಥೆಯನ್ನು ಗಾಂಧೀಜಿ ಒಪ್ಪಲಿಲ್ಲ. ಆದರೆ 'ವರ್ಣ'ದ ಮೂಲ ಕಲ್ಪನೆ; ಅಂದರೆ ಸಂಘರ್ಷರಹಿತವೂ, ಸ್ಪರ್ಧಾರಹಿತವೂ, ಸಹಕಾರಯುತವೂ ಆದ ಶ್ರಮ ವಿಭಜನೆಯ ಕಲ್ಪನೆಯನ್ನು ಅವರು ಒಪ್ಪಿಕೊಂಡಿದ್ದರು. ವರ್ಣದ ವಿಕೃತ ಫಲವಾದ ಜಾತಿ ಪದ್ಧತಿಯನ್ನು ಅವರು ವಿರೋಧಿಸುತ್ತಿದ್ದರು. ಮಾತಿನ ವಿರೋಧಕ್ಕಿಂತ ಮೇಲಾಗಿ ಅವರ ಕೃತಿಯಲ್ಲಿ ಜಾತಿಯತೆಯನ್ನು ದೂರ ಮಾಡಿದ್ದರೂ, ಶ್ರೀಸ್ವಾಮಿ ವಿಶ್ವಾನಂದ (ಕನ್ನಡನಾಡಿನ ಒಬ್ಬ ರಚನಾತ್ಮಕ ಕಾರ್ಯಕರ್ತರಾಗಿದ್ದರು) ೧೯೪೬ರಲ್ಲಿ ಸೇವಾ ಗ್ರಾಮದಲ್ಲಿ ಗಾಂಧೀಜಿಯನ್ನು ಈ ಕುರಿತು ಕೇಳಿದಾಗ, ಗಾಂಧೀಜಿ

ಹೇಳಿದ್ದರು, "ಜಾತಿ ಅಳಿಯದೆ ಅಸ್ಪೃಶ್ಯತೆ ಅಳಿಯುವದಿಲ್ಲ, ಅಸ್ಪೃಶ್ಯತೆ ಅಳಿಯದೆ ಹಿಂದೂಧರ್ಮ ಉಳಿಯುವುದಿಲ್ಲ".

ಅಸ್ಪೃಶ್ಯತೆಯಂತೆಯೆ ಸ್ತ್ರೀಯರು ಅನಾದಿ ಕಾಲದಿಂದ ಪುರುಷ ಪ್ರಧಾನ ಸಮಾಜದ ಅವಜ್ಞೆಗೂ ಆಕ್ರಮಣಕ್ಕೂ ತುತ್ತಾಗಿ ಬಳಲಿದವರು, ಹಿಂದೆ ನಿಂತವರು. ಇದೊಂದೇ ದೊಡ್ಡ ಲೋಪ, ಈ ಅಸಮಾನತೆಯನ್ನು ಬಸವಣ್ಣನವರು ತೊಡೆದು ಹಾಕಿದ್ದು, ಅನುಭವ ಮಂಟಪದಲ್ಲಿ ಸ್ತ್ರೀಯರಿಗೆ ಉಚಿತ ಸ್ಥಾನವಿತ್ತುದು ಐತಿಹಾಸಿಕ ಸುಧಾರಣೆ. ಇದಕ್ಕೆ ಉಜ್ವಲ ನಿದರ್ಶನ ಅಕ್ಕಮಹಾದೇವಿ.

ನಮ್ಮ ಕಾಲದಲ್ಲಿ ಸ್ತ್ರೀಶಕ್ತಿ ಜಾಗೃತಿಯಾದದ್ದು ಸಾವಿರಗಟ್ಟಲೆ ಮಹಿಳೆಯರು ಅಡುಗೆ ಮನೆಯಿಂದ ಹೊರಬಂದು ಸ್ವಾತಂತ್ರ್ಯ ಹೋರಾಟದಲ್ಲಿ ಪುರುಷರಿಗೆ ಸರಿದೊರೆಯಾಗಿ ಭಾಗವಹಿಸಿದ್ದು, ತ್ಯಾಗ ಮಾಡಿದ್ದು, ಸಮಾಜ ಉನ್ನತವೂ ಪ್ರಮುಖವೂ ಆದ ಸ್ಥಾನಗಳಿಗೆ ಭಾಜನರಾದದ್ದು ಕಣ್ಣೆದುರಿನ ಮಹಾಘಟನೆ, ಮಹಾ ಪರಿವರ್ತನೆ. ಇದು ಬಹುಪಾಲು ಗಾಂಧೀಜಿಯವರ ಕಾರ್ಯಕ್ರಮದ ಫಲ ಎಂದರೆ ತಪ್ಪಲ್ಲ, ರಾಜಾರಾಮಮೋಹನರಾಯರಿಂದ ಹಿಡಿದು ಅನೇಕ ಮಹಾನೀಯರು, ಈ ಸಮಸ್ಯೆ ಬಗ್ಗೆ ಬಹುವಾಗಿ ಶ್ರಮಿಸಿ ವಾತಾವರಣವನ್ನು ರೂಪಿಸಿದ್ದರು. ನಿಜ, ಅದೆಲ್ಲದರ ಶಿಖರ ಪ್ರಾಯವಾಗಿ ಗಾಂಧೀಜಿ ಸ್ತ್ರೀಶಕ್ತಿ ಜಾಗೃತಿಗೆ ಇಂಬುಕೊಟ್ಟರು. ಓದು ಬಾರದ ಮುಗ್ಧ ಕಸ್ತೂರಬಾ ಸಹ ಸತ್ಯಾಗ್ರಹದ ನಾಯಕತ್ವ ವಹಿಸುವಂತೆ ಆದುದು ಇದಕ್ಕೆ ಮಹಾನಿದರ್ಶನ. ವಿಚಾರ–ತತ್ತ್ವ ಪ್ರಣಾಲಿಗಳ ಮಾತು ಈವರೆಗೆ ಆಯಿತು, ಬಸವಣ್ಣ ಗಾಂಧೀಜಿ ಅವರ ಬದುಕಿನ ಹಲವು ಘಟನೆಗಳಲ್ಲಿ ಸಾಮ್ಯ ಎದ್ದು ಕಾಣುತ್ತವೆ.

ಅತ್ತ ಇತ್ತ ಹೋಗದಂತೆ ಹೆಳವನಮಾಡಯ್ಯ ತಂದೆ
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ
ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯ ತಂದೆ

ಇದೊಂದು ಪ್ರಖ್ಯಾತ ಬಸವ ವಚನ. ಗಾಂಧೀಜಿಯ ಹಾಸಿಗೆಯ ತಲೆದೆಸೆಯಲ್ಲಿ ಮೂರು ಕೋತಿಗಳ ಬೊಂಬೆಗಳು ಇದ್ದವಲ್ಲವೇ?

ಒಮ್ಮೆ ಹರಗಣ ಪಂಕ್ತಿಯಲ್ಲಿ ಊಟಕ್ಕೆ ಕುಳಿತ ಅಣ್ಣನವರಿಗೆ ಅವರ ಪತ್ನಿ ಪತಿಮೋಹದಿಂದ ಮಿಗಿಲಾಗಿ ದೇವಾನ್ನ ಬಿಡಿಸಿದಳಂತೆ. ಆಗ ಅಣ್ಣ ಮಾಡಿದ್ದೇನು?

"ಹರಗಣ ಪಂಕ್ತಿಯ ನಡುವೆ ಕುಳ್ಳಿರ್ದು,
ತಾನು ಒಡೆಯತನದ ನಾಯ ತೇಜವ ಹೊತ್ತುಗೊಂಡು
ಮಡದಿಯೆನ್ನಗಲೊಳಗೆ ಸಕಲ ದೇವಾನ್ನವ
ಒಡೆಯರಿಂದಲೂ ಮಿಗಿಲಾಗಿಕ್ಕಲು
ತೆಗೆದಿರಿಸಿದೆನು."

ಸೇವಾಗ್ರಾಮ ಆಶ್ರಮದಲ್ಲಿ ಒಮ್ಮೆ ಕಿರಿಯ ಮಗ ರಾಮದಾಸ್ ಮುಂಬೈಗೆ ಹೊರಡುತ್ತಾನೆ ಎಂದು, ತಾಯಿ ಕಸ್ತೂರಬಾ ನಾಲ್ಕು ರೊಟ್ಟಿ ಮಾಡಿ ಕೊಡಲು ಕೋರುತ್ತಾರೆ. ಒಂದು ರಾತ್ರಿ, ಆ ವೇಳೆಯಲ್ಲಿ ಅಡುಗೆ ಮನೆಯಲ್ಲಿ ದೀಪ ಕಂಡು ಗಾಂಧೀಜಿ ಬಂದು ನೋಡುತ್ತಾರೆ, ವಿಷಯ ತಿಳಿದು ಅಸಮ್ಮತಿ ಸೂಚಿಸುತ್ತಾರೆ. "ಆಶ್ರಮದಲ್ಲಿ ಬೇರೆ ಯಾರಿಗೂ ಇಲ್ಲದ ಇಂಥ ವಿಶೇಷ

ವ್ಯವಸ್ಥೆ ನಮ್ಮ ಮಗನಿಗೆ ಸಲ್ಲದು" ಎನ್ನುತ್ತಾರೆ. ಹೆಂಡತಿಯ ಕಣ್ಣೀರನ್ನು ಲೆಕ್ಕಿಸದೆ. ರೊಟ್ಟಿ ಕೆಲಸ ನಿಲ್ಲಿಸಿ ಬಲೆ ಆರಿಸಿ ದೀಪ ಆರಿಸಿ ಮಲಗುವವರೆಗೂ ಬಿಡುವುದಿಲ್ಲ.

ಬಸವಣ್ಣನವರ ವಿನಯ ಪ್ರಸಿದ್ಧ. "ಹೊಗಳಿ ಹೊಗಳಿ ಹೊನ್ನ ಶೂಲಕ್ಕೆ ಏರಿಸದಿರಿ" "ಎನಗಿಂತ ಕಿರಿಯರಿಲ್ಲ" ಎಂದರು. ಗಾಂಧೀಜಿ "ನಾನು ಮಹಾತ್ಮನಲ್ಲಿ ಅಲ್ಪಾತ್ಮ" ಎನ್ನುತ್ತಿದ್ದರು.

ಅವರು ಬರೆದ ಒಂದು ಪದ್ಯ. 'ಹೇ ನಮ್ರತಾಕೇ ಸಾಮ್ರಾಟ್" (lord of huminity) ಬ್ರಿಟಿಷ್ ಆಳರಸರಾಗಲಿ, ನಮ್ಮವರೆ ನಾಯಕರಾಗಲಿ ಎಷ್ಟೇ ಉಗ್ರವಾಗಿ ಕೆಲವೊಮ್ಮೆ ಹೀನಮಾನವಾಗಿ ತಮ್ಮನ್ನು ಖಂಡಿಸಿದರೂ ಹಳಿದರೂ, ಗಾಂಧೀಜಿ ನಿರುದ್ವೇಗದಿಂದ ನಮ್ರವಾಗಿಯೆ ಆದರೆ ಬಿಗಿಯಾಗಿಯೆ ಉತ್ತರಿಸುತ್ತಿದ್ದರು. ವೈಸರಾಯರನ್ನು "His excellancy" ಎಂದೇ, ಬ್ರಿಟಿಷ್ ದೊರೆಯನ್ನು "His Majesty" ಎಂದೇ ಉಲ್ಲೇಖಿಸುತ್ತಿದ್ದರು. ಸನಾತನಿಗಳಿಂದ ಹಾಗೂ ಹರಿಜನ ನಾಯಕರಿಂದ ಉಗ್ರಟೀಕೆ ಬಂದರೂ ಸಾಮ್ಯವಾಗಿಯೇ ಉತ್ತರಿಸುತ್ತಿದ್ದರು.

ಗೋವಿಂದದಾಸ ಕೌನ್ಸಲ್ ಎಂಬಾತ mahatama, the great rogue' ಎಂಬ ಪುಸ್ತಕ ಬರೆದ. ಆತನ ಗೆಳೆಯ ಅದನ್ನು ಗಾಂಧೀಜಿಗೆ ತೋರಿಸಿ ಸಂದೇಶ ಕೇಳಿದ. ಗಾಂಧೀಜಿ ಅವಿಚಲಿತರಾಗಿ ಬರೆದುಕೊಟ್ಟರು, "ನಿಮ್ಮ ಅಭಿಪ್ರಾಯ ನಿಮಗೆ ತೋರಿದಂತೆ ವ್ಯಕ್ತಪಡಿಸಲು ನೀವು ಸ್ವತಂತ್ರರು".

ಗಾಂಧಿ ವಾಙ್ಮಯದಲ್ಲಿ ಆಕ್ರೋಶ, ಆಟಾಟೋಪ ಅಪರೂಪ. ಮುತ್ತಿನ ಹಾರದಂಥ ನುಡಿಯಿಂದ, ಸ್ಫಟಿಕದ ಶಲಾಕೆಯಂಥ ನುಡಿಯಿಂದ ಬಸವಣ್ಣ ಲಿಂಗವನ್ನು ಮೆಚ್ಚಿಸಿ 'ಅಹುದು' ಎನಿಸಿದರು, ಗಾಂಧೀಜಿಯ ಮಾತೂ ಶಲಾಕೆಯಂತೆ ನೇರ. ಅರ್ಥದ ದೃಷ್ಟಿಯಿಂದ ಮುತ್ತಿನಹಾಗೆ. ಸಿಂಗಾರ ಬಳುಕು ಬೆಡಗು ಸುತ್ತು ಬಳಸು ಪಾಂಡಿತ್ಯದ ಕೋರಿಕೆ ಏನೂ ಇರುತ್ತಿರಲಿಲ್ಲ. ಮಾತೂ ಸರಳ ಸಹಜ ಸ್ಪಷ್ಟ. ವಚನ ಸಾಹಿತ್ಯದಲ್ಲಿಯೂ ಇದೇ ಲಕ್ಷಣಗಳನ್ನು ಜೊತೆಗೆ ಕಾವ್ಯದ ಮೇರುಗಳನ್ನು ಅನುಭಾವದ ಪ್ರಭೆಯನ್ನು, ಧ್ವನಿಯನ್ನು ಕಾಣುತ್ತೇವೆ.

ಸಂಸ್ಕೃತ ಒಂದೆ ವೇದಾಂತ ತತ್ತ್ವ ದರ್ಶನಗಳ ಭಾಷಾವಾಹಕ ಎಂಬುದು ರೂಢವಾಗಿದ್ದ ನಂಬಿಕೆ. ಇದನ್ನು ಕೊನೆಗಾಣಿಸಿ ಜನಸಾಮಾನ್ಯರ ಆಡುಮಾತಾದ ಕನ್ನಡದಲ್ಲೆ ಆ ಎಲ್ಲ ವಿಚಾರಗಳನ್ನು ತಿಳಿಸಿಗೊಡಬಹುದು ಎಂದು ಸಾಧಿಸಿತೋರಿದ್ದು ಬಸವಣ್ಣನವರ ವೈಶಿಷ್ಟ್ಯ. ಕೇವಲ ಲೌಕಿಕ ವ್ಯಾವಹಾರಿಕ ಎನಿಸಿಕೊಂಡಿದ್ದ ಕನ್ನಡವನ್ನು ತತ್ತ್ವವಿಚಾರವಾಹಕವಾಗಿ ಮಾಡಿದ್ದು ದೊಡ್ಡ ಕ್ರಾಂತಿಯೆ, ಗಾಂಧೀಜಿ ಅದೇ ರೀತಿ ಮಾತೃಭಾಷೆಗೆ ಪ್ರಮುಖ ಸ್ಥಾನ ಕೊಟ್ಟರು. ಗುಜರಾತೀ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಹಿಂದಿ, ಇಂಗ್ಲಿಷ್‌ಗಳ ಜೊತೆಗೆ ತಾಯಿ ನುಡಿಯನ್ನು ಬಳಸಿದರು, ಬೆಳೆಸಿದರು.

ವಚನಸಾಹಿತ್ಯದಲ್ಲಿ ಹೇಗೂ ಹಾಗೆಯೆ ಗಾಂಧೀ ಸಾಹಿತ್ಯದಲ್ಲಿಯೂ ಪ್ರಾಸಾಧಿಕ ಗುಣ ಒಡೆದು ಕಾಣುತ್ತದೆ. "ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ" ಎನ್ನುವುದು ಅಣ್ಣನ ಒಂದು ನುಡಿಮುತ್ತು. ಅಹಿಂಸಾ ಪಾಲನೆಯಲ್ಲಿ ಸ್ವಂತ ದೋಷವನ್ನು ದೊಡ್ಡದಾಗಿ ಕಾಣಬೇಕು. ಎನ್ನುತ್ತಾರೆ ಗಾಂಧೀಜಿ. ದಿನಚರಿ ಬಗ್ಗೆ ಅವರು ಹೇಳುತ್ತಾರೆ;

"No self praise be recorded faults of others should not be stated".

ವೈಯಕ್ತಿಕ ಜೀವನ ನೋಡಿದರೆ ಇನ್ನೂ ಕೆಲವು ಸಾಮ್ಯ ವ್ಯತ್ಯಾಸಗಳು ಕಾಣಿಸುತ್ತವೆ. ಬಸವಣ್ಣ ಅಲ್ಪಾಯುಷಿ ನಲವತ್ತು ತಲುಪುವ ಮುನ್ನವೇ ನಿರ್ಯಾಣ ಪಡೆದರು. ಸಂಸಾರದಲ್ಲಿ ಹಿತ ಕಂಡರು. ಹೆಂಡತಿಯರಿಬ್ಬರೂ ಸಹ ಧರ್ಮಚಾರಿಣಿಯರು, ಸ್ವತಃ ಶರಣೆಯರು. ಅಣ್ಣನವರು ರಾಜನಲ್ಲಿ ಅಧಿಕಾರದಲ್ಲಿದ್ದರು. ರಾಗದ್ವೇಷದ ವ್ಯವಹಾರಲೋಕ ಬಿಡಲಿಲ್ಲ. ಜೊತೆಗೆ ಆಧ್ಯಾತ್ಮದಲ್ಲಿ ಆಳವಾಗಿ ಮುಳುಗಿದ್ದರು. ಲೋಕಸಾಧಕರಾಗಿದ್ದಷ್ಟೆ ಆತ್ಮ ಸಾಧಕರು. ಶಿವಭಕ್ತನಿಗೆ ಬೇಕಾದ ಛಲ ಇದ್ದವರು. ಕೊನೆಯಲ್ಲಿ ತಮ್ಮ ಆದರ್ಶ ಭಿನ್ನವಾದುದನ್ನು ಕಂಡು ಸಂಕಟಪಟ್ಟರು.

ಗಾಂಧೀಜಿ ೭೯ ವರ್ಷ ಬದುಕಿದ್ದರು, ಸಂಸಾರದಲ್ಲಿ ಆಗಾಗ ಇರುಸು ಮುರುಕು ಇದ್ದರೂ ಹಿತ ಹಾಳಾಗಲಿಲ್ಲ, ಗಾಂಧೀ ಒಡ್ಡಿದ ಅಗ್ನಿ ಪರೀಕ್ಷೆಗಳಲ್ಲೆಲ್ಲ ಗೆದ್ದ ಕಸ್ತೂರಬಾ ಬಾಳ ಸಂಗಾತಿ, ಸಹಸತ್ಯಾಗ್ರಹಿ ಆದರು. ಗಾಂಧೀಜಿ ಯಾವ ಅಧಿಕಾರದಲ್ಲೂ ಇರಲಿಲ್ಲ. ಕಾಂಗ್ರೆಸ್‌ನ ಸ್ಥಾನವನ್ನು ಬಿಟ್ಟುಬಿಟ್ಟರು. ಅವರದೂ ಆಧ್ಯಾತ್ಮ ಚೇತನ. ಕ್ರಿಯಾರಂಗ ರಾಜಕಾರಣ. ಲೋಕ ಸಂಗ್ರಹದಲ್ಲೆ ಆತ್ಮ ಸಂಗ್ರಹವನ್ನು ಸಾಧಿಸಿದರು. ಆದರ್ಶಪಾಲನೆಯಲ್ಲಿ ಅವರೂ ಛಲಗಾರರೇ, ಗಾಂಧಿಯವರ ಕೊನೆಗಾಲವೂ ಸಂಕಟಮಯವೇ. ಅವರು ಗುಂಡಿಗೆ ಬಲಿಯಾದುದಲ್ಲ ದೇಶವಿಭಜನೆಯಿಂದ ಸಂಭವಿಸಿದ ಕ್ಷೋಭೆ, ಸಾವು ನೋವು ನರಳಾಟ, ದೇಶ ಬಾಂಧವರ ಹಿಂಸಾಚಾರ, ಅಹಿಂಸೆಗೆ ಒಡ್ಡಿದ ಘೋರಪರೀಕ್ಷೆ ಈ ಎಲ್ಲ ಸಂಕಟದ ವಿಷವನ್ನು ಉಣ್ಣಬೇಕಾಯಿತು ಗಾಂಧೀಜಿ.

ಬಸವಣ್ಣ ಕಲ್ಪಿಸಿದ ಸಮಾಜ ಸೃಷ್ಟಿಯಾಯಿತೇ? ಬಸವಣ್ಣ ಗೆದ್ದರೇ, ಸೋತರೇ? ಅವರ ವಿಚಾರ ಪ್ರಸ್ತುತವೇ ಇಂದಿಗೆ? ಪ್ರಶ್ನೆಗಳು ಏಳಬಹುದು, ಎಂಟುನೂರು ವರ್ಷಗಳ ನಂತರ. ಇಲ್ಲಿ ನಾವು ಇಂದು ಬಸವಣ್ಣನವರ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಬಸವ ಇಂದಿಗೆ ಪ್ರಸ್ತುತ ಅಲ್ಲ ಎನ್ನಬಹುದೇ?

ಗಾಂಧೀಜಿ ಮರೆಯಾಗಿ ೪೩ ವರ್ಷವಾಯಿತು. ದೇಶದಲ್ಲಿ ಎಲ್ಲೂ ಗಾಂಧೀಜಿ ರೀತಿ ಕಾಣಿಸುತ್ತಿಲ್ಲ. ತದ್ವಿರೋಧದ ಬದುಕೇ ಇದೆ. ಗಾಂಧೀ ಇಲ್ಲಿಗೆ ಅಪ್ರಸ್ತುತ ಎನ್ನುತ್ತಾರೆ ಎಷ್ಟೋ ಜನ. ಆದರೆ ಜಗತ್ತನ್ನು ಕಾಡುತ್ತಿರುವ ಎಷ್ಟೋ ಸಮಸ್ಯೆಗಳು ಹಿಂಸೆ, ನಿರುದ್ಯೋಗ, ಬಡತನ, ಇಂಧನ, ಪರಿಸರ ಮಾಲಿನ್ಯ ಎಲ್ಲವನ್ನು ನೋಡಿದಾಗಲೆಲ್ಲ ಲೋಕದಲ್ಲಿ ಅಲ್ಲಲ್ಲಿ ಗಾಂಧೀಜಿ ಹೆಸರೇ ಮತ್ತೆ ಮತ್ತೆ ಪ್ರಸ್ತಾಪಿತವಾಗುತ್ತದೆ. ಗಾಂಧೀ ಮಾರ್ಗದತ್ತಲೇ ಮಾನವನ ಆಸೆಗಣ್ಣಿನ ಕ್ಷೀಣ ದೃಷ್ಟಿ ಹೊರಳುತ್ತದೆ.

ಆರದಿರಲಿಬೆಳಕು ಇಂದಲ್ಲ ನಾಳೆ ಅದು ಕತ್ತಲೆಯನ್ನು ಕಳೆದೀತು ದಾರಿಯನ್ನು ಬೆಳಗೀತು.

'My life is my message' ಬಾಪೂವಿನದೂ ಅದೇ. ಬಸವಣ್ಣನವರ ಸಂದೇಶವೂ ಅದೇ.

❒

ಬಸವಣ್ಣ ಮತ್ತು ಪೆರಿಯಾರ್

●

ಡಾ. ಜಿ.ಆರ್. ತಿಪ್ಪೇಸ್ವಾಮಿ

'ಅನುಭವಗಳ ಸುಂದರವಾದ ಅಭಿವ್ಯಕ್ತಿಯೇ ಸಾಹಿತ್ಯ' ಎಂದು ಹೇಳಲಾಗುತ್ತದೆ. ಈ ಅನುಭವ ಒಬ್ಬ ಕವಿ ಅಥವಾ ಕಥೆಗಾರ ಅಂದರೆ, ಸಾಮಾನ್ಯ ವ್ಯಕ್ತಿಗಿಂತ ಭಿನ್ನವಾದ ಒಬ್ಬ ಬರಹಗಾರ ಅನುಭವಿಸಿದ್ದರಿಂದ, ಕಂಡಿದ್ದರಿಂದ, ಕೇಳಿದ್ದರಿಂದ, ಊಹಿಸಿದ್ದರಿಂದ, ಭಾವಿಸಿದ್ದರಿಂದ ಇಲ್ಲವೇ ಕನಸು ಕಂಡಿದ್ದರಿಂದ ಬಂದದ್ದಾಗಿರಬಹುದು, ಸಾಹಿತ್ಯವನ್ನು ಪ್ರಾಚೀನ ಅಲಂಕಾರಿಗಳು ದೃಶ್ಯ ಮತ್ತು ಶ್ರವ್ಯ ಎಂದು ಕರೆಯುತ್ತಿರುವುದಕ್ಕೆ ಸಂವಾದಿಯಾದ ಅರ್ಥದಲ್ಲಿ ಅಂದು ಕಾವ್ಯ ಎನ್ನುವ ಮಾತನ್ನು ಬಳಸಲಾಗಿದೆ. ಇಲ್ಲಿ ಒಂದು ವಿಚಾರ ಸ್ಪಷ್ಟವಾಗುತ್ತದೆ. ಕವಿಯೊಬ್ಬ ತನಗಿರುವ ಅಭಿವ್ಯಕ್ತಿ ಸಾಮರ್ಥ್ಯವನ್ನು ಎರಡು ಬಗೆಯಲ್ಲಿ ತೋರಿಸಿಕೊಳ್ಳಬಹುದು. ಒಂದನ್ನು ಬರೆಯುವುದರ ಮೂಲಕ ಮತ್ತೊಂದನ್ನು ಬರೆದದ್ದನ್ನು ದೃಶ್ಯೀಕರಿಸುವುದರ ಮೂಲಕ. ಇಂದು ನಾವು ಈ ಎರಡೂ ಪ್ರಕಾರಗಳಲ್ಲಿ ಸಾಹಿತ್ಯವನ್ನು ಪರಿಭಾವಿಸಬೇಕಾದ ಅಗತ್ಯವಿದೆ.

ಒಬ್ಬ ಕವಿ ಭಾವನೆಗಳ ವಿಚಾರದಲ್ಲಿ ಸಾಮಾನ್ಯ ಮನುಷ್ಯನಿಗಿಂತ ಭಿನ್ನನಾಗುತ್ತಾನೆಂಬುದು ಸ್ಪಷ್ಟ. ಕವಿಯ ಅನುಭವ ಅಥವಾ ಭಾವನೆಗಳು ಅವನ ಅಂತರಂಗದಲ್ಲಿ ಕುದಿದು ಯಾವುದಾದರೊಂದು ರೂಪದಲ್ಲಿ ಹೊರ ಪುಟಿಯಲು ಸದಾ ತುಡಿಯುತ್ತಿರುತ್ತವೆ. ಇಂಥ ತುಡಿತದ ಪರಿಣಾಮವಾಗಿ ಕವಿ ತನ್ನ ಭಾವನೆಗಳಿಗೆ ಕಾವ್ಯದ–ಕವಿತೆಯ–ನಾಟಕದ–ಕಾದಂಬರಿಯ ಒಟ್ಟಾರೆ ಸಾಹಿತ್ಯದ ರೂಪ ಕೊಡುವ ಪ್ರಯತ್ನವನ್ನೂ ಮಾಡುತ್ತಾನೆ. ಕವಿ ತನ್ನ ಭಾವನೆಗಳನ್ನು ಹೊರಹಾಕಲು ಅವನ ವ್ಯಕ್ತಿತ್ವ, ಪರಿಸರದ ಬದುಕು, ಬದುಕುತ್ತಿರುವ ಸಮಾಜ, ಆರ್ಥಿಕ, ರಾಜಕೀಯ, ಧಾರ್ಮಿಕ ಪರಿಸ್ಥಿತಿಗಳು–ಇತ್ಯಾದಿಗಳೆಲ್ಲಾ ಕಾರಣವಾಗಿರುತ್ತವೆ. ಒಬ್ಬ ಕವಿ ತಾನು ಅಭಿವ್ಯಕ್ತಿಸಿದ ಸಾಹಿತ್ಯದಲ್ಲಿ ಸಂತೋಷವನ್ನು ಹೊರ ಹಾಕಿದ್ದಾನೆಂದರೆ ಅವನ ಬದುಕಿನಲ್ಲಿರುವ ಸಂತೃಪ್ತ ಸ್ಥಿತಿಯನ್ನು ಅದು ಹೇಳಬಹುದು. ಕವಿ ತನ್ನ ರಚನೆಯಲ್ಲಿ ನೋವನ್ನು ಅಭಿವ್ಯಕ್ತಿಸಿದ್ದರೆ ಅವನ ಅಂತರಂಗದ ದುಃಖವನ್ನು ಹೊರ ಹಾಕಲು ಪ್ರಯತ್ನಿಸಿದ್ದಾನೆನ್ನಬಹುದು. ಇದಕ್ಕೆ ವ್ಯತಿರಿಕ್ತವಾಗಿ ಎಷ್ಟೋ ಸಾರಿ ಕವಿ ತನ್ನ ಬದುಕಿನ ಸಂಕಟಗಳನ್ನು ಮರೆಯುವುದಕ್ಕಾಗಿಯೇ ತನ್ನ ರಚನೆಗಳಲ್ಲಿ ಸಂತೃಪ್ತಿಯ ಮುಖವಾಡವನ್ನು

ಧರಿಸಿಕೊಂಡಿರಲೂಬಹುದು. ಆದರೆ, ಇಂಥ ಪಲಾಯನವಾದ ಪ್ರಜ್ಞಾವಂತ ಸಾಹಿತಿಗೆ ಬಹುಕಾಲ ಸಾಧ್ಯವಾಗುವುದಿಲ್ಲ. ಪ್ರಜ್ಞಾವಂತ ಸಾಹಿತಿ ತನ್ನ ರಚನೆಗಳಲ್ಲಿ ತನ್ನ ಹಾಗೂ ಸಮಾಜದ ಒಟ್ಟಾರೆ ಬದುಕನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸಲು ಪ್ರಯತ್ನಿಸುತ್ತಿರುತ್ತಾನೆ ಅಥವಾ ಅವನ ಪ್ರಜ್ಞೆಯೇ ಅನುಭವದ ನೈಜ ಅಭಿವ್ಯಕ್ತಿಗೆ ಒತ್ತಾಯಿಸುತ್ತಿರುತ್ತದೆ. ಇಂಥ ವ್ಯಕ್ತಿತ್ವವನ್ನು, ವೈಶಿಷ್ಟ್ಯವನ್ನು ಸಾಮಾನ್ಯರಿಗಿಂತ ಭಿನ್ನವಾದ ಮನೋಧರ್ಮವನ್ನು, ಆಲೋಚನೆಗಳನ್ನು ಹೊಂದಿರುವ ಸಾಹಿತಿಯೊಬ್ಬ ಸಾಹಿತ್ಯವನ್ನು ಸೃಷ್ಟಿಸುವ ಹಿಂದಿರುವ ಕಾಳಜಿಗಳೇನು? ಎನ್ನುವುದು ನಿಜಕ್ಕೂ ಚರ್ಚಾಯೋಗ್ಯವಾದದ್ದು.

ನಮಗೆ ದಾಖಲೆಗಳು ದೊರೆತಿರುವ ಹಾಗೆ ಕ್ರಿ.ಶ. ೧೦ನೇ ಶತಮಾನದಿಂದ ಮೊದಲ್ಗೊಂಡು ಇಲ್ಲಿಯವರೆಗೆ ನಿರಂತರವಾಗಿ ಕನ್ನಡದಲ್ಲಿ ಸಾಹಿತ್ಯ ಸೃಷ್ಟಿ ಆಗುತ್ತ ಬಂದಿದೆ. ಈ ಎಲ್ಲ ಸಾಹಿತ್ಯವನ್ನು ಸಮಗ್ರವಾಗಿ ಅಭ್ಯಸಿಸಿದಾಗ ಮೇಲೆ ಹೇಳಿರುವ ಮಾತುಗಳಲ್ಲಿರುವ ಖಚಿತತೆ ಅರ್ಥವಾಗುತ್ತದೆ. ಬಹುಸಂಖ್ಯಾತರಾಗಿರುವ ಜನಸಾಮಾನ್ಯರಿಗೆ ಅರ್ಥವಾಗದಂತೆ ಹೇಳಿರುವ ಯಾವುದೇ ಸಾಹಿತ್ಯವು ಅವರ ದೃಷ್ಟಿಯಿಂದ ಇಲ್ಲಿಯವರೆಗೆ ತನ್ನ ಶ್ರೇಷ್ಠತೆಯನ್ನು ಸಾಬೀತುಪಡಿಸಿಕೊಂಡಿಲ್ಲ. ಹತ್ತರಿಂದ ಹನ್ನೆರಡನೇ ಶತಮಾನಗಳ ಅವಧಿಯಲ್ಲಿ ರಚಿತವಾದ ಕನ್ನಡ ಸಾಹಿತ್ಯ ಕೇವಲ ಪಂಡಿತ ಮಾನ್ಯವಾದುದು. ರಾಜರನ್ನು ಓಲೈಸುವುದಕ್ಕಾಗಿಯೇ ಬರೆದದ್ದಾಗಿತ್ತು. ಅಂದಿನ ಕವಿ ರಾಜಾಶ್ರಯದಲ್ಲೇ ಇರಬೇಕಾದ ಅನಿವಾರ್ಯತೆ ಇದ್ದುದರಿಂದ ತನ್ನ ಸ್ವಾಮಿ ದುಷ್ಟನಾಗಿದ್ದರೂ ಭ್ರಷ್ಟನಾಗಿದ್ದರೂ ಅವನನ್ನು ಇಂದ್ರ ಚಂದ್ರ ಎಂದೇ ಹೊಗಳಿ ಅಟ್ಟಕ್ಕೇರಿಸಬೇಕಿತ್ತು. ತಾನು ಸುಳ್ಳು ಬರೆಯುತ್ತಿದ್ದೇನೆಂದು ಕವಿಗೆ ಗೊತ್ತಿದ್ದರೂ ಅದರಿಂದ ಬಿಡಿಸಿಕೊಳ್ಳುವ ಉಪಾಯಗಳಿರಲಿಲ್ಲ. ಇಂಥ ಸಾಹಿತ್ಯ ಜನಸಾಮಾನ್ಯರನ್ನು ಯಾವುದೇ ಹಂತದಲ್ಲೂ ಕೊನೆಗೆ ಸಂಸ್ಕೃತ ಪದಪುಂಜಗಳಿಂದ ಭರಿತವಾದ ಭಾಷೆಯಿಂದಲೂ ಮುಟ್ಟಲು ಸಾಧ್ಯವೇ ಇರಲಿಲ್ಲ. ಆದರೆ ನಯಸೇನ ಯಾವ ರಾಜನ ಆಸ್ಥಾನದಲ್ಲಿಯೂ ಇಲ್ಲದುದರಿಂದ ಕೆಲವು ದಾಕ್ಷಿಣ್ಯಗಳಿಂದ ಇಕ್ಕಟ್ಟುಗಳಿಂದ ಪಾರಾದ. ಪಂಪನಂಥ ಶ್ರೇಷ್ಠ ಕವಿಗೂ ರಾಜನ ಆಸ್ಥಾನ ಕೆಲವು ನಿರ್ಬಂಧಗಳನ್ನು ವಿಧಿಸಿತ್ತು. ಅಂಥ ಉಸಿರು ಕಟ್ಟಿಸುವ ವಾತಾವರಣದಲ್ಲಿ ಬರೆಯುವ ಕಾವ್ಯ ಒಂದಲ್ಲ ಒಂದು ವಿಧದಲ್ಲಿ ನಿಷ್ಠವಾಗಿರುತ್ತದೆ. ತಮ್ಮ ಕಾವ್ಯದ ನಾಯಕರಲ್ಲೇ ತಮ್ಮ ರಾಜರಾದವರನ್ನು ಅಂತರಂಗಿಕವಾಗಿಸಿ ಕಾವ್ಯ ಬರೆಯಬೇಕಾದ ಇಕ್ಕಟ್ಟು ಕನ್ನಡದ ಬಹುತೇಕ ಕವಿಗಳಿಗಿದ್ದುದರಿಂದ ಅವರ ಸ್ವಾತಂತ್ರ್ಯಹರಣ ಸದ್ದಿಲ್ಲದೆ ಜರುಗಿರುತ್ತದೆ. ರಾಜರ ವಂಶಾವಳಿಗಳು, ಬಿರುದುಗಳು, ದಿಗ್ವಿಜಯಗಳ ವರ್ಣನೆಗಳಲ್ಲೇ ಮುಳುಗಿ ಹೋಗುವುದರಿಂದ ಸಾಮಾನ್ಯ ಜನಜೀವನ ಯಾವ ರೀತಿ ಇದೆ ಎನ್ನುವುದರ ಕಡೆ ಲಕ್ಷ್ಯವನ್ನೇ ಕೊಡುವುದಿಲ್ಲ. ಆಗ ಇಂಥವರು ಸೃಷ್ಟಿಸುವ ಸಾಹಿತ್ಯ ಯಥಾಸ್ಥಿತಿವಾದೀ ಅಥವಾ ಉತ್ಪ್ರೇಕ್ಷಿತ ಸಾಹಿತ್ಯವಾಗಿರುತ್ತದೆ. ಪಂಪನಂಥ ಒಬ್ಬಿಬ್ಬರನ್ನು ಬಿಟ್ಟರೆ ಮಿಕ್ಕ ಕವಿಗಳಿಗೆ ಈ ತೊಡಕು ಇರುವುದು ನೇರವಾಗಿ ಗೋಚರವಾಗುತ್ತದೆ. ಆದರೆ ನಯಸೇನ ರಾಜನ ಆಸ್ಥಾನದಲ್ಲಿದ್ದು ರಾಜನಿಗೆ ನಿಷ್ಠವಾಗಿ ಇಡೀ ಬದುಕನ್ನೇ ಪರಿತ್ಯಜಿಸುವ ಕವಿಯಾಗಲಿಲ್ಲ. ಧರ್ಮವನ್ನು ಪ್ರಚಾರ ಮಾಡುವಂತಿದ್ದರೂ ಒಟ್ಟು ಬದುಕನ್ನು ಕುರಿತು ಕಾವ್ಯವನ್ನು ರಚಿಸಿದ್ದಾನೆ. ಆದರೆ ೧೨ನೇ ಶತಮಾನದ ಸುಮಾರಿಗೆ ಕಾಣಿಸಿಕೊಂಡ ವಚನ ಚಳವಳಿ ಮಾತ್ರ ಜನಸಾಮಾನ್ಯರನ್ನೇ ದೃಷ್ಟಿಯಲ್ಲಿಟ್ಟುಕೊಂಡಿರುವುದು ಕಂಡುಬರುತ್ತದೆ. ಒಂದು ರೋಗಗ್ರಸ್ಥ ಸಮಾಜದ ಅಲ್ಲಿಯ ದುಃಸ್ಥಿತಿಯ ವಿರುದ್ಧ

ಹೋರಾಡುವುದು ಬದುಕನ್ನು ಪ್ರೀತಿಸುವ ಎಲ್ಲಾ ಸಾಹಿತಿಗಳ ಹೊಣೆ ಎಂಬ ಅನಿಸಿಕೆಯನ್ನು ಕನ್ನಡ ಸಾಹಿತ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ತಮ್ಮ ವಚನಗಳ ಮೂಲಕ ಅಭಿವ್ಯಕ್ತಿಸಿದವರು ವಚನಕಾರರು. ಒಂದು ಸಮಾಜದ ಬದುಕನ್ನು ಸರಿಪಡಿಸಬೇಕಾದರೆ, ಮೂಢನಂಬಿಕೆಗಳಲ್ಲಿ, ಸಂಪ್ರದಾಯಗಳಲ್ಲಿ, ಬಂಡವಾಳಶಾಹಿಗಳ ಹಿಡಿತದಲ್ಲಿ, ಜಾತಿಮತ ಭೇದಗಳ ಹಿಡಿತದಲ್ಲಿ ನಲುಗುತ್ತಿರುವ ಜನಸಾಮಾನ್ಯರನ್ನು ಉದ್ಧರಿಸಬೇಕಾದರೆ ಅವರ ಭಾವನೆಗಳನ್ನು ಅರ್ಥೈಸಿಕೊಂಡು ಆ ಮೂಲಕ ಅವರನ್ನು ಚಿಕಿತ್ಸೆಗೊಳಪಡಿಸಬೇಕೆಂಬುದು ವಚನಕಾರರ ಉದ್ದೇಶವಾಗಿತ್ತು. ಆ ಕಾರಣದಿಂದಲೇ ಅವರು ಜನಸಾಮಾನ್ಯರ ಭಾಷೆಯನ್ನು, ತಮ್ಮ ಸಾಹಿತ್ಯದ ಭಾಷೆಯನ್ನಾಗಿಸಿಕೊಂಡರು. ಅವರ ಮಾತುಗಳಲ್ಲಿ ಬಳಕೆಯಲ್ಲಿದ್ದ ಗಾದೆಗಳನ್ನು, ಒಗಟುಗಳನ್ನು, ಪಡೆನುಡಿಗಳನ್ನು, ನುಡಿಗಟ್ಟುಗಳನ್ನು, ಅಲಂಕಾರಗಳನ್ನು, ಹೋಲಿಕೆಗಳನ್ನು, ತಮ್ಮ ವಚನಗಳಲ್ಲಿ ಯಥಾವತ್ತಾಗಿ ಮೂಡಿಸಿದರು. ತಮ್ಮ ಅಭಿಪ್ರಾಯಗಳನ್ನು ಸರಳ ಭಾಷೆಯಲ್ಲಿ ಜನಸಾಮಾನ್ಯರೆದುರು ಹೇಳತೊಡಗಿದರು. ಜಾತಿಪದ್ಧತಿಯ ದುಷ್ಪರಿಣಾಮಗಳನ್ನು ತಮ್ಮ ಹೀನಸ್ಥಿತಿಗೆ ಕಾರಣವಾಗಿರುವ ನೂರೆಂಟು ವಿಚಾರಗಳನ್ನು ಜನಸಾಮಾನ್ಯರಿಗೆ ಅವರದೇ ಆದ ಮಾತಿನಲ್ಲಿ ಮನದಟ್ಟು ಮಾಡಿಕೊಟ್ಟರು. ಈ ಕಾರಣದಿಂದಲೇ ಬಸವಣ್ಣನ ನೇತೃತ್ವದಲ್ಲಿ ಧಾರ್ಮಿಕ ಕ್ರಾಂತಿಯೊಂದು ಬಹು ವ್ಯವಸ್ಥಿತ ರೀತಿಯಲ್ಲಿ ಏರ್ಪಾಡಾಗಲು ಕಾರಣವಾಯಿತು. ಇದು ಸಾಹಿತ್ಯ ಜನರನ್ನು ಮುಟ್ಟಬೇಕಾದ ರೀತಿ. ಮತ್ತೆ ಅಲ್ಲಿಂದ ಇಲ್ಲಿಯವರೆಗೆ ಸಾಹಿತ್ಯ ಜನರನ್ನು ಮುಟ್ಟುವ ಮೂಲಕ ಅವರನ್ನು ಎಚ್ಚರಗೊಳಿಸಿ ತಮ್ಮ ಶೋಷಣೆಗಳ ವಿರುದ್ಧ ಪ್ರತಿಭಟಿಸುವ ಕೆಚ್ಚು ಮೂಡಿಸಿಲ್ಲ. ಬಹುಶಃ ಅದಕ್ಕೆ ಸಾಹಿತ್ಯಿಕ ಸಂವಹನದಲ್ಲಿರುವ ಕೊರತೆಯೇ ಕಾರಣವಿರಬಹುದೆನಿಸುತ್ತದೆ.

ಸಾಮಾಜಿಕ, ಪ್ರಜ್ಞೆಯ ತಳಹದಿಯಮೇಲೆ ನಿಂತ ವಚನಕಾರರಲ್ಲಿ ಪ್ರಮುಖ ವ್ಯಕ್ತಿ ಬಸವಣ್ಣ, ಹುಟ್ಟಿದ ಜಾತಿಯನ್ನು ಬಿಟ್ಟು ಬೇರೊಂದು ಜಾತಿಯನ್ನು, ಅದರ ಧರ್ಮವನ್ನು ಸ್ವೀಕರಿಸಿದವನು. ಆಗಿನಿಂದ ವ್ಯವಸ್ಥೆಯನ್ನು ವಿರೋಧಿಸಲೆಂದೇ ಆತನ ಹೋರಾಟ ಶುರುವಾಯಿತು. ಸಂಘಟಿತ ಹೋರಾಟದ ಮುಂಚೂಣಿಯಲ್ಲಿ ನಿಂತ. ವಚನಕಾರರ ಸಂಘಟಿತ ಹೋರಾಟಕ್ಕೆ ಅಂದಿನ ರಾಜಕೀಯ ವಿದ್ಯಮಾನಗಳೂ ಪ್ರಬಲ ಕಾರಣಗಳಾದುವು, ಅದೇ ಹೋರಾಟಕ್ಕೆ ನಾಂದಿಯೂ ಆಯಿತು. ಅವರ ವಚನಗಳಲ್ಲಿ ಕೆಲವಂತೂ ಸಾಮಾಜಿಕ ಅನ್ಯಾಯದ ವಿರುದ್ಧದ ತೀವ್ರ ದನಿಗಳಾದುವು. ಅದೇ ಕಾಲಕ್ಕೆ ತಮ್ಮ ಅಭಿಪ್ರಾಯಗಳನ್ನು ಸಾಮಾನ್ಯರಿಗೆ ಸುಲಭವಾಗಿ ಮುಟ್ಟಿಸುವ ಸುಲಭ ಮಾಧ್ಯಮವೂ ಆದವು. ಜೊತೆಗೆ ಅವರ ವಚನಗಳು ಹೊಸ ಸಮಾಜದ ಸೃಷ್ಟಿಗಾಗಿ ಹಾತೊರೆಯುವ ಕೆಂಡಗಳೂ ಆದವು.

ವಚನಕಾರರು ಕಂದಾಚಾರ, ಮಠಮಾನ್ಯ, ದೇವಾಲಯ, ಪುರೋಹಿತ ಶಾಹಿಗಳ ವಿರುದ್ಧ ತಿರುಗಿಬಿದ್ದರು. ಸಂಪತ್ತಿನ ಕುರುಹಾಗಿ ರಾಜರು ಹಿಂದೆ ದೇವಾಲಯಗಳನ್ನು ಕಟ್ಟಿಸುತ್ತಿದ್ದರಂತೆ. ಆ ದೇವಾಲಯದ ಒಳಗೆ ಅಸ್ಪೃಶ್ಯರು ಬರಬಾರದೆಂಬ ವಿರೋಧವೂ ಇತ್ತು. ಅದು ಈಗಲೂ ಇರುವಂಥ ಸಾಮಾಜಿಕ ಪಿಡುಗು. ಇದನ್ನು ಗಮನಿಸಿದ ವಚನಕಾರರು ಅಸ್ಪೃಶ್ಯರ ಪರವಾಗಿ ನಿಂತು, ಅವರಿಗೇ ಪ್ರವೇಶವಿಲ್ಲದ ಈ ದೇವಾಲಯಗಳೇ ಬೇಡ ಎಂದರು. ದೇವಾಲಯಗಳೇ ಬೇಡವೆಂದಮೇಲೆ ದೇವರ ಕಲ್ಪನೆಯನ್ನೇ ಬೇರು ಸಹಿತ ಒಗೆದಂತಾಯಿತು. ಇಂಥ ಕ್ರಾಂತಿಕಾರೀ ಮನೋಭಾವಗಳನ್ನು ಅವರು ತಳೆದರು. ಇಂಥದೇ

ಸಮಸ್ಯೆಯನ್ನು ತುಂಬಿಕೊಂಡಿರುವ ಬಸವಣ್ಣನವರ ವಚನವೊಂದು ಹಸಿ ಅನುಭವವನ್ನು ನೀಡುತ್ತದೆ:

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ, ಬಡವನಯ್ಯ
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರವೆ ಹೊನ್ನಕಳಸವಯ್ಯ
ಕೂಡಲ ಸಂಗಮದೇವಾ ಕೇಳಯ್ಯಾ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ.

ಜಾತೀಯತೆಯ ಬಗೆಗೆ ಬಸವಣ್ಣ ಆಡಿರುವ ಮಾತುಗಳು ಮನುಷ್ಯತ್ವವುಳ್ಳ ಎಲ್ಲರ ಹೃದಯವನ್ನೂ ನಾಟುತ್ತವೆ:

ಉತ್ತಮಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯ

ಈ ವಚನ ಉತ್ತಮ ಜಾತಿಯಲ್ಲಿ ಹುಟ್ಟಿದವನೆಂದರೆ ಅದೊಂದು ಅಗೌರವದ ಸಂಕೇತ ಎಂಬ ಧೋರಣೆಯನ್ನು ಹೊತ್ತಿದೆ. ಮೇಲುವರ್ಗದವರು ಮನುಷ್ಯತ್ವವಿಲ್ಲದವರು, ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವನೆಂದು ಹೆಮ್ಮೆಯಿಂದ ಹೇಳಿಕೊಳ್ಳುವುದಾದರೆ ಅದಕ್ಕಿಂತ ಅವಮಾನ ಬೇರೆ ಯಾವುದೂ ಇಲ್ಲ ಎಂಬ ಪ್ರಜ್ಞೆ ಬಸವಣ್ಣನಿಗೆ ಕಾಡಿರಬೇಕು. ಅದಕ್ಕಾಗಿ ಆತ;

ಅಪ್ಪನು ನಮ್ಮ ಮಾದಾರ ಚನ್ನಯ್ಯ
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ

ಅಷ್ಟೇ ಅಲ್ಲ 'ಚೆನ್ನಯ್ಯನ ಮಗ ನಾನು' ಎಂದು ಆತ ಕೆಳವರ್ಗದವನೊಡನೆ ತನ್ನನ್ನು ಸಮೀಕರಿಸಿಕೊಳ್ಳುತ್ತಾನೆ. ಎಷ್ಟರಮಟ್ಟಿಗಿನ ಸಂಬಂಧ ಎಂದರೆ ಹೀನಕುಲದಲ್ಲಿ ಹುಟ್ಟಿದವನು ಅಂದರೆ ಹೆಮ್ಮೆಪಡತಕ್ಕ ಸಂಗತಿಯವರೆಗೆ. ಒಟ್ಟಾರೆ ಬಸವಣ್ಣ ತುಳಿತಕ್ಕೊಳಗಾದ ಜನರ ಪರವಾಗಿ ನಿಂತು ತುಳಿಯುವ ಜನರನ್ನು ಧಿಕ್ಕರಿಸಲು ಜನತೆಯಲ್ಲಿ ಕ್ರಾಂತಿ ಮೂಡಿಸಿದ ಬಂಡಾಯಗಾರ. ಬ್ರಾಹ್ಮಣ–ಹೊಲೆಯ ಎಂಬ ಜಾತಿ ಸಮಸ್ಯೆ ಬಂದಾಗ ಅವೆರಡೂ ಒಂದೇ ಎಂದು ರಾಜನ ವಿರುದ್ಧ ಸಮಾನತೆ ಸಾರಿದ. ಸಂಬೋಳಿ ನಾಗಿದೇವ ಎಂಬ ಭಕ್ತನ ಮನೆಗೆ ಬಸವಣ್ಣ ಆತಿಥ್ಯಕ್ಕೆ ಹೋದ ಸುದ್ದಿಯನ್ನು ಯಾರೋ ಬಿಜ್ಜಳನಿಗೆ ಮುಟ್ಟಿಸುತ್ತಾರೆ. ಆಗ ಬಿಜ್ಜಳ ಅಸ್ಪೃಶ್ಯರ ಮನೆಗೆ ಹೋಗಿ ಬಂದ ಬಸವಣ್ಣ ನೇರವಾಗಿ ಅರಮನೆಗೆ ಬಂದಾನೆಂದು ಅರಮನೆಯ ಹೊರಗೇ ಆತನನ್ನು ನಿಲ್ಲಿಸಿ 'ನೀನು ಮಾಡಿದ್ದು ಸರಿಯೇ' ಎಂದು ಕೇಳಿದಾಗ, 'ಶಿವನನ್ನು ಅರಿಯದ ಹೊಲೆಯರ ಮನೆಗೆ ನಾನು ಹೋಗಲಿಲ್ಲ' ಎಂದು ಹೇಳಿದ. ಅಲ್ಲದೆ ವೈದಿಕರಿಗಿಂತ ಶಿವಭಕ್ತರಾದ ಹೊಲೆಯರು ಶ್ರೇಷ್ಠ ಎಂದು ಒಂದು ಪವಾಡದಿಂದ ಬಿಜ್ಜಳನಿಗೆ ಬುದ್ಧಿ ಕಲಿಸಿದ.

ಹರಳಯ್ಯನ ಮಗನಿಗೂ ಮಧುವರಸನ ಮಗಳಿಗೂ ವಿವಾಹ ಸಂಬಂಧ ಏರ್ಪಟ್ಟಾಗ ಹೀಗೇ ಬಿಜ್ಜಳನಿಗೆ ವೈದಿಕರಿಂದ ದೂರು ಹೋಯಿತು. ಬಿಜ್ಜಳ ಅದು ನಡೆಯದಂತೆ ಪ್ರಯತ್ನಿಸಿದ. ಆಗಲೂ ಬಸವಣ್ಣನ ದೃಷ್ಟಿ ಒಂದೇ ಆಗಿತ್ತು. ಹರಳಯ್ಯ ಶರಣ ಮಾರ್ಗವನ್ನು ಅನುಸರಿಸಿದ ಮೇಲೆ ಆತ ಅಸ್ಪೃಶ್ಯರ ಜೊತೆ ವಿವಾಹ ಸಂಬಂಧ ಬೆಳೆಸಿ ಮೇಲ್ಜಾತಿಯಿಂದ ಮುಕ್ತನಾದ ಎಂಬ ತೀರ್ಮಾನಕ್ಕೆ ಬಂದು ಮದುವೆ ಮಾಡಿಸಿಯೇ ಬಿಟ್ಟ. ಅಂದರೆ ಸಂಘಟಿತ

ಹೋರಾಟದಿಂದ ಅದು ಯಶಸ್ವಿಯಾಯಿತು. ಈ ರೀತಿಯ ಅನೇಕ ಕಾರಣಗಳಿಂದ ಹನ್ನೆರಡನೆ ಶತಮಾನದ ಬದುಕು ಸಮಕಾಲೀನ ಸಂದರ್ಭದ ಸ್ಪಂದನವಾಗಿದೆ.

ಆದಿಪುರಾಣ ಅಸುರರಿಗೆ ಮಾರಿ
ವೇದ ಪುರಾಣ ಹೋತಿಂಗೆ ಮಾರಿ

ಎಂದು ವೈದಿಕ ಧರ್ಮವನ್ನು ವಿರೋಧಿಸಿದ ಬಸವಣ್ಣ ಅನಂತರದ ವಚನಕಾರರು, ಯಜ್ಞಯಾಗಾದಿಗಳು ಅವರ ನೆಪದಲ್ಲಿ ನಡೆಯುವ ಉಪಾಸನೆಗಳನ್ನು ತೀವ್ರವಾಗಿ ಪ್ರತಿಭಟಿಸಿದರು. ಯಜ್ಞದ ಬಗೆಗೆ ಎಂತಹ ಅಸಹ್ಯಭಾವನೆ ಬಸವಣ್ಣನಿಗಿತ್ತು ಎಂಬುದನ್ನು ಆತನ ವಚನ ಹೇಳುತ್ತದೆ;

ಮಾತಿನ ಮಾತಿಂಗೆ ನಿನ್ನ ಕೊಂದಿಹರೆಂದು
ಎಲೆ ಹೋತೇ ಅಳುಕಂಡಾ!
ವೇದವನೋದಿದವರ ಮುಂದೆ ಅಳುಕಂಡಾ
ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲ ಸಂಗಮದೇವ ॥

ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ಧಿ, ಪುರಾಣವೆಂಬುದು ಪುಂಡರಗೋಷ್ಠಿ ಹೀಗೆ ಅಲ್ಲಮಪ್ರಭು, ಅಕ್ಕಮಹಾದೇವಿ ಮೊದಲಾದವರೆಲ್ಲ ವೇದಶಾಸ್ತ್ರ ಆಗಮಗಳನ್ನು ವಿರೋಧಿಸಿದ್ದಾರೆ.

ಹೀಗೆ ಸಮಾಜದಲ್ಲಿ ನಡೆಯುವ ಅನ್ಯಾಯದ ವಿರುದ್ಧ ಪ್ರತಿಭಟಿಸಿದ್ದು, ಅಸ್ಪೃಶ್ಯರ ಮನೆಯಲ್ಲಿ ಹುಟ್ಟಿದವರೆಂದು ಹೇಳಿಕೊಳ್ಳುವ ತೀವ್ರಸಂವೇದನೆ, ಸಮಾನತೆಯನ್ನು ಸಾರಿದ್ದು, ಪ್ರತಿಭೆ ಸಂಸ್ಕಾರ ಸಾಧನೆಗಳು ಯಾವುದೊಂದು ಜಾತಿಯ ಗುತ್ತಿಗೆಯಲ್ಲ ಎಂದು ಸಾಧಿಸಿದ್ದು, ಸಾಮಾನ್ಯರ ಜೊತೆ ಆತ್ಮವಿಶ್ವಾಸ ಬೆಳೆಸಿದ್ದು ಇವೆಲ್ಲಕ್ಕಿಂತ ಮುಖ್ಯವಾಗಿ ಅಸ್ಪೃಶ್ಯರ ಪರವಾಗಿ ಹೋರಾಡಿದ್ದು ಇತ್ಯಾದಿ, ವಚನ ಚಳವಳಿಯ ಮಹತ್ತರ ಸಾಧನೆಗಳಾಗಿವೆ. ವಚನಕಾರರು ಮತ್ತು ಅವರ ಚಳವಳಿ ನಮಗೆ ಮುಖ್ಯವೆನಿಸುವುದು ಈ ಕಾರಣಕ್ಕಾಗಿ.

ನವಸಮಾಜ ನಿರ್ಮಾಣಕ್ಕಾಗಿ ಹೋರಾಡಿದ ಬಸವಣ್ಣನನ್ನು ನಾವು ಅರ್ಥೈಸಿಕೊಳ್ಳುವಾಗ ಹನ್ನೆರಡನೆಯ ಶತಮಾನದ ಇತಿಮಿತಿಗಳಲ್ಲಿಯೇ ಆತನ ಧೋರಣೆಯನ್ನು ಅರ್ಥಮಾಡಿಕೊಳ್ಳ ಬೇಕಾಗುತ್ತದೆ. ಜೊತೆಗೆ ಬಸವಣ್ಣನನ್ನು ಇಂದು ನಾವು ಹೇಗೆ, ಎಷ್ಟರಮಟ್ಟಿಗೆ ಅರ್ಥಮಾಡಿ ಕೊಳ್ಳಬೇಕು ಎಂಬುದರ ಆರೋಗ್ಯಕಾರೀ ಚರ್ಚೆಗೆ ಅನುವು ಮಾಡಿಕೊಡಬೇಕಾಗಿದೆ.

ಹನ್ನೆರಡನೇ ಶತಮಾನದಲ್ಲಿ ಸಮಾಜ ವ್ಯವಸ್ಥೆಯಲ್ಲಿದ್ದ ಅನೇಕ ಬಿರುಕುಗಳನ್ನು ಸರಿಪಡಿಸುವಲ್ಲಿ ಬಸವಣ್ಣ ಮುಂತಾದವರು ಕಾರ್ಯೋನ್ಮುಖವಾದಂತೆ ಇಪ್ಪತ್ತನೇ ಶತಮಾನದಲ್ಲಿ ಹದಗೆಟ್ಟ ವ್ಯವಸ್ಥೆಯನ್ನು ಸರಿಯಾದ ದಾರಿಗೆ ತರುವಲ್ಲಿ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಪಾತ್ರ ಗಮನಾರ್ಹವಾದುದಾಗಿ ಕಾಣುತ್ತದೆ. ಜಾತಿ ನಿರ್ಮೂಲನೆ, ಸಮಾನತೆ, ಸಮಾಜವಾದ, ಸ್ತ್ರೀಯರ ಸಮಾನಹಕ್ಕು ಮುಂತಾದವುಗಳ ಬಗೆಗೆ ಸತತವಾಗಿ ಹೋರಾಡಿದವರು ಬಸವಣ್ಣ ಹನ್ನೆರಡನೇ ಶತಮಾನದ ಕ್ರಾಂತಿಕಾರಕ ಬದಲಾವಣೆಗೆ ಕಾರಣವಾದಂತೆ ಪೆರಿಯಾರರು ತಮಿಳುನಾಡಿನಲ್ಲಿ ಅಲ್ಲಿಯ ಸಾಂಸ್ಕೃತಿಕ ಬದುಕಿನ ಸ್ಥಿತ್ಯಂತರಗಳಿಗೆ ಕಾರಣರಾಗುವ ಮೂಲಕ ಭಾರತದ ಸಂದರ್ಭದಲ್ಲಿಯೇ ಮುಖ್ಯವಾಗಿ ಗಮನ ಸೆಳೆದಿದ್ದಾರೆ. ಜೀವಸಂಕುಲಗಳ ಬಗೆಗೆ ದಯೆಯನ್ನು, ಮಾನವೀಯತೆಯನ್ನು

ಸಾಕಾರಗೊಳಿಸುತ್ತ ತನಗನಿಸಿದ್ದನ್ನು ಖಂಡಿತವಾದಿಯಾಗಿ ಪ್ರಸ್ತುತಪಡಿಸುತ್ತ ಸತ್ಯಸಂಧತೆಯನ್ನು ಎತ್ತಿ ಹಿಡಿದವರು. ಹಿಂದುಳಿದ, ನಿಮ್ನವರ್ಗ ಹಾಗೂ ಶೋಷಿತ ಸಮುದಾಯಗಳ ಉದ್ಧಾರದ ಬಗೆಗೆ ತಮ್ಮ ಜೀವಗಳನ್ನೇ ಮುಡುಪಾಗಿಟ್ಟವರು. ಇವುಗಳ ಪ್ರಗತಿಯ ಸಲುವಾಗಿ ತೀವ್ರತರವಾದ ವಿರೋಧಗಳನ್ನು ಎದುರಿಸಿ ಯಶಸ್ವಿಯಾದವರು. "ಪೆರಿಯಾರ್ ಆಯಸ್ಸಿನಲ್ಲಿ ಮಾತ್ರ ಬಹಳ ದೀರ್ಘಕಾಲ ಬಾಳಿದವರಲ್ಲ. ಬೌದ್ಧಿಕ ಸಾಮರ್ಥ್ಯದಲ್ಲಿ ಅವರು ಮಿಗಿಲಾದವರು. ಅವರದು ವಿಶಾಲದೃಷ್ಟಿ. ವಿಚಾರವಾದವನ್ನು ಪ್ರಚಾರ ಮಾಡುವುದಕ್ಕೆ, ಜಾತಿನಿರ್ಮೂಲನ ಹೋರಾಟದಲ್ಲಿ ಭಾಗವಹಿಸುವುದಕ್ಕೆ ಸಾಮಾಜಿಕ ನ್ಯಾಯವನ್ನ ಸಮಾನಧರ್ಮವನ್ನು ನೆಲೆನಿಲ್ಲಿಸುವುದಕ್ಕಾಗಿ ಹೋರಾಡುವುದಕ್ಕೆ ಕಾರಣ ಅವರ ಸಾಮಾಜಿಕ ದೃಷ್ಟಿಯೇ ಆಗಿದೆ. ಸಂಕೇತವಾಗಿ ಹೇಳುವುದಾದರೆ ಅಂತಹ ಸಾಮಾಜಿಕದೃಷ್ಟಿ ಅವರಲ್ಲಿದ್ದುದರಿಂದಲೇ ಭಾರತದ ಜನರಲ್ಲಿ ಮುಖ್ಯವಾಗಿ ತಮಿಳುನಾಡಿನ ಜನರಲ್ಲಿ ಸಾಮಾಜಿಕ ಕ್ರಾಂತಿಯನ್ನು ನಡೆಸುವಂತೆ ಮಾಡಲು ಅವರಿಗೆ ಸಾಧ್ಯವಾಯಿತು" (ಸಮಾಜವಿಜ್ಞಾನಿ ಪೆರಿಯಾರ್ ಡಾ.ಎನ್.ವೇಲುಸ್ವಾಮಿ ಅನು: ಡಾ. ಕೃಷ್ಣಭಟ್ ಅರ್ತಿಕಜೆ ಪುಟ.೮೯) ಜಾತಿಪದ್ಧತಿಯ ನಿರ್ಮೂಲನೆಯೂ ಪೆರಿಯಾರ ಮುಖ್ಯ ಉದ್ದೇಶವಾಗಿತ್ತು. ಅದಕ್ಕಾಗಿಯೇ ವರ್ಣಾಶ್ರಮಧರ್ಮವನ್ನು ಅವರು ತೀವ್ರವಾಗಿ ವಿರೋಧಿಸಿದರು. ಅದು ಮಾನವನ ಆತ್ಮಗೌರವಕ್ಕೆ ತೀರಾ ವಿರುದ್ಧವಾದುದೆಂದೂ ಹೇಳಿದರು. ಅವರು ಕಾಂಗ್ರೆಸ್‌ನಲ್ಲಿರುವಾಗಲೇ ಜಾತೀಯತೆಯ ಅನ್ಯಾಯವನ್ನು ಖಂಡಿಸಿದ್ದರು. ಅವರು ಎಲ್ಲಿಯೇ ಇರಲಿ ಹೇಗೆ ಇರಲಿ ಪ್ರತಿಯೊಂದು ಕೆಲಸದಲ್ಲಿ ಪ್ರಮಾಣಿಕತೆಯನ್ನು ತೋರಿದವರು. ಕಮ್ಯುನಿಸ್ಟ್ ತತ್ತ್ವವನ್ನು ತಾವು ನಂಬಿದ ತತ್ತ್ವಗಳಲ್ಲಿ ಒಂದೆಂದು ಸ್ವೀಕರಿಸಿ ಘೋಷಿಸಿದರು. ಅದರ ಪ್ರಚಾರದಲ್ಲೂ ತೊಡಗಿದರು. "ಅವರ ಎಡಗಣ್ಣು ಸಮಾಜ ಸುಧಾರಣೆಯಾದರೆ ಅವರ ಬಲಗಣ್ಣು ಮಾರ್ಕ್ಸಿಸಂ ಸಿದ್ಧಾಂತವೆಂದು ಹೇಳಬಹುದು"

ಕಂದಾಚಾರ, ಮಠಮಾನ್ಯ, ದೇವಾಲಯ, ಪುರೋಹಿತಶಾಹಿ ಮುಂತಾದವುಗಳ ವಿರುದ್ಧ ತಿರುಗಿ ಬೀಳುವುದನ್ನು ಗಮನಿಸಿದರೆ ಬಸವಣ್ಣ ಹಾಗೂ ಪೆರಿಯಾರ್‌ರ ಮನೋಧರ್ಮ ಒಂದೇ ಆಗಿರುವುದನ್ನು, ಉದ್ದೇಶ–ಗುರಿ ಒಂದೇ ಆಗಿರುವುದನ್ನು ಗಮನಿಸಬಹುದು. ಅಸ್ಪೃಶ್ಯರಿಗೆ ಪ್ರವೇಶವೇ ಇಲ್ಲವೆಂದ ಮೇಲೆ ದೇವಾಲಯ ಸಂಸ್ಕೃತಿಯೇ ಬೇಡವೆಂದರು ಬಸವಣ್ಣ, ಪೆರಿಯಾರರು ನಾಸ್ತಿಕವಾದವನ್ನೇ ಎತ್ತಿಹಿಡಿದರು. ಒಟ್ಟಾರೆ ಜನಪರಧೋರಣೆಯ ಈರ್ವರು ನವಸಮಾಜ ನಿರ್ಮಾಣಕ್ಕಾಗಿ ಹೋರಾಡಿದರೆಂಬುದು ಗಮನಾರ್ಹ ಸಂಗತಿ.

❒

ಬಸವಣ್ಣ : ಛತ್ರಪತಿ ಶಾಹು ಮಹಾರಾಜ

●

ಡಾ. ಎಚ್.ಟಿ. ಪೋತೆ

ಜಗತ್ತಿನ ಇತಿಹಾಸವನ್ನು ಕೆದಕಿದಾಗ ನಮಗೆ ಸಿಗುವ ಮಾಹಿತಿ ಪಂಡಿತರ, ಪಾಳೇಗಾರರ ಹಾಗೂ ನಿರಂಕುಶ ಪ್ರಭುಗಳ ಚರಿತ್ರೆಯೇ ಹೊರತು ಸಾಮಾನ್ಯರ, ದುಡಿಯುವ ವರ್ಗದ ಚರಿತ್ರೆಯಲ್ಲ. ಪ್ರಜೆಗಳಿಂದಲೇ ರಾಜರು, ರಾಜರಿಂದ ಪ್ರಜೆಗಳಲ್ಲ ಎನ್ನುವುದು ವಿಹಿತವಾದುದು. ರಾಜರಿಲ್ಲದೆ, ಪಾಳೇಗಾರರಿಲ್ಲದೆ ಪ್ರಜೆಗಳು ಬದುಕು ಮಾಡಬಹುದು, ಪ್ರಜೆಗಳಿಲ್ಲದೆ ಯಾರೂ ರಾಜರಾಗಲು ಸಾಧ್ಯವಿಲ್ಲ. ಈ ನೆಲದ ಅಶ್ರಮಿಕ ವರ್ಗ ತನ್ನ ಸ್ವಾರ್ಥ ಸಾಧನೆಗಾಗಿ ಹೊಗಳುಭಟ್ಟನ ವೃತ್ತಿಯನ್ನು ಅನುಸರಿಸಿದೆ. ಕ್ಷತ್ರಿಯ ರಾಜನಿಗೆ ಇಲ್ಲ ಸಲ್ಲದ ಸಲಹೆಗಳನ್ನು ನೀಡುವುದರ ಮೂಲಕ ಈ ದೇಶದ ಇತಿಹಾಸವನ್ನೆಲ್ಲ ವೈದಿಕರು ನುಚ್ಚುನೂರು ಮಾಡಿದ್ದಾರೆ. ಶೂದ್ರ ವರ್ಗದವರನ್ನು ಕೋತಿಗಳನ್ನಾಗಿ, ಕರಡಿಗಳನ್ನಾಗಿ ಚರಿತ್ರೆಯಲ್ಲಿ ಸೃಷ್ಟಿಸಿದ್ದಾರೆ. ಮೇಲಾಗಿ ಶಿಕ್ಷಣದ ಸೊತ್ತು ಬ್ರಾಹ್ಮಣರಿಗೆ ಮಾತ್ರ ಸೇರಿದ್ದು ಎಂದು ಹೇಳುತ್ತಾ ಇಡೀ ಸಾಮಾಜಿಕ ವ್ಯವಸ್ಥೆಯನ್ನು ತಮ್ಮ ಮೂಗಿನ ನೇರಕ್ಕೆ ಉಳಿಸಿಕೊಂಡು ಬಂದಿದ್ದಾರೆ.

ಪರಂಪರೆಯಿಂದ ಪ್ರಸ್ತುತ ಸಂದರ್ಭದವರೆಗಿನ ದೇಶದ ಸ್ಥಿತಿಗತಿಯನ್ನು ಅವಲೋಕನ ಮಾಡಿದರೆ, ನಮಗೆ ಸಿಗುವ ಉತ್ತರದಿಂದ ಸಾಮಾನ್ಯ ಮನುಷ್ಯ ಕ್ಷೋಭೆಗೊಳಗಾಗುತ್ತಾನೆ. ದೇಶದ ತುಂಬೆಲ್ಲ ವೈದಿಕ ಪ್ರಾಬಲ್ಯ, ಸಂಘ ಪರಿವಾರದ ಮತಾಂಧತೆಯ ಡೊಂಬರಾಟ, ಗಾಂಧಿ ಹುಟ್ಟಿದ ನಾಡಿನಲ್ಲಿ ಮಹಿಳೆಯರನ್ನು ಸಾರ್ವಜನಿಕವಾಗಿ ಅತ್ಯಾಚಾರಕ್ಕೊಳಪಡಿಸುವ ಪದ್ಧತಿ, ಕ್ರೈಸ್ತ ಪಾದ್ರಿ ಹಾಗೂ ಮಕ್ಕಳನ್ನು ಜೀವಂತ ದಹನ ಇವೆಲ್ಲ ಸಂಘ ಪರಿವಾರದವರಿಗೆ ಹಬ್ಬದೂಟವೇ ಸರಿ. ಬಸವಣ್ಣನವರ ನಾಡಿನಲ್ಲಿ ದಲಿತರ ಜೀವಂತ ದಹನ ಇವೆಲ್ಲ ಸಾಮಾನ್ಯ ಸಂಗತಿಗಳಾಗಿವೆ. ತೊಗಾಡಿಯಾನಂತಹ ಮತಾಂಧರಿಗೆ ಹರಿಯಾಣಾ ರಾಜ್ಯದ ಐದು ಜನ ದಲಿತರ ಜೀವಕ್ಕಿಂತ 'ಹಸು'ವಿನ ಜೀವ ಪ್ರಮುಖವಾಗುತ್ತದೆ. ಈ ಎಲ್ಲ ವಿಚಾರಗಳನ್ನು ಹಂಚಿಕೊಳ್ಳುವ ಉದ್ದೇಶವೇನೆಂದರೆ ಮತಾಂಧರು ಎಂದೂ ಸಾಮಾಜಿಕ ಬದಲಾವಣೆಯತ್ತ ನಡೆದವರಲ್ಲ. ಕಣ್ಣಿಗೆ ಕಾಣದ ದೇವರು, ನಂಬಿಕೆ, ಸಂಪ್ರದಾಯಗಳು, ಹಸು, ಕೋತಿ, ನಾಯಿ, ಹಾವು, ಚೇಳು, ಹವನ, ಹೋಮ ಇವರಿಗೆ ಪ್ರಮುಖವಾಗುತ್ತವೆ. ಮನುಷ್ಯನಿಗಿಂತ ಜಾತಿ ಶ್ರೇಷ್ಠವಾಗುತ್ತದೆ ವಿನಃ ಜೀವ ಶ್ರೇಷ್ಠವಾಗುವುದಿಲ್ಲ.

ಈ ತರಹದ ಜೀವ ವಿರೋಧಿ ನೆಲೆಯನ್ನು ತಿಳಿಗೊಳಿಸುವ ಸಲುವಾಗಿ, “ಜಗತ್ತಿನ ಸಾಮಾಜಿಕ ಚರಿತ್ರೆಯಲ್ಲಿ ಹಲವು ಅದಮ್ಯ ಚೇತನಗಳು ಆಗಿ ಹೋಗಿವೆ. ಸಾಮಾಜಿಕ ವ್ಯವಸ್ಥೆ ಜಡತ್ವ ಹೊಂದಿ ಸಂಪ್ರದಾಯದ ಸಂದಿಗ್ಧದಲ್ಲಿ ನರಳುವಂತಹ ಸನ್ನಿವೇಶ ನಿರ್ಮಾಣ ವಾದಾಗ, ಅನೇಕ ಸುಧಾರಕರು ಉದಿಸಿ, ಸಮಾಜ ಸುಧಾರಣೆ ಮಾಡುತ್ತಾ ಬಂದಿದ್ದಾರೆ. ಭಾರತೀಯ ಸಂದರ್ಭದಲ್ಲಿ ಸುಮಾರು ಎರಡು ಸಾವಿರದ ಐದುನೂರು ವರ್ಷಗಳ ಹಿಂದೆಯೇ ಸಮಾಜ ಸುಧಾರಣೆಗೆ ಭದ್ರ ತಳಹದಿಯನ್ನು ಹಾಕಿಕೊಟ್ಟ, ಜನಸಮುದಾಯವನ್ನು ವೈಚಾರಿಕ ಬೆಳಕಿನೆಡೆಗೆ ಕೊಂಡೊಯ್ಯುವ ಪ್ರಯತ್ನದಲ್ಲಿ ಪ್ರಥಮ ಹೆಜ್ಜೆ ಇಟ್ಟವರೆಂದರೆ ಮಹಾನ್ ಮಾನವತಾವಾದಿ ಭಗವಾನ್ ಬುದ್ಧ”.[೧] ಬುದ್ಧನ ಚಿಂತನೆ, ಮಾನವೀಯ ಮೌಲ್ಯಗಳ ನೆಲೆಯಲ್ಲಿ ದುಡಿದ ಮಹಾನ್ ಸಾಧಕ ಬಸವಣ್ಣ. ಹನ್ನೆರಡನೆಯ ಶತಮಾನದಲ್ಲಿ ಕನ್ನಡದ ನೆಲದಲ್ಲಿ ಜಾಜ್ವಲ್ಯಮಾನವಾಗಿ ಕಂಗೊಳಿಸಿ ಇಪ್ಪತ್ತನೇ ಶತಮಾನದ ಸಂದರ್ಭದಲ್ಲೂ ಚರ್ಚೆ, ಅನುಸರಣೆಗೆ ವ್ಯಾಪಕವಾಗಿ ವಿಸ್ತರಿಸಿಕೊಂಡಿರುವುದನ್ನು ಕಾಣುತ್ತೇವೆ.

ಬುದ್ಧ–ಬಸವ, ಬಸವ–ಮಹಾವೀರ, ಬಸವ–ಕಬೀರ, ಬಸವ–ಫುಲೆ, ಬಸವ–ಪೆರಿಯಾರ್, ಬಸವ–ಕನಕ, ಬಸವ–ಗಾಂಧಿ, ಬಸವ–ಅಂಬೇಡ್ಕರ್ ಹೀಗೆ ಅನೇಕರನ್ನು ತೌಲನಿಕವಾಗಿ ವಿವೇಚನೆಗೊಳಪಡಿಸುತ್ತಾ ಚಿಂತನೆಗೆ ತೊಡಗಿದಾಗ ಅವರಲ್ಲಿ ಕೆಲವು ವೈರುಧ್ಯಗಳು ಕಂಡರೂ ಅನೇಕ ಸಾದೃಶ್ಯ ಅಂಶಗಳನ್ನು ಗುರುತಿಸಬಹುದಾಗಿದೆ. ಈ ಮೇಲೆ ಸೂಚಿಸಿದ ಮಹಾನ್ ಸಾಧಕರನ್ನು ಹೋಲಿಸಿ ಬರೆದ ಬರಹಗಳು ಹೇರಳವಾಗಿ ಬಂದಿವೆ. ಆದರೆ, ೧೨ನೆಯ ಶತಮಾನದ ಬಸವಣ್ಣನವರು ಇಪ್ಪತ್ತನೆಯ ಶತಮಾನದ ಅಂದರೆ ಸ್ವಾತಂತ್ರ್ಯ ಪೂರ್ವದ ಛತ್ರಪತಿ ಶಾಹು ಮಹಾರಾಜರು ಈ ಇಬ್ಬರ ಕುರಿತು ಬಹುತೇಕವಾಗಿ ತೌಲನಿಕ ವಿವೇಚನೆ ನಡೆದಿಲ್ಲವೆನ್ನುವುದು ನನ್ನ ಭಾವನೆ. ಇದು ನನ್ನ ಮಿತಿಯೂ ಆಗಿರಬಹುದು. ಬಸವಣ್ಣ ಹಾಗೂ ಛತ್ರಪತಿ ಶಾಹು ಮಹಾರಾಜರ ಜೀವನ–ಸಾಧನೆಗಳನ್ನು ತೌಲನಿಕವಾಗಿ ವಿವೇಚನೆಗೊಳಪಡಿಸುವುದು ಪ್ರಸ್ತುತ ಲೇಖನದ ಆಶಯವಾಗಿದೆ.

ಬಸವಣ್ಣ ಮತ್ತು ಶಾಹು ಮಹಾರಾಜ ಈ ಇಬ್ಬರ ನಡುವೆ ಎಂಟುನೂರು ವರ್ಷಗಳಷ್ಟು ಕಾಲದ ಅಂತರವಿದೆ. ಆದರೆ ಅವರಿಬ್ಬರಲ್ಲಿ ಅನೇಕ ಸಾಮ್ಯ ಅಂಶಗಳು ಕಾಣಬಹುದಾಗಿದೆ. ಕರ್ನಾಟಕದ ಸಾಂಸ್ಕೃತಿಕ ಸಂದರ್ಭದಲ್ಲಿ ಹನ್ನರಡನೇ ಶತಮಾನಕ್ಕೆ ಐತಿಹಾಸಿಕ ಹಿನ್ನೆಲೆಯ ಜೊತೆಗೆ ಸಾಹಿತ್ಯಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕವಾದ ಕ್ರಾಂತಿ ಜಗತ್ತಿನ ಯಾವುದೇ ಸಂದರ್ಭದಲ್ಲಿ ನಡೆದಿರುವುದು ವಿರಳವೆಂದೇ ಹೇಳಬೇಕಾಗುತ್ತದೆ.

ಬಸವಣ್ಣನವರ ಹಿನ್ನೆಲೆಯನ್ನು ಗಮನಿಸಿದಾಗ ಸಮಾಜದ ಶ್ರೇಣೀಕೃತ ವ್ಯವಸ್ಥೆಯ ಉನ್ನತ ಸ್ಥರದಲ್ಲಿ ಜನಿಸಿದರೂ, ಆತನ ಚಿಂತನೆಯೆಲ್ಲವೂ ಶೋಷಿತರ ಉದ್ಧಾರದ ದಿಕ್ಕಿನತ್ತ ನಡೆದಿದೆ ಎಂಬುದು ಗಮನಿಸಬಹುದಾದ ಅಂಶ. ಬ್ರಾಹ್ಮಣ ದಂಪತಿಗಳ ಮಗನಾದರೂ ಕ್ರಾಂತಿಕಾರಿಯಾಗಿ ಎಲ್ಲವನ್ನೂ ಪ್ರಶ್ನಿಸುತ್ತ ಬೆಳೆದದ್ದು, ಅದ್ಭುತವಾದ ವಿಚಾರವೇ ಸರಿ. ಉಪನಯನ, ಸಂಸ್ಕಾರದ ಸಂಕೋಲೆಗೊಳಗಾಗದೆ, ತನ್ನದೇ ಆದ ಸ್ವತಂತ್ರ ದಾರಿಯಲ್ಲಿ ಮುನ್ನಡೆದು ಅಂಧಕಾರದಲ್ಲಿ ತೊಳಲುತ್ತಿದ್ದ ಸಮಾಜವನ್ನು ಪರಿವರ್ತನೆಯ ದಾರಿಯಲ್ಲಿ ಮುನ್ನಡೆಸಿದ್ದು ಮಹತ್ವದ ಮೈಲುಗಲ್ಲೆಂದೇ ಪರಿಗಣಿಸಬೇಕಾಗುತ್ತದೆ. ಹುಟ್ಟಿನಿಂದ ಬ್ರಾಹ್ಮಣನಾದರೂ “ಆನು ಹಾರುವನೆಂದರೆ ಕೂಡಲ ಸಂಗಮದೇವ ನಗುವನಯ್ಯಾ” ಎಂದು

ತನ್ನ ಆತ್ಮ ವಿಮರ್ಶೆ ಮಾಡಿಕೊಳ್ಳುವುದರ ಜೊತೆಗೆ "ಉನ್ನತ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ" ಎಂದು ತನ್ನ ಇಷ್ಟ ದೇವರಲ್ಲಿ ಪ್ರಾರ್ಥಿಸುತ್ತಾರೆ. ವ್ಯಕ್ತಿಯ ಯೋಗ್ಯತೆಯನ್ನು ಅವನಲ್ಲಿರುವ ಪ್ರತಿಭೆ ಮತ್ತು ಮಾನವೀಯ ಅಂತಃಕರಣದಿಂದ ಗುರ್ತಿಸಿದ ಬಸವಣ್ಣ ಉನ್ನತ ಕುಲದಲ್ಲಿ ಹುಟ್ಟಿದವರೆಲ್ಲ ಉನ್ನತರು ಎಂಬ ಅವೈಚಾರಿಕ ಚಿಂತನೆಯನ್ನು ಸ್ಪಷ್ಟವಾಗಿ ನಿರಾಕರಿಸುತ್ತಾರೆ."[೨] "ಕಾಸಿ ಕಮ್ಮಾರನಾದ, ಬಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ..." ಇಲ್ಲಿ ವೃತ್ತಿ ಶ್ರೇಷ್ಠತೆಯನ್ನು ಅಳೆಯಲಾಗದು. ಹುಟ್ಟು ಮನುಷ್ಯನ ಶ್ರೇಷ್ಠತ್ವದ ಸಾಧನವಲ್ಲ. ಹುಟ್ಟಿದ ಮೇಲೆ ನಾವು ಪ್ರದರ್ಶಿಸುವ ಗುಣಗಳ ಮೇಲೆ ಶ್ರೇಷ್ಠತೆಯನ್ನು ಅಳೆಯಬೇಕೆಂಬುದು ಬಸವಣ್ಣನವರ ನಿಲುವು. ಅದಕ್ಕೇ ಆತ ನಾವು ನಾವು ಮಾಡುವ ಕೆಲಸ-ಕಾಯಕಗಳ ಮೇಲೆ ಜಾತಿ ಪದ್ಧತಿ ರೂಢಿಯಲ್ಲಿ ಬಂದಿದೆ. ಇದು ಹೋಗಬೇಕೆಂಬುದು ಅವರ ಮೂಲಧ್ಯೇಯವಾಗಿದೆ. ಹಾಗೆಯೇ ತಮ್ಮ ತಮ್ಮ ಸಾಧನೆಯಿಂದ ಶ್ರೇಷ್ಠರಾದವರನ್ನು ಸ್ಮರಿಸುತ್ತ ಬಸವಣ್ಣನವರು ಜಾತಿವಾದಿಗಳಿಗೆ ಪರಂಪರೆಯ ಸಾಂಸ್ಕೃತಿಕ ಪಠ್ಯವನ್ನು ತೆರೆದಿಡುತ್ತಾರೆ;

ವ್ಯಾಸ ಬೋಯಿತಿಯ ಮಗ
ಮಾರ್ಕಂಡೇಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು
ಕುಲವನರಸದಿರಿಂ ಭೋ
ಕುಲದಿಂದ ಮುನ್ನೇನಾದರಿಂ ಭೋ
ಸಾಕ್ಷಾತ್ ಅಗಸ್ತ್ಯ ಕಬ್ಬಿಲ ದೂರ್ವಾಸ ಮಚ್ಚಿಗ
ಕಶ್ಯಪ ಕಮ್ಮಾರ ಕೌಂಡಿಲ್ಯನೆಂಬ ಋಷಿ
ಮೂರು ಲೋಕವರಿಯೆ ನಾಯಿಂದ ಕಾಣಿರೊ,
ನಮ್ಮ ಕೂಡಲಸಂಗನ ವಚನವಿಂತೆಂದುದು
ಶ್ವಪಚೋಪಿಯಾದರೇನು ಶಿವಭಕ್ತನೇ ಕುಲಜ

ಈಗಲೂ ಜನಪದರಲ್ಲಿ ಒಂದು ಮಾತಿದೆ. ನೀರಿನ ಮೂಲ ಋಷಿ ಮೂಲ, ಕೇಳಬಾರದೆಂದು. ಅಂದರೆ ಜಗತ್ತು ಮೆಚ್ಚುವಂತಹ ಶ್ರೇಷ್ಠ ಸಾಧನೆಯನ್ನು ಮಾಡಿದವರಾರು ಉಚ್ಚ ಕುಲದಿಂದ ಬಂದವರಲ್ಲ. ಶ್ರೇಷ್ಠತೆಯನ್ನು ಕುಲಕ್ಕಂಟಿಸಿದ ಜಾತಿವಾದಿಗಳಿಗೆ ಬಸವಣ್ಣ ಈ ಮೇಲಿನಂತೆ ಉತ್ತರಿಸಿದ್ದಾರೆ. ಮುಂದುವರೆದು ಬಸವಣ್ಣ ತನ್ನ ವಚನದಲ್ಲಿ ಹೀಗೆ ಹೇಳುತ್ತಾರೆ;

"ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ
ಜಲವೊಂದೇ ಶೌಚಾಚಮನಕ್ಕೆ
ಕುಲವೊಂದೆ ತನ್ನತಾನರಿದವಂಗೆ
..."

ಬಸವಣ್ಣನವರು ಅನುಭವ ಮಂಟಪದಲ್ಲಿ ಸರ್ವರಿಗೂ ಸಮಾನವಾದ ಅವಕಾಶ ಕಲ್ಪಿಸಿಕೊಟ್ಟರು. ಹೀಗಾಗಿಯೇ ಮಾದಾರ ಚೆನ್ನಯ್ಯ, ಧೂಳಯ್ಯ, ದೊಡ್ಡಯ್ಯ, ಸಮಗಾರ ಹರಳಯ್ಯ, ಉರಿಲಿಂಗ ಪೆದ್ದಿ ಮುಂತಾದವರು ಅಕ್ಷರ ಸಂಸ್ಕೃತಿಯಡೆಗೆ ಬರುವಂತಾಯಿತು. ಸೂಳೆ ಸಂಕವ್ವೆ, ಆಯ್ದಕ್ಕಿ ಲಕ್ಕಮ್ಮ, ಕಾಳವ್ವೆ ಮುಂತಾದ ದಲಿತ ಮಹಿಳೆಯರು ಸಹ

ಸಾಮಾಜಿಕವಾಗಿ ಸಮಾನ ಸ್ಥಾನಮಾನ ಪಡೆದುದಲ್ಲದೆ, ಶಿಕ್ಷಿತರಾಗುವ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಪಡೆದ ಕಾಲ ಅದಾಗಿತ್ತು.

ಊರಾಚೆ ಕೊಚ್ಚೆಯಲ್ಲಿ ವಾಸಿಸುವ ಕೆಳವರ್ಗದವರನ್ನು ಬಸವಣ್ಣನವರು ಅಪ್ಪಿಕೊಳ್ಳುವುದರ ಮೂಲಕ ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿದ. ಜಾತಿರಹಿತ ಸಮಾಜ ನಿರ್ಮಾಣದ ಕನಸು ಕಂಡ ಬಸವಣ್ಣನವರು. ಅಸ್ಪೃಶ್ಯರಾದ ಸಮಗಾರ ಹರಳಯ್ಯ ದಂಪತಿಗಳ ಮಗನಿಗೆ ವಿಪ್ರ ಮೂಲದ ಮಧುವರಸನ ಮಗಳನ್ನು ಕೊಟ್ಟು ಮದುವೆ ಮಾಡುವುದರ ಮೂಲಕ ಹೊಸ ಇತಿಹಾಸ ನಿರ್ಮಾಣ ಮಾಡಿದರು. ಇಂದು ಅನೇಕ ವಿಷಯಗಳಲ್ಲಿ ಬಸವಾದಿ ಶರಣರ ವಿಚಾರಗಳನ್ನು ಉದಾಹರಿಸಿ ಬಾಳುವ ಸಂಸ್ಕೃತಿ ನಮ್ಮದಾಗಿದ್ದರೂ, ನಾವ್ಯಾರೂ ಅವರ ಒಂದಿಷ್ಟು ವಿಚಾರಗಳನ್ನೂ ಇಲ್ಲಿಯವರೆಗೆ ಪಾಲಿಸಲಾಗಿಲ್ಲ. ವಿಪರ್ಯಾಸವೆಂದರೆ ಬಸವ ತತ್ವಾನುಯಾಯಿಗಳಲ್ಲಿಯೇ ವೀರಶೈವ, ಲಿಂಗಾಯತ, ಪಂಚಪೀಠ ಹೀಗೆ ತಾರತಮ್ಯ ಮಾಡಿಕೊಂಡು ಬಸವಣ್ಣನವರನ್ನು ಗೌರವಿಸಿದಷ್ಟು ಕೆಳಮಟ್ಟಕ್ಕೆ ಇಳದದ್ದೂ ನೋವಿನ ಸಂಗತಿಯಾಗಿದೆ.

ಬಿಜ್ಜಳನ ಆಸ್ಥಾನದಲ್ಲಿ ಬಸವಣ್ಣನವರು ಮಂತ್ರಿಯಾಗಿದ್ದರೂ, ಉತ್ತಮ ಕುಲದಲ್ಲಿ ಹುಟ್ಟಿದ್ದರೂ ತಾನು ಉಚ್ಚಕುಲದವನೆಂದು ಎಂದೂ ಹೇಳಿಕೊಳ್ಳಲಿಲ್ಲ. ಶಿವಭಕ್ತರಿಗಿಂತ ಹಿರಿಯರಿಲ್ಲ, ಎನಗಿಂತ ಕಿರಿಯರಿಲ್ಲ ಎಂದು ಸರಳ ಸಹಜ ಸ್ವಭಾವದ ಬಸವಣ್ಣ "ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ" ಎಂದು ಹೇಳುವುದರ ಮೂಲಕ ಗೌರವ ಕೊಡುವ, ತೆಗೆದುಕೊಳ್ಳುವ ಸಂಸ್ಕೃತಿಯ ವಿಚಾರಗಳನ್ನು ಪ್ರತಿಪಾದಿಸಿದ್ದಾನೆ.

ಸಮಾಜದಲ್ಲಿ ನೆಲೆಯೂರಿದ್ದ ಮೌಢ್ಯತೆ, ಸಂಪ್ರದಾಯಗಳನ್ನು ವಿರೋಧಿಸಿದಷ್ಟೇ ಅಲ್ಲ, ಪ್ರತಿಯೊಬ್ಬರಲ್ಲಿ ಬೇರೂರಿದ್ದ ಭೇದ, ಭಾವ, ಮತ, ಪಂಥಗಳಲ್ಲಿ ಹೊರಳಾಡುತ್ತಿದ್ದವರನ್ನು ನಾಚಿಸುವಂತೆ "ಇವನಾರವ ಇವನಾರವ ಎಂದೆನಿಸದಿರಯ್ಯಾ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ" ಎಂದ ಬಸವಣ್ಣನವರು ಹುಟ್ಟಿದ್ದು ವಿಪ್ರ ಕುಲದಲ್ಲಾದರೂ ಗುಣ ಸ್ವಭಾವದಿಂದ ಕೂಡಿ ಬಾಳುವ ಬದುಕಿಗೆ ದಾರಿ ತೋರಿದ್ದಾನೆ. ಶ್ರೇಷ್ಠವಾದುದನ್ನು ಸಾಧಿಸಿ ತೋರಿಸಿದ ಮಹಾಮಾನವ, ಎಲ್ಲರನ್ನು ಅಕ್ಕ ಅಣ್ಣ, ಅಪ್ಪ, ಅಮ್ಮ ಎಂದು ಕರೆದಿರುವುದಲ್ಲದೆ, ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯಾ ಎನ್ನುತ್ತ, ಎಲ್ಲರನ್ನು ಕಳ್ಳು ಬಳ್ಳಿಯಂತೆ ನೋಡುವ ದೊಡ್ಡ ಗುಣ ಬಸವಣ್ಣನವರದಾಗಿತ್ತು. ಕಳಬೇಡ, ಕೊಲಬೇಡ, ಹುಸಿಯನುಡಿಯಲು ಬೇಡ ಎಂದು ಹೇಳುತ್ತ ಯಾರನ್ನೂ ಎಂದಿಗೂ ದೂರ ತಳ್ಳಿದವರಲ್ಲ, ಯಾರನ್ನು ಎಂದಿಗೂ ಅಪಮಾನಿಸುವ ಗುಣ ಅವರದಾಗಿರಲಿಲ್ಲ, ಇಂತಹದೇ ಗುಣಗಳನ್ನು ಹೊಂದಿದ ಅರಸರಾಗಿದ್ದೂ ಅರಸೊತ್ತಿಗೆಯ ವಿಲಾಸಿ ಬದುಕಿಗೆ ಒಗ್ಗಿಕೊಳ್ಳದೆ ಸಾಮಾನ್ಯರ, ಮಹಿಳೆಯರ, ದುರ್ಬಲರ, ದಲಿತರ ಹಿತಕ್ಕಾಗಿ ಅವಿರತವಾಗಿ ದುಡಿದ ವ್ಯಕ್ತಿ ಛತ್ರಪತಿ ಶಾಹು ಮಹಾರಾಜರು. ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದುಕೊಂಡು ಸಮಾಜದ ಬದಲಾವಣೆ ಕಾರ್ಯಕ್ಕೆ ಮುಂದಾಗಿ ದುಡಿದರೆ, ಶಾಹು ಮಹಾರಾಜರು ಸ್ವತಃ ಅರಸರಾಗಿದ್ದುಕೊಂಡು ಆಧುನಿಕ ಯುಗದಲ್ಲಿ ದಲಿತರ ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ಸುಮಾರು ೫೦೦ಕ್ಕೂ ಹೆಚ್ಚು

ಸಂಸ್ಥಾನಗಳಿದ್ದರೂ ಮಾನವೀಯ ಮೌಲ್ಯಗಳ ಉಳಿವಿಗಾಗಿ ಮಿಡಿದ ಸಂಸ್ಥಾನಗಳು ಬೆರಳೆಣಿಕೆಯಷ್ಟು ಮಾತ್ರ ಎನ್ನುವುದು ನಾವ್ಯಾರು ಮರೆಯುವಂತಿಲ್ಲ.

ಮಾನವ ವಿರೋಧಿ ಚಿಂತನೆಯ, ಸಾಂಪ್ರದಾಯಿಕವಾದ ಪದ್ಧತಿಯ ಸಂಘ ಪರಿವಾರದ ವಿರುದ್ಧ ದುಡಿದ ಮಹನಿಯರಲ್ಲಿ ಛತ್ರಪತಿ ಶಾಹು ಮಹಾರಾಜರು ಒಬ್ಬರು. ರಾಜ ಎಂದಾಕ್ಷಣ ನಮ್ಮ ಕಲ್ಪನೆಗೆ ನಿಲುಕುವ ಅರ್ಥವೇ ಬೇರೆ. ರಾಣಿ ಮಹಾರಾಣಿಯರ ನೆನಪಿನಲ್ಲಿ ಸ್ಮಾರಕಗಳನ್ನು ನಿರ್ಮಾಣ ಮಾಡುವುದು, ವಿರೋಧಿಗಳನ್ನು ಸೋಲಿಸಿ ಅವರ ಹೆಂಡಂದಿರನ್ನು ಸಹ ಪತ್ನಿಯರನ್ನಾಗಿಸಿಕೊಳ್ಳುವುದು, ಪ್ರಜೆಗಳನ್ನು ತನ್ನ ಸೇವಕರಂತೆ ನಡೆಸಿಕೊಳ್ಳುವುದು; ಹೀಗಿದ್ದರೆ ಮಾತ್ರ ರಾಜ ಎಂಬ ಸಾಂಪ್ರದಾಯಿಕ ನಂಬಿಕೆಯೊಂದು ನಮ್ಮಲ್ಲಿತ್ತು. ಆದರೆ ಛತ್ರಪತಿ ಶಾಹು ಮಹಾರಾಜರು ಈ ವರ್ಗಕ್ಕೆ ಸೇರಿದವರಲ್ಲ.

ಛತ್ರಪತಿ ಶಾಹು ಮಹಾರಾಜ ವೈದಿಕರ ಪಾರಾಯಣ ಸಂಸ್ಕೃತಿಗೆ ತಲೆ ಹಾಕಿದವರಲ್ಲ. ಸ್ವತಂತ್ರ ವಿಚಾರಧಾರೆಯ ಮಾನವ ಪ್ರೇಮಿಯಾಗಿದ್ದರು. ಬುದ್ಧನ ಕಾಲದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತರುವಲ್ಲಿ ಪ್ರಯತ್ನಿಸಿ ಫಲ ಕಂಡವರು. ಸಮಾಜದಲ್ಲಿ ಸರ್ವಾಂಗೀಣ ಬದಲಾವಣೆ ತರುವಲ್ಲಿ ಹಾತೊರೆದವರು. ಆ ಹಿನ್ನೆಲೆಯಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ದಿಷ್ಟ ಗುರಿ ಮುಟ್ಟಿದವರು.

ಗುಜರಾತಿನಲ್ಲಿ ಜಯಭೇರಿ ಹೊಡೆದ ಬಿಜೆಪಿ ಹಾಗೂ ಸಂಘ ಪರಿವಾರದವರು ಗೋದ್ರಾದ ಘಟನೆಯನ್ನು ಎನ್‌ಕ್ಯಾಶ್ ಮಾಡಿಕೊಂಡು ಗುಜರಾತ ಹೆಣಗಳ ಮೇಲೆ ಓಡಾಡಿದರು. ಅದನ್ನು ಒಂದು ಬಂಡವಾಳವನ್ನಾಗಿ ಮಾಡಿಕೊಂಡ ಮತಾಂಧರು ಅವಾಸ್ತವವನ್ನು ವಾಸ್ತವವೆಂದು ಬೀಗುತ್ತಿದ್ದರೆ, ಈ ದೇಶದ ಮಹಿಳೆಯರಿಗಾಗಿ, ದಲಿತರಿಗಾಗಿ ಶಾಹು ಮಹಾರಾಜರು ನೂರು ವರ್ಷದ ಹಿಂದೆಯೇ ಸಮಾನತೆಗಾಗಿ ಶೇಕಡಾ ೫೦ರಷ್ಟು ಮೀಸಲಾತಿ ಜಾರಿಗೆ ತಂದ ಕಾರಣ ಅವರ ವಿಚಾರ ಹಾಗೂ ಸಾಧನೆಗಳನ್ನು ಗೌರವಿಸುವ ನಿಟ್ಟಿನಲ್ಲಿ ತಳವರ್ಗದವರು ಚಿಂತಿಸುತ್ತಿದ್ದರೆ, ಮತಾಂಧರ ವಿಚಾರಗಳು ಇದರ ವಿರುದ್ಧ ದಿಕ್ಕಿನಲ್ಲಿ ಸಾಗಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಭಾರತದಲ್ಲಿ ಅನೇಕ ಅರಸರು ಆಗಿ ಹೋಗಿದ್ದಾರೆ. ಅಂತಹವರಲ್ಲಿ ಕೆಲವರು ಮಾತ್ರ ಮಾನವೀಯ ಮೌಲ್ಯಗಳಿಗೆ ನಿಜವಾದ ಅರ್ಥ ಬರುವಂತೆ ಶ್ರಮಿಸಿದ್ದಾರೆ. ಅಂತಹವರಲ್ಲಿ ಸಾಮ್ರಾಟ ಅಶೋಕ, ಛತ್ರಪತಿ ಶಿವಾಜಿ ಮಹಾರಾಜರು; ಇವರ ನಂತರ ಭಾರತ ಕಂಡ ಜೀವಪರ ಚಿಂತನೆಯ ವಿಚಾರವಾದಿ, ಕ್ರಾಂತಿಕಾರಿ ಅರಸರೆಂದರೆ ಶಾಹು ಮಹಾರಾಜರು ಮತ್ತು ಸಯ್ಯಾಜಿರಾವ್ ಗಾಯಕವಾಡ, ನಾಲ್ವಡಿ ಕೃಷ್ಣರಾಜ್ ಒಡೆಯರ್ ಪ್ರಮುಖರಾಗಿದ್ದಾರೆ.

೨೬.೦೭.೧೮೭೪ರಂದು ಕೊಲ್ಲಾಪುರದ ಕಾಗಲವಾಡಿಯ ಅಪ್ಪಾ ಸಾಹೇಬ ಘಾಟಗೆ ಹಾಗೂ ರಾಧಾಬಾಯಿ ದಂಪತಿಗಳ ಉದರದಲ್ಲಿ ಜನಿಸಿದ ಮಗುವೆ ಶಾಹು ಮಹಾರಾಜ, ಇವರ ಜನ್ಮದ ಹೆಸರು ಯಶವಂತ ಜಯಸಿಂಹ ಘಾಟಗೆ ಎಂದಿತ್ತು. ಮರಾಠಾ ಸಮುದಾಯದ ಕುಣಬಿ ಜಾತಿಗೆ ಸೇರಿದವರಾಗಿದ್ದರು. ವೈದಿಕ ಪದ್ಧತಿಯ ಬಿಗುವಿನಲ್ಲಿಯೂ ಶಾಹು ಮಹಾರಾಜರು ತಮ್ಮ ನಿಶ್ಚಿತ ಗುರಿಯನ್ನು ಮುಟ್ಟಿದವರು.

ಭಾರತೀಯ ಇತಿಹಾಸದಲ್ಲಿ ಶಿವಾಜಿಯ ಹೆಸರು ಚಿರಸ್ಥಾಯಿಯಾದುದು. ಇತಿಹಾಸವಾಗಿ ಉಳಿಯದೆ ಆಧುನಿಕ ಯುಗದ ಅನೇಕ ಮಾನವ ಪ್ರೇಮಿಗಳಿಗೆ ಚಿಂತಕರಿಗೆ,

ಸಮಾಜವಾದಿಗಳಿಗೆ ಸ್ಫೂರ್ತಿ ನೀಡುವ ಶಕ್ತಿ ಅವರ ವ್ಯಕ್ತಿತ್ವದಲ್ಲಿದೆ ಎನ್ನುವುದು ಗಮನಿಸುವ ವಿಚಾರವಾಗಿದೆ. ಬಹು ಪರಾಕ್ರಮಿ ಶೂದ್ರ ದೊರೆ ಶಿವಾಜಿ ಮಂತ್ರಶಕ್ತಿಯ ವೈದಿಕರ ಕಡು ವಿರೋಧದ ಮಧ್ಯೆ ಆಗ್ರಾದಿಂದ ದಿಲ್ಲಿಯವರೆಗೆ ತನ್ನ ಸೀಮಾರೇಖೆಗಳನ್ನು ವಿಸ್ತರಿಸಿಕೊಂಡಿದ್ದರು. ಶೂದ್ರ ಜಾತಿಯವನಾದ ಕಾರಣ ಇವರ ಸಾಹಸ ಪರಾಕ್ರಮಗಳು ವೈದಿಕರ ಕಣ್ಣು ಕುಕ್ಕುವಂತಾಗಿತ್ತು. ಶೂದ್ರನಾದವನು ಸಾಮ್ರಾಟನಾಗುವುದು ವೈದಿಕ ಧರ್ಮಕ್ಕೆ ಅಪಚಾರವೆಂದು ಬ್ರಾಹ್ಮಣರ ವಿಚಾರವಾಗಿದೆ. ಛತ್ರಪತಿ ಶಿವಾಜಿ ಮಹಾರಾಜನ ಆಡಳಿತದಲ್ಲಿ ಮೋಸದಿಂದ ನುಸುಳಿದ ವೈದಿಕರು ರಾಜ್ಯಭಾರ ಕುಸಿಯುವಂತೆ ತಮ್ಮ ಕುಯುಕ್ತಿ ಮೆರೆದರು. ಮಹಾರಾಜರ ಮಕ್ಕಳನ್ನು ವಿಲಾಸಿ ಬದುಕಿಗಟ್ಟಿ ಎಲ್ಲ ಹಂತದಲ್ಲಿ ರಾಜ್ಯದಾಡಳಿತವನ್ನು ಹಾಳುಗೆಡುವಿದ ಕುಖ್ಯಾತಿ ವೈದಿಕರಿಗೆ ಸೇರುವಂತಹದ್ದು. ಚರಿತ್ರೆಯುದ್ಧಕ್ಕೂ ವೈದಿಕರು ಕುಯುಕ್ತಿಯಿಂದಲೇ ಎಲ್ಲರನ್ನು ನಿರ್ನಾಮ ಮಾಡುತ್ತಾ ಬಂದಿದ್ದಾರೆ. ವೈರಿಯನ್ನು ನೇರವಾಗಿ ಎದುರಿಸದ ವೈದಿಕರು ಮೋಸ ವಂಚನೆ ಮುಂತಾದ ಹೀನ ಕೆಲಸದಿಂದಲೇ ಯಶಸ್ಸನ್ನು ಕಂಡವರು.

ಛತ್ರಪತಿ ಶಿವಾಜಿಯ ನಂತರ ಪೇಶ್ವೆ ಆಡಳಿತವನ್ನು ಹೊಂದಿದ ವೈದಿಕರು ಬಹುಜನರನ್ನು, ಮಹಿಳೆಯರನ್ನು ಹೀನಾಯವಾಗಿ ಕಂಡರು. ಹಣವನ್ನು ಅನುತ್ಪಾದಕ ಕೆಲಗಳಿಗೆ ಬಳಸಿ ಭಂಡಾರವನ್ನು ಬರಿದು ಮಾಡಿ, ವಿಲಾಸಿ ಜೀವನ ಸಾಗಿಸಿದ್ದಲ್ಲದೆ ವಿದೇಶಿಯರನ್ನು ವ್ಯಾಪಾರದ ಹೆಸರಿನಲ್ಲಿ ಒಳಬಿಟ್ಟುಕೊಂಡು, ದೇಶವನ್ನು ಇಂಗ್ಲಿಷರ ಸುಪರ್ದಿಗೆ ಒಪ್ಪಿಸಿದರು. ಸ್ವಹಿತಾಸಕ್ತಿಗಾಗಿ ಸಂಗಾತಿಗಳನ್ನು ಮಾರಿಕೊಳ್ಳುವ ವೈದಿಕರು ನಾಡಿಗಾಗಿ ತ್ಯಾಗ ಮಾಡಿದ ಉದಾಹರಣೆಗಳು ದೊರೆಯುವದು ದುರ್ಲಭ. ಇಂಗ್ಲಿಷರ ಆಳ್ವಿಕೆಯಲ್ಲಿಯೂ ಪರೋಕ್ಷವಾಗಿ ಈ ದೇಶವನ್ನು ಆಳಿದವರು ವೈದಿಕರೆ ಎನ್ನುವುದು ಮರೆಯಬಾರದು.

ಕೊಲ್ಲಾಪುರದ ಶಾಹುಮಹಾರಾಜರ ಪೂರ್ವಜರನ್ನು ಇಂಗ್ಲಿಷರು ಮತ್ತು ಕುಟೀಲ ನೀತಿಯಲ್ಲಿ ಪ್ರವೀಣರಾದ ಬ್ರಾಹ್ಮಣರು ತಮ್ಮ ಅಮೌಲಿಕ ವ್ಯಕ್ತಿತ್ವದಿಂದ ಕೆಲವರನ್ನು ಹುಚ್ಚರೆಂದು ಘೋಷಿಸಿದ್ದರು. "ಇನ್ನು ಕೆಲವರನ್ನು ವಿಷಕೊಟ್ಟು ಕೊಲ್ಲಲಾಗಿತ್ತು. ಏಪ್ರಿಲ್ ೨೯, ೧೮೯೪ರಲ್ಲಿ ತಮ್ಮ ೨೦ನೇ ವಯಸ್ಸಿನಲ್ಲಿ ಶಾಹು ಮಹಾರಾಜ ಅವರಿಗೆ ಕೊಲ್ಲಾಪುರ ಸಂಸ್ಥಾನ ಕಾರ್ಯಭಾರ ಸಂಭಾಳಿಸುವ ಅವಕಾಶ ದೊರಕಿತು. ಇಂಗ್ಲಿಷ್ ಅಧಿಕಾರಿ ಮತ್ತು ಅವನ ಗಳಸ್ಯ ಕಂಠಸ್ಯ ದುಷ್ಟ ವೈದಿಕ ಅಧಿಕಾರಿ ಸೇರಿ ಶಾಹು ಮಹಾರಾಜ ಅವರನ್ನು ಪರದೇಶಕ್ಕೆ ಆರಾಮವಿರಲು ಕಳುಹಿಸುವ ಸಂಚು ರೂಪಿಸಿದ್ದರು. ಶಾಹು ಮಹಾರಾಜರು ಬಹಳ ಬುದ್ಧಿವಂತಿಕೆಯಿಂದ ಈ ಸಂಚನ್ನು ವಿಫಲಗೊಳಿಸಿದರು. ಆ ಮೂಲಕ ರಾಜಕಾರ್ಯದಲ್ಲಿ ಮಗ್ನರಾದರು. ಜನರ ಕಷ್ಟನಷ್ಟಗಳನ್ನು ತಿಳಿಯುವ ಯತ್ನ ಮಾಡಿದರು. ರಾಜಭಂಡಾರ ಬರಿದಾಗಲು ಕಾರಣಗಳನ್ನು ಹುಡುಕಿ ಸೋರುವಿಕೆಯನ್ನು ತಡೆಗಟ್ಟಿ ಅದನ್ನು ಭರ್ತಿ ಮಾಡುವ ಕಾಯಕದಲ್ಲಿ ತೊಡಗಿದರು" (ತೇಜಸ್ವಿ ಕಟ್ಟೀಮನಿ). ಈ ಘಟನೆ ಬಸವಣ್ಣನವರ ಬದುಕಿನಲ್ಲಿ ನಡೆದ ಘಟನೆಗಳನ್ನು ನೆನಪಿಸಿ ತರುತ್ತದೆ.

ಶೂದ್ರ ವರ್ಗದಿಂದ ಬಂದ ಶಾಹು ಮಹಾರಾಜರು ಸಮಸಮಾಜದ ನಿರ್ಮಾಣದಲ್ಲಿ ತೊಡಗಿದರು. ಪ್ರಜೆಗಳನ್ನು ಸುಖವಾಗಿಡುವುದು, ಅವರ ಕಷ್ಟನಷ್ಟಗಳನ್ನು ಕಂಡು

ಸ್ಪಂದಿಸುವುದು ನಿಜವಾದ ರಾಜಧರ್ಮ ಎಂದು ಭಾವಿಸಿದ್ದರು. ರಾಜಧರ್ಮವನ್ನರಿತ ಶಾಹು ಮಹಾರಾಜರು ಆತ್ಮಬಲ ಕಳೆದುಕೊಂಡ ಶೂದ್ರರನ್ನು, ಅತಿ ಶೂದ್ರರನ್ನು ಒಂದೆಡೆ ಸೇರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದರು. ವಿಶೇಷವಾಗಿ ಕೃಷಿ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಬದಲಾವಣೆ ತಂದರು. ವೈದಿಕ ಪದ್ಧತಿಯ ನಿಯಮದಿಂದಾಗಿ ಸಮಾಜದಲ್ಲಿ ಜಾತಿ ತಾಂಡವವಾಡುತ್ತಿತ್ತು. ಮತಪಂಥಗಳನ್ನು ತೊರೆದು ಶೋಷಿತರಾದ ಬಹುಜನರನ್ನು ಒಂದೆಡೆ ತರುವಲ್ಲಿ ಹಗಲಿರುಳು ಶ್ರಮಿಸಿದರು. ಇತಿಹಾಸದ ಅರಿವಿದ್ದ ಶಾಹು ಮಹಾರಾಜರು ವೈದಿಕರ ಕುತಂತ್ರ ನೀತಿಯನ್ನು ಬಹು ಎಚ್ಚರಿಕೆಯಿಂದ ಎದುರಿಸಿದರು.

ಸಾತಾರಾದಲ್ಲಿ ಕಾರ್ಯ ನಿಮಿತ್ತ ಶಾಹು ಮಹಾರಾಜರು ಠಿಕಾಣಿ ಹೂಡಿದ್ದರು. ಅಲ್ಲಿ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಬ್ರಾಹ್ಮಣನು ಭೋಜನಪ್ರಿಯ ಎಂಬ ಜನಪ್ರಿಯ ಮಾತಿನಂತೆ ಅಡುಗೆ ತಯಾರಿಕೆ ಕೆಲಸದ ಮೇಲುಸ್ತುವಾರಿಯನ್ನು ವೈದಿಕರೇ ವಹಿಸಿಕೊಂಡಿದ್ದರು. ಶಾಹು ಮಹರಾಜರು ತಮ್ಮ ಸ್ನಾನದ ನಂತರ ಊಟದ ತಯಾರಿ ನೋಡಲು ಅಡುಗೆ ಮನೆ ಕಡೆಗೆ ಹೆಜ್ಜೆ ಹಾಕಿದರು. ರಾಜರು ಬರುವುದನ್ನು ಗಮನಿಸಿದ ಬ್ರಾಹ್ಮಣ ಭಟ್ಟ ತನ್ನ ಪ್ರೀತಿಯ ಬೆಕ್ಕನ್ನು ಬಲಗೈಯಲ್ಲಿ ಹಿಡಿದುಕೊಂಡು ಓಡಿ ಬಂದು ಶಾಹು ಮಹಾರಾಜರನ್ನು ತಡೆದು ನೀವು ಒಳಗೆ ಬರಕೂಡದು, ನೀವು ಹೊರಗಡೆ ನಿಲ್ಲಬೇಕು ಎಂದು ಹೇಳಿದ. ಯಾಕೆ ಎಂದು ಅರಸರು ಪ್ರಶ್ನೆ ಮಾಡಿದರು. ಒಂದು ವೇಳೆ ನೀವು ಒಳಗೆ ಬಂದಿದ್ದೇ ಆದರೆ ಮಾಡಿದ ಅಡುಗೆ ಮತ್ತು ಅಡುಗೆ ಮನೆ ಎರಡೂ ಮೈಲಿಗೆಯಾಗುತ್ತದೆ, ಇದರಿಂದ ನಿಮಗೆ ಪಾಪ ಹತ್ತುತ್ತದೆ ಎಂದು ನುಡಿದ. ಈ ಮಾತನ್ನು ಕೇಳಿದ ಮಹಾರಾಜರು ನನ್ನಂತಹವನಿಗೇ ಈ ಗತಿಯಾದರೆ ನನ್ನ ಸಮಾಜದ ಸಾಮಾನ್ಯ ಜನರ ಗತಿಯೇನು? ಬೆಕ್ಕಿಗಿಂತಲೂ ಕಡೆಯಾಯಿತಲ್ಲ ನನ್ನ ಹಾಗೂ ನನ್ನವರ ಬದುಕು ಎಂದು ಆಘಾತಕ್ಕೊಳಗಾದ ರಾಜರು ಜಾತಿ ವ್ಯವಸ್ಥೆ ವಿರುದ್ಧ ಸಿಡಿದೆದ್ದು ಹೊಸ ಸಮಾಜದ ನಿರ್ಮಾಣದಲ್ಲಿ ತೊಡಗಿದರು.

ಮುಂದೊಮ್ಮೆ ಮಹಾರಾಜರು ಆರ್ಯ ಸಮಾಜದೆಡೆಗೆ ಆಕರ್ಷಿತರಾದರು. ನದಿಯಲ್ಲಿ ಸ್ನಾನ ಮಾಡಿ ಮಂತ್ರ ಹೇಳಿಕೊಡಿ ಅಂದಾಗ ವೈದಿಕರು ಶೂದ್ರನಿಗೆ ವೇದ ಮಂತ್ರ ಹೇಳುವುದು ಧರ್ಮಬಾಹಿರವಾಗುತ್ತದೆ ಎಂದು ತಿರಸ್ಕರಿಸಿದರು. ಶಾಹು ಮಹಾರಾಜರಂತೆ ಶಿವಾಜಿ ಮಹಾರಾಜರಿಗೂ ವೈದಿಕರು ಅವಮಾನ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಜ್ಯೋತಿಬಾಫುಲೆಯವರನ್ನು ಸಹ ಮದುವೆ ದಿಬ್ಬಣದಿಂದ ಹೊರದೂಡಿದ್ದರು. ಈ ಎಲ್ಲ ಪರಿಣಾಮಗಳಿಂದಾಗಿ ಹೊಸದೊಂದು ಯುಗ ಕಾಣುವಂತಾಯಿತು. ಹಾಗೆ ಡಾ. ಅಂಬೇಡ್ಕರ್ ಅವರ ಬದುಕಿನಲ್ಲಿಯೂ ಈ ತರಹದ ಅನೇಕ ಅವಮಾನಗಳು ನಡೆದಿವೆ. ಬಾಲ್ಯದಲ್ಲಿ ಗಾಡಿಯವ ತಳ್ಳಿದ್ದು, ಕ್ಷೌರ ಮಾಡದೆ ಇದ್ದದ್ದೂ, ಜವಾನ ಕಡತವನ್ನು ದೂರದಿಂದ ಎಸೆದದ್ದು, ಹೊಟೇಲಿನಿಂದ ಹೊರದಬ್ಬಿದ್ದು ಹೀಗೆ ಹತ್ತು ಹಲವಾರು ಘಟನೆಗಳನ್ನು ಗಮನಿಸಬಹುದಾಗಿದೆ. ತಮಗಾದ ಎರಡೂ ಅವಮಾನಗಳಿಂದ ಕ್ರೋಧಗೊಂಡ ಶಾಹು ಮಹಾರಾಜರು ವೈದಿಕರ ಈ ಕುತಂತ್ರಗಳನ್ನು ನಿರ್ಮೂಲನಗೊಳಿಸಲು ಯತ್ನಿಸಿದರು.

ಕುತಂತ್ರಿಗಳಾದ ಬ್ರಾಹ್ಮಣರು ಫುಲೆಯವರ ಸತ್ಯಶೋಧಕ ಸಮಾಜದ ಒಟ್ಟು ವಿಚಾರಗಳು ಶಾಹುಮಹಾರಾಜರಿಗೆ ತಲುಪದಂತೆ ನೋಡಿಕೊಂಡಿದ್ದರು. ಆರ್ಯ ಸಮಾಜದ ಢೋಂಗಿ ವಿಚಾರಗಳನ್ನು ತಿಳಿದ ಮಹಾರಾಜರು ಅದರಿಂದ ದೂರಾದರು. ಈ ವೇಳೆಗಾಗಲೇ

ಜ್ಯೋತಿಬಾಪುಲೆಯವರ ಸತ್ಯಶೋಧಕ ಸಮಾಜದ ಕೆಲವು ಕಾರ್ಯಕರ್ತರು ಮಹಾರಾಜರ ಸಂಪರ್ಕದಲ್ಲಿದ್ದರು. ರೋಗಿ ಬಯಸಿದ್ದೂ ಹಾಲು ವೈದ್ಯ ಹೇಳಿದ್ದೂ ಹಾಲು ಎನ್ನುವಂತೆ ೧೯೧೧ರಲ್ಲಿ ಸತ್ಯಶೋಧಕ ಸಮಾಜವನ್ನು ಪುನರ್ ಸಂಘಟಿಸಿ ಸನಾತನ ವ್ಯವಸ್ಥೆಯ ವಿರುದ್ಧ ಸೆಟೆದು ನಿಂತರು.

ಪುಲೆಯವರ ಸತ್ಯಶೋಧಕ ಸಮಾಜದ ವಿಚಾರಗಳನ್ನು ತಿಳಿದ ಶಾಹು ಮಹಾರಾಜರು ಶೂದ್ರ ಅತಿ ಶೂದ್ರರ ಬದುಕನ್ನು ಹಸನುಗೊಳಿಸುವಲ್ಲಿ ಮುಂದಾದರು. ಮೌಢ್ಯತೆ ಸಂಪ್ರದಾಯ, ದೇವರ ಗೊಡ್ಡು ವಿಚಾರಗಳ ಹೆಸರಿನಲ್ಲಿ ಬೌದ್ಧಿಕ ಸಾಮರ್ಥ್ಯವನ್ನು ಹಾಳುಮಾಡಿದ್ದಲ್ಲದೆ ಅವರನ್ನು ಸೇವಕರಂತೆ ಕಂಡ ವೈದಿಕರ ಕುತಂತ್ರವನ್ನು ಭೇದಿಸಲು ಪುಲೆಯವರ ವಿಚಾರ ಧಾರೆಗಳು ಸೂಕ್ತವೆಂದರಿತರು.

ಅಕ್ಷರ ಸಂಸ್ಕೃತಿಯಿಂದ ಬಹುಸಂಖ್ಯಾತ ಶೂದ್ರರನ್ನು, ದಲಿತರನ್ನು, ಮೇಲಾಗಿ ಮಹಿಳೆಯನ್ನು ದೂರಿಟ್ಟ ವೈದಿಕರ ವಿಚಾರಗಳ ವಿರುದ್ಧ ಶಾಹು ಮಹಾರಾಜರು ದಲಿತರಿಗೆ ಮಹಿಳೆಯರಿಗೆ ಶಿಕ್ಷಣ ಕೊಡಿಸುವ ಸಲುವಾಗಿ ಖಜಾನೆಯ ಹಣವನ್ನು ವಿನಿಯೋಗಿಸ ತೊಡಗಿದರು. ದೇಶಕ್ಕಂಟಿಕೊಂಡ ಹೀನ ಪದ್ಧತಿ ಎಂದರೆ ಅಸ್ಪೃಶ್ಯತೆ. ಈ ಹೀನ ಪದ್ಧತಿಯನ್ನು ಹೋಗಲಾಡಿಸಲು ಶಾಲಾ ಕಾಲೇಜುಗಳ ಪಠ್ಯಕ್ರಮದಲ್ಲಿ ಅಡಕವಾಗಿದ್ದ ಅವಾಸ್ತವ ವಿಷಯಗಳನ್ನು ನಿರ್ದಾಕ್ಷಿಣ್ಯವಾಗಿ ತೆಗೆದು ಹಾಕಿದರು. ಅಂಧ ವಿಶ್ವಾಸ ಹುಟ್ಟಿಸುವ ಪಠ್ಯಕ್ರಮವನ್ನು ತೆಗೆಸಿ, ಸತ್ಯ ಹಾಗೂ ಜ್ಞಾನ ಹೆಚ್ಚಿಸುವಂತಹ, ಹೊಸ ಹೊಸ ವಿಚಾರಗಳನ್ನು ಪಠ್ಯಕ್ರಮದಲ್ಲಿ ಅಳವಡಿಸುವಂತೆ ಕ್ರಮ ಕೈಗೊಂಡರು. ಬಸವಣ್ಣನವರ ವಚನಗಳಲ್ಲಿ ಜನತೆಗೆ ಅಂಟಿಕೊಂಡಿದ್ದ ಮೌಢ್ಯ ಹಾಗೂ ಕ್ಷುದ್ರದೇವತಾರಾಧನೆ ಪದ್ಧತಿಗಳನ್ನು ಖಂಡಿರುವುದನ್ನು ಕಾಣಬಹುದಾಗಿದೆ.

ಸಂಸ್ಥಾನದಲ್ಲಿ ಶಾಲೆಗಳ ನಿರ್ಮಾಣ ಕೈಗೊಂಡರು. ಅದಕ್ಷ ಪುರೋಹಿತ ಶಿಕ್ಷಕರನ್ನು ಕಿತ್ತು ಹಾಕಿದರು. ಗುಡಿಗುಂಡಾರದ ಆದಾಯಗಳನ್ನು ಶಿಕ್ಷಣದ ಪ್ರಗತಿಗಾಗಿ ಖರ್ಚಾಗುವಂತೆ ನೋಡಿಕೊಂಡರು. ಶಿಕ್ಷಣ, ಕರ, ಗ್ರಂಥಾಲಯ, ಅನುವಾದ, ಬುಕ್ ಬ್ಯಾಂಕ್, ಮಿಲಿಟರಿ ಶಿಕ್ಷಣ, ತಾಂತ್ರಿಕ ಕಾಲೇಜು ಈ ಮುಂತಾದ ಯೋಜನೆಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ಬೆಳೆಸಿದರು. ಮಹಿಳೆಯರಿಗೆ ಶಿಕ್ಷಣ ನೀಡುವ ಸಲುವಾಗಿ ಅನೇಕ ಯೋಜನೆಗಳನ್ನು ಹಾಕಿಕೊಂಡರು. ದಲಿತ ವಿದ್ಯಾರ್ಥಿನಿಯರಿಗಾಗಿ, ಊಟ ವಸತಿ ವೆಚ್ಚವನ್ನು ಸಂಸ್ಥಾನದ ವತಿಯಿಂದ ಭರಿಸಿದರು. ಉತ್ತಮ ಶಿಕ್ಷಕರ ಅವಶ್ಯಕತೆಯನ್ನರಿತು ೧೯೨೧ರಲ್ಲಿ ಶಿಕ್ಷಣ ತರಬೇತಿ ಕೇಂದ್ರವನ್ನು ತೆರೆದರು. ೧೯೧೨ರಲ್ಲಿ ವತನದಾರಿ ಶಿಕ್ಷಕರ ಯೋಜನೆ ಮತ್ತು ೧೯೧೭ರಲ್ಲಿ ಪಗಾರಿ ಶಿಕ್ಷಕರ ಯೋಜನೆಗಳನ್ನು ಜಾರಿಗೆ ತಂದರು. ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಕೊಡಲು ೧೯೧೭ರಲ್ಲಿ ಘೋಷಿಸಿದರು. ೧೯೨೦ರಲ್ಲಿ ಮೆಟ್ರಿಕ್ ಪರೀಕ್ಷಾ ಕೇಂದ್ರಗಳನ್ನು ಶುರುಮಾಡಿದರು (ಡಾ. ತೇಜಸ್ವಿ ಕಟ್ಟೀಮನಿ). ದೇಶಕ್ಕೆ ಅಂಟಿಕೊಂಡಿರುವ ಜಾತಿಪದ್ಧತಿ ನಿರ್ಮೂಲನೆ ಆಗಬೇಕಾದರೆ ತುಳಿತಕ್ಕೊಳಗಾದ ವರ್ಗದಿಂದಲೇ ಪ್ರತಿಭಟನೆ ಬರಬೇಕೆಂದು ಚಿಂತಿಸಿದರು. ಅವರಿಗೆ ಶಿಕ್ಷಣ ನೀಡುವುದರ ಮೂಲಕ ಆ ನಿಟ್ಟಿನಲ್ಲಿ ಅವರಲ್ಲಿ ಅರಿವು ಮೂಡಿಸಿದವರು ಶಾಹು ಮಹಾರಾಜರು, ಹೀಗೆ ಅವರನ್ನು ಜಾಗೃತರನ್ನಾಗಿ ಮಾಡಿದವರು.

ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರ ವಿದ್ವತ್ತು ಮತ್ತು ಪ್ರತಿಭೆಯ ಬಗ್ಗೆ ಕೇಳಿ ತಿಳಿದ

ಶಾಹು ಮಹಾರಾಜರು ಸ್ವತಃ ಅಂಬೇಡ್ಕರ್ ಅವರನ್ನು ಕಂಡು (೧೯೨೦ ದತ್ತೂಬಾ ಪವಾರರು ಜೊತೆಗಿದ್ದರು) ಸಾಮಾಜಿಕ ಅಸಮಾನತೆಯ ಕಳವಳಕಾರಿಯಾದ ಅನೇಕ ವಿಷಯಗಳನ್ನು ಕೇಳಿ ತಿಳಿದು ಚರ್ಚಿಸಿ ದುಃಖಿತರಾದರು. ಬಾಬಾ ಸಾಹೇಬರು ಪ್ರಾರಂಭ ಮಾಡಲಿಚ್ಛಿಸಿದ್ದ 'ಮೂಕನಾಯಕ' ಪತ್ರಿಕೆಗೆ ಎಲ್ಲ ನೆರವು ನೀಡಿದರು. ಅರಸೊತ್ತಿಗೆಯ ಸುಖವನ್ನು ಬದಿಗಿಟ್ಟ ಶಾಹು ಮಹಾರಾಜರು ತಮ್ಮ ಜೀವಿತದುದ್ದಕ್ಕೂ ಶೋಷಿತರ ಉದ್ಧಾರಕ್ಕಾಗಿ ಅವಿರತವಾಗಿ ದುಡಿದರು. ದಲಿತರಿಗೆ ಕೊಟ್ಟ ಮೀಸಲಾತಿಯಿಂದ ಬೇಸತ್ತ ಬ್ರಾಹ್ಮಣರು ಶಾಹು ಮಹಾರಾಜರನ್ನು ದೇಶದ್ರೋಹಿ ಎಂದು ಜರಿದರು. ಬ್ರಿಟಿಷರ ಗುಲಾಮ, ಭಿಕಾರಿ ಎಂದು ಕರೆದರು.

ಈ ದೇಶದ ಧರ್ಮಾಂಧರ ಪ್ರಮುಖ ನಾಯಕರೆಂದರೆ ಮಾನ್ಯ ತಿಲಕರು. ಇವರನ್ನು ಕಟ್ಟಾ ಹಿಂದೂವಾದಿ ಅಥವಾ ಬ್ರಾಹ್ಮಣವಾದಿ ಎಂದು ಕರೆದರೆ ತಪ್ಪಾಗಲಾರದು. ಮಹಾರಾಜರ ಕುರಿತು ತಮ್ಮ ಕೇಸರಿ ಪತ್ರಿಕೆಯಲ್ಲಿ ಲೋಕ ವಿರೋಧಿ, ಬ್ರಾಹ್ಮಣ ದ್ರೋಹಿ ಎಂದು ಅಪಪ್ರಚಾರ ಮಾಡಿದರು. ತಂದೆಯ ಆಡಳಿತ ಕಾಲದಲ್ಲಿ ನೂರು ಜನ ಬ್ರಾಹ್ಮಣರು ಮಂತ್ರಿಗಳಿದ್ದುದನ್ನು ಅರಿತ ಶಾಹು ಮಹಾರಾಜರು ತಮ್ಮ ಆಡಳಿತದಲ್ಲಿ ಅವರ ಹುದ್ದೆಗಳನ್ನು ಕಡಿತಗೊಳಿಸಿದರು. ರೈತರು ಇತರ ಜಾತಿಯವರು ಶಾಸನ ಸಭೆಗೆ ಆರಿಸಿ ಹೋದಾಗ ಎಲ್ಲ ಜಾತಿಗಳವರಿಗೆ ಅವಕಾಶ ಸಿಗುತ್ತಿರುವುದನ್ನು ಕಂಡು ತಿಲಕರು ಕ್ಷೋಭೆಗೊಳಗಾದರು. ಬ್ರಾಹ್ಮಣವಾದಿ ತಿಲಕರು ಶಾಹು ಮಹಾರಾಜರ ಸಾಧನೆ, ಪ್ರಗತಿಯನ್ನು ಸಹಿಸದೆ "ಶಾಹು ಮಹಾರಾಜಕಾ ರಾಜ್ ಢೇಡೊಂಕಾ ರಾಜ್ ಹೈ" ಎಂದು ಅವಹೇಳನ ಮಾಡಿದರು. ಈ ಮಾತು ಅವರ ಮತೀಯವಾದಕ್ಕೆ ಹಿಡಿದ ಕನ್ನಡಿ. ಬ್ರಾಹ್ಮಣರು ಮಾತ್ರ ಉನ್ನತಿ ಸಾಧಿಸಬೇಕು, ಸಂಸತ್ತಿನ ಹಾಗೂ ಶಾಸನ ಸಭೆಗಳ ಒಡೆಯರಾಗಬೇಕೆಂಬ ಹುಚ್ಚು ಹಂಬಲ ಅವರದಾಗಿತ್ತು.

ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರ ಹಿಂದೂ ಕೋಡ್‌ಬಿಲ್ ಶಾಹು ಮಹಾರಾಜರ ಹಿಂದೂ ನೀತಿಸಂಹಿತೆ ಆಧರಿಸಿರುವಂತಹದ್ದು ಎನ್ನುವುದು ಗಮನಾರ್ಹ. ಈ ನಿಯಮವನ್ನು ೧೯೨೦ರಲ್ಲಿ ತಮ್ಮ ಸಂಸ್ಥಾನದಲ್ಲಿ ಶಾಹು ಮಹಾರಾಜರು ಜಾರಿಗೆ ತಂದಿದ್ದರು. ನಾಗಪೂರದ ಸಮಾರಂಭವೊಂದರಲ್ಲಿ ಶಾಹು ಮಹಾರಾಜರು "ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಅಸ್ಪೃಶ್ಯರ, ಶೋಷಿತರ, ಬಡವರ, ಹಿಂದುಳಿದವರ ಸಂರಕ್ಷಣೆ ಮಾಡುವರೆಂದು ನಾನು ನಂಬಿದ್ದೇನೆ. ಶತಮಾನಗಳಿಂದ ಉಳಿದುಕೊಂಡು ಬಂದ ಜಾತಿ ಪದ್ಧತಿಯನ್ನು ನಿರ್ಮೂಲನ ಮಾಡಲು ಅವರು ಸರ್ವಶಕ್ತರೆಂದು ನನಗನಿಸಿದೆ" ಎಂದು ನೆರೆದ ಸಭೆಯಲ್ಲಿ ಪ್ರಕಟಿಸಿದರು. ಈ ಸಮ್ಮೇಳನದಲ್ಲಿ ಡಾ. ಅಂಬೇಡ್ಕರ್ ಅವರು ಮುಖ್ಯ ಅತಿಥಿಯಾಗಿದ್ದರು. ಇನ್ನು ಮುಂದೆ ಸಾಮಾಜಿಕ ಪರಿವರ್ತನೆಯ ಚಳವಳಿಯನ್ನು ಡಾ. ಅಂಬೇಡ್ಕರ್ ಅವರು ಮುನ್ನಡೆಸುತ್ತಾರೆ ಎಂದು ಘೋಷಿಸಿದರು. ತಮ್ಮ ಹೆಗಲ ಮೇಲಿದ್ದ ಸಾಮಾಜಿಕ ಚಳವಳಿಯ ಜವಾಬ್ದಾರಿಯನ್ನು ಡಾ. ಅಂಬೇಡ್ಕರ್ ಅವರಿಗೆ ವಹಿಸಿಕೊಡುವುದರ ಮೂಲಕ ಬದುಕನ್ನು ಸಾರ್ಥಕಪಡಿಸಿಕೊಂಡರು.

ಶಾಹು ಮಹಾರಾಜರು ಆಧುನಿಕ ಯುಗದ ಸಂದರ್ಭದಲ್ಲಿ ಮಹಿಳೆಯರ, ದಲಿತರ ಅಭಿವೃದ್ಧಿಗಾಗಿ ಸತತವಾಗಿ ಪ್ರಯತ್ನಿಸಿದರು. ಅಂಬೇಡ್ಕರ್ ಅವರ ಹೋರಾಟಕ್ಕೆ ಬೆಂಬಲವಾಗಿ ನಿಂತರೆ, ಬಸವಣ್ಣ, ಮಾದಾರ ಚೆನ್ನಯ್ಯ, ಢೂಳಯ್ಯ, ಸಮಗಾರ ಹರಳಯ್ಯರಂತಹವರನ್ನು

ಬಾಚಿ ತಬ್ಬಿಕೊಂಡರು. ಅವರಲ್ಲಿ ಆತ್ಮವಿಶ್ವಾಸ ತುಂಬಿದರು. ಅವರ ವೃತ್ತಿಯ ಕುರಿತು ಗೌರವದಿಂದ ಮಾತಾಡಿದರು. ಹರಳಯ್ಯ ದಂಪತಿಗಳ ಪಾದರಕ್ಷೆಗಳನ್ನು ತಲೆಯ ಮೇಲಿಟ್ಟುಕೊಂಡು ಗೌರವಿಸಿದರು. ಮಾದಾರ ಚೆನ್ನಯ್ಯನ ಮನೆಯ ಅಂಬಲಿಯನ್ನು ಕುಡಿದರು. ಈ ಕಾರ್ಯವನ್ನು ಕಂಡ ವೈದಿಕರು ಸಹಿಸದಾದರು. ಬಿಜ್ಜಳನಲ್ಲಿ ದೂರನ್ನು ಕೊಟ್ಟರೂ ಬಸವಣ್ಣ ಎದೆ ಗುಂದದೆ ಅಸ್ಪೃಶ್ಯರ ಸೇವೆ ಮಾಡಿದರು. ಈ ಅಂಶಗಳನ್ನು ಗಮನಿಸಿದಾಗ ಬಸವಣ್ಣ ಹಾಗೂ ಶಾಹು ಮಹಾರಾಜರ ತುಡಿತ ಒಂದೆಯಾಗಿರುವುದು ಹೆಮ್ಮೆ ಪಡುವ ವಿಷಯವಾಗಿದೆ.

ಬಸವಾದಿ ಶರಣರ ಸಾಮಾಜಿಕ ಕಾರ್ಯವನ್ನು ವಿಪ್ರಮೂಲದವರು ಎಂದೂ ಪ್ರೋತ್ಸಾಹಿಸಲಿಲ್ಲ. ಅದೇ ರೀತಿ ಶಾಹು ಮಹಾರಾಜರ ಸಮಾಜಮುಖಿ ಕಾರ್ಯಗಳನ್ನು ತಿಲಕರಾದಿಯಾಗಿ ಎಲ್ಲರೂ ವಿರೋಧಿಸಿರುವುದು ಜನಜನಿತವಾಗಿದೆ. ಇಂಥವರು ಎಲ್ಲ ಕಾಲಕ್ಕೂ ಎಲ್ಲ ಸಂದರ್ಭದಲ್ಲೂ ಕಾಣಸಿಗುತ್ತಾರೆ.

ಬಸವಣ್ಣನ ಕಾಲದ ವಿಪ್ರರಂಥವರು, ಶಾಹು ಮಹಾರಾಜರ ಕಾಲದ ತಿಲಕರಂಥ ಅನೇಕ ಫ್ಯಾಸಿಸ್ಟರು, ಸಂಘ ಪರಿವಾರಿಗಳು, ದಲಿತರ ಪ್ರಗತಿಯನ್ನು ವಿರೋಧಿಸುವವರಾಗಿದ್ದಾರೆ. ದಲಿತರನ್ನು, ಶೋಷಿತರನ್ನು ಶೋಷಣೆ ಮಾಡುವಲ್ಲಿ, ಅವಮಾನಿಸುವಲ್ಲಿ ಕೃತಾರ್ಥತೆಯನ್ನು ಹೊಂದುತ್ತಿದ್ದಾರೆ. ರಾಮ ಮಂದಿರದ ಹೆಸರಿನಲ್ಲಿ ದೇಶದ ಶಾಂತಿಯನ್ನು ಕದಡಿ ಗೋದ್ರಾ ದಹನದಲ್ಲಿ ಅನ್ನವನ್ನು ಬೇಯಿಸಿ ತಿನ್ನುತ್ತಿರುವಂಥ ಮತಾಂಧರಿಗೆ ಬಸವಣ್ಣ, ಶಾಹು ಮಹಾರಾಜ, ಫುಲೆಯಂತಹವರ ವಿಚಾರಗಳನ್ನು ಮನವರಿಕೆ ಮಾಡಿಕೊಡಬೇಕಾಗಿದೆ. 'ಬಹುಜನ ಹಿತಾಯ ಬಹುಜನ ಸುಖಾಯ' ಎನ್ನುವುದು ಸಂಪೂರ್ಣ ಅರ್ಥ ಪಡೆಯುವವರೆಗೂ ಈ ರಾಷ್ಟ್ರದಲ್ಲಿ ಶಾಂತಿ ನೆಲೆಯೂರಿ ನಿಲ್ಲುವುದಿಲ್ಲ. ಶಾಂತಿ ನೆಲೆಸಬೇಕಾದಲ್ಲಿ ಜಾತೀಯತೆ ನಿರ್ಮೂಲನೆ ಮಾಡುವಲ್ಲಿ ಶೋಷಿತ ಹಾಗೂ ಶೂದ್ರವರ್ಗದವರಿಂದ ನಿರಂತರವಾದ ಸಮರ ನಡೆಯಬೇಕು. ಮತ್ತು ಶೂದ್ರ ಹಾಗೂ ಕೆಳವರ್ಗದವರು ಸಂಘಟಿತರಾಗಿ ಶಿಕ್ಷಿತರಾಗಬೇಕು. ಬುದ್ಧ, ಬಸವ, ಶಾಹು ಮಹಾರಾಜ ಹಾಗೂ ಅಂಬೇಡ್ಕರರ ಜೀವಿತದ ಇತಿವೃತ್ತವನ್ನು ಓದಿ ಮನನ ಮಾಡಿಕೊಳ್ಳಬೇಕು. ಅವರು ನಡೆದ ಮಾರ್ಗದಲ್ಲಿ ನಡೆಯಲು ಯತ್ನಿಸಬೇಕು, ಅವರು ಹೇಳಿದಂತೆ ಶಿಕ್ಷಣವೊಂದೇ ಅಭ್ಯುದಯದ ದಾರಿ, ಅಜ್ಞಾನದ ಪರದೆಯನ್ನು ಹರಿಯುವ ಸಾಧನವೆಂದು ಅರಿಯಬೇಕು. ಅಂದಾಗ ಸಮಾಜದಲ್ಲಿ ಸಮಾನತೆ ಬರುವುದು, ಸಮೃದ್ಧಿ ನೆಲೆಸುವುದು.

❐

---

೧. ಸೀ.ಚ. ಯತೀಶ್ವರ (ಲೇ) ಬಸವಣ್ಣ ಮತ್ತು ಅಂಬೇಡ್ಕರ್ ತೌಲನಿಕ ವಿವೇಚನೆ. 'ಬಸವ ಪಥ' ಪುಟ ೧೮, ೨೦೦೫.

೨. ಸೀ.ಚ. ಯತೀಶ್ವರ (ಲೇ) 'ಬಸವಣ್ಣ ಮತ್ತು ಅಂಬೇಡ್ಕರ್ ತೌಲನಿಕ ವಿವೇಚನೆ', ಬಸವ ಪಥ ಪುಟ ೧೮, ೨೦೦೫

ಬಸವಣ್ಣ ಮತ್ತು ಅಂಬೇಡ್ಕರ್

●

ಸೀ.ಚ. ಯತೀಶ್ವರ

ಜಗತ್ತಿನ ಸಾಮಾಜಿಕ ಚರಿತ್ರೆಯಲ್ಲಿ ಹಲವು ಅದಮ್ಯ ಚೇತನಗಳು ಆಗಿಹೋಗಿವೆ. ಸಾಮಾಜಿಕ ವ್ಯವಸ್ಥೆ ಜಡತ್ವಹೊಂದಿ ಸಂಪ್ರದಾಯದ ಸಂದಿಗ್ಧದಲ್ಲಿ ನರಳುವಂತಹ ಸನ್ನಿವೇಶ ನಿರ್ಮಾಣವಾದಾಗ ಅನೇಕ ಸುಧಾರಕರು ಉದಿಸಿ, ಸಮಾಜ ಸುಧಾರಣೆ ಮಾಡುತ್ತ ಬಂದಿದ್ದಾರೆ. ಭಾರತೀಯ ಸಂದರ್ಭದಲ್ಲಿ ಸುಮಾರು ಎರಡು ಸಾವಿರದ ಐದುನೂರು ವರ್ಷಗಳ ಹಿಂದೆಯೇ ಸಮಾಜ ಸುಧಾರಣೆಗೆ ಭದ್ರ ತಳಹದಿಯನ್ನು ಹಾಕಿಕೊಟ್ಟು, ಜನಸಮುದಾಯವನ್ನು ವೈಚಾರಿಕ ಬೆಳಕಿನೆಡೆಗೆ ಕೊಂಡೊಯ್ಯುವ ಪ್ರಯತ್ನದಲ್ಲಿ ಪ್ರಥಮ ಹೆಜ್ಜೆ ಇಟ್ಟವರೆಂದರೆ ಮಹಾನ್ ಮಾನವತಾವಾದಿ ಭಗವಾನ್ ಬುದ್ಧ, ಬುದ್ಧ ಹಚ್ಚಿಟ್ಟ ವೈಚಾರಿಕತೆಯ ಹಣತೆ ಬಸವನಿಂದ ಹನ್ನೆರಡನೇ ಶತಮಾನದಲ್ಲಿ ಜಾಜ್ವಲ್ಯಮಾನವಾಗಿ ಕಂಗೊಳಿಸಿ ಇಪ್ಪತ್ತನೇ ಶತಮಾನದ ಸಂದರ್ಭದಲ್ಲಿ ಮಹಾತ್ಮಗಾಂಧಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್‌ರವರ ಚಿಂತನೆಗಳವರೆಗೆ ವ್ಯಾಪಕವಾಗಿ ವಿಸ್ತರಿಸಿರುವುದನ್ನು ಕಾಣುತ್ತೇವೆ.

ಬಸವ ಮತ್ತು ಅಂಬೇಡ್ಕರ್‌ರವರನ್ನು ಯಾವ ಮಗ್ಗುಲಿನಿಂದ ನೋಡಿದರೂ ಅನೇಕ ವೈರುಧ್ಯಗಳ ನಡುವೆಯೂ ಕೆಲವು ಸಾದೃಶ್ಯ ಅಂಶಗಳನ್ನು ಗುರುತಿಸಬಹುದಾಗಿದೆ. ಇಬ್ಬರೂ ವ್ಯಕ್ತಿಗಳು ಹುಟ್ಟಿ ಬೆಳೆದ ಪರಿಸರ, ಕಾಲ, ಭಾಷೆ ಭಿನ್ನವೆನಿಸಿದರೂ ಇಬ್ಬರು ಮಹಾನ್ ಚೇತನಗಳ ಚಿಂತನೆಗಳು ಸಂಧಿಸುತ್ತಿರುವುದು ಏಕ ಗುರಿಯ ಕಡೆಗೆ, ಅದರಲ್ಲಿಯೂ ಶೋಷಿತ ವರ್ಗಗಳ ವಿಮೋಚನೆಯ ಉದ್ದೇಶವನ್ನು ಕಂಡಾಗಲಂತೂ ಆಶ್ಚರ್ಯವುಂಟಾಗುತ್ತದೆ.

ಕರ್ನಾಟಕದದ ಸಾಂಸ್ಕೃತಿಕ ಸಂದರ್ಭದಲ್ಲಿ ಹನ್ನೆರಡನೇ ಶತಮಾನಕ್ಕೆ ಇರುವ ಐತಿಹಾಸಿಕ ಹಿನ್ನೆಲೆಯ ಜೊತೆಗೆ ಸಾಹಿತ್ಯಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕವಾದ ಕ್ರಾಂತಿ ಜಗತ್ತಿನ ಯಾವುದೇ ಸಂದರ್ಭದಲ್ಲಿ ವಿರಳವೆಂದೇ ಹೇಳಬಹುದು.

ಬಸವಣ್ಣನವರ ಹಿನ್ನೆಲೆಯನ್ನು ಗಮನಿಸಿದಾಗ ಸಮಾಜದ ಶ್ರೇಣೀಕೃತ ವ್ಯವಸ್ಥೆಯ ಉನ್ನತ ಸ್ಥರದಲ್ಲಿ ಜನಿಸಿದರೂ ಅವರ ಚಿಂತನೆಯೆಲ್ಲವೂ ಶೋಷಿತರ ಉದ್ಧಾರದ ದಿಕ್ಕಿನತ್ತ ಎಂಬುದು ಗಮನೀಯವಾದ ಅಂಶ. ಬ್ರಾಹ್ಮಣ ದಂಪತಿಗಳ ಮಗನಾದರೂ ಕ್ರಾಂತಿಕಾರಿಯಾಗಿ ಎಲ್ಲವನ್ನು ಪ್ರಶ್ನಿಸುತ್ತ ಬೆಳೆದದ್ದು ಅದ್ಭುತವಾದ ವಿಚಾರವೇ ಸರಿ.

ಉಪನಯನ ಸಂಸ್ಕಾರದ ಸಂಕೋಲೆಗೊಳಗಾಗದೆ ತನ್ನದೇ ಆದ ಸ್ವಾತಂತ್ರ ಹಾದಿಯಲ್ಲಿ ಮುನ್ನಡೆದು ಅಂಧಕಾರದಲ್ಲಿ ತೊಳಲುತ್ತಿದ್ದ ಸಮಾಜವನ್ನು ಪರಿವರ್ತನೆಯ ದಾರಿಯಲ್ಲಿ ಮುನ್ನಡೆಸಿದ್ದು ಮಹತ್ವದ ಮೈಲಿಗಲ್ಲೆಂದೇ ಪರಿಗಣಿಸಬೇಕಾಗುತ್ತದೆ. ಹುಟ್ಟಿನಿಂದ ಬ್ರಾಹ್ಮಣನಾದರೂ **"ಆನು ಹಾರುವನೆಂದರೆ ಕೂಡಲ ಸಂಗಮದೇವ ನಗುವನಯ್ಯಾ"** ಎಂದು ತನ್ನ ಆತ್ಮವಿಮರ್ಶೆ ಮಾಡಿಕೊಳ್ಳುವುದರ ಜೊತೆಗೆ **"ಉನ್ನತ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ"** ಎಂದು ತನ್ನ ಇಷ್ಟದೈವದಲ್ಲಿ ಪ್ರಾರ್ಥಿಸುತ್ತಾರೆ. ವ್ಯಕ್ತಿಯ ಯೋಗ್ಯತೆಯನ್ನು ಅವನಲ್ಲಿರುವ ಪ್ರತಿಭೆ ಮತ್ತು ಮಾನವೀಯ ಅಂತಃಕರಣದಿಂದ ಗುರ್ತಿಸಿದ ಬಸವಣ್ಣ ಉನ್ನತ ಕುಲದಲ್ಲಿ ಹುಟ್ಟಿದವರೆಲ್ಲ ಉನ್ನತರು ಎಂಬ ಅವೈಚಾರಿಕ ಚಿಂತನೆಯನ್ನು ಸ್ಪಷ್ಟವಾಗಿ ನಿರಾಕರಿಸುತ್ತಾರೆ. ನಾವು ಪೂಜಿಸುವ ಋಷಿಗಳ ಕುಲವನ್ನು ಪ್ರಶ್ನಿಸುತ್ತ ಅವರಿಂದ ಮೂಡಿಬಂದ ಚಿಂತನೆಗಳ ಶ್ರೇಷ್ಠತೆಯನ್ನು ಒಪ್ಪಿ ಸ್ವೀಕರಿಸುತ್ತಾ ಹೋಗಿರುವುದನ್ನು ಈ ಕೆಳಗಿನ ವಚನದಲ್ಲಿ ಸುಂದರವಾಗಿ ಅಭಿವ್ಯಕ್ತಿಸಿದ್ದಾರೆ;

ವ್ಯಾಸ ಬೋಯಿತಿಯ ಮಗ
ಮಾರ್ಕಂಡೇಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು
ಕುಲವನರಸದಿರಿಂ ಭೋ
ಕುಲದಿಂದ ಮುನ್ನೇನಾದರಿಂ ಭೋ
ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದೂರ್ವಾಸ ಮಚ್ಚಿಗ
ಕಶ್ಯಪ ಕಮ್ಮಾರ, ಕೌಂಡಿಲ್ಯನೆಂಬ ಋಷಿ
ಮೂರು ಲೋಕವರಿಯೆ ನಾಯಿಂದ ಕಾಣಿರೊ.
ನಮ್ಮ ಕೂಡಲಸಂಗನ ವಚನವಿಂತೆಂದುದು
ಶ್ವಪಚೋಪಿಯಾದರೇನು ಶಿವಭಕ್ತನೇ ಕುಲಜ.

ಬಸವಣ್ಣನವರು ಕಲ್ಯಾಣದ ಬಿಜ್ಜಳನ ಆಸ್ಥಾನದಲ್ಲಿ ಮಹಾಮಂತ್ರಿಯಾಗಿಯೂ ಅಧಿಕಾರವನ್ನು ತಮ್ಮ ವೈಭವ ವಿಜೃಂಭಣೆಗಾಗಿ ಬಳಸದೆ ಸರ್ವರ ಉದ್ಧಾರಕ್ಕಾಗಿ ಬಳಸಿದರೆಂಬುದು ಮುಖ್ಯವಾದ ಸಂಗತಿ. ಜಾತಿ, ಮತ, ಕುಲಗಳು ಭಗವಂತನಿಂದ ಸೃಷ್ಟಿಯಾದವುಗಳಲ್ಲ. ಪ್ರಬಲರು ದುರ್ಬಲರನ್ನು ಸುಲಿಯಲು, ಶೋಷಿಸಲು ಮಾಡಿಕೊಂಡ ವ್ಯವಸ್ಥೆ. ಜೀವನ ಯಂತ್ರ ಚಲಿಸಲು ಎಲ್ಲ ಜಾತಿಗಳೂ ವೃತ್ತಿಗಳೂ ಬೇಕು. ಕೆಲವು ವೃತ್ತಿಗಳನ್ನು ಅವಲಂಬಿಸಿದ ಒಂದು ವರ್ಗದವರನ್ನು ಅಂತ್ಯಜರೆಂದು ಕರೆದು ಅವರನ್ನು ಅಮಾನವೀಯವಾಗಿ ಕಾಣುವ ಉತ್ತಮ ವರ್ಗದವರ ಮನೋಧರ್ಮವನ್ನು ಬಸವಣ್ಣನವರು ಬಲವಾಗಿ ಖಂಡಿಸಿದ್ದಾರೆ. ಹುಟ್ಟು ಮತ್ತು ವೃತ್ತಿಗಳಿಂದ ಮನುಷ್ಯ ಕೀಳಾಗುವುದಿಲ್ಲ. ಮಾನವನ ಘನತೆಗೂ ಅವನ ವೃತ್ತಿಗೂ ಸಂಬಂಧ ಕಲ್ಪಿತ ಮಾನದಂಡವನ್ನು ನಿರಾಕರಿಸಿ ವ್ಯಕ್ತಿತ್ವದ ಗುಣಕ್ಕೆ ಮಾನ್ಯತೆ ನೀಡಿದರು.

ಕೊಲುವವನೆ ಮಾದಿಗ ಹೊಲಸು ತಿಂಬುವವನೆ ಹೊಲೆಯ
ಕುಲವೇನೊ ಅವಂದಿರ ಕುಲವೇನೊ
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ
ಕೂಡಲ ಸಂಗನ ಶರಣರೇ ಕುಲಜರು.

ಸಕಲ ಜೀವಾತ್ಮರಿಗೆ ಒಳ್ಳೆಯದನ್ನು ಯಾರು ಬಯಸುತ್ತಾರೊ ಅವರೇ ಉತ್ತಮ ಕುಲಜರು ಎಂಬುದನ್ನು ಅರ್ಥಪೂರ್ಣವಾಗಿ ಪ್ರತಿಪಾದಿಸಿದ್ದಾರೆ.

ಜಾತಿರಹಿತ ಸಮಾಜ ನಿರ್ಮಾಣದ ಕನಸು ಕಂಡ ಬಸವಣ್ಣನವರು ಹರಳಯ್ಯ ಮತ್ತು ಮಧುವರಸರ ಕುಟುಂಬಗಳ ನಡುವೆ ವೈವಾಹಿಕ ಸಂಬಂಧ ಏರ್ಪಡಿಸಿ ಆ ಮೂಲಕ ಮಾನವ ಸಮುದಾಯದಲ್ಲಿ ಮೇಲುಕೀಳುಗಳಿಲ್ಲ ಎಂದು ಸಾರಹೊರಟ್ಟಿದ್ದು ಮಹತ್ವದ ಅಂಶ. ವಿಷಾದವೆಂದರೆ ಇಪ್ಪತ್ತೊಂದನೇ ಶತಮಾನದಲ್ಲಿ ಜಾತಿ ವ್ಯವಸ್ಥೆಯ ಬೇರುಗಳು ಬಲವಾಗಿ ಗಟ್ಟಿಗೊಳ್ಳುತ್ತಿರುವುದನ್ನು ಕಂಡಾಗ ಆತಂಕವಾಗುತ್ತದೆ. ಬಸವಣ್ಣನವರು ದಯೆಯೊಂದಿಗೆ ಧರ್ಮವನ್ನು ಸಮನ್ವಯಗೊಳಿಸಿದವರು. ಧರ್ಮ ಎಂಬುದು ಶೋಷಣೆಯ ಸಾಧನ ಆಗದಂತೆ ಎಚ್ಚರವಹಿಸಿದರು.

ದಯವಿಲ್ಲದ ಧರ್ಮವಾವುದಯ್ಯಾ
ದಯೆಯೇ ಧರ್ಮದ ಮೂಲವಯ್ಯಾ
ದಯವಿರಬೇಕು, ಸಕಲ ಪ್ರಾಣಿಗಳೆಲ್ಲರಲ್ಲಿ
ಕೂಡಲ ಸಂಗಯ್ಯನಂತಲ್ಲದೊನಲ್ಲಯ್ಯಾ.

ಎಲ್ಲ ಧರ್ಮಗಳಿಗೂ ದಯೆ ತಳಹದಿಯಾಗಬೇಕು. ಮನುಷ್ಯನ ಹೃದಯ ದಯೆ, ಕರುಣೆ, ಸಹಾನುಭೂತಿಯ ಅಮೃತ ಕುಂಭವಾಗಬೇಕು. ಆಗ ಮಾತ್ರ ಧರ್ಮದ ಸ್ವರೂಪ ಅರ್ಥವಾಗಲು ಸಾಧ್ಯ.

ಬಸವಣ್ಣನವರಲ್ಲಿ ಕಾಣುವುದು ನಡೆ ಮತ್ತು ನುಡಿಗಳ ಸಮನ್ವಯ. ಇದೇ ಅವರ ಜೀವನ ಸಿದ್ಧಾಂತದ ಊರುಗೋಲೆಂದರೂ ತಪ್ಪಾಗುವುದಿಲ್ಲ.

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿರ್ದ ಲಿಂಗ ಘಟಸರ್ಪ ಕಾಣಿರೋ

ಎನ್ನುತ್ತಾರೆ. ಇವರ ಚಿಂತನೆ ಕೇವಲ ಊರ್ಧ್ವಗಾಮಿಯಾದ ಪರಚಿಂತನೆಯ ಒಣ ವೇದಾಂತವಲ್ಲ, ಇಹದ ಬದುಕಿನ ಬಗೆಗೆ ಅಪಾರವಾದ ಶ್ರದ್ಧೆಯನ್ನು ಇಟ್ಟುಕೊಂಡವರು.

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ ಕೂಡಲಸಂಗಮದೇವಾ.

ಬಸವಣ್ಣನವರು ವ್ಯಕ್ತಿ ಗೌರವಕ್ಕೆ ಮೊದಲ ಆದ್ಯತೆ ನೀಡಿದ್ದಾರೆ. ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಸಂಬೋಧಿಸುವುದರಲ್ಲಿಯೇ ಸ್ವರ್ಗೀಯ ಸಂಬಂಧವನ್ನು ಸ್ಥಾಪಿಸಬಹುದೆಂಬುದನ್ನು ಅರ್ಥಪೂರ್ಣವಾಗಿ ಪ್ರತಿಪಾದಿಸಿದ್ದಾರೆ.

ಅಯ್ಯಾ ಎಂದಡೆ ಸ್ವರ್ಗ ಎಲವೋ ಎಂದಡೆ ನರಕ
ದೇವಾ, ಭಕ್ತ ಜಯ ಜೀಯಾ ಎಂಬ ನುಡಿಯೊಳಗೆ
ಕೈಲಾಸವಿಪ್ಪುದು ಕೂಡಲಸಂಗಮದೇವಾ

ಎಂದಿದ್ದಾರೆ. ಬಸವಣ್ಣನವರು ಅಂದಿನ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಮೌಢ್ಯತೆ, ಅಂಧಶ್ರದ್ಧೆಗಳ ವಿಚಾರವಾಗಿ ತಮ್ಮ ಉರಿನಾಲಗೆಯನ್ನು ಹರಿಯಬಿಟ್ಟಿದ್ದಾರೆ. ಹಾಗೆಂದು ಇಂದಿನ ಆಧುನಿಕ ಯುಗದಲ್ಲಿಯೂ ಇವುಗಳ ಬಗೆಗಿನ ನಂಬಿಕೆಗಳು ಕಡಿಮೆಯಾಗಿವೆ ಎನ್ನಲಾಗುವುದಿಲ್ಲ.

ಕಲ್ಲ ನಾಗರ ಕಂಡರೆ ಹಾಲನೆರೆಯೆಂಬರು
ದಿಟದ ನಾಗರ ಕಂಡರೆ ಕೊಲ್ಲು ಕೊಲ್ಲೆಂಬರು
ಉಂಬ ಜಂಗಮ ಬಂದಡೆ ನಡೆ ನಡೆಯೆಂಬರು
ಉಣ್ಣದಾ ಲಿಂಗಕ್ಕೆ ಬೋನವ ಹಿಡಿಯೆಂಬರು

ಮೌಢ್ಯತೆ, ಅಂಧಶ್ರದ್ಧೆಗಳ ಪ್ರತೀಕವಾಗಿ ಪೂಜಿಸುತ್ತಿದ್ದ ವಿಗ್ರಹಾರಾಧನೆಯನ್ನು ಖಂಡಿಸುತ್ತಾರೆ.

ಇವನಾರವ – ಇವನಾರವ ಇವನಾರವ ಎಂದೆನಿಸದಿರಯ್ಯಾ
ಇವ ನಮ್ಮವ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ

ಪ್ರತಿಯೊಬ್ಬ ಮನುಷ್ಯನಲ್ಲಿಯೂ ದೈವತ್ವದ ಪ್ರತೀಕವನ್ನು ಕಂಡವರು ಎಂಬುದಕ್ಕೆ ಮೇಲಿನ ವಚನದ ಸಾಲುಗಳೇ ಸಾಕ್ಷಿಯಾಗಿವೆ. ಬಸವಣ್ಣನವರು ತಮ್ಮೆಲ್ಲಾ ವಿಚಾರ ಕ್ರಾಂತಿಗೂ ಧರ್ಮದ–ಆಧ್ಯಾತ್ಮದ ಸ್ಪರ್ಶವನ್ನು ನೀಡಿದರು. ಶರಣ ಧರ್ಮವನ್ನು ಸ್ವೀಕರಿಸುವ ಯಾರೇ ಆಗಿರಲಿ ಇಷ್ಟಲಿಂಗ ದೀಕ್ಷೆಯನ್ನು ಒಪ್ಪಬೇಕೆಂಬುದು ತತ್ವವಾಗಿತ್ತು. ಇಷ್ಟಲಿಂಗ ದೀಕ್ಷೆಯ ಮೂಲಕ ದೇವಾಲಯ ಸಂಸ್ಕೃತಿಯ ನೀರವತೆಯನ್ನು ನಿರಾಕರಿಸಿ ಜೀವಾಲಯ ಸಂಸ್ಕೃತಿಯನ್ನು ಪ್ರತಿಷ್ಠಾಪಿಸಬಯಸಿದ್ದು ಸಾಮಾನ್ಯವಾದ ಸಂಗತಿಯಲ್ಲ. ಜಡಗೊಂಡ ದೇವಾಲಯದ ಪರಿಕಲ್ಪನೆಯನ್ನು ಸಂಪೂರ್ಣವಾಗಿ ಮನುಷ್ಯನ ಶರೀರಕ್ಕೆ ಸ್ಥಳಾಂತರಿಸುವ ಮೂಲಕ ಪುರೋಹಿತಶಾಹಿಗಳ ಒಡೆತನದಲ್ಲಿದ್ದ ದೇವಾಲಯ ವ್ಯವಸ್ಥೆಯಿಂದ ಶೋಷಣೆಗೀಡಾಗುತ್ತಿದ್ದ ಸಾಮಾನ್ಯ ಜನತೆಯನ್ನು ಬಿಡುಗಡೆಗೊಳಿಸಿ ನೈಜ ಮಾನವಧರ್ಮದ ಪರಿಚಯ ಮಾಡಿಸಿದರು.

ಡಾ. ಬಿ.ಆರ್. ಅಂಬೇಡ್ಕರ್‌ರವರು ದಲಿತ ಜನಾಂಗದ ವಿಮೋಚಕರಾಗಿ, ಶೋಷಕ ಸಮುದಾಯಕ್ಕೆ ಸಿಂಹ ಸ್ವಪ್ನರಾಗಿ, ಸಂವಿಧಾನ ಶಿಲ್ಪಿಯಾಗಿ, ರಾಜಕೀಯ ಮತ್ತು ಸಮಾಜ ವಿಜ್ಞಾನಿಯಾಗಿ ಇಪ್ಪತ್ತನೇ ಶತಮಾನದ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಭದ್ರವಾದ ಅಡಿಪಾಯವನ್ನು ಹಾಕಿ ಸುವ್ಯವಸ್ಥೆಗೊಳಿಸಿದ ಕೀರ್ತಿ ಇವರಿಗೆ ಸಲ್ಲಬೇಕು. ಸ್ವಾಭಿಮಾನಶೂನ್ಯರಾಗಿ ತಮ್ಮ ಅಸ್ತಿತ್ವವನ್ನೇ ಕಂಡರಿಯದಿದ್ದ ಜನಸಮುದಾಯಕ್ಕೆ ಸ್ವಾಭಿಮಾನ ಜಾಗೃತಿಗೊಳಿಸಿ ಆತ್ಮವಿಶ್ವಾಸದ ಭರವಸೆಯನ್ನು ಬಿತ್ತಿ ಅವರೆಲ್ಲರಲ್ಲಿ ಆತ್ಮಜಾಗೃತಿ ಉಂಟು ಮಾಡಿದ ಅಪ್ರತಿಮ ಧೀಮಂತ ಚೇತನ. ಒಂದು ರೀತಿಯಲ್ಲಿ ಹುಟ್ಟಿನಿಂದಲು ಹೋರಾಟದ ಬದುಕಿನ ಒಂದೊಂದೇ ಮೆಟ್ಟಿಲನ್ನೇರುತ್ತ ಅನಂತರ ಶಾಂತ ಸಾಗರದಂತಹ ವ್ಯಕ್ತಿತ್ವವನ್ನು ಗಳಿಸಿಕೊಂಡರೂ ಸಂಪೂರ್ಣವಾದ ಆತ್ಮತೃಪ್ತಿಯಿಂದ ಅಂಬೇಡ್ಕರ್‌ರವರ ಆತ್ಮಶಕ್ತಿ ಎಂದೂ ವಿರಮಿಸಲೇ ಇಲ್ಲ. ನಿಜವಾದ ಹೋರಾಟಗಾರ ತನ್ನ ಸ್ವಾರ್ಥಕ್ಕಾಗಿ ಹೋರಾಟ ಎಂಬ ಅಸ್ತ್ರವನ್ನು ಎಂದೂ ಬಳಸಿಕೊಳ್ಳುವುದಿಲ್ಲ. ಹಾಗೆಯೇ ಅಂಬೇಡ್ಕರ್‌ರವರು ಇಡೀ ಸಮಾಜದಲ್ಲಿನ ದಮನಿತ ಸಮುದಾಯದ ಅಸ್ತಿತ್ವಕ್ಕಾಗಿ ಹೋರಾಟವನ್ನು ಆಯ್ಕೆ ಮಾಡಿಕೊಂಡದ್ದು ಚಾರಿತ್ರಿಕ ಅನಿವಾರ್ಯ ಎಂದರೆ ತಪ್ಪಾಗಲಾರದು. ಹಿಂದೂ ಸಮಾಜದಲ್ಲಿ ಅಸ್ಪೃಶ್ಯರು ಎನಿಸಿಕೊಂಡ ಜನವರ್ಗದಲ್ಲಿ ಹುಟ್ಟಿಬಂದ ಅವರು ಶತಮಾನಗಳಿಂದ ಬೆಳೆದು ಬಂದಿದ್ದ ಅನೇಕ ನಿರ್ಬಂಧಗಳನ್ನು, ಅವಮಾನಗಳನ್ನು ಸಹಿಸಿಕೊಂಡು, ಯಾವ ಮೂಲಭೂತ ಸೌಲಭ್ಯಗಳಿಲ್ಲದಿದ್ದರೂ ಅಖಂಡವಾದ ಸ್ವಪರಿಶ್ರಮದಿಂದ ಈ ಶತಮಾನದ ಒಬ್ಬ ಶ್ರೇಷ್ಠ ಮೇಧಾವಿ ಎಂದೂ ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳಲ್ಲಿಯ ಒಬ್ಬ ಅಸಾಮಾನ್ಯ ವಿಚಾರವಾದಿಯೆಂದು ಲೋಕವಿಖ್ಯಾತರಾದದ್ದು ಇಂದಿನ ಯುವ ಸಮುದಾಯಕ್ಕೆ

ಮೈ ಮತ್ತು ಮನಸ್ಸುಗಳು ರೋಮಂಚನಗೊಳ್ಳಲು ಸಹಾಯಕ ಎಂದು ಭಾವಿಸುತ್ತೇನೆ. ಭಾರತದಲ್ಲಿನ ದಲಿತ ಜನಸಮುದಾಯದ ಏಳಿಗೆಯೇ ತಮ್ಮ ಪರಮಧ್ಯೇಯ, ವಂಚಿತರಾಗಿ ಬದುಕುತ್ತಿದ್ದ ಜನವರ್ಗಕ್ಕೆ ಸಲ್ಲಬೇಕಾದ ಸಮಾನತೆಯ ಅಧಿಕಾರ ಅವಕಾಶಗಳು ನಿರಂತರವಾಗಿ ದೊರಕುವಂತೆ ಮಾಡಿ ಅವುಗಳನ್ನು ರಾಷ್ಟ್ರದ ಸಂವಿಧಾನದಲ್ಲಿಯೇ ಸೇರ್ಪಡೆಗೊಳಿಸಿ ಧನ್ಯರಾದರು.

ಅಸ್ಪೃಶ್ಯತೆ ಎಂಬುದು ಭಾರತೀಯ ಸಮಾಜಕ್ಕೆ ಅಂಟಿದ ಬಹುದೊಡ್ಡ ಕಳಂಕ. ಇಡೀ ನಾಡಿನ ಜನಸಂಖ್ಯೆಯ ೧/೫ ಭಾಗದಷ್ಟು ಜನರು ಶತಮಾನಗಳಿಂದ ಸಮಾಜದ ಮೇಲುಸ್ತರದವರು ವಿಧಿಸಿದ ನಿರ್ಬಂಧಗಳಿಂದ ಅವಮಾನವನ್ನು ಸಹಿಸಿಕೊಂಡು ಬಾಳಬೇಕಾಗಿ ಬಂದದ್ದು ದುರದೃಷ್ಟಕರವಾದರೂ ಅದೊಂದು ಚಾರಿತ್ರಕ ಸಂಗತಿ. ಅಂತ್ಯಜರು, ಅವರ್ಣೀಯರು, ಅತಿಶೂದ್ರರು, ಪಂಚಮರೆಂದು ಭಾರತದ ಬೇರೆ ಬೇರೆ ಭಾಗಗಳಲ್ಲಿ ಕರೆಯಲ್ಪಡುತ್ತಿದ್ದ ಇವರನ್ನು ಊರಿನ ಹೊರ ಭಾಗದಲ್ಲಿ ಪ್ರತ್ಯೇಕವಾಗಿ ಇಡಲಾಗುತ್ತಿತ್ತು. ಹಿಂದೂ ಸಮಾಜದ ಒಂದು ಭಾಗವಾಗಿದ್ದರೂ, ಹಬ್ಬ-ಹರಿದಿನಗಳನ್ನು ಆಚರಿಸುತ್ತಿದ್ದರೂ ದೇವಾಲಯ ಪ್ರವೇಶವನ್ನು ನಿರಾಕರಿಸಲಾಗಿತ್ತು.

ಈ ಸಮಸ್ಯೆಯ ಕುರಿತು ಅನೇಕ ಸಮಾಜ ಸುಧಾರಕರು ತಮ್ಮ ವಿರೋಧ ವ್ಯಕ್ತ ಮಾಡುತ್ತಲೇ ಬಂದಿದ್ದಾರೆ; ಬುದ್ಧ, ರಾಮಾನುಜಾಚಾರ್ಯ, ಬಸವಣ್ಣ ಮುಂತಾದವರು. ಆ ನಂತರದಲ್ಲಿ ಭಕ್ತಿಪಂಥವನ್ನು ಪುರಸ್ಕರಿಸಿದ ಚಕ್ರಧರ, ರಮಾನಂದ, ಕಬೀರ, ಚೈತನ್ಯ, ಏಕನಾಥ, ತುಕಾರಾಂ, ರೋಹಿದಾಸ, ಚೋಖಾಮೇಳರಂಥವರು ಅಸ್ಪೃಶ್ಯತೆಯ ವಿರುದ್ಧ ತಮ್ಮ ದನಿಯನ್ನೆತ್ತಿದರು.

ಹತ್ತೊಂಬತ್ತನೇ ಶತಮಾನದಲ್ಲಿ ಸಮಾಜ ಸುಧಾರಕ ರಾಜಾರಾಂ ಮೋಹನರಾಯ್, ಮಹಾರಾಷ್ಟ್ರದಲ್ಲಿ ನೇರವಾಗಿ ಅಸ್ಪೃಶ್ಯರ ಏಳಿಗೆಗಾಗಿ ಶಾಲೆಗಳನ್ನು ತೆರೆದು ಶೈಕ್ಷಣಿಕ ಸೇವೆಯಲ್ಲಿ ತೊಡಗಿಸಿಕೊಂಡ ಮಹಾತ್ಮ ಜ್ಯೋತಿಬಾಫುಲೆ, ಬರೋಡದ ಮಹಾರಾಜರು, ಕೊಲ್ಹಾಪುರದ ಸಾಹು ಮಹರಾಜ್ ಮುಂತಾದವರು ಪ್ರಮುಖವಾಗಿ ಕಂಡುಬರುತ್ತಾರೆ. ಡಾ. ಬಿ.ಆರ್.ಅಂಬೇಡ್ಕರ್‌ರವರ ಬಾಲ್ಯವನ್ನು ಗಮನಿಸಿದಾಗ ಒಂದು ಅಂಶ ಸ್ಪಷ್ಟವಾಗುತ್ತದೆ. ಬಸವಣ್ಣನವರು ಜನಿಸಿದ್ದು ಸಮಾಜದ ಮೇಲ್ವರ್ಗದಲ್ಲಾದರೆ ಅಂಬೇಡ್ಕರ್‌ರವರು ಜನಿಸಿದ ಸಮಾಜದ ಕೆಳಸ್ತರದ ವರ್ಗದಲ್ಲಿ. ತಿಲಕ್, ಕರ್ವೆ, ಪರಾಂಜಪೆಯವರಂಥ ಧೀಮಂತರಿಗೆ, ವೀರರಿಗೆ ಜನ್ಮ ಕೊಟ್ಟ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಅಂಬಾವಾಡೆ ಎಂಬ ಹಳ್ಳಿ ಅವರ ಮನೆತನದ ತವರೂರು. ಊರದೇವಿಯ ಪಲ್ಲಕ್ಕಿಯನ್ನು ಇರಿಸಿಕೊಳ್ಳುವ ಅಧಿಕಾರ ಅಂಬೇಡ್ಕರ್ ಮನೆತನದವರದಾದರೂ ಅವರದು ಮಹಾರ್ ಜಾತಿಗೆ ಸೇರಿದ ಕಾರಣ ಸಾಮಾಜಿಕ ಸ್ಥಾನಮಾನವೇನೂ ಇರಲಿಲ್ಲ. ದೇಹಾದಾರ್ಢ್ಯಕ್ಕೆ, ಶೌರ್ಯಕ್ಕೆ ಹೆಸರಾಗಿದ್ದ ಈ ಜನವರ್ಗ ಈಸ್ಟ್ ಇಂಡಿಯಾ ಕಂಪನಿಯ ಸೈನ್ಯದಲ್ಲಿ ಗಣನೀಯವಾದ ಸೇವೆ ಸಲ್ಲಿಸಿತ್ತು. ಅಂಬೇಡ್ಕರರ ತಂದೆಯ ತಂದೆ ಅಂದರೆ ಅಜ್ಜ ಮಾಲೋಜಿ ಸಕ್ಪಾಲ ಸೈನ್ಯದಲ್ಲಿ ಸೇವೆ ಸಲ್ಲಿಸಿದವರಾಗಿದ್ದರು. ಹಾಗೆಯೇ ರಾಮಜಿ ಸಕ್ಪಾಲರೂ ಸೈನ್ಯದಲ್ಲಿನ ಕಟ್ಟುನಿಟ್ಟು ಮನೆಯಲ್ಲಿಯೂ ಮುಂದುವರೆಸಿದ್ದರು. ಇಂಥ ಕುಟುಂಬದಲ್ಲಿ ಹದಿನಾಲ್ಕನೆ ಮಗನಾಗಿ ಜನಿಸಿದವರೇ ಭೀಮ್‌ಜಿ ಅಂಬೇಡ್ಕರ್.

ಶಾಲಾದಿನಗಳಲ್ಲಿ ಅಂಬೇಡ್ಕರ್‌ರವರಿಗೆ ಅಸ್ಪೃಶ್ಯತೆಯ ಕಟು ಅನುಭವ ಆದ ಕಾರಣ ಮುಂದಿನ ದಿನಗಳಲ್ಲಿ ಅಖಂಡವಾದ ಅಸ್ಪೃಶ್ಯತೆ ವಿರೋಧಿ ಹೋರಾಟದಲ್ಲಿ ತೊಡಗಲು ಪ್ರಮುಖ ಪ್ರೇರಕ ಶಕ್ತಿಯಾಯಿತು. ಅವಮಾನದ ಬೇಗುದಿಯಲ್ಲಿ ಬೆಂದ ಅಂಬೇಡ್ಕರ್‌ರವರ ಮನಸ್ಸು ಸ್ವಾಭಿಮಾನದ ಜ್ವಾಲೆಯಾಗಿ ಪಸರಿಸಿ ಇಡೀ ದಲಿತ ಸಮುದಾಯದ ಸಂಕೋಲೆಗಳನ್ನು ಸುಟ್ಟುಹಾಕಿ ಮಾನಸಿಕವಾದ ಸ್ವಾತಂತ್ರ್ಯಕ್ಕೆ ದಾರಿಯಾದದ್ದು ನಿಜಕ್ಕೂ ಆಶಾದಾಯಕ ಬೆಳವಣಿಗೆ.

ಅಂಬೇಡ್ಕರ್‌ರವರ ಮನಸ್ಸಿನ ಮೇಲೆ ಆದ ಗಾಢವಾದ ಪರಿಣಾಮವೆಂದರೆ ಅವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪರ್ಷಿಯನ್ ಭಾಷೆಯಲ್ಲಿ ಅತಿಹೆಚ್ಚು ಅಂಕ ಪಡೆದ ಕಾರಣ ಕೇಳುಸ್ಕರ ಎಂಬುವವರು ಗೌತಮಬುದ್ಧನನ್ನು ಕುರಿತು ಒಂದು ಪುಸ್ತಕವನ್ನು ಕೊಡುಗೆಯಾಗಿ ನೀಡಿದರು. ಆ ಪುಸ್ತಕ ಅವರ ವ್ಯಕ್ತಿತ್ವದ ಮೇಲೆ ಮಹತ್ತರವಾದ ಪರಿಣಾಮವನ್ನು ಬೀರಿತು. ನಂತರ ಎಲ್ಫಿನ್‌ಸ್ಟನ್ ಕಾಲೇಜಿನಿಂದ ಬಿ.ಎ, ಪದವಿಯನ್ನು ಗಳಿಸಿದ ಅವರು ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಕುರಿತು ಸ್ವತಂತ್ರವಾಗಿ ಯೋಚಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದರು. ೧೯೧೩ರಲ್ಲಿ ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಬರೋಡ ಮಹಾರಾಜರ ಶಿಷ್ಯವೇತನದ ಮೇರೆಗೆ ಎಂ.ಎ. ಪದವಿಗೆ ಸೇರ್ಪಡೆಯಾಗಿ ಅನಂತರದಲ್ಲಿ ಅದೇ ವಿಶ್ವವಿದ್ಯಾಲಯದಿಂದ "ಬ್ರಿಟಿಷ್ ಇಂಡಿಯಾದಲ್ಲಿಯ ಹಣಕಾಸು ವ್ಯವಸ್ಥೆ" ಎಂಬ ವಿಷಯದಲ್ಲಿ ಪಿಹೆಚ್.ಡಿ. ಪದವಿ ಪಡೆದು ತಮ್ಮ ಜ್ಞಾನ ದಿಗಂತವನ್ನು ವಿಸ್ತರಿಸಿಕೊಂಡರು. ಜೊತೆಗೆ ಲಂಡನ್ ವಿಶ್ವವಿದ್ಯಾಲಯದಲ್ಲಿ ಬ್ಯಾರಿಸ್ಟರ್ ಪದವಿ ಜೊತೆಗೆ ಅರ್ಥಶಾಸ್ತ್ರದಲ್ಲಿ ಡಿ.ಎಸ್‌ಸಿ. ಪದವಿಯನ್ನು ತಮ್ಮದಾಗಿಸಿಕೊಂಡರು.

ಅಂಬೇಡ್ಕರ್‌ರವರು ಕೆಳಸ್ತರದಲ್ಲಿ ಹುಟ್ಟಿದ ಕಾರಣದಿಂದ ಅವರಿಗೆ ಆಗುತ್ತಿದ್ದ ಅವಮಾನ, ಕಷ್ಟಕಾರ್ಪಣ್ಯಗಳು ಸ್ವಾನುಭವವೇ ಆಗಿದ್ದವು. ಯಶಸ್ಸಿನಿಂದ, ಪರಿಶ್ರಮದಿಂದ ಉನ್ನತಿ ಸಾಧ್ಯ ಎಂಬ ಆತ್ಮವಿಶ್ವಾಸವನ್ನು ಪಡೆದಿದ್ದರು. ತನ್ನ ಆತ್ಮೋದ್ಧಾರ ತನ್ನಿಂದ ಸಾಧ್ಯ ಹೊರತು ಇನ್ನೊಬ್ಬರಿಂದ ಸಾಧ್ಯವಲ್ಲ ಎಂಬ ತತ್ವವನ್ನು ಪೂರ್ಣವಾಗಿ ನಂಬಿದ್ದರು. ನೊಂದವರು ತಿರುಗಿ ನಿಲ್ಲದ ಹೊರತು ನೋವಿಗೆ ಪರಿಹಾರವಿಲ್ಲ ಎಂಬುದನ್ನು ಚರಿತ್ರೆಯಿಂದ ಬಲ್ಲವರಾಗಿದ್ದರು. ಹೀಗಾಗಿ ತಮ್ಮ ಜನಗಳ ಆತ್ಮೋನ್ನತಿಗಾಗಿ ಸ್ವಾಭಿಮಾನ ಬುದ್ಧಿಯನ್ನು ಜಾಗೃತವಾಗಿಸುವುದೇ ಅವರ ಧ್ಯೇಯ ಮಂತ್ರವಾಯಿತು. ನಾಡಿನಲ್ಲಿಯ ಇತರರಿಗೆ ಸರಿಸಮನಾಗಿ ಅನ್ನ, ವಸತಿ, ಬಟ್ಟೆಗಳ ಸೌಕರ್ಯವನ್ನು ಪಡೆಯುವುದು ಜನ್ಮಸಿದ್ಧವಾದ ಹಕ್ಕು ಎಂದು ಗರ್ಜಿಸುತ್ತಿದ್ದರು. ಇವುಗಳನ್ನು ಬೇಡಿ ಪಡೆಯಬೇಕಾದ್ದಿಲ್ಲ, ಸ್ವಪ್ರಯತ್ನದಿಂದ ಪಡೆಯಬೇಕೆಂದು ಮನಮುಟ್ಟುವಂತೆ ಬೋಧಿಸುತ್ತಿದ್ದರು. ಅಂಬೇಡ್ಕರ್‌ರವರ ಈ ವಿಚಾರಧಾರೆಗಳು ಬಸವಣ್ಣನವರ ಕಾಯಕ ಪರಿಕಲ್ಪನೆಗೆ ಬಹಳ ಹತ್ತಿರವಾದ ಅಂಶಗಳು, ಮೇಲಿನ ಸಾಲುಗಳಲ್ಲಿ ವ್ಯಕ್ತವಾಗಿರುವುದನ್ನು ಗಮನಿಸಬಹುದಾಗಿದೆ.

೧೯೨೭ ಮಾರ್ಚ್ ತಿಂಗಳಲ್ಲಿ ನಡೆದ ಮಹಾಡ್‌ನ ಅಸ್ಪೃಶ್ಯ ಉದ್ಧಾರದ ಚಳವಳಿ ಅಂಬೇಡ್ಕರ್‌ರವರ ಬದುಕಿನಲ್ಲಿ ಮಹತ್ವದ ಮೈಲಿಗಲ್ಲಾಯಿತು. ಚೌದಾರ್ ಕೆರೆಯ ನೀರನ್ನು ದಲಿತ ವರ್ಗದವರು ಮುಟ್ಟಕೂಡದೆಂದು ಹೇರಿದ್ದ ಮೇಲ್ವರ್ಗದವರ ಕುತಂತ್ರವನ್ನು ವಿಫಲಗೊಳಿಸುವ ಸಮಾವೇಶ ಅದಾಗಿತ್ತು. ಆ ಸಂದರ್ಭದಲ್ಲಿ ಚೌದಾರ್ ಕೆರೆಗೆ ಮೆರವಣಿಗೆ

ಹೋಗಿ ಅಲ್ಲಿಯ ನೀರನ್ನು ಯಾವ ಆತಂಕವೂ ಇಲ್ಲದೇ ಬೊಗಸೆಯಲ್ಲಿ ಎತ್ತಿ ಕುಡಿದರು. ಹತ್ತು ಸಾವಿರ ಜನವರ್ಗ ತಮ್ಮ ಹಕ್ಕನ್ನು ಸ್ಥಾಪಿಸಿದ್ದರ ದ್ಯೋತಕವಾಗಿತ್ತು. ಆ ಸಂದರ್ಭದಲ್ಲಿ ದಲಿತ ಸಮುದಾಯವನ್ನು ಕುರಿತು ಸ್ಫೂರ್ತಿ ಚೈತನ್ಯದ ಮಾತುಗಳನ್ನಾಡಿರುವುದು ಇಂದಿಗೂ ದಲಿತ ಜನಾಂಗ ಪರಿಪಾಲಿಸಬೇಕಾದ ಅವಶ್ಯಕತೆ ಇದೆ.

೧. ತಮ್ಮ ಉತ್ಕರ್ಷವನ್ನು ತಾವೇ ಸಾಧಿಸಬೇಕು.
೨. ನಡೆನುಡಿಗಳನ್ನು ಜೀವನ ಕ್ರಮವನ್ನು ಶುಚಿಯಾಗಿಟ್ಟುಕೊಳ್ಳಬೇಕು.
೩. ಇನ್ನೊಬ್ಬರು ನೀಡುವ ಹಳಸಲು ಅನ್ನಕ್ಕೆ ಕೈಯೊಡ್ಡಕೂಡದು.
೪. ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸದ ಅಸ್ಪೃಶ್ಯ ತಂದೆ ತಾಯಿಗಳು ಪಶುಗಳಿಗೂ ಆಚೆ ಎಂದು ಸಾವಿರಾರು ಪ್ರತಿನಿಧಿಗಳನ್ನು ಹುರಿದುಂಬಿಸಿ ಮಾತನಾಡಿದ್ದಾರೆ.

ಈ ಮೇಲಿನ ಮಾತುಗಳು ಬಸವಣ್ಣನವರ ಸ್ವಾಭಿಮಾನ ಮತ್ತು ಆತ್ಮವಿಶ್ವಾಸದ ಮೂಲಕ ಸಮಾಜ ಪರಿವರ್ತನೆ ಸಾಧ್ಯ ಎಂಬ ಚಿಂತನೆಗೆ ಬಹಳಷ್ಟು ಹತ್ತಿರವಾಗಿವೆ ಎಂದರೆ ತಪ್ಪಾಗಲಾರದು.

ಇಬ್ಬರಲ್ಲಿರುವ ಸಮಾನ ಅಂಶಗಳು ಮತ್ತು ವೈರುಧ್ಯಗಳು

ಬಸವಣ್ಣನವರು ವೈದಿಕ ಧರ್ಮಕ್ಕೆ ವಿದಾಯ ಹೇಳುವುದರ ಮೂಲಕ ವೀರಶೈವ ಧರ್ಮವನ್ನು ಸ್ಥಾಪಿಸಿ ಅದನ್ನು ಜನಪರಗೊಳಿಸುವ ನಿಟ್ಟಿನಲ್ಲಿ ಹಲವಾರು ಕ್ರಮಗಳನ್ನು ಕೈಗೊಂಡಿದ್ದು ಚಾರಿತ್ರಿಕ ಸಂಗತಿ ಹೇಗೋ ಹಾಗೆಯೇ ಡಾ. ಬಿ.ಆರ್. ಅಂಬೇಡ್ಕರ್‌ರವರು ಬಾಲ್ಯದ ದಿನಗಳಿಂದ ಕಂಡ ಹಿಂದೂಧರ್ಮದಲ್ಲಿನ ತಾರತಮ್ಯ, ಅಸಮಾನತೆಯಿಂದ ಮಾನಸಿಕವಾಗಿ ನೊಂದು ಅಂತಿಮವಾಗಿ ಹಿಂದೂಧರ್ಮವನ್ನು ತಿರಸ್ಕರಿಸಿ ತನ್ನ ಅನುಯಾಯಿಗಳೆಲ್ಲರು ಆಯಾ ನಾಯಕರ ಧರ್ಮವನ್ನು ಒಪ್ಪಿಕೊಳ್ಳುವಂತಾದುದು ಇಬ್ಬರು ಮಹನೀಯರಲ್ಲಿ ಕಾಣುವ ಸಮಾನ ಅಂಶವೆನ್ನಬಹುದು.

ಹಾಗೆಯೇ ಮತ್ತೊಂದು ಮುಖ್ಯ ವಿಚಾರವೆಂದರೆ ದೇವಾಲಯದ ಪರಿಕಲ್ಪನೆಯು ಇಡೀ ಸಮಾಜವನ್ನು ಒಂದುಗೂಡಿಸುವುದಕ್ಕೆ ಬದಲಾಗಿ ಮೇಲು-ಕೀಳನ್ನು ಜೀವಂತವಾಗಿರಿಸುವ ಪುರೋಹಿತಶಾಹಿವರ್ಗದ ಶೋಷಣಾಕೇಂದ್ರಗಳಾಗಿ ಮಾರ್ಪಟ್ಟು ದೇವಾಲಯಗಳನ್ನು ನಿರಾಕರಿಸುವ ಮೂಲಕ ಬಸವಣ್ಣನವರು ಮನುಷ್ಯನ ಶರೀರಕ್ಕೆ ದೇವಾಲಯದ ಕಲ್ಪನೆಯನ್ನು ಸಂಪೂರ್ಣವಾಗಿ ಸ್ಥಳಾಂತರಿಸಿದ್ದು ಸಾಮಾನ್ಯ ಸಂಗತಿಯಾಗಿ ಕಾಣುವುದಿಲ್ಲ. ಅಂದಿನ ಸಂದರ್ಭದಲ್ಲಿ ದೇವಾಲಯದ ಪ್ರವೇಶಕ್ಕೆ ಅನರ್ಹರೆಂದು ದೂರೀಕರಿಸಿದ ಜನವರ್ಗವನ್ನೆಲ್ಲ ಇಷ್ಟಲಿಂಗದ ವ್ಯಾಪ್ತಿಗೆ ತರುವುದರ ಮುಖಾಂತರ ಧಾರ್ಮಿಕ ಸಮಾನತೆ ಮತ್ತು ಸ್ವಾತಂತ್ರ್ಯಕ್ಕೆ ಅರ್ಹರನ್ನಾಗಿಸಿ ಅವರೆಲ್ಲರಲ್ಲಿ ಆತ್ಮವಿಶ್ವಾಸ ಮತ್ತು ಸ್ವಾಭಿಮಾನದ ಕೆಚ್ಚನ್ನು ಮೂಡಿಸುವಲ್ಲಿ ಯಶಸ್ವಿಯಾದರು.

ಆದರೆ ಅಂಬೇಡ್ಕರ್‌ರವರು ದೇವಾಲಯಗಳನ್ನು ನೋಡುವ ದೃಷ್ಟಿಕೋನವೇ ಬೇರೆ. ತಾರತಮ್ಯದ ಕೇಂದ್ರಗಳಾಗಿದ್ದ ದೇವಾಲಯಗಳಲ್ಲಿ ಅಸ್ಪೃಶ್ಯರಿಗೆ ಪ್ರವೇ[illegible] ನಿರಾಕರಿಸುವುದರ ವಿರುದ್ಧ ಬಹುದೊಡ್ಡ ಆಂದೋಲನವನ್ನು ಹುಟ್ಟುಹಾಕಿದರು. ದೇ[illegible]ಾಲಯಗಳು ಹಿಂದೂ ಸಮಾಜದ ಆಸ್ತಿ ಎನ್ನುವುದಾದರೆ ದಲಿತರಿಗೂ [illegible]ರಲ್ಲಿ ಪಾಲಿದೆ ಎಂದು

ಪ್ರತಿಪಾದಿಸತೊಡಗಿದರು. ನಾಸಿಕ್‌ನಲ್ಲಿ ದೇವಾಲಯ ಪ್ರವೇಶಿಸುವುದನ್ನು ತಮ್ಮ ಹಕ್ಕೆಂದು ಘೋಷಿಸುವುದರ ಮೂಲಕ ಅಲ್ಲಿಯವರೆಗೂ ದೇವಾಲಯದಿಂದ ಹೊರದೂಡಲ್ಪಟ್ಟ ಜನಸಮುದಾಯವನ್ನು ದೇವಾಲಯದ ಒಳವ್ಯಾಪ್ತಿಯಲ್ಲಿ ತರುವಲ್ಲಿ ಯಶಸ್ವಿಯಾಗುತ್ತಾರೆ. ತಿರುವಾಂಕೂರು ಸಂಸ್ಥಾನದಲ್ಲಿ ನಿಷೇಧ ಇದ್ದ ದೇವಾಲಯಗಳಲ್ಲಿಯೂ ಪ್ರವೇಶಿಸುವ ಆಂದೋಲನವನ್ನು ಕೈಗೊಂಡು ತಮ್ಮ ಹಕ್ಕನ್ನು ಸ್ಥಾಪಿಸುತ್ತಾರೆ.

ಬಸವಣ್ಣನವರು ಅನುಭಾವ ಮಂಟಪವನ್ನು ಸ್ಥಾಪಿಸಿ ಎಲ್ಲ ವರ್ಗದವರು ಒಂದು ಕಡೆ ಸೇರಿ ಶರಣಧರ್ಮದ ತತ್ವಸಿದ್ಧಾಂತಗಳನ್ನು ಕುರಿತು ಸಮಗ್ರವಾಗಿ ಚರ್ಚಿಸುವ ಮುಕ್ತ ವೇದಿಕೆಯನ್ನು ಸ್ಥಾಪಿಸಿದರು. ಆ ಮೂಲಕ ಪ್ರಜಾಪ್ರಭುತ್ವವಾದಿಯಾಗಿ ಎಲ್ಲರ ಆಶಯಗಳನ್ನು ಗೌರವಿಸುವ ಮುಖೇನ ಅದಕ್ಕೆ ಒಂದು ತಾತ್ವಿಕವಾದ ಹಾಗೂ ಅನುಭಾವಿಕ ಸ್ಥಾನಮಾನವನ್ನು ನೀಡಿ ಐತಿಹಾಸಿಕವಾಗಿ ಒಂದು ಮಹತ್ವವನ್ನು ತಂದುಕೊಟ್ಟರು.

ಇಪ್ಪತ್ತನೇ ಶತಮಾನದಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರು ಲಂಡನ್‌ನಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನಲ್ಲಿ ದಲಿತ ಸಮುದಾಯದ ಪ್ರತಿನಿಧಿಯಾಗಿ ಭಾಗವಹಿಸುವ ಮೂಲಕ ಎಲ್ಲ ಸ್ಥಾನಮಾನಗಳಿಂದ ವಂಚಿತರಾಗಿ ಅಸಹನೀಯವಾದ ಬದುಕನ್ನು ನಡೆಸುತ್ತಿದ್ದ ಶೋಷಿತ ಸಮುದಾಯಕ್ಕೆ ಮೀಸಲು ಮತಕ್ಷೇತ್ರಗಳ ಮೂಲಕವಾಗಿ ರಾಜಕೀಯ ಪ್ರಾತಿನಿಧ್ಯವನ್ನು ಪಡೆಯುವ ಅವಕಾಶಕ್ಕಾಗಿ ಒತ್ತಾಯಿಸಿ ಯಶಸ್ವಿಯಾದರು. ಅಧಿಕಾರದ ಅವಕಾಶಗಳು ಸಿಗುವಂತೆ ನೋಡಿಕೊಂಡು ಶತಶತಮಾನಗಳಿಂದ ಅಧಿಕಾರ ಮತ್ತು ರಾಜಕೀಯ ಸ್ಥಾನಮಾನಗಳಿಂದ ವಂಚಿತರಾಗಿದ್ದ ಜನತೆಗೆ ರಾಜ್ಯಾಂಗದ ಚೌಕಟ್ಟಿನಲ್ಲಿ ಅಧಿಕೃತವಾಗಿ ಸೌಲಭ್ಯಗಳು ದೊರಕುವಂತೆ ಮಾಡಿದ್ದು ಐತಿಹಾಸಿಕ ಸಂಗತಿ ಎಂದೇ ಹೇಳಬೇಕು.

ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನಿಯಾಗಿ ಜನೋಪಕಾರಿಯಾದ ಕಾರ್ಯಗಳನ್ನು ಮಾಡಿ ಅಧಿಕಾರ ವಿಕೇಂದ್ರೀಕರಣದ ಉದ್ಘಾಟಕರಾಗಿ ಕಂಡುಬಂದರೆ, ಡಾ. ಬಿ.ಆರ್. ಅಂಬೇಡ್ಕರ್‌ರವರು ಸ್ವಾತಂತ್ರ್ಯಾನಂತರದಲ್ಲಿ ರೂಪುಗೊಂಡ ನೆಹರೂರವರ ಸಚಿವ ಸಂಪುಟದಲ್ಲಿ ಕಾನೂನು ಮತ್ತು ಕಾರ್ಮಿಕ ಖಾತೆ ಸಚಿವರಾಗಿ ಕೈಗೊಂಡ ನಿರ್ಧಾರಗಳು ಕಾರ್ಮಿಕ ಸಮುದಾಯದ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಮಹತ್ವದ ಮೈಲುಗಲ್ಲುಗಳೆಂದೇ ಪರಿಗಣಿತವಾಗಿವೆ. ಆ ಕಾರಣಕ್ಕಾಗಿಯೇ ಜವಹರಲಾಲ್ ನೆಹರುರವರು ಅಂಬೇಡ್ಕರ್‌ರವರನ್ನು ತಮ್ಮ ಸಚಿವ ಸಂಪುಟದ ರತ್ನಮಣಿ ಎಂದೇ ಪ್ರಶಂಸೆ ಮಾಡುತ್ತಿದ್ದರು.

ಒಟ್ಟಾರೆಯಾಗಿ ಹೇಳುವುದಾದರೆ ಈ ಎರಡು ಮಹಾನ್ ಚೇತನಗಳು ಆಲೋಚಿಸಿದ್ದು, ಹಂಬಲಿಸಿದ್ದು ಶೋಷಿತ ಸಮುದಾಯಗಳ ವಿಮೋಚನೆಯ ಕಡೆಗೆ ಎಂಬುದು ಮಹತ್ವದ ಸಂಗತಿಯಾಗಿದೆ.

❐

ಬಸವಣ್ಣ ಮತ್ತು ರಾಮಾನುಜ

ಡಾ. ಸಿ.ವಿ. ವೇಣುಗೋಪಾಲ

ನನ್ನ ಶಾಲೆಯ ದಿನಗಳಿಂದಲೇ ಬಸವಣ್ಣನವರ ಬಗ್ಗೆ ಕುತೂಹಲ, ಪ್ರೀತಿ ಹಾಗೂ ಗೌರವ ನನ್ನಲ್ಲಿ ಬೆಳೆದು ಬಂದಿತ್ತು. ಹಾಗೆಂದು ನಾನೇನೂ ವೀರಶೈವ ಪರಿಸರದಲ್ಲಿ ಬೆಳೆದವನಲ್ಲ. ನನ್ನ ಹುಟ್ಟೂರು ಕೋಲಾರ. ನನ್ನ ಬಾಲ್ಯದ ದಿನಗಳಲ್ಲಿ ಅಂದರೆ ಮೂವತ್ತರ ಹಾಗೂ ನಲವತ್ತರ ದಶಕಗಳಲ್ಲಿ, ನನಗರಿವಿರುವಂತೆ ಅಲ್ಲಿ ಹೆಚ್ಚಿನ ವೀರಶೈವ ಮನೆತನಗಳೇನೂ ಇರಲಿಲ್ಲ. ನಾನು ಓದಿದ ಸರ್ಕಾರಿ ಶಾಲೆಗಳಲ್ಲಿಯೂ ನನಗೆ ಯಾವ ವೀರಶೈವ ಅಧ್ಯಾಪಕರೂ ಕಲಿಸಿದ ನೆನಪಿಲ್ಲ. ಬಸವಣ್ಣನ ಬಗ್ಗೆ ಯಾವುದೇ ಪುಸ್ತಕವೂ ನಮ್ಮ ಮನೆಯಲ್ಲಿರಲಿಲ್ಲ. ನನ್ನ ಸಹಪಾಠಿಗಳು ಕೆಲವರು ವೀರಶೈವ ಬಾಲಕರಿದ್ದರೂ ನಮ್ಮ ವೇಳೆಯೆಲ್ಲ ಒಟ್ಟಿಗೆ ಓದುವದು, ಆಟ ಪಾಠಗಳಲ್ಲಿ ಪಾಲ್ಗೊಳ್ಳುವುದಕ್ಕೆ ಸೀಮಿತವಾಗಿದ್ದವೇ ಹೊರತು ಧರ್ಮ, ಧರ್ಮ ಬೋಧಕರ ಬಗ್ಗೆ ನಾವೆಂದೂ ತಲೆ ಕೆಡಿಸಿಕೊಂಡಿರಲಿಲ್ಲ. ಅಂತಹ ಚಿಂತನೆ ನಮ್ಮ ವಯಸ್ಸಿಗೆ ಬಹುಶಃ ತಕ್ಕದ್ದೂ ಆಗಿರಲಿಲ್ಲ.

ಇಷ್ಟಾದರೂ ನಮಗೆ ಬಸವಣ್ಣ ಹಾಗೂ ಅಕ್ಕಮಹಾದೇವಿ ಚಿರಪರಿಚಿತರಾದರು. ಇದಕ್ಕೆ ಕಾರಣ ನಮ್ಮ ಅಧ್ಯಾಪಕರುಗಳೇ. ಅಂದಿನ ನಮ್ಮ ಗುರುವೃಂದಕ್ಕೂ, ಇಂದಿನ ಶಾಲಾ ಕಾಲೇಜುಗಳ ಅಧ್ಯಾಪಕರುಗಳಿಗೂ ಸಾಮಾನ್ಯವಾಗಿ ತುಲನೆ ಅಸಾಧ್ಯವೆಂದೇ ನನ್ನ ಭಾವನೆ. ಶಾಲೆಯಲ್ಲಿ ನಮಗೆ ಕಲಿಸುತ್ತಿದ್ದ ಅನೇಕ ಅಧ್ಯಾಪಕರುಗಳು ತಾವು ಕಲಿಸತಕ್ಕ ವಿಷಯವನ್ನಷ್ಟೇ ಅಲ್ಲದೆ ಇತರ ಹಲವಾರು ವಿಷಯಗಳ ಬಗ್ಗೆ ರೋಚಕವಾಗಿ ತಿಳಿಸುತ್ತಿದ್ದರು. ಅವರು ವೈಯಕ್ತಿಕವಾಗಿ ಪಾಲಿಸುತ್ತಿದ್ದ ಧರ್ಮ ಯಾವುದೇ ಇರಲಿ, ಪಾಠ ಮಾಡುವಾಗ, ಸಂದರ್ಭಕ್ಕೆ ತಕ್ಕಂತೆ, ಅನೇಕ ಕವಿಗಳಿಂದ, ಗೀತೆ ಹಾಗೂ ಉಪನಿಷತ್ತುಗಳಿಂದ, ಬೈಬಲ್ ಮುಂತಾದ ಧಾರ್ಮಿಕ ಗ್ರಂಥಗಳಿಂದ ಬಸವಣ್ಣ ಹಾಗೂ ಸರ್ವಜ್ಞನ ವಚನಗಳಿಂದ ಧಾರಾಳವಾಗಿ ಸಾಲುಗಳನ್ನು ಪರಿಚಯಿಸುತ್ತಿದ್ದರು. ಇಂತಹ ಪರಿಸರದಲ್ಲಿ ಬೆಳೆದ ನನ್ನಂತಹ ಎಳೆಯರನ್ನು ಬಸವಣ್ಣನವರ ವಚನಗಳ ಆಡು ಭಾಷೆ, ಅವುಗಳಲ್ಲಿ ಹೊಮ್ಮಿ ಬರುವ ಪ್ರಾಣಿ ದಯೆ, ಸಮಾನಭಾವ, ಸಾಮಾಜಿಕ ಕಾಳಜಿ ಹಾಗೂ ಕಾಯಕ ಧರ್ಮ ಆಕರ್ಷಿಸಿದ್ದು ಸಹಜವೇ ಆಗಿತ್ತು. ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಅದೇ ತಾನೇ ಸ್ವಾತಂತ್ರ ಗಳಿಸಿ,

ಸರ್ವಸಮಾನತೆಯ ತಳಹದಿಯ ಮೇಲೆ ಜಾತ್ಯಾತೀತ ರಾಷ್ಟ್ರವೊಂದರಲ್ಲಿ ಎಲ್ಲರೂ ಹೆಗಲಿಗೆ ಹೆಗಲು ಕೊಟ್ಟು ದುಡಿದು ಬಲಿಷ್ಠ, ಮಾನವೀಯ ಸಮಾಜವೊಂದನ್ನು ಕಟ್ಟುವ ಕನಸನ್ನೇ ಹೊತ್ತಿದ್ದ ನಮಗೆ ಅಂದು ತೀರ ಹತ್ತಿರದ ಆಪ್ತನೆಂದು ಬಸವಣ್ಣ ಕಂಡಿದ್ದರಲ್ಲಿ ಅಚ್ಚರಿಯೇನೂ ಇರಲಿಲ್ಲ.

ವಿದ್ಯಾಭ್ಯಾಸ ಮುಗಿಸಿ ಅಧ್ಯಾಪಕ ವೃತ್ತಿಯನ್ನು ಕೈಗೊಂಡ ಮೇಲೆ ನನ್ನ ಗುರುಗಳನ್ನೇ ಮಾದರಿಯಾಗಿಟ್ಟುಕೊಂಡು ನಾನು ಕಲಿಸಬೇಕಾದ ವಿಷಯವನ್ನಷ್ಟೇ ಅಲ್ಲದೆ ಇತರ ವಿಷಯಗಳನ್ನೂ ಅಭ್ಯಾಸ ಮಾಡತೊಡಗಿದೆ. ಮುಖ್ಯವಾಗಿ ವಿವಿಧ ಧರ್ಮ ಗ್ರಂಥಗಳನ್ನೂ, ಧರ್ಮ ಪ್ರವರ್ತಕರ ಜೀವನಶೈಲಿಯನ್ನೂ ಪರಿಚಯಿಸಿಕೊಳ್ಳುವ ಪ್ರಯತ್ನ ಮಾಡಿದೆ. ನಾನು ಹುಟ್ಟಿನಿಂದ ಶ್ರೀ ವೈಷ್ಣವನಾದುದರಿಂದ ಸಹಜವಾಗಿಯೇ ಆ ಸಿದ್ಧಾಂತದ ಪ್ರವರ್ತಕರಾದ ರಾಮಾನುಜರ ಜೀವನ ಹಾಗೂ ದರ್ಶನದ ಬಗ್ಗೆ ಅಭ್ಯಾಸ ಮಾಡಿದೆ. ಸಮಾಜವನ್ನು ಹಾಗೂ ಮಾನವನ ಹೃದಯವನ್ನು ನಿರ್ಮಲೀಕರಣಗೊಳಿಸಲು ಬಸವಣ್ಣ ಹಾಗೂ ರಾಮಾನುಜರು ತೆಗೆದುಕೊಂಡ ಹೆಜ್ಜೆಗಳಲ್ಲಿಯ ಸಾಮ್ಯ ನನ್ನನ್ನು ದಂಗು ಬಡಿಸಿತು. ರಾಮಾನುಜರ ವಿಶಿಷ್ಟಾದ್ವೈತ ದರ್ಶನ ಹಾಗೂ ಬಸವಣ್ಣನವರ ವೀರಶೈವ ದರ್ಶನ ಆಧ್ಯಾತ್ಮಿಕ ನೆಲೆಯಲ್ಲಿ ಭಿನ್ನವಿರಬಹುದು. ಅದು ನನಗೆ ಅಪ್ರಸ್ತುತ. ಆದರೆ ಸಮಾಜ ಸುಧಾರಕರಾಗಿ, ಆಧ್ಯಾತ್ಮಿಕ ಹಾಗೂ ನೈತಿಕ ಜೀವನದಲ್ಲಿ ಕ್ರಾಂತಿ ತರುವಲ್ಲಿ ಅವರಿಬ್ಬರ ಗುರಿಯೂ ಒಂದೇ ಆಗಿತ್ತು. ಅವರಿಬ್ಬರೂ ಕಟ್ಟಬೇಕೆಂದುಕೊಂಡ ಸಮಾಜ ಒಂದೇ ರೀತಿಯದಾಗಿತ್ತು ಎನ್ನುವ ಸತ್ಯ 'ಮಹಾತ್ಮರು ಒಂದೇ ಬಗೆ ಚಿಂತಿಸುತ್ತಾರೆ' (Great men think alike) ಎಂಬ ನಾಣ್ಣುಡಿಯನ್ನು ನೆನಪಿಗೆ ತರುತ್ತದೆ.

ಈ ಇಬ್ಬರು ಮಹಾತ್ಮರ ಜೀವನದಲ್ಲಿ ನನ್ನನ್ನು ಮೊದಲು ಆಕರ್ಷಿಸಿದ್ದು ಜಾತಿಭೇದವನ್ನು ಬುಡಸಹಿತ ಕಿತ್ತೊಗೆಯಲು ಇವರು ಮಾಡಿದ ಪ್ರಯತ್ನ. "ಆವಕುಲದವರಾದರೇನು ಶಿವಲಿಂಗವಿದ್ದವನೇ ಕುಲಜನು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲ ಒಂದೇ ಎಂಬೆ" ಎಂದರು ಬಸವಣ್ಣ. ಒಂದು ಜಾತಿ ಮೇಲು ಒಂದು ಕೀಳು ಎನ್ನುವ ಭಾವನೆಯಿಂದ ಅವರು ರೋಸಿಹೋಗಿದ್ದರು. ಜಾತಿ ಸೂಚಕವಾದ ಜನಿವಾರವನ್ನು ಹಾಕಿಕೊಳ್ಳಲೊಪ್ಪದೆ ಯಾರೂ ಇತರರಿಗಿಂತ ಮೇಲಲ್ಲ ಎಂದು ಎಳೆ ವಯಸ್ಸಿನಲ್ಲೇ ಸಾರಿದರು. ಸಮಾಜದ ತಿರಸ್ಕಾರಕ್ಕೆ ಗುರಿಯಾಗಿದ್ದ ಹತ್ತು ಹದಿನೆಂಟು ಜಾತಿಯವರನ್ನು ಅಪ್ಪಿಕೊಂಡು, ಅವರನ್ನು ಶರಣರನ್ನಾಗಿಸಿ ಅವರಲ್ಲಿ ತಾವೂ ಎಲ್ಲರಂತೆ ಮನುಷ್ಯರು, ತಮಗೂ ಧರ್ಮಾಧಿಕಾರವಿದೆ ಎಂಬ ಆತ್ಮವಿಶ್ವಾಸವನ್ನು ಬೆಳೆಸಿದರು. ಅಸ್ಪೃಶ್ಯತೆಯ ಕಲಂಕವನ್ನು ತೊಡೆದು ಹಾಕಲು ಏನೆಲ್ಲವನ್ನು ಮಾಡಿದರು. ಅಸ್ಪೃಶ್ಯರನ್ನು 'ಹಿರಿಯ ಮಾಹೇಶ್ವರ'ರೆಂದು ಕರೆದು ಗೌರವಿಸಿದರು. ಆಧ್ಯಾತ್ಮಿಕ ಲೋಕದ ಹೆಬ್ಬಾಗಿಲು ಮೇಲು ಕೀಳೆಂಬ ಭೇದವಿಲ್ಲದೆ ಸರ್ವರಿಗೂ ತೆರೆದಿದೆ ಎಂದು ಸಾರಿದರು. ಎಲ್ಲಕ್ಕಿಂತ ಮಿಗಿಲಾಗಿ ಪಾಮರರೆಲ್ಲರಿಗೂ ವೇದ್ಯವಾಗುವಂತೆ ತಮ್ಮ ದರ್ಶನವನ್ನು ಅತ್ಯಂತ ಸರಳವಾದ ಆಡುಮಾತಿನಲ್ಲಿ ಒಮ್ಮೆ ಕೇಳಿದರೆ ಮತ್ತೊಮ್ಮೆ ಕೇಳಬೇಕೆನ್ನಿಸುವಂತಹ ಸುಂದರ ವಚನಗಳಲ್ಲಿ ಬೋಧಿಸಿದರು.

ಬಸವಣ್ಣನವರ ಜನನಕ್ಕೆ ಸುಮಾರು ಒಂದು ನೂರು ವರ್ಷಗಳ ಹಿಂದೆ ಜನಿಸಿದ ರಾಮಾನುಜರೂ ಸಹಜಾತಿ ಹಾಗೂ ಧರ್ಮದ ಹೆಸರಿನಲ್ಲಿ ಮೇಲು ಕೀಳು ವರ್ಗಗಳ

ಸೃಷ್ಟಿಯಾಗಿ ಪರಸ್ಪರ ವೈಷಮ್ಯ ಬೆಳೆದಿದ್ದ ಸಮಾಜದಿಂದ ಬಹಳ ನೊಂದಿದ್ದರು. ತಮ್ಮ ಕೃತಿ 'ದೀನಬಂಧು ಬಸವಣ್ಣ'ದಲ್ಲಿ ಶ್ರೀ ಕೋ. ಚನ್ನಬಸಪ್ಪನವರು 'ಬುದ್ಧ, ಶಂಕರ, ರಾಮಾನುಜರು ಮನುಷ್ಯ ಮನುಷ್ಯರಲ್ಲಿರುವ ಮೇಲು ಕೀಳುಗಳನ್ನು ತೊಡೆಯಲು ಪ್ರಯತ್ನ ಮಾಡಿದರು. ಅದರಲ್ಲೂ ಶ್ರೀ ರಾಮಾನುಜರ ಅನುಕಂಪ ಅನ್ಯಾದೃಶವಾದುದು' (ಪು.೭೩) ಎಂದು ಬರೆದಿದ್ದಾರೆ. ಬಸವಣ್ಣನವರಂತೆಯೇ ರಾಮಾನುಜರೂ ಕೂಡ ಆಧ್ಯಾತ್ಮಿಕವಾಗಿ ಮುಂದು ವರೆದವರಲ್ಲಿ ಜಾತಿಯ ಕಟ್ಟುಪಾಡಿಗೆ ಸ್ಥಾನವಿಲ್ಲ ಎಂದು ಸಾರಿದರು. ಭಗವಂತನ ದಯೆಗೆ ಕೆಲವೇ ಜಾತಿಗಳು ಮೀಸಲಿಲ್ಲ ಎಂದು ಬೋಧಿಸಿದರು. ಬಸವಣ್ಣನವರಾಗಲೀ ರಾಮಾನುಜರಾಗಲೀ ತಾವು ಆಚರಣೆಗೆ ತಾರದ ಏನನ್ನೂ ಇತರರಿಗೆ ಬೋಧಿಸಲಿಲ್ಲ. ರಾಮಾನುಜರ ಗುರುಗಳಲ್ಲೊಬ್ಬರಾದ ಕಾಂಚೀಪೂರ್ಣರೂ ಜನ್ಮತಃ ವೈಶ್ಯರು. ಅವರ ಪಟ್ಟ ಶಿಷ್ಯ ಉರಂಗವಲ್ಲಿ ಬ್ರಾಹ್ಮಣನಲ್ಲ. ಬಸವಣ್ಣ ಅಸ್ಪೃಶ್ಯರನ್ನು 'ಹಿರಿಯ ಮಾಹೇಶ್ವರ'ರೆಂದು ಕರೆದರೆ ರಾಮಾನುಜರು ಅವರನ್ನು 'ತಿರುಕ್ಕುಲತ್ತಾರ್' (ಮೇಲಿನ ಕುಲದವರು) ಎಂದು ಕರೆದರು. ಹಲವಾರು ವರ್ಷಗಳ ಕಾಲ ತಮ್ಮ ಕ್ಷೇತ್ರವನ್ನಾಗಿಸಿಕೊಂಡಿದ್ದ ಮೇಲುಕೋಟೆಯಲ್ಲಿ ಹರಿಜನರನ್ನು ದೇವಾಲಯದೊಳಗೆ ಬರಮಾಡಿಕೊಂಡರು. ಇತರೆಡೆಯಲ್ಲಿಯೂ ಹರಿಜನರಿಗೆ ದೇವಾಲಯ ಪ್ರವೇಶ ದೊರಕಿಸಿಕೊಟ್ಟರು. ಮೇಲುಕೋಟೆಯ ಚೆಲುವನಾರಾಯಣಸ್ವಾಮಿಯೇ ತನ್ನ ಸರ್ವಸ್ವವೆಂದುಕೊಂಡಿದ್ದ ಮುಸ್ಲಿಂ ಹೆಣ್ಣುಮಗಳೊಬ್ಬಳ ಮೂರ್ತಿಯನ್ನೂ ದೇವಾಲಯದಲ್ಲಿ ಸ್ಥಾಪಿಸಿ ಆ ಮೂರ್ತಿಗೂ ಪೂಜೆ ಸಲ್ಲಿಸುವಂತೆ ಮಾಡಿದರು.

ಬಸವಣ್ಣನವರ ಅನುಭವ ಮಂಟಪದಲ್ಲಿ ಎಲ್ಲ ಕಸಬಿನವರಿಗೂ ಸಮಾನಸ್ಥಾನವಿತ್ತು, ಹಡಪದ ಅಪ್ಪಣ್ಣ, ಮಡಿವಾಳ ಮಾಚಿದೇವ, ಮೋಳಿಗೆ ಮಾರಯ್ಯ, ಮೇದಾರ ಕೇತಯ್ಯ, ನುಲಿಯ ಚೆಂದಯ್ಯನೇ ಮುಂತಾದ ಅನೇಕ ಕಾಯಕ ನಿಷ್ಠ ಶರಣರು ಎಲ್ಲರೊಡನೆ ಸಮಾನರಾಗಿ ಜಿಜ್ಞಾಸೆ ನಡೆಸುತ್ತಿದ್ದರು. ಅಂತೆಯೇ ರಾಮಾನುಜರ ಶಿಷ್ಯರೂ ಅನೇಕ ಜಾತಿ ಮತದವರಾಗಿದ್ದರು. ಹಾಗೆ ನೋಡಿದರೆ ರಾಮಾನುಜರಿಗೂ, ಶ್ರೀವೈಷ್ಣವರಿಗೂ ಗೌರವಾನ್ವಿತರಾದ, ರಾಮಾನುಜರಿಗೂ ಮುಂಚೆಯೇ ಆಗಿ ಹೋದ ಆಳ್ವಾರರುಗಳೂ ವಿವಿಧ ಜಾತಿಮತದವರಾಗಿದ್ದರು. ಸಮಾಜದಲ್ಲಿ ಕೀಳೆನ್ನಿಸಿಕೊಂಡವರಲ್ಲನೇಕರು ಮೇಲ್ಜಾತಿಯವರಿಗಿಂತ ವಿಶಾಲವಾದ ಹೃದಯವಂತಿಕೆಯುಳ್ಳವರೆಂದು ರಾಮಾನುಜರು ತಮ್ಮ ಜೀವನದ ಅನೇಕ ಘಟನೆಗಳಿಂದ ಮೇಲ್ವರ್ಗದವರಿಗೆ ಮನವರಿಕೆ ಮಾಡಿಕೊಟ್ಟಿದ್ದರು.

ಜಾತಿ ಪದ್ಧತಿಯನ್ನು ನಿರ್ಮೂಲ ಮಾಡಲೋಸುಗವೇ ಬಸವಣ್ಣನವರು ಕಾಯಕತತ್ವವನ್ನು ಪ್ರತಿಪಾದಿಸಿದರು. ಎಲ್ಲ ಕಸುಬೂ ಸಮಾಜಕ್ಕೆ ಅವಶ್ಯಕವೇ. ಅವುಗಳಲ್ಲಿ ಒಂದನ್ನು ಬಿಟ್ಟರೂ ಸಮಾಜ ಅಸ್ತವ್ಯಸ್ತವಾಗುತ್ತದೆ. ಅವೆಲ್ಲವೂ ಸಮಾಜದ ಆಧಾರಸ್ತಂಭ ಗಳಿದ್ದಂತೆ. ಆದ್ದರಿಂದಲೇ ಅವುಗಳಲ್ಲಿ ತರತಮಭಾವ ಸಲ್ಲದು. ಈ ತತ್ವವನ್ನರಿತವ ಇತರ ಎಲ್ಲರನ್ನೂ ಸಮಾನದೃಷ್ಟಿಯಿಂದ ನೋಡಬಲ್ಲ. ಹಾಗಾದಾಗ ಮಾತ್ರ ಸಮಾಜದಲ್ಲಿ ಸಾಮರಸ್ಯ ಸಾಧ್ಯವಾದೀತು. ಸೆಟ್ಟಿಯೆಂಬೆನೆ ಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ? ಡೋಹಾರನೆಂದೆಂಬೆನೆ ಕಕ್ಕಯ್ಯನ? ಮಾದಾರನೆಂಬೆನೆ ಚನ್ನಯ್ಯನ? ಆನು ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯ' ಎಂದು ಹುಟ್ಟಿನಿಂದ ಅಥವಾ ಕಸುಬಿನಿಂದ ವ್ಯಕ್ತಿಗಳನ್ನು

ಭಿನ್ನ ಭಿನ್ನವಾಗಿ ನೋಡುವ ನೋಟವನ್ನು ಧಿಕ್ಕರಿಸಿದರು. 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರೆಸದಿರಯ್ಯಾ' ಎಂದು ಇತರರು ತನ್ನ ಉಚ್ಚಕುಲದ ಬಗ್ಗೆ ಮಾತನಾಡಿದಾಗ ತಮ್ಮ ಒಡಲ ಅಳಲನ್ನು ತೋಡಿಕೊಂಡರು. ಬಸವಣ್ಣನವರಂತೆಯೇ ರಾಮಾನುಜಮತದ ಎಲ್ಲ ಕೆಲಸಗಳನ್ನೂ ವಿದ್ವತ್ತು, ಜಾತಿ, ಅಂತಸ್ತುಗಳ ಭೇದವಿಲ್ಲದೆ ಅವರ ಶಿಷ್ಯರು ಹಂಚಿಕೊಂಡಿದ್ದರು. ಅವರ ಪ್ರಮುಖ ಶಿಷ್ಯರಲ್ಲೊಬ್ಬರಾದ ಮೊದಲಿಯಾಂಡಾನ್ ಸಾಮಾನ್ಯ ಸೇವಕನಾಗಿ ಪರರ ಮನೆಯಲ್ಲಿ ಕೆಲಸ ಮಾಡಿದರು.

ಅಂದಿನ ಸಮಾಜ ಬರಿಯ ಪುರುಷ ಪ್ರಧಾನವಾಗಿತ್ತಷ್ಟೇ ಅಲ್ಲದೆ ಸ್ತ್ರೀಯರನ್ನು ನಿಕೃಷ್ಟವಾಗಿ ಕಾಣುತ್ತಿತ್ತು. ಬಸವ ರಾಮಾನುಜರಿಬ್ಬರೂ ಸ್ತ್ರೀ ಸಮಾನತೆಯನ್ನು ಎತ್ತಿ ಹಿಡಿದರು. ಆಧ್ಯಾತ್ಮಿಕ ದರ್ಶನಕ್ಕೆ ಸ್ತ್ರೀಗೆ ಪುರುಷನಷ್ಟೇ ಹಕ್ಕುಂಟು ಎಂದು ಸಾರಿದರು. ಅಕ್ಕಮಹಾದೇವಿಯೇ ಮೊದಲಾಗಿ ನಂಬಿಯಕ್ಕ ಕದಿರೆ ರೆಮ್ಮವ್ವೆ ಮುಂತಾದ ಅನೇಕ ಶರಣೆಯರ ಜೀವನ, ಅವರ ವಚನಗಳ ಪರಿಚಯ ವೀರಶೈವರಿಗಲ್ಲದೇ ಇತರರಿಗೂ ಪರಿಚಯವಿರುವಂಥದೇ, ಸ್ತ್ರೀಯ ಬಗ್ಗೆ ಅತ್ಯಂತ ಗೌರವವಿಟ್ಟುಕೊಂಡಿದ್ದ ರಾಮಾನುಜರ ಶಿಷ್ಯಗೋಷ್ಠಿಯಲ್ಲಿಯೂ ಅನೇಕ ಸ್ತ್ರೀಯರಿದ್ದರು. ಅವರಲ್ಲಿ ಕೂರೇಶರ ಪತ್ನಿ ಆಂಡಾಳ್ ಅಪ್ರತಿಮ ವಿದುಷಿಯಾಗಿ ತತ್ತ್ವವಿವೇಚನೆಯಲ್ಲಿ ಎಲ್ಲರೊಡನೆ ಭಾಗವಹಿಸುತ್ತಿದ್ದರು.

'ಎನಗಿಂತ ಕಿರಿಯರಿಲ್ಲ' ಎಂಬ ಬಸವಣ್ಣ ತನ್ನ ವಿನೀತತೆಯನ್ನು ತಾಳಿದಂತೆ ತಮ್ಮ ತಪ್ಪುಗಳನ್ನು ಸಾರ್ವಜನಿಕವಾಗಿ ರಾಮಾನುಜರು ಒಪ್ಪಿಕೊಳ್ಳುತ್ತಿದ್ದರು. 'ಉತ್ತಮ ಭಾವನೆಗಳು ಎಲ್ಲ ಕಡೆಯಿಂದಲೂ ನಮ್ಮೆಡೆಗೆ ಬರಲಿ' ಎಂಬ ಋಗ್ವೇದದ ಉಕ್ತಿಯಂತೆ ಬಸವ ರಾಮಾನುಜರಿಬ್ಬರೂ ಎಲ್ಲ ಕಾಲದಲ್ಲಿಯೂ ಜ್ಞಾನಪಿಪಾಸುಗಳಾಗಿದ್ದರು. ಶಿಷ್ಯರೊಡನೆ ಒಮ್ಮೆ ರಾಮಾನುಜರು ದಾರಿಯಲ್ಲಿ ಹೋಗುತ್ತಿದ್ದಾಗ ಅಸ್ಪೃಶ್ಯ ಹೆಂಗಸೊಬ್ಬಳು ಎದುರಾದಳಂತೆ. ಅವಳನ್ನು ಪಕ್ಕಕ್ಕೆ ಸರಿಯುವಂತೆ ಶಿಷ್ಯನೊಬ್ಬ ಹೇಳಿದ. ಆಗ ಆಕೆ 'ನನ್ನಿಂದ ಮೈಲಿಗೆ ಆಗದಿರುವುದಕ್ಕೆ ಯಾವ ಕಡೆ ಸರಿಯಬೇಕೆಂದು ನೀವೇ ತಿಳಿಸಿ. ಇಡೀ ವಿಶ್ವವೇ ಭಗವಂತನಿಂದ ಆವರಿಸಿದೆಯಲ್ಲ!" ಎಂದಳು. ಶಿಷ್ಯನ ಕಡೆ ನೋಡಿದ ರಾಮಾನುಜರು ಉದ್ಗರಿಸಿದರು: 'ಈ ಹೆಂಗಸು ನಿನಗೀಗ ನಿಜವಾದ ವೈಷ್ಣವಧರ್ಮದ ಪಾಠವನ್ನು ಕಲಿಸಿದ್ದಾಳೆ.'

ಬಸವಣ್ಣನವರ ಶರಣನೂ ರಾಮಾನುಜರ ವೈಷ್ಣವನೂ ಮೂಲತಃ ಒಂದೇ ಮಾನವೀಯ ಅನುಕಂಪದಿಂದ ಸದಾ ಮಿಡಿಯುವ ವ್ಯಕ್ತಿ. ಇತರರಿಗಾಗಿ ಮರುಗಿ, ಸೇವೆಯ ಅವಶ್ಯಕತೆ ಇರುವ ಅವರ ಸೇವೆಯೇ ತನ್ನ ಸರ್ವಸ್ವವೆಂದು ತಿಳಿದು, ಧರ್ಮದ ಮೂಲ ದಯೆಯಲ್ಲಿಯೇ ಎಂಬ ಸತ್ಯನ್ನು ನಡೆದು ತೋರಿಸಿ ಸಮಾಜದಲ್ಲಿ ಎಲ್ಲವೂ ಸುಂದರ ರೂಪವನ್ನು ತಳೆಯುವಂತೆ ಆಚರಿಸುವ ನಿಸ್ವಾರ್ಥ ಜೀವಿ. ರಾಮಾನುಜರು ಸಂನ್ಯಾಸಿಯಾಗಿ ವಿಶಿಷ್ಟಾದ್ವೈತ ದರ್ಶನವನ್ನು ಪ್ರತಿಪಾದಿಸುವ ದೃಷ್ಟಿಯಿಂದ ಜ್ಞಾನಾರ್ಜನೆಗಾಗಿ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗುತ್ತ, ಗ್ರಂಥ ರಚನೆಗಳನ್ನು ಮಾಡುತ್ತ ಶಿಷ್ಯಕೋಟಿಗೆ ಜೀವನ ವಿಧಾನವನ್ನು ಬೋಧಿಸಿ ಅದನ್ನು ಸಮಾಜದಲ್ಲಿ ಅನುಷ್ಠಾನಕ್ಕೆ ತರುವಂತೆ ಅವರನ್ನು ಪ್ರೇರೇಪಿಸಿದರು. ಬಸವಣ್ಣನವರು ರಾಮಾನುಜರಿಗಿಂತ ನಿಕಟವಾಗಿ ಸಮಾಜದಲ್ಲಿ ಒಂದಾಗಿ ಮಾನವೀಯತೆ ನಶಿಸಿ ಹೋಗಿದ್ದ ಕಾಲದಲ್ಲಿ ಎಲ್ಲರನ್ನೂ ಮಾನವರನ್ನಾಗಿ ಮಾಡಲು

ಪಣತೊಟ್ಟರು. ಹೀಗೆ ಸಂಪೂರ್ಣ ಕ್ರಾಂತಿಗೆ ಕೈ ಹಚ್ಚಿದಾಗ ಸಮಾಜ ಎದುರು ಬೀಳುವುದೂ ಸಹಜವೇ. ಬಿಜ್ಜಳನೇ ಬಸವನನ್ನು ಬಸವ ತತ್ವವನ್ನು ಅಳಿಸಲು ಮುಂದಾದಾಗ ಬಸವಣ್ಣ ಕಲ್ಯಾಣವನ್ನು ಬಿಡಬೇಕಾಯಿತು. ಅಂದಿನ ಆಚಾರವಂತ ಬ್ರಾಹ್ಮಣರ ಉಪದೇಶಕ್ಕೆ ಬಗ್ಗಿ ಒಂದನೇ ಕುಲೋತ್ತುಂಗನು ರಾಮಾನುಜರನ್ನು ಸೆರೆಹಿಡಿದು ತರಲು ಆಜ್ಞಾಪಿಸಿದಾಗ ಅವರು ತಮ್ಮ ರಾಜ್ಯ ಬಿಟ್ಟು ಕರ್ನಾಟಕಕ್ಕೆ ಬರಬೇಕಾಯಿತು. ಇವರಿಬ್ಬರಿಂದ ಕರ್ನಾಟಕಕ್ಕೆ ಆಗಿರುವಲಾಭ ಅಪಾರ. ಇವರಿಬ್ಬರೂ ವಿಶ್ವಮಾನವರೇ. ಇಬ್ಬರ ಕಾರ್ಯಕೇಂದ್ರವೂ ಮುಖ್ಯವಾಗಿ ವೈಯಕ್ತಿಕ ಶುದ್ಧತೆಯೇ. 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ.... ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ' ಎಂದರು ಬಸವಣ್ಣ, ರಾಮಾನುಜರ ಜೀವನದ ಕಟ್ಟಕಡೆಯ ಮಾತುಗಳು ಹೀಗಿದ್ದವು: 'ವಿಚಾರ ಶುದ್ಧಿ ಕ್ರಿಯಾ ಶುದ್ಧಿಯಲ್ಲಿ ಪರಿಣಮಿಸುತ್ತದೆ. ಇತರರಲ್ಲಿ ತಪ್ಪು ಹುಡುಕಲು ಹೋಗಬೇಡಿ. ಈ ಲೋಕದಲ್ಲಿ ಯಾರೂ ಪರಿಪೂರ್ಣರಲ್ಲ. ಮತ್ತೊಬ್ಬರ ದೋಷಗಳನ್ನು ಎತ್ತಿ ಆಡುವಷ್ಟು ಸಾಮರ್ಥ್ಯ ಯಾರಿಗೂ ಇಲ್ಲ. ಇತರರ ಸೇವೆ ಮಾಡುವುದೇ ಒಳ್ಳೆಯತನ.

ಇಡೀ ಲೋಕವನ್ನೇ ದಯೆ, ಕರುಣೆ, ಪ್ರೀತಿಯಿಂದ ತುಂಬಿದ ಈ ಮಹಾತ್ಮರಿಬ್ಬರ ನಾಡಿನಲ್ಲಿ ಜನಿಸಿರುವ ನಾವೇ ಪುಣ್ಯವಂತರೆಂದು ಡುಬ್ಬ ಚಪ್ಪರಿಸಿಕೊಳ್ಳೋಣವೆಂದರೆ ಇವರ ಜೀವನ, ಬೋಧನೆಗಳಿಂದ ಒಂದಿಷ್ಟೂ ಪ್ರಭಾವಗೊಳ್ಳದೆ ಜಾತಿ, ಧರ್ಮ, ಕುಲ, ಭಾಷೆ ಮುಂತಾದ ಅನೇಕ ಗೋಡೆಗಳನ್ನು ನಮ್ಮ ನಮ್ಮ ಮಧ್ಯೆ ಕಟ್ಟಿಕೊಳ್ಳುತ್ತಿರುವ ನಮಗೆ ಆ ಅರ್ಹತೆ ಇದೆಯೆ?

❐

ಬಸವಣ್ಣನವರು ಮತ್ತು ಅರವಿಂದರು

●

ಡಾ. ಸಿಂಪಿ ಲಿಂಗಣ್ಣ

ಎಂಟುನೂರು ವರ್ಷಗಳ ಹಿಂದೆ ಮಾನವನ ಅಗತ್ಯಗಳನ್ನು ಒದಗಿಸುವ ಒಂದು ದಿವ್ಯಶಕ್ತಿ ಬಸವಣ್ಣನವರಾದರೆ, ಇಂದಿನ ಮಾನವನಿಗೆ ಅನಿವಾರ್ಯವಾದ ಅಗತ್ಯಗಳನ್ನು ಒದಗಿಸುವ ಇನ್ನೊಂದು ದಿವ್ಯಶಕ್ತಿ ಶ್ರೀ ಅರವಿಂದರು. ಅಂದು ಕಲ್ಯಾಣಕೇಂದ್ರವು ಕರ್ನಾಟಕವನ್ನು ಕಾರ್ಯಕ್ಷೇತ್ರ ಮಾಡಿಕೊಂಡು ಇಡಿಯ ಭಾರತವನ್ನೇ ತನ್ನೆಡೆಗೆ ಎಳಕೊಂಡರೆ ಇಂದು, ಪಾಂಡಿಚೇರಿಯ ಕೇಂದ್ರವು ಭಾರತವನ್ನು ಕಾರ್ಯಕ್ಷೇತ್ರ ಮಾಡಿಕೊಂಡು ಇಡಿಯ ಜಗತ್ತನ್ನೇ ತನ್ನೆಡೆಗೆ ಎಳಕೊಳ್ಳುವಂತಿದೆ. ಆವಾಗ ಬಸವಣ್ಣನವರಿಗೆ ಹಿಂಬಲವಾಗಿ ಪರಮೇಶ್ವರೀ ಶಕ್ತಿಯು ನಾಗಾಂಬೆ ಅಕ್ಕನಾಗಿ ಬಂದಳು, ಈವಾಗ ಅರವಿಂದರಿಗೆ ಮುಂಬಲವಾಗಿ ಪರಮೇಶ್ವರೀ ಶಕ್ತಿಯು ಮೀರಾಮಾತೆಯಾಗಿ ನಿಂತಳು. ನಾಸ್ತಿಕತೆ ಡಂಭಾಚಾರಗಳೊಡನೆ ಸ್ಪರ್ಧೆ ನಡೆಸಿದ ಕಾಲ ಒಂದು, ಭೌತವಿಜ್ಞಾನಗಳೊಡನೆ ಮೇಲಾಟ ನಡೆದ ಕಾಲ ಇನ್ನೊಂದು. ಒಮ್ಮೆ ಅಖಿಲಭಾರತೀಯರೊಳಗಿನ ಜಾತಿಭೇದವನ್ನು ಅಳಿಸಿಹಾಕುವ ಪ್ರಯತ್ನ ಕಂಡುಬಂದರೆ, ಇನ್ನೊಮ್ಮೆ ಅಖಿಲ ಮಾನವರೊಳಗಿನ ವರ್ಣಭೇದವನ್ನು ತೊಡೆದುಹಾಕುವ ಎತ್ತಗಡೆ ಕಂಡುಬರುವದು. ಒಬ್ಬರು ದಲಿತರನ್ನು ಎತ್ತಿದರು, ಇನ್ನೊಬ್ಬರು ದಲಿತತೆಯನ್ನು ಕಿತ್ತಿದರು. ಬಳಸಿ ಬ್ರತಿಯಾದವರು ಬಸವಣ್ಣನವರು. ಎಳಸಿ ನೋಂಪಿದೊಟ್ಟವರು ಅರವಿಂದರು. ಮನೆ–ಮನೆಯವಳನ್ನು ಕಟ್ಟಿಕೊಂಡು ಜೀವಿತೋದ್ಧೇಶವನ್ನು ಸಾಧಿಸಲು ಒಬ್ಬೊಬ್ಬರು ಒಂದೊಂದು ಪರಮಾದರ್ಶವನ್ನು ನಡೆದು ತೋರಿದರು. ಸಂಸಾರ ಕಟ್ಟಿಕೊಂಡರೂ ಬಿಟ್ಟಂತಿರುವ ಆದರ್ಶ ಒಬ್ಬರದಾದರೆ; ಬಿಟ್ಟ ಸಂಸಾರವಾದರೂ ಕಟ್ಟಿಕೊಂಡಂತಿರುವ ಆದರ್ಶ ಇನ್ನೊಬ್ಬರದು. ಬಸವಣ್ಣನವರು ತಮ್ಮ ಅನುಭಾವವನ್ನು ಸಾಮಾನ್ಯರ ಭಾಷೆಯಾದ ಕನ್ನಡದಲ್ಲಿ ಬಿತ್ತರಿಸಿದರು. ಅರವಿಂದರು ಜಗತ್ತಿನ ಸಾಮಾನ್ಯ ಭಾಷೆಯಾದ ಇಂಗ್ಲಿಷಿನಲ್ಲಿ ತಮ್ಮ ಅನುಭಾವವನ್ನು ಬಿತ್ತರಿಸಿದರು. ಅವರಿಂದ ಕನ್ನಡಕ್ಕೆ ಹೊಸಕಳೆ ಬಂದರೆ, ಇವರಿಂದ ಇಂಗ್ಲಿಷಿಗೆ ಹೊಸಬೆಳೆ ಬಂದಿತು.

ಶ್ರೀ ಅರವಿಂದರು ಭವಿಷತ್ಕಾಲದ ಕವಿತೆಯನ್ನು ಕುರಿತು "ಆತ್ಮಾನುಭವದ ಕಥನವನ್ನು, ಆತ್ಮಶುದ್ಧಿಯ ಹೋರಾಟದ ಕಥೆಯನ್ನೂ ಹೇಳುವುದೇ ಮುಂಬರುವ ಕವಿತೆಯ

ಲಕ್ಷಣವಾಗಿದೆ ಎಂದು ಹೇಳಿದ್ದು, ಬಸವಣ್ಣನವರ ವಚನಗಳನ್ನು ಅನುಲಕ್ಷ್ಯಿಸಿ ಹೇಳಿದಂತಿದೆ. ನುಡಿದರೆ ಮುತ್ತಿನ ಹಾರದಂತಿರಬೇಕು. ಮಾಣಿಕ್ಯದ ದೀಪ್ತಿಯಂತಿರಬೇಕು. ಸ್ಫಟಿಕದ ಸಲಾಕೆಯಂತಿರಬೇಕು. ಲಿಂಗಮೆಚ್ಚಿ ಅಹುದಹುದು ಎನ್ನುವಂತಿರಬೇಕು" ಎನ್ನುವ ಕಟ್ಟಳೆಗೆ ಉದಾಹರಣೆಯಂತಿವೆ ಬಸವಣ್ಣನವರ ವಚನಗಳು. ಶ್ರೀ ಅರವಿಂದರು ಹೇಳುವ ಮಾತಿಗೆ ಹೊಂದಿಕೆಯಾಗುವಂತೆ ಮುಂಚಿತವಾಗಿಯೇ ವಚನಗಳನ್ನು ನುಡಿದರೋ ಇಲ್ಲವೆ, ಅಂದು ಬಸವಣ್ಣನವರಾಗಿ ಮಾದರಿಯ ವಚನಗಳನ್ನು ಬರೆದು, ಇಂದು ಶ್ರೀ ಅರವಿಂದರಾಗಿ ಮುಂಬರುವ ಕವಿತೆಯ ಲಕ್ಷಣಗಳನ್ನು ಒರೆದರೋ ತಿಳಿಯದು, ಶ್ರೀ ಅರವಿಂದರ ಭವಿಷ್ಯಕ್ಕೆ ಬಸವಣ್ಣನವರ ಭೂತಕಾಲದ ವಚನಗಳು ಉದಾಹರಣೆಯಾಗಿರುವಂತೆ, ಬಸವಣ್ಣನವರ ವಚನಗಳು ಮುತ್ತಿನಹಾರ ಮಾಣಕ್ಯದ ದೀಪ್ತಿ, ಸ್ಫಟಿಕದ ಶಲಾಕೆ ಲಿಂಗ ಮೆಚ್ಚಿ ಅಹುದಹುದೆನ್ನುವಿಕೆ ಈ ಎಲ್ಲ ಲಕ್ಷಣಗಳಿಂದ ಶ್ರೀ ಅರವಿಂದರ "ಆರ್ಯ" ಪತ್ರಿಕೆಯ ಲೇಖನಗಳಿಂದ ಇಂದಿನ ಶಾರೀರಿಕ ಶಿಕ್ಷಣ ಪತ್ರಿಕೆಯ ಲೇಖನಗಳವರೆಗಿನ ಎಲ್ಲ ಸಾಹಿತ್ಯಕೃತಿಗಳು ಮಾದರಿಯಾಗಿವೆ. ಕೈಬಾಯಿಗಳಲ್ಲಿ ಇಷ್ಟೊಂದು ತಾಳಮೇಳವಿರಬೇಕಾದರೆ ಅವೆರಡೂ ಒಬ್ಬನವೇ ಇರಬಹುದೆಂಬ ಅನುಮಾನವುಂಟಾದರೆ ಆಶ್ಚರ್ಯವೇನು?

ಬಸವಣ್ಣನವರು ತಮ್ಮಂತರಂಗದಲ್ಲಿ ಥಳಕಿಸಿದ ಮಿಂಚಿನ ಶಲಾಕೆಯನ್ನು ಮೂರುವಿಧದಲ್ಲಿ ಕಂಡರೇನೋ, ಬರಹ. ಉಲುಹು, ಆಕಾರ (ಮಾದರಿ) ಈ ಮೂರರಲ್ಲಿ ಮೂರರ್ಥಕೊಡುವ ಒಂದೇ ಶಬ್ದ ಅಂದರೆ 'ದ' ಕಂಡಂತಿದೆ ಆ ಶಬ್ದದ ಮೂರರ್ಥಗಳಾದ ದಯೆ, ದಾನ ದಮನಗಳನ್ನು ತಮ್ಮ ತ್ರಿವಿಧ ಪ್ರಕೃತಿಗಳಿಗೆ ದೊರೆತ ಪಾಠವೆಂದು ಗೃಹಿಸಿದರು. "ದಯೆಯೇ ಧರ್ಮದ ಮೂಲವಯ್ಯ" ಎಂದು ಮಾನವನೊಳಗಿನ ಆಸುರಿಕ ಶಕ್ತಿಗೆ ತಾಳ ಕಲಿಸಿದರು. ಗುರುವಿಗೆ ತನು ಲಿಂಗಕ್ಕೆ ಮನ, ಜಂಗಮಕ್ಕೆ ಧನ ನೀಡಬೇಕೆಂದು ತಾನು ತನ್ನದೆನ್ನುವ ಮಾನವ ಸ್ವಭಾವಕ್ಕೆ ಹೆಜ್ಜೆ ಹಿಡಿಸಿದರು. "ಛಲಬೇಕು ಶರಣಂಗೆ ಪರಸತಿಯನೊಲ್ಲೆಂಬ ಛಲಬೇಕು ಶರಣಂಗೆ ಪರಧನವನೊಲ್ಲೆಂಬ" ಎಂದು ಇಂದ್ರಿಯೇಂದ್ರ ಬುದ್ಧಿಯ ದೇವತಾಗುಣಕ್ಕೆ ಪದ್ಯವನ್ನು ಹೇಳಿಕೊಟ್ಟರು.

ಈ ಮೂರರ ಸೂತ್ರವನ್ನೇ ಶ್ರೀ ಅರವಿಂದರ ಪರಿಭಾಷೆಯಲ್ಲಿ ಸಂಕಲ್ಪ, ತ್ಯಾಗ, ಸಮರ್ಪಣ ಎಂದು ಹೇಳಬಹುದು. "ಪರಮಾತ್ಮನಿಗೆ ನಮ್ಮನ್ನು ನಾವು ಅದಾವ ಪ್ರಮಾಣದಲ್ಲಿ ನೀಡಿಕೊಳ್ಳುವೆವೋ ಆ ಪ್ರಮಾಣದಲ್ಲಿ ಆತನು ತನ್ನನ್ನು ನಮಗೆ ಕೊಟ್ಟುಕೊಳ್ಳುತ್ತಾನೆ. ನಾವು ನಮ್ಮನ್ನು ಇಡಿಯಾಗಿ ಒಪ್ಪಿಸಿದರೆ, ಆತನು ತನ್ನನ್ನು ನಮಗೆ ಇಡಿಯಾಗಿ ಕೊಟ್ಟುಬಿಡುತ್ತಾನೆ". ಎಂದು ಹೇಳುವ ಶ್ರೀಅರವಿಂದರ ಯೋಗಕ್ಕೆ ಸಮರ್ಪಣವೇ ಜೀವಾಳವಾಗಿದೆ.*

"ಎತ್ತ ನೋಡಿದಡತ್ತ ನೀನೇ ದೇವಾ" ಎಂಬ ಕಾಣ್ಕೆಯುಳ್ಳ ಬಸವಣ್ಣನವರು ಗುರು–ಲಿಂಗ–ಜಂಗಮ ರೂಪದಲ್ಲಿರುವ ಪರಮಾತ್ಮನಿಗೆ ತನುಮನಧನಗಳನ್ನು ಅರ್ಪಿಸಬೇಕೆಂದು ಹೇಳುತ್ತಾರೆ. ಲೋಕದಲ್ಲಿ ಮತ್ತಾರೂ ಭಕ್ತರಿರದೆ ತಾನೊಬ್ಬನೇ ಭಕ್ತನೆಂದೂ, ಉಳಿದವರೆಲ್ಲ ಕೂಡಲಸಂಗನ ಸ್ವರೂಪರೇ ಎಂದೂ ಬಗೆದ ಬಸವಣ್ಣನವರಿಗೆ ಸಮರ್ಪಣವೆಂದರೆ ಸಹಜ ಸ್ವಾಭಾವಿಕ ವೃತ್ತಿ. ಕಾಡುವ ಬೇಡುವ ಜಂಗಮರನ್ನು ಕಳುಹೆಂದು ಅವರು ದೇವರನ್ನು ಪ್ರಾರ್ಥಿಸುತ್ತಿದ್ದರು.

ಇಬ್ಬರಿಗೂ ಪರಮಾತ್ಮನೇ ಈಪ್ಸಿತವಸ್ತು. ಹಲವು ಬೇಡಿದರಿಲ್ಲವೆಂದು ಬಸವಣ್ಣ

ಹೇಳಿದಂತೆ ಶ್ರೀ ಅರವಿಂದರು, "ನನಗೆ ಪರಮಾತ್ಮನೇ ಬೇಕು. ನಾನು ಇನ್ನಾವುದನ್ನೂ ಬೇಡಲಾರೆ" ಎಂಬ ಛಲ ತೊಟ್ಟರು. ಕಾಯ ಮಾತೆಯಾಗಿ ಜೀವಪಿತನಾಗಿ ಕೂಡಲಸಂಗಮದೇವನಂತಪ್ಪ ಮಗನು ಹುಟ್ಟಿದರೆ ಸ್ವರ್ಗವೇತಕ್ಕೆ ಮೋಕ್ಷವೇತಕ್ಕೆ" ಎಂಬುದು ಬಸವಣ್ಣನವರ ಒಲವಾದರೆ, "ಪರಮಾತ್ಮನು ನಮ್ಮಾಶೆಗೆ ಜನಿಸಿದ ಕೂಸು." ಎಂಬುದು ಶ್ರೀ ಅರವಿಂದರ ನಿಲುವಾಗಿದೆ. ಮಗು ಮಾನವನ ತಂದೆಯೆನ್ನುವುದರಲ್ಲಿ ಇದೇ ಅರ್ಥವಿರಬಹುದು. "ಕೂಡಲಸಂಗಮ ದೇವಾ, ನೀನೆನಗೆ ಚಿಕ್ಕ ತಮ್ಮ" ಎಂದಿದ್ದಾರೆ ಬಸವಣ್ಣನವರು ಬಗೆ ತುಂಬಿ!

ಪರಮಾತ್ಮ ಪ್ರಾಪ್ತಿಯೇ ಉದ್ದೇಶವಾದ ಬಳಿಕ ಅದನ್ನು ಸಾಧಿಸುವುದಕ್ಕೆ ದಾರಿಯಾವುದು? "ತಾಯಿ ನೀನು, ತಂದೆ ನೀನು, ಬಂಧು ನೀನು, ಬಳಗ ನೀನು. ಎನಗೆ ನಿಮ್ಮ ಹೊರತು ಇನ್ನಾರೂ ಇಲ್ಲವಯ್ಯ, ಹಾಲಲದ್ದು, ನೀರಲದ್ದು ಎನ್ನುವ ಬಸವವಾಣಿಯಲ್ಲಿ ಪರಮಾತ್ಮ ಶ್ರದ್ಧೆ–ಆತ್ಮಸಮರ್ಪಣದ ತವಕಗಳು ಸ್ಪಷ್ಟಗೊಂಡಿವೆ. ಅದರಂತೆ ಶ್ರೀ ಅರವಿಂದರು ತಾವು ಅನುಸರಿಸಿದ ಸಾಧನವನ್ನು ಮಾರ್ಗವನ್ನು ಕುರಿತು ಹೇಳುವರು. "ಪರಮಾತ್ಮನ ಮೇಲೆ ವಿಶ್ವಾಸ–ಭರವಸೆಗಳನ್ನಿಟ್ಟು ಹೆಚ್ಚು ಹೆಚ್ಚು ಆತ್ಮದಾನ ಮಾಡುವುದೇ ಸಾಧನಕ್ಕೆ ವಾಸ್ತವಿಕ ಸಿದ್ಧಾಂತವಾಗಿದೆ. ನಾನು ಅದನ್ನೇ ಅನುಸರಿಸಿದೆ. ಯಾವುದಕ್ಕೆ ನಾನು ಯೋಗವೆಂದು ಹೇಳುವೆನೋ ಆ ಯೋಗದ ಪ್ರಮುಖ ಪದ್ಧತಿ ಇದೇ ಆಗಿದೆ."

ಬಸವಣ್ಣನವರ ಶಿವಯೋಗಕ್ಕೂ ಶ್ರೀ ಅರವಿಂದರ ಪೂರ್ಣಯೋಗಕ್ಕೂ ಭಕ್ತಿಮಾರ್ಗವೇ ಸಹಜ ದಾರಿಯೆನಿಸಿದೆ. ತಪಸ್ಸಿನ ದಾರಿಗಿಂತ ಭಕ್ತಿಮಾರ್ಗವೇ ಸುಗಮದೆಂದಿದ್ದಾರೆ ಶ್ರೀ ಅರವಿಂದರು. ಭಕ್ತಿಮಾರ್ಗವು ಹೋಗುತ್ತ ಕೊರೆಯುವ ಬರುತ್ತ ಕೊರೆಯುವ ಕರಗಸದಂತಿದೆಯೆಂದರೂ ಬಸವಣ್ಣನವರಿಗೆ ಅದು ಸ್ವಾಭಾವಿಕ ಧರ್ಮವಾಯಿತು, ಸುಗಮ–ಸುಲಭ ಮಾರ್ಗವೇ ಕರಗಸವೆನಿಸಿದರೆ, ಹೇಳಿ ಕೇಳಿ ಕಠಿಣವಾದ ತಪಸ್ಸಿನ ಮಾರ್ಗವು ಅದೆಷ್ಟು ಕರ್ಕಶವಾಗಿರಬೇಡ? ಭಕ್ತಿಮಾರ್ಗದಲ್ಲಿ ತನ್ನ ತಾನರಿಯುವ ಕಳೆಯು ಮೈಗೊಳ್ಳುತ್ತದೆ. "ಅರಿತರೆ ಶರಣ ಮರೆತರೆ ಮಾನವ" ಎನ್ನುವ ಮಾತಿನಲ್ಲಿ ತನ್ನ ತಾನರಿಯುವ ಹೆಜ್ಜೆ ಮೂಡಿದೆ. "ಅನು ನಿಮ್ಮ ಹಾರೆನು ಮಾನವರ ಬೇಡೆನು. ಆಣೆ ನಿಮ್ಮಾಣೆ" ಎಂಬ ಬಸವಣ್ಣನವರಿಗೆ ತನ್ನ ತಾನರಿಯುವುದರಲ್ಲಿ ಮಹಾಪ್ರಯೋಜನವಿದೆಯೆನ್ನುವುದು ಮನಗಂಡ ಮಾತಾಗಿತ್ತು. ಶ್ರೀ ಅರವಿಂದರು ಹೇಳುವಂತೆ "ಹೃತ್‌ಪುರುಷರಿಂದ ಪರಮಾತ್ಮನ ಪಥಪ್ರದರ್ಶನ ಪಡೆಯಬೇಕಾಗಿರುವುದರಿಂದ ತನ್ನತಾನರಿಯುವ ದಾರಿ ಅನಿವಾರ್ಯವಾಗಿದೆ.

ಶ್ರದ್ಧೆಯಿಂದ ಪರಮಾತ್ಮನಿಗೆ ತನ್ನನ್ನು ತಾನು ಅರ್ಪಿಸಿಕೊಳ್ಳುವವನು, ಯಾವ ಕರಾರುಗಳನ್ನೂ ಮುಂದೊಡ್ಡಬಾರದೆಂಬ ವಿಚಾರವು ಇಬ್ಬರಿಗೂ ಮಾನ್ಯವಿದೆ. ಇಂಥ ಅವಧಿಯೊಳಗಾಗಿ ಸಿದ್ಧಿಕೈಗೊಡಬೇಕೆಂದಾಗಲಿ, ಸಿದ್ಧಿಯೆಂಬುದು ಇಂಥದೇ ಇರಬೇಕೆಂದಾಗಲಿ ಕಟ್ಟಳೆಯೊಡ್ಡುವುದು ಬೇಡ, ತಾನೊಂದು ಬೇಡಿದರೆ ದೈವವೊಂದು ಕೊಟ್ಟಿತೆಂದು ಕೊರಗುವುದಾಗಲಿ, ಸುರಕ್ಷಿತವೆಂದು ಪರಮಾತ್ಮನನ್ನು ಮೊರೆಹೊಕ್ಕರೆ ಅವನು ಸಂಕಟಗಳನ್ನು ಒಡ್ಡಬೇಕೇ ಎಂದು ಮರುಗುವದಾಗಲಿ ಬೇಡವೇ ಬೇಡ. ಬಸವಣ್ಣನವರ "ಹಾಲಲದ್ದು, ನೀರಲದ್ದು" ಎಂಬ ಮಾತಿನಲ್ಲಿ ಕಾಲನಿಯಮ ಸಿದ್ಧಿನಿಯಮ ಬೇಡವೆನ್ನುವುದು ಸ್ಪಷ್ಟವಿದೆ. ಅದರಂತೆ "ನಾಳೆ ಬಪ್ಪುದು ನಮಗಿಂದೇ ಬರಲಿ, ಇಂದು

ಬಪ್ಪುದು ನಮಗೀಗಲೇ ಬರಲಿ ಇದಕಾರು ಅಂಜುವರು ಇದಕಾರಳುಕುವರು? ಉರಿ ಬರಲಿ ಸಿರಿ ಬರಲಿ, ಕೊಲುವೆನೆಂಬ ಭಾಷೆ ದೇವನದು ಗೆಲುವೆನೆಂಬ ಭಾಷೆ ಭಕ್ತನದು. ಸತ್ಯವೆಂಬ ಕೊರಲಗನೇ ತಳೆದು ಸದ್ಭಕ್ತರು ಗೆದ್ದರು, ಕೂಡಲಸಂಗಮ ಬಂದಾನೋ ಇಲ್ಲವೋ ಎಂಬ ಚಿಂತೆ ಹಾಸಲುಂಟು, ಹೊದೆಯಲುಂಟು" ಈ ಅರ್ಥವು ಶ್ರೀ ಅರವಿಂದರ ವಾಣಿಯಲ್ಲಿ ಇನ್ನೂ ಸ್ಪಷ್ಟವಾಗಿದೆ– "ನನ್ನ ಹೊತ್ತಿಗೆ, ನನ್ನ ಪದ್ಧತಿಯಿಂದ ಆಗಲೆಂಬ ಹಟವಿಲ್ಲ. ಆತನಿಚ್ಛೆಯನ್ನು ಸ್ವೀಕರಿಸುವೆನು. ಸರ್ವಸಂಕಟಗಳನ್ನು ಎದುರಿಸಿ ದಾಟುವೆನು"

ಹೊತ್ತು ಗೊತ್ತಿಲ್ಲ; ಅಂಥದೋ ಇಂಥದೋ ಭರವಸೆಯಿಲ್ಲ; ಸಂಕಟ ಪರಂಪರೆ ತಪ್ಪಿದ್ದಲ್ಲ ಎಂಬ ಕಟ್ಟುಪಾಡುಗಳಿಂದ ಮಾತಿನಲ್ಲಿ ಪ್ರಾಮಾಣಿಕತೆಯ ಸುಳುಹು ಸಹ ಗೋಚರಿಸದೆಂದು ಶಂಕಿಸಲು ಅವಕಾಶವಿದೆ. ಅಂಥವರಿಗೆ ಬಸವಣ್ಣನವರು ಹೇಳಿದ್ದೇನೆಂದರೆ "ಹೊಲಬುಗೊಂಡು ಅರಸಬೇಡ, ಬಿಲಿತು ತರಬೇಡ, ಒಲಿದು ಒಮ್ಮೆ ಶಿವಶರಣರೆನ್ನಿರಯ್ಯ, ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ. ಕೋಡಂಗಿ ಮಾಟವನಾಡಿದ ಭಕ್ತಂಗೆ ಬೇಡಿತನೀವ ನಮ್ಮ ಕೂಡಲಸಂಗಮದೇವ" ಅರಭರವಸೆಯಲ್ಲಿಯೂ ಶ್ರದ್ಧೆ ಅಚ್ಚಳಿಯದೆ ಇರಬೇಕಷ್ಟೇ– ಶ್ರೀ ಅರವಿಂದರ ವಾಣಿಯಿದು.

"ಮನುಷ್ಯರು, ಪರಮಾತ್ಮನ ಬಳಿಗೆ ಹೋಗಬಲ್ಲ ಸಾಧನ ಪದ್ಧತಿಗಳು ಅವೆಷ್ಟೋ ಇವೆ. ಆದರೆ ನಾನು ತಿಳಿದಮಟ್ಟಿಗೆ ಸಮರ್ಪಣ ಮಾರ್ಗವೇ ಏಕಮಾತ್ರ ಉಪಾಯವೆನಿಸಿದೆ. ಅದರಿಂದ ಪ್ರಕೃತಿಯಸಿದ್ಧತೆಯಾಗಿಬಿಡುವ ಮೊದಲೇ ಪರಮಾತ್ಮನು ಸಾಧನದ ಭಾರವನ್ನು ತನ್ನ ತಲೆಯ ಮೇಲೆ ವಹಿಸಿದ್ದಾನೆಂದು ಕಂಡುಬರುವದು".

ಸಾಧನಮಾರ್ಗದಲ್ಲಿ ಸಂಕಟಗಳೆಂದರೆ ಅದೈವೀಶಕ್ತಿಗಳ ಅಡೆತಡೆ. ಕಾಮಕ್ರೋಧಾದಿಗಳೇ ಅದೈವೀ ಶಕ್ತಿಗಳು. ಅವು ಹೊರಗಿನಿಂದ ಬಂದು ನಮ್ಮಲ್ಲಿ ನುಸುಳಿ ದಾಳಿ ಮಾಡುವವೆಂದೂ, ಹೊರಗಿನಿಂದ ಬಂದವುಗಳಾದ್ದರಿಂದ ಅವುಗಳನ್ನು ಹೊರದೂಡುವುದು ಸಹಜಸಾಧ್ಯವೆಂದೂ ಶ್ರೀ ಅರವಿಂದರು ಧೈರ್ಯಗೊಡುತ್ತಾರೆ, ಆದರೆ ಷಡ್ರಿಪುಗಳನ್ನು ಬಲವಂತವಾಗಿ ಹೊರದೂಡುವುದು ಸಾಧ್ಯವಿಲ್ಲವೆಂದೂ, ಹಾಗೆ ಮಾಡುವುದಕ್ಕೆ ದೈವೀಶಕ್ತಿಯ ನೆರವು ಅಗತ್ಯವೆಂದೂ ಸಲಹೆ ನೀಡುತ್ತಾರೆ. ಅಲ್ಲದೆ ಅವು ಸಾಧಕನಿಗೆ ಬೇಡವೆನಿಸಿದಲ್ಲಿ ಮಾತ್ರ ದೈವೀಶಕ್ತಿಯು ಸುಲಭವಾಗಿ ಹೊರದೂಡಬಲ್ಲದೆಂದು ಭರವಸೆಕೊಡುತ್ತಾರೆ. ಶ್ರೀ ಅರವಿಂದರಿತ್ತ ಧೈರ್ಯ, ಸಲಹೆ, ಭರವಸೆಗಳ ಅರ್ಥವನ್ನೆಲ್ಲ ಬಸವಣ್ಣನವರು ಒಂದೇ ವಾಕ್ಯದಲ್ಲಿ ಅಚ್ಚೊತ್ತುವಂತೆ ಮಾಡಿದ್ದಾರೆ. ""ಒಲ್ಲೆನೆಂಬುದೇ ವೈರಾಗ್ಯ ಒಲಿವೆನೆಂಬುದೇ ಕಾಯಗುಣ".

ಮನೆಯೊಳಗಿನ ಮನೆಯೊಡೆಯನು ಮೈಮರೆತರೆ ಸಂಧಿಸಾಧಿಸಿ ಹೊರಗಿನ ಹುಡಿ ಕಸಗಳು ದಾಳಿಯಿಟ್ಟು ತೂರಿಬಂದು ಸೂರೆಗೊಂಡಾಗ ಮನೆಯೊಳಗೆ ಮನೆಯೊಡೆಯನು ಇರುವನೋ ಇಲ್ಲವೋ ಎನ್ನುವಂತಾಗುತ್ತದೆ. ಹುಡಿ ಕಸಗಳು ಮನೆಯ ಬದುಕಲ್ಲ. ಹೊರಗಿನಿಂದ ನುಸುಳಿ ಬಂದ ಕೆಡುಕು. ಹೊರಗಿನಿಂದ ಬಂದವುಗಳು ಹೊರಬಿದ್ದು ಹೋಗುವುದು ಅಸಾಧ್ಯವೇನಲ್ಲ. ಆತ್ಮಸಮರ್ಪಣವೇ ಏಕಮಾತ್ರ ಉಪಾಯವಾದ ಸಾಧನ ಮಾರ್ಗದಲ್ಲಿ 'ಪ್ರಕೃತಿಯು ಸಿದ್ಧತೆಯಾಗಿ ಬಿಡುವ ಮೊದಲೇ ಪರಮಾತ್ಮನು ಸಾಧನಭಾರವನ್ನು ತನ್ನ ತಲೆಯ ಮೇಲೆ ವಹಿಸಿದ್ದು ಕಂಡುಬರುತ್ತದೆ" ಎಂದು

ಶ್ರೀ ಅರವಿಂದರೂ "ಒಲ್ಲೆನೆಂಬುದೇ ವೈರಾಗ್ಯ ಎಂದ ಬಸವಣ್ಣನವರೂ ಹೇಳಿ, ಷಡ್ರಿಪುಗಳನ್ನು ಗೆಲ್ಲುವುದು ಸಾಧ್ಯವೆಂಬುದನ್ನು ಮನಗಾಣಿಸಿದ್ದಾರೆ.

"ಇವನಾರಿವ, ಇವನಾರಿವ ಎನಿಸದೆ, ಇವನಮ್ಮವ ಇವನಮ್ಮವ" ಎಂದು ದೇವನು ಮೊದಲಿಗೆ ಒಪ್ಪಿಕೊಂಡರೆ, ಮುಂದಿನದೆಲ್ಲ ಅನುಷಂಗಿಕವಾಗಿ ಸಂಗಳಿಸುವದು. ಆದಿಯಲ್ಲಿ ಶಿವಬೀಜವಿಲ್ಲದವನಿಗೆ ವೇದ್ಯವಾಗದು ಶಿವಜ್ಞಾನ ಎಂದು ಹೇಳಿ, "ಹರಬೀಜವಪ್ಪರೆ ಹಂದೆ ತಾನೊಪ್ಪನೇ" ಎಂದು ಬಸವಣ್ಣನವರು ಕೇಳುತ್ತಾರೆ. "ನಾನು ನಿಮ್ಮಬಲ್ಲೆ. ನೀವು ನನ್ನ ಅರಿಯಿರಿ" ಎಂದು ಮೊದಲಿಗೆ ಅನಿಸಿದರೂ, "ನೀನೊಲಿದವನೇ ನಿಮ್ಮನರಿವನು" ಎಂಬುದು ಹಿಂದಿನಿಂದ ಗೊತ್ತಾಗುತ್ತದೆ. ಪರಮಾತ್ಮನು ನಮ್ಮನ್ನು ನೆನಪಿಸಿಕೊಳ್ಳುವವರೆಗೆ ಬಸವಣ್ಣನವರು ಹೇಳಿದಂತೆ, "ನೀನಿರಿಸಿದಲ್ಲಿ ಇರದೆ, ನೀನುಡಿಸಿದಲ್ಲಿ ನುಡಿಯದೆ ಇರಲು ಎನ್ನಳವೇ ಅಯ್ಯ" ಅನ್ನಬೇಕಾಗುವದು. "ನೀನೊಲಿಸಿದವನೇ ನಿಮ್ಮನರಿವನು" ಎಂಬ ಬಸವವಾಣಿಯನ್ನು, "ಪರಮಾತ್ಮನು ನಮ್ಮನ್ನು ಸ್ಮರಿಸಿದಾಗಲೇ ನಮಗಾತನ ಸ್ಮರಣೆ ಆಗುವುದು" ಎಂಬ ಅರವಿಂದವಾಣಿಯೊಡನೆ ತೂಗಿ ನೋಡಬೇಕು.

ನಾವು ಬಂಧಿತರೆಂಬ ಭ್ರಾಂತಿಯು ಆವರಿಸಿರುವವರೆಗೆ ನಾವು ಪಾಪಿಗಳೋ ಕೋಪಿಗಳೋ ಎನಿಸುತ್ತೇವೆ. ಹಾಗೆನಿಸುವುದು ಕಾಲ್ಪನಿಕವಾದ್ದರಿಂದ ಕಾಲ್ಪನಿಕೋಪಾಯ ದಿಂದಲೇ ಆ ಭ್ರಾಂತಿಯನ್ನು ತಳ್ಳಬೇಕಾಗುತ್ತದೆ. ತಾನು ಪಾಪಿಯೆಂದೋ ಕೋಪಿಯಂದೋ ಸಂಶಯಗ್ರಸ್ತನಾದವನಿಗೆ ಬಸವಣ್ಣನವರು ಹೇಳಿದರು "ಎಲವೋ ಪಾಪಕರ್ಮವ ಮಾಡಿದವನೇ, ಎಲವೋ ಬ್ರಹ್ಮಹತ್ಯವಮಾಡಿದವನೇ, ಒಮ್ಮೆ ಒಲಿದು ಶರಣೆನ್ನಲವೋ, ಒಮ್ಮೆ ಶರಣೆಂದರೆ ಪಾಪಕರ್ಮ ಓಡುವವು". ಹೀಗೆ ಮನ ಪಂಚೇಂದ್ರಿಯಗಳ ಮುಖವನ್ನು ಹೊರಳಿಸಿಬಿಟ್ಟರೆ ನಾವು ಪಾಪಿಗಳೂ ಅಲ್ಲ, ಕೋಪಿಗಳು ಅಲ್ಲ. ಇನ್ನಾವ ವಿಧದಲ್ಲಿ ಬಂಧಿತರೂ ಅಲ್ಲ. ಶುದ್ಧ ಮುಕ್ತರು, ಪರಿಶುದ್ಧ ಮುಕ್ತಾತ್ಮರು, ಅವರು ಪರಮಾತ್ಮನನ್ನು ನೆನೆಯಲಾರರು. ಬಸವಣ್ಣನವರಂತೆ. "ತನು ಅಲ್ಲಮನಲ್ಲಿ, ಮನ ಚೆನ್ನಬಸವಣ್ಣನಲ್ಲಿ ಸಿಲುಕಿತ್ತು. ನಾನೇತರಲ್ಲಿ ನೆನೆವೆ!" ಎಂದು ಕೇಳುತ್ತಾರೆ. ಯಾಕೆಂದರೆ ಅವರ ಮನ ಪಂಚೇಂದ್ರಿಯ ಮುಖವೇ ಹೊರಳಿನಿಂತಿದೆ. "ಎನ್ನ ಮನ ಪಂಚೇಂದ್ರಿಯ ನಿಮ್ಮತ್ತವಾದರೆ, ತನ್ನತ್ತ ಮಾಡುವ ಕೂಡಲ ಸಂಗಯ್ಯ, ಅದರಂತೆ ಶ್ರೀ ಅರವಿಂದರು "ನಾವು ಬಂಧಿತರಲ್ಲ, ನಿತ್ಯ ಮುಕ್ತರು. ಬಂಧಿತರಂತೆ ನಟಿಸುತ್ತಿದ್ದೇವೆ" ಎಂದು ಹೇಳಿದ್ದಾರಲ್ಲದೇ "ನಾವು ನಿತ್ಯಮುಕ್ತರೆನ್ನುವುದೇ ಪೂರ್ಣಯೋಗ ಸಾಧನೆಗೆ ಮೊದಲ ಮೆಟ್ಟುಗಲ್ಲು" ಎಂದಿದ್ದಾರೆ.

"ಭಕ್ತಿಯೆಂಬ ಮೃಗ ಅಟ್ಟಿ ಬಂದು ನುಂಗಿ ಹಾಕಿದ ಬಳಿಕ ಕೂಡಲಸಂಗಮ ದೇವನನ್ನು ಪೂಜಿಸುವ ಹೊಣೆಯುಳಿಯುದು" ಎನ್ನುತ್ತಾರೆ ಬಸವಣ್ಣ. ಬಂಧನ ತಪ್ಪಿತು ಅಂದಾಗ ಮುಕ್ತರೇ ಅಲ್ಲವೇ? ಮುಕ್ತರಿಗೆ ಪೂಜೆಯೇಕೆ, ಪುರಸ್ಕಾರವೇಕೆ? ಕಾಯಕವೊಂದಿದ್ದರೆ ಸಾಕು.

ಕಾಯಕದಲ್ಲಿ ನಿರತನಾದರೆ ಗುರುದರ್ಶನವನ್ನಾದರೂ ಮರೆಯಬೇಕು. ಲಿಂಗ ಪೂಜೆಯನ್ನಾದರೂ ತೊರೆಯಬೇಕು ಎಂಬ ಭಾವನೆಯ ಹಿನ್ನೆಲೆಯಲ್ಲಿ ಬಸವಣ್ಣನವರ ಕಾಯಕದ ವಿಶಾಲತೆಯಿದೆ. ಕಾಯದ ಕಳವಳಕ್ಕಾಗಿ ಕಾಯಯ್ಯ ಅನ್ನುವುದಾಗಲಿ, ಜೀವನೋಪಾಯಕ್ಕೆ ಈಯಯ್ಯ ಎನ್ನುವುದಾಗಲಿ ಅವರ ಕಾಯಕದ ಉದ್ದೇಶವಲ್ಲ. "ಸಲೆ ಕೈ ಕೂಲಿಯನ್ನಾದರೂ ಮಾಡಿ ನಿಮ್ಮ ನಿಲುವಿಂಗೆ ದುಡಿಯುವೆ ಎನ್ನುವ ಹಿರಿಮೆಯನ್ನು

ಅನುಸರಿಸಿಕೊಂಡಿದೆ. ಶ್ರೀ ಅರವಿಂದರಾದರೋ "ಪರಮಾತ್ಮನ ಸಲುವಾಗಿ ಮಾಡುವ ಕರ್ಮವೆಂದರೆ ದೇಹದಿಂದ ಮಾಡುವ ಪ್ರಾರ್ಥನೆ" ಎಂದು ತಿಳಿಯುತ್ತಾರೆ. ಅಲ್ಲದೆ, ಜೀವನವನ್ನು ಆನಂದ ಭೋಗ ಎಂದು ಬಗೆದು, ವಹಿಸಿದ ಪಾತ್ರವನ್ನು ತೃಪ್ತಿಕರವಾಗಿ ನಿರ್ವಹಿಸಲು ಅಣಿಯಾಗಬೇಕೆನ್ನುತ್ತಾರೆ.

"ಆಳಾದರೇನು ಅರಸಾದರೇನು ಆನಂದಭೋಗದಲ್ಲಿ
ಬಾಳಾದರೇನು ಹಾಳಾದರೇನು ಈ ಪೂರ್ಣಯೋಗದಲ್ಲಿ"

ಬಸವಣ್ಣನವರ ಪಾಲಿಗೆ ಬದುಕು ನಿಚ್ಚಶಿವರಾತ್ರಿ, ಮರಣ ಮಾನವಮಿ, ಆಯುಷ್ಯ ತೀರಿದಲ್ಲದೆ ಮರಣವಿಲ್ಲವೆನ್ನುವುದು ಅವರ ದೃಢವಿಶ್ವಾಸ, ಮರಣದ ಮಾವಮಿಗೆ ಸೀಮೋಲ್ಲಂಘನ ಮಾಡಿದರೆ ಮರುದಿನವೇ ದಸರೆಯ ಹಬ್ಬವೆನ್ನುವುದನ್ನು ಮರೆಯಲಾರರು. ಶ್ರೀ ಅರವಿಂದರು ಮರಣವೆಂದರೆ ಸಾವೆನ್ನುವವರಲ್ಲ ದೇಹತ್ಯಾಗವೆಂದವರು. ದೇಹತ್ಯಾಗ ವೆಂದರೆ ಮೈಮೇಲಿನ ಬಟ್ಟೆ ಕಳಚಿ ಬಿಟ್ಟು ಸ್ನಾನಕ್ಕಾಗಿ ನೀರ ಮಡುವಿಗೆ ಇಳಿದಂತೆ.

ಕೂಡಲಸಂಗಮ ದೇವನ ನಿಲುವಿಗಾಗಿ ದುಡಿಯುವ ಬಸವಣ್ಣನವರಿಗೆ ಕಾಯಕವು ಬೆಲೆಯುಳ್ಳ ಬದುಕು ಆದಂತೆ, ಕಾಯವು ದೇವಮಂದಿರವಾಗಿದೆ. ಮೂತ್ರದ ಕುಡಿಕೆ– ಅಮೇಧ್ಯದ ಹಡಿಕೆ ಅಲ್ಲ, "ನಿಮ್ಮಿಂದ ಅಧಿಕನಾದೆನಯ್ಯ" ಎಂದು ದೇವರನ್ನು ಅವರು ಆಹ್ವಾನಿಸುವದು ಕಾಯಕ ಭರವಸೆಯಿಂದಲೇ "ಕಾಲುಗಳೇ ಕಂಬ ದೇಹವೇ ದೇವಾಲಯ, ಶಿರವೇ ಹೊನ್ನ ಕಳಸ" ಎಂದು ಬಗೆದವರು; ಭಾವಿಸಿದವರು. ಶ್ರೀ ಅರವಿಂದರು ದೇಹವನ್ನು ಕುರಿತು ಹಾಡಿದ್ದೇನೆಂದರೆ–

"ನನ್ನ ದೇಹ ಸುಖಭರಿತ ದೇವನಾ ಪ್ರಾಣಪೂರ್ಣಯಂತ್ರ
ಬೃಹದ್ಭಾನುವಿನ ಅಮರ ಜ್ಯೋತಿ ಚೇತನವು ಆತ್ಮತಂತ್ರ"

ಪರಮೇಶ್ವರನ ಕೈಯಲ್ಲಿ ಪ್ರಾಮಾಣಿಕ ಹಾಗೂ ಸಬಲ ಉಪಕರಣವಾಗಿ ನಿಂತ ಬಸವಣ್ಣನವರು ಹೇಳಿದಂತೆ ಶರಣ ನಿದ್ದೆ ಗೈಯ್ದರೆ ಜಪ. ಶರಣನೆದ್ದು ಕುಳಿತರೆ ಶಿವರಾತ್ರಿ, ಶರಣ ನಡೆದುದೇ ಪಾವನ, ಶರಣ ನುಡಿದುದೇ ಶಿವತತ್ತ್ವ–ಆಗಿಬಿಡುವುದರಲ್ಲಿ ಸಂಶಯವಿಲ್ಲ. "ಇಡಿಯ ಜೀವನವೇ ಯೋಗ ಕ್ಷೇತ್ರ" ಎಂದು ಶ್ರೀ ಅರವಿಂದರು ಹೇಳಿದ್ದೂ ಅದೇ.

ನುಡಿಯೊಳಗಾಗಿ ನಡೆಯುವ ಶಕ್ತಿ ಬರುವುದು ಅಂಥವರಿಗೇ, ನುಡಿನಡೆಗಳು ಕೈಕೈ ಹಿಡಿದುಕೊಂಡೇ ಬರುವುದನ್ನು ಬಸವಣ್ಣನವರ ಬದುಕಿನಲ್ಲಿ ಕಾಣುವೆವು. ಅದೇ ಶಕ್ತಿಗೆ ಶ್ರೀ ಅರವಿಂದರು ಸಂಕಲ್ಪವೆಂದರು. ಸಂಕಲ್ಪದೊಡನೆ ಕ್ರಿಯೆ ಬೆಂಬಳಿಸಿಯೋ ಮುಂಬಳಸಿಯೋ ಬರುವುದು ನೆರಳಿನಂತೆ. "ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗ ಘಟಸರ್ಪ" ಎಂದು ಬಸವಣ್ಣನವರು ಹೇಳಿದರೆ, "ಮಾತು ಕಾರ್ಯಸಿದ್ಧತೆ, ಮೌನ ಪ್ರತ್ಯಕ್ಷ ಕಾರ್ಯ" ಎಂದು ಶ್ರೀ ಅರವಿಂದರು ಹೇಳಿದರು. ನುಡಿ ನಡೆಯಾಗಿ ಮಾರ್ಪಟ್ಟಾಗ ಕಾಯಕ ನಿರ್ವಹಣಕ್ಕೆ ಮೌನವೇ ಸಾಕೆಂದಂತೆ. "ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ. ಜಂಗಮವಿಕಾರಿಗೆ ಧನವಿಕಾರವೆಂಬುದಿಲ್ಲ. ಪ್ರಸಾದವಿಕಾರಿಗೆ ಮನವಿಕಾರವೆಂಬುದಿಲ್ಲ" ಎಂಬ ಬಸವ ವಾಣಿಯು, ಪರಮೇಶ್ವರನ ಕೈಯೊಳಗಿನ ಉಪಕರಣವು ಕ್ರಮವಾಗಿ ಆತನ ಅಂಗೋಪಾಂಗವಾಗಿ ಪರಿಣಮಿಸುವ ಸಂಧಿಕಾಲವನ್ನು ಸೂಚಿಸುತ್ತದೆ. ಅದರಂತೆ

ಶ್ರೀ ಅರವಿಂದರು ಹೇಳುವ–ಮಾತೃಶಕ್ತಿಯ ಉಪಕರಣದ ರೀತಿಯಲ್ಲಿ ತಮ್ಮನ್ನು ಪರಮೇಶ್ವರನ ಕಾರ್ಯಕ್ಕೆ ಅರ್ಪಿಸಿಕೊಂಡವನಿಗೆ, ಆ ಕಾರ್ಯವನ್ನು ಹೇಗೆ ಆರಂಭಿಸಬೇಕು, ಹೇಗೆ ಮುಂದುವರಿಸಬೇಕು, ಹೇಗೆ ಮುಗಿಸಬೇಕು– ಎನ್ನುವ ಸೂಚನೆ ಅಯೋಚಿತವಾಗಿ ಬರುವುದಲ್ಲದೆ, ದಿವ್ಯಸಂಕಲ್ಪದೊಡನೆ ಸಾಧಕನ ಸಂಕಲ್ಪ ಶಕ್ತಿಯು ಒಂದುಗೂಡಿ ಬೆರೆತೂ ಹೋಗುವದು. ಅಂದಾಗ ಸಾಧಕನೆಂದರೆ, ಪರಮಾತ್ಮ ವೃಕ್ಷದೊಡನೆ ಕಲಮಿ ಮಾವಿನ ಚಿಕ್ಕಗಿಡವೆಂದಂತಾಗಲಿಲ್ಲವೇ? "ಇಂತೀ ಸರ್ವಾಂಗ ತಲೆದೋಳೆದ ಕಾರಣ ಕೂಡಲ ಸಂಗಮದೇವನೆನ್ನ ಕೂಡಿಕೊಂಡನವ್ವ" ಎಂದು ಬಸವಣ್ಣನವರು ನುಡಿದ ನಿಲುಮೆಗೆ ಬಂದವರು ಶ್ರೀ ಅರವಿಂದರಂತೆ ಹೀಗೆ ಹಾಡಿಕೊಳ್ಳಬಹುದಾಗಿದೆ–

"ದೇಹದಾಸ ನಾನಲ್ಲವೆಂದಿಗೂ ಇನಿಸು ಇನ್ನು ಮೇಲೆ
ಪ್ರಕೃತಿ ಜೀತದಾಳಾಗಿ ದುಡಿಯೆ ನಾ ಬಿಟ್ಟೆ ಜಡದ ಶಾಲೆ".

ಸತ್ತಮೇಲಿನ ಮೋಕ್ಷವಾಗಲಿ, ಜೀವನ ಮರಣಗಳಿಂದ ಬಿಡುಗಡೆಯಾಗಲಿ ಸ್ವರ್ಗ ಕೈಲಾಸಗಳ ಪ್ರಾಪ್ತಿಯಾಗಲಿ ಬಸವಣ್ಣನವರಿಗೆ ಬೇಕಿರಲಿಲ್ಲ. "ನಿಮ್ಮ ನಿಮ್ಮ ಪದವಿ ನಿಮ್ಮ ತಲೆಗೆ ಸುತ್ತಿಕೊಳ್ಳಿ, ನಿಮ್ಮ ನಿಮ್ಮ ಪದವಿ ನಿಮ್ಮ ಕೊರಳಿಗೆ ಕಟ್ಟಿಕೊಳ್ಳಿ. ಎನಗೆ ಮೃತ್ಯುಲೋಕದ ಮಹಾಗಣಂಗಳುಂಟು. ಕೂಡಲಸಂಗಮದೇವರ ಲೋಕವ ಹಂಚಿಕೊಳ್ಳಿ ನಿಮನಿಮಗೆ" ಎಂದು ಬಿಟ್ಟರು. ತಿರುಗಿ ಕೇಳಿದರೆ, "ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದೊಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ ಎಂದು ಜೂಣಿಕೆತೊಟ್ಟರು. ಶ್ರೀ ಅರವಿಂದರಿಗೆ ಪದವಿಪಟ್ಟಿಗಳ ನೆನಪು ಸಹ ಬರುವುದಿಲ್ಲ. ಅವರಿಂದು ದೇಹ ಬಿಟ್ಟರೂ ತಾವು ವಹಿಸಿಕೊಂಡು ಬಂದ ಕೆಲಸ ಪೂರ್ತಿಯಾಗುವವರೆಗೆ ಪೃಥ್ವಿಯವಲಯವನ್ನು ಬಿಟ್ಟು ಕದಲುವದಿಲ್ಲವೆಂದು, ಶ್ರೀ ತಾಯಿಯವರಿಗೆ ಭರವಸೆ ನೀಡಿದ್ದುಂಟು. ಮತ್ತೆ ಮತ್ತೆ ಹುಟ್ಟಿಬರುವುದಕ್ಕೂ ಅವರು ಹಿಂಜರಿಯುವಂತಿಲ್ಲ. ಜಗತ್ತಿನಲ್ಲಿ ಯಾವುದೇ ಜ್ಞಾನದ ಅಗತ್ಯವಿದ್ದರೆ ಅಲ್ಲಲ್ಲಿ ನಾವು ಹಿಂದೆ ಅನೇಕ ಸಾರೆ ಬಂದಂತೆ, ಇನ್ನು ಮುಂದೆ ಸಹ ಜನ್ಮತೊಟ್ಟು ಬರಲು ಸಿದ್ಧರಿದ್ದೇವೆ" ಎಂಬ ಅವರ ಹೃದ್ಗತವನ್ನು ಶ್ರೀ ತಾಯಿಯವರು ಪ್ರಕಟಗೊಳಿಸಿದ್ದಾರೆ. ಅವರಿಬ್ಬರು ದೇಹಬಿಟ್ಟ ಚಾತುರ್ಯವನ್ನು ಬಗೆದರೆ ಅವರಾಡಿದ ಮಾತಿನಲ್ಲಿ ಇನ್ನೂ ಹೆಚ್ಚು ಅಗತ್ಯತೆ ಕಂಡುಬರುವದು.

ಸ್ವರ್ಗ ಕೈಲಾಸಗಳ ಜೀವವಿಮೆಯಿಳಿಸಿ, ತೊಂದರೆಪಟ್ಟು ಕಂತು ತುಂಬಿ, ಸತ್ತ ಬಳಿಕ ಪಾಲಿಸಿಯ ಹಣವನ್ನು ಪಡೆಯುವ ಜಾತಿಯು ಬಸವಣ್ಣನಿಗೆ ಬೇಕಿರಲಿಲ್ಲ. ಶ್ರೀ ಅರವಿಂದರಿಗೆ ಆ ಮಾತೇ ಹೊಂದದು, ಜೀವನವನ್ನೇ ಸ್ವರ್ಗವಾಗಿ ಮಾರ್ಪಡಿಸುವುದೂ ಬದುಕನ್ನೇ ಕೈಲಾಸದ ಅಂತಸ್ತಿಗೆ ಎತ್ತರಿಸುವುದೂ ಅವರಿಬ್ಬರ ಉದ್ದೇಶವಾಗಿದೆ. ಅಂತೆಯೇ "ಇಲ್ಲಿ ಸಲ್ಲುವವನು ಅಲ್ಲಿಯೂ ಸಲ್ಲುವನು" ಎಂದು ಬಸವಣ್ಣನವರು ಗಟ್ಟಿಸಿ ಹೇಳಿದ್ದಾರೆ. ಅಲ್ಲಿ ಸಲ್ಲಲಿ ಬಿಡಲಿ ಇಲ್ಲಿ ಮಾತ್ರ ಸಲ್ಲಲೇಬೇಕು ಎನ್ನುವ ಅರ್ಥದಲ್ಲಿ ಶ್ರೀ ಅರವಿಂದರು ದುಡಿದರು; ಪಡೆದರು; ಮಡಿದರು. ಅಮರರಾದರು. ಆ ಕಾರಣದಿಂದಲೇ ಅವರು ಜೀವನದಲ್ಲಿ ಯಾವುದನ್ನೂ ಅಲ್ಲಗಳೆಯದೆ, ಏತಕ್ಕೂ ಮೂದಲಿಸದೆ ಬಾಳನ್ನು ಶಾಶ್ವತವಾಗಿ ಮಾರ್ಪಡಿಸುವ ಉದ್ಯಮ ಕೈಕೊಂಡರು. ಬಸವಣ್ಣನವರು ಸಾಧನೆ ಮುಗಿಸಿ, ಕುಟಿಲವೆನಿಸುವ ರಾಜಕಾರಣದಲ್ಲಿಯೂ ಶಿವಯೋಗವನ್ನು ಸಾಧಿಸಿಕೊಂಡರು. ಶ್ರೀ ಅರವಿಂದರು

ಹೊಸಯುಗಕ್ಕೆ ತಕ್ಕಂತೆ ಭಾರತಭೂಮಿಯನ್ನು ಹದಗೊಳಿಸಿ ರಾಜಕಾರಣದ ಅಮೃತ ಬೀಜಗಳನ್ನು ಬಿತ್ತಿ ಮುಂದಿನ ಸಾಧನೆಗೆ ತೊಡಗಿದರು.

ದೇವನಾಜ್ಞೆಯಿಂದಲೇ ಬಸವಣ್ಣನವರು ಮಂತ್ರಿಪದ ತೊಟ್ಟರು. ದೇವ ಆಜ್ಞೆಯಿಂದಲೇ ಶ್ರೀ ಅರವಿಂದರು ಮುಕುಟರಹಿತ ರಾಷ್ಟ್ರೀಯ ಸಾಮ್ರಾಟ ಪದವನ್ನು ತೊಟ್ಟರು. ಅವರು ತಮ್ಮ ಜೀವನದ ನಾಟಕದಲ್ಲಿ ಪ್ರತಿನಾಯಕನಂತಿರುವ ಬಿಜ್ಜಳನನ್ನೂ ಕೂಡಲಸಂಗಮನೆಂದು ಬಗೆದು ಮನ್ನಿಸಿದರು. "ಆನೆ ಅಂಕುಶಕ್ಕಂಜುವುದೇ ಅಯ್ಯ, ಮಾಣದೆ ಸಿಂಹದ ನಖವೆಂದು ಅಂಜುವದಲ್ಲದೇ? ಆನೀ ಬಿಜ್ಜಳರಾಯಗಂಜುವೆನೇ ಅಯ್ಯ, ಕೂಡಲ ಸಂಗಮದೇವಾ ನೀನು ಸರ್ವಜೀವದಯಾಧಾರಿಯಾದ ಕಾರಣ ನಿನಗಂಜುವೆನಲ್ಲದೆ?' ಎಂದಿದ್ದಾರೆ. ಶ್ರೀ ಅರವಿಂದರಾದರೂ ತಮ್ಮನ್ನು ವೈರಿಯೆಂದು ಬಗೆದ ಬ್ರಿಟಿಷ ಸರಕಾರವನ್ನೂ, ಬ್ರಿಟಿಷ ಜನಾಂಗವನ್ನೂ ಆರ್ಯಋಷಿಗಳಂಥ ಪ್ರಭಾವಯುತರೆಂದು ಗೌರವಿಸಿದರು.

ಬಸವಣ್ಣನವರ ಹಾಗೂ ಶ್ರೀ ಅರವಿಂದರ ಜೀವನ, ಉಪದೇಶ, ಕಾರ್ಯ ವಿಸ್ತಾರ ಗಮನಿಸಿದರೆ ಅವರು ಬಂದ ಶತಮಾನ, ತೊಟ್ಟ ಹೆಸರು ಬೇರೆ ಬೇರೆಯಾಗಿದ್ದರೂ ಅವರಿಗೆ ಸಾಧನೆ ಒಂದೇ ಆಯಿತು. ಆದರೆ ಅವರ ಗುರಿ ಬೇರೆ ಬೇರೆಯೆಂದು ಒಪ್ಪಲೇಬೇಕು. ಭಕ್ತಿಮಾರ್ಗದಲ್ಲಿ ನಡೆದು ಅವರು ಶಿವಯೋಗ ಪೂರ್ಣಯೋಗ ಎಂಬ ಹೆಸರಿನಲ್ಲಿ ಜೀವನ ಯೋಗವನ್ನು ಸಾಧಿಸಿದರು. ಬಸವಣ್ಣನವರ ಸಿದ್ಧಿಯಿಂದ ಮರೆತ ಮಾನವಜಾತಿ ಅರಿತ ಶರಣ ಪಟ್ಟಕ್ಕೇರಲು ನೇರದಾರಿಯಾಯಿತು. ಶ್ರೀ ಅರವಿಂದರ ಸಿದ್ಧಿಯಿಂದ ಮಾನವನು ಅತಿಮಾನವನಾಗಲು ಸುಗಮವಾಯಿತು. ಅವರು ಕಂಡ ಘನಮನವೇ ಇವರು ಉಂಡ ಅತಿಮಾನಸವಾಗಿದೆ. ಅವರದು ಹೊಂದುವ ಮನ್ವಂತಿಕ, ಅವರು ಘನಮನದ ಬೀಗಮುದ್ರೆ ಮಾಡಿದರು. ಇವರು ಘನಮನದ ಬದುಕನ್ನು ದೋಚಿ ತಂದರು. ಹನ್ನೆರಡನೇ ಶತಮಾನದಲ್ಲಿ ಅಷ್ಟೇ ಸಾಕಾಗಿತ್ತು. ಇಪ್ಪತ್ತನೇ ಶತಮಾನದಲ್ಲಿ ಇಷ್ಟು ಬೇಕಾಗಿದೆ. ಅಂದಿನದು ಮಹಾನವಮಿ, ಇಂದಿನದು ದಸರೆ. "ಮಾನವನ ಹೃದಯವನೆ ಯೋಗ ಮಾಡಿ ಬರಲಿರುಹುದು ದೇವಜಾತಿ".

❐

ಬಸವಣ್ಣ : ಕುವೆಂಪು

●

ಡಾ. ಸೂರ್ಯಕಾಂತ ಸುಜ್ಯಾತ್

ಮನುಷ್ಯಬದುಕಿನಲ್ಲಿ ಸಮಾನತೆ, ಪ್ರೀತಿ, ಶಾಂತಿ, ಸಹನೆ, ಕರುಣೆ, ಸಹಬಾಳ್ವೆಗಳೆಲ್ಲ ತುಂಬಿ ಬದುಕು ಸುಂದರವಾಗಿ, ಸಂತೋಷದ ಆಗರವಾಗಿರುವಾಗ ಅದನ್ನು ಹದಗೆಡಿಸಿ ನೋಡುವ ಕೆಲ ಮನಸ್ಸುಗಳು ಹುಟ್ಟು ಪಡೆಯುತ್ತವೆ, ವಿಕೃತ ಸಂತೋಷ ಪಡೆದುಕೊಳ್ಳುತ್ತವೆ. ಹೀಗಿರುತ್ತ ಕಾಲ ಪಕ್ವವಾದಾಗ ಮತ್ತೆ ಸಮಾನತೆ, ಸೋದರತೆಯ, ಪ್ರೀತಿ ಕರುಣೆಯ ಶಾಂತಿಸಹನೆಯ ಅವಶ್ಯಕತೆಯ ಪೂರೈಕೆಗಾಗಿ ಮನುಷ್ಯರಲ್ಲಿಯೇ ವಿಶಿಷ್ಟರಾದವರನ್ನು, ವಿಭಿನ್ನ ಚಿಂತಕರನ್ನು ಕಾಲ ಸೃಷ್ಟಿಸುತ್ತದೆ. ಕಾಲದ ಕೂಸುಗಳಾದ ಇಂತಹವರು ತಮ್ಮ ಆಂತರಿಕ ಹಾಗೂ ಬಾಹ್ಯ ಅನುಭವಗಳಿಂದ ಪರಿಪಕ್ವಗೊಳ್ಳುತ್ತಾರೆ. ಇಂತಹವರ ಪರಿಪಕ್ವತೆಯೇ ವ್ಯವಸ್ಥೆಗೆ ಪ್ರಶ್ನೆಯಾಗುತ್ತದೆ, ಪ್ರತಿಭಟನೆಯಾಗುತ್ತದೆ. ಟೀಕೆ-ವಿಡಂಬನೆಯಾಗುತ್ತದೆ. ಸ್ಥಾಪಿತ ವ್ಯವಸ್ಥೆಯನ್ನು ಪರಿವರ್ತಿಸುವ ಅಸ್ತ್ರವಾಗುತ್ತದೆ.

ಹೀಗೆ ಅದುವೇ ತತ್ವ-ತತ್ವಜ್ಞಾನವಾಗುತ್ತದೆ, ಉಪದೇಶ-ವಚನಗಳಾಗುತ್ತವೆ. ಅಂತಹ ಕಾಲದ ಕೂಸುಗಳ ಈ ರೀತಿಯ ನುಡಿಗಳು-ಉಪದೇಶಗಳು ದೇಶಾತೀತ, ಕಾಲಾತೀತವಾಗುತ್ತವೆ. ಅಂತಹವರನ್ನೇ ವಿಶ್ವವಿಭೂತಿಗಳೆಂದು ಜನಮನ ಗೌರವಿಸುತ್ತದೆ, ಪೂಜಿಸುತ್ತದೆ. ಮೋಜೆಸ್, ಝುರತುಷ್ಟ್ರ, ಮಹಾವೀರ, ಬುದ್ಧ, ಏಸುಕ್ರಿಸ್ತ, ಪೈಗಂಬರ, ಬಸವಣ್ಣ, ಕಬೀರ, ನಾನಕ ಹೀಗೆ ಅನೇಕರನ್ನು ಹೆಸರಿಸಬಹುದು. ಇವರೆಲ್ಲ ಬಾಳಿ ಬದುಕಿದ ಕಾಲ ಬೇರೆಬೇರೆಯಾದರೂ ಅವರ ಚಿಂತನೆಗಳು, ಉಪದೇಶಗಳಲ್ಲಿ ಬಹಳಷ್ಟು ಸಾಮ್ಯತೆ ಇರುವುದು ಕಂಡುಬರುತ್ತದೆ. ಇಂತಹವರೆಲ್ಲ ವೈಚಾರಿಕತೆಯನ್ನೇ ಮುಖ್ಯವಾಗಿ ಬಳಸಿಕೊಂಡಿರುವುದು ಎದ್ದು ಕಾಣುತ್ತದೆ.

ಈಗಾಗಲೇ ಹಲವರು ಗುರುತಿಸಿರುವಂತೆ ಮೀರಾ-ಆಂಡಾಳ್, ಬುದ್ಧ-ಬಸವ, ಬಸವ-ಅಂಬೇಡ್ಕರ್, ಬಸವ-ಕಾರ್ಲ್‌ಮಾರ್ಕ್ಸ್, ಸರ್ವಜ್ಞ-ವೇಮನ, ಮಹಾದೇವಿಯಕ್ಕ-ಕಾರಿಕಾಲಮ್ಮೆ ಹೀಗೆ ಇನ್ನೂ ಅನೇಕ ಮಹಾತ್ಮರ ವೈಚಾರಿಕತೆಯಲ್ಲಿ ಸಾಮ್ಯತೆಯನ್ನು ಕಾಣುತ್ತೇವೆ. ಇಂತಹವರ ಸಾಲಿನಲ್ಲಿಯೇ ಸೇರುವ, ಹನ್ನೆರಡನೆಯ ಶತಮಾನದ ವೈಚಾರಿಕ ಕ್ರಾಂತಿಗೆ ನಾಂದಿ ಹಾಡಿದ ಬಸವಣ್ಣನವರಂತೆ ಚಿಂತಿಸಿದವರು ಪ್ರತಿಭಟಿಸಿದವರು ರಾಷ್ಟ್ರಕವಿ ಕುವೆಂಪು ಅವರು.

ಜಗತ್ತಿನಲ್ಲಿ ಅದರಲ್ಲೂ ವಿಶೇಷವಾಗಿ ಭಾರತದಲ್ಲಿ ಜಾತಿ–ಗೋತ್ರ, ಮೇಲು–ಕೀಳು, ಸ್ಪೃಶ್ಯ–ಅಸ್ಪೃಶ್ಯ, ಶ್ರೇಷ್ಠ–ಕನಿಷ್ಠ ಎಂಬಿತ್ಯಾದಿ ತರತಮಗಳ ಸರಮಾಲೆಯೇ ಎದ್ದು ಕಾಣುತ್ತದೆ. ದೇವರು, ಸ್ವರ್ಗ, ಮೋಕ್ಷ ಎಂಬ ಹುಸಿನೆಲೆಗಳನ್ನು ಸಂಪಾದಿಸಲು ಕೆಲವು ಬೆವರು ಸುರಿಸಲು ಇಷ್ಟಪಡದ ಜನ ಯಜ್ಞ–ಯಾಗ–ಬಲಿ ಮುಂತಾದವುಗಳನ್ನು ರೂಢಿಗೆ ತಂದು ಮುಗ್ಧರನ್ನು ಮೋಸಗೊಳಿಸುತ್ತಾ, ಶೋಷಿಸುತ್ತಾ ಆ ಮೂಲಕ ಕಂದಾಚಾರಗಳನ್ನು ಜನಮನದಲ್ಲಿ ತುಂಬುತ್ತಾ ಬಂದದ್ದೇ ಸನಾತನವೆಂದೂ, ವೈದಿಕವೆಂದೂ ಕರೆದುಕೊಳ್ಳುವ ಧರ್ಮ ವೆಂದಾಯಿತು.

ವರ್ಣಾಶ್ರಮ, ಚಾತುರ್ವರ್ಣ್ಯ, ಅಸ್ಪೃಶ್ಯತೆ ಮುಂತಾದವುಗಳನ್ನು ಸೃಷ್ಟಿಸಿ ಇದೆಲ್ಲವೂ ಭಗವಂತನ ಕ್ರಮ ಎಂದು ಸಾರಲಾಯಿತು. ಅವುಗಳ ಶಾಶ್ವತ ಸ್ಥಾಪನೆಗಾಗಿ ಅನೇಕ ಹೆಸರಿನ ಗ್ರಂಥಗಳನ್ನು ರಚಿಸಲಾಯಿತು. ಹೀಗೆ ಮನುಷ್ಯ ಮನುಷ್ಯರ ಮಧ್ಯ ಜೋಡಿಸಲಾಗದ ಅಸಾಧ್ಯ ಕಂದಕವನ್ನು ನಿರ್ಮಿಸಲಾಯಿತು. "ಇಂತಹ ಬರ್ಬರ ಕೃತ್ಯ ಭರತಖಂಡದಲ್ಲಿ ನಡೆದಷ್ಟು ಪ್ರಮಾಣದಲ್ಲಿ ಬೇರೆಲ್ಲಿಯೂ ನಡೆದಿಲ್ಲವೆಂಬುದು, ಪುರೋಹಿತಶಾಹಿ ತನ್ನ ಕ್ರೂರ ದಂಷ್ಟ್ರಗಳಿಂದ ಶೂದ್ರಾತಿ ಶೂದ್ರರನ್ನು ಹಿಂಸಿಸಿದಂತೆ, ಅವರ ರಕ್ತವನ್ನು ಸಿಂಹ ಹುಲಿಗಳ ರೀತಿಯಲ್ಲಿ ಹೀರಿದಂತೆ ಮತ್ತೆಲ್ಲಿಯೂ ಸಂಭವಿಸಿಲ್ಲವೆಂಬುದು ನಗ್ನ ಸತ್ಯ" ಎಂಬ ದೇಜಗೌ ಅವರ ಮಾತಿಗೆ ಇವತ್ತಿಗೂ ಸಾಕ್ಷಿಗಳು ದೊರೆಯುತ್ತಿವೆ.

ಇಂತಹ ಪರಿಸರದಲ್ಲಿ, ಇಂತಹ ದೇಶದಲ್ಲಿಯೇ ಬಸವಣ್ಣ–ಕುವೆಂಪು ಜನಿಸಬೇಕಾಯಿತು, ಹದಗೆಟ್ಟ ಮನುಷ್ಯ ಮನಸ್ಸನ್ನು, ಬದುಕನ್ನೂ ಹಸನುಗೊಳಿಸಲು, ಹದಗೊಳಿಸಲು, ವೇದ, ಶಾಸ್ತ್ರ, ಪುರಾಣಗಳೇ ನ್ಯಾಯ ಸೂತ್ರಗಳು ಅವುಗಳನ್ನು ದೇವರೇ ಸೃಷ್ಟಿಸಿದನು, ಅವುಗಳನ್ನು ಮೀರಿ ನಡೆಯಬಾರದು ಎನ್ನುವಂತಹ ಕಟ್ಟಳೆಗಳಿರುವಲ್ಲಿಯೇ ಬಸವಣ್ಣನವರು ಮಾದಾರ ಚನ್ನಯ್ಯನ ಮನೆಯಲ್ಲುಂಡರು, ಕಾಲಾಂತರದಿಂದ ನಡೆದುಬಂದ ಕಟ್ಟಳೆಯನ್ನು ಮೀರಿ ತೋರಿದರು. ಆಗಲೇ;

"ವೇದ ನಡನಡುಗಿತ್ತು ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತಯ್ಯಾ !
ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತಯ್ಯಾ !
ಆಗಮ ಹೆರತೊಲಗಿ ಅಗಲಿದ್ದಿತಯ್ಯಾ !
ನಮ್ಮ ಕೂಡಲಸಂಗಯ್ಯನು ಚೆನ್ನಯ್ಯನ ಮನೆಯಲುಂಡ ಕಾರಣ"

ಎಂದು ಸಾರುತ್ತಾರೆ. ಇಂತಹ ಜಾತಿ–ವರ್ಣ–ಅಸ್ಪೃಶ್ಯತೆಗಳನ್ನು ಸೃಷ್ಟಿಸಿದ ವೇದಶಾಸ್ತ್ರಗಳೆಲ್ಲ ಸರ್ವನಾಶವಾಗಬೇಕು, ಅಂದಾಗಲೇ ಈ ದೇಶದಲ್ಲಿ ಹೊಸದೊಂದು ಸಮಾನತೆಯ ವ್ಯವಸ್ಥೆಯು ಹುಟ್ಟಿಕೊಳ್ಳಲು ಸಾಧ್ಯ ಎಂಬುದು ಬಸವಣ್ಣನವರ ನಿಲುವು.

ಅಂತೆಯೇ ಕುವೆಂಪು ಅವರು;

ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು
ನಿನ್ನೆದೆಯ ದನಿಯೇ ಋಷಿ! ಮನು ನಿನಗೆ ನೀನು!

ಎಂದು ಸಾರುತ್ತಾರೆ.

ಯಾರೋ, ಯಾವ ಕಾಲಕ್ಕೋ ಬರೆದಿಟ್ಟದ್ದು, ಚಾಲ್ತಿಗೆ ಬಂದ್ದದ್ದನ್ನು ಇಂದಿಗೂ, ಮುಂದೆಯೂ ಇದ್ದಕ್ಕಿದ್ದಂತೆ ಉಳಿಸಿಕೊಳ್ಳಬೇಕೆನ್ನುವುದು ಶುದ್ಧ ಅವಿವೇಕಿಗಳ ಚಿಂತನೆ. ಮನುಷ್ಯನಾಗಿ ಹುಟ್ಟಿಬಂದವನು ಮಾನವೀಯತೆಯನ್ನು ರೂಢಿಸಿಕೊಳ್ಳದಿದ್ದರೆ ಪಶು–ಪ್ರಾಣಿಗಳಿಗಿಂತಲೂ ಕರಕಷ್ಟ. ಹಸಿದು ಬಂದವನಿಗೆ ಅನ್ನ, ನೀರಡಿಸಿದವನಿಗೆ ನೀರು ಕೊಡಲು ಶಾಸ್ತ್ರದ ಅನುಮತಿಗಾಗಿ ಕಾಯುವದು ಮನುಷ್ಯತ್ವ ಲಕ್ಷಣವಲ್ಲ. ನೊಂದವರ, ದೀನದಲಿತರ, ಬಡವರ ಕಷ್ಟಗಳಲ್ಲಿ ಸ್ಪಂದಿಸಿದರೆ ಬ್ರಹ್ಮತ್ವ ಕೆಟ್ಟುಹೋಗುವುದೆಂದು ಸಾರುವ ಶಾಸ್ತ್ರವಿದ್ದರೆ ಆ ಶಾಸ್ತ್ರವನ್ನಷ್ಟೇ ಅಲ್ಲ, ಅದನ್ನು ರಚಿಸಿದವನನ್ನೂ ಅದರಲ್ಲಿಯೇ ಕಟ್ಟಿ ಎಸೆಯಬೇಕು ಎನ್ನುತ್ತಾರೆ ಕುವೆಂಪು.

ಅಂತು ಮನು ತಾನು ಹೇಳಿರಲಾರನಯ್ಯಯೋ!
ಹೇಳಿದ್ದರವನನೂ ಶಾಸ್ತ್ರದೊಳೆ ಸುತ್ತಿ
ಸ್ವರ್ಗ ಹೋಗಲಿ ಮತ್ತೆ ನರಕ ಬಂದರು ಬರಲಿ
ಎದೆಯ ಧೈರ್ಯವ ಮಾಡಿ ಬಿಸುಡಾಚೆಗೆತ್ತಿ"

ಎಂದು ನಿರ್ಭಿಡೆಯಿಂದ ನುಡಿಯುತ್ತಾರೆ. ಕಾಲ ಬದಲಾದಂತೆ ಮನುಷ್ಯ ಬದುಕೂ ಬದಲಾಗಬೇಕು. ಹಾಗಾಗದೇ ಹೋದರೆ ತುಕ್ಕು ಹಿಡಿದ ವಸ್ತು ಕಾಲಾಂತರದಲ್ಲಿ ಕರಗಿ ಹೋಗುತ್ತದೆ ಎಂಬ ಎಚ್ಚರಿಕೆಯಿರಬೇಕು. ಅಪ್ಪ ನೆಟ್ಟ ಆಲದ ಮರವೆಂದು ನೇಣುಹಾಕಿಕೊಂಡರೆ ಮೂರ್ಖತನವಾಗುತ್ತದೆ.

ಯಾವ ಕಾಲಕ್ಕೆ ಯಾವುದು ಸೂಕ್ತ, ಯಾವುದನ್ನು ಎಷ್ಟು ಪ್ರಮಾಣದಲ್ಲಿ ಬಳಸಿಕೊಳ್ಳಬೇಕು. ಎಂತಹದ್ದನ್ನು ಪರಿತ್ಯಜಿಸಬೇಕು ಎಂಬ ಅರಿವು ಇರಬೇಕು. ಅರಿವಿದ್ದೂ ಅರಿವುಗೇಡಿಗಳಾಗುವ, ಇಲ್ಲವೆ ಅನ್ಯರನ್ನು ಹಾಗೆ ಮಾಡುವ ದಲ್ಲಾಳಿಗಳನ್ನು ಬಸವಣ್ಣನವರು ಖಂಡಿಸುತ್ತಾರೆ. ಸರ್ವನಿಯಾಮಕ, ಸರ್ವರಕ್ಷಕನೆಂದು ನಂಬಿದ ದೇವರನ್ನು ಕಾಣಲು ಪೂಜಾರಿ–ಪುರೋಹಿತರೆಂಬ ದಲ್ಲಾಳಿಗಳೇಕೆ ಎಂಬ ಪ್ರಶ್ನೆ ಅವರದು.

ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವ ತಾಮಾಡ
ಬೇಕಲ್ಲದೆ ಬೇರೆ ಮತ್ತೊಬ್ಬರ ಕೈಯಲ್ಲಿ
ಮಾಡಿಸಬಹುದೆ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ
ನಿಮ್ಮನೆತ್ತ ಬಲ್ಲರು ಕೂಡಲ ಸಂಗಮದೇವಾ?

ಎನ್ನುವುದೇ ಆ ಪ್ರಶ್ನೆ.

ಪೂಜಾರಿ–ಪುರೋಹಿತ, ದೇವರು–ದೇವಾಲಯ ಇವೆರಡೂ ವಂಚನೆ, ಸುಲಿಗೆ, ಮೋಸದ ತಾಣಗಳು. ಅಜ್ಞಾನ ಉಳಿಸಲು ಮೌಢ್ಯತೆಯನ್ನು ಬೆಳೆಸಲು ಪೂಜಾರಿ ಪುರೋಹಿತರು ದೇವಾಲಯ–ದೇವರುಗಳನ್ನು ಮಾಧ್ಯಮವಾಗಿಸಿಕೊಂಡಿದ್ದಾರೆ. ಅದಕ್ಕೆಂದೇ ಕುವೆಂಪು ಅವರು ತಮ್ಮ "ಹೂವು–ದೇವರು" ಕವನದಲ್ಲಿ:

ಕಟ್ಟಕಡೆಯಲಿ
ದೇವರ ಗುಡಿಯಲಿ

ಪೂಜಾರಿಯೆ ದಿಟದ ನಿವಾಸಿ;
ದೇವರೆ ಪರದೇಶಿ

....

ಬೆಂಕಿಯ ನಂದಿಸಿ ಬೂದಿಯ ವಂದಿಸಿ
ದೇವರ ಮರೆಗೈಯುತೆ ಪೂಜಾರಿಯೆ ಮಿಂಚುವನು!

ಎಂದು ಪೂಜಾರಿಗಳ ಕೃತ್ಯಗಳನ್ನು ವಿಡಂಬಿಸುತ್ತಾರೆ. ಇಂದಿಗೂ ಗುಡಿ–ಗುಂಡಾರ, ಮಠ–ಪೀಠಗಳ ಮರೆಯಲ್ಲಿ ನಡೆಯುತ್ತಿರುವ ಸಾಮಾನ್ಯರ ಸುಲಿಗೆ–ಶೋಷಣೆಗೆ ಹಿಡಿದ ಕನ್ನಡಿಯಾಗಿವೆ ಈ ಮೇಲಿನ ಸಾಲುಗಳು. "ಶೂದ್ರ ಸಮಾಜವನ್ನು ತನ್ನ ಕಬ್ಬಿಣದ ಕರಾಳ ಮುಷ್ಟಿಯ ಸಹಸ್ರಪಾಶಗಳಿಂದ ಬಿಗಿದು ಬಂಧಿಸಿಟ್ಟುಕೊಳ್ಳುವ ಉದ್ದೇಶದಿಂದ ದೇಹ ಮತ್ತು ಮನಸ್ಸಿನ ಶುದ್ಧೀಕರಣದ ಬಾಹ್ಯ ಸಾಧನಗಳೆಂಬ ನೆಪದಲ್ಲಿ ತನ್ನ ಸುತ್ತಲೂ ಸುತ್ತಿಕೊಂಡ ಅನಂತಸಂಖ್ಯೆಯ ಕರ್ಮಕ್ರಿಯೆ ಮತ್ತು ಆಚಾರ ಸಮೂಹ ರೂಪದ ಕೊನೆಗಾಣದ ಕಣ್ಣಿಯ ಬಲೆಯಲ್ಲಿ ಸಿಕ್ಕಿಕೊಂಡು ಪುರೋಹಿತಶಾಹಿ, ಉದ್ಧಾರದ ಆಶಾಲವಲೇಶವಿಲ್ಲದೆ, ಆಪಾದಮಸ್ತಕ ಗೋಜು ಬಿಗಿದುಕೊಂಡು, ಈಗ ಸುಸ್ತಾಗಿ ಸಂಪೂರ್ಣ ಹತಾಶವಾಗಿ, ಮೃತಪ್ರಾಯವಾಗಿ ಪತಿತವಾಗಿ ನಿದ್ದೆ ಹೋಗಿದೆ. ಈಗ ಆ ಬಲೆಯಿಂದ ಅದಕ್ಕೆ ಬಿಡುಗಡೆ ಇಲ್ಲವಾಗಿದೆ. ಆ ಬಲೆಯನ್ನೇನಾದರೂ ಹರಿದರೆ ಸಾಕು. ಆ ಪುರೋಹಿತರ ಪುರೋಹಿತಶಾಹಿ ಬುಡಮಟ್ಟ ಅಲ್ಲಾಡಿ ಹೋಗುತ್ತದೆ" ಎಂದು ಕುವೆಂಪು ಸಾರುತ್ತಾರೆ. ಹೀಗಾಗಬೇಕಾದರೆ;

"ಗುಡಿಯೊಳಗೆ ಕಣ್ಮುಚ್ಚಿ ಬೆಚ್ಚಗಿರುವರನೆಲ್ಲ
ಭಕ್ತರಕ್ತವ ಹೀರಿ ಕೊಬ್ಬಿಹರನೆಲ್ಲ
ಗಂಟೆ ಜಾಗಟೆಗಳಿಂ ಬಡಿದು ಕುತ್ತಿಗೆ ಹಿಡಿದು
ಕಡಲಡಿಗೆ ತಳ್ಳಿರೈ ಶಂಖದಿ ಬಡಿದು"

ಎಂದು ನಿಷ್ಠುರವಾಗಿ ನುಡಿದಿದ್ದಾರೆ. ಬಸವಣ್ಣನವರು;

ಮಡಕೆ ದೈವ, ಮೊರದೈವ, ಬೀದಿಯ ಕಲ್ಲುದೈವ,
ಹಣಿಗೆ ದೈವ, ಬಿಲ್ಲನಾರಿದೈವ.... ಹೀಗೆ ದೈವ,

ದೈವ ಎಂದು ಕಾಲಿಡಲಿಂಬಿಲ್ಲ ಎಂದು ಪರಿತಪಿಸಿದರೆ ಕುವೆಂಪು ಅವರು, "ಸತ್ತ ಕಲ್ಗಳ ಮುಂದೆ ಅತ್ತುಕರೆದುದು ಸಾಕು" ಎಂದು, "ನೂರು ದೇವರನೆಲ್ಲ ನೂಕಾಚೆ ದೂರ" ಎಂದು ಖಡಾಖಂಡಿತವಾಗಿ ನುಡಿಯುತ್ತಾರೆ. ಹೀಗೆ ಮನುಷ್ಯ ಬದುಕಿಗೆ ಅನುಕೂಲವಲ್ಲದ ಸಂಪ್ರದಾಯಗಳನ್ನು ಪಾಲಿಸುತ್ತ ಬರಲಾಗಿದ್ದ ಕಾಲದಲ್ಲಿಯೇ ಅದನ್ನು ಖಂಡಿಸಿದಂತೆ, ವಿಡಂಬಿಸಿ–ಟೀಕಿಸಿದಂತೆ ಧರ್ಮಶಾಸ್ತ್ರಗಳ, ಮತ–ಮೌಢ್ಯತೆಗಳ ಕುರಿತು, ಅವುಗಳನ್ನು ಸೃಷ್ಟಿಸಿದವರ ಕುರಿತು ಖಂಡಿಸಿ, ಟೀಕಿಸಿ ಈ ದೇಶದ ಸ್ಥಿತಿಯನ್ನು, ಮೇಲವರೆಂದುಕೊಂಡವರ ಅನ್ಯಾಯಗಳನ್ನು ನಗ್ನಗೊಳಿಸಿ ಪೌರುಷವನ್ನು ಮೆರೆದವರು ಬಸವಣ್ಣನವರ ನಂತರದಲ್ಲಿ ಕುವೆಂಪು ಅವರು.

ಮಾನವೀಯತೆ, ಸಮತೆಗಳು ಮರೆಯಾಗಿ ಅಹಮ್ಮಿಕೆ, ಕಟುಕತನ ಮನುಷ್ಯನನ್ನಾವರಿಸಿ ಅಡರಿಕೊಂಡಿರಬೇಕಾದರೆ ಪ್ರೀತಿ, ಸಮಾನತೆ ಮುಂತಾದ ಮೌಲ್ಯಗಳಿಗೆ ಸ್ಥಾನವಿಲ್ಲ. ನಾ ಮೇಲು–ತಾ ಮೇಲು ಸೆಣಸಾಟವೇ ನಡೆದಿರುತ್ತದೆ. ಸ್ಪೃಶ್ಯ–ಅಸ್ಪೃಶ್ಯತೆಯ ಪ್ರಶ್ನೆ ಧುತ್ತೆಂದು ಎದುರಾಗುತ್ತದೆ. ಅಂತೆಯೇ ಬಸವಣ್ಣನವರ;

"ಮೇಲಾಗಲೊಲ್ಲೆನು ಕೀಳಾಗಲಲ್ಲದೆ;
ಕೀಳಿಂಗಲ್ಲದೆ ಹಯನು ಕರೆವುದೆ?
ಮೇಲಾಗಿ ನರಕದೊಳೋಲಾಡಲಾರೆನು...."

ಎಂಬ ವಚನವೂ, ಕುವೆಂಪು ಅವರ;

"ನಿನ್ನ ಪಾದಕೆ ನನ್ನ ಮಸ್ತಕ
ಎಟುವನಿತೇ
ನನ್ನನುನ್ನತಗೊಳಿಸು ಸಾಕು;
ಅನ್ಯ ಕಾರಣಕೆನ್ನ ಔನತ್ಯವನು ನಾ ಬಯಸಿದರೆ
ಅದು ಬರಿ ಅಹಂಕಾರವದಕೆ ಸೊನ್ನೆ ಹಾಕು"

ಎಂಬ ಕವನವೂ ನೆನಪಾಗುತ್ತವೆ. ಇಂತಹ ಉದಾತ್ತತೆಯನ್ನು, ಉದಾರತೆಯನ್ನೂ ಮನುಷ್ಯ ತನ್ನ ಬದುಕಿನಲ್ಲಿ ರೂಢಿಸಿಕೊಳ್ಳಬೇಕಾದದ್ದು.

ಬಸವಣ್ಣನವರ;

"ಎನಿ ಬಂದಿರಿ ಹದುಳವಿದ್ದಿರೆ ಎಂದಡೆ
ನಿಮ್ಮ ಮೈಸಿರಿ ಹಾರಿ ಹೋಹುದೆ?
ಕುಳ್ಳಿರೆಂದರೆ ನೆಲ ಕುಳಿ ಹೋಹುದೆ?
ಒಡನೆ ನುಡಿದರೆ ಶಿರಹೊಟ್ಟೆಯೊಡೆವುದೆ?"

ಎಂಬೆಲ್ಲವೂ ಮನುಷ್ಯನೆಡೆಗೆ ಪ್ರಶ್ನೆಗಳಾಗಿ ಕೆಣಕಿದರೆ ಕುವೆಂಪು ಅವರು ಅಂತಹ ಭಾವನೆಗಳನ್ನೇ ವಿನಯಪೂರ್ವಕವಾಗಿ ಹೇಳಿಕೊಳ್ಳುತ್ತಾರೆ;

"ಗರ್ವದಿಂದೆನ್ನ ಶಿರನಿಮಿರಿ ನಿಲ್ಲಲು, ದೇವ,
ನಿನ್ನ ಗದೆಯಾಘಾತ ಬಂದೆರಗಲಿ
ಸರ್ವಜ್ಞನೆಂದೆದೆಯು ಸಂಕುಚಿತವಾಗುತಿರೆ
ನಿಮ್ಮ ಮೈಮೆಯ ಬೆಳಕು ಮೈದೋರಲಿ"

ಎನ್ನುವಲ್ಲಿ ಮನುಷ್ಯನ ಉನ್ನತಿಕೆಗೆ ಗರ್ವವಿಹೀನತೆ, ಸಹನಶೀಲತೆಗಳೆಷ್ಟು ಅವಶ್ಯಕವೆನ್ನುವುದನ್ನು ಮನಗಾಣಲು ಸಾಧ್ಯವಾಗುತ್ತದೆ.

ಈ ಲೋಕದ ಡಾಂಭಿಕ ಜನ ಮಾಡುವ ಬೂಟಾಟಿಕೆಯನ್ನು ಕಂಡು ರೋಸಿಹೋದ ಬಸವಣ್ಣನವರು,

"ಉಳ್ಳವರು ಶಿವಾಲಯವ ಮಾಡುವರು;
ನಾನೇನ ಮಾಡುವೆ ಬಡವನಯ್ಯಾ
ಎನ್ನ ಕಾಲೇ ಕಂಭ, ದೇಹವೆ ದೇಗುಲ,
ಶಿರವೇ ಹೊನ್ನ ಕಳಶವಯ್ಯ
ಕೂಡಲಸಂಗಮದೇವಾ, ಕೇಳಯ್ಯ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ"

ಎಂಬ ವೈಜ್ಞಾನಿಕ ಸತ್ಯವನ್ನು ಸಾರುತ್ತಾರೆ. ಚಲನೆಯನ್ನು ರೂಢಿಸಿಕೊಂಡದ್ದೇ ಬಹುದಿನಗಳವರೆಗೆ ಉಳಿಯಬಲ್ಲದು. ಹಾಗಲ್ಲದೆ ಸ್ಥಾವರವಾದರೆ ನಿಂತ ನೀರಿನಂತೆ ರಾಡಿಯಾಗಿ, ಹುಳು-ಹುಪ್ಪಡಿಯಾಗಿ ತಾ ಕೆಡುವುದಲ್ಲದೆ ಸುತ್ತಲವರ ಆರೋಗ್ಯವನ್ನು ಹದಗೆಡಿಸುತ್ತದೆ ಎಂಬುದು ತೀರ ವೈಜ್ಞಾನಿಕ ಸತ್ಯ. ಇದನ್ನು ಮನಗಂಡ ಕುವೆಂಪು ಅವರು

"ಅನಿಕೇತನ"ವಾಗಲು ಕರೆಕೊಡುತ್ತಾರೆ. ಇಲ್ಲಿ ಬಸವಣ್ಣನವರ ಆಲೋಚನೆಗಳಿಗೂ ಕುವೆಂಪು ಅವರ ವಿಚಾರಗಳಿಗೂ ನಿಕಟಸಾಮ್ಯವಿರುವುದು ಕಂಡುಬರುತ್ತದೆ.

ಹೀಗೆ ಬಸವಣ್ಣನವರ ಹಾಗೂ ಕುವೆಂಪು ಅವರ ವೈಚಾರಿಕ ಕ್ರಾಂತಿಯ ಮೂಲ ಉದ್ದೇಶ ಸ್ವಾತಂತ್ರ್ಯ, ಸಮಾನತೆ, ಮಾನವೀಯತೆ. ಅಸ್ಪೃಶ್ಯತೆ, ಅದರಿಂದುಂಟಾದ ದಾರಿದ್ರ್ಯ, ಸಾಮಾಜಿಕ ಅನ್ಯಾಯ ಮುಂತಾದವುಗಳಿಂದ ಬಹುಜನ ಸಮಾಜವನ್ನು ಮುಕ್ತಗೊಳಿಸುವುದು.

ಮಗು ಹುಟ್ಟುವಾಗ ಜಾತಿ-ಗೋತ್ರ, ಸ್ಪೃಶ್ಯ-ಅಸ್ಪೃಶ್ಯ, ಮೇಲು-ಕೀಳುಗಳರಿಯದ ವಿಶ್ವಮಾನವನಾಗಿ ಹುಟ್ಟುತ್ತದೆ. ಬೆಳೆದಂತೆ ಅದರಲ್ಲಿ ಇದನ್ನೆಲ್ಲ ಬಿತ್ತಿ ಅಲ್ಪನನ್ನಾಗಿ ಮಾಡುತ್ತೇವೆ ಎಂದರಿತ ಕುವೆಂಪು ಅವರು ಮತ್ತೆ ಅದನ್ನು ವಿಶ್ವಮಾನವನನ್ನಾಗಿ ಪರಿವರ್ತಿಸುವುದೇ ವಿದ್ಯೆಯ ಕರ್ತವ್ಯವಾಗಬೇಕು ಎಂದು ಸಾರಿದರು. ಅದನ್ನು ಸಾಧಿಸಲು ಬೇಕಾದ ಪಂಚಮಂತ್ರಗಳನ್ನು ಹೇಳಿದರು. ಅವುಗಳೇ ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ ಹಾಗೂ ಪೂರ್ಣದೃಷ್ಟಿ.

ಮತವೆಂಬುದು ಮನುಜಮತವಾಗಬೇಕು,
ನಡೆವ ನಡೆ, ಅದು ವಿಶ್ವಪಥವಾಗಬೇಕು,
ಉದಯ ಅವರಿವರದಾಗದೇ ಸರ್ವರ ಉದಯವಾಗಬೇಕು,
ಸರ್ವರೂ ಪರಸ್ಪರ ಸಮನ್ವಯಗೊಳ್ಳಬೇಕು,
ದೃಷ್ಟಿ ಭಿನ್ನ ಭಿನ್ನವಾಗದೆ ಸರ್ವವನ್ನೂ, ಸರ್ವರನ್ನೂ
ಕಾಣುವ ಪೂರ್ಣದೃಷ್ಟಿ ಮನುಷ್ಯನದಾಗಬೇಕು

ಎಂದು ಕುವೆಂಪು ಪ್ರತಿಪಾದಿಸಿದ್ದಾರೆ.

ಇಂದು ಹೀಗೆ ಎಲ್ಲ ಎಲ್ಲೆಗಳನ್ನು ಮೀರಿ ವಿಶ್ವಮಾನವರಾಗಲು ಕುವೆಂಪು ಅವರು ನೀಡಿದ "ಸಪ್ತಸೂತ್ರ"ದ ಪ್ರಣಾಳಿಕೆ ಪ್ರತಿಯೊಬ್ಬ ವ್ಯಕ್ತಿಯ ದಿನನಿತ್ಯದ ಆವಶ್ಯಕತೆಗಳಾಗಬೇಕು ಎನಿಸುತ್ತದೆ. "ನೂರು ಮತದ ಹೊಟ್ಟತೂರಿ, ಎಲ್ಲ ತತ್ವದೆಲ್ಲೆ ಮೀರಿ, ನಿರ್ದಿಗಂತವಾಗಿ ಏರಿದಾಗ ಮಾತ್ರ ವಿಶ್ವಭ್ರಾತೃತ್ವ ನೆಲೆಗೊಂಡು ಮಾನವ "ವಿಶ್ವಮಾನವ"ನಾಗಲು ಸಾಧ್ಯವಾಗುತ್ತದೆ.

ಸುಮಾರು ಎರಡು ಸಾವಿರದೈನೂರು ವರ್ಷಗಳ ಹಿಂದೆಯೇ ಗೌತಮಬುದ್ಧ ಅಮಾನವೀಯಪೂರ್ಣವಾದ ಸ್ಪೃಶ್ಯ-ಅಸ್ಪೃಶ್ಯ, ಶೋಷಣೆ-ಸುಲಿಗೆ, ದಬ್ಬಾಳಿಕೆಗಳಿಂದ ಆವೃತಗೊಂಡಿದ್ದ ವೈದಿಕ ಧರ್ಮಕ್ಕೆ ಸಡ್ಡುಹೊಡೆದು ದೀನ-ದಲಿತ-ಅಸ್ಪೃಶ್ಯರನ್ನೊಳಗೊಂಡು ಸರ್ವರ-ಸರ್ವರಿಗೂ ಹಿತವಾದ ಧರ್ಮವನ್ನು ಹುಟ್ಟು ಹಾಕಿದನು. ಅಂತೆಯೆ ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಜನಿಸಿ ತಮ್ಮ ಸುತ್ತಲೂ ಕೊಳೆತು ನಾರುತ್ತಿದ್ದ ಸಾಮಾಜಿಕ ವ್ಯವಸ್ಥೆಯನ್ನು ಕಂಡು ರೋಸಿ ಹೊರಹೊರಟವರು.

ಬಸವಣ್ಣನವರ ನಂತರ ಮತ್ತೆ ಮತ-ಮೌಢ್ಯ, ಸ್ಪೃಶ್ಯ-ಅಸ್ಪೃಶ್ಯತೆಗಳೆಂಬ ಫಿನಿಕ್ಸ್ ಪಕ್ಷಿಗಳು ಅಮಾನವೀಯ ಆಚರಣೆಗಳು ಮರುಜೀವ ಪಡೆದು ಪ್ರಬಲವಾದವು. ಇಂತಹ ಕಾಲಘಟ್ಟದಲ್ಲಿಯೇ ಕುವೆಂಪು ಅವರು ಜನಿಸಿದರು. ಅವರ ಜೀವನಾನುಭವ ಅವರನ್ನು ವಿಶ್ವಮಾನವತ್ವದ ಕುರಿತು ಚಿಂತಿಸುವಂತೆ ಮಾಡಿತು. ಉಪದೇಶಿಸುವಂತೆ ಪ್ರೇರೇಪಿಸಿತು. "ವ್ಯಕ್ತಿ ಸ್ವಾತಂತ್ರ್ಯ ಆಧ್ಯಾತ್ಮ ಸಾಧನೆ, ಮಾನವೀಯತೆ, ನೈತಿಕತೆ, ಸರ್ವೋದಯ,

ಸರ್ವಸಮಾನತೆ ಈ ಇಬ್ಬರು ಮಹಾಪುರುಷರ ಜೀವನ ಸಂದೇಶ" ಎಂದು ದೇಜಗೌ ಅಭಿಪ್ರಾಯಪಡುತ್ತಾರೆ.

ಬಸವಣ್ಣನವರು ವೈದಿಕ ಧರ್ಮದಲ್ಲಿ ಹುಟ್ಟಿ ಹೊರಬಂದು ಕೀಳಾಗಿ ಪರಿಗಣಿಸಲಾಗಿದ್ದವರೊಂದಿಗೆ ತಮ್ಮನ್ನು ಗುರುತಿಸಿಕೊಂಡರು. ಹೀಗೆ ಪರಂಪರಾಗತ ಸಂಸ್ಕೃತಿಗೆ ಸವಾಲಾಗಿ ಹೊಸದಾದ ಸಂಸ್ಕೃತಿಗೆ ನಾಂದಿ ಹಾಡಿ, ಅತ್ಯಂತ ವೈಚಾರಿಕ, ವೈಜ್ಞಾನಿಕ ಹಾಗೂ ಮಾನವೀಯ ವಿಚಾರಗಳನ್ನು ಮಂಡಿಸಿ ಮಹಿಮರೆನಿಸಿಕೊಂಡವರು. ಹಾಗೆಯೇ ಕುವೆಂಪು ಅವರು ಶೂದ್ರರಾಗಿ ಜನಿಸಿ, ಅಲ್ಲಿಯ ಎಲ್ಲ ಅನುಭವಗಳಿಗೆ ಪಕ್ಕಾಗಿ, ವೈದಿಕ ಪರಂಪರೆಯನ್ನೂ ಅರಗಿಸಿಕೊಂಡವರು. ಅವರೂ ಬಸವಣ್ಣನವರಂತೆ ವೈಚಾರಿಕ, ವೈಜ್ಞಾನಿಕ ಸಂಸ್ಕೃತಿಯ ತಳಹದಿಯ ಮೇಲೆ ಹೊಸದೊಂದು ಸಂಸ್ಕೃತಿಯನ್ನು ನಿರ್ಮಿಸಹೊರಟು ವಿಶ್ವಮಾನವರಾಗಿ ನಿಲ್ಲುತ್ತಾರೆ. ಈ ಇಬ್ಬರಲ್ಲಿ "ಒಬ್ಬರದು ಸಮಾಜೋಧಾರ್ಮಿಕ ಕ್ಷೇತ್ರದಲ್ಲಾದರೆ, ಮತ್ತೊಬ್ಬರದು ಸಮಾಜೋಸಾಹಿತ್ಯಕ ಕ್ಷೇತ್ರ. ಈ ದೃಷ್ಟಿಯಿಂದ ಮಾರ್ಕ್ಸ್ ಗಾಂಧಿ, ಅಂಬೇಡ್ಕರರಿಗಿಂತ ಕುವೆಂಪು ಬಸವಣ್ಣನವರಿಗೆ ತೀರ ಹತ್ತಿರವೆಂದು ಭಾವಿಸಬಹುದಾಗಿದೆ" ಎಂಬ ದೇಜಗೌ ಅವರ ಮಾತಿನಲ್ಲಿ ಹುರುಳಿಲ್ಲದಿಲ್ಲ.

❐

ಪೂರಕ ಪುಸ್ತಕಗಳು

೧. **ಸಜೀವ ಸಾಹಿತ್ಯ**–ಅನಕೃ, ಗೀತಾ ಬುಕ್‌ಹೌಸ್ ಮೈಸೂರು–೧೯೭೩
೨. **ಶ್ರೀ ಬಸವೇಶ್ವರರು**, ಪ್ರಕಾಶಕರು, ಸದಸ್ಯ ಕಾರ್ಯದರ್ಶಿ, ಶ್ರೀ ಬಸವೇಶ್ವರ ೮ನೇ ಶತಮಾನೋತ್ಸವ ಸಮಿತಿ, ಮೈಸೂರು ಸರ್ಕಾರ, ಬೆಂಗಳೂರು–೧೯೬೭.
೩. **ವಿಚಾರ ಕ್ರಾಂತಿಗೆ ಆಹ್ವಾನ**–ಕುವೆಂಪು, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು–೧೯೯೯.
೪. **ಸಾಹಿತ್ಯ ವಿಮರ್ಶೆ–೧೯೯೪**, ಸಂ. ಎಚ್.ಎಸ್.ರಾಘವೇಂದ್ರರಾವ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು–೧೯೮೫.
೫. **ಕೋಗಿಲೆ ಮತ್ತು ಸೋವಿಯತ್ ರಷ್ಯಾ**, ಕುವೆಂಪು, ಉದಯ ರವಿ ಪ್ರಕಾಶನ, ಮೈಸೂರು–೧೯೮೫.
೬. **ಬಸವೇಶ್ವರ–ಕುವೆಂಪು–ದೇಜಗೌ**, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ–೨೦೦೪

ಬಸವಣ್ಣ : ಶರಣಬಸವ

●

ಡಾ. ಎಸ್.ಎಂ. ಹಿರೇಮಠ

ಜನತೆಯಾಗಲಿ, ವೀರಶೈವ ಪುರಾಣಕಾವ್ಯ ರಚಯಿತೃಗಳೇ ಆಗಲಿ ಬಸವನನ್ನು "ದ್ವಿತೀಯ ಶಂಭು" ಎಂದು ಉಪಮಿಸಿವೆ. ಈ ಜಾಡನ್ನೆ ಹಿಡಿದು ನಡೆದ ಕಾವ್ಯಾನಂದರು 'ಶರಣಬಸವನ ಚರಿತೆ' ಬರೆಯುವಾಗ "ಬಸವನನ್ನು ದ್ವಿತೀಯ ಶಂಭುವೆಂದು ನಮೂದಿಸಿ, ಶರಣಬಸವನನ್ನು ದ್ವಿತೀಯ ಬಸವಣ್ಣ" ಎಂದು ಹೇಳಿರುವರು. ಒಂದೆಡೆಯಲ್ಲಿ ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರು ಬರೆಯುತ್ತ "ಬಸವಣ್ಣನವರು ದ್ವಿತೀಯ ಶಂಭುವಾಗಿರುವಂತೆ ಶರಣಬಸವರೂ ದ್ವಿತೀಯ ಶಂಭುವೇ ಆಗುತ್ತಾರೆ" ಎಂದು ಹೇಳಿರುವರು. ಈ ಉಭಯ ಮಹನೀಯರ ಮಾತುಗಳು ಮಾನವತಾವಾದಿ ಬಸವ ಮತ್ತು ಮಹಾದಾಸೋಹಿ ಶರಣಬಸವ ಇವರನ್ನು ಕುರಿತು ತೌಲನಿಕ ಅಧ್ಯಯನ ಕೈಗೊಳ್ಳುವುದರತ್ತ ಅಧ್ಯಯನಶೀಲರ ಗಮನ ಸೆಳೆಯುತ್ತವೆ.

ಬಸವ ಮತ್ತು ಶರಣಬಸವರ ವಿಭೂತಿ ಬದುಕನ್ನು ಅನ್ವೇಷಿಸುತ್ತ ನಡೆದಂತೆ, ಅಲ್ಲಿ ಭಿನ್ನತೆಗಳಿಗಿಂತ ಹೆಚ್ಚಾಗಿ ಸಾಮ್ಯತೆಯ ಅಂಶಗಳೇ ಎದುರುಗೊಂಡು ನಿಂತುಕೊಳ್ಳುತ್ತವೆ. ಅಂತಹ ಮುಖ್ಯವಾದ ಅಂಶಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವೇಚಿಸಬೇಕು.

೧. ಕಾಲ–ಪರಿಸರ

ಬಸವಣ್ಣನವರು ಜನಿಸುವುದಕ್ಕೆ ಮೊದಲು ಭಾರತೀಯ ಸಮಾಜವು ಜಡವಾಗಿದ್ದಂತೆ, ಶರಣಬಸವರ ಉಗಯಕ್ಕೆ ಮುನ್ನಿನ ಸಮಾಜವು ಜಡತ್ವದ ನೆಲೆಯನ್ನು ತಲುಪಿದ್ದಿತು. ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರ ಕ್ರಾಂತಿಯು ಧಾರ್ಮಿಕ–ಸಮಾಜಿಕ ಅನಿಷ್ಟಗಳನ್ನು ದೂರೀಕರಿಸಲು ಏನೆಲ್ಲ ಪ್ರಯತ್ನಮಾಡಿತು. ಅವರು ತನ್ಮೂಲಕ ವಿಶ್ವವು ಹಿಂದೆಂದೂ ಕಾಣದ ಪರಿವರ್ತನೆಯ ಬೆಳಕನ್ನು ಸಮಾಜಕ್ಕೆ ತಂದುಕೊಟ್ಟರು. ಆದರೆ ಹದಿನೆಂಟನೆಯ ಶತಮಾನಕ್ಕೆ ಬರುವ ಹೊತ್ತಿಗೆ ಭಾರತದ ಸಮಾಜವಂತೂ ಸರಿಯೇ ಸರಿ. ಕನ್ನಡ ನಾಡಿನ ಸಮಾಜವು "ನಾಯ ಬಾಲವೇ" ಆಗಿತ್ತು. ಮಹಾಶಿವಯೋಗಿ ಸತ್ವಕ್ಕೆ ಸಾಕಾರ ರೂಪದಂತಿದ್ದ ಕಡಕೋಳ ಮಡಿವಾಳರ ಜನನದ ಸಂಗತಿಯನ್ನೇ ಮುಂದುಮಾಡಿ; ಅವರಿಗೆ ಆಯ್ಯಾಚಾರ ದೀಕ್ಷೆ ನೀಡಲು ಯಾವ ವೀರಶೈವ ಮಠದ ಸ್ವಾಮಿಯೂ ಮುಂದೆ ಬಾರದೆ

ಇದ್ದ ಘಟನೆ ಏನನ್ನು ಸೂಚಿಸುತ್ತದೆ? ಬಸವಣ್ಣನವರು ತಮ್ಮ ಕಾಲದಲ್ಲಿ ಆಜ್ಞ ಸಮಾಜದ ಅಜ್ಞಾನವನ್ನು ಅತಿಕ್ರಮಿಸಿ, ಏನೆಲ್ಲ ಕಷ್ಟ ಪರಂಪರೆಗಳನ್ನು ಎದುರಿಸಿ ನಿಂತು ಮನುಷ್ಯನಿಗೆ ನಿಜವಾಗಿ ಮನುಷ್ಯನನ್ನಾಗಿ ಬಾಳುವುದು ಕಲಿಸಿದರು. ಮಹಾಮಾನವತೆಗೆ ಇನ್ನೊಂದು ಹೆಸರಾಗಿ ಅಳಲಿದವರ, ಬಳಲಿದವರ, ದುಃಖಿತರ, ದುರ್ಬಲರ, ದಲಿತಾನು ದಲಿತರ ಅಳಲಿಗೆ ಅಭಿವ್ಯಕ್ತಿಯ ಧೈರ್ಯವನ್ನು ತಂದುಕೊಟ್ಟರು. ಅವರಲೆಲ್ಲ ದೈವೀ ಅಂಶವನ್ನು ಕಂಡು, ಅವರನ್ನೇ ಜೀವಂತ ದೇವರೆಂದು ಅನುಸಂಧಾನಿಸಿದರು. ಅಂತ್ಯೋದಯದ ಸಮಾಜವನ್ನೂ ಸಾಮ್ರಾಜ್ಯವನ್ನೂ ಭುವಿಗೆ ತಂದರು. ಶರಣಬಸವರು ತಮ್ಮದೆ ಆದ ಸಾಧನೆಯ ನೆಲೆಯಲ್ಲಿ ಮಹಾದಾಸೋಹದ ಪರವಾಗಿ ನಿಂತು ಸಕಲ ಜೀವವನ್ನೂ ಸಮಾನವಾಗಿಯೇ ಕಂಡರು; ಸಕಲಜೀವ ಸಂಕುಲದ ಹಿತದಲ್ಲಿಯೇ ತಮ್ಮ ಮಹಾದಾಸೋಹ ಸಿದ್ಧಿಯನ್ನು ಕಂಡು ಆನಂದಿಸಿದರು. ಬಸವಾದಿ ಶಿವಶರಣರಂತೆ; ಮತ್ತೊಮ್ಮೆ ಅಂತಹದ್ದೇ ಪರಂಪರೆಯನ್ನು ಹೈದರಾಬಾದು ಕನ್ನಡ ಪ್ರದೇಶದ ಕಾಲ-ಪರಿಸರದ ಮೂಲಕ ದೇಶ ಇತ್ತ ತಿರುಗುವಂತೆ ಮಾಡಿದರು.

೨. ಸ್ಥಳಗಳ ಪಾತ್ರ : ಬಸವಣ್ಣನವರ ಬದುಕಿನ ಮಹತ್ವದ ಘಟ್ಟಗಳನ್ನು ರೂಪಿಸುವುದಕ್ಕೆ ಪ್ರಮುಖವಾಗಿ ಕೂಡಲ ಸಂಗಮ ಕ್ಷೇತ್ರ ಮತ್ತು ಕಲ್ಯಾಣ – ಇವು ಮಹತ್ವದ ಪಾತ್ರವಹಿಸಿವೆ. ಕೂಡಲಸಂಗಮದಲ್ಲಿ ತಮ್ಮ ಭವಿಷತ್ ಬದುಕನ್ನು ಸರಿಯಾಗಿ ಕಟ್ಟಿಕೊಂಡ ಬಸವಣ್ಣನವರು, ಅದರ ಫಲವನ್ನು ಮುಂದೆ ಕಲ್ಯಾಣಕ್ಷೇತ್ರದಲ್ಲಿ ವಿನಿಯೋಗಿಸಿದರು. ಶರಣಬಸವರ ಜೀವನದಲ್ಲಿ ಎರಡು ಸ್ಥಳಗಳು ಉಲ್ಲೇಖನೀಯವೆನಿಸುತ್ತವೆ. ಸುಮಾರು ಮೂವತ್ತಾರು, ನಲವತ್ತು ವರ್ಷಗಳ ಕಾಲ ಅವರು ತಮ್ಮ ಜನ್ಮಸ್ಥಳವಾದ ಅರಳಗುಂಡಿಗೆಯಲ್ಲಿ ಸಾಧಕ ಬದುಕಿನ ತಪಸ್ಸು ಮಾಡಿದರು. ಅವರು ಆರ್ಜಿಸಿಕೊಂಡಿದ್ದ ತಪಸ್ಸಿನ ಫಲವನ್ನು ಕಲಬುರ್ಗಿಯಲ್ಲಿ ಮತ್ತಷ್ಟು ಸಂವರ್ಧಿಸಿಕೊಂಡು ಜಗದ ಜಂಗಮನಿಗೆ ದಾಸೋಹ ಮಾಡಿದರು. ಬಸವ–ಶರಣಬಸವರ ಕಲ್ಯಾಣ–ಕಲಬುರ್ಗಿ ಸ್ಥಳಗಳು ಹೈದರಾಬಾದು ಕನ್ನಡಪ್ರದೇಶದ ನೆಲೆಗಳೇ ಎಂಬುದು ಇನ್ನೊಂದು ವಿಶೇಷ.

೩. ಸತಿವಿಡಿದು ನಿರ್ವಾಣ ಸತಿಯ ಕಂಡುದು : ವೀರಶೈವ ಧರ್ಮವು ತನ್ನ ಸಾಧಕರಿಗೆ ಪ್ರಪಂಚದಲಿದ್ದುಕೊಂಡೇ ಪಾರಮಾರ್ಥವನ್ನು ಸಾಧಿಸಲು ತಿಳಿಸುವುದರಿಂದ ಇದನ್ನು 'ಜೀವ–ಜೀವನ ಪ್ರೀತಿಯುಳ್ಳ' ಧರ್ಮವೆಂದು ಹೇಳಬೇಕು. ಬಸವ–ಶರಣಬಸವರು ವೀರಶೈವಾನು ಸಂಧಾನಿಗಳಾಗಿ, ತಮ್ಮ–ತಮ್ಮ ವೈಯಕ್ತಿಕ ಸಂಸಾರದ ಬದುಕನ್ನು ಶಿವನಿಗೆ ಒಪ್ಪಿಗೆಯಾಗುವಂತೆಯೇ ನಡೆಸಿದರು. ಬಸವಣ್ಣನವರಿಗೆ ನೀಲಾಂಬಿಕೆ ಗಂಗಾಂಬಿಕೆಯರೆಂಬ ಉಭಯ ಸತಿಯರಿದ್ದಂತೆ, ಶರಣಬಸವರಿಗೆ ಮಹಾದೇವಮ್ಮ–ಚೆನ್ನಬಸವಮ್ಮನವರೆಂಬ ಇಬ್ಬರು ಪತ್ನಿಯರಿದ್ದರು. ಬಸವಣ್ಣನವರಿಗೆ ಪ್ರಪಂಚವು ಸಾಧನೆಗೆ ಅಡ್ಡಿಯಾಗಲಿಲ್ಲ; ಅದು ಶಿವತತ್ವದ ಸೌಧವನ್ನೇರುವುದಕ್ಕೆ ಏಣಿಯಾಯಿತು. ಶರಣಬಸವರಿಗಾದರೂ ಅವರ ಬದುಕು ಮಹಾದಾಸೋಹ ಸಾಧನೆಗೆ ಆತಂಕವನ್ನುಂಟು ಮಾಡುವ ಮಾಯೆಯಾಗಲಿಲ್ಲ. ಅದು ಮಹಾದಾಸೋಹ ಸಿದ್ಧಾಂತದ ಪ್ರತ್ಯಕ್ಷಾನುಭೂತಿಗೆ ಪ್ರಯೋಗ ಶಾಲೆಯಾಯಿತ್ತು.

ಬಸವಣ್ಣನವರಿಗೆ ಬಾಲಸಂಗಯ್ಯನೆಂಬ ಒಬ್ಬನೇ ಮಗನಿದ್ದಂತೆ; ಶರಣಬಸವಂಗೆ ಗುರುಲಿಂಗಜಂಗಮನೆಂಬ ಒಬ್ಬನೇ ಸುಪುತ್ರನಿದ್ದನು. ಬಾಲಸಂಗ ಮತ್ತು ಗುರುಲಿಂಗಜಂಗಮ

ಇವರು ಅಲ್ಪಾಯುಷಿಗಳೇ ಆಗಿದ್ದಂತೆ ತಿಳಿದುಬರುತ್ತದೆ. ಉಭಯ ಮಹಾಪುರುಷರಿಗೆ ಪ್ರಾಪಂಚಿಕ ಕಷ್ಟ-ನಷ್ಟಗಳು ಬಾಧಿಸಲೇ ಇಲ್ಲ. ಏಕೆಂದರೆ ಏನೆಲ್ಲವೂ 'ಶಿವನ ಇಚ್ಛೆ'ಯೆಂದೇ ಅವರು ಬದುಕಿದುದರಿಂದ, ಭುವಿಯಬದುಕು, ಪ್ರಸಾದಮಯ ಬದುಕಾಯಿತು; ಶಿವಮಯ ಬದುಕಾಯಿತು. ಆ ಬದುಕಿನ ಮೂಲಕವೇ ಬಸವ ಶರಣಬಸವರು ಅಸಾಮಾನ್ಯವಾದ ಸಾಧನೆಯನ್ನು ಮಾಡಿದರು. ವ್ಯಕ್ತಿ ಸಾಧನೆಯೊಂದಿಗೆ; ಸಮಷ್ಟಿಯ ಶ್ರೇಯವನ್ನು ಅವರು ಸಿದ್ಧಿಮಾಡಿ ತೋರಿದರು.

೪. ಕಳ್ಳರಲ್ಲಿ ಶಿವನ ಕಾಣುವ ಶಿವದೃಷ್ಟಿ : ಬಸವಣ್ಣನವರ ಜೀವನದಲ್ಲಿ ಪತಿತ-ಪಾಪಿಗಳುದ್ಧಾರಕ್ಕೆ ಹಲವಾರು ನಿದರ್ಶನಗಳು ದೊರೆಕುತ್ತವೆ. ಹಾಗೆಯೇ ಶರಣಬಸವರ ದಾಸೋಹ ಜೀವನವು ಪೂರ್ತಿಯಾಗಿ ಪತಿತ-ಪಾಮರ-ಪಾಪಿಗಳ ಉದ್ಧಾರಕ್ಕಾಗಿಯೇ ಅರ್ಪಿತಗೊಂಡಿರುವುದಕ್ಕೆ ಉದಾಹರಣೆಗಳಿವೆ. ಬಸವಣ್ಣನವರ ಮಹಾಮನೆಗೊಂದು ದಿನ ರಾತ್ರಿ ಕಳ್ಳರು ಬಂದರು. ಬಂದ ಕಳ್ಳರನ್ನು ಅವರು ಕಳ್ಳರೆಂದು ಭಾವಿಸಲಿಲ್ಲ. ಸಾಕ್ಷಾತ್ ಸಂಗಮನಾಥನ ರೂಪವೆಂದೇ ತಿಳಿದರು. ಅವರ ಆನಂದಕ್ಕಾಗಿ ತಮ್ಮ ಪತ್ನಿಯರ ಮೈಮೇಲಿದ್ದ ಆಭರಣಗಳೆಲ್ಲವನ್ನೂ ತೆಗೆಯಿಸಿ ಕೊಟ್ಟರು. ಶರಣಬಸವರು ದಿನನಿತ್ಯದಂತೆ ನಸುಕಿನಲ್ಲಿ ಹೂ ಪತ್ರೆಗಳನ್ನು ತರಬೇಕು, ಅರಳಗುಂಡಿಗೆಯ ಅಡವಿಯಲ್ಲಿದ್ದಾ ಪತ್ರಿವನಕ್ಕೆ ಹೋದರು. ಅಲ್ಲಿ ಕಳ್ಳರು ಅವರನ್ನು ಮುತ್ತಿಕೊಂಡರು. ಆ ಕ್ಷಣಗಳಲ್ಲಿ ಶರಣಬಸವರಲ್ಲಿ ಕಳ್ಳರಿಗೆ ಕೊಡಲು ಏನೂ ಇರಲಿಲ್ಲ. ಕಳ್ಳರು ಅಸಮಾಧಾನಗೊಳ್ಳದಿರಲೆಂದು ಅಲ್ಲಿಂದ ಮರಳಿ ಮನೆಗೆ ಬಂದು; ಮನೆಯಲ್ಲಿ ಇದ್ದುದನ್ನು ಸಂಗ್ರಹಿಸಿಕೊಂಡು ಒಯ್ದು ಕಳ್ಳರಿಗೆ ಕೊಟ್ಟರು, ಅವರಲ್ಲಿ ಶಿವಾಂಶವನ್ನು ಕಂಡು ಹರುಷರಾದವರು. ಬಸವಣ್ಣನವರ ಮಹಾಮಾನವತೆಯ ದೃಷ್ಟಿಯು ಕಳ್ಳರನ್ನು ಒಳ್ಳೆಯ ಮನುಷ್ಯರನ್ನಾಗಿ ಮಾಡಿದಂತೆ; ಶರಣಬಸವರ ಮಹಾದಾಸೋಹ ದೃಷ್ಟಿಯು ಕಳ್ಳರನ್ನು ದಾಸೋಹ ಜೀವಿಗಳನ್ನಾಗಿ ಮಾಡಿತು.

೫. ಸಕಲ ಜೀವ ದಯಾದೃಷ್ಟಿ : ಬಸವಣ್ಣನವರಿಗೆ ಮನುಷ್ಯರ ಸೌಖ್ಯದೊಂದಿಗೆ ಒಟ್ಟು ವಿಶ್ವಜೀವ ಜಾಲದ ಸುಖವು ಸಾಧಿಸಬೇಕಾದುದು ಅವಶ್ಯಕವೆನಿಸಿತ್ತು. ಆದುದರಿಂದ ಅವರು ಸಕಲ ಜೀವದಲ್ಲಿ ಶಿವಾಂಶವಿದೆಯೆಂದೇ ವ್ಯವಹರಿಸುತ್ತಿದ್ದರು. ಒಂದು ದಿನ ಕಳ್ಳರು ಬಂದು, ಮಹಾಮನೆಯ ಕೊಟ್ಟಿಗೆಯಲ್ಲಿ ಕಟ್ಟಿದ್ದ ಆಕಳುಗಳನ್ನು ಬಿಚ್ಚಿಕೊಂಡು ಹೋದರು. ಸೇವಕನು ಈ ಸುದ್ದಿ ಬಸವಣ್ಣನವರಿಗೆ ಮುಟ್ಟಿಸಿದ. ಕರುಗಳು ತಮ್ಮ ತಾಯಿ ಆಕಳುಗಳನ್ನು ಆಗಲಿದ್ದರಿಂದ ಒಂದೇ ಸಮನೆ ಕೂಗುತ್ತಿದ್ದವು. ಬಸವಣ್ಣನವರಿಗೆ ಕರುಗಳ ಕೂಗು ಕೇಳುವುದಕ್ಕಾಗಲಿಲ್ಲ. ಅವುಗಳಿಗೆ ಉಂಟಾದ ಹಸಿವುಯೆಂದರೆ, ಅದು ಆ ಶಿವನ ಹಸಿವೇ ಸರಿ. ಹೀಗೆ ಭಾವಿಸಿದ ಅವರು ಕಟ್ಟಿದ್ದ ಕರುಗಳನ್ನು ಬಿಚ್ಚಿಬಿಟ್ಟರು. ಸೇವಕರನ್ನು ಕುರಿತು "ಯಾರು ಆಕಳುಗಳನ್ನು ಒಯ್ದಿದ್ದಾರೋ ಅವರನ್ನು ಹುಡುಕಿರಿ. ಈ ಕರುಗಳನ್ನು ಅವರಿಗೇ ಕೊಟ್ಟು ಬನ್ನಿರಿ. ಹಸಿದ ಕರುಗಳು ತಮ್ಮ ತಾಯ ಮೊಲೆಹಾಲನ್ನು ಉಣ್ಣಲಿ"ಯೆಂದು ತಿಳಿಸಿದರು.

ಶರಣಬಸವರ ಸಕಲಜೀವದಯಾಪಾರಿ ಭಾವನೆಯು ಅಗಾಧವಾಗಿತ್ತು. ಅವರು ತಮ್ಮ ಕೃಷಿಕಾಯಕದ ದಾಸೋಹ ಹೊಲದಲ್ಲಿ ಪಶು ಪಕ್ಷಿಗಳಿಗಾಗಿ ಅಲ್ಲಿನ ಬೆಳೆಯನ್ನೇ ತಿನ್ನಲೆಂದು ಬಿಟ್ಟಿದ್ದರು. ಪಶುಗಳು ಹೊಲದಲ್ಲಿ ಸರಳವಾಗಿ ಬರುವುದಕ್ಕೆ ಅವಕಾಶವಾಗಲಿಯೆಂದು ಹೊಲಕ್ಕೆ ಹಚ್ಚಿದ್ದ ಬೇಲಿಯನ್ನು ತೆಗೆಯಿಸಿಬಿಟ್ಟರು. ಪಶುಪಕ್ಷಿಗಳಿಗೆಲ್ಲ ಆಹಾರದೊಂದಿಗೆ ನೀರಿನ

ಅನುಕೂಲತೆ ಒದಗಿಸಿಕೊಡಲೆಂದು, ಹೊಲದ ನಾಲ್ಕು ಮೂಲೆಗಳಲ್ಲಿ ರಂಜಣಿಗೆಗಳನ್ನು ಇರಿಸಿ, ತಾವೇ ಸ್ವತಃ ನೀರುತುಂಬುವ ಕೈಂಕರ್ಯ ಕೈಕೊಂಡರು.

ಒಂದು ಸಲ ಕಟುಕರು ಕೆಲವು ಪಶುಗಳನ್ನು ವಧಿಸಲೆಂದು ಬಯ್ಯುತ್ತಿದ್ದರು. ಶರಣಬಸವರು ಅದನ್ನು ಗಮನಿಸಿ, ಕಟುಕರಿಂದ ಎಲ್ಲ ದನಗಳನ್ನು ಬೆಲೆಕೊಟ್ಟು ಕೊಂಡು, ತಮ್ಮ ದಾಸೋಹ ಮನೆಯಲ್ಲಿ ಪೋಷಿಸಿದರು. ತಮ್ಮ ಲಿಂಗಾರ್ಚನೆಗೆ ಬೇಕಾಗುತ್ತಿದ್ದ ಹೂ–ಪತ್ರೆಗಳನ್ನು ಅವರು ಎಂದೂ ಹರಿದು ತರುತ್ತಿರಲಿಲ್ಲ. ಅವುಗಳಲ್ಲೂ ಜೀವವಿದೆಯೆಂದು ಶರಣರು ಭಾವಿಸಿದ್ದರು. ಆದುದರಿಂದ ಗಿಡದ ಕೆಳಗೆ ಗಾಳಿಯಿಂದ ಉದುರಿಬಿದ್ದ ಹೂ–ಪತ್ರೆಗಳನ್ನು ಮಾತ್ರ ಆಯ್ದು ತಂದು ಪೂಜೆ ಮಾಡುತ್ತಿದ್ದರು.

೬. ಸಕಲಜೀವ ಸಮಾನತೆ : ಅಸಮಾನತೆಯು ತಾಂಡವವಾಡುತ್ತಿದ್ದ ಅಂದಿನ ಕಾಲದ ಸಮಾಜದಲ್ಲಿ ಸಕಲ ಜೀವ ಸಮಾನತೆ ಸಾಧಿಸುವುದು ಪವಾಡ ಮಾಡುವುದಕ್ಕಿಂತಲೂ ಹಿರಿಯ ಸಾಧನೆಯಾಗಿತ್ತು. ಬಸವಣ್ಣನವರು ತಮ್ಮಂತೆ ಇರುವ ಸಮಾನಶೀಲ ಮತ್ತು ಸಮಾನಧರ್ಮಗಳನ್ನು ಅನುಭಾವಮಂಟಪದ ಆಧ್ಯಾತ್ಮವೇದಿಕೆಯ ಮೂಲಕ ಸಂಘಟನೆಗೊಂಡು ಸಕಲಜೀವದಲ್ಲಿ ಸಮಾನತೆಯನ್ನುಂಟುಮಾಡುವ ಸಾಧನೆ ಸಲ್ಲಿಸಿದರು. ಬ್ರಾಹ್ಮಣ ಮೊದಲ್ಗೊಂಡು ಅಂತ್ಯಜನವರೆಗೂ ಬರುವ ಎಲ್ಲ ಜಾತಿಯ ಜನರಿಗೆ "ತಾವು ಪರಸ್ಪರ ಸಮಾನರು; ಶಿವಾಂಶಕರು ಆತ್ಮವುಳ್ಳವರು" ಎಂದು ಹೇಳುವುದಕ್ಕೆ ಸಾಧ್ಯವಾದುದು ಬಸವಾದಿ ಶರಣರ ಸಾಮಾಜಿಕ ಕ್ರಾಂತಿಯ ಸಂದರ್ಭದಲ್ಲಿ.

ಮಹಾದಾಸೋಹಿ ಶರಣಬಸವರ ಕಾಲಸಂದರ್ಭದಲ್ಲೂ ಮತ್ತೊಮ್ಮೆ ಈ ನಾಡು–ಈ ನೆಲವು ಸಕಲ ಸಮಾನತೆಯ ಸೌಖ್ಯವನ್ನು ಅನುಭವಿಸುವಂತಾಯಿತು. ಅನ್ಯತ್ರ ಭಾಗಗಳಲ್ಲಿ ಅತ್ಯಂತ ವಿರಳವಾಗಿ ಕಾಣುತ್ತಿದ್ದ ಹಿಂದೂ–ಮುಸ್ಲಿಮರ ಬಾಂಧವ್ಯ ಮತ್ತು ಭಾವೈಕ್ಯತೆಯಂತೂ ಶರಣಬಸವರ ಬದುಕಿನ ಕಾಲದಲ್ಲಿ 'ನ ಭೂತೋ' ಎಂಬಂತೆ ಸಾಧಿತವಾಯಿತು. ಹದಿನೆಂಟು ಹಲವು ಜಾತಿಯ ಜನರೆಲ್ಲರೂ ತಮ್ಮ ಭೇದಭಾವ ಮರೆತು ಶರಣಬಸವರ ಭಕ್ತರಾದರು. ಅಂತಹ ಪರಂಪರೆ ಇಂದಿಗೂ ಈ ಸ್ಥಳದಲ್ಲಿ ಜೀವಂತವಾಗಿರುವುದನ್ನು ಕಾಣಬಹುದು. ಅಸ್ಪೃಶ್ಯನೆಂದು ಕಡೆಗಣಿಸಲ್ಪಟ್ಟಿದ್ದ ಕುರುಡು ಚಮ್ಮಾರನನ್ನು ದಾಸೋಹ ಮನೆಗೆ ಕರೆಯಿಸಿಕೊಂಡು ಅವನ ಉಪಚಾರ ಮಾಡಿ ಕಳುಹಿಸಿದ ಘಟನೆಯು ಶರಣಬಸವರ ಸಕಲಜೀವ ಸಮಾನತೆಗೆ ಸಾಕ್ಷಿ ನುಡಿಯುತ್ತದೆ. ದಲಿತ–ದುರ್ಬಲಾದಿ ಜನರು ಬಸವನ ಕಾಲದಲ್ಲಿ ಧಾರ್ಮಿಕ ಸಾಮಾಜಿಕ ಸಮಾನತೆ ಹೊಂದಿದಂತೆ, ಶರಣಬಸವನ ಕಾಲದಲ್ಲೂ ಆ ಪರಂಪರೆಯ ಜನರು ಆಧ್ಯಾತ್ಮಿಕಾದಿ ಅಧಿಕಾರಿಗಳನ್ನು ಹೊಂದಿ ಸಾಮಾಜಿಕ ನ್ಯಾಯದ ಸಫಲತೆ ಕಂಡುದು ವಿಶೇಷ ಸಂಗತಿಯಾಗಿದೆ.

೭. ಜಂಗಮವೇ ಪ್ರಾಣವಾಗಿದ್ದವರು : ವೀರಶೈವ ದರ್ಶನವನ್ನು ಚೈತನ್ಯಶೀಲವಾಗಿಸಿದವರು ಬಸವ–ಶರಣಬಸವರು. ಬಸವಣ್ಣನವರ ಜನನಕ್ಕೆ ಪೂರ್ವದಲ್ಲಿ ವೀರಶೈವ ಧರ್ಮವು ತನ್ನ ತತ್ತ್ವಸಂಹಿತೆಯಲ್ಲಿ ಹಲವಾರು ಶೈವ–ವೈದಿಕಾಂಶಗಳನ್ನು "ಸಂಗದೋಷ"ದಿಂದ ಎಂಬಂತೆ ಒಳಗೊಂಡು ಆಚರಣೆಯಲ್ಲಿದ್ದಿತು. ಬಸವಣ್ಣನವರು ವೀರಶೈವದಲ್ಲಿನ ಶೈವ–ವೈದಿಕಾಚರಣೆಗಳನ್ನು ಆರೈದು ನೋಡಿ; ಅವುಗಳನ್ನು ತೆಗೆದುಹಾಕಲು ಪ್ರಯತ್ನಪಟ್ಟರು. ತನ್ಮೂಲಕ ಜನತೆಗೆ 'ಶುದ್ಧ ವೀರಶೈವ ದರ್ಶನ'ವನ್ನು ಕೊಟ್ಟರು. ಶೈವಬ್ರಾಹ್ಮಣರಾಗಿದ್ದ

ಬಸವಣ್ಣನವರು ವೀರಶೈವ ಧರ್ಮವನ್ನು ಸ್ವೀಕರಿಸಿ, ಅವರ ತತ್ತ್ವಗಳನ್ನು ತಮ್ಮ ಬದುಕಿನಲ್ಲಿ ಅನುಸಂಧಾನ ಮಾಡುವುದರ ಮುಖಾಂತರ ಅವುಗಳನ್ನು ಕ್ರಿಯಾಶೀಲಗೊಳಿಸಿದ್ದರು. ಜನತೆಗೆ ಅವುಗಳ ಆಚರಣೆಯ ನೈಜತೆಯನ್ನು ಸರಿಯಾಗಿ ತಿಳಿಸಿಕೊಟ್ಟರು. ಪರವಸ್ತುವಿನ ಪ್ರತೀಕವೇ ಆಗಿರುವ ಗುರು–ಲಿಂಗ–ಜಂಗಮವೆಂಬವುಗಳು ವೀರಶೈವ ಧರ್ಮದಲ್ಲಿ ಅತ್ಯಂತ ಪ್ರಮುಖ ತತ್ತ್ವಗಳು. ಅವು ಪರಸ್ಪರ ಪೂರಕವಾದವುಗಳು. ವೀರಶೈವನೂ ಗುರುಸೇವಕ, ಲಿಂಗಧಾರಕನಾಗಿರುವಂತೆ, ಜಂಗಮ ಧಾರಿಯೂ ಆಗಿರುತ್ತಾನೆ. ಗುರುಸೇವೆ ಮಾಡುವುದು ತನ್ನ ಉದ್ಧಾರಕ್ಕಾಗಿ, ಲಿಂಗಾನುಸಂಧಾನ ಮಾಡುವುದು ಲಿಂಗಸ್ಥಲ ತಲುಪುವುದಕ್ಕಾಗಿ ಅಥವಾ ತನ್ನಲ್ಲಿರುವ ಅದರ ಅರಿವನ್ನು ಜಾಗೃತವಾಗಿಸಿಕೊಂಡು ಪರಮಾತ್ಮ ಸ್ವರೂಪನಾಗುವುದಕ್ಕಾಗಿ. ಜಂಗಮ ದಾಸೋಹ ಮಾಡುವಲ್ಲಿ 'ವಿಶ್ವಪ್ರಜ್ಞೆ' ಅಡಕವಾಗಿದೆ. ಜಗವೆಲ್ಲವೂ ಜಂಗಮ. ಜಂಗಮವೆಂದರೆ ಚೈತನ್ಯದಾಯಕವಾದುದು. ಚಲನಶೀಲತೆಯುಳ್ಳದ್ದು; ಜ್ಞಾನ ಸ್ವರೂಪದ್ದು. ವೀರಶೈವರಲ್ಲಿ ಜಂಗಮಕ್ಕೆ ಧನವನ್ನು ದಾಸೋಹ ಮಾಡಬೇಕೆಂದು ಹೇಳಲಾಗುತ್ತದೆ. ಇದರ ಅರ್ಥ ಚೈತನ್ಯದ ಅಂಶವುಳ್ಳಂತಹ ಸಕಲ ಜೀವಜಾಲಕ್ಕೆ ಅರ್ಪಣಾಭಾವದಿಂದ ತನ್ನಲ್ಲಿದ್ದದನ್ನು ಅರ್ಪಿಸುವುದೆಂದೇ ಅರ್ಥವಾಗುತ್ತದೆ. ಬಸವಣ್ಣನವರು ಇದೇ ಅರ್ಥದಲ್ಲಿಯೇ ಜಂಗಮ ತತ್ವವನ್ನು ಅನುಷ್ಠಾನಿಸಿರೆಂದು ಹೇಳಬೇಕು. ಅವರು ಒಂದು ಸಲ ಮಲಗಿಕೊಂಡಾಗ ಜಂಗಮನೇ ತನ್ನ ದರ್ಶನಕ್ಕಾಗಿ ಬಂದನಂತೆ. ಸೇವಕನು ಜಂಗಮನನ್ನು "ಬಸವಣ್ಣನವರು ಮಲಗಿದ್ದಾರೆ, ಈಗ ದರ್ಶನಗೊಳ್ಳುವಂತಿಲ್ಲ. ನಂತರ ಬರಬೇಕು ಎಂದು ಹೇಳಿ ಕಳುಹಿಸಿದರು. ಜಂಗಮ ಹೊರಟುಹೋದಾಗ, ಇತ್ತ ಬಸವಣ್ಣನವರ ಪ್ರಾಣವೂ ಹೊರಟು ಹೋದಂತೆ ಘಟನೆಯಾಗುತ್ತದೆ. ಬಸವಣ್ಣನವರಿಗೆ ಜಂಗಮವೆಂದರೆ ಪ್ರಾಣವಾಗಿತ್ತು. ಅವರ ಪ್ರಾಣವೇ ಜಂಗಮವಾಗಿತ್ತು. ಲೋಕಹಿತದ ಬಗ್ಗೆ ಇದ್ದ ಆದಮ್ಯ ಕಾಳಜಿಗೆ "ಜಂಗಮಪ್ರಾಣಿ" ಎಂಬ ಪರಿಭಾಷೆಯೊಂದು ಪ್ರತಿಮೆಯೆನಿಸುತ್ತದೆ. "ಜಂಗಮತ್ವದ ಶಕ್ತಿ ಜಾಗೃತವಾಗಿರುವ ಸಮಾಜದ ಸೇವೆ ಎಂದು ನಾನು ತಪ್ಪುತ್ತೇನೆಯೋ ಅಂದೇ ನನ್ನ ಜೀವ ಹಾರಿ ಹೋಗುತ್ತದೆ" ಎಂಬಂತಹ ದೃಢ ಶಪಥವು ಬಸವಣ್ಣನವರು ಧಾರಣ ಮಾಡಿದ್ದರೆಂಬುದಕ್ಕೆ ಮೇಲಿನ ಘಟನೆಯೊಂದು ಸಂಕೇತವಾಗಿ ನಿಂತುಕೊಳ್ಳುತ್ತದೆ.

ಬಸವಣ್ಣನವರು ಹೇಗೆ ಜಂಗಮತತ್ತ್ವಕ್ಕೆ ತಮ್ಮ ಪ್ರಾಣವನ್ನೇ ಅರ್ಪಣೆ ಮಾಡಲು ಸದಾಸಿದ್ಧರಿದ್ದರೋ, ಹಾಗೆ ಶರಣಬಸವರು ತಾವು ಬದುಕಿನುದ್ದಕ್ಕೂ ಕೈಗೊಂಡ ಜಂಗಮದಾಸೋಹಕ್ಕಾಗಿಯೇ ತಮ್ಮನ್ನು ಸಮರ್ಪಿಸಿಕೊಂಡರು. ದಮ್ಮು ರೋಗದಿಂದ ನರಳುತ್ತಿದ್ದ ಜಂಗಮನೊಬ್ಬನು ಶರಣಬಸವರ ದರ್ಶನಕ್ಕಾಗಿ ಬಂದನು. ದರ್ಶನ ಪಡೆದ ಜಂಗಮನು ಉಬ್ಬಸದ ಒತ್ತಡದಲ್ಲಿ "ದಮ್ಮುರೋಗವ ಕಳಿ"ಯೆನ್ನುವುದಕ್ಕೆ ಬದಲಾಗಿ ಅವನು "ದಮ್ಮುರೋಗವ ಕೊಳಿ" ಎಂದನು. ಶರಣಬಸವರು ಜಂಗಮನ ಆಜ್ಞೆ ಶಿವನ ಆಜ್ಞೆಯೆಂದು' ಪರಿಭಾವಿಸಿದರು. "ನಿಮ್ಮ ದಮ್ಮುರೋಗ ನನಗೆ ಬರಲಿ ತಂದೆ" ಎಂದು ಹೇಳಿದರು. ಕೆಲವು ದಿನಗಳಲ್ಲಿಯೇ ಜಂಗಮನು ದಮ್ಮುರೋಗದಿಂದ ಗುಣಮುಖವಾಗಿ ಆರೋಗ್ಯಭಾಗ್ಯವನ್ನು ಪಡೆದುಕೊಂಡನು. ಶರಣಬಸವರಲ್ಲಿ ದಮ್ಮುರೋಗವು ಕಾಣಿಸಿಕೊಂಡಿತು. ಅವರು ದಮ್ಮುರೋಗದಿಂದಲೇ ಲಿಂಗೈಕ್ಯರಾದುದು ಚರಿತ್ರೆಯ ಘಟನೆ. ಹೀಗೆ ಶರಣ ಬಸವರು ಜೀವನದುದ್ದಕ್ಕೂ ಯಾವುದನ್ನು ಬಲವಾಗಿ ಪ್ರೀತಿಸಿದ್ದರೋ, ಅಂತಹ ಜಂಗಮ ತತ್ತ್ವಕ್ಕಾಗಿ

ಜಂಗಮ ದಾಸೋಹ ನಿಷ್ಠೆಗಾಗಿ, ತನ್ನಲ್ಲಿದ್ದುದನ್ನೆಲ್ಲ ಅರ್ಪಿಸುವುದರೊಂದಿಗೆ, ಕೊನೆಗೆ ಪ್ರಾಣವನ್ನೂ ಅರ್ಪಿಸಿದುದು ಅವರ 'ಜಂಗಮ ಪ್ರಾಣಿ' ತತ್ತ್ವ ಸಾಧನೆಗೆ ನಿದರ್ಶನವಾಗುತ್ತದೆ. ಬಸವ-ಶರಣಬಸವರು ವೀರಶೈವ ತತ್ತ್ವಗಳನ್ನು ಕೊಡಲು, ಉಪದೇಶ ಮಾಡಲು ಹೋದವರಲ್ಲ. ಅವರು ತಾವು ಹೇಳುವುದನ್ನು ತಮ್ಮ ಬದುಕಿನಲ್ಲಿಯೇ ಅನುಸಂಧಾನಗೈದು ಜನತೆಗೆ ಅರುಹಿದರು. ಹಾಗಾಗಿ ಉಭಯಶರಣರ ಜೀವನವೇ ಇಂದಿಗೂ ಜಗತ್ತಿಗೆ ಬಹುಮುಖ್ಯ ಸಂದೇಶವಾಗಿದೆ, ಬೋಧೆಯಾಗಿದೆ.

೮. ಕಾರಣಿಕ ವ್ಯಕ್ತಿತ್ವ : ಬಸವ ಮತ್ತು ಶರಣಬಸವರ ಜೀವನದಲ್ಲಿ ಹಲವಾರು ಪವಾಡಗಳು ಜರುಗಿವೆ. ಆದುದರಿಂದ ಅವರ ವ್ಯಕ್ತಿತ್ವವು ಕಾರಣಿಕ ವ್ಯಕ್ತಿತ್ವವಾಗಿ ಜನತೆಗೆ ಅನುಭವಕ್ಕೆ ಬಂದಿದೆ; ಆಸ್ತಿಕ ಮನಸ್ಸುಗಳಿಗೆ ಅಂತಹ ಅನುಭವ ಇಂದಿಗೂ ಆಗುತ್ತಲಿದೆ.

ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಎಂಬತ್ತೆಂಟು ಪವಾಡಗಳನ್ನು ಮಾಡಿದಂತೆ ಹೇಳಿಕೊಂಡಿದ್ದಾರೆ. ಶರಣಬಸವರ ಬದುಕಿನಲ್ಲಿ ಘಟಿಸಿದ ಎಪ್ಪತ್ತೂರು ಪವಾಡಗಳನ್ನು ಪುರಾಣಕವಿಗಳು ತಮ್ಮ ಕೃತಿಗಳಲ್ಲಿ ದಾಖಲು ಮಾಡಿದ್ದಾರೆ. ಬಸವಣ್ಣನವರ ಜೀವನದಲ್ಲಿ ಜರುಗಿದ ಬಹುಸಂಖ್ಯಾತ ಪವಾಡಗಳು ಲೋಕಜೀವದ ಉದ್ಧಾರಕ್ಕಾಗಿ ಮತ್ತು ಅವರಿಗೆ ಆನಂದವನ್ನು ತಂದುಕೊಡುವುದಕ್ಕಾಗಿಯೇ ನಡೆದಿವೆಯೆನ್ನುವಂತೆ ಕಾಣುತ್ತದೆ. ಹಾಗೆಯೇ ಶರಣಬಸವರು ಲೋಕದ ಜನರಿಗೆ ತಮ್ಮ ದಾಸೋಹ ಸೇವೆಯನ್ನು ಅರ್ಪಿಸಲೆಂಬಂತೆ ಪವಾಡಮಯಜೀವನವನ್ನು ಬದುಕಿದ್ದಾರೆ. ಯಾವ ಮಹಾಪುರುಷನೂ ಉದ್ದೇಶಪೂರ್ವಕವಾಗಿ ಪವಾಡಗಳು ಮಾಡಲು ಹೋಗಲಿಲ್ಲ. ವಿಭೂತಿಗಳ ಜೀವನದಲ್ಲಿ ಸಹಜಮಾಟವೆಂಬಂತೆ ಅವು ನಡೆದುಹೋಗುತ್ತವೆ. ಬಸವ-ಶರಣಬಸವರು 'ಲಿಂಗಶಕ್ತಿ' ಯೇ ಆಗಿದ್ದರಿಂದ ಅವರ ಇಚ್ಛೆಗಳು ಲಿಂಗ (ಶಿವ)ನ ಇಚ್ಛೆಗಳಾಗಿದ್ದವು; ಲಿಂಗದೇವನ ಇಚ್ಛೆಗಳೇ ಅವರ ಇಚ್ಛೆಗಳಾಗಿದ್ದವು. ಯಾರು ಈ ರೀತಿಯಲ್ಲಿ ಜೀವನದಲ್ಲಿ ಜೀವಿಸುತ್ತಾರೋ ಅವರೇ ಕಾರಣಿಕ ಶಕ್ತಿಗಳಾಗುತ್ತಾರೆ.

೯. ಧಾರ್ಮಿಕ ನೆಲೆಯಿಂದ ಬಂದವರು : ಬಸವ-ಶರಣಬಸವರು ಮೂಲತಃ ಧಾರ್ಮಿಕ ಮಹಾಪುರುಷರು. ವೀರಶೈವ ಧರ್ಮ-ಸಂಸ್ಕೃತಿಯ ಪ್ರಸಾರದ ಕಾರ್ಯವನ್ನು ಉದಾತ್ತ ಭಾವದಿಂದ ಕೈಕೊಂಡವರು. ಧರ್ಮಕ್ಕೆ ಆಧ್ಯಾತ್ಮದ ತಳಹದಿಯನ್ನು ಕಲ್ಪಿಸಿಕೊಡುವುದರ ಮುಖಾಂತರ, ಅದನ್ನು ಎಲ್ಲ ವ್ಯಕ್ತಿಗಳ ಆತ್ಮೋನ್ನತಿಗೆ ಸಾಧಕವಾಗಿ ನಿಲ್ಲಬಲ್ಲ ಮಹತ್ವದ ಸಾಧನವನ್ನಾಗಿಸಿದರು. ಬಸವ-ಶರಣಬಸವರು ಧರ್ಮವನ್ನು ಧರ್ಮಕ್ಕಾಗಿ ಆರೋಪಿಸ ಹೊರಟವರಲ್ಲ. ಅದು ಮಾನವರ ಹಿತಕ್ಕೆ ವಿಧಿತವಾಗುವಂತೆ, ಮಾನವತೆಯ ಪೋಷಣೆಗೆ ಶಕ್ತವಾಗುವಂತೆ ಪರಿಸ್ಕರಿಸಿದರು. ಸ್ವಧರ್ಮಪಕ್ಷಪಾತಿಗಳಾಗಿ ಅವರು ಲೋಕವನ್ನು ನೋಡಲಿಲ್ಲ; ಸ್ವಧರ್ಮದಲ್ಲೂ ಮನುಷ್ಯ ಧರ್ಮದ ಸತ್ವವನ್ನು ಜೀವಂತವಾಗಿರಿಸುವುದರ ಮೂಲಕ ಅದನ್ನು 'ಮಹಾಮಾನವತಾವಾದದ ಧರ್ಮ'ವನ್ನಾಗಿ ಮಾಡಿ; ಜನತೆಗೆ ಅನುಸಂಧಾನ ಮಾಡಲು ಕೊಟ್ಟರು. ಹಾಗಾಗಿಯೇ ವೀರಶೈವ ಧರ್ಮವು ಮಾನವತಾವಾದಿ ಧರ್ಮವಾಯಿತು; ದಾಸೋಹಧರ್ಮವಾಯಿತು; ಪರಿಪೂರ್ಣ ಧರ್ಮವೆನಿಸಿ; ವಿಶ್ವಧರ್ಮವಾಗುವ ಎಲ್ಲ ಅರ್ಹತೆಗಳನ್ನು ಧಾರಣ ಮಾಡಿಕೊಂಡಿತು. ವಿಶಾಲ ಅರ್ಥದಲ್ಲಿ 'ಧರ್ಮ'ವೆಂಬ ಪರಿಭಾಷೆಯನ್ನು ಬಸವ-ಶರಣಬಸವರು ವಿವರಿಸಿ ಹೇಳಿದ್ದರಿಂದಲೇ

ಬೇರೆಲ್ಲ ಧರ್ಮೀಯರೂ ಅವರನ್ನು ಪೂಜ್ಯ ಭಾವದಿಂದ ಮನ್ನಿಸುವಂತಾಯಿತು. ಇಂದು ಮುಸ್ಲಿಮರೂ ಸಹ ಬಸವ-ಶರಣಬಸವರ ಸನ್ನಿಧಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಿರುವುದು ಪ್ರತ್ಯಕ್ಷವಾಗಿ ಕಾಣುವ ಸಂಗತಿಯಾಗಿದೆ. ಧಾರ್ಮಿಕ ಸ್ಥಿತಿಯಿಂದ ಬಂದ ಬಸವ-ಶರಣಬಸವರು ಧರ್ಮದ ಗಿಂಡಿಯಿಂದ ಆಧ್ಯಾತ್ಮದ ಅಮೃತವನ್ನು ಲೋಕದ ಜೀವರಿಗೆ ಸವಿಯಲು ನೀಡಿದರೆನ್ನಬೇಕು.

ಹೀಗೆ ಇನ್ನೂ ಹಲವಾರು ಸಮಾನ ಅಂಶಗಳನ್ನು ಉಭಯಶಕ್ತಿಗಳ ವ್ಯಕ್ತಿತ್ವದಲ್ಲೂ ಗುರುತಿಸುತ್ತ ಹೋಗಬಹುದಾಗಿದೆ. ಅವರ ಜೀವನದ ಘಟನೆಗಳ ಸಮಾನತೆಯಾಗಿರಬಹುದು, ಕಾಯಕ ದಾಸೋಹದ ತತ್ತ್ವಗಳ ಬಗೆಗಿನ ಅವರ ವೈಚಾರಿಕ ಸಮಾನತೆಯಾಗಿರಬಹುದು, ಅವುಗಳಲ್ಲಿ ಯಾವವೂ ಉದ್ದೇಶಪೂರ್ವಕವಾಗಿ ಸೃಷ್ಟಿಗೊಂಡವುಗಳು ಅಲ್ಲವೇ ಅಲ್ಲ. "ವಿಶ್ವದ ಮಹಾಪುರುಷರೆಲ್ಲರೂ ಹೆಚ್ಚುಕಡಿಮೆ ಸಮಾನ ಜೀವನವನ್ನು ಹೊಂದಿರುತ್ತಾರೆ; ಸಮಾನರೀತಿಯಲ್ಲಿ ಆಲೋಚನೆ ಮಾಡುತ್ತಾರೆ "ಎಂಬುದಕ್ಕೆ ಉಪಷ್ಟಂಭಕವಾಗಿ ನಿಲ್ಲಬಹುದಾದ ವಿಷಯಗಳಷ್ಟೆ.

ಪ್ರಾಚೀನವಾಗಿದ್ದ ವೀರಶೈವ ಪರಂಪರೆಯು ಬಸವ ಪ್ರಜ್ಞೆಯಲ್ಲಿ ಸಮಷ್ಟಿರೂಪ ಧಾರಣಮಾಡಿ ವಿಕಾಸವಾಯಿತು; ಉದಾತ್ತವಾಯಿತು; ಉನ್ನತೋನ್ನತವಾಯಿತು. ಹಾಗೆಯೇ ಬಸವ ಪ್ರಜ್ಞೆಯಲ್ಲಿ ವಿಕಾಸಗೊಂಡ ವೀರಶೈವ ಪರಂಪರೆಯು ಶರಣಬಸವ ಪ್ರಜ್ಞೆಯಲ್ಲಿ ಮತ್ತೆ ಜೀವಂತವಾದುದು; ಹಾಗೂ ತನ್ನ ಸತ್ವವನ್ನು ಹೆಚ್ಚಿಸಿಕೊಂಡುದು ಈ ಉಭಯಶಕ್ತಿಗಳ ನಡುವೆ ಕಾಣುವ ಕೆಲವು ಭಿನ್ನತೆಗಳತ್ತ ಗಮನ ಸೆಳೆಯುತ್ತದೆ. ಕೆಲವು ಮನನಿಸಬೇಕು.

ಬಸವಣ್ಣನವರ ಜನನವಾದುದು ಶೈವಬ್ರಾಹ್ಮಣ ಮನೆತನದಲ್ಲಿ. ಶರಣಬಸವರು ಮೂಲತಃ ವೀರಶೈವರಾಗಿಯೇ ಹುಟ್ಟಿದರು. ಬಸವಣ್ಣನವರಿಗೆ ಅಂದಿನ ಕಾಲದ ರಾಜಕೀಯ ಸಂಪರ್ಕವುಳ್ಳ ಮನೆತನದ ಹಿನ್ನೆಲೆ-ನೆಲೆ ದೊರತಿದೆ. ಆದರೆ ಶರಣಬಸವರು ಸಾಮಾನ್ಯವಾಗಿದ್ದ ಕೃಷಿಕ ಕುಟುಂಬದಲ್ಲಿ ಹುಟ್ಟಿದರು. ಈ ವಿಚಾರದ ಸಂದರ್ಭದಲ್ಲಿ ಬಸವಣ್ಣನವರು ಬುದ್ಧನಿಗೆ ಹತ್ತಿರವಾಗುತ್ತಿದ್ದರೆ ಶರಣಬಸವರು ಏಸು-ಪೈಂಗಬರರಿಗೆ ಹತ್ತಿರವಾಗುತ್ತಾರೆ.

ಬಸವಣ್ಣನವರು ತಮಗೆ ಜನ್ಮಕೊಟ್ಟ ತಂದೆ ತಾಯಿಗಳ ಮಡಿಲಿನಲ್ಲಿಯೇ ಬೆಳೆದವರಾದರೆ, ಶರಣಬಸವರು ಜನ್ಮಕೊಟ್ಟ ತಂದೆ ತಾಯಿಗಳ ಮಡಿಲಿನಿಂದ ದತ್ತುಪುತ್ರನಾಗಿ ಸಾಕು ತಂದೆ ತಾಯಿ ಆದಯ್ಯ-ಮಡಿಯಮ್ಮರ ಮಡಲಿನಲ್ಲಿ ಬೆಳೆದರು.

ಬಸವಣ್ಣನವರು ತಮ್ಮ ದಾಸೋಹ ಜೀವನಕ್ಕೆ ಸ್ವೀಕರಿಸಿದ್ದು ಕರಣಿಕ, ದಂಡಾಧೀಶ ಮಂತ್ರಿ ಪದವಿ-ಅಧಿಕಾರಗಳನ್ನು. ಆದರೆ ಶರಣಬಸವರಿಗೆ ಇಂತಹ ಯಾವುದೇ ಅಧಿಕಾರ-ಪದವಿಗಳಿರಲಿಲ್ಲ. ಅವರು ತಮ್ಮ ಮನೆತನದ ಕಾಯಕವಾಗಿದ್ದ ಕೃಷಿಯನ್ನೇ ತಮ್ಮ ದಾಸೋಹ ಜೀವನದ ಕಾಯಕವಾಗಿ ಸ್ವೀಕರಿಸಿ; ಸಾಮಾನ್ಯ ರೈತರಂತೆ ಬದುಕನ್ನು ಆರಂಭಿಸಿ; ಮಹಾದಾಸೋಹಿಯಾಗಿ ಬೆಳೆದರು. ವರ್ಣಾಶ್ರಮದವರಲ್ಲಿ ಶೂದ್ರರ ಕೆಲಸವಾಗಿದ್ದ ಕೃಷಿಯನ್ನು 'ಕಾಯಕ'ದ ಮಟ್ಟಕ್ಕೆ ಏರಿಸಿದರು. ಕಾಲಾಂತರದಲ್ಲಿ ಸುರಪುರದ ದೊರೆಗಳು, ನೈಜಾಮ ಅರಸರ ಮನ್ನಣೆಗೆ 'ಮಹಾಪುರುಷ'ರೆಂಬ ಕಾರಣವಾದ ಅರಸುಮನೆತನಗಳ ಗೌರವಕ್ಕೆ ಭಾಜನರಾದರು.

ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ಮಹಾಮಂತ್ರಿಯಾಗಿದ್ದ ಕಾರಣದಿಂದ ಅವರಿಗೆ ಧರ್ಮ-ಸಂಸ್ಕೃತಿಯ ಪ್ರಸಾರಕ್ಕಾಗಿ ಬೇರೆ ಬೇರೆ ಸ್ಥಳಗಳಿಗೆ ಸಂಚಾರ ಕೈಗೊಳ್ಳುವುದು ಆಗಲಿಲ್ಲ. ಆದರೆ ಅಂದಿನ ಕಾಲದಲ್ಲಿ ದೇಶದ-ದೇಶದ ಹೊರಗಿನ ಹಲವಾರು ಸ್ಥಳಗಳ ಹಾದಿಗಳೆಲ್ಲವು ಕಲ್ಯಾಣಕ್ಕೆ ಬಂದು ಸೇರಿದವು. ಶರಣಬಸವರು ಶಿವ ಸಾಮ್ರಾಜ್ಯದ ಪ್ರಭುಗಳೇ ಆಗಿದ್ದರು. ಆವರಿಗೆ ಯಾವುದೇ ನಿರ್ಬಂಧವಿರಲಿಲ್ಲ. ಹೀಗಾಗಿ ಅರಳ ಗುಂಡಿಗೆಯನ್ನು ಬಿಟ್ಟು ವೀರಶೈವಧರ್ಮ- ಸಂಸ್ಕೃತಿಯ ಪ್ರಸಾರ ಮಾಡುತ್ತ; ದಾಸೋಹ ಧರ್ಮ ದ್ರಷ್ಟಾರರಾಗಿ ಹಲವಾರು ಸ್ಥಳಗಳ ಸಂಚಾರ ಕೈಕೊಂಡರು. ಅಲ್ಲಲ್ಲಿನ ದಾಸೋಹ ಸಾಧಕರಿಗೆ ಸಾಧನೆಯ ಪಥವನ್ನು ಅರುಹಿದರು.

ಬಸವಣ್ಣನವರು 'ಕಾಯಕ' ತತ್ವಕ್ಕೆ, ಅದರ ಆಚರಣೆಯಲ್ಲಿನ ನಿಷ್ಠೆಗೆ ಹೆಚ್ಚು ಒತ್ತು ಕೊಟ್ಟರೆಂದು ಹೇಳಬೇಕು. ಆದುದರಿಂದಲೇ ಬಸವಾದಿಶರಣರ ಚಳವಳಿಯು ಇನ್ನೊಂದು ಅರ್ಥದಲ್ಲಿ "ಕಾಯಕ ಪರಿಣಾಮಿಗಳ ಚಳವಳಿ"ಯೆಂದು ಕರೆಯಬಹುದಾಗಿದೆ. ಬಸವನ ರಾಜ್ಯದಲ್ಲಿ ಕಾಯಕ ಮಾಡದವರಿಗೆ ಜೀವಿಸುವ ಅಧಿಕಾರವಿರಲಿಲ್ಲ. ಪ್ರತಿಯೊಬ್ಬನು ಕಾಯಕ ಮಾಡುತ್ತ; ಜೀವಿಸಬೇಕಾಗಿತ್ತು.

ಶರಣ ಬಸವರು ಕಾಯಕದೊಂದಿಗೆ 'ದಾಸೋಹ' ತತ್ತ್ವಕ್ಕೆ ಹೆಚ್ಚಿನ ಮಹತ್ವ ನೀಡಿದರು. ಪ್ರಸಾದದಾಸೋಹದಿಂದ ಆರಂಭಗೊಳ್ಳುವ ಅವರ ಸಾಧನೆಯ ಪರಿಕ್ರಮವು ಆಧ್ಯಾತ್ಮದಾಸೋಹದವರೆಗೂ ಬೆಳೆದು ನಿಲ್ಲುತ್ತದೆ. ಇಂದಿಗೂ ಜನತೆ 'ದಾಸೋಹ'ಯೆಂದರೆ 'ಕಲಬುರ್ಗಿ ಶರಣ ಬಸವರದೆ' ಎಂದು ಥಟ್ಟನೆ ತಿಳಿದುಕೊಳ್ಳುತ್ತಾರೆ. ಬಸವಣ್ಣ ಭಕ್ತಿಭಂಡಾರಿಯಾದರೆ, ಶರಣಬಸವ ದಾಸೋಹ ಭಂಡಾರಿ.

ಬಸವಣ್ಣನವರು ತಾವು ಜೀವಿಸಿದ್ದನ್ನು; ಅನುಭವಿಸಿದ್ದನ್ನು ವಚನಗಳ ಮೂಲಕ ಉತ್ಪತ್ತಿ ಮಾಡಿದರು. ವಚನ ವಾಙ್ಮಯದ ಮುಖಾಂತರ ತಮ್ಮ ಚಿಂತನೆಗಳನ್ನು ಅಕ್ಷರವಾಗಿಸಿದರು. ಅವರು ಬದುಕಿದರು; ಬದುಕಿದನ್ನು ಬರೆದರು. ಆದರೆ ಶರಣಬಸವರು ಏನನ್ನೂ ಬರೆಯಲಿಲ್ಲ. ಬಸವಣ್ಣನವರು ಏನನ್ನು ಬರೆದರೋ, ಅವೆಲ್ಲವನ್ನೂ, ಶರಣಬಸವರು ನಿಸ್ಸಂಶಯವಾಗಿಯೂ ಬದುಕಿದರೆಂದು ಹೇಳಬಹುದಾಗಿದೆ. ಇಂದು ಬಸವಣ್ಣನವರು ಬಿಟ್ಟು ಹೋಗಿರುವ ವಚನಗಳು ನಮ್ಮೊಂದಿಗೆ ಮಾತನಾಡುತ್ತವೆ. ಆದರೆ ಶರಣಬಸವರು ತಮ್ಮ ಜೀವನದ ತಪಸ್ಸಿನ ಮುಖಾಂತರ ಬಿಟ್ಟು ಹೋಗಿರುವ ಜನಾಂಗ ಜೀವನದಲ್ಲಿನ ದಾಸೋಹ ಸಂಸ್ಕೃತಿಯು, ಅವರನ್ನು ಪ್ರಾತಃ ಸ್ಮರಣೀಯರನ್ನಾಗಿಸಿದೆ. ಬುದ್ಧನು ಸ್ವತಃ ಏನನ್ನೂ ಬರೆಯಲಿಲ್ಲ. ಇಲ್ಲಿ ಶರಣಬಸವರು ಬುದ್ಧನಿಗೆ ಸಮೀಪದವರಾಗುತ್ತಾರೆ.

ಬಸವಣ್ಣನವರು ಧಾರ್ಮಿಕ ಮಹಾಪುರುಷರಾಗಿದ್ದಂತೆ ರಾಜಕೀಯ ಕ್ಷೇತ್ರದಲ್ಲೂ ಸ್ಥಾನ ಹೊಂದಿದ್ದರೆ. ಆದರೆ ಶರಣಬಸವರು ರಾಜಕೀಯ ಕ್ಷೇತ್ರದ ಸಂಬಂಧಗೊಂಡವರಾಗಿರದೆ, ಅಪ್ಪಟ ಧಾರ್ಮಿಕ ಮತ್ತು ಆಧ್ಯಾತ್ಮಿಕ ಮಹಾಪುರುಷರಾಗಿ ನಿಂತುಕೊಳ್ಳುತ್ತಾರೆ.

ಬಸವಾದಿ ಶಿವಶರಣರ ಕ್ರಾಂತಿಯ ಪ್ರೇರಣೆಯಿಂದ ವರ್ಣಧರ್ಮಾಶ್ರಮದ ದೃಷ್ಟಿಯಲ್ಲಿ ವರ್ಣಸಂಕರವೆನ್ನುವಂತಹ ವಿವಾಹವೊಂದು ಜರುಗಿತು. ಬ್ರಾಹ್ಮಣಮಧುವರಸನ ಮಗಳನ್ನು ಹರಳಯ್ಯನ ಮಗನಿಗೆ ಕೊಟ್ಟು ಲಗ್ನ ಮಾಡಲಾಯಿತು. ಆದರೆ ಬಸವಾದಿ ಶಿವಶರಣರ ಕ್ರಾಂತಿಯ ಹೊಟ್ಟೆಯಲ್ಲೇ ವೈದಿಕಶಾಹಿಯ ಭಯಂಕರ ಬೀಜಗಳು

ಅಡಗಿಕೊಂಡಿದ್ದವು. ಅವೆಲ್ಲ ವಿವಾಹದ ಸಂದರ್ಭದಲ್ಲಿ ವರ್ಣಸಂಕರವೆಂದು ಸ್ಫೋಟಗೊಂಡವು. ದಯೆಯನ್ನು ಧರ್ಮದ ಮೂಲವಾಗಿಸಿ, ಧರ್ಮಾಚರಣೆಮಾಡಿದ ಶರಣರ ಕ್ರಾಂತಿಯಾದ ರಕ್ತದ ಕಲೆಗಳನ್ನು ಮೈಗೆ ಅಂಟಿಸಿಕೊಂಡಿತು. ಹೀಗಾಗಿ ಕಲ್ಯಾಣವು ಪ್ರಕ್ಷುಬ್ಧತೆಯ ತಾಣವಾಯಿತು. ಬಸವನು ಕೂಡಲಸಂಗಮದತ್ತ ಹೋದರೆ, ಉಳಿದೆಲ್ಲ ಶರಣರು ತಮಗೆ ಸರಿಯಾದ ದಾರಿ ಕಂಡತ್ತ ಚದುರಿಹೋದರು.

ಶರಣಬಸವನ ಕಾಲಸಂದರ್ಭದಲ್ಲಿ ಅರಳಗುಂಡಿಗೆಯಲ್ಲಿ ಕಡಕೋಳ ಮಡಿವಾಳರ ದೀಕ್ಷಾಪ್ರಸಂಗದಿಂದ ಕ್ರಾಂತಿಯೊಂದು ಸ್ಫೋಟಗೊಂಡಂತಾಯಿತು. ಆದರೆ ಇದರಲ್ಲಿ ವರ್ಣಪ್ರೀತಿಯ ಜನರ ಸೇರ್ಪಡೆಯಿರಲಿಲ್ಲ. ಹೀಗಾಗಿ ಅರಳಗುಂಡಿಗೆಯ ಸಂಘರ್ಷವು ಶರಣಬಸವರ ಸಾಧನೆಯ ಉತ್ಕರ್ಷಕ್ಕೆ ನಾಂದಿಯೆನ್ನುವಂತಾಗಿ, ಅವರ ಸಾಧನೆಯ ಹಾದಿಯು ಇನ್ನಷ್ಟು ವಿಶಾಲವಾಯಿತು, ವಿನೂತನವಾಯಿತು. ಕಲ್ಯಾಣಕ್ರಾಂತಿಯಿಂದ ಬಸವಾದಿ ಶರಣರ ಧರ್ಮ-ಸಂಸ್ಕೃತಿಯು ತತ್ಕಾಲಕ್ಕೆ ವಿನಾಶದ ಅಂಚಿಗೆ ಸರಿದರೆ, ಅರಳಗುಂಡಿಗೆಯ ಕ್ರಾಂತಿಯಿಂದ ಅಂತಹದ್ದೇ ಸ್ವರೂಪದ ಶರಣಧರ್ಮ ಸಂಸ್ಕೃತಿಯ ಪರಂಪರೆ ಬೆಳೆಯುವಂತಾಯಿತು.

ಬಸವಣ್ಣನವರ ಕಾಲಸಂದರ್ಭದಲ್ಲಿ ಹೆಚ್ಚಾಗಿ ಭಾರತೀಯವಾಗಿದ್ದ ಧರ್ಮಗಳ ನೆಲೆಯಲ್ಲೇ ಪರಸ್ಪರ ವೈಷಮ್ಯ – ದ್ವೇಷದ ಅಂಶಗಳು ಅವಿತುಕೊಂಡಿದ್ದವು. ಹೀಗಾಗಿ ಆಗಾಗ ಧಾರ್ಮಿಕ ಘರ್ಷಣೆಗಳು ನಡೆಯುತ್ತಿದ್ದವು. ಬಸವಣ್ಣನವರು ನಡೆಯುತ್ತಿದ್ದ ಧಾರ್ಮಿಕ ಘರ್ಷಣೆಗಳನ್ನು ತಪ್ಪಿಸಲು ಹೋದರು. ವೈದಿಕಶಾಹಿಯಿಂದ ಆಗುತ್ತಿದ್ದ ಶೋಷಣೆಯಿಂದ ಜನತೆಯನ್ನು ಪಾರುಮಾಡುವ ಹಾದಿವೊಂದರ ಅನ್ವೇಷಣೆ ಮಾಡಿದರು.

ಶರಣಬಸವರ ಕಾಲ ಪರಿಸರದಲ್ಲಿ ಭಾರತೀಯ ಧರ್ಮಗಳೊಂದಿಗೆ, ಭಾರತೀಯವಲ್ಲದ ಕ್ರೈಸ್ತ, ಇಸ್ಲಾಂ ಧರ್ಮಗಳೂ ಬಂದು ಸೇರಿಕೊಂಡಿದ್ದವು. ಬಸವಾದಿ ಶಿವಶರಣರ ಕಾಲದಲ್ಲಿ ಈ ನೆಲವು ಕನ್ನಡದ ಆಳರಸರು ಆಳುತ್ತಿದ್ದ ಪ್ರದೇಶವೇ ಆಗಿದ್ದಿತು. ಆದರೆ ಶರಣ ಬಸವರ ಕಾಲದಲ್ಲಿ ಹೈದರಾಬಾದಿನ ನೈಜಾಮರು ಈ ಪ್ರದೇಶದ ಮೇಲೆ ತಮ್ಮ ಅಧಿಕಾರದ ಭಾರವನ್ನು ಹೊರಿಸಿದರು. ಕನ್ನಡ ಆಳರಸರ ಆಡಳಿತದಲ್ಲಿ ಕನ್ನಡ ಅಥವಾ ಭಾರತೀಯ ನೆಲದ ಧರ್ಮಗಳೇ ತಮ್ಮಲ್ಲಿ ಆಗಾಗ ಬಡಿದಾಡುತ್ತಿದ್ದವು. ವೀರಶೈವ-ವೈದಿಕರ ಕಲಹವಾಗಿರ ಬಹುದು, ಶೈವ-ವೈಷ್ಣವರ ಜಗಳವಾಗಿರುಹುದು ಅಥವಾ ಜೈನ-ಶೈವರ ಭಿನ್ನಾಭಿಪ್ರಾಯಗಳ ಪ್ರಾಬಲ್ಯವಾಗಿರಬಹುದು ಇಂತಹವುಗಳನ್ನು ಸ್ಮರಿಸಿಕೊಳ್ಳಬಹುದು. ಶರಣಬಸವರ ಕಾಲದಲ್ಲಿ ಇವುಗಳಿಗೆ ಹೊರತಾದ ಧಾರ್ಮಿಕ ಸಂಘರ್ಷವೊಂದು ಕಾಲಿಟ್ಟಿತ್ತು. ಸಂಕುಚಿತ ಮನದ ಹಿಂದೂ-ಮುಸ್ಲಿಮರ ನಡುವಿನ ದ್ವೇಷದ ಭಾವನೆ ಹೈದರಾಬಾದ ಕನ್ನಡ ಪ್ರದೇಶದ ಧಾರ್ಮಿಕ ವಾತಾವರಣವನ್ನು ಕೆಲವೊಮ್ಮೆ ಅಲ್ಲೋಲ್ಲ ಕಲ್ಲೋಲ್ಲವಾಗಿಸುತ್ತಿದ್ದಿತು. ಇಂತಹ ಸಂದರ್ಭದಲ್ಲಿ ಶರಣಬಸವರು ಅತ್ಯಂತ ತಾಳ್ಮೆ ಮತ್ತು ಸಂಯಮದಿಂದ ಧಾರ್ಮಿಕ ಸವಾಲುಗಳನ್ನು ಎದುರಿಸಿದ್ದುಂಟು. ಹಿಂದೂ-ಮುಸ್ಲಿಂರ ಸಮೈಕ್ಯತೆಯನ್ನುಂಟು ಮಾಡುವಲ್ಲಿ ಶರಣ ಬಸವರ ಪಾತ್ರ ಮಹತ್ವದ್ದಾಗಿ ಕಾಣುತ್ತದೆ.

ಬಸವ-ಶರಣಬಸವರ ಜೀವನ ವಿವರಗಳನ್ನು ಹೀಗೆ ಒಂದರ ಬದಿಗೂಂದು ಇಟ್ಟು ಅವಲೋಕಿಸುತ್ತ ನಡೆದಂತೆ, ಉಭಯ ವ್ಯಕ್ತಿ ಶಕ್ತಿಗಳು ಮನುಕುಲೋದ್ಧಾರದ ಮಹಾನ್

ಚೇತನರಾಗಿ ಕಾಣುತ್ತಾರೆ. ಮೂವತ್ತಾರು ವರುಷಗಳ ಕಾಲವೇ ಜೀವಿಸಿದ್ದ ಬಸವಣ್ಣನವರು ತಮ್ಮ ಜೀವಿತಾವಧಿಯಲ್ಲಿ, ತಾವು ಅಂದುಕೊಂಡಷ್ಟು ಸಾಧನೆ ಮಾಡುವುದು ಸಾಧ್ಯವಾಗಲಿಲ್ಲವೆಂಬ ಕಾರಣದಿಂದಲೇ ಹದಿನೆಂಟನೆಯ ಶತಮಾನದಲ್ಲಿ ಶರಣಬಸವನೆಂಬ ನಾಮ ಹೊತ್ತು ಹುಟ್ಟಿ ಎಪ್ಪತ್ತಾರು ವರುಷಗಳ ಕಾಲ ದಾಸೋಹದ ತಪಸ್ಸು ಮಾಡಿದಂತೆನಿಸುತ್ತದೆ. ಏನೇ ಇರಲಿ "ಏಕಮೂರ್ತಿರ್ದ್ವಯೋಗ ಬಸವ-ಶರಣಬಸವ". ಇವರು ದೇವರ ಅಂಶದ ಎರಡು ಭಾಗವಾಗಿ ಅವತರಿಸಿ ಒಂದು, ಸಕಲ ಜೀವರಾಶಿಯೆಲ್ಲವನ್ನೂ ದೇವರೆಂದೇ ಭಾವಿಸಿ, ಅವುಗಳ ಸೇವೆಯಲ್ಲಿಯೇ ಶಿವಾನಂದವನ್ನು ಅನುಭವಿಸಿದ ಕಾರಣದಿಂದಾಗಿ, ಇಂದಿಗೂ; ಎಂದಿಗೂ ಲೋಕವೆಲ್ಲ ಅವರನ್ನು ಸಾಕ್ಷಾತ್ ದೇವರೆಂದೇ ಮನ್ನಿಸುತ್ತದೆ, ಮನನಿಸುತ್ತದೆ, ಧ್ಯಾನಿಸುತ್ತದೆ.

ಆಕರ: ಶರಣ ಬಸವೇಶ್ವರರು ಹಾಗೂ ಅವರ ಪರಿಸರದ ಸಾಹಿತ್ಯ (ಪಿಹೆಚ್.ಡಿ. ಮಹಾಪ್ರಬಂಧ)

❐

ಲೇಖಕರ ವಿಳಾಸ

೧. **ಟಿ. ಆರ್. ಮಹಾದೇವಯ್ಯ**
ವಿಶ್ರಾಂತ ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

೨. **ಡಾ. ಹಂ.ಪ. ನಾಗರಾಜಯ್ಯ**
೧೦೭೯, ಸ್ವನಿಮಾ ೧೮ನೇ ಎ,
ಮೇನ್ ರೋಡ್, ೫ನೇ ಬ್ಲಾಕ್
ರಾಜಾಜಿ ನಗರ,
ಬೆಂಗಳೂರು–೫೬೦ ೦೧೦.

೩. **ಡಾ. ಶಾಂತಿನಾಥ ದಿಬ್ಬದ**
ಪ್ರಾಧ್ಯಾಪಕರು
ಡಾ. ಆರ್.ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

೪. **ಡಾ. ಓ.ಎಲ್. ನಾಗಭೂಷಣ ಸ್ವಾಮಿ**
೨೮೮೩, ಹಿಯಾಳಿ ರೆಸಿಡೆನ್ಸಿ
ಎರಡನೇ ಮೇನ್, ಪಂಪಾವತಿ ರಸ್ತೆ
ಸರಸ್ವತಿ ಪುರಂ, ಮೈಸೂರು

೫. **ಡಾ. ಬುದ್ಧಣ್ಣ ಹಿಂಗಮಿರೆ**
ವಿಶ್ರಾಂತ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

೬. **ಡಾ. ಪ್ರಭಾಶಂಕರ ಪ್ರೇಮಿ**
ವಿಶ್ರಾಂತ ಹಿಂದಿ ಪ್ರಾಧ್ಯಾಪಕರು
ವಿಜಯನಗರ
ಬೆಂಗಳೂರು

೭. **ಶ್ರೀಮತಿ ಲೀಲಾ ಗರಡಿ**
೨೮೮೩, ಹಿಯಾಳಿ ರೆಸಿಡೆನ್ಸಿ
ಎರಡನೇ ಮೇನ್, ಪಂಪಾವತಿ ರಸ್ತೆ
ಸರಸ್ವತಿ ಪುರಂ, ಮೈಸೂರು

೮. **ಡಾ. ಮುನಿಯಪ್ಪ**
ಅಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ಸ್ನಾತಕೋತ್ತರ ಕೇಂದ್ರ
ಕೋಲಾರ

೯. **ಡಾ. ಬಸವರಾಜ ಸಬರದ**
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ

೧೦. **ಡಾ. ಅರ್ಜುನ ಗೊಳಸಂಗಿ**
ಅಧ್ಯಾಪಕರು
ಜೆ.ಸಿ.ಟಿ.ಎಂ. ಪದವಿಪೂರ್ವ ಕಾಲೇಜು
ಹುಲಕೋಟಿ
ಗದಗ

೧೧. **ಡಾ. ಜಿ. ಅಬ್ದುಲ್ ಬಷೀರ್**
ಕನ್ನಡ ಪ್ರಾಧ್ಯಾಪಕರು
ವಿಜಯ ಕಾಲೇಜು
ಬೆಂಗಳೂರು

೧೨. **ರಂಜಾನ್ ದರ್ಗಾ**
ಪ್ರಜಾವಾಣಿ ಕನ್ನಡ ದಿನಪತ್ರಿಕೆ
ಗುಲಬರ್ಗಾ

೧೩. **ಡಾ. ಸಾ.ಸಿ. ಮರುಳಯ್ಯ**
ರಾಗಿಣಿ ನಿವಾಸ
ವಿಜಯನಗರ, ಬೆಂಗಳೂರು

೧೪. **ಎಸ್.ಡಿ. ಕರ್ಪೂರಮಠ**

೧೫. **ಮಂಗ್ಳೂರು ವಿಜಯ**
ವಿದ್ಯಾ ಟ್ಯುಟೋರಿಯಲ್ಸ್ ಪಕ್ಕ
ವಿ. ನಾಗನಹಳ್ಳಿ
ಬೆಂಗಳೂರು

೧೬. **ಡಾ. ವಿ.ವ್ಹಿ. ಮಲ್ಲಾಪುರ**
ವಿಶ್ರಾಂತ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

೧೭. **ಡಾ. ಸೋಮನಾಥ ಯಾಳವಾರ**
ವೀರಭದ್ರೇಶ್ವರ ಪದವಿ
ಮಹಾವಿದ್ಯಾಲಯ
ಹುಮನಾಬಾದ
ಜಿ: ಬೀದರ

೧೮. **ಡಾ. ವ್ಹಿ.ಜಿ. ಪೂಜಾರ**
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ

೧೯. **ಬಿ.ಆರ್. ಪ್ರಾಣೇಶರಾವ್**

೨೦. **ಎಸ್.ಎಸ್. ಕೋತಿನ್**
(ದಿವಂಗತರು)

೨೧. **ಶ್ರೀಮತಿ ನೀಲತ್ತಳ್ಳಿ ಕಸ್ತೂರಿ**
ಬೆಂಗಳೂರು

೨೨. **ಡಾ. ಜಿ.ಆರ್. ತಿಪ್ಪೇಸ್ವಾಮಿ**
ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾಲಯ
ಮೈಸೂರು

೨೩. **ಡಾ. ಎಚ್.ಟಿ. ಪೋತೆ**
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ

೨೪. **ಸೀ.ಚ. ಯತೀಶ್ವರ**
ಅಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ಹಾಸನ

೨೫. **ಡಾ. ಸಿ.ವಿ. ವೇಣುಗೋಪಾಲ**
ವಿಶ್ರಾಂತ ಪ್ರಾಧ್ಯಾಪಕರು
ಇಂಗ್ಲಿಷ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

೨೬. **ಡಾ. ಸಿಂಪಿ ಲಿಂಗಣ್ಣ**
(ದಿವಂಗತರು)

೨೭. **ಡಾ. ಸೂರ್ಯಕಾಂತ ಸುಜ್ಯಾತ್,**
ಅಧ್ಯಾಪಕರು
ನೂತನ ಪದವಿ ಮಹಾವಿದ್ಯಾಲಯ
ಗುಲಬರ್ಗಾ

೨೮. **ಡಾ. ಎಸ್.ಎಂ. ಹಿರೇಮಠ**
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ



ಗುಲಬರ್ಗಾ ವಿಶ್ವವಿದ್ಯಾಲಯವು ಕಳೆದ ಮೂರು ದಶಕಗಳಿಂದ ಬೋಧನೆ, ಸಂಶೋಧನೆ ಮತ್ತು ಪ್ರಕಟಣೆಗಳ ಮೂಲಕ ಗಮನ ಸೆಳೆದಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ, ಬೋಧನೆ ಮತ್ತು ಸಂಶೋಧನೆ. ಇವು ಆಕರಗೊಳ್ಳುವುದು ಪ್ರಕಟಣೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಅಪೂರ್ವ ಪ್ರಕಟಣೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆಯುತ್ತಿದೆ.


ಕರ್ನಾಟಕ ಸರಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿವಿಧ ಬಗೆಯ ಮಹತ್ವದ ಯೋಜನೆಗಳನ್ನು ಹಮ್ಮಿಕೊಂಡಿದೆ. ನಮ್ಮ ವಿಶ್ವವಿದ್ಯಾಲಯಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿವಿಧ ಯೋಜನೆಗಳಿಗೆ ಅನುದಾನವನ್ನು ನೀಡಿದೆ. ಇದರ ಅಂಗವಾಗಿ ಕನ್ನಡ ಅಧ್ಯಯನ ಸಂಸ್ಥೆಯು ಕನ್ನಡ ಭಾಷಾಭಿವೃದ್ಧಿಯ ಯೋಜನೆಯ ಅಡಿಯಲ್ಲಿ **ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆ**ಯನ್ನು ಕೈಗೆತ್ತಿಗೊಂಡು ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಶೂನ್ಯಸಂಪಾದನೆ, ವಚನಕಾವ್ಯ ಚಿಂತನೆ, ಜಾಗತಿಕ ಚಿಂತಕರು ಮತ್ತು ಬಸವಣ್ಣ, ಸಿದ್ಧರಾಮ, ವಚನಕಾರ್ತಿಯರು, ದಲಿತ ವಚನಕಾರರು, ಇತರ ವಚನಕಾರರು ಹಾಗೂ ವಚನ: ಜಾನಪದ ಹೀಗೆ ಒಟ್ಟು ಹನ್ನೆರಡು ಸಂಪುಟಗಳನ್ನು ಹೊರತರುತ್ತಿದೆ.

ಡಾ. ಎಚ್.ಟಿ.ಪೋತೆ ಅವರು ಬಹು ಶ್ರಮವಹಿಸಿ **ಜಾಗತಿಕ ಚಿಂತಕರು ಮತ್ತು ಬಸವಣ್ಣ ಸಂಪುಟ**ವನ್ನು ಸಿದ್ಧಪಡಿಸಿದ್ದಾರೆ. ಈ ಸಂಪುಟದ ಲೇಖನಗಳು ಶತಮಾನದ ವಿಮರ್ಶಾ ಚಿಂತನೆಯನ್ನು ಸಾದರ ಪಡಿಸುತ್ತಲೆ ಹೊಸ ಆವಿಷ್ಕಾರ ಮತ್ತು ಚಿಂತನೆಗಳಿಗೆ ಉತ್ತಮ ಹಾದಿಯನ್ನು ನಿರ್ಮಿಸಿಕೊಡುತ್ತಿವೆ. ಈ ಸಂಪುಟವನ್ನು ಶ್ರಮವಹಿಸಿ ಸಿದ್ಧಪಡಿಸಿದ ಈ ಯೋಜನೆಯ ಪ್ರಧಾನ ಸಂಚಾಲಕರೂ ಹಾಗೂ ಸಂಪಾದಕರಾದ ಡಾ. ಎಚ್.ಟಿ. ಪೋತೆ ಅವರಿಗೂ ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಜಯರಾಮರಾಜೇ ಅರಸ್ ಅವರಿಗೂ ಹಾಗೂ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರಿಗೂ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ

ಬೆಲೆ: ರೂ. ೨೦೦/-

ISBN 8192103668
9788192103662



ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ - ೫೮೫ ೧೦೬